1933

ಜೀವನ ಶಿಕ್ಷಣ ಪತ್ರಿಕೆಯು

ಶತಮಾನೋತ್ಸವ ವಿಶೇಷ ಸಂಚಿಕೆ

ಪುಸ್ತಕ ಪ್ರದರ್ಶನ ೧೯೮೯





ಕನ್ನಡ ಪ್ರಾಥಮಿಕ ಶಿಕ್ಷಣ

ಶಿಕ್ಷಣ ಸಂಪುಟ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ

Reg. No. B. 2567

ಕನ್ನಡ

ಪ್ರಾಥಮಿಕ ಶಿಕ್ಷಣ

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಕಿಯೂ ಸಮಾವೇಶವಾಗಿವೆ.)

Kannada Prathamik Shikshana

— JANUARY 1933 —

ಸಂಪಾದಕ—**ವೆಂಕಟೇಶ ನರಸಿಂಗರಾವ ಮುಗದಾಳ ಬಿ. ಎ.,**

ಸಂಪುಟ ೬೯] ಜನವರಿ ೧೯೩೩ [ವರ್ಷ ೪ ಸಂ. ೧೦

೧	ಧ್ರುವ	೧
೨	ಶಿಕ್ಷಣದ ಬಗ್ಗೆ ಆಗುತ್ತಿರುವ ಅಪವ್ಯಯ	೩
೩	ಸ್ವಚ್ಛತೆ, ಅಚ್ಚುಕಟ್ಟುತನ	೬
೪	ಗುಳೇದಗುಡ್ಡದ ಸೆಂಟ್ರಲ್ ಸ್ಕೂಲಿನ ವಿದ್ಯಾರ್ಥಿಗಳ ಹಂಪೆಯ ಪ್ರವಾಸ	೧೧
೫	ಶಿಕ್ಷಣ ಕಾರ್ಯದಲ್ಲಿ ಪಾಲಕರ ಹಾಗು ಅಧಿಕಾರಿಗಳ ಸಹಕಾರಿತ್ವವೂ ಸಹಾನುಭೂತಿಯೂ	೧೫
೬	ರಾಜಾಛತ್ರಸಾಲ	೧೮
೭	ಸ್ಕೌಟ ಆಟಗಳು	೨೨
೮	ನೋಟೀಸು	೨೬
೯	ಹೆಣ್ಣು ಮಕ್ಕಳ ವ್ಹ. ಫಾ. ಪರೀಕ್ಷೆಯ ವೇಳಾ ಪತ್ರಿಕೆ	೨೭
೧೦	ಕನ್ನಡ ಬುಕ್‌ಕಮೀಟಿಯುವರಿಂದ ಮಂಜೂರಾದ ಕನ್ನಡ ಪುಸ್ತಕಗಳು	೨೮
೧೧	ಉರ್ದು ಬುಕ್ ಕಮೀಟಿಯುವರಿಂದ ಮಂಜೂರಾದ ಉರ್ದು ಬುಕ್ಕುಗಳು ಹಾಗು ನೋಟೀಸು	೨೩

Printed by K. R. Bhise at the Karnatak Printing Works, Dharwar
& Published by V. N. Magdal, B.A.,
Head-Master, Training School Dharwar, at his Office

ಕನ್ನಡ ೪ನೆಯ ಇಯತ್ತೆಗೆ ಪಠ್ಯ (ಟೆಕ್‌ಸ್ಟ್) ಪುಸ್ತಕವೆಂದು ಹೊಸದಾಗಿ

ಮಂಜೂರಾದ ಕಥಾರೂಪವಾದ

ಕರ್ನಾಟಕದ ಇತಿಹಾಸ

೧೦೦+೪ ಪುಟ. ಸುಮಾರು ೩೫ ಚಿತ್ರಗಳು. ೫ ನಕಾಶಗಳು.

ಕೋಂಟದಾರ್ಯ ಪ್ರೆಸ್ಸಿನ ಸುಂದರ ಮುದ್ರಣ. ಬೆಲೆ-ಆರಾಣೆ ಮಾತ್ರ.

೪ನೆಯ ಇಯತ್ತೆಗೆ ಇತಿಹಾಸವನ್ನು ಸುಲಭ ಕಥೆಗಳ ರೂಪದಿಂದ ಕಲಿಸಬಹುದೆಂದು ಅಭ್ಯಾಸಪತ್ರಿಕೆಯಲ್ಲಿ ಹೇಳಿದೆ. ಆ ತತ್ವವನ್ನನುಸರಿಸಿ ಈ ಪುಸ್ತಕದಲ್ಲಿ ಕರ್ನಾಟಕದ ಸಮಗ್ರ ಇತಿಹಾಸದ ಸ್ಥೂಲವಾದ ಕಲ್ಪನೆಯು ವಿದ್ಯಾರ್ಥಿಗಳಲ್ಲಿ ಉಂಟಾಗುವಂತೆ ಕರ್ನಾ. ಇತಿಹಾಸದ ಪ್ರಸಿದ್ಧ ವ್ಯಕ್ತಿಗಳ ಕಥೆಗಳು-ನಡುನಡುವೆ ಇತಿಹಾಸದ ತಳಕನ್ನು ಹಾಕಿ-ವಿದ್ಯಾರ್ಥಿಗಳ ಯೋಗ್ಯತೆಗೆ ಮೀರದಂತೆ ಬಹು ಜಾಣತನದಿಂದ ಬರೆಯಲ್ಪಟ್ಟಿವೆ. ಚಿತ್ರ, ನಕಾಶ, ಇವುಗಳಿಂದ ವಿಷಯುವು ಮನೋರಂಜನವಾಗುವಂತೆ ಮಾಡಿದ್ದಲ್ಲದೆ ಸುಲಭ ಭಾಷೆಯಲ್ಲಿ ಬರೆದಿರುವದರಿಂದ ವಿದ್ಯಾರ್ಥಿಗಳು ತಾವಾಗಿ ಓದಿಕೊಳ್ಳಲನುಕೂಲವಾಗಿದೆ.

೪ನೆಯ ಇಯತ್ತೆಗೆ ಇತಿಹಾಸವನ್ನು ಕಲಿಸುವದರಲ್ಲಿ ಶಿಕ್ಷಕರಿಗೂ, ಕಲಿಯುವದರಲ್ಲಿ ವಿದ್ಯಾರ್ಥಿಗಳಿಗೂ ಇದ್ದ ತೊಂದರೆಯು ಇದರಿಂದ ದೂರವಾಯಿತು !

ಶಿಕ್ಷಕರಿಗೂ, ಬುಕ್‌ಸೇಲರರಿಗೂ ತುಂಬ ಕಮಿಶನು. ಪುಸ್ತಕಗಳು ಗ್ರಂಥಕರ್ತರಲ್ಲಿಯೂ ಎಲ್ಲ ಬುಕ್‌ಡಿಪೋಗಳಲ್ಲಿಯೂ ದೊರೆಯುವವು.

ಗ್ರಂಥಕರ್ತರು:

ಎಚ್. ಜಿ. ಬೆಂಗೇರಿ; ಬಿ. ಎ. (ಆನರ್ಸ) ಬಿ. ಟಿ.
ಹೆಡ್‌ಮಾಸ್ತರ ಹಾವೇರಿ ಹಾಯಸ್ಕೂಲ ಮತ್ತು
ದ. ರಾ. ಕುರಂದವಾಡ ಹೆ. ಮಾಸ್ತರ
ಆಲದಕಟ್ಟಿ.

ಪೋಸ್ಟ—ಹಾವೇರಿ,
ಜಿಲ್ಲಾ—ಧಾರವಾಡ.

೧ನೆಯ ಭಾಗ ನುಡಿಗನ್ನಡಿ:—ಸಂ. ಪೂಜಾರಕೃತ (೪ನೆಯ ಇಯತ್ತೆಗಾಗಿ) ಹೊಸದಾಗಿ ಪ್ರಕಟಿಸಲ್ಪಟ್ಟಿದೆ. ಎಲ್ಲ ಬುಕ್‌ಡಿಪೋಗಳಲ್ಲಿ ದೊರೆಯುವವು.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:—ವೆಂಕಟೇಶ ನರಸಿಂಗರಾವ ಮುಗದಾಳ, ಬಿ. ಎ.,

ಸಂಪುಟ ೬೯ | ಜನವರಿ ೧೯೩೩ | ವರ್ಷ ೪; ಸಂ. ೧೦

ಧ್ರುವ

ಕ್ರಮಿಕ ೨ನೆಯ ಪುಸ್ತಕದಲ್ಲಿ ಧ್ರುವಚರಿತ್ರೆಯು ಸಣ್ಣದೊಂದು ಕವಿತೆಯು ಇರುವದಷ್ಟೇ. ಆ ಕಥೆಯನ್ನೇ ವಿದ್ಯಾಧರರೆಂಬ ಉಪನಾಮವನ್ನಿಟ್ಟುಕೊಂಡ ಕನ್ನಡ ಕವಿಗಳು ಸುಲಭವಾದ ಶೈಲಿಯಲ್ಲಿ ೧೫ ನುಡಿಗಳಲ್ಲಿ ರಚಿಸಿರುವರು. ಈ ಕವಿತೆಯ ಸಹಾಯದಿಂದ ಹೊಸ ಪದ್ಧತಿಯ ಮೇರೆಗೆ ೩ನೆಯ ಇಲ್ಲವೆ ೪ನೆಯ ಇಯತ್ತೆಗಳಲ್ಲಿ ೪೦ ಮಿನಿಟುಗಳಲ್ಲಿ ಸರಸವಾದ ಒಂದು ಕವಿತಾಪಾಠವನ್ನು ಹೇಳಬಹುದಾಗಿದೆ. ಆದ್ದರಿಂದ ವಿದ್ಯಾನಿಧಿ ಎಂಬ ಮಾಸಪತ್ರಿಕೆಯಿಂದ ಅವತರಿಸಿ ನಮ್ಮ ಶಿಕ್ಷಕವೃಂದದ ಉಪಯೋಗಕ್ಕಾಗಿ ಇಲ್ಲಿ ಅದನ್ನು ಕೊಟ್ಟಿರುವೆವು. ಈ ಕವಿತೆಯನ್ನು ಪ್ರಾ. ಶಿಕ್ಷಣದಲ್ಲಿ ನಮ್ಮ ಶಿಕ್ಷಕರ ಉಪಯೋಗಕ್ಕಾಗಿ ಕೊಡಲು ಒಪ್ಪಿಗೆಯನ್ನು ಕೊಟ್ಟದ್ದಕ್ಕಾಗಿ ನಾವು ವಿದ್ಯಾನಿಧಿ ಪತ್ರಿಕೆಯ ಸಂಪಾದಕರಿಗೆ ಋಣಿಯಾಗಿರುವೆವು.

ಮೆರೆದನು ಧರೆಗುತ್ತಾನಪಾದನೆಂ । ಬರಸನು ಜನಗಳ ಪಾಲಿಸುತ ॥
ಸುರುಚಿ ಸುನೀತಿಯರೆಂಬರಸಿಯರೊಳು । ಸರಸದೆ ಸುತರನು ಲಾಲಿಸುತ ॥ ೧ ॥

ಸುರುಚಿಯ ಮಗನಾದುತ್ತಮನೆಂಬವ । ನರಸನ ತೊಡೆಯಲಿ ಕುಳಿತಿರಲು ॥
ಭರದೆ ಸುನೀತಿಯ ಮಗನಾದಾ ಧ್ರುವ । ನಿರದೈತಂದನು ಕುಳ್ಳಿರಲು ॥ ೨ ॥

ಅದ ಕಂಡಾಕ್ಷಣ ಸುರುಚಿಯು ಕೋಪದಿ । ವಿಧವಿಧದಿಂ ಧ್ರುವನನು ಜರಿದು ॥
ಅಧಮನೆ ನಿನಗೆಲ್ಲೀಯುವರಾಜನ । ಪದವಿಯು ತೊಲಗೆಂದಳು ಹೊಡೆದು ॥ ೩ ॥

ಬಿಕ್ಕಿಬಿಕ್ಕಿ ಕಣ್ಣೀರನು ಸುರಿಸುತೆ । ಸೊಕ್ಕಿ ಸೊರಗಿ ಧ್ರುವ ನಿಂದಿರಲು ॥
ತಕ್ಕುವರವ ನೀಂ ಹರಿಯಿಂ ಪಡೆಯೆಂ । ದುಕ್ಕುವ ಕೋಪದಿ ನೂಕಿದಳು ॥ ೪ ॥

ಗಜರುತೆ ನೂಂಕಲು ಧೊಪ್ಪನೆ ಬಿದ್ದನು । ಗಜಬಜೆಯಾಗಿರೆ ಮನವವನು ॥
ಭಜಿಸುತೆ ಹರಿಯನು ಪಡೆವೆನು ವರವನು । ನಿಜದೆನುತಡವಿಗೆ ಸಾರಿದನು ॥ ೫ ॥

ಒಂದೆಡೆ ಹುಲಿ ಸಿಂಹಗಳಾರ್ಭಟವು । ನ್ನೊಂದೆಡೆ ತೋಳಗಳಬ್ಬರವು ॥
ಒಂದೆಡೆ ನರಿಗಳ ಶಬ್ದವು ಕೇಳಲು । ಕಂದನಿಗಾದುದು ಬಲುಭಯವು ॥ ೬ ॥

ನಡುರಾತ್ರಿಯೊಳಾ ಮೃಗಗಳ ಶಬ್ದಕೆ । ಗಡಗಡ ನಡುಗುತಲಾ ಧ್ರುವನು ॥
ಬಿಡದೆನ್ನನು ಪರಿಪಾಲಿಸು ನೀನೆಂ । ದಡಿಗಡಿಗಾ ಹರಿಗೆರಗುವನು ॥ ೭ ॥

ಚಳಿಗಾಳಿಯು ಹೊಡೆತಕೆ ದಿಕ್ಕಿಲ್ಲದೆ । ಬಳಲುತೆ ಕಂದನರಣ್ಯದೊಳು ॥
ತೊಳಲುತೆ ಹರಿಯನು ನೆನೆಯಲು ನಾರದ । ಸುಳಿದನು ಬಲುಕಾರುಣ್ಯದೊಳು ॥ ೮ ॥

ನಾರದಮುನಿಯಡಿಗೆರಗುತೆ ಧ್ರುವನಾ । ನಾರಾಯಣನೆಲ್ಲಿಹನೆಂದು ॥
ಸಾರಿಕೇಳಲವನುಪದೇಶಿಸಿದನು । ನಾರಾಯಣಮಂತ್ರವನಂದು ॥ ೯ ॥

ನಾರದಮುನಿಯುಪದೇಶದಿ ಬಾಲನು । ಘೋರಾಟವಿಯೊಳು ತಪವನ್ನು ॥
ಮೀರಿದ ಭಕ್ತಿಯೊಳಾಚರಿಸುತ್ತಿರೆ । ನಾರಾಯಣ ಮೈದೋರಿದನು ॥ ೧೦ ॥

ಉದಯಿಪ ಸೂರ್ಯನ ಕಾಂತಿಯು ಬೀರುತ । ಲುದಿಸಿರೆ ಹರಿ, ಧ್ರುವನದ ನೋಡಿ ॥
ಪದಕೆರಗಲು ಹರಿಯಪ್ಪಿದನವನನು । ಮುದದಿಂ ಪರಿಪರಿ ಮುದ್ದಾಡಿ ॥ ೧೧ ॥

ಜಯ ನಾರಾಯಣ ಜಯ ಸುಖಕಾರಣ । ಜಯ ಭಯವಾರಣ ಘನಕರುಣ ॥
ದಯೆಯಿಂ ಪಾಲಿಪುದೆಂದುರೆ ಬೇಡಿದ । ನಯವಿನಯದೆ ಸುಗುಣಾಭರಣ ॥ ೧೨ ॥

ಸ್ಥಿರಭಕ್ತಿಗೆ ಮೆಚ್ಚಿದೆನಾಂ ಪುತ್ರನೆ । ಕರುಣಿಸಿ ಶಾಶ್ವತ ಪದವಿಯನು ॥
ಪೊರೆವೆನೆನುತ್ತಲಿ ಪರೆಸುತೆ ತಾಳಿದ । ಹರಿ ತಾನಂತರ್ಧಾನವನು ॥ ೧೩ ॥

ಹರಿಯಿಂ ವರವನು ಪಡೆದಾನಂದದೆ । ಪುರಕೈದುತೆ ತಾಯ್ತಂದೆಯನು ॥
ಹರುಷಿಸುತಾಧ್ರುವ ಸುಸ್ಥಿರರಾಜ್ಯವ । ದೊರೆಕೊಂಡಾನಂದದೊಳಿಹನು ॥ ೧೪ ॥

ಹಿರಿಯರ ಕೋಪವ ಸಹಿಸುತೆ ಬಾಲರು । ಹರಿಯನು ಭಜಿಸಲು ಭಕ್ತಿಯೊಳು ॥
ಪರಿಪರಿ ಸುಖಭಾಗ್ಯಂಗಳ ಪಡೆವರು । ಪರಮಾತ್ಮನ ಘನಕರುಣದೊಳು ॥ ೧೫ ॥

—ವಿದ್ಯಾಧರ.

ಶಿಕ್ಷಣದ ಬಗ್ಗೆ ಆಗುತ್ತಿರುವ ಅಪವ್ಯಯ

(ಲೇಖಕರು :—ಮೆ॥ ಕೆ. ಎಸ್. ವಕೀಲ ಎಮ್. ಈಡಿ. ಐ. ಇ. ಎಸ್.
ದಕ್ಷಿಣಭಾಗದ ಎಜ್ಯುಕೇಶನಲ್ ಇನ್ಸಪೆಕ್ಟರರು, ಧಾರವಾಡ).

ಸದ್ಯಕ್ಕೆ ಹಣದ ಕೊರತೆಯು ಪ್ರಶ್ನವು ಬಲು ಬಿಗಿಯಾದದ್ದಾಗಿದೆಯಷ್ಟೇ. ಇಂಥ ಪ್ರಸಂಗದಲ್ಲಿ ಶಿಕ್ಷಣವನ್ನು ಸುಧಾರಿಸಲಿಕ್ಕೂ ವೃದ್ಧಿಗೊಳಿಸಲಿಕ್ಕೂ ಹಣವು ಸದ್ಯಕ್ಕಿಂತ ಹೆಚ್ಚಾಗಿ ಒದಗುವದೆಂದು ಆಶೆಪಡುವದು ಹುಚ್ಚುತನವೇ ಸರಿ. ಆದ್ದರಿಂದ ಈಗ ಶಿಕ್ಷಣಕ್ಕಾಗಿ ವೆಚ್ಚವಾಗುತ್ತಿರುವ ಹಣರಾಶಿಯನ್ನು ಶಕ್ಯವಿದ್ದಷ್ಟು ಪ್ರತಿಫಲವು ದೊರೆಯುವಂತೆ ಖರ್ಚು ಮಾಡುವ ಹಂಚಿಕೆಗಳನ್ನು ಹಾಕುವದು ಅತಿಶಯ ಮಹತ್ವದ ಪ್ರಶ್ನೆಯಾಗಿರುವದು. ಸದ್ಯದ ವೆಚ್ಚದಲ್ಲಿ ಶಿಕ್ಷಣದ ಯಾವ ಭಾಗಗಳಲ್ಲಿ—ಅದು ಸಣ್ಣಪುಟ್ಟ ಬಾಬುಗಳಲ್ಲಿಯೇ ಆಗುತ್ತಿರಲಿ, ತೀರ ಕ್ಷುಲ್ಲಕವೆನಿಸುವಷ್ಟು ರಕಮಿನ ಬಗ್ಗೆಯೇ ಆಗುತ್ತಿರಲಿ—ಅಪವ್ಯಯವು ಆಗುತ್ತಿರುವದೆಂಬದನ್ನು ವಿಚಾರಿಸಿ, ಕೈಬಿಗಿಹಿಡಿದು ಖರ್ಚು ಮಾಡಿ ಹನಿಹನಿಯಾಗಿ ಉಳಿಸಿದ ಹಣವನ್ನೇ ಶಿಕ್ಷಣದ ಸುಧಾರಣೆಗೂ ಅಭಿವೃದ್ಧಿಗೂ ಉಪಯೋಗಿಸಿಕೊಳ್ಳುವದು ಶಿಕ್ಷಣ ವ್ಯವಸ್ಥಾಪಕರ ಕರ್ತವ್ಯವಾಗಿದೆ.

ಬ್ರಿಟಿಷ ಹಿಂದುಸ್ಥಾನದಲ್ಲಿರುವ ಶಿಕ್ಷಣ ಸಂಸ್ಥೆಗಳ ಒಟ್ಟು ಸಂಖ್ಯೆಯು ೨೫ ಲಕ್ಷಕ್ಕಿಂತ ತುಸು ಹೆಚ್ಚು ಇರುವದು. ಇವುಗಳಲ್ಲಿ ಶಿಕ್ಷಣವನ್ನು ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯು ೧೨೦ ಲಕ್ಷಕ್ಕಿಂತ ಸ್ವಲ್ಪ ಹೆಚ್ಚು ಇರುವದು. ದಿನಾಲು ಈ ಸಂಸ್ಥೆಗಳಿಗೆ ಬಂದು ವಿದ್ಯೆಕಲಿಯುತ್ತಿರುವ ವಿದ್ಯಾರ್ಥಿಗಳ ದಿನದ ಹಾಜರಿಯು ಸರಾಸರಿಯು ೧ ಕೋಟಿ ಇರುವದು. ಪ್ರತಿಯೊಂದು ಸಾಲೆಯಲ್ಲಿರುವ ಹುಡುಗರ ಸರಾಸರಿಯು ೪೭ ಇದೆ; ಆದರೆ ಈ ಸಾಲೆಗಳ ಹಾಜರಿಯ ಸರಾಸರಿಯು ೩೭ ಇರುವದು. ಅಂದರೆ ಸಾಲೆಯ ಹಾಜರಿಯು ಮೇಲಿರುವ ಹುಡುಗರಲ್ಲಿ ಪ್ರತಿ ನೂರರಲ್ಲಿ ಎಂಬತ್ತು ಹುಡುಗರು ಮಾತ್ರ ಸಾಲೆಗೆ ಬಂದು ವಿದ್ಯಾರ್ಜನೆಯ ಲಾಭವನ್ನು ಹೊಂದುತ್ತಿರುವರು. ಅಂದರೆ ನಾವು ಸದ್ಯಕ್ಕೆ ಶಿಕ್ಷಣದ ಬಗ್ಗೆ ವೆಚ್ಚಮಾಡುತ್ತಿರುವ ಹಣವು, ಎಷ್ಟು ವಿದ್ಯಾರ್ಥಿಗಳ ಹಿತಕ್ಕಾಗಿ ಖರ್ಚಾಗುತ್ತಿರುವದೋ ಅದರ ೪/೫ ಪಾಲು ವಿದ್ಯಾರ್ಥಿಗಳ ಹಿತವನ್ನು ಮಾತ್ರ ಒದಗಿಸುವದು; ಇದರಿಂದ ವಾಚಕರ ಮನಸ್ಸಿಗೆ ಒಂದು ಮಾತು ಸ್ಪಷ್ಟವಾಗಿ ಹೊಳೆಯದಿರದು. ಅದು ಯಾವದೆಂದರೆ ನಾವು ಸದ್ಯಕ್ಕೆ ಶಿಕ್ಷಣದ ಬಗ್ಗೆ ವ್ಯಯಮಾಡುತ್ತಿರುವ ಹಣದಲ್ಲಿ ೧/೫ ಪಾಲು ವ್ಯರ್ಥ ಹೋಗುತ್ತಿರುವದು. ೧೯೨೮–೨೯ ರಲ್ಲಿ ಬ್ರಿಟಿಷ ಹಿಂದುಸ್ಥಾನದಲ್ಲಿ ಶಿಕ್ಷಣದ ಬಗ್ಗೆ ಒಟ್ಟು ೨೭ ಕೋಟಿ ರೂಪಾಯಿಗಳು ವೆಚ್ಚವಾದವು. ಇದರ ಐದರಲ್ಲಿ ಒಂದು ಪಾಲೆಂದರೆ ೫ ಕೋಟಿಗಿಂತ ತುಸು ಹೆಚ್ಚು ರೂಪಾಯಿಗಳು. ಹೀಗೆ

ಸದ್ಯಕ್ಕೆ ವೃಥಾ ವ್ಯಯವಾಗುತ್ತಿರುವ ಐದು ಕೋಟಿ ರೂಪಾಯಿಗಳನ್ನು ಉಳಿಸಿಗೊಂಡು ನಮ್ಮ ದೇಶಕ್ಕೆ ಅತ್ಯಗತ್ಯವಾದದ್ದೆನಿಸಿದ ಶಿಕ್ಷಣ ಪ್ರಸಾರ ಕಾರ್ಯದಲ್ಲಿ ಉಪಯೋಗಿಸಿ ಕೊಳ್ಳುವದು ಅಶಕ್ಯವಿದೆಯೋ ಹ್ಯಾಗೆ ? ನಿಯಮಿತತನದಿಂದ ಶಾಲೆಗೆ ಬಾರದಿರುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಕಡಿಮೆ ಮಾಡಲಿಕ್ಕೆ ಬಲವಾದ ಪ್ರಯತ್ನಗಳನ್ನು ಮಾಡಿ ಅಂದರೆ ಶಾಲೆಗೆ ಹೆಸರು ಹಚ್ಚಿದ ಹುಡುಗರೆಲ್ಲ ಶಾಲೆಗೆ ನಿಯಮಿತವಾಗಿ ಬರಲಿಕ್ಕೇ ಬೇಕೆಂಬ ನಿರ್ಬಂಧವನ್ನೂ ಒತ್ತಾಯವನ್ನೂ ಏರ್ಪಡಿಸಿ ಈ ಕೋಟ್ಯವಧಿ ರೂಪಾಯಿ ಗಳ ಅಪವ್ಯಯವನ್ನು ನಿಲ್ಲಿಸುವದು ಅಸಾಧ್ಯವೇನು ? ಇದನ್ನು ಸಾಧ್ಯಮಾಡಿಕೊಂಡರೆ ಸದ್ಯಕ್ಕಿಂತ ೨೦ ಲಕ್ಷ ಹೆಚ್ಚು ವಿದ್ಯಾರ್ಥಿಗಳಿಗೆ ವಿದ್ಯೆಯ ಲಾಭವು ದೊರೆಯುವದು.

ಇನ್ನು ಸದ್ಯಕ್ಕೆ ಶಿಕ್ಷಕರ ಬಾಬಿನಲ್ಲಿ ನಡೆದಿರುವ ಅಪವ್ಯಯವನ್ನು ಕುರಿತು ವಿಚಾರಿಸೋಣ. ಈಗ ಬ್ರಿಟಿಷ ಹಿಂದುಸ್ಥಾನದಲ್ಲಿ ೪೩,೬೦೦೦ಕ್ಕಿಂತ ಸ್ವಲ್ಪ ಹೆಚ್ಚು ಶಿಕ್ಷಕರಿರುವರು. ಇವರ ಬಳಿಯಲ್ಲಿ ೧ ಕೋಟಿ ೨೦ ಲಕ್ಷಕ್ಕಿಂತ ತುಸು ಹೆಚ್ಚು ವಿದ್ಯಾ ರ್ಥಿಗಳು ವಿದ್ಯೆಕಲಿಯುತ್ತಿರುವರು. ಈ ಸಂಖ್ಯೆಗಳಿಂದ ನೋಡಲು ಸದ್ಯಕ್ಕೆ ಪ್ರತಿಯೊ ಬ್ಬನು ಕಲಿಸುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯು ೨೭ ಹೊರಡುವದು. ಅಂದರೆ ಒಬ್ಬ ಶಿಕ್ಷಕನು ಕಲಿಸಬಹುದಾದ ವಿದ್ಯಾರ್ಥಿಗಳಿಗಿಂತ ಕಡಿಮೆ ಹುಡುಗರನ್ನು ಅವನ ಬಳಿ ಯಲ್ಲಿಡುವದರಿಂದ ಶಿಕ್ಷಕರ ಬಾಬಿನಲ್ಲಿಯೂ ಹಣದ ಅಪವ್ಯಯವು ನಡೆದಿರುವದೆಂಬದು ಸ್ಪಷ್ಟವು. ಒಬ್ಬ ಶಿಕ್ಷಕನು ಏನಿಲ್ಲೆಂದರು ೩೦ ವಿದ್ಯಾರ್ಥಿಗಳಿಗೆ ಕಲಿಸುವನೆಂದು ಎಣಿಸಿಕೊಂಡರೂ ನಮಗೆ ೪೦೦,೦೦೦ ಶಿಕ್ಷಕರು ಈಗ ಸಾಕು. ಅಂದರೆ ಸದ್ಯದ ಶಿಕ್ಷಕರಲ್ಲಿ ೩೬೦೦೦ ಜನರು ಹೆಚ್ಚಾಗಿರುವರು. ಇವರ ಯೋಗ್ಯ ಉಪಯೋಗವನ್ನು ಮಾಡಿಕೊಂಡರೆ ಸದ್ಯಕ್ಕಿಂತ ೧೦ ಲಕ್ಷ ಹೆಚ್ಚು ವಿದ್ಯಾರ್ಥಿಗಳಿಗೆ ಕಲಿಸಬಹುದಾಗಿದೆ.

ಇತ್ತ ವಿದ್ಯಾರ್ಥಿಗಳು ಶಾಲೆಗೆ ಬಂದ ಬಳಿಕ ನಡುನಡುವೆಯೇ ಶಾಲೆ ಬಿಟ್ಟು ಬಿಡುವದರಿಂದ ಆಗುತ್ತಿರುವ ಹಾನಿಯನ್ನು ಕುರಿತು ತುಸು ವಿಚಾರ ಮಾಡೋಣ. ಶಿಕ್ಷಣ ಸಂಸ್ಥೆಗಳಲ್ಲಿರುವ ಒಟ್ಟು ವಿದ್ಯಾರ್ಥಿಗಳಲ್ಲಿ ೧೦೦ರಲ್ಲಿ ೮೦ ಹುಡುಗರು ಆರಂಭದ ಶಿಕ್ಷಣದ ಇಯತ್ತೆಗಳಲ್ಲಿ ಅಂದರೆ ಮೊದಲಿನ ನಾಲ್ಕು ವರ್ಷದ ವರೆಗೆ ದೊರೆಯುವ ಶಿಕ್ಷಣಾವಸ್ಥೆಯಲ್ಲಿ ಇರುವರು. ಇವರಲ್ಲಿಯೂ ೧೦೦ಕ್ಕೆ ೫೮ ಜನರು ತೀರ ಕೆಳಗಿನ ಒಂದನೆಯ ಇಯತ್ತೆಯಲ್ಲಿರುವರು; ೧೦೦ಕ್ಕೆ ೨೦ ಜನರು ಇದಕ್ಕೂ ಮೇಲಿನ ಅಂದರೆ ಎರಡನೆಯ ಇಯತ್ತೆಯಲ್ಲಿರುವರು. ೧೦೦ಕ್ಕೆ ೧೩ ಜನ ವಿದ್ಯಾರ್ಥಿಗಳು ಅದಕ್ಕೂ ಮೇಲಿನ ಅಂದರೆ ೩ನೆಯ ಇಯತ್ತೆಯಲ್ಲಿರುವರು. ೧೦೦ಕ್ಕೆ ಉಳಿದ ೯ ವಿದ್ಯಾರ್ಥಿಗಳು ೪ನೆಯ ಇಯತ್ತೆಯಲ್ಲಿ ಕಲಿಯುತ್ತಿರುವರು. ಈ ಸಂಖ್ಯೆಗಳಿಂದ ಯಾವ ಸಿದ್ಧಾಂತವು ಹೊರಡುತ್ತಿದೆ ? ಸುಮಾರು ೩೯ ಬಾಲಕರು ಅಭ್ಯಾಸದಲ್ಲಿ ಏನೂ ಪ್ರಗತಿಯಾಗದೆ,

ಒಂದನೆಯ ಇಯತ್ತೆಯಲ್ಲಿರುವಾಗಲೇ ಸಾಲೆ ಬಿಟ್ಟುಬಿಡುವರು. ಇವರಲ್ಲಿ ಮೂವರಲ್ಲಿ ಒಬ್ಬನು ಮಾತ್ರ ಮೇಲಿನ ೨ನೆಯ ಇಯತ್ತೆಗೆ ಹೋಗುವನು. ಇವರಲ್ಲಿ ಮೂವರಲ್ಲಿ ಒಬ್ಬನು ಅದನ್ನು ಮುಗಿಸುವವರೊಳಗಾಗಿ ಸಾಲೆ ಬಿಟ್ಟುಬಿಡುವನು. ಹಾಗು ಇವರಲ್ಲಿ ಮೇಲಿನ ಮೂರನೆಯ ಇಯತ್ತೆಗೆ ಹೋದವರಲ್ಲಿ ಮೂವರಲ್ಲಿ ಒಬ್ಬನು ಮೂರನೆಯ ಇಯತ್ತೆಯಲ್ಲಿರುವಾಗ ಸಾಲೆ ಬಿಟ್ಟು ಹೋಗುವನು. ಮಿಕ್ಕ ಮೂವರಲ್ಲಿ ಇಬ್ಬರು ಮಾತ್ರ ನಾಲ್ಕನೆಯ ಇಯತ್ತೆಯಲ್ಲಿ ಕಲಿಯುತ್ತಿರುವರು. ಇದಲ್ಲದೆ ಆರಂಭದ ಶಿಕ್ಷಣವನ್ನು ಅಂದರೆ ನಿಜವಾಗಿ ಪ್ರಾಥಮಿಕ ಶಿಕ್ಷಣವನ್ನು ಪಡೆಯುತ್ತಿರುವವರಲ್ಲಿ ಐವರಲ್ಲಿ ಮೂವರು ಮಾತ್ರ ಅದನ್ನು ಮುಗಿಸುವರು. ಒಟ್ಟಿನ ಮೇಲೆ ನೋಡಲು, ಸಾಲೆ ಕಲಿಯುಲಿಕ್ಕೆಂದು ಬಂದ ಹತ್ತು ವಿದ್ಯಾರ್ಥಿಗಳಲ್ಲಿ ಒಬ್ಬನು ಮಾತ್ರ ಅಕ್ಷರಜ್ಞನಾಗುವನು. ಈ ಅಪವ್ಯಯವು ದುಃಖಕಾರಕವಾದದ್ದಲ್ಲವೇ! ಆರಂಭದ ಶಿಕ್ಷಣಾವಸ್ಥೆಯಲ್ಲಿರುವ ಹುಡುಗರಿಗೆ ಕಲಿಸಕ್ಕಾಗಿ ವೆಚ್ಚ ಮಾಡಿದ ಹಣದ ಅರ್ಧದಷ್ಟು ಭಾಗವು ಅಂದರೆ ೧೦ ಲಕ್ಷ ಹುಡುಗರ ಶಿಕ್ಷಣಕ್ಕಾಗಿ ನಾವು ಮಾಡುತ್ತಿರುವ ವೆಚ್ಚವು ಹೊಳೆಯಲ್ಲಿ ತೊಳೆದ ಹುಣಸೆಯ ಹಣ್ಣಿನಂತೆ ಪೂರ್ಣವಾಗಿ ವ್ಯರ್ಥ ಹೋಗುವದು. ಪ್ರತಿಯೊಬ್ಬ ವಿದ್ಯಾರ್ಥಿಯ ಶಿಕ್ಷಣಕ್ಕಾಗಿ ಸರಾಸರಿ ೨೩ ರೂಪಾಯಿಗಳನ್ನು ನಾವು ಖರ್ಚು ಮಾಡಬೇಕಾಗುತ್ತದೆಂದು ಎಣಿಸಿದರೆ, ನಾವು ಈಗ ೧೦೦ ಲಕ್ಷ ಅಂದರೆ ಒಂದು ಕೋಟಿ ರೂಪಾಯಿಗಳನ್ನು ವೃಥಾ ಹೋಗಗೊಡುತ್ತಿರುವೆವು. ಇದನ್ನು ಯೋಗ್ಯ ರೀತಿಯಿಂದ ಅಂದರೆ ನಿಜವಾದ ಪ್ರತಿಫಲವು ದೊರೆಯುವಂತೆ ಉಪಯೋಗಿಸುವ ಹಂಚಿಕೆಗಳನ್ನು ರೂಢಿಯಲ್ಲಿ ತರುವದು ನಮ್ಮ ಕರ್ತವ್ಯವಲ್ಲವೇ? ಸಣ್ಣ ಹುಡುಗರು ಒಮ್ಮೆ ಸಾಲೆಗೆ ಹೆಸರು ಹಚ್ಚಿದರೆಂದರೆ ಏನಿಲ್ಲೆಂದರೂ ಅಕ್ಷರಜ್ಞರಾಗುವಷ್ಟು ವಿದ್ಯೆಯನ್ನು ಕಲಿತ ಬಳಿಕ ಮಾತ್ರ ಸಾಲೆ ಬಿಡುವಂತೆ ನೋಡಿಕೊಳ್ಳಲಿಕ್ಕೆ ಅವಶ್ಯವಾದ ಉಪಾಯುಗಳನ್ನು ಯೋಜಿಸುವದು ಮಹತ್ವದ್ದಲ್ಲವೇ?

ಇನ್ನು ಪ್ರತಿವರ್ಷ ಸಾರ್ವಜನಿಕ ಪರೀಕ್ಷೆಗಳನ್ನು ಮಾಡುವದರಿಂದ ಆಗುತ್ತಿರುವ ಹಣದ ಅಪವ್ಯಯವನ್ನು ಕುರಿತು ವಿಚಾರಿಸೋಣ. ಉದಾಹರಣಾರ್ಥವಾಗಿ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯೊಂದನ್ನೇ ತೆಗೆದುಕೊಳ್ಳೋಣ. ೧೯೩೮-೧೯೩೯ ರಲ್ಲಿ ಈ ಪರೀಕ್ಷೆಗೆ ನಮ್ಮ ದೇಶದ ಬೇರೆ ಬೇರೆ ವಿಶ್ವವಿದ್ಯಾಲಯುಗಳಲ್ಲಿ ಉಮೇದವಾರರಾಗಿ ಕುಳಿತವರಲ್ಲಿ ನೂರರಲ್ಲಿ ೪೨ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತೀರ್ಣರಾಗಲಿಲ್ಲ. ಅಂದರೆ ಇವರ ವಿದ್ಯಾಭ್ಯಾಸಕ್ಕಾಗಿ ಗಂಟಲು ಒಣಗಿಸಿಕೊಂಡ ಶಿಕ್ಷಕರ ೩೨ ಶ್ರಮವೂ ದುಡಿದು ರಕ್ತಶೋಷಿಸಿಕೊಂಡ ೩೨ ವಿದ್ಯಾರ್ಥಿಗಳ ಶ್ರಮವೂ ನಿಷ್ಫಲವಾದವು. ಈ ಪರೀಕ್ಷೆಗಳನ್ನು ಏರ್ಪಡಿಸಿ ಸಾಗಿಸಲಿಕ್ಕೆ ಬೇರೆ ಬೇರೆ ವಿಶ್ವವಿದ್ಯಾಲಯುಗಳ ಚಾಲಕರು ಖರ್ಚು ಮಾಡಿದ ಒಟ್ಟು ಹಣದಲ್ಲಿ ೩೨ ಹಣವು ವ್ಯರ್ಥ ಹೋದಂತಾಯಿತು. ಈ

ನೂರರಲ್ಲಿ ೪೦ ಹುಡುಗರನ್ನು ಪರೀಕ್ಷೆಗೆ ಸಿದ್ಧರನ್ನಾಗಿ ಮಾಡಲು ಪ್ರಯತ್ನಪಡುವದರಲ್ಲಿ ವೆಚ್ಚವಾದ ಸಾಲೆಗಳ ಖರ್ಚು ಪರಿಣಾಮಕಾರಿಯಾಗಲಿಲ್ಲ. ಇವರಿಗಾಗಿ ಇವರ ತಾಯ್ತಂದೆಗಳೂ ಪಾಲಕರೂ ಖರ್ಚು ಮಾಡಿದ ಅಷ್ಟು ಹಣವು ವ್ಯರ್ಥವಾಯಿತು.

ಆದರೆ ಈ ಮೇರೆಗೆ ಅನೇಕ ಬಗೆಯಿಂದ ನಮ್ಮ ಶಿಕ್ಷಣಪ್ರಪಂಚದಲ್ಲಿ ಹಾಳಾಗಿ ಹೋಗುತ್ತಿರುವ ಹಣವನ್ನು ಉಳಿಸಿಕೊಳ್ಳುವದು ನಮ್ಮ ಕೈಯಲ್ಲಿರುವದು. ಸಾಲೆಗೆ ಹುಡುಗರನ್ನು ಒತ್ತಾಯದಿಂದ ಬರಹಚ್ಚಿದರೆ ಇದರ ಬಹುತರ ಭಾಗವು ಫಲದಾಯಕವಾಗುವದು. ಪ್ರಾಥಮಿಕ ಹಾಗು ಮಾಧ್ಯಮಿಕ ಶಿಕ್ಷಕರಿಗೆ ಯೋಗ್ಯವಾದ ಶಿಕ್ಷಣವನ್ನು (ಟ್ರೇನಿಂಗವನ್ನು) ಕೊಟ್ಟರೆ ಈ ದುಂದುಗಾರಿಕೆಯು ಸದ್ವ್ಯಯವಾಗಬಹುದು. ಶಿಕ್ಷಕರ ಕೆಲಸವನ್ನೂ ಸಾಲೆಗಳ ಪ್ರಗತಿಯನ್ನೂ ಮೇಲ್ವಿಚಾರಿಸುವ ಅಧಿಕಾರಸ್ಥರಿಗೆ ತಮ್ಮ ಕೆಲಸವನ್ನು ಸರಿಯಾಗಿ ಮಾಡುವ ಯೋಗ್ಯ ಮಾರ್ಗವನ್ನು ತೋರಿಸಿಕೊಡುವದರಿಂದ ಶಿಕ್ಷಣಕ್ಕೆ ಒಳ್ಳೇ ಲಾಭವಾಗಿ ಪ್ರತಿಫಲವು ನಿಶ್ಚಿತವಾಗಬಹುದು. ಸದ್ಯದ ಸಾರ್ವಜನಿಕ ಪರೀಕ್ಷಾ ಪದ್ಧತಿಯಲ್ಲಿ ಸುಧಾರಣೆಗಳನ್ನು ಮಾಡಿದರೆ ಈಗ ನಡೆದಿರುವ ವೃಥಾ ಶ್ರಮವು ಇಲ್ಲದಾಗಬಹುದು. ಮೇಲಾಗಿ ಸದ್ಯದ ಪರಿಸ್ಥಿತಿಗೆ ತಕ್ಕಂತೆ ಪ್ರಾಥಮಿಕ ಹಾಗು ಮಾಧ್ಯಮಿಕ ಶಿಕ್ಷಣ ಸಂಸ್ಥೆಗಳ ಅಭ್ಯಾಸಕ್ರಮವನ್ನು ಬದಲಿಸುವದರಿಂದಲೂ ಒಳ್ಳೇ ಉಳಿತಾಯವಾಗಬಹುದು.

ಸ್ವಚ್ಛತೆ, ಅಚ್ಚುಕಟ್ಟುತನ

ಸ್ವಚ್ಛತೆ, ಅಚ್ಚುಕಟ್ಟುತನ ಇವುಗಳನ್ನು ಸಾಲೆಯು ಹುಡುಗರಲ್ಲಿ ನೆಲೆಗೊಳಿಸುವದು ಶಿಕ್ಷಕರ ಕರ್ತವ್ಯವಿರುವದಷ್ಟೇ. ನಮ್ಮ ಸಾಲೆಗಳಲ್ಲಿ ಶಾರೀರಿಕ ಸ್ವಚ್ಛತೆಯ ಬಗ್ಗೆ ಒಂದೆರಡು ಪಾಠಗಳನ್ನು ಹೇಳಿ ಬಿಡುವದುಂಟು. ಇದನ್ನು ನೆಲೆಗೊಳಿಸುವ ಹೆಚ್ಚಿನ ಪ್ರಯತ್ನಗಳು ಅನೇಕ ಸಾಲೆಗಳಲ್ಲಿ ನಡೆಯುವದಿಲ್ಲ. ಸ್ವಚ್ಛತೆಗೂ ಆರೋಗ್ಯಕ್ಕೂ ಎಷ್ಟು ಸಂಬಂಧವಿರುವದೆಂಬದು ನಮ್ಮ ಮನಸಿನಲ್ಲಿ ಪೂರ್ಣವಾಗಿ ಬರುವದಿಲ್ಲ. ಪ್ರತಿಯೊಬ್ಬನು ತನ್ನ ಶರೀರ ಅರಿವೆ ಅಂಚಡಿಗಳನ್ನು ಮಾತ್ರ ಸ್ವಚ್ಛವಿಟ್ಟುಕೊಂಡರೆ ತೀರಲಿಲ್ಲ. ಸ್ವಚ್ಛತೆಯ ಗುಣವು ಹುಡುಗರಲ್ಲಿ ನಿಜವಾಗಿ ನೆಲೆಗೊಂಡರೆ ಹುಡುಗರು, ಸಾಲೆಯ ಮನೆ, ಸಾಲೆಯ ಸುತ್ತಲಿನ ಸ್ಥಳ, ಆಟದ ಬೈಲು, ಅವರ ಮನೆಗಳು, ಓಣಿಗಳು ಎಲ್ಲವೂ ಸ್ವಚ್ಛವಾಗಿರುವವು. ನಮ್ಮಲ್ಲಿಯ ಬಡತನದ ಮೂಲಕ ಹುಡುಗರು ಸಾಲೆಗೆ ಬಹಳ ಹೊಲಸಾಗಿ ಬರುವರೆಂದೂ, ಇದನ್ನು ತಪ್ಪಿಸುವದು ಶಿಕ್ಷಕರ ಕೈಯಲ್ಲಿ ಪೂರ್ಣವಾಗಿಲ್ಲೆಂದೂ ಸಾಲೆಯ ಮನೆ, ತೋಟ, ಆಟದ ಬೈಲು ಮೊದಲಾದವುಗಳನ್ನು ಸ್ವಚ್ಛವಾಗಿಯೂ ಅಚ್ಚುಕಟ್ಟಾಗಿಯೂ ಇಟ್ಟುಕೊಳ್ಳಲಿಕ್ಕೆ ಸಾದಿಲವಾರ ಹಣವು ಸಾಕಷ್ಟು ಇರುವದಿಲ್ಲೆಂದೂ

ಶಿಕ್ಷಕರು ಹೇಳುವದುಂಟು. ಈ ಮಾತಿನಲ್ಲಿ ತಥ್ಯಾಂಶವಿಲ್ಲೆಂದಲ್ಲ. ಆದರೆ ಸ್ವಚ್ಛತೆಯನ್ನು ಕಾಯ್ದುಕೊಳ್ಳಲಿಕ್ಕೆ ಹಣವು ಬೇಕೇ ಬೇಕೆಂದಲ್ಲ. ಪ್ರತಿಯೊಬ್ಬ ಶಿಕ್ಷಕನು ಈ ಬಗ್ಗೆ ಪ್ರಯತ್ನವನ್ನು ಎಡೆಬಿಡದೆ ಮಾಡಿದರೆ ಸದ್ಯಕ್ಕೆ ನಮ್ಮ ಸಾಲೆಗಳಲ್ಲಿಯೂ ಹಳ್ಳಿಗಳಲ್ಲಿಯೂ ದೊಡ್ಡ ಊರುಗಳಲ್ಲಿಯೂ ಕಾಣುವ ಅಸಹ್ಯವಾದ ಹೊಲಸೂ ಕಸಕುಪ್ಪೆಗಳೂ ಕಡಿಮೆಯಾಗುವವೆನ್ನಲು ಸಂದೇಹವಿಲ್ಲ.

ಈ ಬಗ್ಗೆ ಕೆಲವು ಸಾಲೆಗಳಲ್ಲಿ ನಡೆದಿರುವ ಪ್ರಯತ್ನಗಳನ್ನೂ ಕೆಲವು ಸುಧಾರಿಸಿದ ದೇಶದವರು ಕೈಕೊಂಡಿರುವ ಉಪಾಯಗಳನ್ನೂ ಕುರಿತು ವಿಚಾರಿಸಿದರೆ ಸ್ವಚ್ಛತೆ ಅಚ್ಚುಕಟ್ಟುತನಗಳನ್ನು ಏನೂ ಖರ್ಚಿಲ್ಲದೆ ಹ್ಯಾಗೆ ನೆಲೆಗೊಳಿಸಬಹುದೆಂಬದನ್ನೂ ಇದರಿಂದ ಹುಡುಗರ ಆರೋಗ್ಯಕ್ಕೂ ಸುಖಮಯವಾದ ಜೀವನಕ್ಕೂ ಸಹಾಯವಾಗುವವಲ್ಲದೆ ಅವರಲ್ಲಿ ಸೌಂದರ್ಯದ ಭಾವನೆಯನ್ನು ಸಹ ಹ್ಯಾಗೆ ನೆಲೆಗೊಳಿಸಬಹುದೆಂಬದನ್ನೂ ಯೋಗ್ಯ ನಾಗರಿಕರಾಗಲಿಕ್ಕೆ ಅವರಿಗೆ ಹ್ಯಾಗೆ ದಾರಿತೆರೆಸಿದಂತಾಗುವದೆಂಬದನ್ನೂ ತಿಳಿದುಕೊಳ್ಳಬಹುದು.

ನಾವು ನೋಡಿ ಸಂತೋಷಪಟ್ಟ ಧಾರವಾಡದಲ್ಲಿರುವ ಒಂದು ಹೆಣ್ಣುಮಕ್ಕಳ ಸಾಲೆಯಲ್ಲಿ ಇವುಗಳನ್ನು ನೆಲೆಗೊಳಿಸಲಿಕ್ಕೆ ಯಾವ ಉಪಾಯಗಳನ್ನು ಕೈಕೊಂಡಿರುವರೆಂಬದನ್ನು ಮೊದಲು ಹೇಳುವೆವು. ಸ್ವಚ್ಛತೆ, ಅಚ್ಚುಕಟ್ಟುತನ ಇವು ಗುಣಗಳು, ಚಟಗಳು. ದಿನಾಲು ಇವುಗಳನ್ನು ಆಚರಿಸಲಿಕ್ಕೆ ಹಚ್ಚುವದರಿಂದಲೇ ಇವು ಹುಡುಗರಲ್ಲಿ ನೆಲೆಗೊಳ್ಳುವವು. ಪಾಠಗಳನ್ನು ಹೇಳಿ ಇವುಗಳ ಬಗ್ಗೆ ತಿಳಿಸಿಕೊಡಲಿಕ್ಕೆ ಪ್ರಯತ್ನಪಡುವದಕ್ಕಿಂತ ಶಿಕ್ಷಕರು ತಮ್ಮ ಉಡಿಗೆ ತೊಡಿಗೆ, ಶರೀರ ಮೊದಲಾದವುಗಳಿಂದ ಹುಡುಗರಿಗೆ ಮಾದರಿಯನ್ನು ಪ್ರತಿನಿತ್ಯ ತೋರಿಸುವದೇ ಹೆಚ್ಚು ಮಹತ್ವವಾದದ್ದು. ಈ ಸಂಗತಿಯನ್ನು ಈ ಸಾಲೆಯ ಪ್ರತಿಯೊಬ್ಬ ಶಿಕ್ಷಕಿಯು ಮನಗಂಡು ಅದರಂತೆ ಆಚರಿಸುತ್ತಿರುವಳೆಂದು ಹೇಳುವ ಕಾರಣವಿಲ್ಲ. ಇಷ್ಟರಿಂದಲೇ ಸಮಾಧಾನಹೊಂದದೆ ಇವರು ತಮ್ಮ ಸಾಲೆಯ ದಿನಚರ್ಯದ ಆರಂಭದಲ್ಲಿ ಈ ಗುಣಗಳನ್ನು ನೆಲೆಗೊಳಿಸುವ 'ಒಳ್ಳೆ' ಸುಲಭವಾದ ಹಾಗು ಪರಿಣಾಮಕರವಾದ ಉಪಾಯಗಳನ್ನು ತಪ್ಪದೆ ಕೈಕೊಳ್ಳುತ್ತಿರುವರು. ಪ್ರತಿದಿನದ ಆರಂಭದ ಪ್ರಾರ್ಥನೆಯು ಮುಗಿದಕೂಡಲೆ ಹುಡುಗಿಯರು ತಮ್ಮ ತಮ್ಮ ವರ್ಗಗಳಲ್ಲಿ ಹೋಗುವದಕ್ಕಿಂತ ಮೊದಲು ಎಲ್ಲರು ಸಾಲುಗೊಂಡು ವರ್ಗದ ಹೊರಗೆ ನಿಂತು ಬಿಡುವರು. ಕೂಡಲೆ ವರ್ಗದ ಹಿರಿಮಣಿಯು ಪ್ರತಿಯೊಬ್ಬರ ಅರಿವೆಗಳು, ತಲೆ, ಮೋರೆ, ಕಣ್ಣು, ಬಾಯಿ, ಹಲ್ಲು, ಮೂಗು, ಉಗುರು ಇವು ಸ್ವಚ್ಛವಿರುವವೋ ಹ್ಯಾಗೆ ಎಂಬದನ್ನು ಪರೀಕ್ಷಿಸುವಳು. ಬಹುತರವಾಗಿ ಆರಂಭದಲ್ಲಿ ಈ ಪರೀಕ್ಷೆಯಲ್ಲಿ ಇವೆಲ್ಲ ಅಂಗಗಳಲ್ಲಿಯೂ ಹೊಲಸು ಕೂತಿರುವದು ದೃಷ್ಟಿಗೆ ಬೀಳುವದುಂಟು. ಆಗ ಕೂಡಲೆ

ಆ ಹುಡುಗೆಯನ್ನು ಸ್ವಚ್ಛವಾಗಿ ಬರಲಿಕ್ಕೆ ನೀರು, ಸಬಕಾರ, ಬಾಸಣಿಗೆ, ಟಾವೆಲ್ಲು, ಕನ್ನಡಿ ಇವು ಇಟ್ಟಿರುವ ಕೋಣೆಗೆ ಕರೆದೊಯ್ದು ಶಿಕ್ಷಿಕೆಯು ಆಕೆಯು ಸ್ವಚ್ಛವೂ ಅಚ್ಚುಕಟ್ಟುತನವುಳ್ಳವಳೂ ಆಗಲಿಕ್ಕೆ ನೆರವಾಗಿ ವರ್ಗಕ್ಕೆ ಕಳಿಸಬೇಕಾಗುವದು. ಆದರೆ ಈ ಪರೀಕ್ಷೆಯು ದಿನಾಲು ತಪ್ಪದೆ ನಡೆಯುವದೆಂದು ಒಮ್ಮೆ ಹುಡಿಗೆಯರಿಗೆ ಮನವರಿಕೆ ಯಾದರೆ ಅವರು ಮೊದಲೇ ಈ ಬಗ್ಗೆ ಎಚ್ಚರಗೊಂಡು ಹಿರಿಮಣೆಯ ಕೆಲಸವನ್ನು ಹಗು ರಾಗಿ ಮಾಡುವರೆಂದು ಅನುಭವ ಬಂದಿರುವದು. ವಿಶೇಷವಾಗಿ ನಮ್ಮಲ್ಲಿ ಹುಡುಗರ ಮೂಗು ಸ್ವಚ್ಛವಿರುವದಿಲ್ಲ, ಸುರಿಯುತ್ತಿರುವದು. ಇದಕ್ಕಾಗಿ ಈ ಸಾಲೆಯಲ್ಲಿ "ಮೂಗಿನ ಡ್ರಿಲ್ಲು" ಮಾಡಿಸಬೇಕಾಗುತ್ತದೆಂದು ಹೇಳಬೇಕಾಗುವದು. ಅಂದರೆ ಎಲ್ಲ ಹುಡಿಗೆಯರು ಜೋರಿನಿಂದ ಸುಂಬಳವನ್ನು ಹೊರಗೆಡವಿ ಕೈಗಳನ್ನು ಸ್ವಚ್ಛವಾಗಿ ತೊಳೆದುಕೊಳ್ಳುವರು. ಇದನ್ನು ಓದಿ ಕೆಲವರು ನಗಬಹುದು; ಕೆಲವರು ಅಸಹ್ಯ ಪಟ್ಟುಕೊಳ್ಳಬಹುದು. ಆದರೆ ನಮ್ಮ ಹುಡುಗರು ಮೂಗಿನಿಂದ ಧಾರೆಸುರಿಸುತ್ತ, ಸುಂಬ ಳವನ್ನು ನೆಕ್ಕುತ್ತ, ಒಮ್ಮೊಮ್ಮೆ ಅದನ್ನು ಮೇಲಕ್ಕೆಳೆಕೊಂಡು ನುಂಗುತ್ತ ಯಾವಾಗಲೂ ಸರಬರವೆಂದು ಸಪ್ಪಳುಮಾಡುತ್ತ ಕುಳಿತಿರುವದನ್ನು ನೋಡಿ ಅಸಹ್ಯಪಡದ ನಮಗೆ ಎಲ್ಲ ಹುಡುಗರು ಒತ್ತಟ್ಟಿಗೆ ಸಾಲಾಗಿ ನಿಂತು, ಒಂದು ಎರಡು, ಮೂರು ಎಂಬ ಡ್ರಿಲ್ಲಿ ನಲ್ಲಿ ಕೊಟ್ಟಂತೆ ಅಪ್ಪಣೆಗಳನ್ನು ಕೊಡಲು ಚನ್ನಾಗಿ ಮೂಗು ಸ್ವಚ್ಛಮಾಡಿಕೊಂಡರೆ ಇದರಲ್ಲಿ ನಗೆಗೂ ಅಸಹ್ಯಕ್ಕೂ ಏನೂ ಅವಕಾಶವಿಲ್ಲೆಂದು ನಮಗೆ ತೋರುತ್ತದೆ. ಈ ತರದ ಸುಲಭವಾದ ಉಪಾಯದಿಂದ ಸ್ವಚ್ಛತೆಯನ್ನು ನೆಲೆಗೊಳಿಸುವದು ಕೆಲವು ಸಾಲೆ ಗಳಲ್ಲಿ ನಡೆದಿರುವದೆಂದೂ ಇದರ ಪರಿಣಾಮವು ಬಹಳ ಹಿತಕರವಾಗಿದೆಯೆಂದೂ ಹೇಳಿ, ನಮ್ಮ ಸಾಲೆಗಳಲ್ಲೆಲ್ಲ ಈ ಬಗೆಯ ಪ್ರಯತ್ನಗಳು ನಡೆದರೆ ನಮ್ಮ ಹುಡುಗರಲ್ಲಿ ಸ್ವಚ್ಛ ತೆಯು ಸಹಜವಾಗಿ ನೆಲೆಗೊಳ್ಳುವದೆಂದೂ ನಾವು ಸಾರಿ ಹೇಳುವೆವು. ನಾವು ವರ್ಣಿಸು ತ್ತಿರುವ ಸಾಲೆಯ ಹುಡುಗರಲ್ಲಿ ಹಲವರು ಕೀಳ ಬಡತನದ ಮನೆತನಗಳಿಂದ ಬಂದರೂ ಸ್ವಚ್ಛತೆ ಅಚ್ಚುಕಟ್ಟುತನಗಳಲ್ಲಿ ಒಳ್ಳೇ ಧನಿಕರ ಮನೆತನದವರಂತೆಯೇ ಕಾಣುತ್ತಿದ್ದ ರೆಂಬದನ್ನು ನೋಡಿ ನಮಗೆ ಆಶ್ಚರ್ಯವಾದದ್ದರಲ್ಲಿ ಸೋಜಿಗವಲ್ಲ. ಈ ಗುಣಗಳ ಪರಿಣಾಮವು ಸಾಲೆಯ ಕೋಣೆಯಲ್ಲಿ ಹುಡುಗೆಯರ ಪಾಟಿ ಪುಸ್ತಕಗಳಲ್ಲಿ ಅವರ ಸಾಲೆಯ ಯಾವತ್ತೂ ಕೆಲಸಗಳಲ್ಲಿ ಒಡೆದು ಕಾಣುತ್ತಿತ್ತು. ಇಷ್ಟೇ ಅಲ್ಲ. ಇದರ ಪರಿಣಾಮವು ಮನೆಯವರಮೇಲೆಯೂ ಆಗುತ್ತಿರುವದೆಂದು ಊಹಿಸುವದು ತಪ್ಪಾಗ ಲಿಕ್ಕಿಲ್ಲ. ಹೂವಿನ ಗಂಧವು ಅದನ್ನು ಒಯ್ದಲ್ಲೆಲ್ಲ ಹಬ್ಬುವಂತೆ ಸಾಲೆಯಲ್ಲಿ ದೃಢವಾದ ಗುಣಗಳ ಪರಿಣಾಮವು ಹುಡುಗರು ಹೋದಲ್ಲೆಲ್ಲ ಆಗುವದು.

ಇನ್ನು ಸುಧಾರಿಸಿದ ದೇಶಗಳಲ್ಲಿ ಈ ಗುಣಗಳು ಸಾಲೆಯಲ್ಲಷ್ಟೇ ಅಲ್ಲ, ಸಾಲೆಯಿಂದ ಸಮಾಜಕ್ಕೂ ಹಬ್ಬುವಂತೆ ಮೊದಲು ಯಾವ ಉಪಾಯಗಳನ್ನು ಕೈಕೊಂಡಿರುವರೆಂಬ

ಬಗ್ಗೆ ತುಸು ವಿಚಾರಿಸೋಣ. ಕಳೆದು ಹತ್ತು ವರ್ಷಗಳಲ್ಲಿ ಸಂಯುಕ್ತ ಸಂಸ್ಥಾನಗಳಲ್ಲಿಯ ಶಾಲೆಯ ಹುಡುಗರ ಆರೋಗ್ಯದಲ್ಲಿಯೂ ಮಾನಸಿಕ ಬಲದಲ್ಲಿಯೂ ಸುಧಾರಣೆಯಾಗಿರುವದೆಂದೂ ಹತ್ತು ವರ್ಷಗಳ ಹಿಂದೆ ಕೆಲವರು ಡಾಕ್ಟರರು ಆರೋಗ್ಯದ ಕೆಲವು ನಿಯಮಗಳನ್ನು ಹಾಕಿಕೊಟ್ಟು ಅವುಗಳನ್ನು ಪಾಲಿಸುವ ಹುಡುಗರ ಸಂಘಗಳನ್ನು ಮಾಡಿ, ತಾವು ಹಾಕಿಕೊಟ್ಟ ನಿಯಮಗಳನ್ನು ಆ ಹುಡುಗರು ಎಡೆಬಿಡದೆ ಪಾಲಿಸುತ್ತಿರುವರೇಬದನ್ನು ಶಿಕ್ಷಕರ ನೆರವಿನಿಂದ ನೋಡುತ್ತಿದ್ದಮೂಲಕ ಈ ಸುಧಾರಣೆಯಾಗಿರುವದೆಂದೂ ಬಲ್ಲವರು ಹೇಳುವರು. ಈ ನೇಮಗಳನ್ನು ಕೆಳಗೆ ಕೊಡುವೆವು.

ನಿತ್ಯಕರ್ಮಗಳು

೧. ಇಂದು ಊಟಮಾಡುವದಕ್ಕೆ ಮೊದಲು ನಾನು ನನ್ನ ಕೈಗಳನ್ನು ಸ್ವಚ್ಛವಾಗಿ ತೊಳೆದುಕೊಂಡೆನು.

೨. ನಾನು ಮೋರೆ, ಕಿವಿ, ಕುತ್ತಿಗೆಗಳನ್ನು ಚನ್ನಾಗಿ ತೊಳೆದುಕೊಂಡೆನಲ್ಲದೆ, ಕೈಯುಗುರುಗಳನ್ನು ಸ್ವಚ್ಛಮಾಡಿದೆನು.

೩. ಹೊಲಸುಗೊಳಿಸುವ ಇಲ್ಲವೆ ಅಪಾಯಗೊಳಿಸುವ ಕೈಬೆರಳು, ಪೆನಿಸಲು ಹಾಗು ಇತರ ಯಾವದೇ ಪದಾರ್ಥವನ್ನು ನಾನು ನನ್ನ ಬಾಯಿಯಲ್ಲಾಗಲಿ ಮೂಗಿನಲ್ಲಾಗಲಿ ಇಟ್ಟುಕೊಳ್ಳಲಿಲ್ಲ.

೪. ಮಧ್ಯಾಹ್ನ ಹಾಗು ಸಂಜೆಯ ಊಟವಾದಕೂಡಲೆ ನಾನು ನನ್ನ ಹಲ್ಲುಗಳನ್ನು ಬ್ರಶ್ಶಿನಿಂದ ಸ್ವಚ್ಛವಾಗಿ ತೊಳೆದುಕೊಂಡೆನು.

೫. ನಾನು ಹತ್ತು ಇಲ್ಲವೆ ಹೆಚ್ಚು ಸಾರಿ ದೀರ್ಘಶ್ವಾಸದಿಂದ ಸಾವಕಾಶವಾಗಿ ಶುದ್ಧವಾದ ಹವೆಯನ್ನು ಪುಪ್ಪುಸಗಳೊಳಗೆ ತೆಗೆದುಕೊಂಡೆನು. ನಾನು ಕೆಮ್ಮಿದಾಗ, ಸೀನಿದಾಗ ಇಲ್ಲವೆ ಉಗುಳಿದಾಗ ಬಳಿಯಲ್ಲಿದ್ದವರಿಗೆ ಅವರಿಂದ ಏನೂ ಬಾಧೆಯಾಗದಂತೆ ನೋಡಿಕೊಂಡೆನು.

೬. ಬೈಲು ಹವೆಯಲ್ಲಿ ಇಲ್ಲವೆ ಕೋಣೆಯ ಕಿಡಿಕಿಗಳನ್ನು ತೆರೆದಿಟ್ಟುಕೊಂಡು ಮೂವತ್ತು ಮಿನಿಟುಗಳಿಗಿಂತ ಹೆಚ್ಚು ಅವಧಿಯವರೆಗೆ ಆಟಗಳನ್ನಾಡಿದೆನು. ಸರಿಯಾಗಿ ಕೂಡಲಿಕ್ಕೂ ನೀಟಾಗಿ ನಿಲ್ಲಲಿಕ್ಕೂ ನಾನು ಕೈಲಾದಷ್ಟು ಪ್ರಯತ್ನಪಟ್ಟೆನು.

೭. ನಾನು ನಿನ್ನೆ ರಾತ್ರಿ ೧೦ ತಾಸು ಅಥವಾ ಅದಕ್ಕಿಂತ ತುಸು ಹೆಚ್ಚು ಹೊತ್ತು ಮಲಗಿದ್ದೆನು. ಆಗ ಮಲಗಿದ ಕೋಣೆಯ ಕಿಡಿಕೆಗಳನ್ನು ತೆರೆದಿಟ್ಟಿದ್ದೆನು,

೮. ಒಟ್ಟಿಗೆ ನಾನು ನಾಲ್ಕು ಗ್ಲಾಸು ನೀರು ಕುಡಿದೆನು. ಪ್ರತಿಯೊಂದು ಊಟಕ್ಕಿಂತ ಮೊದಲು ನೀರು ಕುಡಿಯದಿರಲಿಲ್ಲ. ಚಹ, ಕಾಫಿ ಇಲ್ಲವೆ ಬೇರೆ ಯಾವದೊಂದು ಅಪಾಯಕಾರಕವಾದ ಪೇಯವನ್ನು ನಾನು ಕುಡಿಯಲಿಲ್ಲ.

೯. ಸಾವಕಾಶವಾಗಿ ತಿನ್ನಲು ನಾನು ಪ್ರಯತ್ನಪಟ್ಟೆನು. ನನ್ನ ಆಹಾರವು ಆರೋಗ್ಯಕರವಾದದ್ದಿತ್ತು. ಆಹಾರದಲ್ಲಿ ಹಾಲು, ಹಣ್ಣು ಹಾಗು ಕಾಯಿಪಲ್ಯ ಇದ್ದವು. ನಿಯಮಿತ ವೇಳೆಗೆ ಬಹಿರ್ದೇಶಕ್ಕೆ ಹೋಗಿ ಬಂದೆನು.

೧೦. ನಾನು ಸಮಾಧಾನದಿಂದಲೂ, ಸರಳತನದಿಂದಲೂ, ಸ್ವಚ್ಛಮನಸಿನಿಂದಲೂ ಇರಲು ಪ್ರಯತ್ನಪಟ್ಟೆನು. ಪರರಿಗೆ ನನ್ನಿಂದ ಸಹಾಯವಾಗುವಂತೆ ಆಚರಿಸಲಿಕ್ಕೆ ಹವಣಿಸಿದೆನು.

೧೧. ನಾನು ದಿನಾಲು ಸ್ನಾನಮಾಡಿದೆನು.

ಈ ಆರೋಗ್ಯದ ನಿಯಮಗಳನ್ನು ಪ್ರತಿಯೊಬ್ಬ ಹುಡುಗನೂ ಹುಡಿಗೆಯೂ ಪಾಲಿಸುವದು ಕಠಿಣವಲ್ಲ. ಅದರಿಂದ ಆರೋಗ್ಯವು ನಿಶ್ಚಿತವಾಗಿ ಸಾಧಿಸುವದು. ಆದರೆ ಪ್ರತಿಯೊಬ್ಬರು ತಮ್ಮ ಶರೀರಕ್ಕೆ ಸಂಬಂಧಿಸಿ ಆರೋಗ್ಯ, ಸ್ವಚ್ಛತೆ ಇವುಗಳನ್ನು ಕಾಯ್ದುಕೊಂಡರೆ ತೀರಲಿಲ್ಲ. ತಮ್ಮ ಓಣಿ, ತಮ್ಮ ಆಟದ ಬೈಲು, ತಮ್ಮ ಊರು ಇವೆಲ್ಲ ಸ್ವಚ್ಛವಾಗಿ ಉಳಿಯುವಂತೆ ನೋಡಿಕೊಳ್ಳುವದಕ್ಕೆ ಏನಾದರೂ ಉಪಾಯವು ರೂಢಿಯಲ್ಲಿರುವದು ಅವಶ್ಯವಾದದ್ದು. ಈ ಉಪಾಯಗಳನ್ನು ರೂಢಿಗೊಳಿಸಲಿಕ್ಕೆ ಸಾಲೆಯಷ್ಟು ಮೇಲಾದ ಸ್ಥಳವು ಬೇರೊಂದಿಲ್ಲ. ಹತ್ತು ವರ್ಷಗಳ ಹಿಂದೆ 'ಸುಂದರವಾದ ಇಂಗ್ಲಂಡ' ಎಂಬ ಒಂದು ಸಂಸ್ಥೆಗೆ ಲಕ್ಷಾವಧಿ ಹುಡುಗರು ಮೆಂಬರರಾದರು. ಪ್ರತಿಯೊಬ್ಬ ಮೆಂಬರನು ಕೆಲವು ವಚನಗಳಿಂದ ಬದ್ಧನಾದನು, ಅವು ಯಾವವೆಂದರೆ—

೧. ನಾನು ನಮ್ಮ ಊರಲ್ಲಿ ಇಲ್ಲವೆ ಊರ ನೆರೆಯಲ್ಲಿ ಇರುವ ಪ್ರಾಣಿಗಳನ್ನು ನೋಯಿಸುವದಿಲ್ಲ, ಗಿಡಮರಗಳಿಗೆ ಧಕ್ಕೆಮಾಡುವದಿಲ್ಲ, ಹೂ ಹಣ್ಣುಗಳನ್ನು ಹರಿಯುವದಿಲ್ಲ.

೨. ನಮ್ಮ ಊರಲ್ಲಿ ಇಲ್ಲವೆ ಊರನೆರೆಯಲ್ಲಿ ಬೀಜಗಳನ್ನು ಹಾಕಿ ಇಲ್ಲವೆ ಸಸಿಗಳನ್ನು ಹಚ್ಚಲಿಕ್ಕೆ ಪ್ರಯತ್ನಮಾಡುವೆನು.

೩. ನಮ್ಮ ಊರಲ್ಲಿ ಅಥವಾ ಊರ ನೆರೆಯಲ್ಲಿ ಇರುವ ಹೊಲಗಳಲ್ಲಿ, ಹಾದಿಗಳಲ್ಲಿ, ರಸ್ತೆಗಳಮೇಲೆ, ಕೆರೆ ಹಳ್ಳಗಳಲ್ಲಿ ಒಡೆದ ಕಾಜಿನ ಚೂರುಗಳನ್ನಾಗಲಿ, ಹರಕು ಡಬ್ಬಿಗಳನ್ನಾಗಲಿ, ಕಾಗದದ ಚೂರುಗಳನ್ನಾಗಲಿ ಬೇರೆ ಯಾವ ಕಸವನ್ನಾಗಲಿ ಹಾಕುವದಿಲ್ಲ.

೪. ನಮ್ಮ ಮನೆ, ಸಾಲೆ, ಊರು ಇವು ಆರೋಗ್ಯವುಳ್ಳವೂ ಚಂದಕಾಣುವಂಥವೂ ಆಗಲಿಕ್ಕೆ ನನ್ನ ಕೈಲಾದಷ್ಟು ಪ್ರಯತ್ನಮಾಡುವೆನು.

ಇವುಗಳಲ್ಲಿ ಕೊನೆಯ ಎರಡು ವಚನಗಳನ್ನು ತೆಗೆದುಕೊಂಡು ಅವುಗಳನ್ನು ಪಾಲಿಸಲಿಕ್ಕೆ ಪ್ರಯತ್ನಪಡುವಂತೆ ನಮ್ಮ ಸಾಲೆಗಳ ವಿದ್ಯಾರ್ಥಿಗಳಿಗೆ ಶಿಕ್ಷಕರು ಉತ್ತೇಜನ

ಕೊಟ್ಟರೆ ನಮ್ಮ ಹುಡುಗರಲ್ಲಿ ಅಚ್ಚುಕಟ್ಟುತನ, ಸ್ವಚ್ಛತೆ, ಸೌಂದರ್ಯದ ಭಾವನೆ ಇವುಗಳನ್ನು ನೆಲೆಗೊಳಿಸುವದು ಕಠಿಣವಲ್ಲ.

ನ್ಯೂಯಾರ್ಕ ಪಟ್ಟಣದ ಸಾಲೆಯ ಹುಡುಗರು ಕೆಲವು ಸಂಘಗಳನ್ನು ಮಾಡಿಕೊಂಡಿರುವರು. ಅವರು ತೆಗೆದುಕೊಂಡ ಅಭಿವಚನಗಳು ಮಹತ್ವದವಾಗಿರುವವು. ಅವು ಯಾವವೆಂದರೆ- ನಮ್ಮ ಪಟ್ಟಣವು ಅಮೇರಿಕ ಖಂಡದಲ್ಲಿ ಎಲ್ಲಕ್ಕೂ ದೊಡ್ಡದು. ಸ್ವಲ್ಪ ಕಾಲದಲ್ಲಿಯೇ ನಾವು ಅದರ ನಾಗರಿಕರಾಗುವೆವು. ನಮ್ಮ ಊರು ಯಾರಿಂದಲೂ ದೂಷಿಸಲ್ಪಡಬಾರದೆಂಬದೇ ನಮ್ಮ ಹಿರಿಯಾಸೆ. ಆದ್ದರಿಂದ ನಾವು ನಮ್ಮ ಊರ ಬೀದಿಗಳನ್ನು ಕಸ, ಕುಪ್ಪೆ, ಹರಕುಕಾಗದ, ಒಡಕು ಸಾಮಾನುಗಳಿಂದ ದೂಷಿಸದಂತೆ ಎಚ್ಚರಗೊಳ್ಳುವೆವು. ಇತರರು ಹೀಗೆ ಅದನ್ನು ಅಂದಗೆಡಿಸದಂತೆ ನೋಡಿಕೊಳ್ಳುವೆವು. ನಮ್ಮ ಊರು ಘನಮಹಿಮೆಯುಳ್ಳದ್ದಿರುವಂತೆ ಸ್ವಚ್ಛವಾದದ್ದಿರಬೇಕು; ಅದಕ್ಕೆ ಸ್ವಾತಂತ್ರ್ಯವಿರುವಷ್ಟೇ ಅದು ಶುದ್ಧವೂ ಇರಬೇಕು. ಒಂದು ಸಾಲೆಯಲ್ಲಿ ಹುಡುಗರು ಮಾಡಿದ ದೃಢನಿಶ್ಚಯವೇನೆಂದರೆ- "ನಾವು ಸಾಲೆಯ ಸುತ್ತಲಿರುವ ಹೂವುಗಳ ಗಿಡ, ಹಣ್ಣಿನ ಗಿಡ, ಚಂದದಗಿಡ ಇವುಗಳನ್ನು ಕೆಡಿಸುವದಿಲ್ಲ; ಸಾಲೆಯಲ್ಲಿ ಉಗುಳುವದಿಲ್ಲ. ಬೀದಿಯಲ್ಲಿಯೂ ಉಗುಳುವದಿಲ್ಲ; ಯಾವ ಕಟ್ಟಡಗಳಮೇಲೆಯೂ ಬರೆದು ಅದನ್ನು ಅಂದಗೆಡಿಸುವದಿಲ್ಲ. ಸಾರ್ವಜನಿಕ ಸ್ಥಳಗಳಲ್ಲಿ ಕಾಗದಗಳನ್ನು ಹರಿದು ಚಲ್ಲುವದಿಲ್ಲ; ಕಸವನ್ನು ಕಂಡಕಂಡಲ್ಲಿ ಸೂರೆಮಾಡುವದಿಲ್ಲ. ನಮ್ಮ ಸೊತ್ತನ್ನು ಕಾಪಾಡುವಂತೆಯೇ ಹೆರವರ ಒಡವೆಗಳನ್ನು ಕಾಪಾಡುವೆವು."

ಇವೆಲ್ಲ ನಿಯಮಗಳನ್ನು ಮಾಡಿಕೊಳ್ಳದಿದ್ದರೂ ಸಾಲೆಯನ್ನೂ ಅವರ ಸುತ್ತಲಿನ ಸ್ಥಳವನ್ನೂ ಅದರೊಳಗಿನ ಸಾಮಾನುಗಳನ್ನೂ ತಮ್ಮ ಮೈ, ಉಡಿಗೆ ತೊಡಿಗೆಗಳನ್ನೂ ಸ್ವಚ್ಛವಾಗಿಟ್ಟುಕೊಳ್ಳಲು ಪ್ರಯತ್ನಮಾಡುವೆವೆಂದು ಅಭಿವಚನವನ್ನು ಕೊಟ್ಟು ಅದರಂತೆ ನಡೆಯಲು ಪ್ರಯತ್ನಿಸಲು ನಮ್ಮ ಸಾಲೆಗಳ ಹುಡುಗರಿಗೆ ಶಿಕ್ಷಕರು ಉತ್ತೇಜನ ಕೊಡುವರೆಂದು ನಾವು ಹಾರೈಸುತ್ತೇವೆ.

ಗುಳೇದಗುಡ್ಡ ಸೆಂಟ್ರಲ್ ಸ್ಕೂಲ ವಿದ್ಯಾರ್ಥಿಗಳ ಹಂಪಿಯ ಪ್ರವಾಸವು

ಲೇಖಕರು:— ಶ್ರೀ. ಮ. ವಿ. ಕಲಕೇರಿ, ಅ॥ ಮಾಸ್ತರ ಗುಳೇದಗುಡ್ಡ

ಇದೇ ದೀಪಾವಳಿಯ ಸೂಟಿಯಲ್ಲಿ ನಮ್ಮ ಸೆಂಟ್ರಲ್ ಸ್ಕೂಲ ಹೆ॥ ಮಾಸ್ತರರಾದ ಮ॥ ರಾ॥ ವಿ. ಬಿ. ಮಠ ಇವರು ಹಂಪೆಯ ಪ್ರವಾಸಕ್ಕೆ ೬ನೇ ೭ನೇ ಇಯತ್ತೆಗಳ

೨೫ ವಿದ್ಯಾರ್ಥಿಗಳನ್ನು ಕರಕೊಂಡು ಹೋಗಿದ್ದರು. ಇವರ ಹೊರ್ತಾಗಿ ಶ್ರೀ. ಶಿರೂರ ಮತ್ತು ನಾನು ಪ್ರವಾಸಕ್ಕೆ ಹೋಗಿದ್ದೆವು.

ನಾವು ತಾ॥ ೨-೧೧-೩೨ನೇ ಸಂಜೆಯ ಗಾಡಿಗೆ ಹೊರಟು ಅದೇ ದಿವಸ ರಾತ್ರಿ ೧ ಗಂಟೆಗೆ ಹೊಸಪೇಟೆಗೆ ಮುಟ್ಟಿ ಹಾಗೆಯೇ ಕುದುರೆಯಗಾಡಿಗಳ ಮೇಲಿಂದ ಬೆಳಗಾಗುವದರೊಳಗಾಗಿ ಪಂಪಾಕ್ಷೇತ್ರಕ್ಕೆ ಬಂದೆವು. ಅಲ್ಲಿ ಅಡಿಗೆಯ ಸಲುವಾಗಿ ಒಂದು ಆಳನ್ನು ಮಾಡಿದ್ದರಿಂದ ನಮಗೆ ಊಟದ ಬಗ್ಗೆ ಏನೂ ತೊಂದರೆ ಯಾಗಲಿಲ್ಲ. ಮರುದಿವಸ ಊಟತೀರಿಸಿಕೊಂಡು ಅದೇ ಸ್ಥಾನದಲ್ಲಿಯ ಒಬ್ಬ ಅನು ಭವಿಕ ಆಳನ್ನು ಕರೆದುಕೊಂಡು ಹಾಳುಹಂಪೆಯ (ವಿಜಯನಗರದ) ಗತವೈಭವವನ್ನು ನೋಡಲಿಕ್ಕೆ ಹೊರಟೆವು. ದಾರಿಯಲ್ಲಿ ಸಾಸಿವೆಕಾಳ ಗಣಪತಿ, ಕಡಲೇಕಾಳ ಗಣಪತಿ, ಉದ್ದಾನ ವೀರಭದ್ರ, ಅಕ್ಕತಂಗಿಯರ ಬಂಡೆ, ಉಗ್ರನಾರಸಿಂಹ, ಬಡವಿಲಿಂಗ ಇನ್ನೂ ಅನೇಕ ಸೃಷ್ಟಿಸೌಂದರ್ಯವನ್ನು ನೋಡಿದೆವು. ವಿಜಯನಗರದ ಗತವೈಭವ ವನ್ನು ನೋಡಿ ಪೂರ್ವಕಾಲದ ವೈಭವದ ಕಲ್ಪನೆಗಳು ಮನಸ್ಸಿನಲ್ಲಿ ಉದ್ಭವವಾದವು. ಹಜಾರರಾಮನಗುಡಿ, ರಾಣೀಮಹಾಲು, ಕುಮಾರರಾಮನ ಗರಡೀಮನೆ, ಗಜಶಾಲೆ, ಹಯಶಾಲೆ, ಭೀಮನ ಗರಡೀಮನೆ, ತುಲಾಭಾರ ಮೊದಲಾದವುಗಳು ಇನ್ನೂ ಹಾಗೆಯೇ ಇದ್ದು ಜೀರ್ಣಾವಸ್ಥೆಯಲ್ಲಿರುತ್ತವೆ. ಇವೆಲ್ಲ ಇಮಾರತಿಗಳ ಸುತ್ತಲೂ ಪರ್ವತವು ಹಬ್ಬಿಕೊಂಡಿದೆ. ಮುತ್ತು ರತ್ನಗಳ ವ್ಯಾಪಾರಕ್ಕೆ ಪ್ರಖ್ಯಾತಿಹೊಂದಿದ ನಗರವು ನಾಮಶೇಷವಾಗಿಹೋಗಿದೆ.

ತೆರವಿದ್ದ ಸ್ಥಳದಲ್ಲಿ ಭತ್ತದ ಗದ್ದೆಗಳು ಒಳ್ಳೇ ಮನೋಹರವಾಗಿ ಕಂಗೊಳಿಸು ವವು. ತುಂಗಾನದಿಯಿಂದ ತೆಗೆದ ಕಾಲುವೆಗಳು ಜಾಳಿಗೆಯಂತೆ ಎತ್ತನೋಡಿದತ್ತ ಝುಳು ಝುಳು ಸಪ್ಪಳಮಾಡುತ್ತ ಬಹು ರಮಣೀಯವಾಗಿ ತೋರುವವು. ಅಲ್ಲಿಯ ನೈಸರ್ಗಿಕ ಹಾಗೂ ಭತ್ತದ ಗದ್ದೆಗಳನ್ನೂ ಕಾಲುವೆಗಳನ್ನೂ ನೋಡಿ ಆನಂದಪಡೆಯಬೇಕೇ ಹೊರ್ತು ವಿಜಯನಗರದ ಹೀನಾವಸ್ಥೆಯನ್ನು ನೋಡುವಂತಿಲ್ಲ; ನೋಡಿದ ಕೂಡಲೆ ಪ್ರತಿಯೊಬ್ಬ ಕನ್ನಡಿಗನ ಕಣ್ಣುಗಳಲ್ಲಿ ಅಶ್ರುಧಾರೆಯು ಒಂದೇಸವನೆ ಬೀಳುವದು.

ಇಂಥ ಅತುಲ ವೈಭವವನ್ನು ಕಳಕೊಂಡ ಕನ್ನಡಿಗರು ಹತಭಾಗ್ಯರೇ ಸರಿ.

ಮೂರನೇ ದಿವಸ ಬೆಳಿಗ್ಗೆ ಆನೆಗುಂದಿಯ ರಸ್ತೆಯಗುಂಟ ಎರಡು ದೊಡ್ಡ ರಥಗಳು, ಪಾದಗಟ್ಟೆ, ರಾಮತೀರ್ಥ, ಕೋದಂಡರಾಮ, ಮಾತಂಗ, ಋಷ್ಯ ಮೂಕ ಪರ್ವತಗಳು, ಶೇಷಶಾಯಿ, ಸೀತಾಸೆರಗು, ಸೀತಾಸರೋವರ, ಮೊದಲಾದವುಗಳನ್ನು ನೋಡಿಕೊಂಡು ವಿಜಯವಿಠ್ಠಲನ ಗುಡಿಗೆ ಹೋದೆವು. ಅದು ವಿಸ್ತಾರವಾದದ್ದಿದ್ದು ಅದಕ್ಕೆ ಎರಡು ಮಹಾದ್ವಾರಗಳಿವೆ. ಗುಡಿಯಲ್ಲಿ ಮೂರ್ತಿ ಇಲ್ಲ. ಇಲ್ಲಿ ಕಲ್ಲತೇರು,

ಕಲ್ಯಾಣಮಂಟಪಗಳಿರುತ್ತವೆ. ಇದರೊಳಗಿನ ಶಿಲ್ಪಕಲಾಕೌಶಲ್ಯವನ್ನು ನೋಡಿ ಪ್ರೇಕ್ಷಕರು ತೃಪ್ತರಾಗುವರು. ಇದು ಆಗಿನ ಕಾಲದ ಶಿಲ್ಪಕಲೆಯ ಜಾಣತನದ ಪರಮಾವಧಿಯನ್ನು ತೋರ್ಪಡಿಸುತ್ತದೆ. ಒಂದು ಕಂಬದಲ್ಲಿ ೧೬ ಕಂಬಗಳು ಇದ್ದು ರಾಮಾಯಣ, ಮಹಾಭಾರತದ ಗೊಂಬೆಗಳು ಅದರಲ್ಲಿ ತೆಗೆಯಲ್ಪಟ್ಟಿವೆ. ಕಲ್ಯಾಣ ಮಂಟಪದಲ್ಲಿ ಕುಳಿತು ಸುತ್ತುಕಡೆಯಲ್ಲಿ ನೋಡಿದರೆ ಮಾನವನ ಹಸಿವೆ ತೃಷೆಗಳು ಅಡಗಿಹೋಗುವವು. ಮಂಟಪದ ಹೊರ್ತಾಗಿ ಗುಡಿಯ ಉಳಿದ ಭಾಗವೆಲ್ಲ ಅಲ್ಲಲ್ಲಿ ನಾಶಮಾಡಲ್ಪಟ್ಟಿದೆ. ಶತ್ರುಗಳು ತಮ್ಮ ಕೋಪಾಯುಧದಿಂದ ವಿಜಯನಗರದ ಸಾಮ್ರಾಜ್ಯವನ್ನು ಒಡೆದು ಪುಡಿಪುಡಿಮಾಡಿಬಿಟ್ಟಿದ್ದಾರೆ.

ವಿಜಯನಗರದ ಅರಸರು ನಗರ, ಗುಡಿ, ಗೋಪುರಗಳ ಕಟ್ಟುವಿಕೆಯಲ್ಲಿ ಅಪರಿಮಿತ ಹಣ ಖರ್ಚುಮಾಡಿ ಅದರಲ್ಲಿಯೇ ಮನಸ್ಸನ್ನು ದೃಢೀಕರಿಸಿದಂತೆ ರಾಜಕಾರಣದಲ್ಲಿ ತಮ್ಮ ದೇಹವನ್ನೂ, ಮನಸ್ಸನ್ನೂ ಅರ್ಪಿಸಿದ್ದರೆ ಜಗತ್ತಿನಲ್ಲಿ ಪ್ರಖ್ಯಾತಿ ಹೊಂದಿ ಚಿರಕಾಲ ಬಾಳಬಹುದಾಗಿತ್ತು. ಆದರೆ ಕಾಲಗತಿಯನ್ನು ತಿಳಿದವರಾರು ? " ತಿಪ್ಪೆಯು ಉಪ್ಪರಿಗೆಯಾಗುವದು, ಉಪ್ಪರಿಗೆಯು ತಿಪ್ಪೆಯಾಗುವದು. " ಗುಡಿಯ ಹಿಂಬದಿಯಿಂದಲೇ ತುಂಗಭದ್ರಾನದಿಯ ಒಂದು ಕಾಲುವೆಯು ಬಂದು ಗುಡಿಯ ಮೇಲ್ಭಾಗದಲ್ಲಿ ಹಾಯ್ದು ಮುಂದೆ ಒಳಭಾಗದಲ್ಲಿ ಬಂದಿರುತ್ತದೆ. ಅಲ್ಲಿ ಯಾವತ್ತು ವಿದ್ಯಾರ್ಥಿಗಳು ಈಸಾಡಿ ದೇವರ ದರ್ಶನಕ್ಕಾಗಿ ಕಾಯಿ ಕರ್ಪುರಗಳನ್ನು ತೆಗೆದುಕೊಂಡು ಹೋದೆವು.

ವಿರೂಪಾಕ್ಷದೇವರ ಗುಡಿಯು ಆವಾರವು ೧॥ ಫರ್ಲಾಂಗ ಉದ್ದ, ।।। ಫರ್ಲಾಂಗ ಅಗಲವಿರುವದು. ಮಹಾದ್ವಾರವು ೧೧ ಅಂತಸ್ತುಗಳಿಂದ ಕಟ್ಟಲ್ಪಟ್ಟಿದೆ. ಅದರ ಕಟ್ಟಡವು ಪ್ರೇಕ್ಷಕರಿಗೆ ಅತ್ಯಾಶ್ಚರ್ಯವನ್ನುಂಟುಮಾಡುತ್ತದೆ. ಅದರ ಹೊರ್ತಾಗಿ ಒಳಗೆ ೪ ಸಣ್ಣ ದ್ವಾರಗಳಿರುವವು. ಅವುಗಳಿಗೂ ಸಣ್ಣ ಗೋಪುರಗಳು ಇರುತ್ತವೆ. ಗುಡಿಯ ಪ್ರಾಕಾರದ ಮಗ್ಗಲಿಗೆ ಅನೇಕ ಸಣ್ಣ ದೇವರ ಮೂರ್ತಿಗಳಿರುತ್ತವೆ. ಮುಖ್ಯ ವಿರೂಪಾಕ್ಷಲಿಂಗ ಮೂರ್ತಿ ಇದ್ದ ಗುಡಿಯಲ್ಲಿ ಒಳಗೆ ಮೂರು ಬಾಗಿಲುಗಳಿರುತ್ತವೆ. ಅಲ್ಲಿ ಕತ್ತಲೆಯು ವಿಶೇಷವಾಗಿರುವದು. ಯಾವಾಗಲೂ ನಂದಾದೀಪಗಳಿರುವವು. ಗರ್ಭಗುಡಿಯ ಸಮೀಪದ ಒಳಭಾಗದಲ್ಲಿಯೇ ಪಂಪಾಂಬೆಯ ಮೂರ್ತಿಯಿರುವದು. ಇದರ ಹೊರ್ತಾಗಿ ಚಂದ್ರಮೌಳೀಶ್ವರ, ಭುವನೇಶ್ವರಿ, ವೀರಭದ್ರ ಮುಂತಾದ ಅನೇಕ ಮೂರ್ತಿಗಳಿರುವವು. ಹಂಪೆಯ ಯಾವತ್ತು ಪಟ್ಟಣ ಗುಡಿ ಗೋಪುರಗಳನ್ನು ಶತ್ರುಗಳು ನಾಶಮಾಡಿ ಇದೊಂದೇ ಮುಖ್ಯ ದೇವಾಲಯವನ್ನು ಬಿಟ್ಟಿರುತ್ತಾರೆ. ಇದಕ್ಕೆ ಸ್ವಲ್ಪಾದರೂ ಕೈಹಚ್ಚಿದಂತೆ ತೋರುವದಿಲ್ಲ. ಇದರ ಐತಿಹ್ಯವೇನಿರಬಹುದು ? ಮುಸಲ್ಮಾನರು ಪಟ್ಟಣವನ್ನೂ ಇತರ ಗುಡಿಗೋಪುರಗಳನ್ನೂ ನಾಶಮಾಡಿದ ನಂತರ

ಪಂಪಾವತಿಯು ಗುಡಿಯನ್ನು ನಾಶಪಡಿಸಲೋಸುಗ ಚಕ್ರತೀರ್ಥದ ಬಳಿಗೆ ಬರಲು ಅಲ್ಲಿ ಅವರಿಗೆ ಕಣ್ಣುಗಳು ಕಾಣದಂತಾಗಿ ಮರಳಿಹೋದರೆಂದು ಹೇಳುತ್ತಾರೆ.

"ಪರಮಾತ್ಮನು ಅಂತ್ಯಕಾಲದಲ್ಲಿ ತನ್ನ ಪ್ರಭಾವವನ್ನು ತೋರಿಸಿ ದುಷ್ಟಮರ್ದನ, ಶಿಷ್ಟಪರಿಪಾಲನೆಮಾಡುತ್ತಾನೆಂದು ಪುರಾಣಪ್ರತೀತಿಯುಂಟು." ಅಂದ ಮೇಲೆ ಹಾಗೆ ಆದರೂ ಆಗಿರಬಹುದು.

ಗುಡಿಯ ಪೂಜಾರಿಗಳು ಬ್ರಾಹ್ಮಣರು; ಯಾತ್ರಿಕರ ಕಡೆಯಿಂದ ಯಥೇಚ್ಛವಾಗಿ ಹಣವನ್ನು ಬೇಡುತ್ತಾರೆ. ದರ್ಶನಕ್ಕೆ ೧ ಆಣೆ, ಕಾಯಿಗೆ ೧। ಆಣೆ, ಮಂಗಳಾರತಿಗೆ ೪ ಆಣೆ ಈ ಪ್ರಕಾರ ಪ್ರತಿಯೊಬ್ಬರಿಂದ ಹಣತೆಗೆದುಕೊಳ್ಳದೆ ಒಳಗೆ ಬಿಡುವದಿಲ್ಲ. ವೈದಿಕಬ್ರಾಹ್ಮಣರನ್ನೂ, ಜಂಗಮರನ್ನೂ, ವಿದ್ಯಾರ್ಥಿಗಳನ್ನೂ ಹಣವಿಲ್ಲದೆ ಬಿಡುವ ಪದ್ಧತಿಯುಂಟು. ಇದರಂತೆ ರಾಮ-ಲಕ್ಷ್ಮಣ ಗುಡಿಯಲ್ಲಿಯೂ ಉದ್ದಾನ ವೀರಭದ್ರನ ಗುಡಿಯಲ್ಲಿಯೂ ಹಣವನ್ನು ತೆಗೆದುಕೊಳ್ಳದೆ ದೇವರ ದರ್ಶನ ಮಾಡಿಸುವದಿಲ್ಲ.

ತುಂಗಭದ್ರಾನದಿಯು ಗುಡಿಯ ಎಡಕ್ಕೆ ಹರಿಯುತ್ತದೆ. ನಾವು ಹೋದಾಗ ಮಳೆಗಾಲವಾದ್ದರಿಂದ ನದಿಯು ದಂಡೆಸೂಸಿ ಹರಿಯುತ್ತಿತ್ತು. ನದಿಗಳಲ್ಲಿ ದೊಡ್ಡ ದೊಡ್ಡ ಬಂಡೆಗಳು ಅಲ್ಲಲ್ಲಿಗೆ ಇರುತ್ತವೆ. ಅದರಿಂದ ನೀರು ಬಂಡೆಗೆ ಅಪ್ಪಳಿಸಿ ಹಿಂತಿರುಗಿ ಸುಳಿಯಾಗಿ ಹರಿಯುವದು. ಆದ್ದರಿಂದ ಅಲ್ಲಲ್ಲಿಗೆ ತಿರುಗಣಿಮಡಗಳು ಬಹಳವಿರುತ್ತವೆ. ಅರಿಯದ ಜನರು ನದಿಯಲ್ಲಿ ಈಸಲಿಕ್ಕೆ ಹೋದರೆ ಬದುಕಿಬರುವದು ಕಠಿಣ. ನಾವು ಹೋದ ಕಾಲಕ್ಕೆ ಖಾನದೇಶ ಜಿಲ್ಹೆಯ ಕೆಲವು ಪ್ರವಾಸಿಕರು ಯಾತ್ರೆಗೆ ಬಂದಿದ್ದರು. ಅವರು ಸ್ನಾನಕ್ಕಾಗಿ ಚಕ್ರತೀರ್ಥದ ಬಳಿಗೆ ಬಂದು ಅವರಲ್ಲೊಬ್ಬನು ಸ್ನಾನಕ್ಕಾಗಿ ಕೆಳಗಿಳಿಯಲು ನದಿಯಲ್ಲಿ ಮುಳುಗಿ ಮೃತಪಟ್ಟನು. ಆದ್ದರಿಂದ ನದಿಯಲ್ಲಿ ಸ್ನಾನಮಾಡುವವರು ಬಹಳ ಜಾಗ್ರತೆಯಿಂದ ಇರಬೇಕಾಗುವದು.

ನಾವು ಅದೇ ದಿವಸ ಪಂಪಾಯಾತ್ರೆಯನ್ನು ಮುಗಿಸಿಕೊಂಡು ಹೊಸಪೇಟೆಗೆ ಬಂದೆವು. ಅಲ್ಲಿ ವೇ॥ ರಾ॥ ರಾ॥ ಚನವೀರಯ್ಯನವರು ನಿಂಬುಗಲ್ಲ ಇವರ ಅಂಗಡಿಯ ಮಹಾಡಿಯಲ್ಲಿ ರಾತ್ರಿ ವಾಸಮಾಡಿಕೊಂಡಿದ್ದೆವು. ಅವರು ನಮಗೆ ಚನ್ನಾಗಿ ಆದರಾತಿಥ್ಯವನ್ನು ಮಾಡಿದರು. ಅಪರಿಚಿತರಾದ ನಮಗೆ ಸಹಾಯವನ್ನು ಮಾಡಿದ್ದಕ್ಕಾಗಿ ಅವರಿಗೆ ನಾವು ತುಂಬಾ ಅಭಾರಿಯಾಗಿದ್ದೇವೆ.

ತರುವಾಯ ಶನಿವಾರ ತಾರೀಖು ೫-೧೧-೩೭ನೇ ದಿವಸ ಉದಯಕ್ಕೆ ನಾವು ಅಲ್ಲಿಂದ ೨ ಮೈಲಿನ ಮೇಲಿರುವ ಜಂಬುನಾಥ ದೇವಾಲಯಕ್ಕೆ ಹೋದೆವು. ಅದು ಪುರಾತನದ ಕಟ್ಟಡವಿದ್ದು ಇಮಾರತಿಯು ಭವ್ಯವಾದದ್ದಿರುತ್ತದೆ. ಅಲ್ಲಿ ಸೂರ್ಯಕಿರಣಗಳು

ಬೀಳದಂಥ ಒಂದು ಸಣ್ಣ ಬಾವಿ ಇರುತ್ತದೆ. ನಾವು ಅಲ್ಲಿಯೇ ಸ್ನಾನ ಮಾಡಿ ಜಂಬು ನಾಥನ ದರ್ಶನ ತಗೆದುಕೊಂಡು ೯ ಗಂಟೆಗೆ ಹೊಸಪೇಟೆಗೆ ಬಂದು ಹಗಲು ೧ ಗಂಟೆಯ ಗಾಡಿಗೆ ಕೂತು ೪ ಗಂಟೆಗೆ ಗದಗಿಗೆ ಬಂದು ಮುಟ್ಟಿದೆವು.

ಗದಗಿನಲ್ಲಿಯ ವೀರನಾರಾಯಣ ಗುಡಿ, ಭೀಷ್ಮ ಕೆರೆ, ತ್ರಿಕೂಟೇಶ್ವರ ದೇವಾಲಯ ಜೈನಬಸ್ತಿ, ತೋಂಟದಾರ್ಯ ಸ್ವಾಮಿಯವರ ಮಠ ಇವುಗಳನ್ನೆಲ್ಲಾ ನೋಡಿಕೊಂಡು ಅಲ್ಲಿಯೇ ವಸತಿಯನ್ನು ಮಾಡಿದೆವು.

ಮರುದಿನ ಬೆಳಗಿನ ೬ ಗಂಟೆಗೆ ಗಾಡಿಗೆ ಹೊರಟು ಶ್ರೀ ಹಂಪೆಯ ವಿರೂಪಾಕ್ಷೇಶ್ವರನ ಕೃಪೆಯಿಂದ ಸ್ವಗ್ರಾಮಕ್ಕೆ ಸುಖರೂಪವಾಗಿ ಬಂದು ಮುಟ್ಟಿದೆವು.

ಈ ಕ್ಷೇತ್ರ ಪ್ರವಾಸವನ್ನು ನಮ್ಮ ಕರ್ನಾಟಕದ ವಿದ್ಯಾರ್ಥಿಗಳು ಅವಶ್ಯವಾಗಿ ಮಾಡತಕ್ಕದ್ದು. ಇದರಿಂದ ಕ್ಷೇತ್ರದರ್ಶನ ಪುಣ್ಯವು ಲಭಿಸುವದಲ್ಲದೆ ನಮಗೆ ಅನೇಕ ಐತಿಹಾಸಿಕ, ಭೂಗೋಲಿಕ, ನೈಸರ್ಗಿಕ ಸಂಗತಿಗಳು ತಿಳಿಯುವವು. ಕರ್ನಾಟಕದಲ್ಲಿಯ ಇನ್ನುಳಿದ ಶಾಲಾ ಮಾಸ್ತರರು ತಮ್ಮ ವಿದ್ಯಾರ್ಥಿಗಳಿಗೆ ಈ ತರದ ಪ್ರವಾಸವನ್ನು ಮಾಡಿಸಿದಲ್ಲಿ ನಿಜವಾಗಿ ವಿದ್ಯಾರ್ಥಿಗಳ ಕಲ್ಯಾಣ ಮಾಡಿದಂತೆ ಆಗುತ್ತದೆ.

ಶಿಕ್ಷಣ ಕಾರ್ಯದಲ್ಲಿ ಪಾಲಕರ ಹಾಗು ಅಧಿಕಾರಿಗಳ ಸಹಕಾರಿತ್ವವೂ ಸಹಾನುಭೂತಿಯೂ *

ಶಿಕ್ಷಣದ ಕೆಲಸವು ಅತ್ಯಂತ ಪವಿತ್ರವಾದದ್ದು, ಎಲ್ಲ ಉದ್ಯೋಗಗಳಲ್ಲಿ ಶಿಕ್ಷಣವೇ ಮಿಗಿಲಾದದ್ದು, ಚಿಕ್ಕ ಬಾಲಕರಿಗೆ ಕಲಿಸುವ ಪ್ರಾ. ಶಿಕ್ಷಕರ ಕೆಲಸವು ಅತ್ಯಂತ ಕಠಿಣವಾದದ್ದು ಎಂದು ಮೊದಲಾಗಿ ಶಿಕ್ಷಕರಾದ ನಾವೂ, ಗ್ರಂಥಕರ್ತರೂ, ತಜ್ಞರೂ ಮೇಲಿಂದ ಮೇಲೆ ಹೇಳುತ್ತಿದ್ದೇವೆ. ನಮ್ಮ ಕೆಲಸವನ್ನು ನಾವೇ ಹೊಗಳಿಕೊಂಡಂತಾಯಿತು. ಹೀಗೆ ಹೇಳಲಿಕ್ಕೆ ನಮಗೆ ಅಧಿಕಾರವಿದೆಯೇ ಎಂಬದನ್ನು ಶಿಕ್ಷರಾದ ನಾವು ಮೊದಲು ವಿಚಾರಿಸಲಿಕ್ಕೆ ಬೇಕು. ನುಡಿಯುವದು ಸುಲಭವಾದದ್ದಾದರೂ ಅದರಂತೆ ನಡೆಯುವದು ಕಠಿಣವು. ಯಾಕೆಂಬದನ್ನು ವಿಚಾರಿಸುವದೇ ಇಂದಿನ ವಿಷಯ.

ಸಂಬಳ ತೆಗೆದುಕೊಂಡು ಕೆಲಸ ಮಾಡುವ ಶಿಕ್ಷಕರು ಹೀಗೇಕೆ ಗುಣಗುಟ್ಟಬೇಕೆಂದು ಸಾಧಾರಣರು ಹೇಳಬಹುದು. "ಸಾವಿರ ರೂಪಾಯಿ ವೆಚ್ಚ ಮಾಡಿ ನಿನ್ನನ್ನು

* ಬಾಗಲಕೋಟೆಯ ಪ್ರಾ ಶಿಕ್ಷಣ ಸಮ್ಮೇಲನದಲ್ಲಿ ಶ್ರೀ. ಜೇ. ವಿ. ಬಳವಂತರಾವ, ಸ್ಕೂಲ ಮಾಸ್ತರ, ಇವರು ಓದಿದ್ದು.

ಲಗ್ನವಾಗಿರುವೆನು; ಹೇಳಿದಂತೆ ದುಡಿಯಬೇಕು ” ಎಂದು ಹೆಂಡತಿಗೆ ಹೇಳುವ ಗಂಡನೊಬ್ಬನನ್ನು ಕಂಡರೆ ನೀವೇನೆನ್ನುವಿರಿ ! ಸುಖಮಯ ಪ್ರಪಂಚವು ಗಂಡ ಹೆಂಡರ ಸಹಕಾರಿತ್ವ, ಸಹಾನುಭೂತಿಗಳನ್ನೇ ಹೇಗೆ ಅವಲಂಬಿಸಿರುವದೋ ಶಿಕ್ಷಣದ ಪ್ರಗತಿಯೂ ಹಾಗೆಯೇ ತಮ್ಮ ಮಕ್ಕಳು ಒಳ್ಳೇ ಶಿಕ್ಷಣವನ್ನು ಪಡೆದು ಬುದ್ಧಿವಂತರಾಗಬೇಕೆಂದು ಪಾಲಕರು ಬಯಸುವಂತೆಯೇ ಶಿಕ್ಷಕರೂ ಬಯಸುವರು. ತಮ್ಮ ವಿದ್ಯಾರ್ಥಿಗಳು ದಡ್ಡರಾಗಬೇಕೆಂದು ಯಾವ ಶಿಕ್ಷಕನೂ ಅನ್ನಲಾರನು. ಶಿಕ್ಷಣ ಪದ್ಧತಿಗಳಲ್ಲಿಯೂ, ಶಿಕ್ಷಕರ ಸ್ವಭಾವಗಳಲ್ಲಿಯೂ ಭೇದಗಳಿರಬಹುದು. ಕೆಲವರು ಸೌಮ್ಯತನದಿಂದ ದುಡಿದು ಕೆಲಸ ಮಾಡುವರು; ಹಲವರು ವಿದ್ಯಾರ್ಥಿಗಳಿಗೆ ಅಂಜಿಕೆ ಹಾಕಿ ತಮ್ಮ ಕಾರ್ಯ ಸಾಧಿಸಿಕೊಳ್ಳುವರು; ಮತ್ತೆ ಕೆಲವರು ಏನೋ ಒಂದು ಮಹತ್ವಾಕಾಂಕ್ಷೆಯಿಂದ ಕಠಿಣವಾದ ಶಿಕ್ಷೆ ಕೊಡುತ್ತ ಕಲಿಸುವರು; ಇನ್ನೂ ಹಲವರು ಇವೆಲ್ಲ ಮಾರ್ಗಗಳನ್ನು ಅನುಸರಿಸಿ ಕೆಲಸ ಸಾಗಿಸುವರು. ಒಟ್ಟಿನ ಮೇಲೆ ಪಾಲಕರಂತೆ ಶಿಕ್ಷಕರಾದರೂ ತಮ್ಮ ಹುಡುಗರು ಬುದ್ಧಿವಂತರಾಗಬೇಕೆಂಬ ಉದ್ದೇಶವನ್ನಿಟ್ಟುಕೊಂಡೇ ನಡೆಯುವರೆಂಬದರಲ್ಲಿ ಸಂದೇಹವಿಲ್ಲ.

ಆದರೆ ಕೆಲವು ಹುಡುಗರು ಒಳ್ಳೇ ಬುದ್ಧಿವಂತರಾಗುತ್ತಾರೆ; ಹಲವರು ದಡ್ಡರಾಗಿಯೇ ಉಳಿಯುತ್ತಾರೆ; ಕೆಲವರು ಅರ್ಧಮರ್ಧ ಶಿಕ್ಷಣಹೊಂದಿ ಉಡಾಳರಾಗಿ ತಿರುಗುತ್ತಾರೆ; ಬೇರೆ ಹಲವರು ಯಾವದೊಂದು ಉದ್ಯೋಗದಲ್ಲಿ ತೊಡಗಿ ಮುಂದಾಗತ್ತಾರೆ. ಎಲ್ಲ ಕಡೆಯಲ್ಲಿಯೂ ಒಂದೇ ತರದ ಶಿಕ್ಷಣ ಕ್ರಮವಿದ್ದು, ಈ ಪ್ರಕಾರ ವಿದ್ಯಾರ್ಥಿಗಳ ಜೀವನ ಕ್ರಮದಲ್ಲಿ ಹೆಚ್ಚು ಕಡಿಮೆಯಾಕಾಗಬೇಕು ? ಇದು ವಿಚಾರ ಮಾಡತಕ್ಕ ವಿಷಯವಲ್ಲವೇ ! ಶಿಕ್ಷಣ ಕ್ರಮದಲ್ಲಿಯಾಗಲಿ, ಶಿಕ್ಷಕರ ಶಿಕ್ಷಣಪದ್ಧತಿಯಲ್ಲಾಗಲಿ ಇರುವ ಕುಂದು ಕೊರತೆಗಳಷ್ಟೇ ಈ ಸ್ಥಿತಿಗೆ ಕಾರಣವೆಂದು ಹೇಳಲಿಕ್ಕೆ ಯಾರೂ ಧೈರ್ಯಮಾಡಲಾರರು. ಇದರಿಂದ, ಶಿಕ್ಷಣ ಕೆಲಸದಲ್ಲಿ ವಿದ್ಯಾರ್ಥಿಗಳಿಗೆ ಹಾಗು ಶಿಕ್ಷಕರಿಗೆ ಸಂಬಂಧಪಟ್ಟ ಬೇರೆ ಜನರ ಸಹಕಾರಿತ್ವವೂ ಸಹಾನುಭೂತಿಯೂ ಅವಶ್ಯವೆಂದು ಸಹಜವಾಗಿ ಕಂಡುಬರುವದು. ವಿದ್ಯಾರ್ಥಿಗಳಿಗೆ ಪಾಲಕರೂ ಹಾಗು ಶಿಕ್ಷಕರೂ ಪ್ರತ್ಯಕ್ಷವಾಗಿ ಸಂಬಂಧ ಪಡುವಂತೆ, ಈ ಕೆಲಸದಲ್ಲಿ ಶಿಕ್ಷಕರಿಗೆ ಶಿಕ್ಷಣಾಧಿಕಾರಿಗಳು ಪ್ರತ್ಯಕ್ಷವಾಗಿ ಸಂಬಂಧ ಪಟ್ಟವರಾಗಿರುವರು. ಆದ್ದರಿಂದ ಪಾಲಕರೊಂದಿಗೆ ಶಿಕ್ಷಣಾಧಿಕಾರಿಗಳ ಸಹಕಾರ ಸಹಾನುಭೂತಿಗಳನ್ನು ಪಡೆಯಲು ಯತ್ನಿಸುವದು ಶಿಕ್ಷಕರ ಮತ್ತೊಂದು ಹೆಚ್ಚಿನ ಕೆಲಸವಾಗಿರುವದು.

ದಿನಾಲು ಸರಿಯಾದ ವೇಳೆಗೆ ಬಾಲಕರನ್ನು ಶಾಲೆಗೆ ಕಳಿಸುವದು, ಶಾಲೆಯಲ್ಲಿ ಏನು ಕಲಿಯುತ್ತಾರೆಂಬದನ್ನು ಬಿಡುವಿನ ವೇಳೆಯಲ್ಲಿ ನೋಡುವದು, ಶಿಕ್ಷಕರ ಸಂಗಡ ಮಾತನಾಡಿ ಅವರ ಅನಾನುಕೂಲತೆಗಳನ್ನು ಹೋಗಲಾಡಿಸಲಿಕ್ಕೆ ಯತ್ನಿಸುವದು, ಶಾಲೆ

ಯಿಲ್ಲದ ವೇಳೆಯಲ್ಲಿ ಬಾಲಕರ ನಡೆನುಡಿಗಳ ಕಡೆಗೆ ಲಕ್ಷ ಕೊಡುವದು, ಅವರಿಗೆ ಬೇಕಾದ ಉಪಾಯಗಳನ್ನು ಆಗಾಗ್ಗೆ ಒದಗಿಸಿ ಕೊಡುವದು, ತಮಗೆ ಯೋಗ್ಯ ಕಂಡ ಸುಧಾರಣೆಯ ಸೂಚನೆಗಳನ್ನು ಶಿಕ್ಷಣಾಧಿಕಾರಿಗಳಿಗೆ ತಿಳಿಸುವದು ಇವೇ ಮೊದಲಾದ ಕೆಲಸಗಳನ್ನು ಪಾಲಕರು ಮಾಡಬೇಕಾಗಿರುವದು. ಇಲ್ಲದಿದ್ದರೆ, ಪ್ರತಿನಿತ್ಯದ ಕೆಲಸದಲ್ಲಿ ವಿದ್ಯಾರ್ಥಿಗಳಲ್ಲಿರುವ ಕುಂದು ಕೊರತೆಗಳಿಂದ ಶಿಕ್ಷಕರಿಗೆ ಅನೇಕ ಅಡಚಣೆಗಳು ಬರುವವು. ಇವನ್ನು ದೂರ ಮಾಡಿಕೊಳ್ಳಲಿಕ್ಕೆ ಶಿಕ್ಷಕರೂ ಆದಷ್ಟು ಪ್ರಯತ್ನಿಸಬೇಕೆಂಬದನ್ನು ಒಪ್ಪಿಕೊಳ್ಳಬಹುದಾದರೂ, ಅವರ ಕೈಮೀರಿರುವ ಕೆಲಸದಲ್ಲಿ ಅವರಿಗೆ ದೋಷಕೊಡುವದು ಸಮಂಜಸವಾಗಲಾರದು.

ಶಿಕ್ಷಣಾಧಿಕಾರಿಗಳು ಸಹ ಶಿಕ್ಷಕರ ಕೆಲಸದಲ್ಲಿ ಸಹಕಾರ ಸಹಾನುಭೂತಿಗಳನ್ನು ತೋರಿಸಿದರೆ, ಶಿಕ್ಷಣ ಕಾರ್ಯವು ಬಹು ಯಶಸ್ವಿಯಾಗಿ ನೆರವೇರುವದು. ಇದಕ್ಕೆ ಇಂದು ನಾವು ಈ ಶಿಕ್ಷಣ ಸಮ್ಮೇಲನವನ್ನು ನಡೆಯಿಸಿದ್ದೇ ದೃಷ್ಟಾಂತವಾಗಿದೆ. ಈ ಸಮ್ಮೇಲನದ ವಿಚಾರಕ್ಕೆ ನಮ್ಮ ವಾಚನಾಲಯದ ಪ್ರಮುಖ ಸಭಾಸದರು ಮೊದಲು ಪ್ರಾರಂಭ ಮಾಡಿ, ಅದನ್ನು ಅಧಿಕಾರಸ್ಥರ ಮುಂದೆ ಇಡಲು, ಅವರು ಸಂತೋಷದಿಂದ ಒಪ್ಪಿಕೊಂಡು ಬೇಕಾದ ಸಹಾಯವನ್ನು ಮಾಡಲಿಕ್ಕೆ ಅಶ್ವಾಸನ ಕೊಟ್ಟರು; ಕೆಲವು ಶಿಕ್ಷಕರು ಹಗಲು ರಾತ್ರಿಯೆನ್ನದೆ ಶ್ರಮಪಟ್ಟು ದುಡಿದರು; ವಿದ್ಯಾರ್ಥಿಗಳ ಕೆಲವು ಪಾಲಕರೂ ನಮ್ಮನ್ನು ಪ್ರೋತ್ಸಾಹಿಸಿ ಸಹಾಯ ಮಾಡಲಿಕ್ಕೆ ಒಪ್ಪಿದರು. ಆದ್ದರಿಂದಲೇ ನಮ್ಮ ಪ್ರಥಮ ಪ್ರಯತ್ನವು ಯಶಸ್ವಿಯಾಗಿ ಪರಿಣಮಿಸಿತು. ಈ ಮೂವರಲ್ಲಿ ಪರಸ್ಪರ ಸಹಕಾರಿತ್ವವಿಲ್ಲದಿದ್ದರೆ, ಯಾವ ಕೆಲಸಗಳೂ ಸುಸೂತ್ರವಾಗಿ ನೆರವೇರಲಾರವು. ಇದನ್ನು ಪ್ರತ್ಯಕ್ಷವಾಗಿ ತೋರಿಸಿಕೊಡುವದೂ ಈ ಸಮ್ಮೇಲವನ್ನು ನೆರೆಯಿಸುವ ಉದ್ದೇಶಗಳಲ್ಲಿ ಒಂದಾಗಿರುವದು. ಇಲ್ಲಿಯ ಸ್ಕೂ. ಬೋರ್ಡ ಚೇಅರಮನ್ನರಾದ ಶ್ರೀ. ಧಾರವಾಡ ಯಲಗುರ್ದ ರಾಯರೂ, ಅ. ಆಫೀಸರರಾದ ಶ್ರೀ. ದೇವೂರ, ಇವರೂ ಶಿಕ್ಷಕರ ಹಾಗು ಶಿಕ್ಷಣ ಕಾರ್ಯದ ವಿಷಯವಾಗಿ ಸಹಾನುಭೂತಿಯುಳ್ಳವರಿರುವದರಿಂದ, ಶಿಕ್ಷಕರ ವಾಚನಾಲಯಕ್ಕೆ ಸುಮಾರು ೩೦೦ ರೂ. ಬೆಲೆ ಬಾಳುವ ಪುಸ್ತಕಗಳನ್ನು ಸ್ಕೂಲ ಬೋರ್ಡಿನಿಂದ ಕೊಡಿಸಿರುವರು. ಈ ಪ್ರಕಾರ ಅಧಿಕಾರಿಗಳ ಸಹಾನುಭೂತಿಯನ್ನು ಪಡೆಯಲಿಕ್ಕೆ ಯತ್ನಿಸುವದು ಶಿಕ್ಷಕರ ಮುಖ್ಯ ಕರ್ತವ್ಯವಾಗಿರುವದು.

ಹೀಗೆ ಕೇವಲ ಪಾಲಕರ ಹಾಗು ಅಧಿಕಾರಸ್ಥರ ಸಹಾಯವನ್ನಪೇಕ್ಷಿಸಿ, ತಾವು ಏನೂ ಪ್ರಯತ್ನಮಾಡದೆ ಸುಮ್ಮನೇ ಕೂಡ್ರುವದು ಶಿಕ್ಷಕರಿಗೆ ಭೂಷಣವಲ್ಲ. ವಿದ್ಯಾರ್ಥಿಗಳನ್ನು ತಮ್ಮ ಮಕ್ಕಳಂತೆ ನೋಡುವವರೇ ನಿಜವಾದ ಶಿಕ್ಷಕರು. "ದಕ್ಷಿಣೆಯಷ್ಟೇ ಪ್ರದಕ್ಷಿಣೆಯಷ್ಟೇ" ಎಂಬಂತೆ, ಕೇವಲ ಸಂಬಳವನ್ನುಳಿಸಿಕೊಳ್ಳುವದಕ್ಕಾಗಿ ಅಥವಾ ನಾನಾತರದ ಮೇಲುಪಾಯಗಳಿಂದ ಅಧಿಕಾರಸ್ಥರ ಮನವೊಲಿಸುವದಕ್ಕಾಗಿ ಕೆಲಸ

ಮಾಡುತ್ತೇವೆಂದು ಹೇಳಲಿಕ್ಕೆ ಯಾವ ಶಿಕ್ಷಕನೂ ಧೈರ್ಯಪಡಲಾರನು. ಓಮುಬರಹ ಗಳನ್ನು ಮಾತ್ರ ಕಲಿಸಿದರೆ ಶಿಕ್ಷಕನ ಕೆಲಸವಾಗಲಿಲ್ಲ. ವಿದ್ಯಾರ್ಥಿಗಳು ಶರೀರದಿಂದಲೂ ಮನಸ್ಸಿನಿಂದಲೂ ಪೂರ್ಣತ್ವವನ್ನು ಹೊಂದಲಿಕ್ಕೆ ಅವರಿಗೆ ಮಾರ್ಗತೋರಿಸಿಕೊಡುವದೇ ಶಿಕ್ಷಕರ ಕರ್ತವ್ಯವಾಗಿರುವದು. ಪ್ರತಿಯೊಬ್ಬ ವಿದ್ಯಾರ್ಥಿಯು ದೊಡ್ಡವನಾದಮೇಲೆ ಒಳ್ಳೇ ನಾಗರಿಕನಾಗುವಂತೆ ಅವನ ಪ್ರವೃತ್ತಿಯನ್ನು ಬೆಳಿಸುವದೇ ಮೇಲಾದ ಶಿಕ್ಷಣವು. ಇದರ ಉತ್ತರವಾದಿತ್ವವು ತಾಯಿತಂದೆಗಳ ಮೇಲಿದ್ದಷ್ಟೇ ಶಿಕ್ಷಕರ ಮೇಲಾದರೂ ಇರು ವದು. ಇದನ್ನು ಚನ್ನಾಗಿ ತಿಳುಕೊಂಡೇ ಪ್ರತಿಯೊಬ್ಬ ಶಿಕ್ಷಕನು ತನ್ನ ಶಿಕ್ಷಣ ಕ್ರಮ ವನ್ನಿಡತಕ್ಕದ್ದು. ಹೀಗೆ ಮಾಡಿದರೆ ಮಾತ್ರ ನಮ್ಮ ಶಿಕ್ಷಣ ಕಾರ್ಯದಲ್ಲಿ ಪಾಲಕರದಾ ಗಲಿ ಅಧಿಕಾರಸ್ಥರದಾಗಲಿ ಸಹಾನುಭೂತಿಯು ಸಿಕ್ಕೇ ಸಿಗುವದು.

ಒಟ್ಟಿನ ಮೇಲೆ, ದೇಶ ಕಲ್ಯಾಣದ ದೃಷ್ಟಿಯನ್ನಿಟ್ಟುಕೊಂಡು ಶಿಕ್ಷಕರೂ, ಪಾಲ ಕರೂ, ಅಧಿಕಾರಸ್ಥರೂ ಪರಸ್ಪರ ಪ್ರೇಮದಿಂದ ವರ್ತಿಸುತ್ತ ಹೋದರೆ, ವಿದ್ಯಾರ್ಥಿಗಳ ಕಲ್ಯಾಣವಾಗುವದಲ್ಲದೆ, ದೇಶವೂ ಒಳ್ಳೇ ನಾಗರಿಕತೆಯುಳ್ಳದ್ದಾಗುವದರಲ್ಲಿ ಸಂಶ ಯವಿಲ್ಲ.

ರಾಜಾ ಛತ್ರಸಾಲ

[ಒಂದು ಮರಾಠೀ ಲೇಖನದಿಂದ ಸಂಗ್ರಹಿಸಿದ್ದು]

ಲೇಖಕ:—ಶ್ರೀ. ಲಕ್ಷ್ಮಣ ವಿಶ್ವನಾಥ ಘಾಟಕ, ಅಣ್ಣಿಗೇರಿ

“ ಚಂಪತರಾಯನ ಪುತ್ರನಾದ ಛತ್ರಸಾಲನು ವಿದ್ಯುದ್ಗತಿಯಿಂದ ತನ್ನ ಸೈನ್ಯ ವನ್ನು ಬೇಕಾದ ಭಾಗದಲ್ಲಿ ಒಯ್ಯುವನು. ಅದರಿಂದ ಎಲ್ಲ ಕಡೆಗೆ ಅವನ ಮಹತ್ವವೇ ಬೆಳೆಯ ಹತ್ತಿದೆ. ಛತ್ರಸಾಲನು ಮೊಗಲ ಬಾದಶಹನ ವರ್ಚಸ್ಸವನ್ನು ಕಡಿಮೆ ಮಾಡಿದ್ದು, ಬಾದಶಹನ ದಂಡಿನಲ್ಲಿ ಅವನೊಡನೆ ಸಮರಾಂಗಣದಲ್ಲಿ ನಿಂತು ಧೈರ್ಯ ದಿಂದ ಹೋರಾಡುವಂಥ ಓರ್ವ ಯೋದ್ಧನೂ ಕೂಡ ಇಲ್ಲ. ” —ಶ್ರೀ. ಭೂಷಣ ಕವಿ

ಕರ್ನಾಟಕ ಮಹಾರಾಷ್ಟ್ರಗಳಲ್ಲಿ ಕ್ರಮವಾಗಿ ಶ್ರೀ ವಿದ್ಯಾರಣ್ಯ, ಶ್ರೀ ಶಿವಛತ್ರಪತಿ ಇವರ ಹೆಸರುಗಳು ಸ್ವರಾಜ್ಯ ಸಂಸ್ಥಾಪಕರೆಂದು ಹೇಗೆ ಪ್ರಸಿದ್ಧವಿರುವವೋ ಅದ ರಂತೆಯೇ ಶ್ರೀ ಶಿವಪ್ರಭುವಿನ ಸಮಕಾಲೀನನಾದ ಬುಂದೇಲಖಂಡದ ರಾಜಾ ಛತ್ರಸಾ ಲನ ಹೆಸರು ಸಹ ಒಂದು ಕಾಲದಲ್ಲಿ ಮಧ್ಯ ಭಾರತದೊಳಗೆ ಸ್ವರಾಜ್ಯಸ್ಥಾಪಕನೆಂದು ಬಹಳ ಗರ್ಜಿಸಲ್ಪಡುತ್ತಿತ್ತು. ಸದ್ಯದಲ್ಲಾದರೂ ಬುಂದೇಲೀ ಜನರಿಗೆ ಛತ್ರಸಾಲನ

ಪುಣ್ಯಸ್ಮರಣವು ಅತ್ಯಂತ ಸ್ಫೂರ್ತಿದಾಯಕವೂ, ಪ್ರೇರಕವೂ ಆಗಿಯೇ ಪರಿಣಮಿಸುವ ದೆಂದು ಅವರ ನಾಡಿನ ಜನರ ಹೇಳಿಕೆಯಿದೆ.

ಅನೇಕ ಇತಿಹಾಸ ಭಕ್ತರು ಶ್ರೀ ಶಿವಛತ್ರಪತಿಯ ವಿಸ್ತೃತವಾದ ಇತಿಹಾಸ ವನ್ನು ಬರೆದು ಈ ವರೆಗೆ ಅವನ ಪುಣ್ಯಸ್ಮರಣವನ್ನು ಜಾಗೃತವಾಗಿ ಮಾಡಿರುವರು. ಆದರೆ ದುರ್ದೈವದಿಂದ ಛತ್ರಸಾಲನ ಇತಿಹಾಸವನ್ನು ಬರೆಯುತಕ್ಕ ಭಾರತ ಪುತ್ರರು ಯಾರೂ ಮುಂದೆ ಬಾರದ್ದರಿಂದ ಐತಿಹಾಸಿಕ ವಾಙ್ಮಯದಲ್ಲಿ ಅವನ ಹೆಸರು ಬಹು ಮಟ್ಟಿಗೆ ಹಿಂದೆ ಉಳಿದಿದೆ. ಆದರೂ ರಾಜಾ ಛತ್ರಸಾಲನ ಕಾರ್ಯವು ಶ್ರೀ ಶಿವಪ್ರಭು ವಿನ ಕಾರ್ಯಕ್ಕಿಂತಲೂ ಎಷ್ಟು ಮಾತ್ರವೂ ಕಡಿಮೆ ಮಹತ್ವದ್ದಲ್ಲ. ಸನ್ ೧೬೭೦ ರಿಂದ ೧೭೦೦ ನೆಯ ಇಸವಿಯವರೆಗೆ ರಾಜಾ ಛತ್ರಸಾಲನು 'ಆಲಮಗೀರ' ಎಂಬ ಬಿರು ದಾಂಕಿತನಾದ ಸಮ್ರಾಟ ಔರಂಗಜೇಬನ ಪ್ರಚಂಡ ಸತ್ತೆಗೆ ಒಂದೇ ಸಮನೆ ಪ್ರಹಾರ ಮಾಡಿ, ಅವನ್ನು ಶಕ್ಯವಾದಷ್ಟು ಲಿಕಿಲಿಕಿಗೊಳಿಸುವ ಅದ್ಭುತವಾದ ಕಾರ್ಯವನ್ನು ಜರುಗಿಸಿರುವನು. ಹಿಂದೂ ರಾಜ್ಯದ ಸಂಸ್ಥಾಪನೆಯೇ ಶ್ರೀ ಶಿವಪ್ರಭು, ಛತ್ರಸಾಲ ಈ ಉಭಯತರ ಧ್ಯೇಯವಾಗಿತ್ತು. ಈರ್ವರೂ ಅತುಲ ಪರಾಕ್ರಮದಿಂದ ತಮ್ಮ ಮೇಲಿನ ಇಸ್ಲಾಮೀ ಸತ್ತೆಯನ್ನು ಕಿತ್ತೊಗೆದರು. ಈ ಪ್ರಕಾರ ರಾಜಾ ಛತ್ರಸಾಲನು ಹಿಂದು-ರಾಜ್ಯ-ಸಂಸ್ಥಾಪನೆಗಾಗಿ ಅಮೌಲ್ಯವಾದ ಕಾರ್ಯವನ್ನು ಮಾಡಿದ್ದು, ಅವನ ಇತಿಹಾಸವೆಲ್ಲ ದೇಶಾಭಿಮಾನ, ವೀರರಸ ಇವುಗಳಿಂದಲೇ ತುಂಬಿ ತುಳುಕತ್ತಲಿದೆ.

ಹಿಂದೀ ಭಾಷೆಯ ಓರ್ವ ಶ್ರೇಷ್ಠ ಕವಿಯಾದ ಶ್ರೀ ಭೂಷಣ ಪಂಡಿತನು ತನ್ನ ಕಾವ್ಯದಲ್ಲಿ ಹಿಂದು ಧರ್ಮದ ಸಂರಕ್ಷಕರೆಂದು ಶ್ರೀ ಶಿವಾಜಿ ಮಹಾರಾಜರೊಡನೆ ರಾಜಾ ಛತ್ರಸಾಲನನ್ನೂ ಅತಿಶಯವಾಗಿ ಸ್ತುತಿಸಿರುವನು. ಅವನು ಛತ್ರಸಾಲನನ್ನು ವರ್ಣಿ ಸುವಾಗ ಒಂದು ಕಡೆಗೆ—“ ನಾನು ಶಿವಾಜಿಯನ್ನು ಸ್ತುತಿಸಬೇಕೋ ಛತ್ರಸಾಲನನ್ನು ಸ್ತುತಿಸಬೇಕೋ ಎಂಬದೇ ನನಗೆ ತಿಳಿಯದಾಗಿದೆ.” ಎಂದು ನುಡಿದಿರುವನು. “ शिवाजी ना होत्यो तौ सुन्नत होती सबकी । ” ಎಂಬ ಛತ್ರಪತಿಯ ವರ್ಣನೆ ಯನ್ನೇ ಶ್ರೀ ಭೂಷಣನು ಛತ್ರಸಾಲನಿಗೆ ಅನ್ವಯಿಸಿರುವನು.

ಶ್ರೀ ಶಿವಪ್ರಭು ಹಾಗು ರಾಜಾ ಛತ್ರಸಾಲ ಇವರೀರ್ವರೂ ಕೇವಲ ಸಮಕಾಲೀ ನರು. ಈರ್ವರಿಗೂ ಒಂದೇ ಸತ್ತೆಯ ಕೂಡ ಹೋರಾಡಬೇಕಾಯಿತು. ಆ ಕಾಲ ದಲ್ಲಿ ಆಗುತ್ತಿದ್ದ ಹಿಂದುಗಳ ಛಲವು ಈರ್ವರ ನಿದರ್ಶನಕ್ಕೂ ಬಂದಿತು. ಈ ಪ್ರಕಾರ ಈರ್ವರೂ ಒಂದೇ ಪರಿಸ್ಥಿತಿಯಲ್ಲಿ ಹುಟ್ಟಿ, ಬೆಳೆದು, ದೊಡ್ಡವರಾಗಿ, ಒಂದೇ ಕಾರ್ಯ ವನ್ನೇ ಕೈಕೊಂಡು, ಅದನ್ನು ಕೊನೆಗಾಣಿಸಿರುವರು. ಉಭಯತರ ಕಾರ್ಯಕ್ಷೇತ್ರದಲ್ಲಿ ಸಾವಿರಾರು ಮೈಲಿನ ಅಂತರವಿದ್ದರೂ ಕಾರ್ಯಸಾಮ್ಯದಿಂದ ಅವರು ಒಬ್ಬರಿಗೊಬ್ಬರು ತೀರ ಸಮೀಪದವರಾಗಿದ್ದರು.

ಛತ್ರಸಾಲನ ಜನ್ಮವು ಸನ್ ೧೬೪೯ರಲ್ಲಾಗಿ ಮೃತ್ಯುವು ಸನ್ ೧೭೩೧ರಲ್ಲಾಯಿತು. ಅವನ ತಂದೆಯಾದ ಚಂಪತರಾಯನು ಬುಂದೇಲಿ ಮನೆತನದ ಓಛಾ೯ ಗ್ರಾಮದ ಓರ್ವ ದೊರೆಯು. ಅವನ ಪಾಲಿಗೆ ವರ್ಷಕ್ಕೆ ಕೇವಲ ೩೫೦ ರೂಪಾಯಿಗಳ ಉತ್ಪನ್ನ ಮಾತ್ರ ಬಂದಿತು. ಅಂದರೆ ಅವನ ದೈನಿಕ ಉತ್ಪನ್ನವು ೧೫ ಆಣೆ ಇತ್ತು. ಇಂಥ ದರಿದ್ರಮಯ ಸ್ಥಿತಿಯಲ್ಲಿ ಹುಟ್ಟಿ ಬೆಳೆದ ಚಂಪತರಾಯನ ಪುತ್ರನಾದ ಛತ್ರಸಾಲನು ಚಿಕ್ಕ ವಯಸ್ಸಿನಲ್ಲಿಯೇ ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿರುವನು ! ಅಂದ ಮೇಲೆ ಇದು ನಮ್ಮ ಸಕಲ ಹಿಂದೂ ಜನಾಂಗಕ್ಕೆ ಅತ್ಯಂತ ಸ್ಫೂರ್ತಿದಾಯಕವಾದ ಐತಿಹಾಸಿಕ ಸಂಗತಿಯಲ್ಲವೇ !

ಛತ್ರಸಾಲನ ತಂದೆಯು ಅವನ ಚಿಕ್ಕ ವಯಸ್ಸಿನಲ್ಲಿಯೇ ಮೃತಪಟ್ಟನು. ಅದರಿಂದ ಛತ್ರಸಾಲನು ತಂದೆ–ಬಂಧು–ಮಿತ್ರ–ಸೈನ್ಯ–ದ್ರವ್ಯ ಈ ಎಲ್ಲ ಸಹಾಯಗಳಿಗೂ ಹೊರತಾದನು. ಆದರೆ ಅವನ ಹೃದಯದಲ್ಲಿ ನಿಸ್ಸೀಮವಾದ ಧೈರ್ಯವೊಂದು ಮಾತ್ರ ಅಚಲವಾಗಿತ್ತು. ಅದರ ಬಲದಿಂದಲೇ ಅವನು ಅಪೂರ್ವವಾದ ಕಾರ್ಯವನ್ನು ಮಾಡಿರುವನು. ಛತ್ರಸಾಲನು ಮಹಾ ಭಗವದ್ಭಕ್ತನಿದ್ದನು. ಪರಮೇಶ್ವರನು ತನ್ನ ಸಂರಕ್ಷಣೆಗೆ ಸದಾ ತತ್ಪರವಿರುವನೆಂದು ಅವನ ದೃಢವಾದ ಶ್ರದ್ಧೆಯಿತ್ತು. ಪರಮೇಶ್ವರನಾದರೂ ಕೊನೆಯವರೆಗೂ ಅವನನ್ನು ಮರೆಯಲಿಲ್ಲ.

ಛತ್ರಸಾಲನ ವಾರ್ಧಕ್ಯದಲ್ಲಿ ಅಂದರೆ ಸನ್ ೧೭೨೯ನೆಯ ವರ್ಷ ಮಹಮ್ಮದ ಬಂಗಶ್ನನು ಅವನ ಮೇಲೆ ದಂಡೆತ್ತಿ ಬಂದಾಗ ಮರಾಠಾ ಸಾಮ್ರಾಜ್ಯದ ಆಗಿನ ಸೂತ್ರಧಾರನಾದ ಹಿರಿಯ ಬಾಜೀರಾವ ಪೇಶವೆಗೆ ತನಗೆ ಸಹಾಯ ಮಾಡಲಿಕ್ಕೆ ಬರಬೇಕೆಂದು ಅವನು ಬರೆದ ಪತ್ರವು ಬಹಳೇ ವಾಚನೀಯವಾಗಿದೆ. ಶ್ರೀ ಶಿವಾಜಿ ಮಹಾರಾಜರು ಅಖಿಲ ಹಿಂದು ಜನಾಂಗದ ಸಂರಕ್ಷಣೆ, ಗೌರವಾಭಿವೃದ್ಧಿ ಇವುಗಳಿಗಾಗಿಯೇ ಸ್ವಹಸ್ತದಿಂದ ಹಿಂದೂ ರಾಜ್ಯದ ಪ್ರಾಣ ಪ್ರತಿಷ್ಠೆಯನ್ನು ಮಾಡಿರುವರೆಂಬ ಸಂಗತಿಯು ಛತ್ರಸಾಲನಿಗೆ ಪೂರ್ಣವಾಗಿ ಒಪ್ಪಿಗೆಯಿತ್ತೆಂಬುದು ಅವನು ಬರೆದ ಆ ಪತ್ರದ ಮೇಲಿಂದ ಸ್ಪಷ್ಟವಾಗಿ ಕಂಡುಬರುವದು. ಇತ್ತ ಬಾಜೀರಾಯನಾದರೂ ಛತ್ರಸಾಲನ ವಿನಂತಿಗೆ ಮಾನವನ್ನು ಕೊಟ್ಟು, ದೌಡಿನೊಡನೆ ಬಂದು ಬಂಗಶ್ನನನ್ನು ಸಂಪೂರ್ಣ ಪರಾಭವಗೊಳಿಸಿ, ಶ್ರೀ ಶಿವಪ್ರಭುವಿನ ಸಮಕಾಲೀನನಾದ ಆ ಮಿತ್ರನನ್ನು ಸಂಕಟದಿಂದ ಪಾರು ಮಾಡಿದನು.

ಎಲ್ಲಿಯ ಬುಂದೇಲಖಂಡದ ಚಿಕ್ಕ ರಾಜಾ ಛತ್ರಸಾಲ, ಎಲ್ಲಿಯ ಅತ್ಯಂತ ಬಲಶಾಲಿಯಾದ ದಿಲ್ಲಿಯ ಸಮ್ರಾಟ ಔರಂಗಜೇಬ ! ಒಂದು ಯಃಕಶ್ಚಿತ ಇರುವೆಯು ಮದೋನ್ಮತ್ತವಾದ ಆನೆಯೊಡನೆ ಮಾಡಿದ ಸ್ಪರ್ಧೆಯ ಪ್ರಕಾರವೇ ಅದು ! ಆದರೆ

ಛತ್ರಸಾಲನು ಅಂಥ ಅಶಕ್ಯ ಮಯವಾದ ಕಾರ್ಯವನ್ನೇ ಯಶಸ್ವಿಯಾಗಿ ಮಾಡಿ ತೋರಿಸಿ ಕೀರ್ತಿಶೇಷನಾದನು.

ಛತ್ರಸಾಲನು ದೇಹದಿಂದ ಎಷ್ಟು ಶೂರನಿದ್ದನೋ ಅಷ್ಟೇ ಅವನು ಮನಸ್ಸಿನಿಂದ ಉದಾರನಾಗಿದ್ದನು. ಪೇಶವೆ ಬಾಜೀರಾಯನನ್ನು ಅವನು ತನ್ನ ಜೇಷ್ಠ ಪುತ್ರನೆಂದು ತಿಳಿಯುತ್ತಿದ್ದನು. ಮರಣ ಸಮಯದಲ್ಲಿ ಅವನು ತನ್ನ ರಾಜ್ಯವನ್ನು ಎಲ್ಲ ಮಕ್ಕಳಲ್ಲಿ ಹಂಚಿಕೊಟ್ಟನು. ಆಗ ಬಾಜೀರಾಯನು ಜೇಷ್ಠಪುತ್ರನೆಂದು ಅವನಿಗೆ ತನ್ನ ಉಳಿದ ಮಕ್ಕಳಿಗಿಂತಲೂ ದೊಡ್ಡ ಭಾಗವನ್ನು ಕೊಟ್ಟನು.

ಛತ್ರಸಾಲನ ಕಾಲದಲ್ಲಿಯೇ ಪನ್ನಾ ಎಂಬಲ್ಲಿ ರತ್ನದ ಖಣಿಯು ಶೋಧವಾಗಿ ಅದರಿಂದ ಅವನಿಗೆ ಅಗಣಿತ ಸಂಪತ್ತು ಪ್ರಾಪ್ತವಾಯಿತು. ಕುದುರೆಯ ದಳದ ಮೇಲೆ ಛತ್ರಸಾಲನ ವಿಶ್ವಾಸ ಬಹಳ. ಬುಂದೇಲೀ ಕುದುರೆಯ ಸ್ವಾರರು ಆ ಕಾಲದಲ್ಲಿ ವಿದ್ಯುತ್ತಿನ ಗತಿಯಂತೆ ವಿಂಧ್ಯಪರ್ವತದಲ್ಲಿ ಚಮಕಿಸುತ್ತಿದ್ದರು. ಛತ್ರಸಾಲನು ಆಗ ಕಟ್ಟಿಸಿದ ಕೋಟೆಗಳು ಅಜಿಂಕ್ಯವೂ ಅಭೇದ್ಯವೂ ಆಗಿದ್ದವು.

ಛತ್ರಸಾಲನಿಗಿಂತಲೂ ಅವನ ಧರ್ಮಪತ್ನಿಯಾದ ರಾಣೀ ಕಮಲಾವತಿಯ ಹೆಸರು ಬುಂದೇಲಖಂಡದಲ್ಲಿ ಹೆಚ್ಚು ಪ್ರಖ್ಯಾತವಿದೆ. ಸದ್ಗುಣ-ಸೌಂದರ್ಯ ಇವುಗಳ ಯೋಗದಿಂದ ಅವಳ ಹೆಸರು ಇಂದಿಗೂ ಸಂಯುಕ್ತಪ್ರಾಂತ, ಬಿಹಾರ, ಮಾಳವಾ, ಗ್ವಾಲ್ಹೇರ ಪ್ರಾಂತ ಇವುಗಳಲ್ಲಿಯ ಸ್ತ್ರೀಯರ ಬಾಯಲ್ಲಿದೆ. ರಾಣೀ ಕಮಲಾವತಿಯು ಮಹಾಪತಿವ್ರತೆಯಾಗಿದ್ದಳು. ಅವಳು ತನ್ನ ಪತಿಯು ಇನ್ನೂ ಬದುಕಿರುವಾಗಲೇ ಹೋದಳು. ಒಮ್ಮೆ ಛತ್ರಸಾಲನು ಬೇಟೆಗೆ ಹೋದಾಗ ಅಲ್ಲಿ ಅವನು ಅಪಘಾತದಿಂದ ಮೃತಪಟ್ಟನೆಂದು ಸುಳ್ಳು ಸುಳ್ಳೇ ಅವನ ರಕ್ತದಿಂದ ಮುಳುಗಿದ ಬಟ್ಟೆಗಳನ್ನು ತಂದು ಯಾರೋ ಅವಳಿಗೆ ಬೇಕಂತಲೇ ತೋರಿಸಿ ಹೇಳಿದರು. ಆ ವಾರ್ತೆಯು ಸತ್ಯವೋ ಅಸತ್ಯವೋ ಎಂಬದರ ಚಿಕಿತ್ಸೆಯನ್ನು ಸಹ ಮಾಡದೆ ಸಾಧ್ವಿಯಾದ ಕಮಲಾವತಿಯು ಬಂದ ಎಲ್ಲ ಬಟ್ಟೆಗಳನ್ನು ತಕ್ಕೊಂಡು ಒಮ್ಮೆಲೇ ಸಹಗಮನವನ್ನು ಮಾಡಿದಳು ! ಮುಂದೆ ರಾಜನಿಗೆ ಆ ಸಂಗತಿ ತಿಳಿದ ಕೂಡಲೇ ಅವನಿಗೆ ಪರಮಾವಧಿ ದುಃಖವಾಯಿತು. ಚೇಷ್ಟೆಯ ಪರ್ಯವಸಾನವು ಕೊನೆಗೆ ಹೀಗೆ ಅಗಾಧವಾದ ಶೋಕಸಾಗರ ರೂಪದಿಂದ ಪರಿಣಮಿಸಿತು ! ಆ ಮೇಲೆ ರಾಜನು ಅವಳ ಸ್ಮಾರಕಾರ್ಥವಾಗಿ ಅಲ್ಲಿ ಒಂದು ಅತ್ಯಂತ ಸುಂದರವಾದ ಸಮಾಧಿಯನ್ನು ಕಟ್ಟಿಸಿ, ತಾನು ಮೃತಪಟ್ಟನಂತರ ತನ್ನ ಸಮಾಧಿಯು ನ್ನಾದರೂ ರಾಣಿಯ ಹತ್ತರದಲ್ಲಿಯೇ ಸ್ಥಾಪಿಸಬೇಕೆಂದು ಮಕ್ಕಳಿಗೆ ಅಜ್ಞೆ ಮಾಡಿದನು. ಆ ಪ್ರಕಾರ ಮುಂದೆ ಮುಂದೆ ಮಕ್ಕಳು ಅವನ ಹೆಸರಿನಿಂದೊಂದು ಸಮಾಧಿಯನ್ನು ಅದರ ಸಮೀಪದಲ್ಲಿಯೇ ಕಟ್ಟಿಸಿದರು.

ರಾಜಾ ಛತ್ರಸಾಲನ ಅನೇಕ ವೀರರಸ ಪ್ರಧಾನವಾದ ಕಥೆಗಳು ಬುಂದೇಲಖಂಡದಲ್ಲಿ ಪ್ರಚಲಿತವಾಗಿವೆ. ಬುಂದೇಲೀ ಜನರಿಗೆ ಆ ಸ್ವರಾಜ ಸಂಸ್ಥಾಪಕನ ಬಗ್ಗೆ ಅತಿಶಯುವಾದ ಅಭಿಮಾನವಿದೆ. ಆದರೂ ಛತ್ರಸಾಲನ ಸಾದ್ಯಂತವಾದ ಐತಿಹಾಸಿಕ ಚರಿತ್ರವನ್ನು ಮಾತ್ರ ಯಾರೂ ಈವರೆಗೂ ಬರೆದಿಲ್ಲ. ಅದಕ್ಕಾಗಿ ಭಾರತೀಯ ಇತಿಹಾಸ ಭಕ್ತರು ಅದರಲ್ಲಿ ವಿಶೇಷತಃ ಬುಂದೇಲಖಂಡದ ಇತಿಹಾಸ ಸಂಶೋಧಕರು ಆ ಮಹತ್ಕಾರ್ಯವನ್ನು ಕೈಕೊಳ್ಳುವದು ಅತ್ಯಂತ ಅವಶ್ಯವಾಗಿದೆ.

ಸ್ಕೌಟ ಆಟಗಳು

ಲೇಖಕ:—ಬಿ. ಟಿ. ಚಾಕ್. ಬಿ. ಎ.

ಖೋಲಿಯೊಳಗೆ ಕೂಡಾಡುವ ಆಟಗಳು:—ಈ ಆಟಗಳು ಹುಡುಗರು ಬೇರೆ ಬೇರೆ ಕೆಲಸಗಳಿಂದ ಆಯಾಸಪಟ್ಟಿರುವಾಗ ವಿಶ್ರಮಿಸಿಕೊಳ್ಳಲು ಕುಳಿತಿರುವಾಗ ಆಡಲು ಆಗುವಂತವು.

೪೬. ಕಥೆ ಹೇಳುವುದು (Story building):—ಎಲ್ಲರೂ ಒಂದು ವರ್ತುಳದಲ್ಲಿ ಕೂಡುವರು. ಒಬ್ಬನು ಒಂದು ಚಿಕ್ಕ ವಾಕ್ಯವನ್ನು ಹೇಳುವನು. ಅವನ ಮಗ್ಗಲಿನವನು ಮೊದಲನೆಯವನು ಅಂದ ವಾಕ್ಯವನ್ನು ತಾನೂ ಅಂದು, ಮುಂದೆ ತನ್ನದೊಂದು ವಾಕ್ಯವನ್ನು ಸೇರಿಸುವನು. ಮೂರನೆಯವನು ತನ್ನ ಹಿಂದಿನವರು ಹೇಳಿದ ಎರಡು ವಾಕ್ಯಗಳನ್ನೂ ಹೇಳಿ ತನ್ನ ವಾಕ್ಯವನ್ನು ಅದಕ್ಕೆ ಸೇರಿಸುವನು. ಹೀಗೆಯೇ ಬೆಳೆಸುತ್ತ ವರ್ತುಳದಲ್ಲಿ ಮೂವತ್ತು ಮಂದಿಯಿದ್ದರೆ ಮೂವತ್ತನೆಯವನು ಮೂವತ್ತು ವಾಕ್ಯಗಳನ್ನು ಅನ್ನಬೇಕು. ಈ ವಾಕ್ಯಗಳು ಅನುಕ್ರಮವಾಗಿರಬೇಕು. ಇದು ತಪ್ಪಿದಲ್ಲಿಯಾಗಲೀ ಯಾ ವಾಕ್ಯಗಳನ್ನು ಮರೆತರಾಗಲೀ ಅಂತವನು ಒಂದು ತಪ್ಪು ಮಾಡಿದಂತಾಗಿ ಆತನನ್ನು ಮಧ್ಯದಲ್ಲಿ ಇಟ್ಟಿರುವ ಒಂದು ಖುರ್ಚಿಯ ಮೇಲೆ ನಿಲ್ಲಿಸಿ ಆತನ ತಲೆಯ ಮೇಲೆ ಕಾಗದದಿಂದ ತಯಾರಿಸಿದ ಒಂದು ಉದ್ದವಾದ ಟೋಪಿಯನ್ನು ಹಾಕಬೇಕು. ಈತನು ಮತ್ತೊಬ್ಬನು ತಪ್ಪು ಮಾಡಿ ತನ್ನ ಸ್ಥಳಕ್ಕೆ ಬರುವವರೆಗೂ ಹಾಗೆಯೇ ನಿಂತಿರಬೇಕು. ಉದಾಹರಣೆಗೆ:—

೧ನೆಯವ:—ನನಗೆ ಒಂದು ದಿನ ಬಹಳ ಬೇಸರಿಕೆಯಾಯಿತು.

೨ನೆಯವ:—ನನಗೆ ಒಂದು ದಿನ ಬಹಳ ಬೇಸರಿಕೆಯಾಯಿತು.
ಆದ್ದರಿಂದ ಎದ್ದು ನನ್ನ ಮಿತ್ರನ ಮನೆಗೆ ಹೋದೆನು.

೩ ನೆಯವ :—ನನಗೆ ಒಂದು ದಿನ ಬಹಳ ಬೇಸರಿಕೆಯಾಯಿತು. ಆದ್ದರಿಂದ ಎದ್ದು ನನ್ನ ಮಿತ್ರನ ಮನೆಗೆ ಹೋದೆನು. ಅಲ್ಲಿ ಇಬ್ಬರೂ ಸೇರಿ ಬೊಂಬಾಯಿಗೆ ಹೋಗಬೇಕೆಂದು ಠರಾಯಿಸಿದೆವು.

ಎಂದು ಮುಂತಾಗಿ

ಈ ಆಟದಲ್ಲಿ ನೆನಪು ಇಡಬೇಕಾದ ವಿಷಯವೇನೆಂದರೆ ಯಾವನ ವಾಕ್ಯದಿಂದಲೂ ಕಥೆಯು ಮುಗಿಯಬಾರದು. ಮುಂದಕ್ಕೆ ಬೆಳೆಸುತ್ತಲೇ ಇರುವಂತೆ ಇರಬೇಕು. ಮತ್ತು ಎಲ್ಲರಿಗೂ ಒಂದು ಪಾಳಿ ಬಂದ ಮೇಲೆ ಎರಡನೇ ಸಲ ವಿರುದ್ಧ ದಿಕ್ಕಿನಿಂದ ಆಟವನ್ನು ಪುನಃ ಆಡಿಸಬೇಕು.

೪೭. ತೀರ್ಥಯಾತ್ರೆ (Geographical game) :—ಮೇಲಿನ ಆಟದಲ್ಲಿ ಕೂತ ಹಾಗೆ ಎಲ್ಲರೂ ವರ್ತುಳದಲ್ಲಿ ಕೂತು, ಒಬ್ಬನಾದ ಮೇಲೆಯೊಬ್ಬ ಪುಣ್ಯಕ್ಷೇತ್ರ, ಯಾ ತೀರ್ಥ, ಯಾ ಯಾತ್ರಾಸ್ಥಳವನ್ನು ಹೇಳುತ್ತ ಬರಬೇಕು. ಈ ಸ್ಥಳಗಳು ಎಷ್ಟು ಮೈಲುಗಳ ಅಂತರವನ್ನು ಮೀರಿರಬಾರದೆಂಬುವದನ್ನು ಅಂದರೆ ೧೦೦—೧೫೦—೨೦೦—೩೦೦ ಮೈಲಿಗಳ ಒಳಗೇ ಇರಬೇಕೆಂದು ನಿರ್ಧರ ಮಾಡಿಕೊಂಡಿರಬೇಕು. ಉದಾಹರಣೆ:

೧ ನೆಯವ :—ನಾನು ಹುಬ್ಬಳ್ಳಿಯಿಂದ **ಖಾನಾಪುರಕ್ಕೆ** ಹೋದೆನು. (ತೀರ್ಥಸ್ಥಳ)

೨ ನೆಯವ :—ನಾನು ಹುಬ್ಬಳ್ಳಿಯಿಂದ ಖಾನಾಪುರಕ್ಕೆ ಹೋದೆನು. ಅಲ್ಲಿಂದ **ಗೋಕಾಕಿಗೆ** (ಮತ್ತೊಂದು ತೀರ್ಥಸ್ಥಳ) ಹೋದೆನು.

೩ ನೆಯವ :—ನಾನು ಹುಬ್ಬಳ್ಳಿಯಿಂದ ಖಾನಾಪುರಕ್ಕೆ ಹೋದೆನು.

ಅಲ್ಲಿಂದ ಗೋಕಾಕಿಗೆ ಹೋಗಿ ಮುಂದಕ್ಕೆ **ಕುಡಚಿ** (ಕೃಷ್ಣಾನದೀತೀರ) ಗೆ ಹೋದೆನು. ಹೀಗೆಯೇ ಬೆಳೆಸುತ್ತ ಕುಡಚಿಯಿಂದ ಪಂಢರಪುರ, ಮಹಾಬಲೇಶ್ವರ (ಪುಣ್ಯ ಸ್ಥಳಗಳು), ಮುಂಬಯಿ (ಸಮುದ್ರತೀರ್ಥ), ನಾಸಿಕ, ಸೂರತ (ತಪತೀನದಿ), ಬ್ರೋಚ (ನರ್ಮದಾನದಿ), ಸೋಮನಾಥ, ದ್ವಾರಕೆ, ಕರಾಚಿ (ಸಿಂಧುನದಿ) ಎಂದು ಮುಂತಾಗಿ ಹೇಳುತ್ತ ಹೋಗಬೇಕು. ಪುಣ್ಯಸ್ಥಳಗಳ ಬದಲಾಗಿ ಮುಖ್ಯವಾದ ನಗರಗಳು, ಇಲ್ಲವೇ ಕೈಗಾರಿಕೆಯ ಸ್ಥಳಗಳು, ಇಲ್ಲವೇ ಐತಿಹಾಸಿಕ ಸ್ಥಳಗಳನ್ನಾಗಲೀ ಹೇಳುತ್ತ ಹೋಗಬಹುದು. ಈ ಸ್ಥಳಗಳ ಅನುಕ್ರಮವು ಹೋದ ದಾರಿಯಲ್ಲಿ ಹಿಂತಿರುಗುವಂತೆ ಮಾತ್ರ ಇರಬಾರದು. ಈ ಆಟದಿಂದ ಹುಡುಗರಿಗೆ ಭೂಗೋಳ ಪರಿಚಯವು ಚೆನ್ನಾಗಿ ಆಗುವದು. ಮೇಲಿನ ಆಟದಲ್ಲಿ ಆಡಿದಂತೆ ತಪ್ಪಿದವರಿಗೆ ಟೊಪ್ಪಿಗೆ (Fool's Cap) ಹಾಕಿ ಮಧ್ಯದಲ್ಲಿ ನಿಲ್ಲಿಸಬೇಕು.

೪೮. ಅಸಂಭವ ಸಂಭವ (Impossible happenings):— ಹಿಂದಿನ ಆಟದಂತೆಯೇ ಎಲ್ಲರೂ ಕೂತು ಅಸಾಧ್ಯವಾದ ವಿಷಯಗಳನ್ನು ಒಂದಕೊಂದು ಸೇರಿಸುತ್ತಾ ಹೋಗಬೇಕು. ಉದಾಹರಣೆ:—

ಒಂದನೆಯವ:—ನಾನು ಬರುವ ಹಾದಿಯಲ್ಲಿ ಒಂದು ಆಲದ ಮರವು ಬುಡ ಮೇಲಕ್ಕೆ ತುದಿ ನೆಲದೊಳಗೆ ಬೆಳೆದಿತ್ತು.

೨ನೆಯವ:—(ಮೇಲೆ ಹೇಳಿದನ್ನು ಹೇಳಿ) ಒಂದು ತಿಮಿಂಗಿಲವು ಹಾರಿ ಬಂದು ಆ ಬುಡಗಳ ಮೇಲೆ ಕುಳಿತುಕೊಂಡಿತು.

೩ನೆಯವ:—(ಮೇಲೆ ಹೇಳಿದ ಎರಡು ವಾಕ್ಯಗಳನ್ನೂ ಹೇಳಿ) ಆಗ ಒಂದು ನೊಣವು ಬಂದು ಆ ತಿಮಿಂಗಿಲವನ್ನು ನುಂಗಿಬಿಟ್ಟಿತು.

ಮುಂದಿನವರು ಇದನ್ನೇ ಬೆಳೆಸುತ್ತ:—ಆ ನೊಣಕ್ಕೆ ಬಹಳ ಬಾಯಾರಿ ಸೀಗರೇಟ್ ಸೇದಬೇಕೆನ್ನಿಸಿತು—ಸಿಗರೇಟನ್ನು ಸೇದಿ ತುಂಡನ್ನು ಒಗೆಯಲು ಅದು ಕೆಲಗೇರಿಯೊಳಕ್ಕೆ ಬಿದ್ದು ಕೆರೆಗೆ ಬೆಂಕಿ ಹೊತ್ತಿಕೊಂಡಿತು. ಮುನಿಸಿಪ್ಯಾಲಿಟಿಯವರು ಬೆಂಕಿ ಆರಿಸಲು ಧಾರವಾಡ ಹುಬ್ಬಳ್ಳಿಯಲ್ಲಿ ಸಿಕ್ಕಿದ ಪೆಟ್ರೋಲನ್ನೆಲ್ಲಾ ಅದಕ್ಕೆ ತಂದು ಸುರಿದರು. ಇಷ್ಟರಲ್ಲೇ ಕೆಲಗೇರಿಯಲ್ಲಿದ್ದ ಮೀನುಗಳೆಲ್ಲಾ ಆಕಾಶದಲ್ಲಿ ಹಾರುತ್ತ ಬಂದವು. ಇತ್ಯಾದಿ.

ಈ ಮೂರು ಆಟಗಳಲ್ಲಿಯೂ ಹಿಂದಿನವರು ಹೇಳಿದ್ದನ್ನು ಸರಿಯಾಗಿ ಹೇಳದೇ ಮುಂದಕ್ಕೆ ಹೋಗುವ ಹಾಗಿಲ್ಲ; ಮತ್ತು ಯಾರೂ ವಿಷಯವು ಅಲ್ಲಿಗೇ ಮುಗಿಯುವಂತೆ ಹೇಳಬಾರದು. ತಪ್ಪಿದವನಿಗೆ ಟೊಪ್ಪಿಗೆ ಮತ್ತು ಮಧ್ಯದ ಖುರ್ಚಿಯೇ ಬಹುಮಾನ.

೪೯. ಬೆಂಕಿ ಪೊಟ್ಟಣದ ಯಾತ್ರೆ (Transfer the match box)— ಎಲ್ಲರೂ ಒಂದು ವರ್ತುಳದಲ್ಲಿ ಕೂತು ಒಂದು ಬೆಂಕಿ ಪೊಟ್ಟಣದಲ್ಲಿ ಒಳಗಿನ ಕಡ್ಡಿಗಳು ಮತ್ತು ಕಡ್ಡಿಯಿಡುವ ಪೆಟ್ಟಿಗೆಯನ್ನು ತೆಗೆದುಹಾಕಿ ಬರೀ ಮುಚ್ಚಳವನ್ನು ತೆಗೆದುಕೊಂಡು ಒಬ್ಬನು ತನ್ನ ಮೂಗಿನ ಮೇಲೆ ಸಿಕ್ಕಿಸಿಕೊಂಡು ತನ್ನ ಪಕ್ಕದವನ ಮೂಗಿಗೆ ಅದಕ್ಕೆ ಯಾವ ರೀತಿಯಲ್ಲಿಯೂ ಕೈಹಚ್ಚದೇ ಮೂಗಿನಿಂದಲೇ ಸಿಕ್ಕಿಸಲು ಪ್ರಯತ್ನಿಸಬೇಕು. ಯಾರಿಗೆ ಹೀಗೆ ತಗಲುವಂತೆ ಹಾಕಲು ಆಗುವದಿಲ್ಲವೊ ಅಥವಾ ಹಾಕುವಾಗ ಕೆಳಕ್ಕೆ ಬೀಳಿಸುವನೋ ಅವನನ್ನು ಮಧ್ಯದಲ್ಲಿ ನಿಲ್ಲಿಸಿ ಟೊಪ್ಪಿಗೆ (Foot'scap) ಹಾಕಿ ಇನ್ನೊಬ್ಬನು ತಪ್ಪುವವರೆಗೂ ನಿಲ್ಲಿಸಬೇಕು.

೫೦. ಹೌದು ಇಲ್ಲ (Yes or No) ತರ್ಕದ ಆಟ—ಎಲ್ಲರೂ ಒಂದು ವರ್ತುಳದಲ್ಲಿ ಕೂತು, ಒಬ್ಬನನ್ನು ದೂರಕ್ಕೆ ಕಳುಹಿಸಬೇಕು. ಅನಂತರ ಎಲ್ಲರೂ ಯಾವದಾ

ದರೊಂದು ಪದಾರ್ಥವನ್ನು ಕುರಿತುಕೊಳ್ಳುವರು. ಆ ಮೇಲೆ ಹೊರಗೆ ಹೊರಗೆ ಹೋದ ಹುಡುಗನು ಬಂದು ಒಬ್ಬೊಬ್ಬನನ್ನಾಗಿ ಪ್ರಶ್ನೆ ಮಾಡುತ್ತಾ ಬರಬೇಕು. ಈ ಪ್ರಶ್ನೆಗಳಿಗೆ ಯಾರೊಬ್ಬರೂ ಹೌದು ಯಾ ಇಲ್ಲ ಇವೆರಡೇ ಮಾತಿನಲ್ಲಿ ಉತ್ತರ ಕೊಡಬೇಕು. ಇವೆರಡು ಮಾತಿನಲ್ಲಿ ಉತ್ತರಕೊಡಲು ಆಗದೇ ಹೋದರೆ ಏನೊಂದು ಮಾತನ್ನೂ ಆಡ ಕೂಡದು. ಆಗ ಪ್ರಶ್ನೆ ಕೇಳುವವನು ತನ್ನ ಪ್ರಶ್ನೆಯನ್ನು ಬದಲಾಯಿಸಬೇಕು. ಹೀಗೆ ಪ್ರಶ್ನೆ ಮಾಡುತ್ತ ಅವರು ಕುರಿತು ಕೊಂಡಿರುವ ವಸ್ತುವನ್ನು ಕಂಡುಹಿಡಿಯ ಬೇಕು. ಉದಾಹರಣೆಗೆ ಹುಡುಗರು ಮಾಸ್ತರನ ಕೈಮೇಲಿರುವ ಬೆಳ್ಳಿಯ ಗಡಿಯಾರವನ್ನು ಕುರಿತುಕೊಂಡಿರುವರೆಂದು ಊಹಿಸೋಣ. ಆಗ ಸುಮಾರು ಈ ಕೆಳಗೆ ಕಂಡು ಬಂದಂತೆ ಪ್ರಶ್ನೋತ್ತರಗಳು ನಡೆಯು ಬಹುದು.

ಪ್ರಶ್ನೆ:-(ನೀವು ಕುರಿತುಕೊಂಡಿರುವ) ಪದಾರ್ಥವು ಪ್ರಾಣಿವರ್ಗಕ್ಕೆ ಸೇರಿರು ತ್ತದೆ ?— ಇಲ್ಲ.

ಸಸ್ಯ ವರ್ಗಕ್ಕೆ ಸೇರಿರುತ್ತದೆಯೋ ?— ಇಲ್ಲ.

ಖನಿಜವರ್ಗಕ್ಕೆ ಸೇರಿರುತ್ತದೆಯೋ ? — ಇಲ್ಲ

ಕೈಗಾರಿಕೆಯಿಂದ ಮಾಡಿದ ವಸ್ತುವೇ ? — ಹೌದು.

ಅದರಿಂದ ನಮಗೆ ಉಪಯೋಗವುಂಟೇ ? — ಹೌದು.

ಬಹಳ ಉಪಯೋಗವುಂಟೋ ? — ಹೌದು.

ಅಂತಹದು ನಮ್ಮಲ್ಲಿ ಯಾರಲ್ಲಾದರೂ ಇದೆಯೋ ?

(ಮಾಸ್ತರನು ಅಲ್ಲಿಯೇ ಇದ್ದಲ್ಲಿ)— ಹೌದು.

ಯಾರ ಮೈಮೇಲಾದರೂ ಇದೆಯೋ ? — ಹೌದು.

ಅದು ಬಟ್ಟೆಯಿಂದ ಮಾಡಲ್ಪಟ್ಟಿರುವದೇ ? — ಇಲ್ಲ

ಲೋಹ ಮಿಶ್ರವಾಗಿದೆಯೇ ? — ಹೌದು.

(ಆಗ ಸುತ್ತಲೂ ನೋಡಿ ಯಾವ ಪದಾರ್ಥವಿರಬಹುದೆಂದು ಸ್ವಲ್ಪ ನಿರೀಕ್ಷಣ ಮಾಡಬೇಕು. ಇಷ್ಟು ಪ್ರಶ್ನೆಗಳಿಂದ ಅದೊಂದು ಘಡಿಯಾರ, ಶೀಟಿ, ಬ್ಯಾಜ, ಫೌನ್ ಟೆನ್‌ಪೆನ್, ಶರ್ಟಿನ ಗುಂಡಿ ಯಾ ಬೆಲ್ಟ್ ಆಗಲೀ ಇರಬಹುದೆಂದು ತರ್ಕಿಸಬಹುದು. ಇವರಲ್ಲಿ ಯಾವದು ಬಹಳ ಉಪಯೋಗಕರವಾದದ್ದೆಂದು ತರ್ಕಿಸಬೇಕು. ಆಗ ಸುಮಾರು ಗಡಿಯಾರ ವಿರಬಹುದೆಂದು ತೋರಿದರೆ, ಅದರ ಬಣ್ಣ, ಬೆಲೆ, ಇರುವ ಸ್ಥಳ ಮುಂತಾದವನ್ನು ಸರಿಯಾದ ಪ್ರಶ್ನೆಗಳಿಂದ ನಿರ್ಧಾರ ಮಾಡಿಕೊಳ್ಳಬೇಕು.

ಪ್ರಶ್ನೆ:—ಅದರ ಬಣ್ಣವೇನು ? (ಏನೂ ಉತ್ತರವಿಲ್ಲ; ಯಾಕಂದರೆ ಹೌದು ಅಥವಾ ಇಲ್ಲ ಎಂದು ಹೇಳಬೇಕಾಗಿದೆ. ಆದ್ದರಿಂದ ಬೇರೆ ರೀತಿಯಾಗಿ ಪ್ರಶ್ನೆಮಾಡ ಬೇಕು.)

ಪ್ರಶ್ನೆ:—ಅದು ಕೆಂಪಗಿದೆಯೇ ? — ಇಲ್ಲ.

ಬೆಳ್ಳಗಿದೆಯೇ ? — ಹೌದು.

ಲೋಹ ಮಿಶ್ರವೆಂದು ಹೇಳಿದರಲ್ಲಾ, ಬೆಳ್ಳಿಮಿಶ್ರವೇ — ಹೌದು.

(ಅಂದರೆ ಗಡಿಯಾರವೇ ಇರಬಹುದೆಂದು ದೃಢವಾಯಿತು)

ಅದು ಬಹಳ ಬೆಲೆ ಬಾಳುತ್ತದೆಯೇ ? —ಹೌದು.

ನಮ್ಮ ಮಾಸ್ತರರಲ್ಲಿದೆಯೇ ? —ಹೌದು.

ಅವರು ಅದನ್ನು ಮೈಮೇಲೆ ಧರಿಸಿರುತ್ತಾರೆಯೇ ? — ಹೌದು.

(ಆವಾಗ ಗಡಿಯಾರವೆಂದು ದೃಢವಾದರೂ ಅದು ಮಾಸ್ತರರದೋ ಇತರರದೋ ಎಂದು ದೃಢಮಾಡಿಕೊಳ್ಳುವದಕ್ಕೆ)

ಅದು ಯಾರ ಮೈಮೇಲೆ ಇರುವದೊ ಅವರೇ ಅದರ ಮಾಲಿಕರೊ ? —ಹೌದು.

ಅದರಲ್ಲಿ ಯಂತ್ರವಿರುವದೇ ? — ಹೌದು.

ಅದು ನಮ್ಮ ಮಾಸ್ತರರ ಕೈಮೇಲಿರುವದೋ ? — ಹೌದು.

ಹಾಗಾದರೆ ಅದು ನಮ್ಮ ಮಾಸ್ತರರ ಕೈಗಡಿಯಾರ.

ಸಂಪೂರ್ಣ

ನೋಟೀಸು

ಮಿಡಲ್‌ಸ್ಕೂಲ ಸ್ಕಾಲರಶಿಪ್ ಪರೀಕ್ಷೆ ೧೯೩೩

ತಾ॥ ೧೩ ಹಾಗು ೧೪ ಫೆಬ್ರುವರಿ

ಈ ಪರೀಕ್ಷೆಯು ಧಾರವಾಡ, ಬೆಳಗಾವ, ಬಿಜಾಪುರ, ಕಾರವಾರ ಈ ನಾಲ್ಕು ಸೆಂಟರುಗಳಲ್ಲಿ ನಡೆಯುವದು. ಆಯಾ ಸೆಂಟರುಗಳಲ್ಲಿರುವ ಸರಕಾರೀ ಹಾಯಸ್ಕೂಲುಗಳ ಹೆಡ್‌ಮಾಸ್ತರರು ಅಲ್ಲಿಯ ಪರೀಕ್ಷೆಯ ಕಮೀಟಿಯ ಪ್ರೆಸಿಡೆಂಟರು. ಉಮೇದವಾರರು ೧೯೩೩ನೆಯ ಇಸವಿಯ ಜನವರಿ ತಿಂಗಳ ೨ನೆಯ ತಾರೀಖಿಗೆ ಅಥವಾ ಅದಕ್ಕೂ ಮೊದಲು ಪ್ರೆಸಿಡೆಂಟರಿಗೆ ಮುಟ್ಟುವಂತೆ ಛಾಪಿ ನಮೂನೆಗಳ ಮೇಲೆ (ಇವುಗಳನ್ನು ಪ್ರೆಸಿಡೆಂಟರಿಂದ ತರಿಸಿಕೊಂಡು) ಅರ್ಜಿಗಳನ್ನೂ ಅದರೊಡನೆ ಒಂದು ರೂಪಾಯಿ ಪರೀಕ್ಷಾ ಫೀಯನ್ನೂ ಕಳಿಸತಕ್ಕದ್ದು. ಮೇಲೆ ಹೇಳಿದ ತಾರೀಖು ಮೀರಿ ಬಂದ ಅರ್ಜಿಗಳನ್ನು ಹಿಡಿಯಲಿಕ್ಕಿಲ್ಲ.

ಹೆಣ್ಣುಮಕ್ಕಳ ವ್ಹ. ಫಾಯನಲ್ (ಕನ್ನಡ ಉರ್ದು ಹಾಗು ಮರಾಠಿ) ಪರೀಕ್ಷೆ ೧೯೩೩-ಕಾರ್ಯಕ್ರಮ

ತಾರೀಖು	ವೇಳೆ. ಸ್ಟ್ಯಾಂ. ಟ್ಯಾ. ವೇಳೆ	ಎಲ್ಲೀವರಿಗೆ	ವಿಷಯ
ಸೋಮವಾರ			
೬—೩—೧೯೩೩	೧೦ —	೧೦-೩೦	ಉಮೇದವಾರರ ಹೆಸರು ಹಚ್ಚಿಕೊಳ್ಳುವದು.
ಸದರ	೧೧ —	೨	ಮೊದಲನೇ ಸದರ (ಬ) ಮತ್ತು (ಕ) ದೇಶಭಾಷೆ
ಸದರ	೩ —	೫	ಎರಡನೇ ಸದರ (ಬ) ಮತ್ತು (ಅ) ಶುದ್ಧಬರಹ ಮತ್ತು ನಿಬಂಧ ಹಾಗು ಕೈಬರಹ
ಮಂಗಳವಾರ			
೭—೩—೧೯೩೩	೧೧ —	೧	೫ನೇ ಸದರ ಇತಿಹಾಸ
ಸದರ	೨ —	೪	೬ನೇ ಸದರ ಆರೋಗ್ಯ ಶಾಸ್ತ್ರ
ಬುಧವಾರ			
೮—೩—೧೯೩೩	೧೧ —	೨	೩ನೇ ಸದರ (ಅ) ಹಾಗು (ಬ) ಗಣಿತ ಹಾಗು ಮನೆತನದ ಜಮಾಖರ್ಚು
ಸದರ	೩ —	೫	೪ನೇ ಸದರ ಭೂಗೋಲ
ಗುರುವಾರ			
೯—೩—೧೯೩೩	೧೧ —	೨	೭ನೇ ಸದರ ಹೊಲಿಗೆ
ಸದರ	೩ —	೫	೮ನೇ ಸದರ ಐಚ್ಛಿಕ ವಿಷಯು (ಡ್ರಾಯಿಂಗ, ನೇಚರ ಸ್ಟಡಿ, ಅಥವಾ ಗಾಯನ)
ಶುಕ್ರವಾರ			
೧೦—೩—೧೯೩೩	೧೧ —	೫	ಬಾಯಿ ಪರೀಕ್ಷೆ (ದೇಶಭಾಷೆಯ ಸದರ ಪೈಕಿ (ಅ) ಮತ್ತು (ಡ)

ಸೂ:—ಉಮೇದವಾರರು ಒಂದು ಐಚ್ಛಿಕ ವಿಷಯವನ್ನು ತೆಗೆದು ಕೊಳ್ಳಲೇ ಬೇಕು.

ಕನ್ನಡ ಬುಕ್ ಕಮಿಟಿಯವರಿಂದ ೧೯೩೨ನೇ ಇಸ್ವಿ ನವಂಬರ ದಿಶಂಬರ ತಿಂಗಳಲ್ಲಿ ಕೆಳಗೆ ಕಾಣಿಸಲ್ಪಟ್ಟ ಪುಸ್ತಕಗಳು ಮಂಜೂರ ಆಗಿವೆ

ನಂಬರ	ಪುಸ್ತಕಗಳ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು ಪತ್ತೆ ಸಹ ಪೂರಾ	ಬೆಲೆ	ಯಾತಕ್ಕೋಸ್ಕರ ಮಂಜೂರ ಮಾಡಲ್ಪಟ್ಟಿವೆ
೧	ಅಬ್ರಹಾಮು ಲಿಂಕನ್ನನ ಚರಿತ್ರೆ (೧ನೇ ಆವೃತ್ತಿ)	ಮಿ. ಜಿ. ಎಚ್. ಹೊನ್ನಾಪೂರಮಠ	ಮಿ. ಜಿ. ಎಚ್. ಹೊನ್ನಾಪುರಮಠ ವಕೀಲ ಧಾರವಾಡ	೦-೧೨-೦	ಪ್ರಾ. ಶಾ. ಗಳ ಪ್ರಾಯಿಝು ಮತ್ತು ಲಾಯಬ್ರರಿ ಬುಕ್ಕಾಗಿಯೂ ಮಾಧ್ಯಮಿಕ ಶಾಲೆಗಳ ಹಾಗು ಟ್ರೇನಿಂಗ ಸಂಸ್ಥೆಗಳ ಸಪ್ಲಿಮೆಂಟರಿ ರೀಡರಾಗಿಯೂ ಮಂಜೂರಾಗಿದೆ.
೨	ಶ್ರೀ ಕೃಷ್ಣ ಚರಿತ್ರೆ ೨ನೇ ಆವೃತ್ತಿ ೧೯೩೧	ಸದರ	ಸದರ	೧-೦-೦	ಸದರ
೩	ನೆಪೋಲಿಯನ್ ೧ನೇ ಆ.	ಮಿ. ಬೋಠೆ ಅನಂತರಾವ	ಚಿತ್ರಶಾಲಾ ಪ್ರೆಸ್ ಪುಣೆ	೦-೪-೦	ಸದರ
೪	ಬಾಲ ವೀರರಾದ ಕುಶಲವರ ಕಥೆ ೧ನೇ ಆವೃತ್ತಿ	ಮಿ. ಎಸ್. ಪಿ. ಪೂಜಾರ	ಸದರ	೦-೫-೦	ಹುಡುಗರ ಲಾಯಬ್ರರಿ ಮತ್ತು ಪ್ರಾಯಿಝು ಬುಕ್ಕಾಗಿಯೂ ಪ್ರಾ. ಶಾ. ಗಳ ಸಪ್ಲಿಮೆಂಟರಿ ರೀಡರಾಗಿಯೂ
೫	ಇಸಾಪ ನೀತಿಯೊಳಗಿನ ಸುಲಭ ಸಣ್ಣ ಕಥೆಗಳು ೧ನೇ ಆವೃತ್ತಿ	ಸದರ	ಸದರ	೦-೬-೦	ಸದರ

೬	ಹಿಂದುಸ್ಥಾನದೊಳಗಿನ ಮುಸಲ್ಮಾನರ ಆಳಿಕೆ ೧ನೇ ಆವೃತ್ತಿ	ಮಿ. ಎನ್. ಪಿ. ಮೋಡಕ	ಮಿ. ಆರ್. ಆರ್. ಕಮಲಾಪೂರ ಗದಗ	೦–೮–೦	ಪ್ರಾ. ಶಾ. ಗಳ ಟೆಕ್ಸ್ಟ ಬುಕ್ಕಾಗಿ
೭	ಮಹಮ್ಮದ ಪೈಗಂಬರರು ೧ನೇ ಆವೃತ್ತಿ	ಮಿ. ವಾಯ್. ಡಬ್ಲ್ಯೂ. ಜಹಾಗೀರದಾರ	ಮಿ. ವಾಯ್. ಡಬ್ಲ್ಯೂ. ಜಹಾಗೀರದಾರ ಹೆ. ಮಾ. ಉ. ಶಾ. ಗದಗ	೦–೧೦–೦	ಪ್ರಾ. ಶಾ. ಮತ್ತು ಮಾ.ಶಾಲೆ ಹಾಗು ವ್ಹ. ಟ್ರೇ. ಸಂಸ್ಥೆಗಳ ಪ್ರಾಯಿಝು, ಲಾಯಬ್ರರಿ ಬುಕ್ಕಾಗಿ
೮	ದೇಶೀಯ ಜಮಾಖರ್ಚು ಪ್ರವೇಶ, ೧ನೇ ಆವೃತ್ತಿ	ಮಿ. ಎಚ್. ಆರ್. ಕುಲಕರ್ಣಿ	ಮಿ. ಎ. ಆರ್. ಶಿವನಾಗಪ್ಪ ಪ್ರೊ. ವಾ. ಬುಕ್ಕ ಡಿಪೋ ಹುಬ್ಬಳ್ಳಿ	೦–೩–೬	ಪ್ರಾಥಮಿಕ ಶಾಲೆಗಳ ಟೆಕ್ಸ್ಟ ಬುಕ್ಕಾಗಿ
೯	ಕರ್ನಾಟಕದ ವರ್ಣನೆಯೂ ಇತಿಹಾಸವೂ	ಮಿ. ಎನ್. ಎಸ್. ರಾಜಪುರೋಹಿತ	ಸದರ	೦–೮–೦	ಪ್ರಾ. ಶಾಲೆಗಳ ಟೆಕ್ಸ್ಟ ಮತ್ತು ಪ್ರಾಯಿಝು, ಲಾಯಬ್ರರಿ ಬುಕ್ಕಾಗಿ
೧೦	ಗಡ್ಡದ ಅಜ್ಜಯ್ಯಾ ೧ನೇ ಆವೃತ್ತಿ	ಸದರ	ಸರಸ್ವತಿ ಪ್ರಿಂಟಿಂಗ ವರ್ಕ್ಸ ಮಂಗಳೂರ	೦–೨–೦	ಪ್ರಾ. ಶಾಲೆಗಳ ಪ್ರಾಯಿಝು ಬುಕ್ಕಾಗಿ ಮತ್ತು ಬಾಯ್ಜ ಲಾಯಬ್ರರಿ ಬುಕ್ಕಾಗಿ
೧೧	ಏಕನಾಥ ಸಾಧುಗಳ ಚರಿತ್ರೆ	ಮಿ. ಜಿ. ಎಫ್. ಹಳಕಟ್ಟಿ	ಮಿ. ಜಿ. ಎಫ್. ಹಳಕಟ್ಟಿ, ಶೆಟ್ಟಿಗಲ್ಲಿ ಬೆಳಗಾಂವ	೦–೪–೦	ಪ್ರಾ. ಹಾಗು ಮಾ. ಶಾ. ವಿ॥ ಗಳ ಪ್ರಾಯಿಝು ಹಾಗು ಲಾ. ಬುಕ್ಕಾಗಿ
೧೨	ಬರಹದ ಮೊದಲಿನ ಮೆಟ್ಟು ೧ನೇ ಆವೃತ್ತಿ	ಮಿ. ಎ. ವ್ಹಿ. ಬೋಕಿ	ಮಿ. ಕೆ. ಎ. ಖೋತ ರಸೀವ್ಹರ ರಾಮತತ್ವ ಪ್ರ. ಪ್ರೆಸ್ ಬೆಳಗಾವ	೦–೩–೦	ಪ್ರಾ. ಶಾಲೆಗಳ ಮಾಸ್ತರ ಜನರ ಲಾಯಬ್ರರಿ ಬುಕ್ಕಾಗಿ

೧೩	ಕರ್ನಾಟಕದ ಇತಿಹಾಸ ೧ನೇ ಆ.	ವೆ॥ ಎಚ್. ಜಿ. ಬೆಂಗೇರಿ ಎಸ್. ಎವ್. ಕರ್ಜಗಿ ಮತ್ತು ಡಿ. ಆರ್. ಕುರಂದವಾಡ	ಮಿ. ರಾಮಚಂದ್ರ ದ ಕ್ಷಾತ್ರಿಯ ಕುರಂದ ವಾಡ, ಹಾವೇರಿ	೦-೬-೦	ಪ್ರಾಥಮಿಕ ಶಾಲೆಗಳ ಟೆಕ್ಸ್ಟ ಬುಕ್ಕಾಗಿ
೧೪	ವೀರ ವಿದುಲಾ ೧ನೇ ಆವೃತ್ತಿ	ಮಿ. ಜಿ. ಎಚ್. ಹೊನ್ನಾಪುರಮಠ	ಮಿ. ಜಿ. ಎಚ್. ಹೊನ್ನಾಪುರ ಮಠ ವಕೀಲ ಧಾರವಾಡ	೦-೨-೦	ಪ್ರಾಥಮಿಕ ಶಾಲೆಗಳ ಪ್ರಾಯಿರ್ಝು ಬುಕ್ಕಾಗಿ
೧೫	ಅಲ್ಲಾ ಉದ್ದೀನ ಮತ್ತು ಒಂದು ಸೋಜಿಗದ ದೀಪ ೧ನೇ ಆವೃತ್ತಿ	ಸದರ	ಸದರ	೦-೩-೦	ಸದರ
೧೬	ಹನುಮಂತನ ಕಥೆ ೧ನೇ. ಆ.	ಮಿ. ಎವ್. ಓ. ಪೂಜಾರ	ಚಿತ್ರಶಾಲಾ ಪ್ರೆಸ್ ಪುಣೆ	೦-೪-೦	ಸದರ
೧೭	ಬಾಲರೇಖಾ ಗಣಿತ ೫ನೇ ಆವೃತ್ತಿ	ಮಿ. ಎಚ್. ಎಸ್. ಕೃಷ್ಣರಾವ	ಪೌಲ ರಾಜು ಆ್ಯಂಡ ಸನ್ಸ ಬು.ಶೇ.ಅ.ರೋಡ ಬೆಂಗಳೂರ	೦-೬-೦	ಮಾ. ಶಾಲೆಗಳ ಟೆಕ್ಸ್ಟ ಬುಕ್ಕಾಗಿ
೧೮	ನಮಸ್ಕಾರ ೧ನೇ ಆವೃತ್ತಿ	ಮಿ. ವೈದ್ಯ ಜಿ. ಓ. ಪರಾಂಜಪೆ	ವೈದ್ಯ, ಜಿ.ಪಿ. ಪರಾಂಜ ಪೆ ಸಾಂಗಲಿ	೦-೪-೦	ಪ್ರಾ. ಶಾ. ಪ್ರಾಯಿರ್ಝು ಮತ್ತು ಲಾಯಬ್ರರಿ ಬುಕ್ಕಾಗಿ
೧೯	ಆರ್ಯಕ ೧ನೇ ಆವೃತ್ತಿ	ಮಿ. ಎಸ್. ಜಿ. ಶಾಸ್ತ್ರಿ	ಮಿ. ಶ್ರೀನಿವಾಸ ಐಯ್ಯಂಗಾರ ಪ್ರಿಂಟರ ಬೆಂಗಳೂರ ಸಿಟಿ	೧-೦-೦	ವಿದ್ಯಾರ್ಥಿಗಳ. ಪ್ರಾಯಿರ್ಝು. ಬು. ಮತ್ತು ಮಾ. ಶಾ. ಟ್ರೇ. ಸಂ. ಪ್ರಾಯಿರ್ಝು ಹಾಗು ಲಾ. ಬುಕ್ಕಾಗಿ
೨೦	ಸತ್ಸಂಗ ೧ನೇ ಆವೃತ್ತಿ	ಮಿಸೆಸ್ ಆರ್. ಇ. ರಾಬಿನ್ಸನ್	ಆಕ್ಸಫರ್ಡ ಯು. ಪ್ರೆ. ಮೌಂ. ಮದ್ರಾಸ	೦-೧೪-೦	ಸದರ

೨೧	ಕರ್ನಾಟಕ ರಘುವಂಶ ೧ನೇ ಆವೃತ್ತಿ	ಮಿ. ವಾಯ್. ನಾಗೇಶ ಶಾಸ್ತ್ರಿ	ಮಿ. ವಾಯ್. ನಾಗೇಶ ಶಾಸ್ತ್ರಿ ಕನ್ನಡ ಪಂ. ವಾರಡ್ಲಾಹಾಯಸ್ಕೂಲ ಬಳ್ಳಾರಿ	೧–೦–೦	ಮಾ. ಶಾ. ಟೆಕ್ಸ್ಟ ಮತ್ತು ಪ್ರಾಥಮಿಕ ಶಾಲೆಗಳ ಟ್ರೇನಿಂಗ ಸಂ. ಲಾ. ಮತ್ತು ಪ್ರಾಯಿರ್ಝ ಬುಕ್ಕಾಗಿ
೨೨	ಇಂದ್ರಿಯ ವಿಜ್ಞಾನ ೧ನೇ ಆವೃತ್ತಿ	ಮಿ. ಕೆ. ಜಿ. ಕುಂದಣಕಾರ	ಮಿ. ವಾಯ್. ಎನ್. ಭಟ, ಶಹಾಪುರಿ ಕೊಲ್ಹಾಪುರ ಸಿಟಿ	೦–೭–೦	ಪ್ರಾ. ಶಾ. ಗಳ ಮಾ. ಶಾ. ಟ್ರಿ. ಸಂಸ್ಥೆಗಳ ಟೆಕ್ಸ್ಟ ಬುಕ್ಕಾಗಿ
೨೩	ಶಿಶುಶಿಕ್ಷಣ ೨ನೇ ಆವೃತ್ತಿ	ಮಿ. ಬಿ. ವ್ಹಿ. ಮಠ	ಮಿ. ಬಿ. ವ್ಹಿ. ಮಠ. ಹೆ. ಮಾ. ಬಾ. ಸ್ಕೂಲ. ನವಲಗುಂದ	೦–೨–೦	ಪ್ರಾಥಮಿಕ ಶಾಲೆಗಳ ಸಪ್ಲಿಮೆಂಟರಿ ರೀಡರಾಗಿ
೨೪	ಗಣಿತ ಶಿಕ್ಷಕ ೧ನೇ ಆವೃತ್ತಿ	ಮಿ. ಬಿ. ಡಿ. ಹಿರೇಮಠ	ಮಿ. ಬಿ. ಡಿ. ಹಿರೇಮಠ ಕ. ಶಾ. ಮಾ. ವಿಜಾಪೂರ ಮ್ಯುನ್ಸಿಪಾಲಿಟಿ	೦–೧೪–೦	ಪ್ರಾಥಮಿಕ ಹಾಗು ಮಾಧ್ಯಮಿಕ ಶಾಲೆಗಳ ಟೆಕ್ಸ್ಟ ಬುಕ್ಕಾಗಿ
೨೫	ಸೃಷ್ಟ ವಸ್ತು ಪರಿಚಯ ಭಾಗ ೩ ೧ನೇ ಆವೃತ್ತಿ	ಮೆ॥ ಡಿ. ವ್ಹಿ. ಸೇಂಡೆ ಮತ್ತು ಜಿ. ಎಸ್. ಮೇಢೇಕರ	ಮಿ. ಆರ್. ಜಿ. ಹುಕ್ಕೇರಿ ಸ್ಟೂ. ಓ. ಬು. ಡಿಪೋ ಧಾರವಾಡ	೦–೧೨–೦	ಪ್ರಾ. ಶಾ. ಮತ್ತು ಮಾ. ಶಾ. ಹಾಗು ವ್ಹ. ಟ್ರೇ. ಸಂಸ್ಥೆಗಳ ಟೆಕ್ಸ್ಟ ಬುಕ್ಕಾಗಿ
೨೬	ಬುದ್ಧಿಯ ಕಥೆಗಳು ೨ನೇ ಭಾಗ ೧ನೇ ಆವೃತ್ತಿ	ಮಿ. ಡಿ. ನರಸಿಂಹಶಾಸ್ತ್ರಿ	ಕೃಷ್ಣ ಮತ್ತು ಕಂಪನಿ ಬಳೇಪೇಟ ಬೆಂಗಳೂರ ಸಿಟಿ	೦–೬–೦	ಪ್ರಾ ಶಾ. ಸಪ್ಲಿಮೆಂಟರಿ ರೀಡರಾಗಿ

ಕೆ. ಎಸ್. ವಕೀಲ, ಎ. ಇ. ದ. ಭಾಗ

ಮುಂಬಯಿ ಇಲಾಖೆಯೊಳಗಿನ ಉರ್ದು ಶಾಲೆಗಳಿಗಾಗಿ ಉರ್ದು ಬುಕ್ಕ ಕಮಿಟಿಯುವರಿಂದ ಪಾಸಾದ ಪುಸ್ತಕಗಳು

(ಕಳೆದ ಸಂಚಿಕೆಯಿಂದ ಮುಂದುವರಿದುದು).

೧೨	ಕಸರಿ ಸಹರಾ ಹಿಸ್ಸಮೇ ಸುವವ್ ೧ನೆಯ ಆ. ೧೯೨೭	ಮಿರ್ಝಾ ಅಝೀಮ್ ಬೇಗ ಚಃಘಾಟಿ	ಸದರ	೧–೧–೦	ಸದರ
೧೩	ಜರ್‍ರೆಯೇ ಅಜೀಮ ೩ನೆಯ ಆ. ೧೯೩೦	ಮಿ. ವತ್ರಲ್. ಡಾಟಿರ ಆಫ್. ರಾಜಾ ನರೇಂದ್ರನಾಥ ಎಮ್. ಎ.	ಸದರ	೦.೭–೯	ಉರ್ದು ಶಾಲೆಗಳ ಲಾಯಬ್ರರಿಗಾಗಿ
೧೪	ನಿರಾಲಿ ದುನಯಾ ೧ನೆಯ ಆ. ೧೯೨೮	ಮೌಲ್ವಿ ಝಿಯಾಉಲಹಕ್ ಸಿದ್ದೀಕಿ	ಸದರ	೦–೫–೦	ಉರ್ದು ಶಾಲೆಗಳಿಗೆ P ಮತ್ತು L
೫	ಬಹಾರಕೆ ಫೂಲ ೨ನೆಯ ಆ. ೧೯೨೮	ಅಬುಲ್ ಅಸಾರ ಹಾಫೀಜ ಜಲಂಧರಿ	ಸದರ	೧–೮–೦	ಸದರ

(ಮುಂದೆ ಸಾಗುವದು)

ನೋಟೀಸು

೧೯೩೩ನೆಯ ಇಸವಿಯ ವ್ಹ. ಫಾ. ಪರೀಕ್ಷೆಯು ಈ ಭಾಗದ ಬೇರೆ ಬೇರೆ ಜಿಲ್ಹೆಗಳಲ್ಲಿ ತಾ॥ ೨೯ ಮಾರ್ಚ ಹಾಗು ಮುಂದಿನ ದಿವಸಗಳಲ್ಲಿ ನಡೆಯುವದು. ಪರೀಕ್ಷೆಗೆ ಕೂಡಲಿಚ್ಛಿಸುವ ಉಮೇದವಾರರು ತಮ್ಮ ಅರ್ಜಿಗಳನ್ನು ತಮ್ಮ ಜಿಲ್ಹೆಯ ಪರೀಕ್ಷಾ ಕಮೀಟಿಯ ಪ್ರೆಸಿಡೆಂಟರಿಗೆ ೧ನೇ ಮಾರ್ಚ ೧೯೩೩ ಈ ದಿವಸ ಅಥವಾ ಅದರೊಳಗಾಗಿಯೇ ಮುಟ್ಟುವಂತೆ ಕಳಿಸತಕ್ಕದ್ದು. ಸಹಿ ಕೆ. ಎಸ್. ವಕೀಲ,

ಧಾರವಾಡ ೧೧–೧–೧೯೩೩ ಎ. ಇನ್ಸಪೇಕ್ಟರ ದ. ಭಾಗ.

“ಕರ್ನಾಟಕದ ವರ್ಣನೆಯೂ ಇತಿಹಾಸವೂ”

ಈ ಪುಸ್ತಕವು ಕರ್ನಾಟಕದ ಪ್ರಸಿದ್ಧ ಇತಿಹಾಸ ಸಂಶೋಧಕರಾದ

ಶ್ರೀ. ನಾ. ಶ್ರೀ. ರಾಜಪುರೋಹಿತ

ಇವರಿಂದ ೪ನೇ ಇಯತ್ತೆಗಾಗಿ ಬರೆಯಲ್ಪಟ್ಟಿದೆ.

ಚಿತ್ರ ನಕಾಶಗಳಿಂದ ಕೂಡಿದೆ

ಮೆಹರ್ಬಾನ ಡಾಯರೆಕ್ಟರ ಸಾಹೇಬರವರಿಂದ

ಟೆಕ್ಸ್ಟ (ಪಠ್ಯ) ಪುಸ್ತಕವೆಂದು ಮಂಜೂರಾಗಿದೆ.

ಪ್ರಕಾಶಕರಾದ ಏ. ಆರ್. ಶಿವನಾಗಪ್ಪ, ವಾಗ್ವಿಲಾಸ ಬುಕ್‌ಡಿಪೋ ಹುಬ್ಬಳ್ಳಿ ಇವರಲ್ಲಿ ದೊರೆಯುವವು. **ಬೆಲೆ ೮ ಆಣೆ.**

ಹೆಚ್ಚು ಪ್ರತಿ ಕೊಳ್ಳುವವರಿಗೆ ಯೋಗ್ಯ ಕಮೀಶನ್ ದೊರೆಯುವದು.

ಸರಕಾರದಿಂದ ಮಂಜೂರಾದ

ಆರೋಗ್ಯ ಶಾಸ್ತ್ರದ ಹೊಸ ಟೆಕ್ಸ್ಟ ಪುಸ್ತಕವು

ಶರೀರ ಸಂಗೋಪನ ಶಾಸ್ತ್ರ.

ಬೆಲೆ ೧೦ ಆಣೆ ಕಮಿಶನ್ ೧೦೦ಕ್ಕೆ ೨೦.

ಲೇಖಕ:—ದ. ಬಾ. ಬರ್ವೆ, ಬಿ. ಏಜಿ. ರಿಸರ್ಚ ವರ್ಕರ, ಶೇತಕೀ ಕಾಲೇಜ, ಪುಣೆ.

ಈ ಪುಸ್ತಕದಲ್ಲಿ ಕನ್ನಡ ೫, ೬, ೭, ಹಾಗು ವ್ಹ. ಫಾಯನಲ್ ಪರೀಕ್ಷೆಗೆ ಬೇಕಾಗುವ ಎಲ್ಲ ವಿಷಯವು ಬಂದಿರುವದು. ಇದರ ಮರಾಠೀ ಆವೃತ್ತಿಯು ಮಧ್ಯಭಾಗದ ಬಹುತರ ಎಲ್ಲ ಸಾಲೆಗಳಲ್ಲಿ ಟೆಕ್ಸ್ಟ, ಎಂದು ಉಪಯೋಗವಾಗುತ್ತಿರುವದು. ಸರಕಾರದ ಟ್ರೇನಿಂಗ ಕಾಲೇಜುಗಳು ಹಾಗು ಪ್ರ್ಯಾಕ್ಟಿಸಿಂಗಸ್ಕೂಲುಗಳಲ್ಲಿಯೂ ಇದೇ ಟೆಕ್ಸ್ಟ ಎಂದು ಉಪಯೋಗವಾಗುತ್ತಿರುವದು.

ಈ ಪುಸ್ತಕವನ್ನು ತಜ್ಞರು ತುಂಬಾ ಹೊಗಳಿದ್ದಾರೆ. ಬೆಲೆಯಲ್ಲಿ ಇಷ್ಟು ಅಗ್ಗವಾದ ಪುಸ್ತಕವು ಬೇರೊಂದಿಲ್ಲ. ಪುಸ್ತಕದಲ್ಲಿ ೨೩೫ ಪುಟಗಳೂ, ೫೫ ಆಕೃತಿಗಳೂ (ಲಾಯಿನ್ ಬ್ಲಾಕ್ಸ) ೨ ಬಣ್ಣದ ಆಕೃತಿಗಳೂ ಒಂದು ನಕಾಶವೂ ಇರುವವು.

ಪುಸ್ತಕಗಳು ಸಿಕ್ಕುವ ಸ್ಥಳಗಳು:—

ಸ್ಟೂಡಂಟ್ಸ ಓನ್ ಬುಕ್‌ಡಿಪೋ, ಧಾರವಾಡ, ತ. ನಾ. ಗೋಡಬೋಲೆ, ಪುಣೆ, ಹಾಗು ಬೆಳಗಾಂವ, ಹುಬ್ಬಳ್ಳಿ, ಕಾರವಾರ, ವಿಜಾಪುರ ಇಲ್ಲಿಯ ಎಲ್ಲ ಬುಕ್‌ಸೇಲರುಗಳಲ್ಲಿ.

Reg. No. B. 2567

೫೫

ನೇ ವಯಸ್ಸಿನಲ್ಲಿ ನೀವು ಯಾವ ಸ್ಥಿತಿಯಲ್ಲಿರುವಿರೆಂಬದರ ವಿಚಾರ ಮಾಡಿರುವಿರಾ! ತಾರುಣ್ಯವು ಹೊರಚಿಮ್ಮುವಾಗ್ಗೆ ವೃದ್ಧಾವಸ್ಥೆಯ ಚಿತ್ರವು ಮುಂದೆ ನಿಲ್ಲದಿರುವದು ಸಹಜವೇ. ಆಗ್ಗೆ ಹಣವಿಲ್ಲದಿದ್ದರೆ ಬಾಳು ಕೀಳಾಗುವದೆಂಬದನ್ನು ನೀವು ವಿಚಾರಿಸುವದು ಯುಕ್ತವೇ. ಮೊದಲಿನ ಹಾಗೆಯೇ ಮುಪ್ಪಿನ ಕಾಲವನ್ನು ಸೌಖ್ಯದಿಂದ ಕಳೆಯುವದು ಹೇಗೆ...? ಭೆಟ್ಟಿಯಾಗಿರಿ ಇಲ್ಲವೆ ಪತ್ರ ಬರೆಯಿರಿ.

ಎಸ್. ಜಿ. ಹಾಚ್ಯಾಪೂರ

ಚಿಕ್ಕೋಡಿ.

ಸ್ಯಾಂಪಲ್] [ಫುಕ್ಕಟಿ

ಉತ್ತಮ ಮಸೀ ಚೀಟುಗಳು

ನೀಲೀಕಪ್ಪು, ಕೆಂಪು, ಜಾಂಬಳಿ ಮಸಿಯ ಚೀಟುಗಳು ಈ ಕಂಪನಿಯು ಬಹಳ ಜನರಿಂದ ಶಿಫಾರಸ ಪಡೆದು ಮೆಡಲ್ಲುಗಳನ್ನು ಸಂಪಾದಿಸಿರುತ್ತದೆ.

ದರಗಳು

೧೦೦	ಚೀಟುಗಳಿಗೆ	೦—೭—
೫೦೦	,,	೧—೧೪—
೧೦೦೦	,,	೩—೦—
೧೦೦೦೦	,,	೨೭—೮—೦ (ರೇಲ್ವೆ ಫ್ರೀ

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರಮಾಡಿರಿ.

ಕರ್ನಾಟಕ ಇಂಕ ಕಂಪನಿ,

ಬಾಗಲಕೋಟ

Reg. No. B. 2567

ಕನ್ನಡ

ಪ್ರಾಥಮಿಕ ಶಿಕ್ಷಣ

(ಇದರಲ್ಲಿ ಕನ್ನಡ ಶಾಲಾಪತ್ರಿಕೆಯೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

Kannada Prathamik Shikshana

— FEBRUARY 1933 —

ಸಂಪಾದಕ— ವೆಂಕಟೇಶ ನರಸಿಂಗರಾವ ಮಗದಾಳ ಬಿ. ಎ.,

ಸಂಪುಟ ೬] ಫೆಬ್ರುವರಿ ೧೯೩೩ [ವರ್ಷ ೪ ಸಂ. ೧೧

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ	ಪುಟ
೧	ಟಾಮಸ್ ಕಮಿಟಿಯೂ ಪ್ರಾಥಮಿಕ ಶಿಕ್ಷಣವೂ	೧
೨	ಕರ್ನಾಟಕದಲ್ಲಿ ಶಿಕ್ಷಣ ಮಂತ್ರಿಗಳು	೧೩
೩	ಪದ್ಯಪಾಠ	೧೬
೪	ತಿಲಶರ್ಕರೆ	೨೦
೫	ಪುಸ್ತಕ ವಿಮರ್ಶೆ	೨೧
೬	೧೯೩೩ನೇ ಇಸ್ವಿಯಲ್ಲಾಗುವ ವ್ಹ. ಫಾ. ಪರೀಕ್ಷೆಯ ವಿಷಯಗಳು	೨೨
೭	ನೋಟೀಸು	೨೪
೮	ಬೇಸಿಗೆಯ ಸೂಟಿಯಲ್ಲಿ ಶಿಕ್ಷಣ ಯೋಜನೆ	೨೫
೯	ಉರ್ದು ಬುಕ್ ಕಮಿಟಿಯವರಿಂದ ಮಂಜೂರಾದ ಉರ್ದು ಬುಕ್ಕುಗಳ ಯಾದಿಯು	೨೭

Printed by K. R. Bhise at the Karnatak Printing Works, Dharwar
& Published by V. N. Magdal, B. A.,
Head-Master, Training School Dharwar, at his Office

ಕನ್ನಡ ೪ನೆಯ ಇಯತ್ತೆಗೆ ಪಠ್ಯ (ಟೆಕ್ಸ್ಟ್) ಪುಸ್ತಕವೆಂದು ಹೊಸದಾಗಿ

ಮಂಜೂರಾದ ಕಥಾರೂಪವಾದ

ಕರ್ನಾಟಕದ ಇತಿಹಾಸ

೧೦೦+೪ ಪುಟ. ಸುಮಾರು ೩೫ ಚಿತ್ರಗಳು. ೫ ನಕಾಶೆಗಳು.

ತೋಂಟದಾರ್ಯ ಪ್ರೆಸ್ಸಿನ ಸುಂದರ ಮುದ್ರಣ. **ಬೆಲೆ—ಆರಾಣೆ** ಮಾತ್ರ;

೪ನೆಯ ಇಯತ್ತೆಗೆ ಇತಿಹಾಸವನ್ನು ಸುಲಭ ಕಥೆಗಳ ರೂಪದಿಂದ ಕಲಿಸಬಹುದೆಂದು ಅಭ್ಯಾಸಪತ್ರಿಕೆಯಲ್ಲಿ ಹೇಳಿದೆ. ಆ ತತ್ವವನ್ನನುಸರಿಸಿ ಈ ಪುಸ್ತಕದಲ್ಲಿ ಕರ್ನಾಟಕದ ಸಮಗ್ರ ಇತಿಹಾಸದ ಸ್ಥೂಲವಾದ ಕಲ್ಪನೆಯು ವಿದ್ಯಾರ್ಥಿಗಳಲ್ಲಿ ಉಂಟಾಗುವಂತೆ ಕರ್ನಾ. ಇತಿಹಾಸದ ಪ್ರಸಿದ್ಧ ವ್ಯಕ್ತಿಗಳ ಕಥೆಗಳು-ನಡುನಡುವೆ ಇತಿಹಾಸದ ತಳಕನ್ನು ಹಾಕಿ—ವಿದ್ಯಾರ್ಥಿಗಳ ಯೋಗ್ಯತೆಗೆ ಮೀರದಂತೆ ಬಹು ಜಾಣತನದಿಂದ ಬರೆಯಲ್ಪಟ್ಟಿವೆ. ಚಿತ್ರ, ನಕಾಶ, ಇವುಗಳಿಂದ ವಿಷಯವು ಮನೋರಂಜನವಾಗುವಂತೆ ಮಾಡಿದ್ದಲ್ಲದೆ ಸುಲಭ ಭಾಷೆಯಲ್ಲಿ ಬರೆದಿರುವದರಿಂದ ವಿದ್ಯಾರ್ಥಿಗಳು ತಾವಾಗಿ ಓದಿಕೊಳ್ಳಲನುಕೂಲವಾಗಿದೆ.

೪ನೆಯ ಇಯತ್ತೆಗೆ ಇತಿಹಾಸವನ್ನು ಕಲಿಸುವದರಲ್ಲಿ ಶಿಕ್ಷಕರಿಗೂ, ಕಲಿಯುವದರಲ್ಲಿ ವಿದ್ಯಾರ್ಥಿಗಳಿಗೂ ಇದ್ದ ತೊಂದರೆಯು ಇದರಿಂದ ದೂರವಾಯಿತು !

ಶಿಕ್ಷಕರಿಗೂ, ಬುಕ್‌ಸೇಲರರಿಗೂ ತುಂಬ ಕಮಿಶನು. ಪುಸ್ತಕಗಳು ಗ್ರಂಥಕರ್ತರಲ್ಲಿಯೂ ಎಲ್ಲ ಬುಕ್‌ಡಿಪೋಗಳಲ್ಲಿಯೂ ದೊರೆಯುವವು.

ಗ್ರಂಥಕರ್ತರು:

ಪೋಸ್ಟ—ಹಾವೇರಿ,	**ಎಚ್. ಜಿ. ಬೆಂಗೇರಿ; ಬಿ. ಎ. (ಆನರ್ಸ) ಬಿ. ಟಿ.**
	ಹೆಡ್‌ಮಾಸ್ತರ ಹಾವೇರಿ ಹಾಯಸ್ಕೂಲ ಮತ್ತು
ಜಿಲ್ಹಾ—ಧಾರವಾಡ.	**ದ. ರಾ. ಕುರಂದವಾಡ ಹೆ. ಮಾಸ್ತರ**
	ಆಲದಕಟ್ಟಿ.

೧ನೆಯ ಭಾಗ ನುಡಿಗನ್ನಡಿ: —ಪಂ. ಪೂಜಾರಕೃತ (೪ನೆಯ ಇಯತ್ತೆಗಾಗಿ) ಹೊಸದಾಗಿ ಪ್ರಕಟಿಸಲ್ಪಟ್ಟಿದೆ. ಎಲ್ಲ ಬುಕ್‌ಡಿಪೋಗಳಲ್ಲಿ ದೊರೆಯುವವು.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:—ವೆಂಕಟೇಶ ನರಸಿಂಗರಾವ ಮುಗದಾಳ, ಬಿ. ಎ.,

ಸಂಪುಟ ೬೯ ||| ಫೆಬ್ರುವರಿ ೧೯೩೩ ||| ವರ್ಷ ೪; ಸಂ. ೧೦

ಟಾಮಸ್ ಕಮಿಟಿಯೂ ಪ್ರಾಥಮಿಕ ಶಿಕ್ಷಣವೂ.

ಮುಂಬಯಿ ಇಲಾಖೆಯ ಆಡಳಿತದ ಯಾವತ್ತು ಖಾತೆಗಳ ಸದ್ಯದ ವ್ಯವಸ್ಥೆಯನ್ನು ಕುರಿತು ಸೂಕ್ಷ್ಮವಾಗಿ ಪರೀಕ್ಷಿಸಿ, ಸರಕಾರದ ಆಯವ್ಯಯಗಳು ಬಾಯಿಗೂಡುವಂತೆ ಮಾಡಲು ಯಾವ ಉಪಾಯಗಳನ್ನು ಕೈಕೊಳ್ಳುವದು ಅತ್ಯವಶ್ಯವೆಂಬದನ್ನು ಸೂಚಿಸಲಿಕ್ಕಾಗಿ ಮುಂಬಯಿ ಸರಕಾರದವರು ಜೂಲೈ ೧೯೩೨ ರಲ್ಲಿ ಒಂದು ಕಮೀಟಿಯನ್ನು ನೇಮಿಸಿದ್ದರಷ್ಟೇ. ಈ ಕಮೀಟಿಯವರ ವರದಿಯು ಈಗ ಪ್ರಸಿದ್ಧವಾಗಿರುವದು. ಮಿ. ಜಿ. ಎ. ಟಾಮಸ್. ಸಿ. ಪಿ. ಇ. ಐ. ಸಿ. ಎಸ್., ಈ ಸದ್ಗೃಹಸ್ಥರು ಈ ಕಮೀಟಿಯ ಚೇರಮನ್ನರು ಇದ್ದರು. ಆದ್ದರಿಂದ ಈ ಕಮೀಟಿಗೆ ಟಾಮಸ್ ಕಮೀಟಿಯೆಂದು ಹೆಸರು ಬಂದಿತು. ಈ ಕಮೀಟಿಯವರು ಪ್ರಾಥಮಿಕ ಶಿಕ್ಷಣದ ಬಗ್ಗೆ ವಿಚಾರಮಾಡಿ ಬರೆದಿರುವ ವರದಿಯು ಹಲವು ಮಹತ್ವದ ವಿಚಾರಗಳನ್ನು ಒಳಗೊಂಡಿರುವದು. ಇವುಗಳನ್ನು ನಮ್ಮ ಪ್ರಾಥಮಿಕ ಶಿಕ್ಷಕರ ಅವಗಾಹನೆಗಾಗಿ ಇಲ್ಲಿ ಕೊಟ್ಟಿರುವೆವು. ಈ ಕಮೀಟಿಯವರ ಸೂಚನೆಗಳನ್ನು ಸರಕಾರದವರು ಅಮಲಿನಲ್ಲಿ ತರಲೇಬೇಕೆಂಬ ನಿರ್ಬಂಧವಿರುವದಿಲ್ಲೆಂಬದನ್ನು ವಾಚಕರು ಲಕ್ಷ್ಯದಲ್ಲಿಡಬಹುದು. ಆದರೆ ಅವರ ವಿಚಾರಗಳು ಶಿಕ್ಷಕರಾದ ನಮಗೂ ಶಿಕ್ಷಕರ ಪಗಾರವನ್ನು ಪೂರಯಿಸುತ್ತಿರುವ ಪ್ರಜೆಗಳಿಗೂ ಇರುವ ಸಂಬಂಧವನ್ನು ವ್ಯಕ್ತಪಡಿಸಿ, ಸದ್ಯಕ್ಕೆ ಹಾಗು ಮುಂದಿನ ಕೆಲವು ವರುಷಗಳಲ್ಲಿ ನಮ್ಮಿಂದ ದೇಶಕ್ಕೆ ಯಾವ ಕಾರ್ಯವು ಆಗಬೇಕಾಗಿದೆ, ಅದಕ್ಕೆ ಶಿಕ್ಷಕರಲ್ಲಿ ಯಾವ ಕಾರ್ಯಶಕ್ತಿಯು ಇರುವದು ಅವಶ್ಯವು, ಮೇಲಾಗಿ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯಲ್ಲಿ ಯಾವ ಬದಲಾವಣೆಗಳಾಗುವದು ಮಹತ್ವದ್ದಾಗಿದೆ ಇವೇ ಮೊದಲಾದ ಮಹತ್ವದ ಪ್ರಶ್ನಗಳನ್ನೊಳಗೊಂಡಿರುವದರಿಂದ ಇವುಗಳನ್ನು ಶಿಕ್ಷಕರು ಮನನಮಾಡುವದು ಆವಶ್ಯಕವೆಂದು ನಮ್ಮ ಅಭಿ

ಪ್ರಾಯವು. ಪ್ರತಿವರ್ಷ ಹೆಚ್ಚುತ್ತಿರುವ ಸರಕಾರದ ಖರ್ಚನ್ನು ಕಡಿಮೆ ಮಾಡುವದು ಅತ್ಯವಶ್ಯವಿರುವದರಿಂದ ಈ ಸಂಗತಿಯನ್ನು ಸಾಧಿಸಿ ಪ್ರಾಥಮಿಕ ಶಿಕ್ಷಣದಲ್ಲಿ ಅವಶ್ಯವಿರುವ ಸುಧಾರಣೆಯನ್ನೂ, ಅದರ ಬೆಳವಣಿಗೆಯನ್ನೂ ಹ್ಯಾಗೆ ನೆರವೇರಿಸಿಕೊಳ್ಳಬೇಕೆಂಬದನ್ನು ಸೂಚಿಸುವ ಪ್ರಶ್ನವು ಬಹಳ ಬಿಗಿಯಾದದ್ದೆಂಬದನ್ನು ವಾಚಕರು ಈ ಲೇಖವನ್ನು ಓದುವಾಗ ಕ್ಷಣಕ್ಷಣಕ್ಕೆ ನೆನಪಿಗೆ ತಂದುಕೊಳ್ಳುವರೆಂದು ನಾವು ನಂಬಿದ್ದೇವೆ.

ಪ್ರಾಥಮಿಕ ಶಿಕ್ಷಣದ ಬಗ್ಗೆ ಕಮಿಟಿಯವರು ಸಾಮಾನ್ಯವಾಗಿ ಬರೆದದ್ದರ ಸಾರಾಂಶವೇನೆಂದರೆ :—" ಪ್ರಾಥಮಿಕ ಶಿಕ್ಷಣದ ಪ್ರಶ್ನವು ಬಹಳ ನಾಜೂಕಾದದ್ದು; ಹಿಂದೀ ರಾಷ್ಟ್ರವು ಈ ಬಗ್ಗೆ ಮೀರಿದ ಆಶೆಗಳುಳ್ಳದ್ದಾಗಿದೆ. ಇವುಗಳಲ್ಲಿ ಯೋಗ್ಯವಾದವುಗಳು ಕೈಗೂಡಲು ಪ್ರತಿಬಂಧವಾಗುವಂತೆ ತೋರುವ ಯಾವ ಸೂಚನೆಗಳನ್ನೂ ನಾವು ಮಾಡಲಿಚ್ಛಿಸುವದಿಲ್ಲ. ಇವು ಕೈಗೂಡಲು ಸದ್ಯಕ್ಕೆ ನಡೆದಿರುವ ಯಾವ ಪ್ರಯತ್ನಗಳೂ ಕಡಿಮೆಯಾಗಬೇಕೆಂದು ನಾವು ಸೂಚಿಸಲಾರೆವು. ಪ್ರಾಥಮಿಕ ಶಿಕ್ಷಣದಂಥ ಮಹತ್ವದ ವ್ಯವಸ್ಥೆಯಲ್ಲಿ ಸಹ ಸರಕಾರದವರು ಹಣದ ಅಡಚಣೆಯ ಮೂಲಕ ನಿರ್ವಾಹವಿಲ್ಲದ್ದರಿಂದ ಕೆಲವು ಕಾಲದ ಮುಟ್ಟಿಗಾದರೂ ಕೈ ಬಿಗಿಹಿಡಿದು ಖರ್ಚು ಮಾಡಲೇಬೇಕಾಗುವದೆಂಬದನ್ನು ನಾವು ಬಲ್ಲೆವು. ಈ ಸಂಗತಿಯನ್ನು ನೋಡಿ ನಮಗೂ ಬಹಳ ಅಸಮಾಧಾನವಾಗಿದೆ; ಆದರೆ ಈ ವರದಿಯಲ್ಲಿ ನಾವು ಮಾಡಿದಷ್ಟು ಸೂಚನೆಗಳ ಮೂಲಕ ಈ ಇಲಾಖೆಯ ಆಯುವ್ಯಯದಲ್ಲಿ ಹೆಚ್ಚುಕಡಿಮೆಯಾಗಿ ಸರಕಾರದ ಆರ್ಥಿಕ ಸ್ಥಿತಿಯು ಸುಧಾರಿಸಿದರೆ, ಸರಕಾರದವರು ಮಹತ್ವದ ಈ ಶಿಕ್ಷಣ ವ್ಯವಸ್ಥೆಯ ಬಗ್ಗೆ ಮಾಡಬೇಕಾಗಿರುವ ಕಾಟಕಸರನ್ನು ತೀವ್ರವೇ ನಿಲ್ಲಿಸಿ, ಪ್ರಾಥಮಿಕ ಶಿಕ್ಷಣವು ಮುಂದರಿಯಿಡಲು ಅವಶ್ಯವಿರುವ ಏರ್ಪಾಡುಗಳನ್ನು ಕೈಕೊಳ್ಳುವರೆಂದು ನಾವು ಆಶಿಸುತ್ತೇವೆ.

ಪ್ರಾಥಮಿಕ ಶಿಕ್ಷಣದ ಖರ್ಚು ಹಿಂದುಸ್ತಾನದ ಇತರ ಎಲ್ಲ ಪ್ರಾಂತಗಳಿಗಿಂತ ಮುಂಬಯಿ ಇಲಾಖೆಯಲ್ಲೇ ಹೆಚ್ಚಾಗಿದೆಯೆಂಬದನ್ನು ಯಾರೂ ಮರೆಯಲಾಗದು. ಇದಕ್ಕೆ ಅನೇಕ ಕಾರಣಗಳುಂಟು. ಅವುಗಳನ್ನೆಲ್ಲ ಪರೀಕ್ಷಿಸಿ ಈ ನಮ್ಮ ವರದಿಯನ್ನು ಬೆಳೆಸುವ ಕಾರಣವಿಲ್ಲ. ನಾವು ಮೇಲೆ ಮಾಡಿದ ವಿಧಾನವು ನಿರ್ವಿವಾದವಾದದ್ದೆಂಬದನ್ನು ಮಾತ್ರ ಹೇಳುವೆವು.

ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಯನ್ನು ಕುಂದಿಸದೆ ಅದಕ್ಕಾಗುವ ಖರ್ಚನ್ನು ಕಡಿಮೆ ಮಾಡಲೇಬೇಕಾಗಿರುವದು. ಸರಕಾರದ ಆರ್ಥಿಕ ಸ್ಥಿತಿಯನ್ನು ವಿಚಾರಿಸಲು ಖರ್ಚು ಕಡಿಮೆಯಾಗುವದು ಅವಶ್ಯವಾದದ್ದು. ಸರಕಾರದ ಖರ್ಚಿಗೂ ಉತ್ಪನ್ನಕ್ಕೂ ಮೀರಿದ ಅಂತರವಿರುವದು. ಇದನ್ನು ಬಾಧಿಗೂಡಿಸಿ ಜನಸಾಮಾನ್ಯರ ಹಿತವನ್ನು ಸಾಧಿಸಲಿಕ್ಕಾಗಿ ಪ್ರತಿಯೊಂದು ಖಾತೆಯವರೂ ತಮ್ಮ ಪಾಲಿಗೆ ಬರುವ ಕಷ್ಟವನ್ನು ಸಹಿಸಲಿಕ್ಕೆ ಸಿದ್ಧರಾಗಬೇಕಾಗಿದೆ.

ನಾಲ್ಕನೆಯ ಇಯತ್ತೆಯ ವರೆಗೆ ಶಿಕ್ಷಣ ಕೊಡಲಿಕ್ಕಾಗಿ ಮಾಡಿದ ವೆಚ್ಚದ ಬಹುತರ ಭಾಗವು ವ್ಯರ್ಥವಾಗಿ ಹೋಗುತ್ತಿರುವದೆಂದು ಹೇಳುವ ವಾಡಿಕೆಯುಂಟು; ಈ ಇಯತ್ತೆಯ ವರೆಗೆ ಮಾತ್ರ ಕಲಿತ ವಿದ್ಯಾರ್ಥಿಗಳು ಓದುಬರಹಗಳನ್ನು ತೀವ್ರವೇ ಮರೆತು ಬಿಡುವರೆಂದು ತಿಳುವಳಿಕೆಯಿದೆ. ಈ ಟೀಕೆಯು ಪೂರ್ಣವಾಗಿ ನಿಜವಿರದಿದ್ದರೂ, ಇದರಲ್ಲಿ ತಥ್ಯಾಂಶವಿರುವದು. ರಾತ್ರಿ ಶಾಲೆಗಳನ್ನೂ, ಕಂಟಿನ್ಯುಏಶನ್ ಸ್ಕೂಲುಗಳನ್ನೂ ಏರ್ಪಡಿಸಿ ಓದುಬರಹಗಳ ಜ್ಞಾನವು ಹೆಚ್ಚಾಗುವಂತೆ ಮಾಡುವದು ಇಷ್ಟವಾದದ್ದು. ಇದಕ್ಕಾಗಿ ದೊಡ್ಡ ಹಳ್ಳಿಗಳಲ್ಲಾದರೂ ಪುಸ್ತಕಾಲಯುಗಳನ್ನೂ ವಾಚನಾಲಯುಗಳನ್ನೂ ಸ್ಥಾಪಿಸುವದು ಅವಶ್ಯವು. ಆದರೆ ಸದ್ಯದ ಹಣದ ಅಡಚಣಿಯಮೂಲಕ ಈ ಬಗ್ಗೆ ನಾವು ನಿಶ್ಚಿತವಾದ ಸೂಚನೆಗಳನ್ನು ಮಾಡಲಾರೆವು. ಆದರೂ ಈ ಅಡಚಣಿಯು ದೂರವಾದಂತೆ ಸರಕಾರದವರೂ ಲೋಕಲ್ ಅಥಾರಿಟಿಯವರೂ ನಮ್ಮ ಈ ಸೂಚನೆಯನ್ನು ನೆನಪಿಗೆ ತಂದು ಯೋಗ್ಯವಾದ ಯೋಜನೆಗಳನ್ನು ಕೈಕೊಳ್ಳುವರೆಂದು ನಾವು ಆಶಿಸುತ್ತೇವೆ.

ಮುಂಬಯಿ ಇಲಾಖೆಯ ಪ್ರಾಥಮಿಕ ಶಿಕ್ಷಣದ ಧೋರಣವನ್ನು ಕುರಿತು ಟೀಕೆ ಮಾಡಲು ನಾವು ಸಮರ್ಥರಿಲ್ಲ. ಈ ವಿಷಯವು ವಿಸ್ತೃತವಾದದ್ದು. ಇದನ್ನು ಪೂರ್ಣವಾಗಿ ನಾವು ಪರೀಕ್ಷಿಸಿಲ್ಲ; ಈ ಬಗ್ಗೆ ನಮಗೆ ಸಾಕಷ್ಟು ಅವಧಿಯು ದೊರೆತಿಲ್ಲ. ಆದರೂ ಸದ್ಯದಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ಹೆಚ್ಚು ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡುವ ಕಡೆಗೆ ಲಕ್ಷ್ಯವು ಹೋಗಿರುವದೆಂದೂ ಹೆಚ್ಚು ಪರಿಣಾಮಕರವಾದ ಶಿಕ್ಷಣದ ಕಡೆಗೆ ಅಷ್ಟೇ ಲಕ್ಷ್ಯವು ಪೂರಯಿಸಲ್ಪಟ್ಟಿಲ್ಲವೆಂದೂ ನಮ್ಮ ಅಭಿಪ್ರಾಯವು. ಆದ್ದರಿಂದ ಪ್ರಾಥಮಿಕ ಶಿಕ್ಷಣವು ಹೆಚ್ಚು ಪರಿಣಾಮಕರವಾಗುವಂತೆ ಮಾಡುವದೇ ಸದ್ಯಕ್ಕೆ ತೀರ ಅಗತ್ಯದ ಪ್ರಶ್ನವೆಂದು ನಮಗೆ ತೋರುತ್ತದೆ. ಓದುಬರಹ, ಸ್ವಲ್ಪ ಗಣಿತ ಕಲಿಸುವದಷ್ಟೇ ಪ್ರಾಥಮಿಕ ಶಿಕ್ಷಣದ ಉದ್ದೇಶವೆಂದು ಕೆಲವರು ನಂಬುವರು. ಆದರೆ ನಾವು ಇದನ್ನು ಒಪ್ಪಲಾರೆವು. ಓದುಬರಹ ಗಣಿತ – ಇವು ಈ ಶಿಕ್ಷಣದ ಗುರಿಯಲ್ಲ! ಇವುಗಳ ಸಹಾಯದಿಂದ ಹೆಚ್ಚಿನ ಉದ್ದೇಶವನ್ನು ಸಾಧಿಸಬೇಕಾಗಿದೆ. ಯೋಗ್ಯವಾದ ಪ್ರಾಥಮಿಕ ಶಿಕ್ಷಣವನ್ನು ಪಡೆಯುವದರಿಂದ ವಿದ್ಯಾರ್ಥಿಯು ಒಳ್ಳೇ ನಾಗರಿಕನಾಗಬೇಕು. ಹಿಂದುಸ್ಥಾನದಂಥ ದೊಡ್ಡ ಜನಾಂಗದ ಜೀವನದಲ್ಲಿ ಪ್ರತಿಯೊಬ್ಬನೂ ತನ್ನ ಕರ್ತವ್ಯವನ್ನು ಮಾಡಬೇಕೆಂದು ಅವರಿಗೆ ಅನಿಸಬೇಕು. ತನ್ನ ದೇಶದ ಅಭ್ಯುದಯಕ್ಕೆ ತಾನೂ ಯಥಾಶಕ್ತಿ ನೆರವಾಗತಕ್ಕದ್ದೆಂದು ಆತನಿಗೆ ಹೊಳೆಯಬೇಕು. ಈ ದೇಶದ ರಾಜಕೀಯ ವ್ಯವಸ್ಥೆಯಲ್ಲಿ ಪ್ರಜೆಗಳಿಗೆ ತೀವ್ರವೇ ಹೆಚ್ಚಿನ ಹಕ್ಕುಗಳು ದೊರೆಯುವವು; ಪ್ರತಿನಿಧಿಗಳನ್ನು ಆರಿಸುವ ಹಕ್ಕು ಬಹುಜನರಿಗೆ ಬರುವದು. ಈ ಮೂಲಕ ಈ ದೇಶದ ಯುವಕರಲ್ಲಿ ವಿಚಾರ ಮಾಡುವ ಶಕ್ತಿಯು ಉಂಟಾಗಬೇಕು, ಆದರೆ ಈ ಬಗೆಯ ಶಿಕ್ಷಣವನ್ನು ಕೊಡ

ಲಿಕ್ಕೆ ಸದ್ಯದಲ್ಲಿ ಪ್ರಾಥಮಿಕ ಶಿಕ್ಷಕರಲ್ಲಿ ಬಹಳ ಜನರು ಯೋಗ್ಯತೆಯನ್ನು ಪಡೆದಿರುವದಿಲ್ಲ ವೆಂದು ನಮಗೆ ತೋರುತ್ತದೆ.

ಆದ್ದರಿಂದ ನಾವು ಪ್ರಾಥಮಿಕ ಶಿಕ್ಷಣದ ಬಗ್ಗೆ ಮಾಡುವ ಮೊದಲನೆಯ ಮಹತ್ವದ ಸೂಚನೆಯು ಯಾವದೆಂದರೆ- ಪ್ರಾಥಮಿಕ ಶಾಲೆಗಳಲ್ಲಿ ಕೊಡುವ ಶಿಕ್ಷಣವು ಮೇಲ್ಮರ ದ್ದಾಗಬೇಕು. ಈ ಮಾತು ಸಾಧ್ಯವಾಗಬೇಕಾದರೆ ಶಿಕ್ಷಕನಿಗೆ ಟ್ರೇನಿಂಗ ಕೊಡುವದು ಅವಶ್ಯವಾದದ್ದು. ಹಿಂದುಸ್ತಾನದ ಇತರ ಯಾವ ಪ್ರಾಂತದಲ್ಲಿಯೂ, ಈ ಇಲಾಖೆಯಲ್ಲಿ ಪ್ರಾಥಮಿಕ ಶಿಕ್ಷಕರ ಶಿಕ್ಷಣದ ಬಗ್ಗೆ ಆಗಿರುವಷ್ಟು ಮೇಲಾದ ವ್ಯವಸ್ಥೆಯು ಆಗಿರುವದಿ ಲ್ಲೆಂದು ನಮ್ಮ ಅಭಿಪ್ರಾಯವು. ಆದ್ದರಿಂದಲೇ ಈ ಇಲಾಖೆಯಲ್ಲಿ ಪ್ರಾಥಮಿಕ ಶಿಕ್ಷಣದ ಬಗ್ಗೆ ಇತರ ಇಲಾಖೆಗಳಿಗಿಂತ ಖರ್ಚು ಹೆಚ್ಚಾಗುತ್ತಿರುವದು. ಆದರೆ ಹೀಗೆ ಹೆಚ್ಚಾಗಿ ಖರ್ಚಾಗುತ್ತಿರುವ ಹಣಕ್ಕೆ ಪ್ರತಿಫಲವೂ ದೊರತಿದೆಯೆಂದು ಹೇಳಬಹುದು. ಆದಾಗ್ಯೂ ಪ್ರಾಥಮಿಕ ಶಿಕ್ಷಣದಲ್ಲಿ ಸುಧಾರಣೆಯು ಇನ್ನೂ ಬೇಕಾದಷ್ಟು ಆಗಬೇಕಾದದ್ದಿರುವದು.

ಈ ಇಲಾಖೆಯಲ್ಲಿ ಪ್ರಾಥಮಿಕ ಶಿಕ್ಷಕರಲ್ಲಿ ಹಲವು ತರಗತಿಗಳಾಗುವವು! ಈ ಸಂಗತಿಯು ಹೊರಗಿನವರಿಗೆ ಒಮ್ಮೆಲೆ ಹೊಳೆಯದು. ಇವರಲ್ಲಿ ಅನ್‌ಕ್ವಾಲಿಫಾಯಿಡ (ಯೋಗ್ಯತೆ ಹೊಂದದವರು), ಕ್ವಾಲಿಫಾಯಿಡ ಯೋಗ್ಯತೆ ಹೊಂದಿದವರು (ಅಂದರೆ ಮುಲ್ಕೀ ಪರೀಕ್ಷೆ ಪಾಸಾದವರು), ೧ನೇ ವರ್ಷದ ಶಿಕ್ಷಕರು, ೨ನೇ ವರ್ಷದ ಶಿಕ್ಷಕರು, ೩ನೇ ವರ್ಷದ ಶಿಕ್ಷಕರು ಎಂದು ಹಲವು ತರಗತಿಯ ಶಿಕ್ಷಕರಿರುವರು. ಇವರಲ್ಲಿ ಮೊದಲಿನ ಎರಡು ತರದ ಶಿಕ್ಷಕರು ಇಲ್ಲದಂತಾಗಬೇಕೆಂದು ನಮ್ಮ ಅಭಿಪ್ರಾಯವು. ಅನ್‌ಕ್ವಾಲಿಫಾಯಿಡ (ಅಂದರೆ ಯೋಗ್ಯತೆ ಹೊಂದದ) ಶಿಕ್ಷಕರು ಕೊಡುವ ಶಿಕ್ಷಣಕ್ಕೆ ಶಿಕ್ಷಣ ದೃಷ್ಟಿಯಿಂದ ಸ್ವಲ್ಪವೂ ಮಹತ್ವವಿಲ್ಲೆಂದು ನಮಗೆ ತೋರುತ್ತದೆ. ಈ ತರದ ಶಿಕ್ಷಕರ ಸಂಖ್ಯೆಯು ತೀವ್ರವಾಗಿ ಕಡಿಮೆಯಾಗುತ್ತಿರುವದೆಂದು ತಿಳಿದು ಬರುತ್ತದೆ. ಇಂಥ ಶಿಕ್ಷಕರು ಕಾಯಮ ಶಿಕ್ಷಕರಾಗಿ ನೇಮಿಸಲ್ಪಡಲು ಅನರ್ಹರೆಂದು ಅಕ್ಟಿಂಗ ಡಾಯರೆಕ್ಟರ ಆಫ ಪಬ್ಲಿಕ ಇನ್ಸಟ್ರಕ್ಶನರವರ ಮತವಿದೆ. ಈ ಅಭಿಪ್ರಾಯವು ನಮಗೆ ಸಮ್ಮತವು. ಆದರೆ ಇನ್ನೂ ಕೆಲವು ಕಾಲದವರೆಗೆ ಇಂಥ ಶಿಕ್ಷಕರನ್ನು ಪ್ರಸಂಗ ವಿಶೇಷದಲ್ಲಿ ಹಂಗಾಮಿಯಾಗಿ (ವ್ಹೇಕನ್ಸಿಗಳಲ್ಲಿ) ನಿಯಮಿಸಬೇಕಾಗಬಹುದೆಂದು ನಮಗೆ ತೋರುತ್ತದೆ.

ಇನ್ನು ಕ್ವಾಲಿಫಾಯಿಡ ಅಂದರೆ "ಯೋಗ್ಯತೆ ಹೊಂದಿದ"ವರೆಂದು ನಿರ್ದೇಶಿಸಲ್ಪಟ್ಟ ಶಿಕ್ಷಕರ ಬಗ್ಗೆ ವಿಚಾರಿಸೋಣ. ಇವರು ಮುಲ್ಕೀಪರೀಕ್ಷೆಯನ್ನು ಪಾಸಾಗಿರುವರು. ಆದರೆ ಈ ಯೋಗ್ಯತೆಯು ನಿಜವಾಗಿ ತಿಳಿದು ನೋಡಲು ಯೋಗ್ಯತೆಯಲ್ಲವೆಂದೇ ನಾವು ಅಭಿ ಪ್ರಾಯಪಡಬೇಕಾಗಿದೆ. ಕಲಿಸುವ ಕಲೆಯು ಅಂಶತಃ ಹುಟ್ಟುಗುಣವು; ಟ್ರೇನಿಂಗಿ ನಿಂದಲೂ ಇವನ್ನು ಅಂಶತಃ ಪಡೆಯಬಹುದು. ಇದು ಹುಟ್ಟುಗುಣವಾಗಿದ್ದವರಿಗೆ

ಸಹ ಟ್ರೇನಿಂಗು ಅವಶ್ಯವೆಂದೇ ಹೇಳಬಹುದು. ಮುಲ್ಕೀ ಪರೀಕ್ಷೆ ಪಾಸಾದವನು ಇತರರಿಗೆ ವಿದ್ಯೆಯ ಆರಂಭದ ನಾಲ್ಕು ಮಾತುಗಳನ್ನು ಕಲಿಸಲಿಕ್ಕೆ ಅರ್ಹನಿರಬಹುದು. ಇವನಿಗೆ ಟ್ರೇನಿಂಗ ಕೊಡದಿದ್ದ ಪಕ್ಷಕ್ಕೆ ಇವನು ವಿದ್ಯಾರಂಭವನ್ನು ಮಾತ್ರ ಮಾಡಿಸಬಹುದು; ಇದಕ್ಕೂ ಹೆಚ್ಚಿನದು ಇವನಿಂದ ಅಸಾಧ್ಯವು. ಆದರೆ ಮುಂದಾಗುತ್ತಿರುವ ಈ ದೇಶದ ಪ್ರಜೆಗಳ ಗರಜುಗಳನ್ನು ಈ ವಿದ್ಯಾರಂಭವು ಮಾತ್ರ ಪೂರಯಿಸಲಾರದು. ಆದ್ದರಿಂದ ಪ್ರಾಥಮಿಕ ಶಾಲೆಗಳಲ್ಲಿ ಕೆಲಸಮಾಡುತ್ತಿರುವ ಪ್ರತಿಯೊಬ್ಬ ಶಿಕ್ಷಕನು ತೀರ ಕಡಿಮೆಯೆಂದರೆ ಒಂದನೇ ವರ್ಷದ ಟ್ರೇಂಡನಾದರೂ ಇರಲೇಬೇಕೆಂದು ತಮ್ಮ ಧೋರಣವಿರುವದೆಂದು ಸರಕಾರದವರು ಪ್ರಕಟಪಡಿಸಬೇಕೆಂದು ನಾವು ಸೂಚಿಸುತ್ತೇವೆ. ಆದರೆ ಇಲಾಖೆಯ ಕಠಿಣವಾದ ಆರ್ಥಿಕ ಸ್ಥಿತಿಯ ಸದ್ಯದ ಬಿಕ್ಕಟ್ಟಿನ ಪ್ರಸಂಗದಲ್ಲಿ ಇನ್ನೂ ಎಷ್ಟೋ ವರ್ಷಗಳವರೆಗೆ ಇದನ್ನು ಅಮಲಿನಲ್ಲಿ ತರುವದು ಅಸಾಧ್ಯವೆಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಇನ್ನೂ ಹಲವು ವರ್ಷಗಳವರೆಗೆ ಟ್ರೇನಿಂಗ ಹೊಂದದಿರುವ ಶಿಕ್ಷಕರನ್ನೇ ಶಾಲೆಗಳಲ್ಲಿ ನೇಮಿಸಿಕೊಂಡ ಹೊರತು ಗತ್ಯಂತರವಿಲ್ಲ. ಆದರೆ ಈ ಶಿಕ್ಷಕರನ್ನು "ಅಂಟ್ರೇಂಡರು" ಎಂದು ಕರೆಯಬೇಕು. ಇವರನ್ನು ಕ್ವಾಲಿಫಾಯಿಡ ಅಂದರೆ ಯೋಗ್ಯತೆ ಹೊಂದಿದವರು ಎಂದು ಕರೆಯುವದು ನಮಗೆ ಸರಿಯೆನಿಸುವದಿಲ್ಲ. ಇವರಿಗೆ ಈ ಹೆಸರು ಅನ್ವರ್ಥಕವಾಗುವದಿಲ್ಲ; ಇವರನ್ನು ಈ ಹೆಸರಿನಿಂದ ಕರೆಯುವದರಿಂದ ಶಿಕ್ಷಣ ಕೊಡಲಿಕ್ಕೆ ಇವರಲ್ಲಿ ಯೋಗ್ಯತೆ ಬಂದಿರುವದಿಲ್ಲವೆಂಬ ಸಂಗತಿಯಕಡೆಗೆ ಲಕ್ಷ್ಯತಪ್ಪಿ ಹೋಗುವದೆಂದು ನಮಗೆ ತೋರುತ್ತದೆ.

ಸದ್ಯದ ಬೇರೆ ಬೇರೆ ತರಗತಿಗಳ ಶಿಕ್ಷಕರನ್ನು ನಿಯಮಿತವಾದ ಪ್ರಮಾಣಕ್ಕಿಂತ ಹೆಚ್ಚಾಗಿ ನೇಮಿಸಬಾರದೆಂದು ನಿರ್ಬಂಧವಿರುವದು. ನಮ್ಮ ಇಲಾಖೆಯು ಸದ್ಯದ ಆರ್ಥಿಕ ಪರಿಸ್ಥಿತಿಯಲ್ಲಿ ಈ ನಿರ್ಬಂಧವನ್ನು ಏರ್ಪಡಿಸದಿದ್ದರೆ ನಡೆಯುವಂತಿಲ್ಲ. ಹೀಗೆ ಮಾಡಿರುವದರಿಂದ ಶಿಕ್ಷಣವು ಇಂತಿಷ್ಟು ಮಟ್ಟಿಗಾದರೂ ಪರಿಣಾಮಕರವಾಗಿರಬೇಕೆಂಬದನ್ನೂ ಪ್ರಾಥಮಿಕ ಶಿಕ್ಷಣದ ಖರ್ಚು ಇಂತಿಷ್ಟು ಮರ್ಯಾದೆಯನ್ನು ಮೀರದಂತಿರಬೇಕೆಂಬದನ್ನೂ ಸಾಧಿಸಿಕೊಂಡಂತಾಗಿದೆ. ವಾಸ್ತವಿಕವಾಗಿ ನೋಡಲು ಈ ನಿರ್ಬಂಧದ ಬಗ್ಗೆ ಎದುರು ಹೇಳುವಂತಿಲ್ಲ. ಆದರೆ ಇದರಲ್ಲಡಗಿರುವ ತತ್ವವನ್ನು ಕುರಿತು ವಿಚಾರಿಸಲು ಅದು ಪ್ರಶಸ್ತವೆನಿಸದು. ಈ ದೇಶದ ಜನರಿಗೆ ಪ್ರಾಥಮಿಕ ಶಿಕ್ಷಣದ ಮಹತ್ವವು ಎಷ್ಟಿರುವದೆಂಬದನ್ನು ತಿಳಿದು ನೋಡಿದರೆ, ಸರಕಾರದವರೂ ಲೋಕಲ್ ಅಥಾರಿಟಿಗಳೂ ಈ ಶಾಲೆಗಳಲ್ಲಿರುವ ನೂರು ಶಿಕ್ಷಕರಲ್ಲಿ ನೂರು ಜನರೂ ಟ್ರೇಂಡರಾಗಿರುವವರೆಗೆ ಸಮಾಧಾನ ವೃತ್ತಿಯನ್ನು ತಳೆಯಲಾಗದೆಂದು ನಮಗೆ ತೋರುತ್ತದೆ.

ಎರಡನೆಯ ಇಲ್ಲವೆ ಮೂರನೆಯ ವರ್ಷದ ಟ್ರೇನಿಂಗ ಸರ್ಟಫಿಕೇಟು ಪಡೆದೊಡನೆಯೆ ಆಯಾ ತರಗತಿಯ ಶಿಕ್ಷಕನು ಹೆಚ್ಚಿನ ದರದ ಪಗಾರಕ್ಕೆ ಅರ್ಹನೆಂದು ಎಣಿಸುವ

ಅವಶ್ಯಕತೆಯು ಇಲ್ಲೆಂದು ಆಕ್ಟಿಂಗ ಅಸಿಸ್ಟಂಟ ಡಿರೆಕ್ಟರರು ಅಭಿಪ್ರಾಯಪಟ್ಟಿರುವರು. ಇದು ನಮಗೂ ಸಮ್ಮತವು. ಈ ಟ್ರೇನಿಂಗು ಆತನಿಗೆ ಸರಕಾರದ (ಪ್ರಜೆಗಳ) ಖರ್ಚಿನಿಂದ ದೊರೆತಿರುವದು. ಪ್ರಜೆಗಳ ಖರ್ಚಿನಿಂದ ಹೆಚ್ಚಿನ ಶಿಕ್ಷಣವನ್ನು ಪಡೆದವನಿಗೆ ದೊರೆಯುತಕ್ಕದ್ದಕ್ಕಿಂತ ಹೆಚ್ಚು ಸಂಬಳವನ್ನು ಪ್ರಜೆಗಳ ಹಣದಿಂದ ಕೊಡುವದು ನಿಷ್ಕಾರಣವಾದದ್ದೆಂದು ನಮಗೆ ತೋರುತ್ತದೆ. ೨ನೆಯ ಹಾಗು ೩ನೆಯ ವರ್ಷದ ಟ್ರೇನಿಂಗನ್ನು ಪಡೆದ ಶಿಕ್ಷಕರಲ್ಲಿ ನೂರರಲ್ಲಿ ಇಂತಿಷ್ಟು ಜನರು ಮಾತ್ರ ಹೆಚ್ಚಿನ ದರದ ಪಗಾರವನ್ನು ಪಡೆಯಬಹುದೆಂದೂ ಈ ಬಗ್ಗೆ ನಿಶ್ಚಿತವಾದ ನೂರರ ಪ್ರಮಾಣದ ಸ್ಥಳಗಳಲ್ಲಿ ತೆರವು ಆದ ಬಳಿಕ ಮಾತ್ರ ಇವರಿಗೆ ಹೆಚ್ಚಿನ ಪಗಾರದ ಸ್ಥಳವು ದೊರೆಯಬೇಕೆಂದೂ ನಮ್ಮ ಅಭಿಪ್ರಾಯವು.

ಈ ನಿರ್ಬಂಧಕ್ಕೊಳಪಡಿಸಿ ಸರಕಾರದವರು ತಮ್ಮ ಧೋರಣವನ್ನು ವ್ಯಕ್ತಗೊಳಿಸಿದ ಕೂಡಲೆ ಈ ನೂರರ ಪ್ರಮಾಣಕ್ಕೆ ತಕ್ಕಂತೆ ಟ್ರೇನಿಂಗ ಸಂಸ್ಥೆಗಳಿಂದ ಶಿಕ್ಷಕರು ಹೊರಡುವ ವ್ಯವಸ್ಥೆ ಮಾಡುವ ಏರ್ಪಾಡುಗಳನ್ನು ಅಮಲಿನಲ್ಲಿ ತರಬಹುದು. ಈ ಕಾರ್ಯಕ್ಕೆ ಹೆಚ್ಚೆಚ್ಚು ಹಣದ ಅನುಕೂಲವು ಒದಗಿದಂತೆ ಇದನ್ನು ಅಮಲಿನಲ್ಲಿ ತರಬೇಕಾಗುವದೆಂಬದು ಸ್ಪಷ್ಟವು. ಸದ್ಯಕ್ಕೆ ೨ನೆಯ ಹಾಗು ೩ನೆಯ ವರ್ಷದ ಟ್ರೇಂಡರು ಹೊರಡುವದನ್ನು ಪೂರ್ಣವಾಗಿ ನಿಲ್ಲಿಸಿದರೆ ಈ ಕಾರ್ಯವು ತೀವ್ರವಾಗಿ ಸಿದ್ಧವಾಗುವದು. ಆದರೆ ಇದು ಸರಕಾರದ ಧೋರಣವನ್ನೂ ಅವರಿಗಿರುವ ಹಣದ ಅನುಕೂಲತೆಯನ್ನೂ ಅವಲಂಬಿಸುವದು. ಪ್ರಾಥಮಿಕ ಶಾಲೆಗಳಿಗೆ ಅವಶ್ಯವಿರುವ ಎಲ್ಲ ಶಿಕ್ಷಕರನ್ನು ಕೂಡಲೇ ಟ್ರೇಂಡರನ್ನಾಗಿ ಮಾಡಲಿಕ್ಕೆ ಸದ್ಯದ ಟ್ರೇನಿಂಗ ಸಂಸ್ಥೆಗಳಲ್ಲಿ ಸ್ಥಳವಿರಲಾರದೆಂದು ತೋರುತ್ತದೆ. ಸದ್ಯಕ್ಕೆ ಈ ಸ್ಥಳಾನುಕೂಲತೆಯನ್ನು ಒದಗಿಸಬೇಕೆಂದು ನಾವು ಸೂಚಿಸುವದಿಲ್ಲ. ಆದರೆ ಈ ಇಲಾಖೆಯಲ್ಲಿ ಶಿಕ್ಷಣವನ್ನು ಅಭಿವೃದ್ಧಿಗೊಳಿಸಲು ಹಣದ ಅನುಕೂಲತೆಯು ಉಂಟಾದೊಡನೆಯೇ ಅದನ್ನು ಪ್ರಾಥಮಿಕ ಶಿಕ್ಷಕರ ಶಿಕ್ಷಣ ಸಂಸ್ಥೆಗಳನ್ನು ಹೆಚ್ಚಿಸುವದರಲ್ಲಿಯೆ ಮೊದಲು ಉಪಯೋಗಿಸ ತಕ್ಕದ್ದೆಂದು ಮಾತ್ರ ನಾವು ಸೂಚಿಸುತ್ತೇವೆ.

ಆದರೆ ಕೂಡಲೆ ಟ್ರೇನಿಂಗ ಸಂಸ್ಥೆಗಳನ್ನು ಬೆಳಸಿ, ಮೂರೂ ವರ್ಷಗಳ ಶಿಕ್ಷಕರ ಸಂಖ್ಯೆಯನ್ನು ಯಾವ ಪ್ರಮಾಣದಿಂದಲೇ ಹೆಚ್ಚಿಸುವದಾದರೂ ಹೆಚ್ಚು ಹಣವು ಅತ್ಯವಶ್ಯವಾದದ್ದು. ಆದ್ದರಿಂದ ಸದ್ಯದ ಅಡಚಣಿಯ ಸಮಯದಲ್ಲಿ ನಾವು ಟ್ರೇಂಡ ಶಿಕ್ಷಕರ ಸಂಖ್ಯೆಯನ್ನು ಹೆಚ್ಚಿಸುವ ಯಾವ ಏರ್ಪಾಡುಗಳ ಬಗ್ಗೆಯೂ ಸೂಚಿಸಲಿಚ್ಛಿವದಿಲ್ಲ. ಇನ್ನು ಸದ್ಯಕ್ಕೆ ಕೊಡುತ್ತಿರುವ ಸಂಬಳದ ದರಗಳನ್ನು ಕಡಿಮೆ ಮಾಡಿದರೆ ಮಾತ್ರ ಹಣವು ಉಳಿಯುವದು. ಶಿಕ್ಷಣ ಸಂಸ್ಥೆಗಳನ್ನು ಹೆಚ್ಚಿಸದಿದ್ದರೂ ಸರಕಾರದ ಸಾಂಪತ್ತಿಕ ಸ್ಥಿತಿಯ ಮೂಲಕ ಶಿಕ್ಷಕರ ಸಂಬಳವನ್ನು ಕಡಿಮೆ ಮಾಡುವದು ಅವಶ್ಯವಿರುವದೆಂದು ನಾವು ಸೂಚಿಸಲೇ ಬೇಕಾಗುತ್ತಿತ್ತು. ಶಿಕ್ಷಣ ವ್ಯವಸ್ಥೆಯಲ್ಲಿ ಟ್ರೇಂಡ

ಶಿಕ್ಷಕರ ಸಂಖ್ಯೆಯನ್ನು ಹೆಚ್ಚಿಸುವದು ಅತಿಶಯ ಮಹತ್ವದ ಸಂಗತಿಯೆಂದು ನಾವು ಎಣಿಸುತ್ತೇವೆ. ಈ ಮೂಲಕ ಸದ್ಯದ ಸಂಬಳದ ದರಗಳನ್ನು ಕಡಿಮೆ ಮಾಡುವದು ಅತ್ಯಾವಶ್ಯಕವು. ಪ್ರತಿಯೊಂದು ತರಗತಿಯ ಶಿಕ್ಷಕರ ಪಗಾರವು ಕೆಳಗೆ ನಾವು ಕೊಡುವಂತೆ ಇರಬೇಕೆಂದು ನಾವು ಶಿಫಾರಸು ಮಾಡುತ್ತೇವೆ.

ಡಿಸ್ಟ್ರಿಕ್ಟ ಲೋಕಲ್ ಬೋರ್ಡುಗಳು.

		ಸದ್ಯದ ದರ. ರೂ.	ಹೊಸ ದರ. ರೂ.
ಅನ್ ಕ್ವಾಲಿಫಾಯಿಡ ಶಿಕ್ಷಕರು		೧೫	೧೫
ಕ್ವಾಲಿಫಾಯಿಡ	,,	೨೦–೧/೨–೨೫–೧/೩–೩೦	೨೦
೧ನೆಯ ವರ್ಷದ	,,	೨೫–೧/೩–೩೫–೧–೪೦	೨೦–೧/೨–೨೫–೧/೩–೩೦
೨ನೆಯ ವರ್ಷದ	,,	೩೦–೧/೩–೩೫–೧–೫೦	೨೫–೧/೩–೩೫–೧–೪೦
೩ನೆಯ ವರ್ಷದ	,,	೩೫–೧–೬೦	೩೦–೧/೩–೩೫–೧–೫೦

ಮ್ಯುನಿಸಿ ಪಾಲಿಟಿಗಳು

		ಸದ್ಯದ ದರ. ರೂ.	ಹೊಸ ದರ. ರೂ.
ಅನ್ ಕ್ವಾಲಿಫಾಯಿಡ ಶಿಕ್ಷಕರು		೨೦	೨೦
ಕ್ವಾಲಿಫಾಯಿಡ	,,	೨೫–೧/೫–೩೦	೨೫
೧ನೆಯ ವರ್ಷದ	,,	೩೦–೧/೨–೩೫–೧/೩–೪೦	೨೫–೧/೫–೩೦
೨ನೆಯ ವರ್ಷದ	,,	೩೫–೧/೩–೪೫–೧–೫೦	೩೦–೧/೨–೩೫–೧/೩–೪೦
೩ನೆಯ ವರ್ಷದ	,,	೪೦–೧/೨–೫೦–೧–೬೦	೩೫–೧/೩–೪೫–೧–೫೦

ಸದ್ಯಕ್ಕೆ ಹಂಗಾಮಿಗೆಂದು ಮಾಡಿರುವ ಕಡಿಮೆ ಪಗಾರವನ್ನು ಲೆಕ್ಕಕ್ಕೆ ಎಣಿಸದೆ, ಹಾಗು **ಹೆಚ್ಚು ಜನ ಶಿಕ್ಷಕರನ್ನು ಟ್ರೇಂಡ ಮಾಡುವದನ್ನು** ಎಣಿಸದೆ ನಾವು ಸೂಚಿಸಿರುವ ಪಗಾರದ ದರಗಳನ್ನು ಅಮಲಿನಲ್ಲಿ ತಂದರೆ ಪ್ರತಿವರ್ಷ ೨೮ ಲಕ್ಷ ರೂ. ಉಳಿತಾಯವಾಗುವದು. ಆದರೆ ನಾವು ಮೇಲೆ ಹೇಳಿದಂತೆ ಶಿಕ್ಷಣ ವ್ಯವಸ್ಥೆಯಲ್ಲಿ ಸುಧಾರಣೆಯಾಗುವದು ಅತ್ಯವಶ್ಯವಿರುವದರಿಂದ ಈ ಹಣವನ್ನು ಉಳಿಸಿಕೊಳ್ಳದೆ ಶಿಕ್ಷಕಶಿಕ್ಷಣಾಲಯಗಳ ಅಭಿವೃದ್ಧಿಗೆ ಉಪಯೋಗಿಸುವದು ವಿಹಿತವೆಂದು ನಮ್ಮ ಅಭಿಪ್ರಾಯವು. ಪ್ರತಿ ನೂರರಲ್ಲಿ ೬೦ಜನ ೧ನೆಯ ವರ್ಷದ ಶಿಕ್ಷಕರನ್ನೂ, ೨೦ಜನ ೨ನೆಯ ವರ್ಷದ ಶಿಕ್ಷಕರನ್ನೂ ೧೦ ಜನ ೩ನೆಯ ವರ್ಷದ ಶಿಕ್ಷಕರನ್ನೂ ಸಿದ್ಧ ಪಡಿಸಬಹುದು; ಇಲ್ಲವೆ ಎಲ್ಲ ಶಿಕ್ಷಕರು ೧ನೆಯ ವರ್ಷದ ಟ್ರೇಂಡರಾಗುವವರೆಗೆ ಸದ್ಯಕ್ಕೆ ಹೆಚ್ಚಿನ ಶಿಕ್ಷಣವನ್ನು ನಿಲ್ಲಿಸಿಬಿಡಬಹುದು. ಆದರೆ ಈ ಪ್ರಶ್ನವು ಸರಕಾರದ ಶಿಕ್ಷಣದ ಧೋರಣಕ್ಕೆ ಸಂಬಂಧವುಳ್ಳದ್ದು; ಈ ಬಗ್ಗೆ ಅಭಿಪ್ರಾಯ ಕೊಡಲು ನಾವು ಅರ್ಹರಲ್ಲ. ಇನ್ನು ಪ್ರಾಥಮಿಕ ಶಾಲೆಗಳ ಮೇಲಿನ ಇಯತ್ತೆಗಳನ್ನು ೧ನೆಯ ವರ್ಷದ ಟ್ರೇಂಡರಾದ ಶಿಕ್ಷಕರು ಕಲಿಸಲಾರರೆಂದು

ನಮಗೆ **ತಿಳಿಯಬಂದಿದೆ.** ಆದ್ದರಿಂದ ನಾವು ಮೇಲೆ ಸೂಚಿಸಿದ ಪ್ರಮಾಣದಲ್ಲಿ ೧ನೆಯ, ೨ನೆಯ ಹಾಗು ೩ನೆಯ ವರ್ಷದ ಟ್ರೇಂಡರನ್ನು ಸಿದ್ಧಪಡಿಸಬೇಕೆಂದು ನಾವು ಶಿಫಾರಸು ಮಾಡುತ್ತೇವೆ.” .

ಕಮಿಟಿಯವರ ಮೇಲಿನ ವಿಧಾನಗಳಲ್ಲಿ ನಮ್ಮ ಇಲಾಖೆಯಲ್ಲಿ ಆಗುತ್ತಿರುವ ಪ್ರಾಥಮಿಕ ಶಿಕ್ಷಣದ ಖರ್ಚು ಹಿಂದುಸ್ತಾನದ ಇತರ ಯಾವತ್ತು ಇಲಾಖೆಗಳಲ್ಲಿಗಿಂತ ಹೆಚ್ಚು ಇರುವದೆಂಬದು ನಿರ್ವಿವಾದವಾದದ್ದು. ೧೯೨೯ ರಲ್ಲಿ ಬಾದಶಹರಿಂದ ನಿಯಮಿಸಲ್ಪಟ್ಟ ಹಿಂದುಸ್ತಾನದ ಸ್ಟ್ಯಾಟುಟರಿ ಕಮಿಶನ್‌ದವರು ಬ್ರಿಟಿಷ್ ಹಿಂದುಸ್ತಾನದ ಶಿಕ್ಷಣದ ಅಭಿವೃದ್ಧಿಯನ್ನು ಕುರಿತು ತಮಗೆ ರಿಪೋರ್ಟ ಮಾಡಲು ಒಂದು ಸಹಾಯಕ ಕಮಿಟಿಯನ್ನು ನೇಮಿಸಿದ್ದರು. ಈ ಸಹಾಯಕ ಕಮಿಟಿಯ ಚೇರಮನ್ನರು ಸರ ಫಿಲಿಪ್ ಹಾರ್ಟಾಗ ಸಿ. ಐ. ಇ. ಎಂಬ ಸದ್ಗೃಹಸ್ಥರಿದ್ದರು. ಆದ್ದರಿಂದ ಈ ಕಮಿಟಿಯು ಹಾರ್ಟಾಗ ಕಮಿಟಿಯೆಂದು ಹೆಸರಾಗಿರುವದು. ಈ ಕಮಿಟಿಯವರು ಬ್ರಿಟಿಶ ಹಿಂದುಸ್ತಾನದ ಪ್ರಾಥಮಿಕ ಶಿಕ್ಷಣದ ಹಲವು ಅಂಗಗಳ ಬಗ್ಗೆ ಬಹು ವಿಧವಾದ ಮಾಹಿತಿಯನ್ನು ಕಲೆಹಾಕಿ ಅನೇಕ ಕೋಷ್ಟಕಗಳನ್ನು ಸಿದ್ಧಪಡಿಸಿ ತಮ್ಮ ರಿಪೋರ್ಟನಲ್ಲಿ ಕೊಟ್ಟಿರುವರು. ಇವುಗಳಿಂದ ಕೆಲವನ್ನು ಉದಾಹರಿಸಿ ನಮ್ಮ ವಾಚಕರ ಮಾಹಿತಿಗಾಗಿ ಇಲ್ಲಿ ಕೊಡುವೆವು. ಮುಂಬಯಿ ಇಲಾಖೆಯಲ್ಲಿ ಪ್ರಾಥಮಿಕ ಶಿಕ್ಷಣದ ಬಗ್ಗೆ ಪ್ರತಿವರ್ಷ ಎಷ್ಟು ಹಣವು ಖರ್ಚಾಗುತ್ತಿರುವದೆಂಬದೂ, ಇದು ಕಳೆದ ವರ್ಷಗಳಲ್ಲಿ ಯಾವ ಪ್ರಮಾಣದಿಂದ ಬೆಳೆದಿರುವದೆಂಬದೂ, ಮಿಕ್ಕ ಪ್ರಾಂತಗಳಲ್ಲಿ ಈ ಖರ್ಚಿನ ಬೆಳವಣಿಗೆಯ ಪ್ರಮಾಣವು ಹ್ಯಾಗೆ ಇರುವದೆಂಬದೂ ಮುಂದಿನ ಕೋಷ್ಟಕದಿಂದ ಗೊತ್ತಾಗುವದು.

ಪ್ರಾಥಮಿಕ ಶಿಕ್ಷಣದಬಗ್ಗೆ ಒಟ್ಟು ಖರ್ಚು
(ಲಕ್ಷ ರೂಪಾಯಿಗಳಲ್ಲಿ)

ಪ್ರಾಂತ	೧೯೧೭	೧೯೨೨	೧೯೨೭
ಮದ್ರಾಸ	೭೦.೧೩	೧೦೬.೪೯	೧೭೦.೫೧
ಮುಂಬಯಿ	೬೩.೪೮	೧೪೯.೫೩	೧೯೮.೮೩
ಬಂಗಾಲ	೪೪.೫೨	೫೪.೦೮	೬೭.೬೧
ಸಂ. ಪ್ರಾಂತ	೨೮.೮೦	೬೭.೪೨	೮೪.೩೧
ಪಂಜಾಬ	೧೯.೬೫	೩೪.೩೨	೪೨.೩೪
ಬ್ರಹ್ಮದೇಶ	೧೦.೩೬	೧೪.೩೯	೨೦.೦೭
ಬಿಹಾರಓಡಿಸಾ	೨೭.೬೨	೩೬.೧೫	೫೫.೮೬
ಮಧ್ಯಪ್ರಾಂತ	೧೬.೧೫	೨೮.೨೨	೩೨.೬೧
ಆಸಾಮ	೭.೫೧	೯.೧೨	೧೧.೧೮
ಬ್ರಿ. ಹಿಂದೂಸ್ತಾನ	೨೯೩.೧೪	೫೦೯.೦೮	೬೯೫.೨೨

ಪ್ರಾಥಮಿಕ ಶಿಕ್ಷಣಕ್ಕಾಗಿ ಆಗುತ್ತಿರುವ ಒಟ್ಟು ಖರ್ಚಿನಲ್ಲಿ ಬಹು ದೊಡ್ಡ ಭಾಗವು ಪ್ರಾಥಮಿಕ ಶಿಕ್ಷಕರ ಪಗಾರದ ಬಗ್ಗೆಯೇ ಇರುವದುಂಟು. ಆದ್ದರಿಂದ ಬೇರೆ ಬೇರೆ ಪ್ರಾಂತಗಳಲ್ಲಿ ಪ್ರಾಥಮಿಕ ಶಿಕ್ಷಕರಿಗೆ ದೊರೆಯುವ ಪಗಾರದ ಸರಾಸರಿಯು ಕೆಳಗಿನ ಕೋಷ್ಟಕದಲ್ಲಿ ತೋರಿಸಿದೆ. ಇದರಿಂದ ಮುಂಬಯಿ ಇಲಾಖೆಯ ಪ್ರಾಥಮಿಕ ಶಿಕ್ಷಕರ ಪಗಾರದ ಸರಾಸರಿಯು ಇತರ ಪ್ರಾಂತಗಳ ಪ್ರಾಥಮಿಕ ಶಿಕ್ಷಕರ ಪಗಾರದ ದಿಂದ ಎಷ್ಟು ಹೆಚ್ಚಿರುವದೆಂಬದು ಸ್ಪಷ್ಟವಾಗುವದು.

ಹುಡುಗರ ಹಾಗು ಹುಡಿಗೆಯರ ಪ್ರಾಥಮಿಕ ಸಾಲೆಗಳ ಶಿಕ್ಷಕರ ತಿಂಗಳ ಪಗಾರದ ಸರಾಸರಿಯು

				ರೂ.	ಆ.
ಮದ್ರಾಸ	...	...	...	೧೫	೪
ಮುಂಬಯಿ	...	...	...	೪೭	೦
ಬಂಗಾಲ	...	...	...	೮	೬
ಸಂ. ಪ್ರಾಂತ	...	...	...	೧೮	೮
ಪಂಜಾಬ	...	...	...	೨೫	೮
ಬ್ರಹ್ಮದೇಶ	...	...	...	೩೩	೧
ಬಿಹಾರಒಡಿಸಾ	...	...	...	೧೧	೫
ಮಧ್ಯಪ್ರಾಂತ	...	...	...	೨೪	೮
ಅಸಾಮ	...	...	...	೧೪	೪

ಆದರೆ ಮುಂಬಯಿ ಹಾಗು ಮದ್ರಾಸ ಪ್ರಾಂತಗಳಲ್ಲಿ ಅಪ್ಪರಪ್ರಾಯಮರಿ ಶಾಲೆಗಳಲ್ಲಿ ೮ ವರುಷದ ಶಿಕ್ಷಣವು ದೊರೆಯುವದು. ಸಾಧಾರಣವಾಗಿ ಮಿಕ್ಕ ಎಲ್ಲ ಪ್ರಾಂತಗಳಲ್ಲಿ ಪ್ರಾಯಮರಿ ಸಾಲೆಗಳಲ್ಲಿ ೫ ವರ್ಷದವರೆಗೆ ಮಾತ್ರ ಶಿಕ್ಷಣದೊರೆಯುವದುಂಟು. ಮುಂಬಯಿಯಲ್ಲಿ ಮೇಲಿನ ತರಗತಿಯ ಶಾಲೆಗಳು ಪ್ರಾಥಮಿಕ ಶಾಲೆಗಳಲ್ಲಿ ಸಮಾವೇಶವಾಗಿರುವದರಿಂದ ಈ ಪ್ರಾಂತದ ಶಿಕ್ಷಕರ ತಿಂಗಳ ಪಗಾರದ ಸರಾಸರಿಯು ವಿಶೇಷ ಹೆಚ್ಚಾಗಿರುವದು. ಆದಾಗ್ಯೂ ಶಿಕ್ಷಕರ ಸಂಬಳದ ದರಗಳು ಈ ಇಲಾಖೆಯಲ್ಲಿ ವಿಶೇಷ ಹೆಚ್ಚಾಗಿರುವವೆಂದೂ ಈ ಮೂಲಕ ಪ್ರಾಥಮಿಕ ಶಿಕ್ಷಣದ ಬಗ್ಗೆ ವಿಶೇಷ ಖರ್ಚುಮಾಡಬೇಕಾಗುತ್ತದೆಂಬದೂ ನಿಜವು.

ಬೇರೆ ಬೇರೆ ಪ್ರಾಂತಗಳಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವಂಥ ಸಾಲೆಗೆ ಹೋಗಲಿಕ್ಕೆ ಅರ್ಹರಾದ ವಿದ್ಯಾರ್ಥಿಗಳ ನೂರರಲ್ಲಿಯ ಪ್ರಮಾಣವನ್ನು ಅಭ್ಯಾ

ಸಿಸಿದರೆ ಶಿಕ್ಷಕರ ಬಗ್ಗೆಯೂ ಶಿಕ್ಷಣದ ಬಗ್ಗೆಯೂ ನಮ್ಮ ಇಲಾಖೆಯವರು ಇತರ ಇಲಾಖೆಯವರಿಗಿಂತ ಹೆಚ್ಚು ಪ್ರಮಾಣದಿಂದ ಹಣವನ್ನು ವೆಚ್ಚಮಾಡುತ್ತಿರುವರೆಂಬದು ಸ್ಪಷ್ಟವಾಗುವದು. ಈ ಕೋಷ್ಟಕವನ್ನು ಕೆಳಗೆ ಕೊಟ್ಟಿರುವೆವು.

ಪ್ರಾಂತಗಳು ಹಾಗು ಜನಸಂಖ್ಯೆ (ದಶಲಕ್ಷಗಳಲ್ಲಿ)		ಹುಡುಗರು ೧೯೨೭	ಹುಡಿಗೆಯರು ೧೯೨೭
ಮದ್ರಾಸ	(೪೨·೩)	೫೯	೧೭·೫
ಮುಂಬಯಿ	(೧೯·೩)	೪೯·೨	೧೬·೮
ಬಂಗಾಲ	(೪೬·೬)	೪೫·೧	೧೩·೨
ಸಂಯುಕ್ತಪ್ರಾಂತ	(೪೫·೩)	೩೦·೫	೩·೯
ಪಂಜಾಬ	(೨೦·೬)	೪೪·೭	೬·೮
ಬ್ರಹ್ಮದೇಶ	(೧೩·೨)	೨೩·೦	೧೮·೪
ಬಿಹಾರ ಓಡಿಸಾ	(೩೪·೦)	೩೭·೩	೪·೮
ಮಧ್ಯಪ್ರಾಂತ	(೧೩·೯)	೩೦·೭	೪·೩
ಅಸಾಮ	(೭·೬)	೩೬·೪	೬·೮
ಬ್ರಿ. ಹಿಂದುಸ್ಥಾನ	(೨೪೭·೩)	೪೨·೧	೧೦·೪

ಇನ್ನು ಈ ಖರ್ಚಿಗೆ ತಕ್ಕಂತೆ ಮುಂಬಯಿ ಇಲಾಖೆಯಲ್ಲಿ ಪ್ರತಿಫಲವು ದೊರೆತಿರುವದೆಂಬದನ್ನು ಟಾಮಸ್ ಕಮೀಟಿಯವರು ಒಪ್ಪಿಕೊಂಡಿದ್ದಾರೆ.

ಕೆಳಗಿನ ಕೋಷ್ಟಕದಿಂದ ಶಾಲೆಯ ಇಯತ್ತೆಯಲ್ಲಿದ್ದ ಪ್ರತಿ ನೂರು ವಿದ್ಯಾರ್ಥಿಗಳಲ್ಲಿ ನಾಲ್ಕು ವರುಷಗಳಾದ ಬಳಿಕ ಸಾಲೆಯ ಐದನೆಯ ಇಯತ್ತೆಯಲ್ಲಿ ಎಷ್ಟು ಹುಡುಗರು ಕಲಿಯುತ್ತಿರುವರೆಂಬ ಸಂಖ್ಯೆಯನ್ನು ಕೊಟ್ಟಿದೆ. ನಾಲ್ಕನೆಯ ಇಯತ್ತೆಯನ್ನು ಪಾಸಾದ ವಿದ್ಯಾರ್ಥಿಯು ತಾನು ಸಾಲೆಯಲ್ಲಿ ಕಲಿತ ಓದು ಬರಹಾದಿಗಳನ್ನು ಆ ಇಯತ್ತೆಗೆ ಸಾಲೆ ಬಿಟ್ಟರೂ ಪೂರ್ಣವಾಗಿ ಮರೆತುಬಿಡುವದಿಲ್ಲೆಂದೂ ಮುಂದೆ ಇದನ್ನು ಹೆಚ್ಚಿಸಿಕೊಳ್ಳಲಿಕ್ಕೆ ಅವನಿಗೆ ಬರುವದೆಂದೂ ಕೆಲವು ಶಿಕ್ಷಣ ಶಾಸ್ತ್ರಜ್ಞರ ಅಭಿಪ್ರಾಯವು. ಇದಕ್ಕೂ ಕಡಿಮೆ ಶಿಕ್ಷಣ ಪಡೆದವರು ಕಲಿತದ್ದನ್ನೆಲ್ಲ ಕೆಲವು ವರ್ಷಗಳಲ್ಲಿ ಮರೆತುಬಿಡುವರೆಂದೂ ಇಂಥವರ ಬಗ್ಗೆ ವೆಚ್ಚವಾದ ಹಣವು ನಿರರ್ಥಕವಾಗಿ ಹೋಯಿತೆಂದೂ ಇವರು ಅಭಿಪ್ರಾಯ ಪಡುತ್ತಾರೆ. ಈ ಮಾತನ್ನು ಒಪ್ಪಿಕೊಂಡು ಕೆಳಗಿನ ಕೋಷ್ಟಕವನ್ನು ಅಭ್ಯಾಸಿಸಿದರೆ, ನಮ್ಮ ಇಲಾಖೆಯಲ್ಲಿ ಖರ್ಚಾಗುತ್ತಿರುವ ಹಣರಾಶಿಯು ಇತರ ಪ್ರಾಂತಗಳಲ್ಲಿಗಿಂತ ಹೆಚ್ಚು ಪರಿಣಾಮಕಾರಿಯಾಗಿರುವದೆಂಬದು ಲಕ್ಷ್ಯದಲ್ಲಿ ಬರುವದು.

ಬೇರೆ ಬೇರೆ ಪ್ರಾಂತಗಳಲ್ಲಿ ೧, ೪, ೫ ಈ ಇಯತ್ತೆ ಗಳಲ್ಲಿರುವ ವಿದ್ಯಾರ್ಥಿಗಳ ಪ್ರಮಾಣ

ಪ್ರಾಂತ	ಹುಡುಗರ ಸಾಲೆಗಳು			ಹುಡಿಗೆಯರ ಸಾಲೆಗಳು		
	೧೯೨೨-೨೩ ಇಯತ್ತೆ ೧	೧೯೨೫-೨೬ ಇಯತ್ತೆ ೪	೧೯೨೬-೨೭ ಇಯತ್ತೆ ೫	೧೯೨೨-೨೩ ಇಯತ್ತೆ ೧	೧೯೨೫-೨೬ ಇಯತ್ತೆ ೪	೧೯೨೬-೨೭ ಇಯತ್ತೆ ೫
ಮದ್ರಾಸ	೧೦೦	೨೬	೧೧	೧೦೦	೧೬	೯
ಮುಂಬಯಿ	೧೦೦	೪೧	೩೬	೧೦೦	೩೧	೨೩
ಬಂಗಾಲ	೧೦೦	೧೧	೭	೧೦೦	೨	೧
ಸಂ. ಪ್ರಾಂತ	೧೦೦	೧೮	೧೫	೧೦೦	೮	೬
ಪಂಜಾಬ	೧೦೦	೨೫	೧೮	೧೦೦	೧೬	೧೨
ಬ್ರಹ್ಮದೇಶ	೧೦೦	೧೭	೯	೧೦೦	೧೮	೭
ಬಿಹಾರ ಓಡಿಸಾ	೧೦೦	೧೪	೯	೧೦೦	೩	೨
ಮಧ್ಯಪ್ರಾಂತ	೧೦೦	೪೬	೧೬	೧೦೦	೨೩	೭
ಆಸಾಮ	೧೦೦	೧೭	೬	೧೦೦	೯	೪
ಬ್ರಿ. ಹಿಂದುಸ್ಥಾನ	೧೦೦	೧೯	೧೧	೧೦೦	೧೦	೬

ಇನ್ನು ಟಾಮಸ್ ಕಮಿಟಿಯುವರು ಶಿಕ್ಷಕರಾಗಿ ನಿಯಮಿಸಲ್ಪಡುವವರಿಗೆ ದೊರೆತಿರಬೇಕಾದ ಟ್ರೇನಿಂಗದ ಅವಶ್ಯಕತೆಯು ಬಗ್ಗೆ ಹೇಳಿದ ಮಾತಿನ ಬಗ್ಗೆ ಶಿಕ್ಷಕರಲ್ಲಿ ಬಿನ್ನಾಭಿಪ್ರಾಯವಿರಲಾರದು. ಸಮಾಜದ ಹಿತದ ದೃಷ್ಟಿಯಿಂದ ಪ್ರಾಥಮಿಕ ಶಿಕ್ಷಣದ ಮಹತ್ವವನ್ನು ಎಷ್ಟು ವರ್ಣಿಸಿದರೂ ಕಡಿಮೆಯೇ ಸರಿ. ಎಲ್ಲ ಶಿಕ್ಷಕರಿಗೆ ೩ನೆಯ ವರ್ಷದ ಟ್ರೇನಿಂಗ ಕೊಡುವದು ಉತ್ತಮವು. ಆದರೆ ಹಾಸಿಗೆ ನೋಡಿ ಕಾಲು ಚಾಚಬೇಕಾಗುತ್ತದಷ್ಟೇ. ಅದ್ದರಿಂದ ತೀರ ಕಡಿಮೆಯೆಂದರೆ ಎಷ್ಟು ಶಿಕ್ಷಣವು ಶಿಕ್ಷಕರಿಗೆ ಅವಶ್ಯವು ಎಂಬ ಪ್ರಶ್ನದ ಬಗ್ಗೆಯೂ ಅವರು ಕೊಟ್ಟಿರುವ ಸೂಚನೆಯು ಮಾನ್ಯವಾಗಿ ತೋರುತ್ತದೆ. ೨ನೆಯ ೩ನೆಯ ವರ್ಷದ ಟ್ರೇನಿಂಗ ದೊರೆತವರ ಪ್ರಮಾಣವು ಇನ್ನಿಷ್ಟು ಹೆಚ್ಚಾಗಿದ್ದರೆ ನೆಟ್ಟಗಾಗುತ್ತಿತ್ತೆಂದು ನಮ್ಮ ಅಭಿಪ್ರಾಯವು. ಸರಕಾರದವರು ಸದ್ಯಕ್ಕೆ ಎಲ್ಲಕ್ಕೂ ಕಡಿಮೆಯೆಂದರೆ ೧೦೦ ಕ್ಕೆ ೫೦ ರಂತೆ ಟ್ರೇಂಡ ಶಿಕ್ಷಕರಿರಬೇಕೆಂದು ನಿಯಮಿಸಿರುವರಷ್ಟೇ. ಇದರಿಂದ ಇದಕ್ಕೂ ಹೆಚ್ಚು ಪ್ರಮಾಣದಿಂದ ಟ್ರೇಂಡ ಶಿಕ್ಷಕರಿರುವದು ಇಷ್ಟವಲ್ಲೆಂದು ಸರಕಾರದವರ ಅಭಿಪ್ರಾಯವಿಲ್ಲ. ಟ್ರೇಂಡರ ಸಂಖ್ಯೆಯು ನೂರಕ್ಕೆ ನೂರರಂತೆ ಇರುವದೇ ಉತ್ತಮವೆಂದು ಅವರೂ ಬಗೆಯುವರು. ಆದರೆ ಟ್ರೇಂಡರ ಸಂಖ್ಯೆಯ ಪ್ರಮಾಣವನ್ನು ಹೆಚ್ಚಾಗಗೊಟ್ಟರೆ ಖರ್ಚು ಬೆಳೆಯುವದು ಅಪರಿಹಾರ್ಯ ವಾಗುವ ಮೂಲಕ ಇದನು, ನಿಯಮಿಸ ಬೇಕಾಗಿದೆ.

ಟಾಮಸ್ ಕವಿೂಟಿಯುವರು ಮುಂಬಯಿ ಇಲಾಖೆಯ ಪ್ರಾಥಮಿಕಶಿಕ್ಷಣ ವ್ಯವಸ್ಥೆಯೆಂಬ ಸರಪಳಿಯಲ್ಲಿ ತೀರ ನಿರ್ಜಲವಾದ ಕೊಂಡಿಯನ್ನು ಕಂಡುಹಿಡಿದು ಅದನ್ನು ಆದಷ್ಟು ಬಲವುಳ್ಳದ್ದಾಗಿ ಮಾಡಬೇಕೆಂದು ಒತ್ತಿ ಹೇಳಿದ್ದಕ್ಕಾಗಿ ಪ್ರತಿಯೊಬ್ಬ ಶಿಕ್ಷಣಾಭಿಮಾನಿಯು ಅವರನ್ನು ಅಭಿನಂದಿಸತಕ್ಕದ್ದು. ಶಿಕ್ಷಣವೆಂಬ ಯಂತ್ರವು ಅನೇಕ ಚಕ್ರಗಳನ್ನು ಅವಲಂಬಿಸಿ ತಿರುಗಿದರೂ ಶಿಕ್ಷಕನು ಅವರ ಹೇರ ಸ್ಪ್ರಿಂಗ ಆಗಿರುವನು. ಆದ್ದರಿಂದ ಯೋಗ್ಯತೆಯುಳ್ಳ ಶಿಕ್ಷಕರು ನೂರಕ್ಕೆ ನೂರರಂತೆ ಇರಲಿಕ್ಕೇಬೇಕೆಂದೂ ಶಿಕ್ಷಣ ಸುಧಾರಣೆಗೆ ಏನಾದರೂ ಹಣದ ಅನುಕೂಲತೆಯಾದರೆ ಅದನ್ನು ಮೊದಲು ಶಿಕ್ಷಕರ ಟ್ರೇನಿಂಗಿಗೆ ಉಪಯೋಗಿಸಬೇಕೆಂದೂ ಅವರು ತಿರುತಿರುಗಿ ಹೇಳಿದ್ದು ವಿಹಿತವಾದದ್ದು.

ಆದರೆ ಶಿಕ್ಷಕರ ಪಗಾರದ ದರಗಳನ್ನು ಕಡಿಮೆಮಾಡಬೇಕೆಂದು ಅವರು ಮಾಡಿದ ಶಿಫಾರಸನ್ನು ಓದಿ ಶಿಕ್ಷಕವೃಂದವು ಅಸಂತುಷ್ಟವಾಗುವದೆಂಬದರಲ್ಲಿ ಸಂದೇಹವಿಲ್ಲ. ಶಿಕ್ಷಕರಿಗೆ ಸದ್ಯಕ್ಕೆ ದೊರೆಯುತ್ತಿರುವ ಪಗಾರವು ಅವರ ಯೋಗ್ಯತೆಗೆ ಹೆಚ್ಚಾಗಿರುವದೆಂದು ಅವರು ಅಭಿಪ್ರಾಯಪಟ್ಟಂತೆ ಕಾಣುವದಿಲ್ಲ. ಇಲಾಖೆಯ ಆಯುವ್ಯಯದ ಅಂಕೆಗಳನ್ನು ಬಾಯಿಗೂಡಿಸುವ ಬಿಗಿಯಾದ ಪ್ರಶ್ನೆಯನ್ನು ಬಿಡಿಸಲಿಕ್ಕೆ ಸೂಚನೆಗಳನ್ನು ಮಾಡುವ ಕಠಿಣವಾದ ಕೆಲಸವನ್ನು ಸರಕಾರದವರು ಅವರಿಗೆ ಒಪ್ಪಿಸಿದ್ದರು. ಈ ಕೆಲಸದಲ್ಲಿ ಸರಕಾರದ ಪ್ರತಿಯೊಂದು ಖಾತೆಯಲ್ಲಿ ತಮಗೆ ಅವಶ್ಯ ತೋರಿದಷ್ಟು ಕಾಟಕಸರನ್ನು ಮಾಡಲಿಕ್ಕೆ ಅವರು ಹವಣಿಸಿರುವರು. ಯಾವ ಖಾತೆಯ ಅಂಕೆಗಳೂ ಅವರ ಕತ್ತರಿಯ ಬಾಯಿಂದ ಪಾರಾಗಿಲ್ಲ. ಇಲಾಖೆಯ ಸಾಂಪತ್ತಿಕ ಸ್ಥಿತಿಯು ಹೀನದೆಶೆಯಲ್ಲಿರುವಾಗ ಪ್ರಜೆಗಳ ಹಿತಕ್ಕಾಗಿ ಪ್ರತಿಯೊಂದು ವರ್ಗದ ನವಕರರು ಸ್ವಾರ್ಥತ್ಯಾಗವನ್ನು ಮಾಡಲಿಕ್ಕೆ ಸಿದ್ಧರಿರಬೇಕೆಂಬ ಮಾನ್ಯವಾದ ತತ್ವವನ್ನು ಅವರು ಮನದಲ್ಲಿಟ್ಟುಕೊಂಡು ತಮ್ಮ ಕೆಲಸವನ್ನು ಮಾಡಿರುವರು.

ಇದೆಲ್ಲ ನಿಜವಿದ್ದರೂ ಶಿಕ್ಷಕರ ಪಗಾರವನ್ನು ಕಡಿಮೆಮಾಡುವ ಶಿಫಾರಸನ್ನು ಅವರು ಮಾಡದಿದ್ದರೆ ನೆಟ್ಟಗಾಗುತ್ತಿತ್ತೆಂದು ನಮಗೆ ತೋರುತ್ತದೆ. ಕೆಲಸದ ಮಹತ್ವದ ದೃಷ್ಟಿಯಿಂದ ಸದ್ಯಕ್ಕೆ ಪ್ರಾಥಮಿಕ ಶಿಕ್ಷಕರಿಗೆ ದೊರೆಯುತ್ತಿರುವ ಪಗಾರವು ಸಾಕಷ್ಟು ಇರುವದಿಲ್ಲೆಂದೇ ಬಹುಜನರ ಅಭಿಪ್ರಾಯವು. ಮೇಲಾಗಿ ಟ್ರೇನಿಂಗ ಪಡೆಯುವದರಿಂದಲೇ ಯಾವನೂ ಉತ್ತಮ ಶಿಕ್ಷಕನಾಗನು. ಶಿಕ್ಷಕನಿಗೆ ತನ್ನ ಹೋರೆಯು ಉತ್ತಮವಾಗಿ ಸಾಗಲಿಕ್ಕೆ ಅವಶ್ಯವಾದ ಜ್ಞಾನಾರ್ಜನೆಯು ಲವಲವಿಕೆಯೂ ಸಮಾಧಾನವೃತ್ತಿಯೂ, ಸಮಾಜದಲ್ಲಿ ಗೌರವವೂ ಇರಬೇಕಾಗುವದು. ಹೊಟ್ಟೆತುಂಬಲಿಕ್ಕೆ ಮಾತ್ರ ಅವಶ್ಯವಾದಷ್ಟು ಹಣವನ್ನು ಲೆಕ್ಕಮಾಡಿಕೊಟ್ಟರೆ ಇವೆಲ್ಲವನ್ನು ಅವನು ಯಾತರಿಂದ ಸಾಧಿಸಿಕೊಳ್ಳಬೇಕು! ಹುರುಪಿನಿಂದಲೂ ಸಮಾಧಾನದಿಂದಲೂ ದುಡಿಯಲಿಕ್ಕೆ ಶಿಕ್ಷಕನಿಗೆ

ಬೇಕಾಗುವದನ್ನೆಲ್ಲ ಒದಗಿಸಿಕೊಳ್ಳಲು ಅನುವು ಮಾಡಿಕೊಟ್ಟು ಅವನಿಂದ ಆಗಬೇಕಾದ ಎಲ್ಲಕ್ಕೂ ಹೆಚ್ಚು ಕೆಲಸವನ್ನು ಮಾಡಿಸಿಕೊಂಡರೆ ಮಾತ್ರ ಸಮಾಜಕ್ಕೆ ಎಲ್ಲಕ್ಕೂ ಹೆಚ್ಚು ಹಿತವಾಗುವದು. ಶಿಕ್ಷಕನ ಹೋರೆಯು ಚಾಕರಿಯಲ್ಲ; ಕೈಕಾಲು ಮೈಗಳ ಸ್ನಾಯುಗಳ ಕೆಲಸವಲ್ಲ; ಇದೊಂದು ಮೇಲಾದ ಉದ್ಯೋಗವು; ಎಲ್ಲ ಉದ್ಯೋಗಗಳಲ್ಲಿ ಮಿಗಿಲಾದದ್ದು. ಇವನ ಕೆಲಸವು ಬಹುಮುಖವಾದದ್ದು, ನಾಜೂಕಾದದ್ದು, ಬಾಲಕರನ್ನು ಭಾವೀ ನಾಗರಿಕರನ್ನಾಗಿ ಮಾಡಬೇಕಾದದ್ದು. ಈ ಮಹತ್ವದ ಕೆಲಸವನ್ನು ಕೈಕೊಂಡವರ ಬಗ್ಗೆ ಸಮಾಜದಲ್ಲಿ ಸಹಾನುಭೂತಿಯೂ ಗೌರವಾಭಿಪ್ರಾಯವೂ ಇರುವದು ಪ್ರಜೆಗಳ ಹಿತದ ದೃಷ್ಟಿಯಿಂದ ಮಹತ್ವವಾದದ್ದು.

ಕರ್ನಾಟಕದಲ್ಲಿ ಶಿಕ್ಷಣ ಮಂತ್ರಿಗಳು

ನಾಮದಾರ ದಿವಾಣಬಹಾದ್ದೂರ ಎಸ್. ಟಿ. ಕಂಬಳಿ ಬಿ. ಎ., ಎಲ್‌ಎಲ್. ಬಿ., ಎಮ್. ಎಲ್. ಸಿ., ಜೆ. ಪಿ. ಶಿಕ್ಷಣಮಂತ್ರಿಗಳು.

ಕಳೆದ ಜನವರಿ ತಿಂಗಳಲ್ಲಿ ಮುಂಬಯಿ ಇಲಾಖೆಯ ಶಿಕ್ಷಣ ಮಂತ್ರಿಗಳಾದ ದಿವಾಣ ಬಹಾದ್ದೂರ ಕಂಬಳಿಯವರು ತಮ್ಮ ಮಾತೃಭೂಮಿಯಾದ ಕರ್ನಾಟಕದಲ್ಲಿ

ಸಂಚಾರಕ್ಕಾಗಿ ಆಗಮಿಸಿದ್ದರು. ಈ ಮಹಾನುಭಾವರ ಸಂಚಾರದಿಂದ ಅಖಿಲ ಕರ್ನಾಟಕ್ಕಕ್ಕೇ ಅತ್ಯಂತ ಆನಂದವಾಯಿತೆಂದೂ ಕರ್ನಾಟಕಮಾತೆಯು ತನ್ನ ಪ್ರೇಮದ ವರ ಪುತ್ರನ ಆಗಮನವನ್ನು ಅತ್ಯಂತ ಆತುರದಿಂದ ಇದಿರುನೋಡುತ್ತ ಇದ್ದು ಆ ತನ್ನ ಬಯಕೆಯು ಪೂರ್ಣವಾದದ್ದಕ್ಕಾಗಿ ಧನ್ಯಧನ್ಯಳೆಂದೆನಿಸಿಕೊಂಡಳೆಂದೂ ಹೇಳಬಹುದು.

ಮಾಂಟೆಗ್ಯೂ ಚೆಮ್ಸಫರ್ಡ ಹೊಸಸುಧಾರಣೆಯು ಅಮಲಿನಲ್ಲಿ ಬಂದು ಬಹು ಕಾಲವಾಗಿ ಮಿಕ್ಕ ಪ್ರಾಂತಗಳ ಅನೇಕರು ಬಹುಕಾಲದಿಂದ ಮಂತ್ರಿಪದಾರೂಢರಾಗಿದ್ದರೂ ಕರ್ನಾಟಕ ಮಾತೆಯ ಪುತ್ರರಿಗೆ ಮಾತ್ರ ಅದು ಒದಗಿಬಂದಿರಲಿಲ್ಲ. ಈಗ ಆ ಯೋಗವು ಬಂದಿದ್ದು ಅದರಲ್ಲಿಯೂ ದಿ. ಬ. ಕಂಬಳಿಯವರಂಥ ಕರ್ತೃತ್ವಶಾಲಿಗಳಾದ ಮಹನೀಯರು ಆ ಪದವಿಯ ಮೇಲೆ ಒಪ್ಪುತ್ತಿರುವದನ್ನು ಕೇಳಿ ಕನ್ನಡಿಗರೆಲ್ಲರೂ ಅತ್ಯಂತ ಅಭಿಮಾನ ತಳೆದಿರುವರೆಂಬದನ್ನು ನಮ್ಮ ವಾಚಕರು ತಿಳಿದಿರುವರು. ಈ ವರ್ಷ ಆ ವೈಭವ ಶಾಲಿಗಳಾದ ಮಹನೀಯರನ್ನೇ ಪ್ರತ್ಯಕ್ಷವಾಗಿ ಕಂಡು ಆನಂದಪಡುವ ಸುಯೋಗವು ಒದಗಿ ಬಂದಿರುವಾಗ ಕನ್ನಡಿಗರೆಲ್ಲರೂ ತ್ರಿಕರಣಪೂರ್ವಕವಾಗಿ ಸ್ವಾಗತವಿತ್ತು ಸನ್ಮಾನಿಸಿ ಆನಂದಮಗ್ನರಾಗಿದ್ದರೆಂದು ಹೇಳಿದರೆ ಆಶ್ಚರ್ಯವೇಕಾಗಬೇಕು ?

ಈ ಮಹನೀಯರು ವಿಜಾಪೂರ ಧಾರವಾಡ ಜಿಲ್ಲೆಗಳೊಳಗಿನ ಬಹುಶಃ ಎಲ್ಲ ದೊಡ್ಡ ಪಟ್ಟಣಗಳಿಗೆ ಹೋಗಿ ತಮ್ಮ ದರ್ಶನಕೊಟ್ಟರು. ಆ ಎಲ್ಲ ನಗರ ಸಭೆಯವರು ಅವರನ್ನು ಅತ್ಯಂತ ಆದರದಿಂದ ಸ್ವಾಗತಮಾಡಿ ಮಾನಪತ್ರಗಳನ್ನು ಅರ್ಪಿಸಿ ಮನ್ನಿಸಿದರು. ಧಾರವಾಡ, ವಿಜಾಪೂರ, ಬಾಗಲಕೋಟೆ, ಗದಗ, ಗುಳೇದಗುಡ್ಡ ಮುಂತಾದ ನಗರ ಸಭೆಗಳವರೂ ಬ್ಯಾಂಕುಗಳೂ ವಿದ್ಯಾವಿಷಯಕ ಸಂಸ್ಥೆಗಳೇ ಮೊದಲಾದ ಸಾರ್ವಜನಿಕ ಸಂಸ್ಥೆಗಳವರೂ ಮಂತ್ರಿವರ್ಯರಿಗೆ ಮಾನಪತ್ರಗಳನ್ನು ಅರ್ಪಿಸಿ ಅವರ ಗುಣ ಗೌರವಗಳನ್ನು ಜನತೆಯ ಮುಂದಿಟ್ಟಿರುವಂತೆಯೇ ತಮ್ಮ ತಮ್ಮ ಅಡಚಣೆಗಳನ್ನೂ ಬಹು ಆತುರತೆಯಿಂದ ಅವರ ಮುಂದಿಟ್ಟರು.

ನಮ್ಮ ಕರ್ನಾಟಕವು ಮುಂಬಯಿ ಇಲಾಖೆಯ ಮಿಕ್ಕ ಪ್ರಾಂತಗಳಿಗಿಂತಲೂ ಶಿಕ್ಷಣ, ಒಕ್ಕಲತನ, ಉದ್ಯೋಗ ವ್ಯವಸಾಯ ಮುಂತಾದವುಗಳಲ್ಲಿ ತೀರ ಹಿಂದುಳಿದಿರುವದರಿಂದ ಶಿಕ್ಷಣ ಒಕ್ಕಲತನ ಮುಂತಾದ ಮಹತ್ವದ ದೇಶ ಸುಧಾರಣೆಯ ತಳಹದಿಯಾಗಿರುವ ಖಾತೆಗಳ ಸರ್ವಾಧಿಕಾರವನ್ನು ಪಡೆದ ಮಂತ್ರಿಪದದಲ್ಲಿ ಒಪ್ಪುತ್ತಿರುವ ತಮ್ಮಂಥ ಮಹನೀಯರಾದ ಕರ್ನಾಟಕಮಾತೆಯ ಪ್ರೇಮಪುತ್ರರು ನಮ್ಮನ್ನು ಈ ವಿಷಯಗಳಲ್ಲಿ ಮುಂದುವರಿಸಲು ವಿಶ್ವಪ್ರಯತ್ನಪಡಬೇಕೆಂದು ಜನರು ಬಹು ಆಕಾಂಕ್ಷೆಯಿಂದ ಕೇಳಿಕೊಂಡರು. ಕರ್ನಾಟಕ ಕಾಲೇಜಿನಲ್ಲಿ (M. Sc.) ಕ್ಲಾಸನ್ನು ಪ್ರಾರಂಭಿಸುವದು, ಟ್ರೇನಿಂಗ ಕಾಲೇಜದ ಪುನರುದ್ಧಾರ, ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹನೆ

ಬೆಳಗಾವಿಯ ಕಾಲೇಜದ ಸ್ಥಾಪನೆ ಮುಂತಾದ ಮಹತ್ವದ ವಿಷಯಗಳನ್ನು ಮಂತ್ರಿವರ್ಯರ ಮುಂದಿಟ್ಟು ಅವರ ಅಭಯದಾನವನ್ನು ಕೋರಿದರು. ಮಂತ್ರಿವರ್ಯರೂ ಕೂಡ ಆ ಎಲ್ಲ ವಿಚಾರಗಳಿಗೆ ಸಮರ್ಪಕವಾದ ಸಹಾಯ ಸೂಚನೆಗಳನ್ನು ಜನರ ಮುಂದಿಟ್ಟರು. ಟ್ರೇನಿಂಗಕಾಲೇಜದ ಪುನರುದ್ಧಾರದ ವಿಷಯದಲ್ಲಿಯೂ ಸಂಪೂರ್ಣ ಸಹಾನುಭೂತಿಪೂರ್ಣವಾಗಿ ಮಾತಾಡಿ ಅಭಯವನ್ನು ನೀಡಿದರು. ಸರಕಾರವು ಅಪರಿಹಾರ್ಯವಾಗುವ ಹಣದ ಅಡಚಣಿಯಲ್ಲಿರುವದರಿಂದ ಟ್ರೇನಿಂಗ ಕಾಲೇಜನ್ನು ಒಮ್ಮೆಲೆ ಮೊದಲಿನಷ್ಟು ದೊಡ್ಡಪ್ರಮಾಣದಿಂದ ನಡೆಯಿಸಲು ಸಾಧ್ಯವಲ್ಲದಿದ್ದರೂ ಟ್ರೇನಿಂಗ ಸ್ಕೂಲು ಎಂಬ ಹೆಸರು ಅಳಿಸಿ ಅದು ಕಾಲೇಜವೆಂಬ ಹೆಸರಿಗೆ, ತಕ್ಕದ್ದಾಗುವಂತೆ ಮಾಡಲು ತಮ್ಮಿಂದಾದಷ್ಟು ಪ್ರಯತ್ನಮಾಡುವೆವೆಂದು ಉತ್ತರಕೊಟ್ಟಿರುವರಂತೆ.

ಇದೇಮೇರೆಗೆ ಪ್ರಾಥಮಿಕ ಶಿಕ್ಷಣದ ಶಿಷ್ಟಮಂಡಲವೊಂದು ಮಂತ್ರಿವರ್ಯರ ಮುಂದೆ ಹೋಗಿ ತಮ್ಮ ಸುಖದುಃಖಗಳನ್ನು ಹೇಳಿಕೊಂಡಾಗ ಟ್ರೇನಿಂಗಕಾಲೇಜದ ಉದ್ಧಾರದ ವಿಷಯದಲ್ಲಿ ಸಂಪೂರ್ಣ ಸಹಾನುಭೂತಿಯನ್ನು ತೋರಿ ಶಿಕ್ಷಕರ ಪಗಾರವನ್ನು ಕಡಿಮೆಮಾಡುವ ವಿಷಯದಲ್ಲಿ ಥಾಮಸ್ ಕಮೀಟಿಯವರ ಶಿಫಾರಸಿನಂತೆ ಶಿಕ್ಷಕರ ಪಗಾರದ ದರವು ಕಡಿಮೆಯಾಗದಂತೆ ಮಾಡುವದರಲ್ಲಿಯೂ ತಮ್ಮಿಂದಾಗುವ ಪ್ರಯತ್ನ ಮಾಡುವೆವೆಂದು ನಿರೂಪಿಸಿದರಂತೆ. ಸಾಠೆ ಪರಾಂಜಪೆ ಸ್ಕೇಲಿನಂತೆ ತಮಗೆ ಪಗಾರ ದೊರೆಯಬೇಕೆಂದು ಶಿಕ್ಷಕರು ಕೇಳಿಕೊಂಡದ್ದಕ್ಕೆ ಅಂಥ ಸುಕಾಲವು ಒದಗಿ ಬರಲೆಂದು ಭಗವಂತನನ್ನು ಪ್ರಾರ್ಥಿಸಿಕೊಳ್ಳೋಣವೆಂದರಂತೆ. ಸರಕಾರಕ್ಕೆ ಹಣದ ಅನುಕೂಲತೆಯಿದ್ದಾಗ ಮಿಕ್ಕ ಖಾತೆಗಳ ನೌಕರರ ಪಗಾರದ ಮಾನವನ್ನು ಹೆಚ್ಚಿಸಿದಂತೆ ಪ್ರಾಥಮಿಕ ಶಿಕ್ಷಕರ ಪಗಾರ ಹೆಚ್ಚಿಸದೆ ಇರುವದರಿಂದ (ಶಾಲಾಖಾತೆಯ ಪ್ರಾರಂಭದಿಂದಲೂ ೩ನೆ ವರ್ಷದ ಟ್ರೇಂಡರ ಕೊನೆಯ ಪಗಾರವು ೬೦ ರೂ. ಇರುವದು) ಈಗ ಕಡಿಮೆ ಮಾಡುವದು ಅನ್ಯಾಯವಾಗುವದೆಂಬ ಶಿಕ್ಷಕರ ದೂರನ್ನು ಸಹಾನುಭೂತಿಯಿಂದ ಕೇಳಿಕೊಂಡರಂತೆ.

ಒಟ್ಟಿಗೆ ದಿವಾನಬಹಾದ್ದೂರ ಕಂಬಳಿಯವರ ಆಗಮನದಿಂದ ಅಖಿಲ ಕರ್ನಾಟಕಕ್ಕೇ ಒಂದು ಸುಯೋಗವುಂಟಾಗಿ ಕನ್ನಡಿಗರೆಲ್ಲರೂ ಆನಂದಿತರಾಗಿ ಒಮ್ಮನಸಿನಿಂದ ಅವರನ್ನು ಹಾಡಿ ಹರಿಸಿದರೆಂಬದು ಅತ್ಯಂತ ಆನಂದದ ವಿಷಯವು.

ಮಂತ್ರಿವರ್ಯರು ಹೋದ ಹೋದಲ್ಲಿ ಜನತೆಯಿಂದ ಅಂತಃಕರಣಪೂರ್ವಕ ಸನ್ಮಾನಪಡೆದರೆಂದು ಮೇಲೆ ಹೇಳಿದೆವಷ್ಟೇ– ಅವರು ಗುಳೇದಗುಡ್ಡ ಮುನಸಿಪಾಲಟಿಗೆ ದಯಮಾಡಿಸಿದಾಗ ಅಲ್ಲಿಯ ವಿದ್ಯಾರ್ಥಿಗಳು ಹಾಡಿದ ಸ್ವಾಗತಪದ್ಯ ಸಂಭಾಷಣೆ ಮುಂತಾದವನ್ನು ಶಿಕ್ಷಕರಾದ ಮಿ. ಪುರಾಣಿಕಮಠ ಇವರು ನಮ್ಮ ಕಡೆಗೆ ಕಳಿಸಿರುವರು. ಅದರೊಳಗಿನ ಸ್ವಾಗತ ಪದ್ಯವೊಂದನ್ನು ಮಾದರಿಗಾಗಿ ಇಲ್ಲಿ ಕೊಟ್ಟಿರುವೆವು

ಸ್ವಾಗತಪರವಾಗಿ

ರಾಗ :— ಆನಂದ ಭೈರವಿ ತ್ರಿತಾಲ

ಸಹಕಾರಿಗಳಿಂದು । ಮಂತ್ರಿಗೆ ಶ್ರೀ ॥
ಬಹು ಸಂತಸ । ವಿನುತಸ್ವಾಗತಂ ॥ ಪ ॥

ದಯಭಾವವು ಮನದಿ ಶೋಭಿಸುವ ॥
ನಯನೀತಿಯುತೆರದಿ ವರ್ತಿಸುವ ॥ ೧ ॥

ಕುವಿಚಾರದಭಾವ ನೀಗಿಸುವ ॥
ಸುವಿಚಾರದಭಾವ ಮೋದಿಸುವ ॥ ೨ ॥

ತವಕಾಲದಿಹಿತವ ಪೂರ್ತಿಸುವ ॥
ನವಭಾವದಿ ಮತವ ಸಾಧಿಸುವ ॥ ೩ ॥

ಚಿರಬಂಧುರ ಪದವಿ ಶೋಭಿಸುವ ॥
ವರಮಾಪುರ ನಿರುತ ತೋರಿಸುವ ॥ ೪ ॥

ಈ ಪದ್ಯವು ಒಳ್ಳೇ ಅರ್ಥಸ್ವಾರಸ್ಯವುಳ್ಳದ್ದಾಗಿದೆ.

"ಮಾಪುರೀಶ"

ಪದ್ಯಪಾಠ

ಹೊಸರೀತಿಯಿಂದ ಪದ್ಯಪಾಠಗಳನ್ನು ಕಲಿಸುವ ವಿಷಯವಾಗಿ ನಾವು ಈ ಮೊದಲೇ ಈ ಪತ್ರದ ಕಳೆದ ವರ್ಷದ ಎಪ್ರಿಲ ತಿಂಗಳ ಅಂಕಿನಲ್ಲಿ ವಿಸ್ತಾರವಾಗಿ ಬರೆದಿರುವೆವು. ಅಲ್ಲಿ ಹೇಳಿದಂತೆ ಕಲಿಸಬಹುದಾದ ಒಂದೆರಡು ಪದ್ಯಗಳು ಕೂಡ ಇದೇ ಪತ್ರದಲ್ಲಿ ಪ್ರಸಿದ್ಧವಾಗಿರುವವು. ಅದೇಮೇರೆಗೆ ಇನ್ನೆರಡು ಪದ್ಯಗಳನ್ನು ಇಲ್ಲಿ ಕೊಡಲು ನಾವು ಮನಸ್ಸು ಮಾಡಿರುವೆವು. ಇವು ೨ನೇ ಮೂರನೇ ಇಯತ್ತೆಯ ಮಕ್ಕಳಿಗೆ ಯೋಗ್ಯವಾಗಿರುವವೆಂದು ನಮಗೆ ತೋರುತ್ತದೆ.

ಓದುಗರ ಸೌಲಭ್ಯಕ್ಕಾಗಿ ಇಂಥ ಪದ್ಯಗಳನ್ನು ಹೇಗೆ ಕಲಿಸಬೇಕೆಂಬದನ್ನು ಇಲ್ಲಿ ಪುನಃ ಸಂಕ್ಷೇಪದಿಂದ ಹೇಳುವೆವು.

೧. ಶಿಕ್ಷಕರು ಈ ಪದ್ಯಗಳನ್ನು ಕರೇ ಹಲಗೆಯಮೇಲೆ ಬರೆದಿಡಬೇಕು.

೨. ಉಪಕ್ರಮಕ್ಕಾಗಿ ಪದ್ಯಗಳಿಗೆ ಸಂಬಂಧಪಟ್ಟ ಉಚಿತವಾದ ಒಂದೆರಡು ಮಾತುಗಳನ್ನು ಹೇಳಬೇಕು. ೩. ತಾಲಕ್ಕೂ ಧಾಟಿಗೂ ಸರಿಯಾಗಿ ಪದ್ಯಗಳನ್ನು ಸ್ವರಪೂರ್ವಕ ಒಂದರಡು ಸಾರೆ ಹಾಡಿ ತೋರಿಸಬೇಕು. ೪. ಶಿಕ್ಷಕರೂ ಮಕ್ಕಳೂ ಕೂಡಿಯೇ ಮೂರು ನಾಲ್ಕು ಸಾರೆ ಹಾಡಬೇಕು. ಅಂದರೆ ಮೊದಮೊದಲು ಸ್ವರ, ಶಬ್ದಕ್ರಮ ಇವು

ಗಳ ಕಡೆಗೆ ಮಕ್ಕಳ ಲಕ್ಷ್ಯವು ಹೋಗುವದು. ಬಳಿಕ ಪದ್ಯಗಳ ಅರ್ಥ, ಭಾವಗಳ ಕಡೆಗೆ ಮನಸ್ಸು ಹೆಚ್ಚಾಗಿ ಎಳೆದು, ಶಿಕ್ಷಕರು ಕಂಠತಃ ಶಬ್ದಾರ್ಥ, ವಾಕ್ಯಾರ್ಥಗಳನ್ನು ಹೇಳುವದಕ್ಕಿಂತ ಮುಂಚಿತವಾಗಿಯೇ ಅವುಗಳನ್ನು ತಿಳಿದುಕೊಳ್ಳುವರು. ೫. ಪ್ರಶ್ನೆಮಾಡಿ ಪದ್ಯಗಳ ಅರ್ಥವನ್ನು ಆದಷ್ಟುಮಟ್ಟಿಗೆ ಮಕ್ಕಳ ಬಾಯಿಯಿಂದ ಹೊರಡಿಸಿಕೊಳ್ಳಬೇಕು. ತಿಳಿಯದಿದ್ದ ಒಂದೆರಡು ಸ್ಥಳದಲ್ಲಿ ಶಿಕ್ಷಕರು ತಿಳಿಸಿಕೊಡಬಹುದು. ಅದರಲ್ಲಿಯೂ ಅಭಿನಯಕ್ಕೆ ಹೆಚ್ಚು ಪ್ರಾಶಸ್ತ್ಯ. ೬. ಇನ್ನು ಈ ಪದ್ಯಗಳಲ್ಲಿರುವ ವಿಶೇಷ ಸ್ವಾರಸ್ಯವನ್ನು ಮಕ್ಕಳು ಪಾನಗೈಯ್ಯುವಂತೆ ಮಾಡಬೇಕು. ಅಂದರೆ ಕವಿಯ ಮನಸ್ಸಿನಲ್ಲಿರುವ ಭಾವವು ಮಕ್ಕಳಿಗೆ ಹೊಳೆಯಬೇಕು. ಉದಾ:— ೧ನೇ ಪದ್ಯದಲ್ಲಿ ಮಗನು ತಾಯಿಗೆ ತನ್ನ ಚಂದಿರನು ನಿನ್ನವನೆಂದು ಹೇಳುತ್ತಾನೆ. ಅದು ಹೇಗಂದರೆ— ತಾನು ತಾಯಿಗೆ ಮಗನು; ಚಂದಿರನು ತನ್ನವನು; ಆದಕಾರಣ ಚಂದಿರನು ತಾಯಿಯವನು. ಅದೇ ಮೇರೆಗೆ ಚಂದಿರನು ತನ್ನ ಸಂಗಡಲೇ ಇರುವನು. ಅವನು ಮನೆಯ ಅಂಗಳದಲ್ಲಿದ್ದರೆ ಅಲ್ಲಿರುವನು; ಮಾವನ ಮನೆಗೆ ಹೋದರೆ ಅಲ್ಲಿಗೆ ಅವನ ಸಂಗಡ ಹೋಗುವನು; ಅಲ್ಲದೆ ಬೇರೆ ಎಲ್ಲಿಯೂ ಹೋಗುವದಿಲ್ಲ; ವಿಶೇಷವಾಗಿ ಅವನ ನೆರೆಮನೆಯ ಕಿಟ್ಟುವಿನ ಸಂಗಡ ಅವನು ಸರ್ವಥಾ ಇರುವದಿಲ್ಲ. ಈ ಮೊದಲಾದ ತೊದಲು ನುಡಿಯಲ್ಲಿರುವ ಸಾರಭಾಗವು ಮಕ್ಕಳದಾಗಬೇಕು. ೨ನೇ ಪದ್ಯದಲ್ಲಿ ನನ್ನೀ ಶಿಶುತನ, ನಿನ್ನೀ ತಾಯ್ತನ ಎಂಬ ಕಲ್ಪನೆಗಳನ್ನು ಅತಿ ಸ್ಪಷ್ಟಮಾಡಿ ಒಡೆದು ಹೇಳುವ ಗೋಜಿಗೆ ಹೋಗಬಾರದು. ಅದೇ ಭಾವವು ಮುಂದಿನ ಎರಡು ಸಾಲುಗಳಲ್ಲಿರುವದು. ಶಿಶುತನ-ತಾಯ್ತನವೆಂಬವುಗಳನ್ನು ತಿಳಿದುಕೊಳ್ಳುವ ಶಕ್ತಿಯು ಮಕ್ಕಳಲ್ಲಿ ಇನ್ನೂ ಹುಟ್ಟಿರಲಾರದು. ಅವನ್ನು ಹಾಗೆಯೇ ಬಿಡುವದು ಒಳ್ಳೆಯದು. ೭. ಕಟ್ಟಕಡೆಗೆ ಮಕ್ಕಳ ಕಡೆಯಿಂದ ಪದ್ಯಗಳನ್ನು ಸ್ವರಪೂರ್ವಕ ಹಾಡಿಸಬೇಕು.

ಈ ರೀತಿಯಾಗಿ ಇಲ್ಲಿ ಕೊಟ್ಟ ಪದ್ಯಗಳನ್ನು ನಾವು ಸ್ವತಃ ಕಲಿಸಿ ನೋಡಿರುವೆವು. ಇದರಿಂದ ಮಕ್ಕಳಿಗೆ ಯೋಗ್ಯ ಶಿಕ್ಷಣವು ಸಿಗುವದಲ್ಲದೆ ಪದ್ಯಗಳನ್ನು ಹಾಡಬೇಕೆಂಬ ಅವರ ಸ್ವಾಭಾವಿಕ ಹಂಬಲವು ಕೆಲಮಟ್ಟಿಗೆ ಪೂರ್ಣವಾಗುವದು. ಇದೇ ಮೇರೆಗೆ ನಮ್ಮ ಬಂಧು ಭಗಿನಿಯರು ತಮ್ಮ ಸಾಲೆಗಳಲ್ಲಿ ಕಲಿಸಿ ತಮ್ಮ ಮಕ್ಕಳ ಹಿತಚಿಂತನವನ್ನು ಸಾಧಿಸಲೆಂದು ನಾವು ಹಾರೈಸುತ್ತೇವೆ.

ಈ ರೀತಿಯಾಗಿ ಕಲಿಸುವದು ಯೋಗ್ಯವಾದ ಪದ್ಧತಿಯೆಂದು ತಿಳಿದು ಬಂದದ್ದರಿಂದ ಇತ್ತೀಚೆಗೆ ಮಾಧ್ಯಮಿಕ ಸಾಲೆಗಳ ಪಠ್ಯಪುಸ್ತಕಗಳಲ್ಲಿಯ ಗದ್ಯಪದ್ಯಗಳನ್ನು ಕಲಿಸುವದಲ್ಲದೆ ಬೇರೆ ಗ್ರಂಥಗಳೊಳಗಿನ ಅನೇಕ ಗದ್ಯಪದ್ಯಗಳನ್ನು ಮಕ್ಕಳು ತಾವೇ ಓದುವ ಏರ್ಪಾಟುಗಳನ್ನು ಮಾಡಿರುವರು. ವಿಶೇಷವಾಗಿ ಅನೇಕ ಗ್ರಂಥಕರ್ತರಿಂದ ರಚಿಸಿದ ಗದ್ಯಪದ್ಯಗಳನ್ನು ಅಚ್ಚು ಹಾಕಿಸಿ ಮಕ್ಕಳ ವಾಚನಾಲಯಗಳಲ್ಲಿಡುವರು. ಅವು

ಗಳನ್ನು ಮಕ್ಕಳು ತಾವಾಗಿಯೇ ಓದಿಕೊಳ್ಳುವರು. ಅಲ್ಲದೆ ಶಿಕ್ಷಕರು ಕೂಡ ಉತ್ಕೃಷ್ಟವಾದ ಪದ್ಯಗಳನ್ನು ವರ್ಗದಲ್ಲಿ ಆಗಾಗ್ಗೆ ಕಲಿಸುವರು. ಈ ರೀತಿ ಮಕ್ಕಳಲ್ಲಿ ವಾಚನಾಭಿರುಚಿಯು ಹುಟ್ಟುವದು. ಪದಲಾಲಿತ್ಯ, ಕವಿತಾಚಾತುರ್ಯ, ಕವಿಕಲ್ಪನಾ ಸಾಮರ್ಥ್ಯ ಮೊದಲಾದವುಗಳು ಮಕ್ಕಳ ಲಕ್ಷ್ಯಕ್ಕೆ ವಿಶೇಷವಾಗಿ ಬರುವವು.

ಇಂಥ ಯೋಜನೆಯು ಪ್ರಾಥಮಿಕ ಸಾಲೆಗಳಲ್ಲಿ ಆಗುವದು ಅತ್ಯವಶ್ಯ. ಕವನಗಳನ್ನು ಕಟ್ಟಬಲ್ಲವರು ದೇವರ ಮಹಿಮೆ, ಸೃಷ್ಟಿಸೌಂದರ್ಯದ ನೋಟ, ಮಕ್ಕಳ ತೊದಲು ನುಡಿ ಈ ವಿಷಯನ್ನೊಳಕೊಂಡ ಪದ್ಯಗಳನ್ನು ರಚಿಸಿ ಅಚ್ಚು ಹಾಕಿಸಬೇಕು. ಇಲ್ಲವೆ ಯಾರಾದರೂ ಈ ಮೊದಲೇ ರಚಿಸಿದ ಸುಲಭ ಕವಿತೆಗಳನ್ನು ಆಯ್ದುಕೊಂಡು ಬೇರೆ ಬೇರೆ ವರ್ಗದವರಿಗಾಗಿ ಪುಸ್ತಕಗಳನ್ನು ಪ್ರಕಟಿಸಬೇಕು. ಅಲ್ಲಿಯವರೆಗೆ ಶಿಕ್ಷಕರು ತಮ್ಮ ತಮ್ಮ ಮಕ್ಕಳ ಸಲುವಾಗಿ ಪದ್ಯಗಳನ್ನು ಕಲೆಹಾಕಬೇಕು. ಅವುಗಳನ್ನು ಪಟಗಳ ಮೇಲೆ ಬರೆದು ಬೇರೆ ಬೇರೆ ವರ್ಗಗಳ ಕೋಣೆಗಳಲ್ಲಿ ತೂಗಹಾಕಬೇಕು. ಮಕ್ಕಳ ಕಣ್ಣಿಗೆ ಚಿತ್ರ, ನಕಾಶ, ಉಪಕರಣ ಮೊದಲಾದವುಗಳು ಬೀಳುವಂತೆ ಯೋಗ್ಯವಾದ ಪದ್ಯಸಂಗ್ರಹವು ಅವರ ದೃಷ್ಟಿಪಥದಲ್ಲಿದ್ದರೆ ಒಳ್ಳೆಯದೆಂದು ನಮ್ಮ ಕಲ್ಪನೆ. ಈ ರೀತಿ ಪದ್ಯಗಳನ್ನು ಕಲಿಸಿ ಅನುಭವ ಪಡೆದ ಶಿಕ್ಷಕ ಮಹಾಶಯರು ಈ ಪತ್ರದ ಸಂಪಾದಕರಿಗೆ ಆ ಕವಿತೆಗಳನ್ನು ಕಳಿಸಿದಲ್ಲಿ ಎಲ್ಲ ಸಾಲೆಗಳಿಗೆ ಅದರ ಲಾಭವಾಗುವದೆಂಬ ಮಾತು ಸ್ಪಷ್ಟವದೆ.

ಮೂರ್ತಿಯ ಚಂದ್ರ

ಎಲ್ಲಿಗೆ ನಾ ಹೋದರಲ್ಲಿಗೆ ಬರುವನು
ಅಮ್ಮಾ ಚಂದಿರ ನನ್ನವನು,
ನಿನ್ನವ ನಾನಾಗಿರುವದರಿಂದ
ಅಮ್ಮಾ ಚಂದಿರ ನಿನ್ನವನು!

ಮೂಡಣ ದೆಸೆಯೊಳು ಗಿರಿಗಳನೇರುತ
ಓಡುತ ಬರುತಿರೆ ನನಗಾಗಿ
ಮೂಡುವ ನೆಂಬರು ಜನರೆಲ್ಲರಮ್ಮಾ,
ಕೂಡಲೆ ಬರುತಿರೆ ಮೂರ್ತಿಯನು!

ನಮ್ಮನೆಯಂಗಳದಲ್ಲಾಡುತಿರೆ ನಾನು
ನೆತ್ತಿಯ ಮೇಲೆಯೆ ತೋರುವನು!
ಮಾವನ ಮನೆಯೊಳಗುಳಿಯಲು ಹೋದರೆ
ಅಲ್ಲಿಗು ಬರುವನು ಚಂದಿರನು!

ನೆರೆಮನೆ ಕಿಟ್ಟುವು ಕರೆದರೆ ಹೋಗನು
ಮೂರ್ತಿಯನೆಂದೂ ಬಿಟ್ಟಿರನು!
ಎಲ್ಲಿಗೆ ನಾ ಹೋದರಲ್ಲಿಗೆ ಬರುವನು
ಅಮ್ಮಾ ಚಂದಿರ ನನ್ನವನು! ೪

ಒಡವೆಗಳು

ಚಿನ್ನದ ಒಡವೆಗಳೇತಕೆ ಅಮ್ಮಾ?
ತೊಂದರೆ ಕೊಡುವುವು ಬೇಡಮ್ಮಾ!
ಬಣ್ಣದ ಬಟ್ಟೆಗಳೇತಕೆ ಅಮ್ಮಾ?
ಮಣ್ಣಿನೊಳಾಡಲು ಬಿಡವಮ್ಮಾ! ೧

ಚಂದಕೆ ಚಂದಕೆ ಎನ್ನುವಿಯಮ್ಮಾ!
ಚಂದವು ಯಾರಿಗೆ ಹೇಳಮ್ಮಾ!
ನೋಡುವರಿಗೆ ಚಂದವು ಆನಂದ!
ಆಡುವ ಎನಗದು ಬಲು ಬಂಧ! ೨

ನನ್ನೀ ಶಿಶುತನ ನಿನ್ನೀ ತಾಯ್ತನ
ಎರಡೇ ಒಡವೆಗಳೆಮಗಮ್ಮಾ!
ನಾ ನಿನಗೊಡವೆಯು ನೀ ನನಗೊಡವೆಯು
ಬೇರೆಯ ಒಡವೆಗಳೇಕಮ್ಮಾ? ೩

ಮಿ॥ ಸಾ. ಮ. ಪಾಟೀಲ ಹೆ. ಮಾ. ಖಾನಾಪೂರ ಇವರು ತಮ್ಮ
ಪ್ರೇಮದ ಬಂಧು ಭಗಿನಿಯರಿಗೆ ಪದ್ಯರೂಪದ ತಿಲಶರ್ಕರೆಯನ್ನು
ಮುಟ್ಟಿಸುವ ಬಗ್ಗೆ ಕಳಿಸಿರುವರು.

ತಿಲಸಮರ್ಪಣೆ

ಪರಮೇಷ್ಠಿ ನಾಮದಿಂದೆಸೆಯುವೀ ವತ್ಸರದ ।
ತಿರುಗುತಿಹ ಪತ್ತನೆಯ ಮಾಸ ಪರಪಕ್ಷದೊಳು ।
ಪರಮೇಶನಾದಯದಿ ಪ್ರಾಪ್ತಮಾಗಿರ್ಪುದೈ, ಪುಣ್ಯಕರ ಸಂಕ್ರಮಣವು ।
ಪರಮ ಪಾವನೆ ಮಲಪ್ರಭೆಯೊಳಾಂ ಸಲೆಮಿಂದು ।
ಪರಿಶುದ್ಧ ಮನದಿಂದೆ ಪರಮೇಶನಂ ಸ್ತುತಿಸಿ ।
ಹರುಷದಿಂದೀಯುವೆನು ಕರುಣದೋರುತ ಕೊಳ್ಳಿ ! ಮಧುರ
ತಿಲಶರ್ಕರೆಯನು ॥ ೧ ॥

॥ ಭಾ. ಷ. ॥

ಶರ್ಕರಾವೃತ ತಿಲದ ಸ್ವಾದವ । ಅಕ್ಕರತೆಯಿಂ ಸವಿದು ನಿರುತದಿ
ಕಕ್ಕುಲತೆಯನ್ನಿಡುವುದೆನ್ನೊಳು ಸುಬುಧ-ಬಾಂಧವರೇ ॥
ಚೊಕ್ಕಚಿನ್ನದ ತೆರದಿ ಶೋಭಿಪ । ಅಕ್ಕರದ ಮಾತೆಯು ಸುಚಿಂತನೆ ।
ತಕ್ಕುದೈ ! ಯಾಚಿಪುದಿದನುಗಡ ಶ್ರೀಶ ಸನ್ನಿಧಿಯೊಳ್ ॥ ೨ ॥

ಪುಸ್ತಕ ವಿಮರ್ಶೆ

ಮರಾಠರೂ ಅವರ ಭಾಷೆಯೂ

ಲೇಖಕರು:- ರಾ|| ರಾ|| ಭಾ. ವಿ. ಜಾಧವ ಎಮ್. ಎ. ಎಲ್. ಎಲ್. ಬಿ.

ಭಾಷಾಂತರಕಾರ - ವಿ. ಜಿ. ಜ. ಉಪ್ಪಾರ- ಪುಟ ೧೦೫—ಬೆಲೆ ೫ ಆಣೆ.

ಈ ದೇಶದಲ್ಲಿ ಮರಾಟರು ೧ ಕೋಟಿ ಜನರು ಇರುವರು, ಮರಾಟರು ಆರ್ಯರು. ಇವರು ವಾಯವ್ಯ ದಿಕ್ಕಿನಿಂದ ಬಂದರು. ವಾಯವ್ಯ ದಿಕ್ಕಿನಲ್ಲಿಯೂ ಎರಡು ಭಾಗಗಳಾಗಿ ಖೈಬರ ಮಾರ್ಗದಿಂದ ಬಂದವರಿಗೆ ಸೂರ್ಯವಂಶೀಯರೆಂದೂ ಗಿಲಜಿತ, ಚಿತ್ರಲ ಈ ಮಾರ್ಗದಿಂದ ಬಂದವರಿಗೆ ಚಂದ್ರವಂಶೀಯರೆಂದೂ ಹೆಸರು ಬಿದ್ದಿತೆಂದು ಗ್ರಂಥಕರ್ತರು ಸಾಧಾರವಾಗಿ ಬರೆದಿದ್ದಾರೆ.

ಮರಾಟ ಎಂಬ ಜನಾಂಗದ ಹೆಸರಿನಿಂದಲೇ ಅವರು ವಸಾಹತು ಮಾಡಿದ ದೇಶಕ್ಕೆ ಮಹಾರಾಷ್ಟ್ರವೆಂಬ ಹೆಸರು ಪ್ರಾಪ್ತವಾಯಿತು. ಗ್ರಂಥಕರ್ತರು ಮಹಾವಂಶ, ಅನರ್ಘರಾಘವ, ಮಧ್ಯಯುಗದ ಭಾರತ ಇವೇ ಮೊದಲಾದ ಪ್ರಸಿದ್ಧ ಗ್ರಂಥಗಳ ಆಧಾರದಿಂದ ಈ ಪುಸ್ತಕವನ್ನು ಬರೆದಿದ್ದಾರೆ. ಆದದರಿಂದ ಪುಸ್ತಕದೊಳಗಿನ ವಿಷಯಗಳು ಸಾಧಾರವಾಗಿ ಸಿದ್ಧಮಾಡಲ್ಪಟ್ಟಿವೆ. ದುರ್ಗಮವಾದ ಎರಡನೆಯ ಮಾರ್ಗದಿಂದ ಬಂದವರೂ ವಿಂಧ್ಯಪರ್ವತದ ದಕ್ಷಿಣದ ನಿವಾಸಿಗಳಕೂಡ ಕಾಳಗಮಾಡಿ ಅಲ್ಲಿ ವಸಾಹತ ಮಾಡಿದವರೂ ನಿರ್ವಾಹವಿಲ್ಲದೆ ದ್ರವಿಡ ವರ್ಗದವರ ಕನ್ಯೆಗಳನ್ನು ವಿವಾಹಮಾಡಿಕೊಳ್ಳಬೇಕಾಯಿತು. ಸೂರ್ಯವಂಶೀಯರಿಗೆ ಈ ಪ್ರಸಂಗವು ಬರಲಿಲ್ಲ. ಆದದರಿಂದ ಉತ್ತರದ ಹಾಗು ದಕ್ಷಿಣದ ಮರಾಠಾ ಜನರ ಧರ್ಮ ವ್ಯವಹಾರ, ಆಚಾರ ಮೊದಲಾದವುಗಳಲ್ಲಿ ಭೇದವು ಕಂಡುಬರುವದು ಎಂದು ಸಿದ್ಧಮಾಡಿದ್ದಾರೆ.

ಮರಾಠಾವರ್ಗವು ಆರ್ಯಸಂತತಿಯದು. ಮರಾಠಾ ಭಾಷೆಯು ಸ್ವತಂತ್ರ ಭಾಷೆಯು ಹಾಗು ಮರಾಠರು ಸಂಗ್ರಾಹಕರು, ಅಂದರೆ ರಾಷ್ಟ್ರೀಯ ಜಾತಿಯವರು ಇತ್ಯಾದಿ ಸಂಗತಿಗಳನ್ನು ಚೆನ್ನಾಗಿ ಸಿದ್ಧಮಾಡಿದ್ದಾರೆ.

ಜಾತ್ಯಾಭಿಮಾನ ಉದ್ಯಮಿ ಇವೇ ಮೊದಲಾದ ಶಬ್ದಗಳು ಜಾತ್ಯಭಿಮಾನ, ಉದ್ಯಮ ಇತ್ಯಾದಿಗಳಾಗಿ ಪ್ರಯೋಗಿಸಲ್ಪಡತಕ್ಕದ್ದು.

ಈ ಪುಸ್ತಕವನ್ನು ಓದುವದರಿಂದ ಮರಾಠಾ ಜನಾಂಗದ ನಿಜಸ್ಥಿತಿಯು ಸಾಧಾರವಾಗಿ ತಿಳಿಯುತ್ತದೆ. ಈ ಸಮಾಜವು ಹಿಂದೂ ಸಮಾಜದ ಒಂದು ದೊಡ್ಡ ಘಟಕಾವಯವವಾಗಿರುತ್ತದೆಂದೂ ಸಂಗ್ರಾಹಕ ಶಕ್ತಿಯುಳ್ಳದ್ದಾದುದರಿಂದ ಕರಗುತ್ತ ನಡೆಯದೆ ಬೆಳೆಯುತ್ತ ಸಾಗುವದೆಂದೂ ಹೇಳಬಹುದು.

ಗಂಡು ಹುಡುಗರ ವ್ಹ. ಫಾ. ಪರೀಕ್ಷೆಯ ವಿಷಯುಗಳು
೧೯೩೪ಳ ದಕ್ಷಿಣಭಾಗ

(೧೯೩೪ನೆಯ ಇಸವಿಯಲ್ಲಿ ಆಗುವ ವ್ಹ. ಫಾ. ವಿಷಯುಗಳು ಕೆಳಗೆ ಬರೆದಂತೆ ಇರುತ್ತವೆ)

ಕನ್ನಡ

ಮೊದಲನೆಯ ಸದರ

(ಅ) **ಗದ್ಯ**– ಕ್ರಮಿಕ ೭ನೇಯ ಬುಕ್ಕಿನಲ್ಲಿಯ (೧೯೩೦ರಲ್ಲಿ ಅಚ್ಚಾದದ್ದು) ಎಲ್ಲಾ ಪಾಠಗಳು.

(ಬ) **ಪದ್ಯ**– ಕ್ರಮಿಕ ೭ನೆಯ ಬುಕ್ಕಿನಲ್ಲಿಯ (೧೯೩೦ರಲ್ಲಿ ಅಚ್ಚಾದದ್ದು) ಪಾಠಗಳು:– ೩, ೭, ೧೧, ೧೫, ೧೯, ೨೪, ೨೮, ಮತ್ತು ೩೨ ಈ ಪ್ರಕಾರ ೮ ಪಾಠಗಳು.

ಮರಾಠಿ

ಮೊದಲನೆಯ ಸವಗ

(ಅ) **ಗದ್ಯ**– ಕ್ರಮಿಕ ೭ನೆಯ ಬುಕ್ಕಿನಲ್ಲಿಯ (೧೯೩೨ರಲ್ಲಿ ಅಚ್ಚಾದ ೯ನೆಯ ಆವೃತ್ತಿ) ಮೊದಲನೆಯ ಭಾಗದ ಎಲ್ಲ ಪಾಠಗಳು

(ಬ) **ಪದ್ಯ**– ಕ್ರಮಿಕ ೭ನೆಯ ಬುಕ್ಕಿನಲ್ಲಿಯ ಪಾಠಗಳು:–(೧೯೩೨ರಲ್ಲಿ ಅಚ್ಚಾದ ೯ನೆ ಆವೃತ್ತಿ) ೭, ೧೧, ೧೫, ೨೪, ೩೨, ೪೩, ೪೭ ಮತ್ತು ೪೯ ಪಾಠಗಳು.

ಉರ್ದು ವ್ಹರ್ನಾಕ್ಯೂಲರ

ಮೊದಲನೆಯ ಸದರ ಉರ್ದು

ಗದ್ಯ– ಕ್ರಮಿಕ ಉರ್ದು ೭ನೆಯ ಬುಕ್ಕಿನಲ್ಲಿಯ (೧೯೩೨ನೆಯ ಇಸ್ವಿಯಲ್ಲಿ ಅಚ್ಚಾದ ೫ನೆ ಆವೃತ್ತಿ) ಮೊದಲನೆಯ ಭಾಗದ ಎಲ್ಲಾ ಪಾಠಗಳು.

ಪದ್ಯ– ಕ್ರಮಿಕ ಉರ್ದು ೭ನೆಯ ಬುಕ್ಕಿನಲ್ಲಿಯ (೧೯೩೨ ರಲ್ಲಿ ಅಚ್ಚಾದ ೫ನೆಯ ಆವೃತ್ತಿ) ೯, ೧೦, ೧೬. ೨೩, ೨೬, ೨೯ ಮತ್ತು ೩೫ ಈ ಪ್ರಕಾರ ೭ ಪಾಠಗಳು.

೬ನೆಯ ಸದರ— ಕನ್ನಡ ಐಚ್ಛಿಕ (Optional)

ಗದ್ಯ- ಕ್ರಮಿಕ ೫ನೇ ಬುಕ್ಕಿನಲ್ಲಿಯ (೧೯೩೨ರಲ್ಲಿ ಅಚ್ಚಾದದ್ದು) ೨, ೩, ೮, ೧೧, ೧೪, ೧೮, ೨೩, ೨೫, ೨೭, ೩೨, ೩೫, ೪೦, ೪೧, ೪೨. ೪೩, ೪೭, ೪೯, ೫೮, ೬೦, ೬೨ (೨೦ ಪಾಠಗಳು)

ಮರಾಠಿ ಐಚ್ಛಿಕ (Optional)

ಗದ್ಯ- ಕ್ರಮಿಕ ೫ನೇ ಬುಕ್ಕಿನಲ್ಲಿಯ (೧೯೩೧ರಲ್ಲಿ ಅಚ್ಚಾದ ೧೩ನೆಯ ಆವೃತ್ತಿ) ೧, ೨, ೩, ೪, ೯, ೧೦, ೧೩, ೧೪, ೧೫, ೧೭, ೧೯, ೨೦, ೨೫, ೨೬, ೨೭, ೪೦, ೪೩, ೪೪, ೪೬ ಮತ್ತು ೪೮ ಈ ಪ್ರಕಾರ ೨೦ ಪಾಠಗಳು

ವ್ಹರ್ನಾಕ್ಯೂಲರ ಉರ್ದು

ಮೊದಲನೆಯ ಸದರ-ಕನ್ನಡ

ಗದ್ಯ- ಕ್ರಮಿಕ ೭ನೆಯ ಬುಕ್ಕಿನಲ್ಲಿಯ (೧೯೩೦ ರಲ್ಲಿ ಅಚ್ಚಾದದ್ದು) ೪, ೫, ೮, ೯, ೧೦, ೧೨, ೧೬, ೧೭, ೧೮, ೨೦, ೨೧, ೨೨, ೨೬, ೨೯, ೩೦, ೩೪, ೩೫, ೩೮, ೪೧, ೪೩, ೪೫, ೪೬, ೪೯, ೫೦, ೫೪, ೫೭, ೬೨, ೬೪, ೬೫, ೬೭, ೬೮, ೭೧, ೭೫, ೭೯, ೮೨, ಈ ಪ್ರಕಾರ ೩೫ ಪಾಠಗಳು

ಪದ್ಯ- ಕ್ರಮಿಕ ೭ನೆಯ ಬುಕ್ಕಿನಲ್ಲಿಯ (೧೯೩೦ರಲ್ಲಿ ಅಚ್ಚಾದದು) ೩, ೧೯, ೨೪ ೩೨, ೪೦ ಈ ಪಾಠಗಳು ಪೂರಾ

ಮೊದಲನೆಯ ಸದರ ಮರಾಠಿ

ಗದ್ಯ- ಕ್ರಮಿಕ ೭ನೆಯ ಬುಕ್ಕಿನಲ್ಲಿಯ (೧೯೩೨ರಲ್ಲಿ ಅಚ್ಚಾದ ೯ನೆಯ ಆವೃತ್ತಿ) ೧, ೪, ೫ ೮, ೯, ೧೦. ೧೨, ೧೬, ೧೭, ೧೮, ೨೦, ೨೧, ೨೨, ೨೩, ೨೫, ೨೭, ೩೦, ೩೧, ೩೨, ೩೪, ೩೫, ೩೭, ೩೮, ೩೯, ೪೧, ೪೨, ೪೫, ೪೬, ೪೮, ೫೦, ೫೨, ೫೪, ೫೭, ೬೧, ಮತ್ತು ೬೨ ಈ ಪ್ರಕಾರ ೩೫ ಪಾಠಗಳು ಪೂರಾ

ಪದ್ಯ- ಕ್ರಮಿಕ ೭ನೆಯ ಬುಕ್ಕಿನಲ್ಲಿಯ (೧೯೩೨ರಲ್ಲಿ ಅಚ್ಚಾದದ್ದು ೯ನೆಯ ಆವೃತ್ತಿ) ೭, ೧೫, ೧೯, ೫೩ ಈ ಪ್ರಕಾರ ೪ ಪಾಠಗಳು ಪೂರಾ

೬ನೆ ಸದರ ಉರ್ದು—

ಗದ್ಯ- ಕ್ರಮಿಕ ಉರ್ದು ೬ನೆಯ ಬುಕ್ಕಿನಲ್ಲಿಯ (೧೯೩೨ ರಲ್ಲಿ ಅಚ್ಚಾದ ೫ನೆ ಯ ಆವೃತ್ತಿ) ೧, ೬, ೧೨, ೧೪, ೧೫, ೧೯, ೨೧, ೨೨, ೨೪, ೨೫, ೨೬ ೩೧, ೩೩, ೩೬, ೪೦, ಮತ್ತು ೪೧ ಈ ಪ್ರಕಾರ ೧೬ ಪಾಠಗಳು ಪೂರ್ಣ

ಪದ್ಯ- ಕ್ರಮಿಕ ಉರ್ದು ೬ನೆಯ ಬುಕ್ಕಿನಲ್ಲಿಯ (೧೯೩೨ರಲ್ಲಿ ಅಚ್ಚಾದ ೫ನೆ ಯ ಆವೃತ್ತಿ) ೧೦, ೧೩ ೧೬, ೨೩, ೩೨ ಈ ಪ್ರಕಾರ ೫ ಪಾಠಗಳು

ಧಾರವಾಡ, ತಾ॥ ೧೩-೧೨-೧೯೩೨	}	**ಕೆ. ಎಸ್. ವಕೀಲ,** ಎ. ಇನ್ಸಪೆಕ್ಟರ, ಧಾರವಾಡ

ನೋಟೀಸು

೧೯೩೩ನೆಯ ಇಸವಿಯ ವ್ಹ. ಫಾ. ಪರೀಕ್ಷೆಯು ಧಾರವಾಡ, ಬೆಳಗಾವ, ವಿಜಾಪುರ, ಕಾರವಾರ ಹಾಗು (ಉರ್ದುವಿನ ಬಗ್ಗೆ) ಹುಬ್ಬಳ್ಳಿ ಈ ಸ್ಥಳಗಳಲ್ಲಿ ತಾ॥ ೨೯ ಮಾರ್ಚ ಹಾಗು ಮುಂದಿನ ದಿವಸಗಳಲ್ಲಿ ನಡೆಯುವದು. ಪರೀಕ್ಷೆಗೆ ಕೂಡಲಿಚ್ಛಿಸುವ ಉಮೇದವಾರರು ತಮ್ಮ ಅರ್ಜಿಗಳನ್ನು ಆಯಾ ಸ್ಥಳಗಳ ಪರೀಕ್ಷಾ ಕಮಿಟೀಯ ಪ್ರೆಸಿಡೆಂಟರಿಗೆ ೧ನೇ ಮಾರ್ಚ ೧೯೩೩ ಈ ದಿನ ಅಥವಾ ಅದರೊಳಗಾಗಿಯೇ ಮುಟ್ಟುವಂತೆ ಕಳಿಸತಕ್ಕದ್ದು.

ಧಾರವಾಡ, ತಾ॥ ೧೧-೧-೧೯೩೩	}	**ಕೆ. ಎಸ್. ವಕೀಲ,** ಎ. ಇನ್ಸಪೆಕ್ಟರ. ದ. ಭಾಗ

ಬೇಸಿಗೆಯ ಸೂಟಿಯ ಶಿಕ್ಷಣ ಯೋಜನೆಯ ೧೯೩೩

ಕಳೆದ ವರುಷ ಮೇ ತಿಂಗಳ ಆರಂಭದಲ್ಲಿ ದಕ್ಷಿಣ ಭಾಗದ ಪ್ರಾಥಮಿಕ ಶಿಕ್ಷಕರ ಹಿತಕ್ಕಾಗಿ ಧಾರವಾಡದ ಟ್ರೇನಿಂಗ ಸಂಸ್ಥೆಗಳ ಚಾಲಕರು ಶಿಕ್ಷಣ ಯೋಜನೆಯನ್ನು ಏರ್ಪಡಿಸಿದ್ದು ಎಲ್ಲರಿಗೂ ಗೊತ್ತಿದೆ. ಅದರಂತೆಯೇ ಈ ವರುಷವಾದರೂ ಮೇ ತಿಂಗಳ ೧ನೇ ತಾರೀಖಿನಿಂದ ೬ನೇ ತಾರೀಖಿನ ವರೆಗೆ ಈ ಯೋಜನೆಯನ್ನು ಏರ್ಪಡಿಸಬೇಕೆಂದು ಬಯಸಿ ಈ ಸಂಕಲ್ಪವನ್ನು ಇವರು ಧಾರವಾಡ ಜಿಲ್ಹೆಯ ಸ್ಕೂಲಬೋರ್ಡ ಅಧಿಕಾರಿಗಳಾದ ಮಿ. ಆರ್. ಕೆ. ನಾಯಿಕ ಬಿ. ಎ., ಇವರಿಗೆ ತಿಳಿಸಿದರು. ಈ ಗೃಹಸ್ಥರು ಈ ಯೋಜನೆಯಿಂದ ಶಿಕ್ಷಕರಿಗೆ ಪೂರ್ಣ ಲಾಭವಾಗದೇಕೆಂದು, ನಾಲ್ಕು ಜಿಲ್ಹೆಗಳ ಹಾಗು ಲೋಕಲ್ ಅಥಾರಿಟಿ ಮುನಿಸಿಪಾಲಿಟಿಗಳ ಅಡ್ಮಿನಿಸ್ಟ್ರೇಟಿವ ಆಫೀಸರರನ್ನೂ, ಕೆಲ ಜನ ಸುಪರವಾಯಿಝರರನ್ನೂ ಬರಮಾಡಿಕೊಂಡು ವಿಚಾರವಿನಿಮಯುಮಾಡಿ ಇದರ ಕಾರ್ಯಕ್ರಮವನ್ನು ನಿಶ್ಚಯಿಸಿರುವರು ಈ ಅಧಿಕಾರಿಗಳಲ್ಲಿ ಕೆಲವರು ಪಾಠಗಳನ್ನು ಕಲಿಸಿತೋರಿಸಲಿಕ್ಕೂ ಶಿಕ್ಷಣಯೋಜನೆಯು ಪೂರ್ಣ ಯಶಸ್ವಿಯಾಗುವಂತೆ ಅದರಲ್ಲಿ ಕೆಲಸಮಾಡಲಿಕ್ಕೂ ಒಪ್ಪಿರುವರು. ಈ ಬಗ್ಗೆ ನಾವು ಅವರನ್ನು ಮನಸೊಪ್ಪಿ ಅಭಿನಂಧಿಸುವೆವು. ಈ ಶಿಕ್ಷಣ ಯೋಜನೆಯಲ್ಲಿ ಗಣಿತ ಶಿಕ್ಷಣಕ್ಕೆ ವಿಶೇಷ ಮಹತ್ವವನ್ನು ಕೊಡಲಾಗಿದೆ. ಬಾಲಕರ ವರ್ಗದಿಂದ ನಾಲ್ಕನೆಯ ಇಯತ್ತೆಯ ವರೆಗೆ ಆಯಾ ವಿಷಯ ವಿಮರ್ಶೆಯನ್ನು ಮಾಡುವದಲ್ಲದೆ ಪ್ರತಿಯೊಂದು ಇಯತ್ತೆಯಲ್ಲಿ ಇದರ ಶಿಕ್ಷಣವು ಹ್ಯಾಗೆ ಸಾಗಬೇಕೆಂಬ ಬಗ್ಗೆ ಮಾದರಿಯ ಪಾಠಗಳನ್ನು ಕಲಿಸಿ ತೋರಿಸುವ ವ್ಯವಸ್ಥೆಯಾಗಿದೆ. ಇದರಂತೆಯೇ ಭಾಷಾವಿಷಯದ ಬಹುತರ ಅಂಗಗಳಿಗೂ ಸಾಕಷ್ಟು ಮಹತ್ವವು ಕೊಟ್ಟಿದೆ. ಹೊಸ ಪದ್ಧತಿಗಳನ್ನು ಕುರಿತು ಮಾದರಿಯ ಪಾಠಗಳನ್ನು ಕೊಡುವದಲ್ಲದೆ, ನಮ್ಮ ಸದ್ಯದ ಪರಿಸ್ಥಿತಿಯಲ್ಲಿ ಯಾವ ಪದ್ಧತಿಗಳನ್ನು ಅನುಸರಿಸುವದು ಅವಶ್ಯವೆಂಬದನ್ನು ನಿಶ್ಚಯಿಸಿ, ಪ್ರತಿಯೊಂದು ವಿಷಯುವನ್ನು ಕಲಿಸುವ ಬಗ್ಗೆ ಶಿಕ್ಷಕರಿಗೆ ಮಾರ್ಗದರ್ಶಿಯಾಗುವಂತೆ ಒಂದು ಸಣ್ಣ ಕೈಪಿಡಿಯನ್ನು ಸಿದ್ಧಪಡಿಸುವ ಬಗ್ಗೆ ಏರ್ಪಾಡು ಮಾಡುವ ವಿಚಾರವಿದೆ. ಆದ್ದರಿಂದ ಈ ಶಿಕ್ಷಣಯೋಜನೆಯ ಲಾಭವನ್ನು ನಮ್ಮ ಭಾಗದ ಜಿಲ್ಹೆಗಳ ಶಿಕ್ಷಕರು, ಟ್ರೇಂಡರು ಹಾಗು ಅನ್‌ಟ್ರೇಂಡರು, ಮಾಡಿಕೊಳ್ಳುವರೆಂದು ನಾವು ಹಾರೈಸುತ್ತೇವೆ.

ಸೋಮವಾರ ತಾ॥ ೧–೫–೩೩ ರಿಂದ ಶನಿವಾರ ತಾ॥ ೬–೫–೩೩ ರ ವರೆಗೆ ಪ್ರತಿದಿನ ಮುಂಜಾನೆ ೮ ರಿಂದ ೧೧, ಮಧ್ಯಾಹ್ನ ೩ ರಿಂದ ೫–೩೦ ರ ವರೆಗೆ ಕೆಳಗೆ ಕಾಣಿಸಿದ ಕಾರ್ಯಕಲಾಪಗಳು ನಡೆಯುವವು:—

ಮುಂಜಾನೆ ಹುಡುಗರ ಹಾಗು ಹುಡಿಗೆಯರ ಡ್ರಿಲ್ ಹಾಗು ಆಟಗಳು; ಹಾಗು ಸಾಲೆಯಲ್ಲಿ ಉಪಯೋಗಿಸುವ ಉಪಕರಣಗಳ ಮತ್ತು ವಿದ್ಯಾರ್ಥಿಗಳ ಕೆಲಸದ ಪ್ರದರ್ಶನ. ಒಂದು ದಿನ ಟ್ರೇನಿಂಗ ಸ್ಕೂಲಿನ ಪ್ರಾ. ಸ್ಕೂಲಿನ ನಿರೀಕ್ಷಣೆ ೧ ತಾಸು; ಮತ್ತೊಂದು ದಿನ ಹೆಣ್ಣುಮಕ್ಕಳ ಪ್ರಾ. ಸ್ಕೂಲಿನ ನಿರೀಕ್ಷಣೆ ೨ ತಾಸು.

ವಿದ್ಯಾರ್ಥಿ ವಾಚನಾಲಯ, ಬಾಲಕರ ವರ್ಗದ ಶಿಕ್ಷಣ ಮೊದಲಾದ ಸಾಮಾನ್ಯ ವಿಷಯಗಳ ಬಗ್ಗೆ ಚರ್ಚೆ ೨ ತಾಸು.

ಮಿಕ್ಕವೇಳೆಯಲ್ಲಿ ಗಣಿತ, ಭೂಗೋಲ, ಇತಿಹಾಸ, ವ್ಯಾಕರಣ, ಬರಹ, ವಾಚನ, ಕವಿತೆ, ನಿಬಂಧ, ಶಾ. ವಿಷಯ, ಪ್ರ. ವಿಮರ್ಶೆ, ಕಥೆ, ಡ್ರಾಯಿಂಗ ಈ ಬಗ್ಗೆ ಪಾಠಗಳು; ಅವುಗಳನ್ನು ಕಲಿಸುವ ಪದ್ಧತಿಗಳ ವಿವರಣೆ ಸಹಿತ.

ವಿವರವಾದ ಕಾರ್ಯಕ್ರಮವು ಮಾರ್ಚ ತಿಂಗಳ ಪ್ರಾ. ಶಿಕ್ಷಣದಲ್ಲಿ ಪ್ರಸಿದ್ಧವಾಗುವದು.

ಪ್ರದರ್ಶನದಲ್ಲಿ ಶಿಕ್ಷಕರು ಸಾಲೆಯಲ್ಲಿ ಉಪಯೋಗ ಮಾಡುವಂಥ ತಾವಾಗಿ ತಯಾರಿಸಿದ ಉಪಕರಣಗಳು; ಹಾಗು ವಿದ್ಯಾರ್ಥಿಗಳ ಬರಹ, ಚಿತ್ರ, ನಕಾಶ, ನೋಟ ಬುಕ್ಕು, ಕೈಕೆಲಸದ ಮಾದರಿಗಳು ಮೊದಲಾದವು ಹೀಗೆ ಎರಡು ಭಾಗಗಳು. ಇದಕ್ಕಾಗಿ ನಾಲ್ಕೂ ಜಿಲ್ಹೆಯ ಸಾಲೆಗಳಿಂದ ಸಾಮಾನುಗಳು ಬರುವವೆಂದು ಬಯಸುವೆವು. ಇವನ್ನು ಸ್ವಂತ ಖರ್ಚಿನಿಂದ ಹೆ. ಮಾ. ಟ್ರೇ. ಸ್ಕೂಲ ಇವರಿಗೆ ತಾ॥ ೨೦-೪-೩೩ ರ ಒಳಗೆ ಕಳಿಸತಕ್ಕದ್ದು; ಇಲ್ಲವೆ ಇವರಿಗೆ ಮೊದಲೇ ತಿಳಿಸಿ, ತಾವು ಬರುವಾಗ ತರತಕ್ಕದ್ದು.

ಶಿಕ್ಷಣ ಯೋಜನೆಗೆ ಬರಲಿಚ್ಛಿಸುವವರು ೧೫ ೪-೩೩ರ ಒಳಗಾಗಿ ತಮ್ಮ ಡಿ. ಆಫೀಸರರಿಗೆ ತಿಳಿಸಬೇಕು. ಇಳಕೊಳ್ಳುವ ಹಾಗು ಊಟದ ಅನುಕೂಲತೆಯನ್ನು ಅಪೇಕ್ಷಿಸುವವರು ನಮಗೆ ೨೦-೪-೩೩ ರ ಒಳಗೆ ತಿಳಿಸಬೇಕು.

ಶಿಕ್ಷಣಯೋಜನೆಯಲ್ಲಿ ಹಾಜರಿರುವ ಬಗ್ಗೆ ಏನೂ ಹಣ ಕೊಡಬೇಕಾಗುವದಿಲ್ಲ; ಆದರೆ ಬರಹೋಗುವ ಖರ್ಚು, ಊಟದ ಖರ್ಚು ಇವನ್ನು ಬರುವವರೇ ವಹಿಸಬೇಕು.

ಧಾರವಾಡ,
೧-೨-೩೩

V. N. Magdal
ಹೆ. ಮಾ. ಟ್ರೇ. ಸ್ಕೂ.

ಮುಂಬಯಿ ಇಲಾಖೆಯೊಳಗಿನ ಉರ್ದು ಶಾಲೆಗಳಿಗಾಗಿ ಉರ್ದು ಬುಕ್ಕ ಕಮಿಟಿಯವರಿಂದ ಪಾಸಾದ ಪುಸ್ತಕಗಳು

(ಕಳೆದ ಶೀಟಿನಿಂದ ಮುಂದುವರಿದದ್ದು).

೧೬	ಜಯಿಸಿ ಕರನಿ ವಯೆಸಿ ಭರನಿ ೩ನೆಯು ೧೯೨೯	ಬೇಗಮ್ ಸಾಹೇಬ -ಎ- ನಾನ್ ಪಾರಾ	ದರೂಲ್ ಇಸ್ಲಾ ಯಾಟ ಪಂಜಾಬ ಲಾಹೋರ	೦-೧-೬	ಉರ್ದು ಗರ್ಲ ಶಾಲೆಗಳಿಗಾಗಿ P. L.
೧೭	ಕವಾಯಿದೆ ತಂದುರಸ್ತಿ ೧ನೆಯು ಆ. ೧೯೨೭	ಸಫಿ ಸವ್ಹಾರವಿ	ಸದರ	೦-೩-೦	ಸದರ
೧೮	ಕಿಸ್ಸಯೇ ಕಾಜಿ ಜವನಪುರ ೧ನೆಯು ಆ. ೧೯೨೯	ಮೌಲ್ವಿ ಮಹಮ್ಮದ ಹುಶೇನ ಬುಧನವಿ	ಸದರ	೦-೨-೦	ಉರ್ದು ಪ್ರಾಯ್ಮರಿ ಶಾಲೆಗಳಿಗೆ P ಮತ್ತು L
೧೯	ಬಗಲಾ ಭಘತ ೧ನೆಯು ಆ. ೧೯೨೭	ಸಫಿ ಸವ್ಹಾರವಿ	ಸದರ	೦-೩-೦	ಸದರ
೨೦	ಖೇಲ ಬತಯೇನೆ ೧ನೆಯು ಆ. ೧೯೨೮	ಸದ	ಸದರ	೦-೪-೦	ಸದರ
೨೧	ಇಂದ್ರ ಸಭಾ ೧ನೆಯು ಆ. ೧೯೨೬	ಸೈಯ್ಯದ ಅಘಾಹಸನ ಅಮಾನತ -ಎ- ಲಖನವಿ	ಸದರ	೦-೮-೦	ಟೀಚರ್ಸ ಲಾಯಬ್ರರಿಂಗಾಗಿ
೨೨	ಚಮನೆ ಉರ್ದು ಹಿಸ್ಸಯೇ ಅವ್ವರ ೧ನೆಯು ಆ. ೧೯೩೦	ಸಾಹಿಲ-ಎ. ಬಿಲ್ಗ್ರಾಮಿ	ಸದರ	೦-೧೩-೦	ಉರ್ದು ಶಾಲೆಗಳಿಗೂ ಟ್ರೇನಿಂಗ ಸಂಸ್ಥೆಗಳಿಗೂ P. L.

೨೩	ಚಮನೆ ಉರ್ದು ಹಿಸ್ಸಯೇ ದುವ್ವಮ್ ೧ನೆಯ ಆ. ೧೯೨೦	ಸದರ	ಸದರ	೧–೦–೦	ಸದರ
೨೪	ಅಸ್ಸ ದಿನಮೆ ದುನಯಾ ಕಾಸಘರ ೧ನೆಯ ಆ. ೧೯೨೦	ಸೌದಾಗರ ಹುಶೇನ ಬಿ. ಎ.	ಸದರ	೦–೧೦–೦	ಸದರ
೨೫	ಬಹರಿ ಜುನುದಿ ಕಾಸಘರ ೧ನೆಯ ಆ. ೧೯೨೭	ಜೂಗಳ ಕಿಶೋರ ಬಿ. ಎ.	ಸದರ	೦–೭–೦	ಸದರ
೨೬	ಜಾದುಕಾ ಲಫಜ	ಫೂಲವನ್ ಅಭ್ಯಾಸ	ಸದರ	೦–೩–೦	ಉರ್ದು ಪ್ರಾಯ್ಮರಿಗಳ ಶಾ. P L
೨೭	ಚಾಂದಕಿ ಬೇಟಿ ೧ನೆ ಆ. ೧೯೨೭	ಫೂಲವನ್ ಅಬ್ಬಾಸ	ದರೂಲ್ ಇಶ್ಯಾಯತ-ಎ-ಪಂಜಾಬ ಲಾಹೋರ	೦–೪–೦	ಉರ್ದು ಪ್ರಾಯ್ಮರಿ ಶಾಲೆಗಳಿಗೆ P. L.
೨೮	ಶಹಜಾದಯೇ ಸನವ್ ಅವರ ಜಿನು.ಹಕಾಬಾದಶಹಾ ೧ನೆ ಆ. ೧೯೩೦	ಅಬುಲ್ ಅಸಾರ ಹಾಫೀಜ -ಎ-ಜಾಲಂಧರಿ	ಸದರ	೦–೪–೦	ಎಲ್ಲಾ ಶಾಲೆಗಳಿಗೂ P. L.
೨೯	ಶಹಜಾದಯೇ ಖುದಾದಾದ ಅವರ ಶಹಜಾದಿ ದರಬಾರ ೧ನೆ ಆ. ೧೯೩೦	ಸದರ	ಸದರ	೦–೪–೦	ಸದರ
೩೦	ಕಲ್‌ಕಾ ಫೋಡಾ ೧ನೆ ಆ. ೧೯೩೦	ಸದರ	ಸದರ	೦–೪–೦	ಸದರ

೩೧	ನೂರೋದ್ದಿನಅಲಿ ಅವರ ಬದರೋದ್ದಿನ ಹಸನ್ ೧ನೆ ಆ. ೧೯೩೦	ಸದರ	ಸದರ	೧—೪—೦	ಎಲ್ಲ ಶಾ. ಗಳಿಗೆ P. L.
೩೨	ಕನಕಟೂ ಕಾಜಿ ೧ನೆ ಆ. ೧೯೨೯	ಸೈಫ ಸಹಸ್ವಾರವಿ	ಸದರ	ಸದರ	ಸದರ
೩೩	ಆನೋಖಿ ದುನಯಾ ೧ನೆ ಆ. ೧೯೨೯	ಉಸ್ಮಾನ ಹೈದರ ಮಿರ್ಝಾ	ಸದರ	ಸದರ	ಸದರ
೩೪	ಅನಪೂರನಾಕಾ ಮುನವ್ವರ ೧ನೆ ಆ. ೧೯೨೭	ಪ್ರೊ. ರಾಮ್ಸರೂಪ್ ಕೋಶಲ್ M. R. A. S.	ಸದರ	೦—೧೨-೦	ಉರ್ದು ಪ್ರಾಯ್ಮರಿ ಶಾಲೆಗಳಿಗೆ P. L.
೩೫	ಅಜರಾಕಿ ವಾಪಸೆ ೧ನೆ ಆ. ೧೯೨೯	ಮಿ. ಮಹ್ಮದ ಝಾಹಿರ್ ಹುಸೇನ ಬಿ. ಎ.	ಸದರ	೧—೮—೦	ಸದರ
೩೬	ರಸೂಮೆ ಜಾಹಿಲತ್ ೧ನೆ ಆ. ೧೯೨೯	ಮೌಲ್ವಿ ನಜಿಮುದ್ದೀನ ಸಹಸ್ವಾರವಿ	ದರೂಲ ಇಸ್ತಾಯತ -ಎ- ಪಂಜಾಬ ಲಾಹೋರ	೦—೧೨-೦	ಉರ್ದು ಪ್ರಾಯ್ಮರಿ ಶಾಲೆಗಳ ಟೀಚರ್ಸ ಲಾಯಬ್ರರಿಗಾಗಿ ಟ್ರೇ. ಸಂಸ್ಥೆಗಳಿಗಾಗಿ P. L.
೩೭	ಚಹರ ದುರವೇಶ ೧ನೆ ಆ. ೧೯೨೭	ಮೀರ ಅಮ್ಮಾನ ದಿಲ್ಲೀ ವಾಲಿಯೆ	ಸದರ	೧—೪—೦	ಸದರ
೩೮	ಫಸಾನಯೇ ಅಜಾಯಿಬ ೧ನೆ ಆ. ೧೯೨೮	ಮಿರ್ಝಾ ರಜಾಬ ಅಲಿಬೇಗ "ಸುರೂರ—ಎ—ಲಖನಾವಿ"	ಸದರ	೧—೮—೦	ಸದರ

೩೯	ಅಲ್ ಹಮರಾ ೧ನೆ ಆ. ೧೯೩೧	ಘೂಲವ್ ಅಬ್ಬಾಸ	ಸದರ	೨-೦-೦	ಸದರ
೪೦	ಷಮಯೀ ಉರ್ದು ಹಿಸ್ಸಯೀ ಅವ್ವಲ ೧ನೆ ಆ. ೧೯೩೦	ಸಾಹಿಲ್-ಎ-ಬಲ್ಗ್ರಾವಿ	ಸದರ	೦-೧೪-೦	ಉರ್ದು ಪ್ರಾಯ್ಮರಿ ಶಾಲೆಗಳಿಗೆ ಹಾಗು ಟ್ರೇನಿಂಗ ಸಂಸ್ಥೆಗಳಿಗೆ P.L.
೪೧	ಷಮಯೀ ಉರ್ದು ಹಿಸ್ಸಯೀ ದುವ್ವಮ್ ೧ನೆ ಆ. ೧೯೩೦	ಸದರ	ಸದರ	೦-೧೪-೦	ಸದರ
೪೨	ತಗಮುಲಾ ೧ನೆ ಆ. ೧೯೨೭	ಸೈಫಸಹ್ವಾರವಿ	ಸದರ	೦-೪-೦	ಪ್ರಾಯ್ಮರಿ ಶಾಲೆಗಳಿಗೆ P. L.
೪೩	ಕದೀಮ ತಹಜಬೀನ ೧ನೆ ಆ. ೧೯೨೭	ಅಬ್ದುಲ್ ಮಜೀದಖಾನ "ಸಾಲಿಕ್" ಬಿ. ಎ.	ಸದರ	೦-೫-೦	ಸದರ ಹಾಗು ಟ್ರೇನಿಂಗ ಸಂಸ್ಥೆಗಳಿಗಾಗಿ
೪೪	ಫೂಲೆ ಮಾಲಾ ೧ನೆ ಆ. ೧೯೨೮	ಅಬುಲ್ ಅಸಾರ ಹಾಫೀಜ -ಎ-ಜಲಂಧರಿ	ಸದರ	೦-೧೨-೦	ಪ್ರಾಯ್ಮರಿ ಶಾಲೆಗಳಿಗೆ P. L.
೪೫	ಪಾಂಚಹಪ್ತೆ, ಗುಬಾರಿಮ ೧ನೆ ಆ. ೧೯೩೦	ಮುಮತಾಝು	ಸದರ	೦-೮-೦	ಸದರ
೪೬	ಶರಯಾಕಿ ಗಿಡಯಾ ೧ನೆ ಆ. ೧೯೨೮	ಘೂಲವ್, ಅಬ್ಬಾಸ	ಸದರ	೦-೪-೦	ಸದರ ಹಾಗು ಗರ್ಲ್ಸ ಶಾಲೆಗಳಿಗೆ ಸಹ

೪೭	ರಿಸಾಲೆಬೆ ನವಾಜಾನ ೧ ನೆ ಆ. ೧೯೩೮	ಮೌಲ್ವಿ ಸೈಯ್ಯದ ಮುಮತಾಝುಅಲಿ, ಲಾಹೋರ	ಸದರ	೦-೧-೦	ಟೀಚರ್ಸ ಲಾಯಬ್ರರಿ
೪೮	ತಾರೀಖ ಇಂಗಲಿಸ್ತಾನ ಹಿಸ್ಸಯೇ ಅವ್ವಲ ೧ನೆ ಆ. ೧೯೩೭	ಬ್ರಿಜ್ ಮೋಹನಶರ್ಮಾ ಎಮ್. ಎ., ಎಸ್. ಸಿ., ಎಮ್. ಆರ್. ಎ. ಎಸ್.	ನಾವಲ್‌ಕಿಶೋರಪ್ರೆಸ್ ಲಖನೌ	೧-೪-೦	ಮಾಧ್ಯಮಿಕ ಶಾ.ಗಳ ಹಾಗು ಟ್ರೇ. ಸ. ಗಳ ಲಾಯಬ್ರರಿ
೪೯	ಹಮಾರಿ ದುನಯಾ ೧ನೆ ಆ. ೧೯೩೧	ಮುನ್ಸಿಲಾಲ ಆಗರಾವಾಲ ಬಿ. ಈಡಿ ಮ‍॥ (ಏಡಿನ್) R. R. G. S. (ಲಂಡನ)	ಮ್ಯಾಕ್ಮಿಲನ್ ಆ್ಯಂಡ ಕೋ ಕಲಕತ್ತಾ	೦-೧೨-೦	ಉರ್ದು ಪ್ರಾ. ಶಾ. ಟೆಕ್ಸ್ಟ ೭ನೇ ಇ ಗೆ ಮತ್ತು ಉರ್ದು ಪ್ರಾ. ಹಾಗು ಮಾ. ಶಾ. ಗಳ ೫-೬-೭ನೆ. ಇ. ಮತ್ತು ಟ್ರೇ. ಸ.
೫೦	ಆನೋಖಿ ದುನಯಾ ಹಿಸ್ಸಯೇ ಸುವ್ವಮ್ ೧ನೆ ಆ. ೧೯೩೧	ಸದರ	ಸದರ	೦-೧೨-೦	ಪ್ರಾ. ಹಾಗು ಮಾ. ಶಾ. ಟ್ರೇ. ಸಂ. ಗಳ P. L.
೫೧	ಮಲಕ ನಮ್ ಸಮ್ ಅವರ ಅಬುಲ್ ಫವಾರಸ	ಮುಲಿಕ್ ಕಮರುದ್ದೀನ ಬಿ. ಎ. ಬಿ. ಟಿ. ಹೆ. ಮಾ. ಇಸ್ಲಾಮಸ್ಕೂಲ ಸಿವಾನ್	ಸದರ	೧-೬-೦	ಪ್ರಾ. ಶಾ. ಗಳಿಗೆ P. L.
೫೨	ಹಿಕಾಯಾತ ಹಷತ್ತ ಬೇಹಿಸ್ತ	ಸದರ	ಸದರ	೦-೨-೬	ಸದರ
೫೩	ಉರ್ದು ರೀಡರ ಹಿಸ್ಸಯೇ ಅವ್ವಲ	ಖಾನಬಹಾದ್ದೂರ ಎಮ್. ಡಿ. ಮುಣಗಾ ಎಮ್. ಎ. ಆ್ಯಂಡ ಎಮ್. ಡಿ. ವಿಲಾಯತ್ ಹುಸೇನ	ಗ್ರಂಥಕರ್ತ	೦-೨-೬	ಪ್ರಾ. ಶಾ. ಗಳಿಗೆ ಪ್ರಾಯಿಜ

೫೪	ಉರ್ದು ರೀಡರ ಹಿಸ್ಸಯೇ ದುವ್ವಮ್ ೧ನೆ ಆ. ೧೯೩೦	ಸದರ	ಸದರ	೦—೪—೦	ಸದರ
೫೫	ಇಂಗಲಿಸ್ತಾನಕಿ ದಾಸ್ತಾನ ೧ನೆ ಆ. ೧೯೩೦	ರಾವಬಹಾದ್ದೂರ ಲಾಲಾ ಸೀತಾ ರಾಮ ಬಿ. ಎ.	ಮೆಸರ್ಸ ಮ್ಯಾಕ್ಮಿಲನ್ ಆ್ಯಂಡಕೋ ಕಲ್ಕತ್ತಾ	೨—೮—೦	ಮಾ. ಶಾ. ಗಳ ೬ನೇ ೭ನೇ ಇ. ಗಳಿಗೆ. T. ಹಾಗು ಟ್ರೇ. ಸಂಸ್ಥೆಗಳಿಗೆ
೫೬	ಹಿಕಾಯತ ಸಿಂಧ ೧ನೆ ಆ. ೧೯೩೧	ಬಾಸಿರ ಅಹಮ್ಮದಖಾನ ಲೇಟ ಹೆ. ಮಾ. ಮದ್ರಾಸ ಎ. ಇಸ್ಲಾಮಸ್ಕೂಲ ರಂಗವಾಡ. ಕರಾಚಿ.	ಬಾಸೀರ ಅಹಮ್ಮದಖಾನ, ಮಾಸ್ತೀಕಿ ಗುತುಬಖಾನ ಕರಾಚಿ	೦—೮—೦	ಸಿಂಧದ ಉರ್ದು ಪ್ರಾ. ಶಾ. ಗಳ ೪ನೇ ಇ. ಗೆ ಟೆಕ್ಸ್ಟ

ಪ್ರೂನಾ
೯—೯—೧೯೨೩

ಮುದ್ರಕ :— ಖಿಂ. ರಾ. ಭಿಸೆ, ಕ. ಪ್ರಿಂ. ವರ್ಕ್ಸ ಧಾರವಾಡ. ೨೩೪೪ ೩೭,೯೨೫.

"ಕರ್ನಾಟಕದ ವರ್ಣನೆಯೂ ಇತಿಹಾಸವೂ"

ಈ ಪುಸ್ತಕವು ಕರ್ನಾಟಕದ ಪ್ರಸಿದ್ಧ ಇತಿಹಾಸ ಸಂಶೋಧಕರಾದ

ಶ್ರೀ. ನಾ. ಶ್ರೀ. ರಾಜಪುರೋಹಿತ

ಇವರಿಂದ ೮ನೇ ಇಯತ್ತೆಗಾಗಿ ಬರೆಯಲ್ಪಟ್ಟಿದೆ.

ಚಿತ್ರ ನಕಾಶಗಳಿಂದ ಕೂಡಿದೆ

ಮೆಹರ್ಬಾನ ಡಾಯರೆಕ್ಟರ ಸಾಹೇಬರವರಿಂದ

ಟೆಕ್ಸ್ಟ (ಪಠ್ಯ) ಪುಸ್ತಕವೆಂದು ಮಂಜೂರಾಗಿದೆ.

ಪ್ರಕಾಶಕರಾದ ಏ. ಆರ್. ಶಿವನಾಗಪ್ಪ, ವಾಗ್ವಿಲಾಸ ಬುಕ್‌ಡಿಪೋ ಹುಬ್ಬಳ್ಳಿ ಇವರಲ್ಲಿ ದೊರೆಯುವವು. ಬೆಲೆ ೮ ಆಣೆ.

ಹೆಚ್ಚು ಪ್ರತಿ ಕೊಳ್ಳುವವರಿಗೆ ಯೋಗ್ಯ ಕಮೀಶನ್ ದೊರೆಯುವದು

ಸರಕಾರದಿಂದ ಮಂಜೂರಾದ

ಆರೋಗ್ಯ ಶಾಸ್ತ್ರದ ಹೊಸ ಟೆಕ್ಸ್ಟ ಪುಸ್ತಕವು

ಶರೀರ ಸಂಗೋಪನ ಶಾಸ್ತ್ರ.

ಬೆಲೆ ೧೦ ಆಣೆ ಕಮಿಶನ್ ೧೦೦ಕ್ಕೆ ೨೦.

ಲೇಖಕ:—ದ. ಬಾ. ಬವೇ, ಬಿ. ಎಜಿ. ರಿಸರ್ಚ ವರ್ಕರ, ಶೇತಕೀ ಕಾಲೇಜ, ಪುಣೆ

ಈ ಪುಸ್ತಕದಲ್ಲಿ ಕನ್ನಡ ೫, ೬, ೭, ಹಾಗು ವ್ಹ. ಫಾಯನಲ್ ಪರೀಕ್ಷೆಗೆ ಬೇಕಾದ ಎಲ್ಲ ವಿಷಯವು ಬಂದಿರುವದು. ಇದರ ಮರಾಠೀ ಆವೃತ್ತಿಯು ಮಧ್ಯಭಾಗದ ಬಹುತರ ಎಲ್ಲ ಸಾಲೆಗಳಲ್ಲಿ ಟೆಕ್ಸ್ಟ, ಎಂದು ಉಪಯೋಗವಾಗುತ್ತಿರುವದು. ಸರಕಾರದ ಟ್ರೇನಿಂಗ ಕಾಲೇಜುಗಳು ಹಾಗು ಪ್ರಾಕ್ಟಿಸಿಂಗಸ್ಕೂಲುಗಳಲ್ಲಿಯೂ ಇದೇ ಟೆಕ್ಸ್ಟ ಎಂದು ಉಪಯೋಗವಾಗುತ್ತಿರುವದು.

ಈ ಪುಸ್ತಕವನ್ನು ತಜ್ಞರು ತುಂಬಾ ಹೊಗಳಿದ್ದಾರೆ. ಬೆಲೆಯಲ್ಲಿ ಇಷ್ಟು ಅಗ್ಗವಾದ ಪುಸ್ತಕವು ಬೇರೊಂದಿಲ್ಲ ಪುಸ್ತಕದಲ್ಲಿ ೨೨೫ ಪುಟಗಳೂ, ೫೫ ಆಕೃತಿಗಳೂ (ಲಾಯಿನ್ ಬ್ಲಾಕ್ಸ) ೨ ಬಣ್ಣದ ಆಕೃತಿಗಳೂ ಒಂದು ನಕಾಶವೂ ಇರುವವು.

ಪುಸ್ತಕಗಳು ಸಿಕ್ಕುವ ಸ್ಥಳಗಳು:—

ಸ್ಟೂಡಂಟ್ಸ ಓನ್ ಬುಕ್‌ಡಿಪೋ, ಧಾರವಾಡ, ತ. ನಾ. ಗೋಡಬೋಲೆ,ಪುಣೆ, ಹಾಗು ಬೆಳಗಾಂವ, ಹುಬ್ಬಳ್ಳಿ, ಕಾರವಾರ, ವಿಜಾಪುರ ಇಲ್ಲಿಯ ಎಲ್ಲ ಬುಕ್‌ಸೇಲರುಗಳಲ್ಲಿ.

Reg. No. B. 2567

೫೫

ನೇ ವಯಸ್ಸಿನಲ್ಲಿ ನೀವು ಯಾವ ಸ್ಥಿತಿಯಲ್ಲಿರುವಿರೆಂಬದರ ವಿಚಾರ ಮಾಡಿರುವಿರಾ! ತಾರುಣ್ಯವು ಹೊರಚಿಮ್ಮುವಾಗ್ಗೆ ವೃದ್ಧಾವಸ್ಥೆಯ ಚಿತ್ರವು ಮುಂದೆ ನಿಲ್ಲದಿರುವದು ಸಹಜವೇ. ಆಗ್ಗೆ ಹಣವಿಲ್ಲದಿದ್ದರೆ ಬಾಳು ಕೀಳಾಗುವದೆಂಬದನ್ನು ನೀವು ವಿಚಾರಿಸುವದು ಯುಕ್ತವೇ. ಮೊದಲಿನ ಹಾಗೆಯೇ ಮುಪ್ಪಿನ ಕಾಲವನ್ನು ಸೌಖ್ಯದಿಂದ ಕಳೆಯುವದು ಹೇಗೆ...? ಭೆಟ್ಟಿಯಾಗಿರಿ ಇಲ್ಲವೆ ಪತ್ರ ಬರೆಯಿರಿ.

ಎಸ್. ಜಿ. ಪಾಚ್ಛಾಪೂರ

ಚಿಕ್ಕೋಡಿ.

ಸ್ಯಾಂಪಲ್] [ಪುಕ್ಕಟೆ

ಉತ್ತಮ ಮಸೀ ಚೀಟುಗಳು

ನೀಲೀಕಪ್ಪು, ಕೆಂಪು, ಜಾಂಬಳಿ ಮಸಿಯ ಚೀಟುಗಳು ಈ ಕಂಪನಿಯು ಬಹಳ ಜನರಿಂದ ಶಿಫಾರಸ ಪಡೆದು ಮೆಡಲ್ಲುಗಳನ್ನು ಸಂಪಾದಿಸಿರುತ್ತದೆ.

ದರಗಳು

೧೮೦	ಚೀಟುಗಳಿಗೆ	೦—೭—
೫೦೦	,,	೧—೧೪—
೧೦೦೦	,,	೩—೦—
೧೦೦೦೦	,,	೩೭—೮—೦ (ರೇಲ್ವೆ ಫ್ರಿ(

ಕೆಜ್ಜಿನ ಮಾಹಿತಿ ಬಗ್ಗೆ ಪತ್ರವ್ಯವಹಾರಮಾಡಿರಿ.

ಕರ್ನಾಟಕ ಇಂಕಕಂಪನಿ,

ಬಾಗಲಕೋಟೆ

Reg. No. B. 2567

ಕನ್ನಡ

ಪ್ರಾಥಮಿಕ ಶಿಕ್ಷಣ

(ಇದರಲ್ಲಿ ಕನ್ನಡ ಶಾಲಾಪತ್ರಿಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

Kannada Prathamik Shikshana

— MARCH 1933 —

ಸಂಪಾದಕ— ವೆಂಕಟೇಶ ನರಸಿಂಗರಾವ ಮಗದಾಳ ಬಿ. ಎ.,

ಸಂಪುಟ ೬೯] ಮಾರ್ಚ ೧೯೩೩ [ವರ್ಷ ೪ ಸಂ. ೧೨

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ	ಪುಟ
೧.	ಇನ್ಸಪೆಕ್‌ಷನವು	೧
೨	ವಾಚನ	೭
೩	ಬರೆಹ	೧೨
೪	ಹಿಂದುಸ್ಥಾನದ ಪ್ರಾ. ಸ್ವಾ. ವೂ ಇತಿಹಾಸದ ಮೇಲೆ ಇದರಿಂದುಂಟಾದ ಪರಿಣಾಮವೂ	೧೬
೫	ಕನ್ನಡ 'ವರ್ಘಪ್ರಾಯಿಜ' ಪರೀಕ್ಷೆ ೧೯೩೪	೨೧
೬	ವಾಕ್ಯವಿಭಜನೆ	೨೩
೭	೧೯೩೩ನೇ ಇಸವಿಯಲ್ಲಿ ಆದ ವರ್ಘಪ್ರಾಯಿಜ ಪರೀಕ್ಷೆಯ ಪ್ರಶ್ನಗಳು	೨೮
೮	ಶಿಕ್ಷಣ ಯೋಜನೆ	೩೧

Printed by K. R. Bhise at the Karnatak Printing Works, Dharwar
& Published by V. N. Magdal, B. A.,
Head-Master, Training School Dharwar, at his Office

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:— **ವೆಂಕಟೇಶ ನರಸಿಂಗರಾವ ಮುಗದಾಳ, ಬಿ. ಎ.,**

ಸಂಪುಟ ೬೯	ಮಾರ್ಚ ೧೯೩೩	ವರ್ಷ ೪; ಸಂ. ೧೨

ಇನ್ಸಪೆಕ್‌ಷನವು

(ಮಿ. ಕೆ. ಎಸ್. ವಕೀಲ ಎಮ್. ಈಡಿ. ಎಫ್. ಆರ್. ಜಿ. ಎಸ್, ಐ. ಇ., ಎಸ್. ಎ. ಇ. ದ. ಭಾಗ ಇವರ ಇಂಗ್ಲಿಷ ಲೇಖದ ಅನುವಾದ)

ಇನ್ಸಪೆಕ್‌ಷನವೆಂದರೆ ನೋಡುವದು; ಸಾಲೆಯ ದಿನದ ಕೆಲಸವು ವಾಡಿಕೆಯಂತೆ ನಡೆದಿರುವಾಗ ಅದನ್ನು ಅವಲೋಕಿಸಿ, ಸಾಲೆಯ ಸ್ಥಿತಿಯಬಗ್ಗೆ ಒಟ್ಟು ಅಭಿಪ್ರಾಯ ವನ್ನು ಮಾಡಿಕೊಳ್ಳುವದು.

೧೮೫೪ರಲ್ಲಿ ವುಡ್‌ಸಾಹೇಬರು ಈ ದೇಶದ ಶಿಕ್ಷಣಕ್ಕೆ ಸಂಬಂಧಿಸಿದ ಒಂದು ವರದಿ ಯನ್ನು ಸಿದ್ಧಪಡಿಸಿ ಈಸ್ಟ ಇಂಡಿಯ ಕಂಪನಿಯವರ ಕಡೆಗೆ ಕಳಿಸಿದರು. ಇದರಲ್ಲಿ ಜನರಿಗೆ ದೊರೆಯತಕ್ಕ ಶಿಕ್ಷಣದ ಸೌಕರ್ಯಗಳನ್ನು ಇವರು ನಿರೂಪಿಸಿದ್ದರು. ಈ ಶಿಕ್ಷ ಣದ ರೂಪರೇಖೆಯನ್ನು ನಿಷ್ಕರ್ಷಿಸಿ ಇದು ಸರಿಯಾಗಿ ಸಾಗುವ ಬಗ್ಗೆ ವ್ಯವಸ್ಥೆಯಾಗ ಲಿಕ್ಕೆ ಸಾರ್ವಜನಿಕ ಶಿಕ್ಷಣ ಖಾತೆಗಳು ಇರಬೇಕೆಂದು ಪ್ರತಿಪಾದಿಸಿದ್ದರು. ಸಾರ್ವಜನಿಕ ಶಿಕ್ಷಣದ ಧೋರಣವನ್ನು ನಿಶ್ಚಯಿಸಿ ಅದರ ವ್ಯವಸ್ಥೆಯನ್ನು ಮಾಡಲಿಕ್ಕಾಗಿ ಆಗಿನಿಂದ ಎಲ್ಲಾ ಇಲಾಖೆಗಳಲ್ಲಿ ಸಾರ್ವಜನಿಕ ಶಿಕ್ಷಣ ಖಾತೆಗಳ ಏರ್ಪಾಡು ಆಯಿತು. ಈ ವ್ಯವಸ್ಥೆಗೆ ಒಳಗಾದ ಸಾರ್ವಜನಿಕ ಶಿಕ್ಷಣ ಸಂಸ್ಥೆಗಳ ಇನ್ಸಪೆಕಷನವನ್ನು ಕ್ರಮ ವಾಗಿಯೂ ನಿಯಮಿತವಾಗಿಯೂ ಮಾಡುವ ಕ್ರಮವು ಆಗಲೇ ಆರಂಭವಾಯಿತು. ಅಂದಿ ನಿಂದ ಇದು ರೂಢವಾಗಿ ಸದ್ಯಕ್ಕೆ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ಒಂದು ಮಹತ್ವದ ಹಾಗು ಆವಶ್ಯಕವಾದ ಅಂಗವಾಗಿರುವದು. ಇಂಗ್ಲಂಡದಲ್ಲಿಯೂ ಇನ್ಸಪೆಕ್‌ಷನವು ಇರುವದು. ಅಲ್ಲಿ ಸಾರ್ವಜನಿಕ ಸಾಲೆಗಳಿಗೆ ಸರಕಾರದವರು ಕೊಡುತ್ತಿದ್ದ ಸಹಾಯಕ

ದ್ರವ್ಯವು ನಿಷ್ಪ್ರಯೋಜಕವಾಗಿ ಹೋಗದಂತೆನೋಡಿಕೊಳ್ಳಲಿಕ್ಕಾಗಿ ಈ ಕ್ರಮವು ಆರಂಭಿಸಲ್ಪಟ್ಟಿತು. ಆದರೆ ಈ ದೇಶದಲ್ಲಿ ಇದರ ಉದಯವು ಈ ಕಾರಣಕ್ಕಾಗಿ ಆಗಲಿಲ್ಲ. ಸರಕಾರದ ಸಾರ್ವಜನಿಕ ಶಾಲೆಗಳಲ್ಲಿಯೂ ಇವರ ಸಹಾಯ ಪಡೆದು ಶಿಕ್ಷಣ ಕೊಡುತ್ತಿರುವ ಖಾಸಗಿ ಶಾಲೆಗಳಲ್ಲಿಯೂ ಪ್ರಜೆಗಳಿಗೆ ದೊರೆಯುವ ಶಿಕ್ಷಣದ ಧೋರಣವನ್ನು ನಿಶ್ಚಯಿಸಿ ಇದಕ್ಕೆ ತಕ್ಕಂತೆ ಶಿಕ್ಷಣವು ಸಾಗುತ್ತಿರುವದೆಂಬದನ್ನು ನೋಡಿಕೊಳ್ಳಲಿಕ್ಕಾಗಿ ಈ ಕ್ರಮವು ಇಲ್ಲಿ ನೆಲೆಗೊಳಿಸಲ್ಪಟ್ಟಿತು. ಇಂಗ್ಲಂಡದಲ್ಲಿ ಇನ್ಸಪೆಕ್ಟರರು ಶಾಲೆಯಲ್ಲಿ ಕೊಡುವ ಧಾರ್ಮಿಕ ಶಿಕ್ಷಣ, ಶಾಲೆಯ ಶಿಸ್ತು ಇಲ್ಲವೆ ಶಾಲೆಯ ವ್ಯವಸ್ಥೆ ಇವುಗಳಲ್ಲಿ ಕೈಹಾಕುತ್ತಿರಲಿಲ್ಲ. ಸಹಾಯಕ ದ್ರವ್ಯವು ಯಾವ ಕರಾರುಗಳನ್ನು ಅವಲಂಬಿಸಿರುವದೋ ಅವು ಸರಿಯಾಗಿ ಪಾಲಿಸಲ್ಪಟ್ಟಿರುವವೋ ಹ್ಯಾಗೆ ಎಂಬದನ್ನು ನೋಡುತ್ತಿದ್ದರು. ಈ ಶಾಲೆಗಳ ಬಗ್ಗೆ ಸರಕಾರಕ್ಕೆ ಬೇಕಾದ ಮಾಹಿತಿಯನ್ನು ಅವರು ದೊರಕಿಸುತ್ತಿದ್ದರು; ಹಾಗು ತಾವು ಮಾಡಿದ ಇನ್ಸಪೆಕ್‌ಷನ್ನಿನಿಂದ ತಾವು ಮಾಡಿಕೊಂಡ ಅಭಿಪ್ರಾಯಗಳನ್ನು ಸರಕಾರಕ್ಕೆ ತಿಳಿಸುತ್ತಿದ್ದರು. ಈ ದೇಶದಲ್ಲಿ ಇನ್ಸಪೆಕ್ಟರರ ಕೆಲಸವು ಬೇರೆ ತೆರದ್ದಾಗಿತ್ತು. ಇಲ್ಲಿ ಇವರು ಸರಕಾರದ ಹಾಗು ಸಹಾಯ ಪಡೆದ ಶಾಲೆಗಳ ಪರೀಕ್ಷೆಯನ್ನು ತಾವೇ ತೆಗೆದುಕೊಳ್ಳುತ್ತಿದ್ದರು; ಅಥವಾ ಶಾಲೆಗಳ ವ್ಯವಸ್ಥಾಪಕರಿಗೆ ಈ ಕೆಲಸದಲ್ಲಿ ನೆರವಾಗುತ್ತಿದ್ದರು. ಇದಲ್ಲದೆ ಈ ಕೆಲಸದ ಬಗ್ಗೆ ಶಾಲಾಧಿಕಾರಿಗಳಿಗೂ ಶಿಕ್ಷಕರಿಗೂ ಸಾಮಾನ್ಯ ಸೂಚನೆಗಳನ್ನು ಕೊಡುತ್ತಿದ್ದರು. ಈ ಮೇರೆಗೆ ಈ ದೇಶದಲ್ಲಿ ಇನ್ಸಪೆಕ್ಟರರು ಆರಂಭದಿಂದ ಮುಖ್ಯವಾಗಿ ಪರೀಕ್ಷಾಧಿಕಾರಿಗಳಾಗಿದ್ದರು. ಶಿಕ್ಷಕರಿಗೆ ಅವರ ಕೆಲಸದಬಗ್ಗೆ ಮಾರ್ಗ ತೋರಿಸುವದು ಇವರ ಎರಡನೆಯ ಕರ್ತವ್ಯವಾಗಿತ್ತು. ಇಂಗ್ಲಂಡದಲ್ಲಿ ೧೮೬೨ರಲ್ಲಿ ಶಾಲಾಕೋಡಿನ ರಿವಿಜನ್ ಆಯಿತು. ಪರೀಕ್ಷೆಯ ಪರಿಣಾಮವನ್ನು ನೋಡಿ ಅದಕ್ಕೆ ತಕ್ಕಂತೆ ಸಹಾಯಕ ದ್ರವ್ಯವನ್ನು ಕೊಡುವ ಪರಿಪಾಠವು ಆ ವರುಷದಿಂದ ಅಲ್ಲಿ ಆರಂಭವಾಯಿತು. ಆಗ ಇನ್ಸಪೆಕ್ಟರರ ಮುಖ್ಯ ಕೆಲಸವು ಪರೀಕ್ಷೆಯನ್ನು ತೆಗೆದುಕೊಳ್ಳುವದಾಯಿತು. ಇಂಗ್ಲಂಡದಲ್ಲಿ ಈ ಪದ್ಧತಿಯು ಆರಂಭವಾದಕೂಡಲೆ ಇಲ್ಲಿಯೂ ರೂಢಿಯಲ್ಲಿ ಬಂದಿತು. ಸೂಕ್ಷ್ಮವಾದ ಪರೀಕ್ಷೆ ತೆಗೆದುಕೊಂಡು ಅನೇಕ ಸಂಗತಿಗಳ ತೂಕ ನೋಡಿ ಪರೀಕ್ಷೆಯ ಪರಿಣಾಮದ ಮೇಲೆ ಸಹಾಯಕ ದ್ರವ್ಯವನ್ನು ಕೊಡುವದರಿಂದ ದುಷ್ಪರಿಣಾಮಗಳೇ ವಿಶೇಷವಾಗಿ ತಲೆದೋರಲಾರಂಭಿಸಿದವು. ಈ ಪದ್ಧತಿಯು ಇಂಗ್ಲಂಡದಲ್ಲಿಯೂ ಈ ದೇಶದಲ್ಲಿಯೂ ಸುಮಾರು ೪೦ ವರ್ಷಗಳವರೆಗೆ ರೂಢಿಯಲ್ಲಿತ್ತು. ೧೯೦೨ರಲ್ಲಿ ಇಂಗ್ಲಂಡದಲ್ಲಿ ಇಂಗ್ಲಿಷ ಎಜ್ಯುಕೇಶನ್ ಆಕ್ಟ ಎಂಬ ಕಾಯಿದೆಯಿಂದ ಈ ದುಷ್ಟಪದ್ಧತಿಯು ಮೂಲೆಗೆ ಬಿತ್ತು. ಆ ಬಳಿಕ ಈ ದೇಶದಲ್ಲೂ ಈ ಪದ್ಧತಿಯನ್ನು ನಿರಾಕರಿಸಲಾಯಿತು. ೧೯೧೪ರಲ್ಲಿ ವರಿಷ್ಠ ಸರಕಾರದವರು "ಹಿಂದುಸ್ತಾನದ ಶಿಕ್ಷಣದ ಧೋರಣವು" ಈ ವಿಷಯದ ಬಗ್ಗೆ ಮಾಡಿದ ಗೊತ್ತುವಳಿಯಲ್ಲಿ ಬರೆದದ್ದು:– ಇನ್ಸಪೆಕ್ಟ

ರರು ಕೇವಲ ಪರೀಕ್ಷಕರಲ್ಲ; ಇದಕ್ಕೂ ಹೆಚ್ಚಿನ ಕೆಲಸವನ್ನು ಇವರು ಮಾಡತಕ್ಕದ್ದು. ಶಿಕ್ಷಕರು ಎಷ್ಟು ಕಲಿಸುವರೆಂಬದನ್ನು ನೋಡಿದರೆ ಸಾಲದು. ಶಿಕ್ಷಣ ಪದ್ಧತಿಗಳ ಪರಿಣಾಮಗಳನ್ನು ಇವರು ಸೂಕ್ಷ್ಮವಾಗಿ ಅವಲೋಕಿಸತಕ್ಕದ್ದು; ಈ ಪದ್ಧತಿಗಳ ಬಗ್ಗೆ ಶಿಕ್ಷಕರೊಡನೆ ಚರ್ಚೆಮಾಡಿ, ಅವರಿಗೆ ಮಾರ್ಗದರ್ಶಿಗಳಾಗತಕ್ಕದ್ದು. ಸಾಲೆಗಳಲ್ಲಿ ವಾಡಿಕೆಯಾಗಿ ಪ್ರತಿದಿವಸ ನಡೆಯುವ ಕೆಲಸಗಳು, ಅಲ್ಲಿಯ ಪರಿಸ್ಥಿತಿ ಇವು ಇನ್ಸಪೆಕ್ಟರರಿಗೆ ಚೆನ್ನಾಗಿ ಗೊತ್ತಾಗಿರತಕ್ಕದ್ದು. ”

ಯೋಗ್ಯರೀತಿಯಿಂದ ಇನ್ಸಪೆಕ್‌ಷನವು ನಡೆದರೆ ಕೆಳಗೆ ಕಾಣಿಸಿದ ಸಂಗತಿಗಳು ಅಧಿಕಾರಿಗಳ ಲಕ್ಷ್ಯದಲ್ಲಿ ಬರತಕ್ಕದ್ದು.

(೧) ಸಾಲೆಯು ಯೋಗ್ಯವಾದ ಸ್ಥಳದಲ್ಲಿ ಇರುವದು; ಅದರ ಸುತ್ತಲಿನ ಭಾಗವು ಹುಡುಗರ ಆರೋಗ್ಯಕ್ಕೆ ಸಹಾಯಕವಾದದ್ದಿರುವದು.

(೨) ಶಾಲಾಗೃಹದ ಪ್ರತಿಯೊಂದು ಕೋಣೆಯಲ್ಲಿ ಎಲ್ಲ ಹುಡುಗರಿಗೆ ಸಾಕಷ್ಟು ಬೆಳಕು ಸಿಗುವದು. ಎಲ್ಲ ಕಡೆಯಲ್ಲಿ ಹವೆಯು ಸರಿಯಾಗಿ ಆಡುವದು.

(೩) ಶಾಲಾಗೃಹದಲ್ಲಿ ಹುಡುಗರಿಗೆ ಶ್ರಮವಿಲ್ಲನೆ ಕೂಡಲಿಕ್ಕೆ ಬೇಕಾದ ಸಾಧನಗಳು ಸಾಕಷ್ಟು ಇರುವದು; ಇವುಗಳ ಉಪಯೋಗವು ಯೋಗ್ಯರೀತಿಯಿಂದ ಆಗುತ್ತಿರುವದು; ಶಿಕ್ಷಣಕ್ಕೆ ಅವಶ್ಯವಾದ ಸಾಧನಗಳ ಪೂರೈಕೆಯು ಸಾಕಷ್ಟು ಇರುವದು; ಅವಶ್ಯವಿರುವಾಗ ಇವುಗಳ ಉಪಯೋಗವನ್ನು ಶಿಕ್ಷಕರು ಮಾಡುತ್ತಿರುವದು.

(೪) ದಿನಾಲು ಹುಡುಗರು ತಪ್ಪದೆ ಹೊತ್ತು ಹೊತ್ತಿಗೆ ಸರಿಯಾಗಿ ಸಾಲೆಗೆ ಬರುವರೆಂಬದನ್ನು ನೋಡಿಕೊಂಡು ಈ ಬಗ್ಗೆ ತಕ್ಕ ವ್ಯವಸ್ಥೆಯನ್ನು ಮಾಡಲಿಕ್ಕೆ ಬೇಕಾದ ಸಾಧನಗಳು ಇರುವದು; ವಿದ್ಯಾರ್ಥಿಗಳಲ್ಲಿ ನಿಯಮಿತತನವನ್ನೂ ವೇಳೆಯ ಮಹತ್ವವನ್ನೂ ನೆಲೆಗೊಳಿಸುವ ಉಪಾಯಗಳನ್ನು ಬಿಡದೆ ಕೈಕೊಳ್ಳುವ ಏರ್ಪಾಡುಗಳು ಇರುವದು.

(೫) ಶಿಕ್ಷಣದ ತಾಸುಗಳನ್ನು ಬೇರೆ ಬೇರೆ ವಿಷಯುಗಳಲ್ಲಿ ತಕ್ಕ ರೀತಿಯಿಂದಲೂ ಹುಡುಗರ ದೃಷ್ಟಿಯಿಂದ ತಕ್ಕ ಪ್ರಮಾಣದಿಂದಲೂ ಹಂಚಿರುವದು; ವಿದ್ಯಾರ್ಥಿಗಳಿಗೆ ಕಲಿಯುವ ಬೇಸರವು ಉಂಟಾಗದಂತೆಯೂ ಅವರಿಗೆ ಶಾರೀರಿಕ ಶ್ರಮವೆನಿಸದಂತೆಯೂ ಬೇರೆ ಬೇರೆ ವಿಷಯುಗಳ ಶಿಕ್ಷಣದ ಹೊಂದಿಕೆಯು ಇರುವದು.

೬ ದಿನದ ವೇಳಾಪತ್ರಿಕೆಯಲ್ಲಿ ಮಾನಸಿಕ ಕೆಲಸವನ್ನು ಇಡುವದಲ್ಲದೆ ಶಾರೀರಿಕ ಕೆಲಸವನ್ನು ಇಟ್ಟಿರುವದು.

೭ ಶಾಲೆಯಲ್ಲಿ, ಶಿಕ್ಷಣ ಕೊಡಲಿಕ್ಕೆ ಯೋಗ್ಯರಾದ ಶಿಕ್ಷಕರು ಸಾಕಷ್ಟು ಜನರು ಇರುವದು. ಶಾಲೆಯ ಕೆಲಸವು ಇವರಲ್ಲಿ ಸಮನಾಗಿ ಹಂಚಿರುವದು. ಈ ಕೆಲಸವು ಯೋಗ್ಯ ರೀತಿಯಿಂದ ನಡೆದಿರುವದೆಂಬದನ್ನು ನೋಡುವ ವ್ಯವಸ್ಥೆಯು ಇರುವದು.

೮ ಹುಡುಗರು ನಿಂತಾಗ, ಕುಳಿತಾಗ, ಓದುವಾಗ, ಬರೆಯುವಾಗ ತಕ್ಕ ರೀತಿಯಲ್ಲಿ ನಿಲ್ಲುವರು, ಕುಳಿತಿರುವರು ಎಂಬದನ್ನು ನೋಡುವ ವ್ಯವಸ್ಥೆಯು ನೆಲೆಗೊಂಡಿರುವದು.

೯ ವಿದ್ಯಾರ್ಥಿಗಳಿಗೆ ಮನೆಯಲ್ಲಿ ಮಾಡಿಕೊಂಡು ಬರಲಿಕ್ಕೆ ಹೇಳಿದ ಅಭ್ಯಾಸವು ಇಲ್ಲವೆ ಕೆಲಸವು ಅವರಿಗೆ ಅಲ್ಲಿ ದೊರೆಯುವ ವೇಳೆಗೂ ಅವರ ಬುದ್ಧಿಗೂ ಯೋಗ್ಯ ದಾದದ್ದಾಗಿ ಇರುವದು.

೧೦ ಹುಡುಗರು ಮಾಡುವ ಯಾವತ್ತು ಬರೆಹದ ಕೆಲಸವು ಅಚ್ಚುಕಟ್ಟಾಗಿ ಇರುವದು; ಇದನ್ನು ಆಯಾ ಶಿಕ್ಷಕರು ನೋಡಿ ಯೋಗ್ಯವಾಗಿ ತಿದ್ದುವ ವ್ಯವಸ್ಥೆಯು ಇರುವದು.

೧೧ ಹುಡುಗರ ಕೆಲಸವನ್ನು ಕಾಲ ಕಾಲಕ್ಕೆ ಪರೀಕ್ಷಿಸುವ ವ್ಯವಸ್ಥೆಯೂ ಅವರು ಬೇರೆ ಬೇರೆ ವಿಷಯಗಳಲ್ಲಿ ಹೊಂದುತ್ತಿರುವ ಪ್ರಗತಿಯನ್ನು ಬರೆದಿಡುವ ವ್ಯವಸ್ಥೆಯೂ ಇರುವದು.

೧೨ ಶಾಲೆಯ ವೇಳಾಪತ್ರಿಕೆಯಲ್ಲಿ ಸಮಾವೇಶವಾಗಿದ್ದರೂ ಅವರ ಹಿತಕ್ಕೆ ಅನುವಾಗುವ ವಿಷಯಗಳ ಜ್ಞಾನ, ಅವರಿಂದಾಗಬಹುದಾದ ಕಾರ್ಯಗಳು ಈ ಬಗ್ಗೆ ವ್ಯವಸ್ಥೆಯು ಇರುವದು. ಉದಾ:- ಸ್ಕೌಟ ಶಿಕ್ಷಣ, ಪ್ರವಾಸಗಳು ಮೊದಲಾದವು.

೧೩ ಹುಡುಗರ ಆರೋಗ್ಯರಕ್ಷಣೆಯ ವ್ಯವಸ್ಥೆಯು ಇರುವದು; ಅವರ ಶಾರೀರಿಕ ಬೆಳವಣಿಗೆಯೂ ವಿಕಾಸವೂ ತಕ್ಕಂತೆ ನಡೆದಿರುವದೆಂಬದನ್ನು ಬರೆದಿಡುವ ವ್ಯವಸ್ಥೆಯು ಇರುವದು.

೧೪ ಹುಡುಗರಲ್ಲಿ ಸ್ವಚ್ಛತೆ, ಅಚ್ಚುಕಟ್ಟುತನ, ಆರೋಗ್ಯಕ್ಕೆ ಅವಶ್ಯವಾದ ಚಟುವಟಿಕೆಗಳು, ವೇಳೆಯನ್ನು ವ್ಯರ್ಥ ಹೋಗಗೊಡದೆ ಕೆಲಸದಲ್ಲಿ ತೊಡಗಿರುವ ಹುರುಪು ಈ ಚಟಗಳು ಶಾಲೆಯಲ್ಲಿಯೂ ಶಾಲೆಯ ಹೊರಗೂ ದೊರೆಯುವ ಶಿಕ್ಷಣ ದಿಂದ ನೆಲೆಗೊಳ್ಳುವಂಥ ಏರ್ಪಾಡುಗಳು ಇರುವದು.

೧೫ ಶಾಲಾಧಿಕಾರಿಗಳು, ಶಿಕ್ಷಕರು, ವಿದ್ಯಾರ್ಥಿಗಳತಾಯ್ತಂದೆಗಳು ಹಾಗು ಪಾಲಕರು ಇವರೊಡನೆ ಸ್ನೇಹಭಾವದ ಹಾಗು ಸಹಕಾರಿತ್ವದ ಸಂಬಂಧಗಳ ವ್ಯವಸ್ಥೆಯಾಗಿರುವದು

ಇನ್ಸಪೆಕ್‌ಷನ್‌ವು

೧೩. ಶಾಲೆಯ ಎಲ್ಲ ಕೆಲಸಗಳಲ್ಲಿ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ "ವ್ಯವಸ್ಥೆಯಲ್ಲಿ ಸ್ವಾತಂತ್ರ್ಯವನ್ನು ಕೊಟ್ಟು" ಸ್ವಾತಂತ್ರ್ಯದ ಪರಿಸ್ಥಿತಿಯಲ್ಲಿಯೇ ವ್ಯವಸ್ಥೆಯನ್ನು ಕಾಯುವ ಏರ್ಪಾಡು ಇರುವದು.

ಮೇಲೆ ಕಾಣಿಸಿದ ಸಂಗತಿಗಳನ್ನು ಕುರಿತು ವಿಚಾರಮಾಡಲು, ಇನ್ಸಪೆಕ್ಟರರ ಕೆಲಸವು ಪರೀಕ್ಷೆಮಾಡುವದು ಮಾತ್ರವಲ್ಲೆಂಬದು ಸ್ಪಷ್ಟವಾಗುವದು. ಪರೀಕ್ಷೆಗಳಿಂದ ಶಾಲೆಗೆ ಬರುವ ಪ್ರತಿಯೊಬ್ಬ ವಿದ್ಯಾರ್ಥಿಯು ತಾನು ಕಲಿಯುತ್ತಿರುವ ಇಯತ್ತೆಯಲ್ಲಿ, ಕಲಿಯುತ್ತಿರುವ ಪ್ರತಿಯೊಂದು ವಿಷಯದಲ್ಲಿ ಎಷ್ಟು ಪ್ರಗತಿಯನ್ನು ಹೊಂದಿರುವನೆಂಬದು ಮಾತ್ರ ಗೊತ್ತಾಗಬಹುದು. ಮೇಲಿನ ಇಯತ್ತೆಗೆ ಹೋಗಲಿಕ್ಕೆ ಅವನು ಅರ್ಹನಿರುವನೋ ಇಲ್ಲವೋ ಎಂಬದನ್ನು ನಿಶ್ಚಯಿಸಬಹುದು. ಆದರೆ ಹುಡುಗರ ಆರೋಗ್ಯಸ್ಥಿತಿ, ಅವರ ಚಟಗಳು, ಅವರ ಸ್ವಭಾವ, ಅವರಲ್ಲಿ ನೆಲೆಗೊಂಡ ಶಿಸ್ತು ಈ ಮೊದಲಾದ ಮಹತ್ವದ ಅಂಶಗಳನ್ನು ಪರೀಕ್ಷೆಯಿಂದ ನಿಶ್ಚಯಿಸುವದಾಗದು.

ಆದರೆ ಇನ್ಸಪೆಕ್‌ಷನವು ಸದ್ಯಕ್ಕೆ ಪೂರ್ಣ ಪರಿಣಾಮಕಾರಿಯಾಗಿಲ್ಲವೆಂಬದು ಎಲ್ಲರಿಗೂ ಗೊತ್ತಿದ್ದ ಮಾತಾಗಿದೆ. ಇದಕ್ಕೆ ಹಲವು ಕಾರಣಗಳಿವೆ. ಇವುಗಳಲ್ಲಿ ಮುಖ್ಯವಾದದ್ದಾವುದೆಂದರೆ, ಇನ್ಸಪೆಕಷನ್ನದ ಕೆಲಸವನ್ನು ಮಾಡುತ್ತಿರುವ ಬಹುತರ ಅಧಿಕಾರಿಗಳ ಸಾಮಾನ್ಯ ಶಿಕ್ಷಣವು ಸಾಕಷ್ಟು ಮುಂದುವರಿದಿರುವದಿಲ್ಲ; ಅವರಿಗೆ ಶಿಕ್ಷಣದ ಅನುಭವವು ಸಾಕಷ್ಟು ಇರುವದಿಲ್ಲ; ಮೇಲಾಗಿ ತಮ್ಮ ಕೆಲಸವನ್ನು ಪರಿಣಾಮಕರವಾಗುವಂತೆ ಮಾಡಲಿಕ್ಕೆ ಬೇಕಾದ ಟ್ರೇನಿಂಗವು ಅವನಿಗೆ ದೊರೆತಿರುವದಿಲ್ಲ. ಆದ್ದರಿಂದ ಇನ್ಸಪೆಕ್‌ಷನವೆಂದರೆ ಅವಸರದಿಂದ ಪರೀಕ್ಷೆಮಾಡುವದು; ಇಲ್ಲವೆ "ವ್ಹಿಸಿಟ" ಮಾಡುವದು ಎಂದು ಅವರ ತಿಳಿವಳಿಕೆಯಾಗುವದು. ಈ ಬಗ್ಗೆ ಹಾರಟಾಗ ಕಮೀಟಿಯವರು ತಮ್ಮ ರಿಪೋರ್ಟಿನಲ್ಲಿ ಮುಂದೆ ಕಾಣಿಸಿದಂತೆ ಬರೆದಿರುವರು— "ಬಹುತರ ಪ್ರಾಂತಗಳಲ್ಲಿ ಎಲ್ಲ ತರಗತಿಗಳ ಇನ್ಸಪೆಕ್‌ಟಿಂಗ ಅಧಿಕಾರಿಗಳಲ್ಲಿ ಬಹುಜನರು ತಮ್ಮ ಕೆಲಸದಬಗ್ಗೆ "ಟ್ರೇನಿಂಗ ಪಡೆಯದಿದ್ದವರು" ಇರುವರು. ಇಂಥ ಸಾಕಷ್ಟು ಸಾಮಾನ್ಯ ಶಿಕ್ಷಣ ಪಡೆಯದ ಹಾಗು ಟ್ರೇನಿಂಗ ಇಲ್ಲದ ಅಧಿಕಾರಿಗಳ ಕೆಲಸದಿಂದ ಶಾಲೆಗಳಲ್ಲಿಯೂ ಅಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರಲ್ಲಿಯೂ ಸುಧಾರಣೆಯನ್ನು ಅಪೇಕ್ಷಿಸುವದು ಸರಿಯಲ್ಲ. ಈ ಸ್ಥಿತಿಯು ಸಮಾಧಾನಕರವಿಲ್ಲ. ತಮ್ಮ ಕೆಲಸದ ಬಗ್ಗೆ ಟ್ರೇನಿಂಗ ಪಡೆಯದ ಇಂಥ ಅಧಿಕಾರಿಗಳ ಬಗ್ಗೆ ಶಿಕ್ಷಕರಲ್ಲಿ ವಿಶ್ವಾಸವೂ, ಗೌರವವೂ ಉಂಟಾಗುವದು ಸುಲಭವಲ್ಲ. ಆದ್ದರಿಂದ ಸದ್ಯದ ಎಲ್ಲಕ್ಕೂ ಹೆಚ್ಚಿನ ಅಗತ್ಯವು ಯಾವದೆಂದರೆ ಇನ್ಸಪೆಕ್‌ಷನ್ನದ ಕೆಲಸಕ್ಕೆ ನಿಯಮಿಸಲ್ಪಡುವ ಅಧಿಕಾರಿಗಳು ಮೇಲಾದ ಸಾಮಾನ್ಯ ಶಿಕ್ಷಣವನ್ನು ಹೊಂದಿದವರೂ, ತಮ್ಮ ಕೆಲಸದ ಬಗ್ಗೆ ಟ್ರೇನಿಂಗ ಪಡೆದವರೂ ಸಾಕಷ್ಟು ಶಿಕ್ಷಣಾನುಭವವುಳ್ಳವರೂ ಇರುವದು

ಅವಶ್ಯವಾದದ್ದೆಂದು ನಿರ್ಬಂಧನಾಗತಕ್ಕನ್ನು. ಇನ್ಸಪೆಕ್ಟರರ ಕೆಲಸವನ್ನು ಮಾಡುವವರಲ್ಲಿ ಬಹು ಜನರು ಆ ಕೆಲಸಕ್ಕೆ ಬೇಕಾದ ಟ್ರೇನಿಂಗ ಪಡೆಯದಿದ್ದವರು ಇರುವವರೆಗೆ ಶಿಕ್ಷಕರ ಕೆಲಸದಲ್ಲಿ ಸುಧಾರಣೆಯನ್ನು ಅಪೇಕ್ಷಿಸುವದು ಸರಿಯಲ್ಲ.

ಇನ್ಸಪೆಕ್ಟರರು ಯೋಗ್ಯತೆಯುಳ್ಳವರಿದ್ದರೂ ಅವರಿಗೆ ಆಡಳಿತದ ಕೆಲಸಗಳನ್ನು ಒಪ್ಪಿಸುವದರಿಂದ ಅವರ ಮುಖ್ಯ ಕೆಲಸವು ಸಮಾಧಾನಕರವಾಗಿ ಸಾಗುವದಿಲ್ಲ. ಭತ್ತೆಯ ಬಿಲ್ಲುಗಳನ್ನು ನೋಡಿ ಪಾಸು ಮಾಡುವದು, ತಿಂಗಳ ಪತ್ರಿಕೆ ಮೊದಲಾದವುಗಳನ್ನು ಪರೀಕ್ಷಿಸುವದು, ಇವೇ ಮೊದಲಾದ ಕಚೇರಿಯ ಕೆಲಸಗಳನ್ನು ಎಷ್ಟೋ ಕಡೆಗೆ ಅವರು ಮಾಡಬೇಕಾಗುತ್ತದೆ. ಕಚೇರಿಗಳೊಳಗಿನ ಕಾರಕೂನರು ತಕ್ಕಷ್ಟು ಅನುಭವಿಕರಿರುವದಿಲ್ಲ. ಇಂಥವರ ಕೆಲಸಗಳನ್ನು ನೋಡಲಿಕ್ಕಾಗಿ ಇನ್ಸಪೆಕ್ಟರರಿಗೆ ವಿಪುಲವಾದ ಸಂಬಳವನ್ನು ಕೊಟ್ಟು ನೇಮಿಸುವದು ಮಿತವ್ಯಯದ ದೃಷ್ಟಿಯಿಂದ ಸರಿಯಾದದ್ದಲ್ಲ. ಸ್ವಲ್ಪ ಹೆಚ್ಚಿನ ಪಗಾರದ ಮೇಲೆ ವಿದ್ಯಾವಂತರಾದ ಕಾರಕೂನರನ್ನು ನೇಮಿಸಿ ಕಚೇರಿಯ ಕೆಲಸದ ಭಾರವನ್ನು ಇನ್ಸಪೆಕ್ಟರರಿಂದ ತೆಗೆದುಹಾಕಿದರೆ ಅವರ ಕೆಲಸವು ಹೆಚ್ಚು ಪರಿಣಾಮಕಾರವಾಗುವದೆನ್ನುವದರಲ್ಲಿ ಸಂದೇಹವಿಲ್ಲ.

ಇನ್ಸಪೆಕ್ಟಿಂಗ ಆಫೀಸರರು ಸದ್ಯದ ಶಿಕ್ಷಣ ಸುಧಾರಣೆಗಳನ್ನು ಅರಿತವರಾಗಲಿಕ್ಕೆ ಇಂಗ್ಲಂಡದ ಇನ್ಸಪೆಕ್ಟರರೊಬ್ಬರು ಒಮ್ಮೆ ಮಾಡಿದ ಸೂಚನೆಯು ಒಳ್ಳೇ ಮಹತ್ವದಾಗಿದೆ. ಪ್ರತಿಯೊಬ್ಬ ಇನ್ಸಪೆಕ್ಟಿಂಗ ಆಫೀಸರನು ಪ್ರತಿವರುಷ ಒಂದು ಹೊಸ ಶಿಕ್ಷಣ ವಿಷಯಕ ಪುಸ್ತಕವನ್ನು ಓದಲಿಕ್ಕೇಬೇಕೆಂದೂ ಐದು ವರ್ಷಗಳಲ್ಲಿ ಒಮ್ಮೆಯಾದರೂ ತಾನು ಅನುಭವದಿಂದ ಕಂಡುಹಿಡಿದ ಶಿಕ್ಷಣಾತ್ಮಕ ಸಂಗತಿಗಳ ಬಗ್ಗೆ ಒಂದು ಸ್ವತಂತ್ರ ಉಪನ್ಯಾಸವನ್ನು ಬರೆಯಬೇಕೆಂದೂ ನಿರ್ಬಂಧವಿರಬೇಕೆಂದು ಅವರು ಹೇಳಿರುವರು.

ಸದ್ಯದ ಇನ್ಸಪೆಕ್ಟಿಂಗ ಆಫೀಸರರನ್ನು ನಿಯಮಿಸುವ ಪದ್ಧತಿಯಲ್ಲಿಯೂ ಹೊಸ ಏರ್ಪಾಡು ಆಗುವದು ವಿಹಿತವೆಂದು ತೋರುತ್ತದೆ. ಸದ್ಯಕ್ಕೆ ನಮ್ಮಲ್ಲಿ ಸಾಮಾನ್ಯ ಇನ್ಸಪೆಕ್ಟಿಂಗ ಆಫೀಸರರಿರುವರು; ಅಂದರೆ ಪ್ರಾಥಮಿಕ, ಮಾಧ್ಯಮಿಕ ಹಾಗು ವಿಶೇಷ (ಔದ್ಯೋಗಿಕ ಮೊದಲಾದ) ಶಿಕ್ಷಣವನ್ನು ಒಬ್ಬ ಇನ್ಸಪೆಕ್ಟಿಂಗ ಅಧಿಕಾರಿಯು ತಪಾಸ ಮಾಡುವ ಪರಿಪಾತವಿರುವದು. ಈ ವ್ಯವಸ್ಥೆಯು ಸಮಾಧಾನಕರವಿಲ್ಲವೆಂಬದು ಸ್ಪಷ್ಟವು. ಇನ್ಸಪೆಕ್ಶನ್ ಮಾಡುವವರಲ್ಲಿ ವಿಭಾಗವಾಗುವದು ಆವಶ್ಯಕವು. ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದವರು ಬೇರೆಯಿರತಕ್ಕದ್ದು; ಮಾಧ್ಯಮಿಕ ಶಿಕ್ಷಣವನ್ನು ನೋಡುವವರು ಪ್ರತ್ಯೇಕವಾಗಿರತಕ್ಕದ್ದು; ಟ್ರೇನಿಂಗ ಸಂಸ್ಥೆಗಳ ಕೆಲಸವನ್ನು ಪರೀಕ್ಷಿಸಿ ದಾರಿತೋರಿಸುವವರು ಬೇರೆಯಿರತಕ್ಕದ್ದು, ಔದ್ಯೋಗಿಕ ಸಂಸ್ಥೆಗಳನ್ನು ಬೇರೆ ಜನರೇ ನಿರೀಕ್ಷಿಸತಕ್ಕದ್ದು; ಮುಂತಾದವು-ಅಂದರೆ ಈ ಬಗೆಯ ಅಧಿಕಾರಸ್ಥರು ತಮತಮಗೆ ಸಂಬಂಧಿ

ಸುವ ಶಿಕ್ಷಣಾಲಯಗಳ ಬಗ್ಗೆ ವಿಶಿಷ್ಟವಾದ ಜ್ಞಾನಾನುಭವಗಳುಳ್ಳವರಿದ್ದು ಆಯಾ ಶಿಕ್ಷಣದ ಕೊರತೆ ಬೇಡಿಕೆಗಳನ್ನು ಅಧಿಕಾರವಾಣಿಯಿಂದ ಮಾಡಿಸುವಂಥವರಿರಬೇಕು. ಇಂಥವರಿಂದ ಜನತೆಗೂ ಲೋಕಲ್ ಆಥಾರಿಟಿಗಳಿಗೂ ಲಾಭವಾಗುವದೆಂಬದರಲ್ಲಿ ಸಂದೇಹವಿಲ್ಲ.

ಇಂಗ್ಲಂಡದ ಬೋರ್ಡ ಆಫ ಎಜ್ಯುಕೇಶನ್ ಎಂಬ ಸಂಸ್ಥೆಯು ಇನ್ಸಪೆಕ್ಟಿಂಗ ಆಫೀಸರರನ್ನು "ಬೋರ್ಡಿನ ಕಣ್ಣು ಕಿವಿಗಳು ಮಾತ್ರವಲ್ಲ; ಲೋಕಲ ಅಥಾರಿಟಿಗಳ ಕಣ್ಣು ಕಿವಿಗಳು" ಎಂದು ವರ್ಣಿಸಿರುವರು. ಇವರು ಬಹು ವಿವೇಕದಿಂದಲೂ ಜಾಣತನದಿಂದಲೂ ದಾರಿ ತೋರಿಸುವರು; ಪ್ರತ್ಯೇಕ ಶಿಕ್ಷಣ ಸಂಸ್ಥೆಗಳ ಸ್ಥಿತಿಯನ್ನು ತೋರಿಸಿ ರಿಮಾರ್ಕುಗಳನ್ನು ಕಳಿಸಿ ಕೊಡುವದು ಇವರ ಕೆಲಸವಲ್ಲ; ಒಂದು ನಿಯಮಿತ ಭಾಗದಲ್ಲಿ ಶಿಕ್ಷಣವು ಹ್ಯಾಗೆ ನಡೆದಿದೆಯೆಂಬದನ್ನು ನಿಷ್ಕರ್ಷಿಸುವದು ಇವರ ಕಾರ್ಯವು. ಶಾಲೆಗಳ ಪ್ರತಿಯೊಂದು ವರ್ಗದಲ್ಲಿ ನಿಂತು ಆಯಾ ಶಿಕ್ಷಕರೊಡನೆ ಸಂಭಾಷಣೆ ನಡಿಸುವದು ಇವರ ಮುಖ್ಯ ಕೆಲಸವಲ್ಲ; ಒಂದು ನಿಯಮಿತ ಭಾಗದ ಶಿಕ್ಷಕರೊಡನೆ ವಿಚಾರ ವಿನಿಮಯ ಮಾಡಿ ಅವರ ಅನುಭವಗಳನ್ನು ಕೇಳಿಕೊಂಡು ತಮ್ಮ ಅಭಿಪ್ರಾಯಗಳನ್ನು ಅವರ ಮುಂದಿಡುವದು ಅವರ ಕರ್ತವ್ಯವು. ಈ ಮೇರೆಗೆ ತಾವು ಪಡೆದ ಅನುಭವವನ್ನು ರಿಪೋರ್ಟುಗಳ ಮುಖಾಂತರ ಅಥವಾ ಸರಕ್ಯೂಲರಗಳ ಮೂಲಕ ಶಿಕ್ಷಕ ವರ್ಗದ ಮುಂದೆಯೂ ಶಿಕ್ಷಣದ ವ್ಯವಸ್ಥಾಪಕರ ಮುಂದೆಯೂ ಇಡುವದು ಅವರ ಮುಖ್ಯ ಕೆಲಸವು ಎಂದು ಸಾಮಾನ್ಯವಾಗಿ ಎಣಿಸಲ್ಪಟ್ಟಿದೆ. ನಮ್ಮ ಇನ್ಸಪೆಕ್ಟಿಂಗ ಆಫೀಸರರೂ ಇದೇ ದೃಷ್ಟಿಯಿಂದ ಜನರಿಂದಲೂ ಅಧಿಕಾರಸ್ಥರಿಂದಲೂ ಬಗೆಯಲ್ಪಡಲಿ. ಇವರು ಸದ್ಯದ ಕೋಡುಗಳು, ಅಭ್ಯಾಸಪತ್ರಿಕೆಗಳು, ವಾರ್ಷಿಕ ಇನ್ಸಪೆಕ್ಶನುಗಳು, ಪರೀಕ್ಷೆಗಳು, ರಿಪೋರ್ಟುಗಳು, ಹಾಗು ಪತ್ರಿಕೆಗಳಲ್ಲಿ ತೊಳಲುವ ಅಧಿಕಾರಿಗಳೆಂಬ ಭಾವನೆಯೂ ಸ್ಥಿತಿಯೂ ಎಷ್ಟು ತೀವ್ರವಾಗಿ ಅಸ್ತವಾಗುವದೋ ಅಷ್ಟು ತೀವ್ರವಾಗಿ ನಮ್ಮ ಭಾವೀ ಜನಾಂಗವು ಉತ್ಕರ್ಷವನ್ನು ಹೊಂದುವದೆಂದು ಯಾರು ಭಾವಿಸರು ?

ವಾ ಚ ನ

ಸಾಮಾನ್ಯವಾಗಿ ಪ್ರಾಥಮಿಕ ಶಿಕ್ಷಣದಲ್ಲಿ ವಾಚನ ವಿಷಯದ ಮಹತ್ವವು ವಿಶೇಷವಾದದ್ದಿರುವದು. ನಮ್ಮ ಸಾಲೆಗಳಲ್ಲಿ ಕಲಿಸುವ ಅನೇಕ ವಿಷಯಗಳಲ್ಲಿ ಇದರ ವ್ಯಾವಹಾರಿಕ ಉಪಯುಕ್ತತೆಯು ಒಂದು ವಿಶಿಷ್ಟತರದ್ದಿರುವದು. ವಾಚನ, ಬರೆಹ ಹಾಗೂ ಲೆಕ್ಕ ಇವುಗಳಿಗೆ ಸಿಗುವ ಸ್ಥಾನವು ಬೇರೆ ಯಾವ ವಿಷಯಗಳಿಗೂ ಸಲ್ಲಲಾರದು. ಒಂದು

ವಿಷಯುವನ್ನು ಕಲಿಸುವಾಗ ಅದರ ಪ್ರತ್ಯಕ್ಷ ಪ್ರಯೋಜನಕ್ಕಿಂತಲೂ ಅದರ ಅಪ್ರತ್ಯಕ್ಷ ಪ್ರಯೋಜನಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ಶಿಕ್ಷಕರಾದರೂ ಕೊಡಲಿಕ್ಕೆ ಬೇಕು. ಸಾಮಾನ್ಯ ಜನರ ಲಕ್ಷ್ಯವು ಇತ್ತಕಡೆಗೆ ಅಷ್ಟುಮಟ್ಟಿಗೆ ಹೋಗಲಾರದು. ವಾಚನವನ್ನು ಕಲಿಸುವದಾದರೂ ಯಾತಕ್ಕೆ ?

ಉದ್ದೇಶ:—

೧. ಅನ್ಯರು ಬರೆದಿಟ್ಟ ವಿಚಾರಗಳನ್ನು ತಿಳಿದುಕೊಳ್ಳಲು ಮಕ್ಕಳಿಗೆ ಬಲ ಬರಬೇಕು. ಅಂದರೆ ನಿತ್ಯದ ವ್ಯವಹಾರದಲ್ಲಿ ಅವರು ಪರಾವಲಂಬಿಯಾಗಬಾರದು. ಸಾಮಾನ್ಯವಾಗಿ ವರ್ತಮಾನಪತ್ರ, ಸಣ್ಣ ಸಣ್ಣ ಕಥೆ, ಕಾದಂಬರಿ, ನಾಟಕ ಮೊದಲಾದ ಪುಸ್ತಕಗಳನ್ನು ತಿಳಿದುಕೊಳ್ಳಲು ಪ್ರತಿಯೊಬ್ಬನು ಶಕ್ತನಾಗಬೇಕು.

೨. ವಾಚನಾಭಿರುಚಿಯು ಬೆಳೆಯಬೇಕು. ಅನೇಕ ನಿಬಂಧಕಾರರು, ನಾಟ್ಯಕಾರರು, ಕವಿಗಳು ಬರೆದಿಟ್ಟ ಗ್ರಂಥಗಳನ್ನು ಓದಿಕೊಂಡು ಜ್ಞಾನಾಬ್ಧಿಯಲ್ಲಿ ಅವಗಾಹನೆ ಮಾಡಿಕೊಳ್ಳಲು ಸಮರ್ಥರಾಗಬೇಕು. ಇಷ್ಟರ ಮಟ್ಟಿಗೆ ನಮ್ಮ ಗುರಿಯಿರಲು ಇದನ್ನು ಕಲಿಸುವ ಪದ್ಧತಿಯನ್ನು ಕುರಿತು ವಿಚಾರಮಾಡುವದು ಅತ್ಯವಶ್ಯ. ಈಗಿನ ಕಾಲದಲ್ಲಿ ಎಲ್ಲೆಡೆಗೆ ಜನರು ಮುಂಡಡಿಯಿಡುವಂತೆ ಬೇರೆ ಬೇರೆ ವಿಷಯುಗಳನ್ನು ಕಲಿಸುವ ವಿಷಯುದಲ್ಲಿಯೂ ಭಿನ್ನಾಭಿಪ್ರಾಯುಗಳಿರುವವು. ಹಳೆಯ ಮಾರ್ಗಗಳಲ್ಲಿ ಕುಂದು ಕೊರತೆಗಳಿರುವವೆಂಬದು ಸ್ಪಷ್ಟವಾಗಿ ಕಂಡುಬಂದಿದೆ. ಆದ್ದರಿಂದ ಇದರಡಿಯಲ್ಲಿ ಪ್ರಚಲಿತ ಎಲ್ಲ ಪದ್ಧತಿಗಳನ್ನು ಇಟ್ಟು ನೋಡಿದರೆ ಓದುಗರಿಗೆ ಅವು ಸ್ಪಷ್ಟವಾಗಿ ಕಂಡು ಬರಬಹುದು.

ಪದ್ಧತಿ:—

೧.	ಅಕ್ಷರ ಜ್ಞಾನ ,	ಶಬ್ದ ಜ್ಞಾನ ,	ವಾಕ್ಯ ಜ್ಞಾನ
೨.	ಶಬ್ದ ಜ್ಞಾನ ,	ವಾಕ್ಯ ಜ್ಞಾನ ,	ಅಕ್ಷರ ಜ್ಞಾನ
೩.	ವಾಕ್ಯಜ್ಞಾನ ,	ಶಬ್ದ ಜ್ಞಾನ ,	ಅಕ್ಷರ ಜ್ಞಾನ

ಸಾಧಾರಣವಾಗಿ ನಮ್ಮ ಎಲ್ಲ ಸಾಲೆಗಳಲ್ಲಿ ಒಂದನೇ ಪದ್ಧತಿಯೇ ರೂಢವಾಗಿರುವದು. ನಾವೆಲ್ಲರೂ ಇದೇ ಪದ್ಧತಿಯಿಂದಲೇ ಕಲಿತಿರುವೆವು. ಇದುವರೆಗೆ ಇದೇ ಸರಿಯಾದ ಪದ್ಧತಿಯೆಂದು ನಮ್ಮ ತಿಳಿವಳಿಕೆ, ನಮ್ಮ ಬಲವಾದ ನಂಬುಗೆ. ಇದರ ಹೊರತಾಗಿ ಬೇರೆ ಯಾವದಾರಿಯೂ ಇಲ್ಲೆಂದು ನಮ್ಮ ಅಭಿಪ್ರಾಯ. ಅದರಲ್ಲಿಯೂ ನಾವು ಹಿಂದೀಯರು ಯಾವಾಗಲೂ ಹಳೆಯ ಪದ್ಧತಿಗಳಲ್ಲಿ ಬಲವಾದ ಪ್ರೇಮವುಳ್ಳವರು ಹೊಸದೊಂದು ದಾರಿಯನ್ನು ಯಾರಾದರೂ ಹೇಳಿದರೆ ನಮಗೆ ಅಷ್ಟು ಸೇರಿಕೆ ಇಲ್ಲ. ಅಲ್ಲದೆ ಹೊಸ ಮಾರ್ಗಗಳ ವಿಷಯುವಾಗಿ ನಮಗೆ ಒಂದು ತರದ ತಿರಸ್ಕಾರ; ಅವುಗಳನು

ಕುರಿತು ನಮ್ಮಲ್ಲಿ ದೃಢವಾದ ದ್ವೇಷಭಾವ. ಈಗಲಾದರೂ ಬೇರೆ ಬೇರೆ ಪದ್ಧತಿಗಳ ವಿಷಯವಾಗಿ ಚಿಕಿತ್ಸೆಮಾಡುವಾಗ ನಮ್ಮ ಬುದ್ಧಿಯ ಒರೆಗಲ್ಲಿಗೆ ಈ ಪದ್ಧತಿಯನ್ನು ಹಚ್ಚಿ ನೋಡಬೇಕಲ್ಲವೆ ? ಹೀಗೆ ಮಾಡಿದರೆ ನಮ್ಮ ಅನುಭವಕ್ಕೆ ಯಾವ ಸಂಗತಿಯು ಕಂಡು ಬರುವದು ? ಬಾಲಕರ ವರ್ಗಕ್ಕೆ ಬಂದ ಮಕ್ಕಳು ಎಷ್ಟು ದಿವಸಗಳ ವರೆಗೆ ರೊಜ್ಜಿನಲ್ಲಿ ಕಾಲಿಟ್ಟ ಮನುಷ್ಯನಂತೆ ಕಷ್ಟಬಡುತ್ತಿರುವರು ? ಅಕ್ಷರವನ್ನು ಕಲಿಯುವಾಗ ಅದರಲ್ಲಿ ಅವರಿಗೆ ಪ್ರೇಮವಿರುವದೋ ? ಅವರು ಆಸ್ಥೆಯಿಂದ ಕಲಿಯುವರೋ ? ತಾವು ಕಲಿಯುವದು ಯಾಕೆಂಬದು ಅವರಿಗೆ ಗೊತ್ತಾಗುವದೋ ? ಮೊದಲು ಸಾಲೆಗೆ ಬರ ಲಿಕ್ಕೆ ಒಲ್ಲೆಂಬ ಹುಡುಗರು ಈಗ ಸಾಲೆಯು ಎಂದು ತಮಗೆ ತಪ್ಪುವದು ಎಂದೆನ್ನುವ ದಿಲ್ಲವೋ ? ಹೀಗೆನ್ನುವುದು ನಿಜವಾಗಿದ್ದರೆ ಶಿಕ್ಷಕರಾದ ನಾವೆಲ್ಲರೂ ಈ ಪದ್ಧತಿಯಲ್ಲಿ ರುವ ಗುಣದೋಷಗಳನ್ನು ವಿಮರ್ಶೆ ಮಾಡಬಾರದೇ ? ಎಲ್ಲ ದೇಶಗಳ ಮುಂದಾಳುಗಳು ಈ ಪದ್ಧತಿಯು ಮಾನಸಶಾಸ್ತ್ರಕ್ಕೆ ವಿರುದ್ಧವಾದದ್ದಿರುವುದೆಂದು ಕಂಠತಃ ಹೇಳುತ್ತಿರು ವರು. ಈ ದಿವಸದಲ್ಲಿಯಾದರೂ ನಮ್ಮ ಎಳೆಮನಸ್ಸಿನ ಮಕ್ಕಳ ಮೇಲೆ ನಾವು ಬಲುಮೆ ಯನ್ನು ಮಾಡಕೂಡದು. ಯಾವ ಶಿಕ್ಷಣ ತತ್ವಕ್ಕೂ ಅದು ಸರಿಯಾದದ್ದಿರುವದಿಲ್ಲ. ಅಲ್ಲದೆ ಮಕ್ಕಳ ಯೋಗ್ಯತೆಗೆ ಮೀರಿರುವದು.

ಇದನ್ನು ಬಿಟ್ಟರೆ ಕೆಲವು ಸಾಲೆಗಳಲ್ಲಿ ೨ನೇ ಪದ್ಧತಿಯಿಂದಲೂ ಅನೇಕ ಸಾಲೆ ಗಳಲ್ಲಿ ೩ನೇ ಪದ್ಧತಿಯಿಂದಲೂ ಈ ವಿಷಯವನ್ನು ಕಲಿಸಿ ಅನುಭವಪಡೆದಿರುವರು. ಈ ರೀತಿಯಿಂದ ವಿಷಯ ಸಾಗಿಸಿದರೆ ಒಂದನೇ ದಿವಸದಿಂದ ಸಾಲೆಗಳ ವಿಷಯವಾಗಿ ಮಕ್ಕಳ ಮನಸ್ಸಿನಲ್ಲಿ ಒಂದುತರದ ಪ್ರೇಮವು ಹುಟ್ಟುವದು. ಅವರಿಗೆ ಪ್ರತಿನಿತ್ಯ ಬಂದ ಬಲವು ಪ್ರತ್ಯಕ್ಷ ಕಂಡುಬರುವದು. ಕಲಿಯಬೇಕೆಂದರೆ ಅವರಿಗೆ ಒಳ್ಳೇ ಆದರ. ನಮ್ಮ ಪ್ರಾಂತದಲ್ಲಿಯೂ ಕೆಲವು ಮಿಶನ್ ಸಾಲೆಗಳಲ್ಲಿ ಈ ಮೂರನೇ ಪದ್ಧತಿಯ ವಾಚನ ಶಿಕ್ಷ ಣವು ರೂಢಿಯಲ್ಲಿ ಬಂದು ೮-೧೦ ವರ್ಷಗಳಾಗಿರುವವು. ಅಲ್ಲಿಯ ಮಕ್ಕಳು ಬಾಲಕರ ವರ್ಗದಲ್ಲಿಯೇ ೨-೩ ವರ್ಷಗಳವರೆಗೆ ಕೊಳೆಯದೆ ೮-೧೦ ತಿಂಗಳಲ್ಲಿ ಚೆನ್ನಾಗಿ ಓದ ಬಲ್ಲವರಾಗಿರುವರು. ಇದು ಪ್ರತ್ಯಕ್ಷ ಅನುಭವದ ಮಾತು. ಯಾರಾದರೂ ಅಲ್ಲಿ ಹೋಗಿ ಮನಗಾಣಬಹುದು. ನಮ್ಮ ಭಾಷೆಯನ್ನು ನಮ್ಮ ಸಾಲೆಗಳಲ್ಲಿ ಈ ಪದ್ಧತಿಯಿಂದ ಕಲಿ ಸಲು ಅಶಕ್ಯವೆಂದು ಹೇಳುವವರು ಸ್ವತಃ ನೋಡಿಕೊಳ್ಳಬಹುದು. ಈ ಪದ್ಧತಿಯಿಂದ ಶಿಕ್ಷಣವನ್ನು ಸಾಗಿಸಬೇಕಾದರೆ ಶಿಕ್ಷಕರು ಕೆಲವು ಹಂಚಿಕೆಗಳನ್ನು ಮಾಡಿಕೊಂಡಿರುವರು. ಅವು ಇಲ್ಲಿ ಕೊಟ್ಟವೆ:—

ಬಾಲಕರ ವರ್ಗ

ಕಲಿಸುವ ಕ್ರಮ—

೧ ವಾಚನ ಪಟಗಳ ಸಹಾಯದಿಂದ ಕಲಿಸಬೇಕು.

೨ ಸಣ್ಣ ಸಣ್ಣ ವಾಕ್ಯಗಳನ್ನು ಓದಲು ಪ್ರಾರಂಭಿಸಬೇಕು. ಒಮ್ಮೆ ಉಪಯೋಗಿಸಿದ ಶಬ್ದಗಳು ವಾಕ್ಯಗಳಲ್ಲಿ ಪುನಃ ಪುನಃ ಬಂದಿರಬೇಕು.

೩ ಮಾತುಗಳೂ ಶಬ್ದಗಳೂ ಮಕ್ಕಳ ಪರಿಚಯದಲ್ಲಿಯವಿರಬೇಕು.

೪ ಕೆಲವು ವಾಕ್ಯಗಳ ಜ್ಞಾನವಾದನಂತರ ಶಬ್ದ ಜ್ಞಾನ ಮಾಡಿಕೊಡಬೇಕು.

೫ ಆ ಮೇಲೆ ಶಬ್ದಗಳನ್ನು ಒಡೆದು ಅಕ್ಷರ ಜ್ಞಾನ ಮಾಡಿಕೊಡಬೇಕು.

೬ ಮಕ್ಕಳಿಗೆ ಮೊದಮೊದಲು ಅವರವರ ಹೆಸರುಗಳನ್ನೇ ಓದಲಿಕ್ಕೆ ಬರುವಂತೆ ಮಾಡಬೇಕು; ಅವುಗಳನ್ನೇ ಮೊದಲು ಕಲಿಸಬೇಕು.

೭ ಅಕ್ಷರ ಜ್ಞಾನಕ್ಕೆ ವರ್ಣಮಾಲೆಯ ಕ್ರಮವನ್ನೇ ಅನುಸರಿಸಬೇಕೆಂಬ ನಿಯಮವಿಲ್ಲ

೮ ವಾಚನ ಪಟಗಳ ಮೇಲೆ ಬರೆದ ವಾಕ್ಯಗಳನ್ನು ಕರೇಹಲಗೆಯ ಮೇಲೆ ಬರೆದು ಓದಿಸಬೇಕು. ಒಟ್ಟಿಗೆ ವಾಚನ ಪಾಠವು ಆಟದಂತೆ ಭಾಸವಾಗಬೇಕು.

೯ ಶಬ್ದಗಳ ಇಸ್ಪೇಟು ಮಾಡಿ, ಅವುಗಳನ್ನು ಗುರ್ತಿಸುವದನ್ನು ಕಲಿಸಬೇಕು ಇದೊಂದು ಆಟ.

೧೦ ಒಬ್ಬರು ಗುರ್ತಿಸಿದ್ದನ್ನು, ಬೇರೆ ಒಬ್ಬರಾಗಲಿ ಇಡೀ ವರ್ಗವಾಗಲಿ ಉಚ್ಚರಿಸಬೇಕು.

೧೧ ರೂಢಿಯಾದ ಬಳಿಕ ಹೊಸ ಶಬ್ದಗಳನ್ನು ಮಕ್ಕಳೇ ಮೊದಲು ಓದಲಿಕ್ಕೆ ಪ್ರಯತ್ನ ಮಾಡಬೇಕು. ಒಂದು ವೇಳೆ ಅರ್ಥವು ಪೂರ್ಣ ತಿಳಿಯಲಿಕ್ಕಿಲ್ಲ. ಓದಲಿಕ್ಕೆ ಅಸ್ಖಲಿತವಾಗಿ ಬರಬಹುದು. ಅಕ್ಷರಗಳನ್ನು ಜೋಡಿಸಿಕೊಂಡು ಓದುವ ರೂಢಿಯನ್ನು ತಪ್ಪಿಸಬೇಕು. ಶಬ್ದ ಚಿತ್ರವು ಅವರ ಲಕ್ಷ್ಯಕ್ಕೆ ಕೂಡಲೇ ಬರಬೇಕು.

ಈ ರೀತಿಯಾಗಿ ವಾಚನವನ್ನು ಬೇರೆ ಬೇರೆ ಕಥೆ ಕಟ್ಟಿ ಕಲಿಸಿದರೆ ೮ – ೧೦ ತಿಂಗಳಲ್ಲಿ ಒಳ್ಳೇ ಪ್ರಗತಿಯು ಕಂಡು ಬರುವದು. ಪ್ರಾರಂಭದಲ್ಲಿ ಹೆಚ್ಚು ಪ್ರಗತಿಯಾಗಲಾರದು; ಅದು ಒಳ್ಳೆಯದಲ್ಲ; ಮೆಲ್ಲ ಮೆಲ್ಲನೆ ಹೆಜ್ಜೆಯಿಡುವುದೇ ಶ್ರೇಯಸ್ಕರ. ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜಕ್ಕೆ ಹೊಂದಿದ ಪ್ರ್ಯಾಕ್ಟಿಸಿಂಗ ಸ್ಕೂಲಿನ ಬಾಲಿಕೆಯರ ವರ್ಗದಲ್ಲಿ ಈ ಪದ್ಧತಿಯಿಂದ ವಾಚನ ಶಿಕ್ಷಣವು ಸಾಗುತ್ತಿರುವದು. ಅಲ್ಲಿಯ ಬಾಲಿಕೆಯರ ವರ್ಗದಲ್ಲಿ ಯಾವ ಹುಡುಗೆಯೂ ಒಂದು ವರ್ಷಕ್ಕಿಂತ ಹೆಚ್ಚುದಿವಸ ಉಳಿದಿಲ್ಲ.

೧ನೇ ಇಯತ್ತೆ

ಬಾಲಕರ ವರ್ಗಕ್ಕೆ ಹೇಳಿದ ಅನೇಕ ಕ್ರಮಗಳನ್ನು ಈಗಲಾದರೂ ಅನುಸರಿಸ ಬಹುದು.

ಕಲಿಸುವ ಕ್ರಮ—

೧ ಹೊಸ ಶಬ್ದಗಳನ್ನು ಕಲಿಸುವದಾದರೆ ಇಸ್ಪೇಟುಗಳನ್ನು ಮಾಡಬೇಕು. ಮಕ್ಕಳು ಅವುಗಳನ್ನು ಗುರ್ತಿಸಬೇಕು. ಎಲ್ಲರೂ ಒಮ್ಮೆಲೇ ಓದಬೇಕು.

೨ ವಾಚನ ಸ್ಪಷ್ಟವಾಗಬೇಕು. ಗುಪ್ತ ಹಾಗೂ ಸ್ಪಷ್ಟ ವಿರಾಮಗಳ ಕಡೆಗೆ ಮಕ್ಕಳ ಲಕ್ಷ್ಯ ತಾನಾಗಿಯೇ ರೂಢಿಯಿಂದ ಹೋಗಬೇಕು.

೩ ಅರ್ಥ ಬೋಧವಾಗುವಂತೆ ಓದಬೇಕು; ಸ್ವರ ತೆಗೆದು ಓದಬಾರದು.

೪ ಶಬ್ದಗಳ ಗುಂಪುಗಳನ್ನು ಮಾಡಿಕೊಂಡು ಓದುವ ರೂಢಿಯಾಗಬೇಕು.

೫ ಕ್ರಮಿಕ ಪುಸ್ತಕದೊಳಗಿನ ಪಾಠಗಳ ಕಥೆಯನ್ನು ತಮ್ಮ ಭಾಷೆಯಲ್ಲಿ ಮಕ್ಕಳು ಹೇಳಬೇಕು.

೬ ಪದ್ಯಗಳನ್ನು ಶುದ್ಧವಾಗಿ ಧಾಟಿಗೆ ಸರಿಯಾಗಿ ಅನ್ನಲು ಬರಬೇಕು. ಅರ್ಥ ಜ್ಞಾನಕ್ಕೆ ವಿಶೇಷ ಗಮನ ಕೊಡಕೂಡದು.

ಮುಂದಿನ ಇಯತ್ತೆಗಳಲ್ಲಿ ಶಿಕ್ಷಕರು ಆಗಾಗ್ಗೆ ಮೊದಲು ಪಾಠದ ಕಥೆಯನ್ನು ಹೇಳಬೇಕು. ಇಲ್ಲವೆ ಒಮ್ಮೆ ಸ್ಪಷ್ಟವಾಗಿ ಓದಿ ತೋರಿಸಬೇಕು. (೨) ಬಳಿಕ ಮಕ್ಕಳಿಗೆ ಮೌನ ವಾಚನದ ರೂಢಿಮಾಡಿಸಬೇಕು. ತಿಳಿಯದಿದ್ದ ಶಬ್ದಗಳ ಅರ್ಥವನ್ನು ಒಬ್ಬೊಬ್ಬರೇ ಕೇಳಿಕೊಳ್ಳಬಹುದು. (೩) ಶಿಕ್ಷಕರು ಪ್ರಶ್ನಗಳ ಮೂಲಕ ಶಬ್ದಾರ್ಥ, ವಾಕ್ಯಾರ್ಥ ಜ್ಞಾನಮಾಡಿಕೊಡಬೇಕು. (೪) ಶಬ್ದಕ್ಕೆ ಪ್ರತಿ ಶಬ್ದಗಳನ್ನು ಹೇಳಬಾರದು. ಕಠಿಣ ಶಬ್ದಗಳನ್ನು ವಿವರಣೆಮಾಡಿ ತಿಳಿಸಿ ಕೊಡಬೇಕು. ಬೇರೆ ಬೇರೆ ವಾಕ್ಯಗಳಲ್ಲಿ ಆ ಶಬ್ದ ಗಳನ್ನು ಶಿಕ್ಷಕರೂ ಮಕ್ಕಳೂ ಉಪಯೋಗಿಸಬೇಕು. (೫) ಕೊನೆಗೆ ಮಕ್ಕಳು ಪಾಠದ ಸಾರಾಂಶವನ್ನು ತಮ್ಮ ಮಾತಿನಿಂದ ಹೇಳಬೇಕು. ಪುಸ್ತಕದ ಭಾಷೆಯ ಮೇಲೆಯೇ ಭಾರವನ್ನಿಡಕೂಡದು. (೬) ಕ್ರಮಿಕ ಪುಸ್ತಕದೊಳಗಿನ ಪದ್ಯಗಳನ್ನೂ ಬೇರೆ ಅನೇಕ ಹೊಸ ಸುಲಭ ಪದ್ಯಗಳನ್ನೂ ಕಲಿಸಬೇಕು. ಈಗ ಅರ್ಥ ಜ್ಞಾನಕ್ಕೆ ಹೆಚ್ಚು ಲಕ್ಷ್ಯವನ್ನು ಕೊಡಬೇಕು. (೭) ಅನ್ವಯ, ಶಬ್ದಾರ್ಥ ವಾಕ್ಯಾರ್ಥ ಕ್ರಮವನ್ನು ನಾಲ್ಕನೇ ಇಯತ್ತೆಯಲ್ಲಿ ಪ್ರಾರಂಭಿಸಲು ಅಡ್ಡಿಯಿಲ್ಲ. ಈ ಇಯತ್ತೆಯಿಂದ ಶಬ್ದಾರ್ಥವನ್ನು ತಮ್ಮ ಪುಸ್ತಕಗಳಲ್ಲಿ ಮಕ್ಕಳು ಬರೆದಿಡಬೇಕು. (೮) ಮಕ್ಕಳಲ್ಲಿ ಹಾಡಬೇಕೆಂಬ ಹಂಬಲವಿರುವದು, ಅದು ಈಗ ಶಣಿಯನ್ನು ಹೊಂದಬೇಕು.

ಬ ರೆ ಹ

ಪ್ರಾಥಮಿಕ ಶಾಲೆಗಳ ಶಿಕ್ಷಣಾಭಿಕ್ರಮದಲ್ಲಿ ವಾಚನಕ್ಕೆ ಇದ್ದ ಸರಿಯಾದ ಸ್ಥಾನವು ಬರೆಹಕ್ಕೆ ಬಂದಿರುವದು ಎಲ್ಲ ನಾಗರಿಕರಿಗೆ ಪತ್ರಗಳನ್ನು ಬರೆಯುವದು, ತಮ್ಮ ಮನ ವೆಚ್ಚದ ಲೆಕ್ಕಗಳನ್ನಿಡುವದು ಈ ಮೊದಲಾದ ಕೆಲಸಗಳನ್ನು ಮಾಡತಕ್ಕದ್ದಿರುವದು. ಈ ರೀತಿಯಾಗಿ ಬರೆಹದ ವ್ಯಾವಹಾರಿಕ ಉಪಯೋಗವೂ ವಿಶಿಷ್ಟತರದ್ದಿರುವದು. ಈ ವಿಷಯವನ್ನು ಮಕ್ಕಳಿಗೆ ಕಲಿಸುವ ಉದ್ದೇಶಗಳೆಂದರೆ—

(೧) ನಾವು ಆಡುವ ಮಾತುಗಳನ್ನು ಶಬ್ದಗಳ ಸಹಾಯದಿಂದ ಅನ್ಯರಿಗೆ ಬರೆದು ತಿಳಿಸುವದು.

(೨) ಭಾಷೆಯನ್ನು ಶುದ್ಧವಾಗಿಯೂ ಸರಸವಾಗಿಯೂ ಬರೆಯುಲಿಕ್ಕೆ ಬರುವಂತೆ ಮಾಡುವದು. ಈ ವಿಷಯದಲ್ಲಿ ಅಕ್ಷರಜ್ಞಾನ, ಶಬ್ದಜ್ಞಾನ, ವಾಕ್ಯರಚನೆ, ಶುದ್ಧಲೇಖನ ಉಕ್ತಲೇಖನ, ಕಾಪೀ ಬರೆಹ, ನಿಬಂಧ ಇತ್ಯಾದಿ ಬೇರೆ ಬೇರೆ ಭಾಗಗಳನ್ನು ಮಾಡಬಹುದು.

ನಮ್ಮ ಸಾಲೆಗಳಲ್ಲಿ ಸದ್ಯಕ್ಕೆ ಬಾಲಕರ ವರ್ಗಕ್ಕೆ ಬಂದ ಮಕ್ಕಳಿಗೆ ರ ಠ ಈ ಕ, ಇಲ್ಲವೆ ಅ ಆ ಇ ಈ ಇತ್ಯಾದಿ ಅಕ್ಷರಗಳನ್ನು ಶಿಕ್ಷಕರು ಪಾಟಿಯಮೇಲೆ ಹಾಕಿಕೊಡುವರು. ಅವುಗಳನ್ನು ಮಕ್ಕಳು ಎಷ್ಟೋ ದಿವಸಗಳವರೆಗೆ ತೀಡುವರು, ಬಳಿಕ ಬಲಪಡದ ತಮ್ಮ ಸ್ನಾಯುಗಳ ಸಹಾಯದಿಂದ ಕಲಿಸಿದ ಅಕ್ಷರಗಳನ್ನು ಅಂಕುಡೊಂಕಾಗಿ ಬರೆಯುವರು. ಅವರು ಕಲಿಯುವಾಗ ತಾವು ಅವುಗಳನ್ನು ಯಾಕೆ ಇಷ್ಟು ಶ್ರಮಬಟ್ಟು ಕಲಿಯಬೇಕೆಂಬದು ಕೂಡ ಅವರಿಗೆ ತಿಳಿದಿರುವದಿಲ್ಲ. ಪ್ರಾರಂಭದ ಪಾಠಗಳು ಮಕ್ಕಳಿಗೆ ಬೇಸರಿಕೆಯನ್ನು ಕೊಡುತ್ತವೆ. ಬೇಸರಿಕೆಯಮೂಲಕ ಅಭ್ಯಾಸದಲ್ಲಿ ಆಸ್ಥೆಯಿರುವದಿಲ್ಲ. ಮಕ್ಕಳು ಸಾಲೆಗೆ ಸರಿಯಾಗಿ ಬರುವದಿಲ್ಲ. ಬಂದರೂ ಪಾಟಿ–ಪೇನ್ಸಿಲುಗಳು ಇರುವದಿಲ್ಲ. ಈ ಕಾರಣಪರಂಪರೆಯಿಂದ ನಮ್ಮ ಬಾಲಕರ ವರ್ಗಗಳಲ್ಲಿ ೨–೩ ವರ್ಷಗಳವರೆಗೆ ಮಕ್ಕಳು ತಟಸ್ಥರಾಗಿರುವದೇನಾಶ್ಚರ್ಯ !

ವಾಚನ ವಿಷಯದಲ್ಲಿ ಹೇಳಿದಂತೆ ಬರೆಹವನ್ನು ಕಲಿಸುವ ಮೊದಲು ನಾವು ಅವರಿಗೆ ವಾಕ್ಯಜ್ಞಾನ, ಶಬ್ದಜ್ಞಾನವನ್ನು ಮಾಡಿಕೊಡಬೇಕು. ಆಗ ಅವರು ಶಬ್ದಗಳನ್ನೂ ಅವುಗಳ ಅಂಗಗಳಾದ ಅಕ್ಷರಗಳನ್ನೂ ಗುರುತಿಸಬಲ್ಲರು. ಅಂದರೆ ತಾವು ಓದುವದನ್ನು ತಮಗೆ ಬರೆಯಲು ಬಂದರೆ ನೆಟ್ಟಗೆಂಬ ಭಾವನೆಯು ಅವರಲ್ಲಿ ತಾನಾಗಿ ಜನಿಸುವದು. ಹೀಗಾದರೆ ಅಕ್ಷರ ಬರೆಹದ ಪಾಠಗಳಲ್ಲಿ ಬೇಸರಿಕೆ ಬರಲಾರದು. ಮಕ್ಕಳ ಮನಸ್ಸು ಪಾಠಗಳ ಕಡೆಗೆ ತಾನಾಗಿ ಒಲಿಯುವದು. ಈಗ ಮೂಲಾಕ್ಷರಗಳನ್ನೂ ಬಳ್ಳಿಗಳನ್ನೂ ಸಾಲು ಸಾಲಾಗಿ ಬರೆಯಲಿಕ್ಕೆ ಹಚ್ಚದೆ ಅವರಿಗೆ ಪರಿಚಯದೊಳಗಿನ ಶಬ್ದಗಳನ್ನೇ ಕಲಿಸಿದರೆ ಒಳಿತಾಗುವದು. ಮೊಟ್ಟಮೊದಲು ಮಕ್ಕಳು ತಮ್ಮ ತಮ್ಮ ಹೆಸರುಗಳನ್ನು ಬರೆಯು

ವದನ್ನು ಕಲಿಯಲಿ. ತಮ್ಮ ಹೆಸರುಗಳನ್ನು ಬರೆಯುವದು ಅವರಿಗೆ ಬಂದರೆ ಆಗ ಅವರಿಗೆ ಆದ ಆನಂದವೆಷ್ಟೆಂದು ಹೇಳಬೇಕು! ಅವರು ನೋಡುವ ಪ್ರಾಣಿಗಳ ಹೆಸರುಗಳನ್ನೂ ಉಪಯೋಗಿಸುವ ವಸ್ತುಗಳ ಹೆಸರುಗಳನ್ನೂ ಕಲಿಯಲಿ. ವರ್ಣಮಾಲೆಯ ಕ್ರಮದಿಂದಲೇ ಅಕ್ಷರಗಳನ್ನು ಕಲಿಸಬೇಕೆಂಬ ಅವಶ್ಯಕತೆ ಇಲ್ಲ. ಯಾತರಲ್ಲಿ ಅವರ ಮನಸ್ಸು ತೊಡಗುವದೋ ಅದನ್ನು ಅವರು ಬಲುಬೇಗ ಕಲಿಯುವರು. ಈ ಪದ್ಧತಿಯಲ್ಲಿ ಶಿಕ್ಷಕರ ಮೇಲೆ ಕಲಿಸುವ ಭಾರವು ಹೆಚ್ಚು; ಅವರಿಗೆ ಸ್ವಾತಂತ್ರ್ಯವೂ ಇರುವದು. ಯೋಗವಾದ ಸುಲಭ ಶಬ್ದಗಳನ್ನೂ ವಾಕ್ಯಗಳನ್ನೂ ಅವರೇ ಆರಿಸಬೇಕು. ಮೊದಮೊದಲು ಮೂಲಾಕ್ಷರಗಳಿಂದಲೇ ಆದ ಶಬ್ದಗಳನ್ನು ಕಲಿಸಬೇಕು. ವಾಕ್ಯಗಳಾಗುತ್ತಿದ್ದರೆ ಒಳ್ಳೇದು. ಅದು ಅಷ್ಟು ಸುಲಭವಲ್ಲ. ಬಾಲಬೋಧಿನಿಯನ್ನು ಹೊರತುಪಡಿಸಿ ಈಗ ಬಾಲಕರ ವರ್ಗದ ನಾಲ್ಕೈರು ಪುಸ್ತಕಗಳು ಅಚ್ಚಾಗಿವೆ. ಮೊದಲಿಗಿಂತಲೂ ಸುಧಾರಣೆಯು ಕಂಡು ಬಂದರೂ ನಾವು ಮೇಲೆ ಹೇಳುವ ಎಲ್ಲ ತತ್ವಗಳನ್ನೊಳಕೊಂಡ ಪುಸ್ತಕವು ಇನ್ನೂ ಪ್ರಸಿದ್ಧವಾಗಿಲ್ಲ. ಅನುಭವಿಕರಾದ ಪ್ರಾಥಮಿಕ ಶಿಕ್ಷಕರಲ್ಲಿ ಯಾರಾದರೂ ಬೇಗನೇ ಇಂಥ ಒಂದು ಪುಸ್ತಕವನ್ನು ಅಚ್ಚುಹಾಕಿಸುವರೆಂದು ನಮ್ಮ ಕೋರಿಕೆ.

ಕಲಿಸುವ ಕ್ರಮ—

ಅಕ್ಷರಗಳನ್ನು ಹೇಗೆ ಕಲಿಸಬೇಕು? ಪಾಠವನ್ನು ಹೇಗೆ ಪ್ರಾರಂಭಿಸಬೇಕು? ಇದಕ್ಕಾಗಿ ಇಲ್ಲಿ ಕೆಲವು ಸೂಚನೆಗಳು ಕೊಟ್ಟಿವೆ.

೧. ಕಲಿಸುವ ಅಕ್ಷರವು ಅನೇಕ ಶಬ್ದಗಳ ಪ್ರಾರಂಭದ ಅಕ್ಷರವಾಗಿರಬೇಕು. ಉದಾ— ಮನೆ, ಮಕ್ಕಳು, ಮರ; ಸರ, ಸಕ್ಕರೆ, ಸಜ್ಜಿಗೆ.

೨. ಶಿಕ್ಷಕರು ಕರೇಹಲಗೆಯಮೇಲೆ ಅದನ್ನು ಬರೆದು ತೋರಿಸಬೇಕು.

೩. ಬರೆಯುವಾಗ ಚೆನ್ನಾಗಿ, ಸ್ಪಷ್ಟವಾಗಿ ಕಾಣುವಂತೆ ಬರೆಯಬೇಕು.

೪. ಬೇಗ ಬರೆಯಬೇಕು.

೫. ಅದನ್ನು ಮಕ್ಕಳು ನೋಡಿದನಂತರ, ಮನಸ್ಸಿನಲ್ಲಿ ಅದರ ಚಿತ್ರವನ್ನು ತಂದುಕೊಂಡು, ಹವೆಯಲ್ಲಿ ಆ ಅಕ್ಷರವನ್ನು ತೆಗೆಯಬೇಕು; ನಂತರ ಮಣ್ಣಿನಲ್ಲಿ ಇಲ್ಲವೆ ಉಸುಕಿನಲ್ಲಿ ತೆಗೆಯಬೇಕು.

೬. ಒಮ್ಮೆಲೆ ಪಾಟಿಯಮೇಲೆ ಬಿರುಸು ಕರೇ ಪೇನ್ಸಿಲಿನಿಂದ ಬರೆಯಬಾರದು.

೭. ಮಕ್ಕಳ ಸ್ನಾಯುಗಳು ಸಾಕಷ್ಟು ಬಲಪಟ್ಟಿರುವದಿಲ್ಲ. ಬರೆಯುವ ಸಾಧನವು ಆದಷ್ಟು ಮೆತ್ತನ್ನ ಪದಾರ್ಥವಿರಬೇಕು.

೮. ಖಡುವಿನಿಂದಾಗಲಿ, ಬಿಳೇ ಮಟ್ಟಿಯ ಕಲ್ಲಿನಿಂದಾಗಲಿ ಬರೆಯಬೇಕು.

೯. ಅಕ್ಷರವು ಸಾಕಷ್ಟು ದೊಡ್ಡದಿರಲಿ.

೧೦. ಪಾಟಿಯಮೇಲೆ ಬರೆಯುವದಾದರೆ ಶಿಕ್ಷಕರು ಜೋಡು ಗೆರೆಗಳ ಹೊಡೆದು ಕೊಡಬೇಕು, ಅವುಗಳ ಮಧ್ಯದಲ್ಲಿ ಎರಡೂ ಗೆರೆಗಳಿಗೆ ಮುಟ್ಟುವ ಪ್ರಮಾಣಕ್ಕೆ ಸರಿಯಾದ ಅಕ್ಷರಗಳನ್ನು ಬರೆಯಬೇಕು.

ಶಬ್ದಜ್ಞಾನ

ಈ ರೀತಿಯಾಗಿ ಕೆಲವು ಅಕ್ಷರಗಳು ಬಂದಕೂಡಲೇ ಸುಲಭವಾದ ಶಬ್ದಗಳ ಬರಿಸಬೇಕು.

೧. ಇಂಥ ಶಬ್ದಗಳು ವಸ್ತುಗಳ ಹೆಸರುಗಳಿರಬೇಕು.

೨. ಈ ವಸ್ತುಗಳನ್ನು ಮೊದಲು ತೋರಿಸಿ, ಅವುಗಳ ಹೆಸರುಗಳನ್ನು ಹೇ ಕೊಡಬೇಕು. ಸರಿಯಾಗಿಯೂ ಸ್ಪಷ್ಟವಾಗಿಯೂ ಉಚ್ಚರಿಸಬೇಕು.

೩. ಅವುಗಳನ್ನು ಕರೇಹಲಗೆಯಮೇಲೆ ಬರೆದು, ಓದಿಸಬೇಕು.

೪. ಬಳಿಕ ಒಂದೊಂದು ಶಬ್ದವನ್ನು ಅಳಿಸಿ, ಆಯಾ ವಸ್ತುಗಳ ಹೆಸರುಗಳ ಪಾಟಿಯಮೇಲೆ ಬರೆಯಲಿಕ್ಕೆ ಹೇಳಬೇಕು. ಜೋಡು ಗೆರೆಗಳನ್ನು ಹೊಡೆದ ಪಾಟಿ ಳಲ್ಲಿಯೇ ಬರೆಯಬೇಕು.

೫. ಬರೆದ ಶಬ್ದಗಳನ್ನು ಅಲ್ಲಿಯೇ ಶಿಕ್ಷಕರು ನೋಡಬೇಕು. ತಪ್ಪುಗಳ ತಿದ್ದಿ, ಪುನಃ ಬರೆದು ತೋರಿಸಿ, ಅವರಿಂದ ಬರಿಸಬೇಕು.

೬. ೧ನೇ ಇಯತ್ತೆಯಲ್ಲಿಯಾದರೂ ಶಬ್ದ ಬರೆಹವೇ ವಿಶೇಷವಾಗಿರುವದ ಅಲ್ಲಿಯೂ ಕೂಡ ಶಿಕ್ಷಕರು ಮೊದಲು ತಾವು ಹೇಳುವ ಶಬ್ದಗಳನ್ನು ಬರೆದು ತೋರಿ ಇಲ್ಲವೆ ಓದಿಹೇಳಿ, ನಂತರ ಒಂದೊಂದೇ ಶಬ್ದವನ್ನು ಬರೆಯಲು ಹೇಳಬೇಕು.

೭. ತೀರ ಕಠಿಣ ಶಬ್ದಗಳನ್ನು ಹೇಳುವ ಅವಶ್ಯಕತೆ ಇಲ್ಲ. ಅವರ ಪುಸ್ತ ದೊಳಗಿನ ಶಬ್ದಗಳನ್ನು ಮಾತ್ರ ಅವರಿಗೆ ಬರೆಯಲು ಬರಬೇಕು.

೮. ೧ನೇ ಇಯತ್ತೆಯಲ್ಲಿ ಕೆಲವು ದಿವಸಗಳಾದ ಮೇಲೆ ಮನೆಕೆಲಸವೆಂ ಗೊತ್ತುಮಾಡಿಕೊಟ್ಟ ೪-೮ ಶಬ್ದಗಳನ್ನು ಮನೆಯಿಂದ ಬರಕೊಂಡು ತರಲು ಹೇಳಬೇಕ

ಶುದ್ಧ ಲೇಖನವು

ಬರೆಹದ ಮುಂದಿನ ಮೆಟ್ಟಲು ಎಂದರೆ ಶುದ್ಧ ಬರೆಹವು. ಶುದ್ಧಬರೆಹ ಹಾಗ ಉಕ್ತಲೇಖನದಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಿರುವದು. ಕರೇ ಹಲಗೆಯಮೇಲಾಗ ಪುಸ್ತಕಗಳಲ್ಲಿಯಾಗಲಿ ಬರೆದದ್ದನ್ನು ನೋಡಿಕೊಂಡು ಮಕ್ಕಳು ತಾವೇ ಬರೆಯುವರು ಇದಕ್ಕೆ ಶುದ್ಧಲೇಖನವೆಂದು ಹೆಸರು. ಶಿಕ್ಷಕರು ಹೇಳಿದ್ದನ್ನು ಕೇಳಿಕೊಂಡು, ಅದನ ನೆನಪಿನಲ್ಲಿಟ್ಟುಕೊಂಡು ಬರೆಯುವದಕ್ಕೆ ಉಕ್ತಲೇಖನವೆಂದು ಹೇಳಬಹುದು. ನನ

ಸಾಲೆಗಳಲ್ಲಿ ಉಕ್ತಲೇಖನವು ನಡೆಯುವಷ್ಟು ಪ್ರಮಾಣದಿಂದ ಶುದ್ಧ ಲೇಖನವು ನಡೆಯುವದಿಲ್ಲ. ಇದರ ಮಹತ್ವವು ಹೆಚ್ಚಿನದಿರುವದು. ನಮ್ಮ ಸಾಲೆಗಳಲ್ಲಿ ಇದರ ರೂಢಿಯು ಹೆಚ್ಚಾಗಿರಬೇಕು. ಎಷ್ಟೋ ಸಾಲೆಗಳಲ್ಲಿ ಇದು ಮನೆಕೆಲಸವೆಂದು ಇರುವದು. ಆಗಾಗ್ಗೆ ಕೆಳಗಿನ ಇಯತ್ತೆಗಳಲ್ಲಿ ಮಕ್ಕಳು ಕರೀ ಹಲಗೆಯ ಮೇಲೆ ಬರೆದದ್ದನ್ನು ನೋಡಿ ಕೊಂಡು ಬರೆಯುತ್ತಿರಬೇಕು. ಮೇಲಿನ ಇಯತ್ತೆಗಳಲ್ಲಿ ಒಮ್ಮೊಮ್ಮೆ ಪದ್ಯಗಳನ್ನು ಕೂಡ ಬರೆಯಿಸಬೇಕು, ಅಂದರೆ ಒಂದು ವೇಳೆಯಲ್ಲಿ ಎರಡು ಕೆಲಸಗಳು ಒದಗುವವು.

ಉಕ್ತ ಲೇಖನ

೨ನೇ ಇಯತ್ತೆಯಿಂದ ಮೇಲಿನ ಎಲ್ಲ ಇಯತ್ತೆಗಳಲ್ಲಿ ಇದಕ್ಕೆ ಆಸ್ಪದವಿರುವದು. ಈ ವಿಷಯವಾಗಿ ನಮ್ಮ ಶಿಕ್ಷರಲ್ಲಿ ಒಂದು ಭಾವನೆಯಿರುವದು; ಅದಿಲ್ಲದಿದ್ದರೆ ಒಳ್ಳೆಯ ದೆಂದು ನಮ್ಮ ಭಾವನೆ; ಅದು ಯಾವದೆಂದರೆ- ೨ನೇ ಇಯತ್ತೆಯಲ್ಲಿ ಎರಡು ಸಾಲು, ೩ನೇ ಇಯತ್ತೆಯಲ್ಲಿ ೩ ಸಾಲು ೪ನೇ ಇಯತ್ತೆಯಲ್ಲಿ ೪ ಸಾಲು ಹೀಗೆ ಬರೆಯಿಸಿದರೆ ತೀರಿತೆಂದು ಎಷ್ಟೋ ಜನರು ತಿಳಿದಿರುವರು. ಯಾವಾಗಲೂ ಒಂದು ಪ್ಯಾರಾ ಅದು ದೊಡ್ಡದಿದ್ದರೆ ಅರ್ಧ ಪ್ಯಾರಾದ ಮಟ್ಟಿಗಾದರೆ ಒಂದು ವೇಳೆಗೆ ಹೇಳಬೇಕು. ಅದನ್ನು ಹೇಳುವ ಕೆಲವು ಸೂಚನೆಗಳನ್ನು ಇಲ್ಲಿ ಕೊಟ್ಟವೆ.

೧ ಓದಿದ ಪಾಠದೊಳಗಿನ ಒಂದು ಭಾಗವನ್ನು ಹೇಳಬೇಕು.

೨ ಹೇಳುವ ಮೊದಲು ಮಕ್ಕಳು ತಮ್ಮ ಪಾಟಿ ಪೆನ್ಸಿಲುಗಳನ್ನು ತೆಗೆದುಕೊಂಡು ಈ ಕೆಲಸಕ್ಕೆ ಸಿದ್ಧರಾಗಬೇಕು. ಅವರು ಸಾಲಾಗಿ ಕುಳಿತುಕೊಳ್ಳಬೇಕು. ಪಾಟಿಗಳ ಮೇಲೆ ನೆತ್ತಲೆ ಬೀಳಬಾರದು.

೩ ಬರೆಯುವ ಭಾಗವನ್ನು ಶಿಕ್ಷಕರು ಮೊದಲು ಒಮ್ಮೆ ಸ್ಪಷ್ಟವಾಗಿ ಓದಿ ಹೇಳಬೇಕು. ಮಕ್ಕಳು ಈ ಕಡೆಗೆ ಒಮ್ಮನಸ್ಸಿನಿಂದ ಚಿತ್ತವಿಡಬೇಕು.

೪ ಈ ಮೇರೆಗೆ ಹೇಳುವಷ್ಟು ಓದಿ ತೋರಿಸಿದ ಬಳಿಕ, ಒಂದೊಂದು ವಾಕ್ಯ ಖಂಡವನ್ನು ಒಂದೇ ಒಂದು ಸಾರೆ ಹೇಳಬೇಕು. ಸಾಕಷ್ಟು ವೇಳೆಯನ್ನು ಕೊಡಬೇಕು.

೫ ಮಕ್ಕಳು ಆಗ ಬರೆಯಬೇಕು. ಅಕ್ಷರ ಬರೆಹ ಸರಿಯಾಗಬೇಕು, ಬೇರೆಬೇರೆ ವರ್ಗಗಳಿಗೆ ತಕ್ಕ ವೇಗ ವಿರಬೇಕು. ನಡು ನಡುವೆ ಬಾಯಿಹಾಕಿ ಕೇಳಬಾರದು. ಶಿಕ್ಷ ಕರೂ ಎರಡು ಮೂರು ಸಾರೆ ಹೇಳಿದ್ದನ್ನೇ ಪುನಃ ಪುನಃ ಹೇಳಬಾರದು.

೬ ಬರೆಯುವದು ಮುಗಿದ ಕೂಡಲೆ, ಶಿಕ್ಷಕರು ಪಾಟಿಗಳನ್ನು ನೋಡಬೇಕು. ವರ್ಗಗಳು ಬಹಳ ವಿದ್ದರೆ, ಇಲ್ಲವೆ ದೊಡ್ಡವು ಇದ್ದರೆ ಪಾಟಿಗಳನ್ನು ಬದಲು ಮಾಡಿಸಿ ಮಕ್ಕಳ ಕಡೆಯಿಂದ ನೋಡಿಸಬೇಕು.

೭ ತಪ್ಪುಗಳನ್ನು ಕರೀ ಹಲಗೆಯ ಮೇಲೆ ಬರೆದು ತೋರಿಸಿ ತಿದ್ದಿಸಬೇಕು.

ಇನ್ನು ಉಕ್ತಲೇಖ ಶುದ್ಧಲೇಖನವೆಂದು ಯಾಕೆ ಭೇದ ಮಾಡಬೇಕೆಂದು ಕೆಲವರು ಕೇಳಬಹುದು. ಅವರಿಗೆ ಮುಂದಿನ ಉತ್ತರವು ಮನಗಾಣಿಸಬಹುದು. ನಾವು ಶಿಕ್ಷಣ ವನ್ನು ಮಕ್ಕಳ ಇಂದ್ರಿಯಗಳೆಂಬ ಬಾಗಿಲುಗಳ ಮೂಲಕವಾಗಿಯೇ ಸಾಗಿಸುತ್ತೇವಷ್ಟೇ! ಆದಕಾರಣ ಶುದ್ಧಲೇಖನದಲ್ಲಿ ಚಕ್ಷುರಿಂದ್ರಿಯಕ್ಕೆ ಹೆಚ್ಚು ಗಮನವಿರುವದು. ಅದೇ ಉಕ್ತಲೇಖನದಲ್ಲಿ ಶ್ರವಣೇಂದ್ರಿಯಕ್ಕೆ ಹೆಚ್ಚು ಆಸ್ಪದವಿರುವದು. ಎಷ್ಟೋ ಮಕ್ಕಳು ಚೆನ್ನಾಗಿ ಓದಬಲ್ಲವರಾದರೂ ಶುದ್ಧರೀತಿಯಿಂದ ಬರೆಯಲರಿಯರು. ಆದಕ್ಕಾಗಿ ಈ ಎರಡೂ ರೀತಿಯಿಂದ ಬರೆಹವನ್ನು ಕಲಿಸಿ ಶುದ್ಧ ರೀತಿಯಿಂದ ಆಡುವದನ್ನೂ ಬರೆಯುವ ದನ್ನೂ ಬಲ್ಲವನಾಗುವಂತೆ ಮಾಡಬೇಕು.

ಹಿಂದುಸ್ತಾನದ ಪ್ರಾಕೃತಿಕ ಸ್ವರೂಪವೂ ಇತಿಹಾಸದ ಮೇಲೆ ಇದರಿಂದುಂಟಾದ ಪರಿಣಾಮವೂ

ಲೇಖಕರು:— ಶ್ರೀ. ಏ. ವ್ಹಿ. ಮ್ಯಾಥ್ಯು. ಬಿ. ಏ., ಬಿ. ಟಿ.
ಮತ್ತು
ಶ್ರೀ. ಆಯ್. ಪಿ. ನಿಂಬಾಳಕರ

ಹಿಂದುಸ್ತಾನವನ್ನು ಹಿಮಾಲಯವು ಏಶಿಯಾದ ಇತರ ಭಾಗಗಳಿಂದ ಈ ದೇಶ ಗಳವರು ಹಿಂದುಸ್ತಾನದ ಕೂಡ ಹೊಕ್ಕು ಬಳಿಕೆಮಾಡಕೂಡದಂತೆ ನೈಜವಾಗಿ ಪ್ರತ್ಯೇಕಿ ಸಿರುತ್ತದೆ. ಇಲ್ಲಿ ಭೂಮಿಯ ಮೇಲಣ ಜನದ ೩ಕ್ಕೆ ದಷ್ಟು ಜನರು ವಾಸಿಸುತ್ತಿರುತ್ತಾರೆ ಯುರೋಪದಲ್ಲಿದ್ದಂತೆ ಇಲ್ಲಿಯೂ ಅಲ್ಲಲ್ಲಿಗೆ ಬೇರೆ ಬೇರೆ ಭಾಷೆಗಳಿರುತ್ತವೆ. ಒಂದು ಪ್ರಾಂತದ ಜನರು ಮತ್ತೊಂದು ಪ್ರಾಂತದ ಜನರಿಂದ ಭಿನ್ನರಾಗಿರುತ್ತಾರೆ. ವಿಶೇಷತಃ ಔತ್ತರಾತ್ಯ, ದಾಕ್ಷಿಣಾತ್ಯರ ಭಾಷೆ, ವರ್ಣ ಮೊದಲಾದವುಗಳಲ್ಲಿ ಮಹದಂತರವುಂಟು. ಹೀಗೆ ಹಿಂದುಸ್ತಾನವು ಒಂದು ಉಪಖಂಡವಾಗಿರುತ್ತದೆಂದು ನಿರ್ವಿವಾದವಾಗಿ ಹೇಳ ಬಹುದು. ಆದರೂ ಹಿಂದುಸ್ತಾನದಲ್ಲಿಯ ಯಾವತ್ತೂ ಜನರು ಒಂದೇ ಧರ್ಮದ ಸಂಸ್ಕರಣದಿಂದಲೂ ಒಂದೇ ಭಾಷೆಯ ಸಂಸ್ಕೃತಿಯಿಂದಲೂ ಒಂದೇ ಜನಾಂಗ ದಂತಿರುವರು. ಬೌದ್ಧ, ಹಿಂದು, ಜೈನ, ಶೀಖ ಮೊದಲಾದ ಧರ್ಮಗಳು ಆರ್ಯ ಧರ್ಮದ ಖನಿಯಿಂದಲೇ ಉದ್ಭವಿಸಿರುವವೆಂಬದು ನಿರ್ವಿವಾದವಾದದ್ದು. ಪಾರ್ಶಿ, ಮುಸಲ್ಮಾನ, ಕ್ರೈಸ್ತರಾದರೂ ಧರ್ಮದೃಷ್ಟಿಯಿಂದ ಭಿನ್ನರಾಗಿದ್ದರೂ ಪರಸ್ಪರ ಧರ್ಮ ಸಂಕರಣದಿಂದ ಒಂದೇ ವಿಶ್ವವ್ಯಾಪಿ ಧರ್ಮದ ತತ್ವದ ಕಡೆಗೆ ಇವೆಲ್ಲ ಧರ್ಮಗಳೂ

ಭರದಿಂದ ಸಾಗಿರುವವು. ಇಲ್ಲಿಯ ಭಾಷೆಗಳು ಪ್ರಾಂತ ಪ್ರಾಂತಕ್ಕೆ ಭಿನ್ನವಿದ್ದಾಗ್ಯೂ ಇವೆಲ್ಲವೂ ಸಂಸ್ಕೃತ ಭಾಷೆಯಿಂದ ಪರಿಪುಷ್ಟವಾಗಿರುವವು. ದಕ್ಷಿಣಾಪಥದಲ್ಲಿ ರೂಢ ವಾಗಿರುವ ದ್ರಾವಿಡ ಭಾಷೆಗಳು ಮೂಲದಲ್ಲಿ ಪ್ರಾಕೃತ ಭಾಷೆಯಿಂದ ತೀರ ಭಿನ್ನ ವಾಗಿದ್ದರೂ ಸಹ, ಆಧುನಿಕ ಕಾಲದಲ್ಲಿ ಸಂಸ್ಕೃತದಿಂದಲೇ ಪರಿಪುಷ್ಟವಾಗಿರುತ್ತವೆ. ಹೀಗೆ ಹಿಂದುಸ್ಥಾನವು ಒಂದು ಭೂಖಂಡವಾದಾಗ್ಯೂ ಒಂದೇ ದೇಶ, ಒಂದೇ ಜನಾಂಗವಾಗಿರುತ್ತದೆ.

೨ ಹಿಂದುಸ್ಥಾನವು ಉತ್ತರದಲ್ಲಿ ಹಿಮಾಲಯದಿಂದ ಅಡ್ಡಗಟ್ಟಲ್ಪಟ್ಟಂತೆ ಉಳಿದೆಡೆಗಳಲ್ಲಿ ಮಹಾಸಾಗರಗಳಿಂದ ಸುತ್ತುಗಟ್ಟಲ್ಪಟ್ಟಿರುತ್ತದೆ. ಹೀಗಾಗಿ ಈ ದೇಶವು ಈಶನಿರ್ಮಿತ ಒಂದು ಭದ್ರವಾದ ಕೋಟೆಯ ಮಧ್ಯದಲ್ಲಿರುತ್ತದೆ. ಇದನ್ನಾವರಿಸಿದ ಸಮುದ್ರಗಳು ಪೂರ್ವಕಾಲದಲ್ಲಿ ದೇಶವಿಭಾಜಕಗಳಾಗಿದ್ದು ಪರದೇಶದವರು ಈ ದೇಶಕ್ಕೆ ಬಾರದಂತೆ ಮಾಡಿದ್ದವು. ಹೀಗಾಗಿ ಪ್ರಾಚೀನ ಕಾಲದಲ್ಲಿ ಹಿಂದುಸ್ಥಾನಕ್ಕೆ ಪರಚಕ್ರಗಳ ದಾಳಿಗಳು ವಾಯುವ್ಯದ ಕಣಿವೆಗಳ ಮಾರ್ಗವಾಗಿಯೇ ಸಾಗಿದವು. ಕೆಲವು ಅಲ್ಪ ದಾಳಿಗಳು ಈಶಾನ್ಯದಿಂದಲೂ ಆದವು. ಆದರೆ ೧೫ನೆಯ ಶತಮಾನದ ಅಂತ್ಯದ ವರೆಗೂ ಸಮುದ್ರ ಮಾರ್ಗವಾಗಿ ಬಹುಶಃ ಯಾವ ದಾಳಿಗಳೂ ಆಗಲಿಲ್ಲ. ನೌಕಾ ಗಮನವು ಅತಿ ಪ್ರಾಚೀನ ಕಾಲದಿಂದ ಬಳಕೆಯಲ್ಲಿದ್ದಾಗ್ಯೂ ಸಣ್ಣ ಸಣ್ಣ ಹಡಗಗಳು ಸಮುದ್ರದ ದಂಡೆಗುಂಟ ಮಾತ್ರ ಸಂಚರಿಸುತ್ತಿದ್ದವು. ನೌಕಾವಿದ್ಯೆಯಲ್ಲಿ ಪ್ರವೀಣ ತೆಯು ದೊರೆತಲ್ಲಿ ಸಮುದ್ರವು ಪರದೇಶಗಮನಕ್ಕೆ ಒಂದು ಅಡ್ಡಿಯಾಗಿರದೆ ದೇಶ ಸಂಚಾರದ ಒಂದು ಸಾಹಿತ್ಯವಾಗಿ ಪರಿಣಮಿಸುತ್ತದೆ. ಅಂತೇ ೧೬ನೆಯ ಶತಮಾನದಲ್ಲಿ ಯುರೋಪದಲ್ಲಿ ನೌಕಾವಿದ್ಯೆಯಲ್ಲಿ ಪ್ರವೀಣತೆಯನ್ನು ಪಡೆದ ಪೋರ್ತುಗೀಸರು ಹಿಂದುಸ್ಥಾನಕ್ಕೆ ಬಂದರು. ಮತ್ತು ಒಂದು ನೂರು ವರ್ಷಗಳ ವರೆಗೆ ಹಿಂದುಸ್ಥಾನದ ಸಮುದ್ರತೀರಗಳು ಇವರ ವಶದಲ್ಲಿದ್ದವು. ಪೂರ್ವದಿಕ್ಕಿನ ವ್ಯಾಪಾರವೆಲ್ಲ ಇವರ ಕೈಸೇರಿತ್ತು. ಮುಂದೆ ಸಮುದ್ರ ಸಂಚಾರದಲ್ಲಿ ಡಚ್ಚರು ಇವರನ್ನು ಹಿಮ್ಮೆಟ್ಟಿಸಿ ಸಮುದ್ರ ಸ್ವಾಮಿತ್ವವನ್ನು ಪಡೆದರು, ಇದೇ ಕಾಲಕ್ಕೆ ಇವರಿಗೆ ಪ್ರತಿಸ್ಪರ್ಧಿಗಳಾಗಿ ಫ್ರೆಂಚರೂ ಬ್ರಿಟಿಷರೂ ಎದ್ದರು. ಫ್ರೆಂಚರು ತಮ್ಮ ಅದೂರದೃಷ್ಟಿಯಿಂದ ಹಿಂದುಸ್ಥಾನದ ಕರಾವಳಿಗಳನ್ನು ಬಿಟ್ಟು ಒಳದೇಶವನ್ನು ವಶಮಾಡಿಕೊಳ್ಳಹತ್ತಿದರು. ಬ್ರಿಟಿಷರಾದರೆ ಇದಕ್ಕೆ ವ್ಯತಿರಿಕ್ತವಾಗಿ ಕರಾವಳಿಗಳಲ್ಲಿ ಗಂಡುಮೆಟ್ಟಾದ ಮುಂಬಯಿ, ಮದ್ರಾಸ, ಕಲಕತ್ತಾಗಳನ್ನು ಕೆಲ ದಿನಗಳೊಳಗಾಗಿ ಸಂಪಾದಿಸಿ ಉಳಿದ ಯುರೋಪಿ ಯನ್ನರಾಷ್ಟ್ರಗಳವರೊಂದಿಗೆ ಹೋರಾಡಿ ಅವರನ್ನು ಹಿಂದಕ್ಕಟ್ಟಿದ್ದಲ್ಲದೆ ಸಮುದ್ರ ಸ್ವಾಮಿತ್ವವನ್ನು ತಮ್ಮ ವಶಕ್ಕೆ ತೆಗೆದುಕೊಂಡು ಹಿಂದುಸ್ಥಾನದಲ್ಲಿ ಒಂದರ ಹಿಂದೊಂದು ದೇಶಗಳನ್ನು ಗೆದೆಯುತ್ತ ಇಂದಿಗೆ ಹಿಂದುಸ್ಥಾನದ ಸಾರ್ವಭೌಮರಾಗಿರುವರು. ಹೀಗೆ

ನೌಕಾವಿದ್ಯೆಯ ಪ್ರವೀಣತೆಯಿಂದ ಮಹಾಸಾಗರಗಳು ದೇಶಸಂಯೋಜಕಗಳೂ ಅಭಿಯೋಗ ವ್ಯಾಪಾರಗಳ ಹೆದ್ದಾರಿಗಳೂ ಆಗಿ ಪರಿಣಮಿಸಿರುತ್ತವೆ.

ಹಿಂದುಸ್ಥಾನವು ಐಶ್ವರ್ಯದಲ್ಲಿ ಹೆಸರಾಗಿದ್ದು ಜಗತ್ತಿನ ಸರ್ವ ದೇಶಗಳವರು ಈ ದೇಶದವರೊಂದಿಗೆ ವ್ಯಾಪಾರಮಾಡುತ್ತಾರಷ್ಟೇ. ಪೂರ್ವ ಕಾಲದಲ್ಲಿ ಹಿಂದುಸ್ಥಾನವು ನೌಕಾಯಾನಪ್ರವೀಣತೆಯುಳ್ಳದ್ದಾಗಿದ್ದು ಆಫ್ರಿಕಾ, ಏಶಿಯಾದ ಯಾವತ್ತು ದೇಶಗಳು, ಭೂಮಧ್ಯಸಮುದ್ರದ ದಂಡೆಯ ಪ್ರದೇಶದವರೊಂದಿಗೆ ವ್ಯಾಪಾರಮಾಡುತ್ತಿತ್ತು. ಬೈಬಲಿನಲ್ಲಿ ಉಲ್ಲೇಖಿಸಿದ ಸೊಲಮೋನನ ರಾಜ್ಯಕ್ಕೆ ತರಲ್ಪಟ್ಟ ಓಫೀರ ಬಂಗಾರವು ಹಿಂದುಸ್ಥಾನದ್ದೆಂದು ಕೆಲವರು ತರ್ಕಿಸುತ್ತಾರೆ. ರೋಮವು ಒಂದು ಕಾಲಕ್ಕೆ ಹಿಂದುಸ್ಥಾನದ ಪ್ರಮುಖ ಗಿರಾಕಿಯಾಗಿತ್ತು. ರೋಮದ ಬಂಗಾರದ ನಾಣ್ಯಗಳು ಮದುರೆಯ ಬಳಿಯಲ್ಲಿಯೂ ಕೆಲವು ದಿನಗಳ ಹಿಂದೆ ಮೈಸೂರಿನ ಬಳಿಯಲ್ಲಿಯೂ ದೊರೆದದ್ದು ಈ ಮಾತಿಗೆ ಸಾಕ್ಷಿಗಳಾಗಿರುತ್ತವೆ. ಗ್ರೀಕರೂ ಐಗುಪ್ತ್ಯರೂ ಈ ದೇಶದವರೊಂದಿಗೆ ಒಂದು ಕಾಲಕ್ಕೆ ವಿಶೇಷ ಹೊಕ್ಕು ಬಳಿಕೆಯಲ್ಲಿದ್ದರು. ಐಗುಪ್ತದಲ್ಲಿ ದೊರೆತ ಗ್ರೀಕ ನಾಟಕದಲ್ಲಿ ಕೆಲವೊಂದು ಕನ್ನಡ ವಾಕ್ಯವಿರುವದು ಈ ಮಾತಿಗೆ ಬಲವಾದ ಸಾಕ್ಷಿಯಾಗಿರುತ್ತದೆ. * ಹಿಂದಿಯರು ಪಶ್ಚಿಮದಲ್ಲಿ ಬಹು ದೂರದ ವರೆಗೆ ಸಮುದ್ರ ಪ್ರಯಾಣಮಾಡಿದಂತೆ ಪೂರ್ವದಲ್ಲಿಯೂ ಚೀನ, ಜಪಾನಗಳೊಂದಿಗೂ ಸುಮಾತ್ರಾ, ಜಾವಾ ಮೊದಲಾದ ದ್ವೀಪಗಳವರೊಂದಿಗೂ ವ್ಯಾಪಾರ ಮಾಡುತ್ತಿದ್ದರು. ಜಾವಾದ್ವೀಪದಲ್ಲಿ ಹಿಂದೂ ಜನರ ವಸಾಹತಿನ ಅನೇಕ ಚಿಹ್ನಗಳು ಈಗಲೂ ದೃಷ್ಟಿಗೋಚರವಾಗುತ್ತವೆ. ಇವರು ಅಲ್ಲಿ ಅನೇಕ ದೇವಾಲಯಗಳನ್ನು ಕಟ್ಟಿರುವರು. ಹೀಗೆ ಹಿಂದುಸ್ಥಾನವರು ಕ್ರಿಸ್ತಾಬ್ದಕ್ಕೆ ಪೂರ್ವದಲ್ಲಿಯೇ ನೌಕಾಗಮನದಲ್ಲಿ ಪ್ರವೀಣರಾಗಿದ್ದರು.

೩ ಭೂಗರ್ಭರಚನಾ ಅಭ್ಯಾಸದಿಂದ ಸಹಸ್ರಾವಧಿ ವರ್ಷಗಳ ಪೂರ್ವದಲ್ಲಿ ಹಿಂದುಸ್ಥಾನವು ಈಗಿನ ಸ್ಥಿತಿಯಲ್ಲಿರದೆ ಆಸ್ಟ್ರೇಲಿಯಾ, ಆಫ್ರಿಕಾ ಮತ್ತು ಹಿಂದುಸ್ಥಾನಗಳು ಕೂಡಿ ಒಂದು ವಿಸ್ತಾರವಾದ ಭೂಖಂಡವಾಗಿತ್ತು ಎಂದು ಕಂಡುಬರುತ್ತದೆ. ಹಿಂದುಸ್ಥಾನದ ಉತ್ತರದ ಅಂಚು ವಿಂಧ್ಯಪರ್ವತವಿದ್ದು ಇದರ ಉತ್ತರದಲ್ಲಿ ವಿಸ್ತಾರವಾದ ಸಮುದ್ರವಿತ್ತು. ಮತ್ತು ಉತ್ತರದ ತೀರವು ತಿಬೇಟವೂ ಪೂರ್ವದ ತೀರವು ಆಸಾಮದ ಗುಡ್ಡಗಳೂ ಆಗಿದ್ದವು. ವಿಂಧ್ಯದ ಪೂರ್ವದಲ್ಲಿ ಒಡಿಸಾ ಪ್ರಾಂತ ಬಂಗಾಲದ ಕೆಲವು ಭಾಗಗಳ ಕಿರಿಬಿಗಲಾದ ಪಟ್ಟಿಯು ಆಸಾಮದ ಗುಡ್ಡಗಳ ವರೆ

* ಗ್ರೀಕ ನಾಟಕದಲ್ಲಿ ದೊರೆತ ಕನ್ನಡ ವಾಕ್ಯವೊಂದು ಕೆಳಗೆ ಬರೆದಂತಿರುತ್ತದೆ.

'ಬೀರೆ ಕೊಂಚ ಮಧು ಪಾತ್ರಕ್ಕೆ ಹಾಕಿ ಪಾನಂ ಬೆರೆಸ್ತಿ ಕಟ್ಟಿ ಮಧುವಂ ಬೆರೆಸ್ತುವೆನ್'

J. R. A. L. 1904 P. 399

ಹಬ್ಬಿತ್ತು. ಕಾಲಗತಿಯಿಂದ ಮಹಾಸಾಗರವು ಒಳಸೇರಹತ್ತಿ ಆಸ್ಟ್ರೇಲಿಯಾ ಖಂಡವ ಬೇರೆಯಾಯಿತು. ದಕ್ಷಿಣ ಮಹಾಸಾಗರವು ಆಫ್ರಿಕೆಯನ್ನು ನುಗ್ಗಹತ್ತಿತು. ವಿಂಧ್ಯದ ಉತ್ತರದ ಸಮುದ್ರವು ಹಿಂದೆಳೆಯಹತ್ತಿತು. ಹೀಗೆ ಕ್ರಮೇಣ ಈಗಿನ ಸ್ಥಿತಿಗೆ ಭೂಸ್ವರೂಪವು ಬಂದುಮುಟ್ಟಿದೆ. ಈ ಸ್ಥಿತಿಗೆ ಮುಟ್ಟುವ ಪೂರ್ವದಲ್ಲಿ ಮೊದಲು ಈ ಮೂರೂ ಖಂಡಗಳ ಮಧ್ಯದಲ್ಲಿ ಚಿಕ್ಕ ಚಿಕ್ಕ ನಡುಗಡ್ಡೆಗಳು ಸಾಲ್ಗೊಂಡಿದ್ದವು. ಈ ಮಧ್ಯದ ಕಾಲಗಣನೆಯನ್ನು ಮಾತ್ರ ಹೇಳುವದು ಅಸಂಭವವು. ಆ ಕಾಲದಲ್ಲಿ ಜನರಲ್ಲಿ ಸಮುದ್ರ ಸಂಚಾರದ ಕಲ್ಪನೆಯು ಇದ್ದಂತೆ ಕಾಣುವದಿಲ್ಲ. ಇಂಥ ವೇಳೆಯಲ್ಲಿ ಈ ಮೂರು ಖಂಡಗಳು ಒಂದನ್ನೊಂದು ಅಗಲಿದ್ದರಿಂದ ಇವುಗಳಲ್ಲಿ ಯಾವದರಲ್ಲಾದರೂ ಜನರಿಲ್ಲದಿದ್ದರೆ ಅದು ಮುಂದೆ ಸಮುದ್ರ ಸಂಚಾರದ ಯುಗದ ವರೆಗೆ ನಿರ್ಜನ ಪ್ರದೇಶ ವಾಗಬೇಕಿತ್ತು. ಆದರೆ ಈ ಮೂರೂ ಖಂಡಗಳಲ್ಲಿ ಜನರಿದ್ದು ಅವರ ಇರವು, ಸ್ವಭಾವ, ಲಗ್ನ ಮೊದಲಾದ ಗೃಹಸ್ಥಿತಿ, ಭೂತಗಳ ಕಲ್ಪನೆಗಳಲ್ಲಿಯೂ ಹೋಲಿಕೆಯಲ್ಲಿಯೂ ಸಾಮ್ಯವಿರುವದರಿಂದ ಇವರೆಲ್ಲರೂ ಒಂದೇ ವಂಶದವರೂ ಒಂದೆಡೆಯಿಂದ ಎಲ್ಲ ಕಡೆಗೆ ಚದರಿದವರೂ ಇರಬೇಕೆಂದು ಕೆಲವರ ಮತವುಂಟು.

೪. ಪರಚಕ್ರಗಳು ಹಿಂದುಸ್ಥಾನದ ಮೇರೆಗಳನ್ನವಲಂಬಿಸಿದಂತೆ ಹಿಂದುಸ್ಥಾನ ದಲ್ಲಿ ಅವರ ವ್ಯಾಪ್ತಿಯು ಅಲ್ಲಿಯ ಸ್ವಾಭಾವಿಕ ವಿಭಾಗಗಳನ್ನವಲಂಬಿಸಿರುತ್ತದೆ. ಹಿಂದು ಸ್ಥಾನದಲ್ಲಿ ನಾಲ್ಕು ಸ್ವಾಭಾವಿಕ ವಿಭಾಗಗಳುಂಟು. ಅವು ಯಾವವೆಂದರೆ-

೧. ಉತ್ತರದ ಪರ್ವತಗಳ ಪ್ರದೇಶ. ವಾಯುವ್ಯ, ಉತ್ತರ, ಈಶಾನ್ಯಗಳ ಪರ್ವತಗಳ ಪ್ರದೇಶವೆಲ್ಲ ಈ ಭಾಗದಲ್ಲಿ ಬರುತ್ತದೆ. ಉತ್ತರದ ಪರ್ವತಗಳ ಉಗಮವು ಕಾಶ್ಮೀರದ ಉತ್ತರದಲ್ಲಿರುವ ಪಾಮಿರದ ತಪ್ಪಲಿನಿಂದ ಎಂದು ಹೇಳಬಹುದು. ಇದರ ನೈಋತ್ಯದಲ್ಲಿ ಹಿಂದುಕುಶ ಪರ್ವತವು ಹಬ್ಬಿರುತ್ತದೆ. ಇದರ ದಕ್ಷಿಣದಲ್ಲಿ ಸುಲೇಮಾನ, ಕೀರ್ಥರ ಪರ್ವತಗಳ ಸಾಲುಗಳು ದಕ್ಷಿಣೋತ್ತರವಾಗಿ ಹಬ್ಬಿರುತ್ತವೆ. ಇವುಗಳ ಸರಾ ಸರಿ ಎತ್ತರವು ೬೦೦೦ ಫೂಟು. ಈ ಪರ್ವತಾವಳಿಗಳಲ್ಲಿ ಅಲ್ಲಲ್ಲಿಗೆ ಇಕ್ಕಟ್ಟಾದ ಕಣಿ ವೆಯ ಮಾರ್ಗಗಳಿದ್ದು ಇವು ಹಿಂದುಸ್ಥಾನದವರೊಂದಿಗೆ ಏಶಿಯಾ ಖಂಡದ ಇತರ ದೇಶಗಳವರು ವ್ಯಾಪಾರ ಮಾಡಲಿಕ್ಕೆ ಅನುಕೂಲವಾಗುತ್ತವೆ. ಈ ಮಾರ್ಗಗಳಿಂದಲೇ ಪರಚಕ್ರಗಳು ಹಿಂದುಸ್ಥಾನವನ್ನು ಒಳನುಗ್ಗಿದವು. ಇವುಗಳಲ್ಲಿ ಪೇಶಾವರದ ಬಳಿಯಲ್ಲಿ ಖೈಬರ ಕಣಿವೆಯೂ (೩೪೦೦ ಫೂಟು ಎತ್ತರ) ಶಿಕಾರಪುರ ಕ್ವೆಟಾಗಳ ಮಧ್ಯದಲ್ಲಿ ಬೋಲನ ಕಣಿವೆಯೂ (೫೮೦೦ ಫೂಟು ಎತ್ತರ) ಪ್ರಸಿದ್ಧವುಂಟು.

ಹಿಮಾಲಯ ಪರ್ವತದ ಪ್ರದೇಶ:— ಹಿಂದುಸ್ಥಾನದ ಸಮಗ್ರ ಉತ್ತರ ಮೇರೆ ಯನ್ನು ಹಿಮಾಲಯ ಪರ್ವತವು ಆಕ್ರಮಿಸಿರುತ್ತದೆ. ಇದು ೨–೩ ಸಾಲುಗಳಾಗಿ

ಚಕ್ರಾಕಾರವಾಗಿ ಹಬ್ಬಿರುತ್ತದೆ. ಇದರ ಉದ್ದವು ೧,೫೦೦ ಮೈಲು, ಅಗಲವು ೧೫೦ರಿಂದ ೨೦೦ ಮೈಲುಗಳವರೆಗೆ. ಇದರ ಎರಡು ಸಾಲುಗಳು ಹಿಂದುಸ್ತಾನದ ಮೇರೆಯಲ್ಲಿರುತ್ತವೆ. ಇವುಗಳಲ್ಲಿ ಮೊದಲಿನ ಸಾಲು ಕಿರಿದಾಗಿದ್ದು ಇದರಲ್ಲಿ ನೇಪಾಳ, ಭೂತಾನ ಪ್ರಾಂತಗಳು ಬರುತ್ತವೆ. ಇವುಗಳ ಹಿಂದಿನಸಾಲಿನಲ್ಲಿ ಅತ್ಯುನ್ನತವಾದ ಶಿಖರಗಳಿರುತ್ತವೆ. ದಾರ್ಜಿಲಿಂಗದಿಂದ (೭,೦೦೦ ಫೂಟು ಎತ್ತರ) ೫೦ ಮೈಲುಗಳಮೇಲೆ ಕಾಂಚನ ಗಂಗಾ ಶಿಖರವೂ (೨೮,೨೦೦ ಫೂಟು ಎತ್ತರ) ೧೦೦ ಮೈಲುಗಳ ಮೇಲೆ ಗೌರೀಶಂಕರ ಶಿಖರವೂ (೨೯,೧೪೧ ಫೂಟು ಎತ್ತರ) ಚನ್ನಾಗಿ ಕಾಣುತ್ತವೆ. ಗೌರೀಶಂಕರ (ಮೌಂಟ ಎವರೆಸ್ಟ) ಶಿಖರವು ಲೋಕದಲ್ಲಿ ಅತ್ಯುನ್ನತ ಶಿಖರವು. ಇವಲ್ಲದೆ ಧವಲಗಿರಿ (೨೬,೮೨೬ ಫೂಟು) ನಂದಾದೇವಿ (೨೫,೬೬೦ ಫೂಟು) ನಂಗಾಪರ್ವತ (೨೬,೬೦೦ ಫೂಟು) ಮುಂತಾದ ಶಿಖರಗಳಿರುತ್ತವೆ.

ಹಿಮಾಲಯವು ಏಶಿಯಾ ಖಂಡದ ವಿಸ್ತಾರವಾದ ತಪ್ಪಲುಭೂಮಿಯ ಅಂಚಿರುತ್ತದೆ. ಇದು ಹಿಂದುಸ್ತಾನದಕಡೆಗೆ ಒಮ್ಮೆಲೇ ಕಡಿದಾಗಿರುತ್ತದೆ. ಇದರ ಉತ್ತರ ಭಾಗದಲ್ಲಿ ಮಾನಸ ಸರೋವರವಿದ್ದು ಇಲ್ಲಿಂದ ಬ್ರಹ್ಮಪುತ್ರಾ ಸಿಂಧುನದಿಗಳು ಉಗಮವಾಗಿ ಹಿಮಾಲಯದ ಓರೆಗುಂಟ ಒಂದು ಪೂರ್ವಕ್ಕೂ ಇನ್ನೊಂದು ಪಶ್ಚಿಮಕ್ಕೂ ಸಾಗಿ ಈ ಪರ್ವತಾವಳಿಯನ್ನು ಸುತ್ತುಗಟ್ಟಿರುತ್ತವೆ. ಇವುಗಳ ದಕ್ಷಿಣದಲ್ಲಿ ಗಂಗಾ, ಯಮುನಾ ಗೋಗರಾ, ಗಂಡಕಿ ನದಿಗಳು ಉಗಮವಾಗಿರುತ್ತವೆ. ಇವೆಲ್ಲ ನದಿಗಳು ಹಿಮಾಲಯದಿಂದ ಉತ್ತರ ಹಿಂದುಸ್ತಾನದ ಬೈಲಿನಲ್ಲಿ ಪ್ರತಿವರ್ಷ ರೇವೆಯನ್ನು ತಂದು ಫಲವತ್ತಾದ ಭೂಮಿಯನ್ನಾಗಿ ಮಾಡಿರುತ್ತವೆ.

ಈ ಪರ್ವತಾವಳಿಗಳಲ್ಲಿ ಪೂರ್ವಭಾಗದಲ್ಲಿ ತಿಬೇಟಿಯನ್ನ ವರ್ಗಕ್ಕೆ ಸೇರಿದ ಜನರು ವಾಸಿಸುತ್ತಾರೆ. ಇವರು ಆಕಾರದಿಂದ ಕಿರಿಯರು. ಪಶ್ಚಿಮ ಭಾಗದಲ್ಲಿ ಕಾಶ್ಮೀರದಲ್ಲಿ ಮುಸಲ್ಮಾನರು ಹೆಚ್ಚಾಗಿ ವಾಸಿಸುವರು. ಕೀರ್ಥರ, ಸುಲೇಮಾನ ಪರ್ವತಗಳಲ್ಲಿ ಕಾಡ ಜನರು ವಾಸಿಸುತ್ತಿದ್ದು ಇವರು ಕುರಿ ದನಗಳನ್ನು ಸಾಕಿ ಹೊಟ್ಟೆ ತೊರಕೊಳ್ಳುವರು. ಇವರೆಲ್ಲರೂ ಗಟ್ಟಿಗರೂ ಮೇಲಾದ ಯೋಧರೂ ಆಗಿರುತ್ತಾರೆ. ಹೀಗೆ ಹಿಮಾಲಯವು ಸ್ವತಃ ತಾನೇ ಹಿಂದುಸ್ತಾನವನ್ನು ಸಂರಕ್ಷಿಸುತ್ತಿದ್ದು ಹಿಂದುಸ್ತಾನದ ಸಲುವಾಗಿ ಹೋರಾಡುವ ಶೂರ ದಂಡಾಳುಗಳನ್ನು ಒದಗಿಸಿರುತ್ತದೆ. ಹಿಂದುಸ್ತಾನದ ಪರಚಕ್ರಗಳನ್ನು ತಡೆದು ಹಿಂದುಸ್ತಾನಕ್ಕೆ ಒದಗಬಹುದಾದ ಅನೇಕ ಆಪತ್ತುಗಳನ್ನು ದೂರ ಮಾಡಿದ ಶ್ರೇಯಸ್ಸು ಈ ಹಿಂದಪುತ್ರರಿಗೇ ಸಲ್ಲುತ್ತದೆ. ಇವರು ಅಲೆಕ್ಸಂದ್ರನಂತ ಲೋಕೈಕ ವೀರನನ್ನು ಸಹ ತಡೆದದ್ದೂ ತಿಮೂರ, ಚಂಗಿಜಖಾನ ಮೊದಲಾದ ಕೊಳ್ಳೆಕಾರರ ಓಘವನ್ನು ಕುಂಠಿತಮಾಡಿದ್ದೂ ಮುಂದಿನ ಇತಿಹಾಸದಲ್ಲಿ ನಿಮಗೆ ಕಂಡುಬರುವದು

ಹಿಮಾಲಯದ ಬಗ್ಗೆ ಇಲ್ಲಿ ಇನ್ನೊಂದು ಸಂಗತಿಯನ್ನು ಹೇಳದಿದ್ದಲ್ಲಿ ಈ ಪರ್ವತಾವಳಿಗಳ ಬಗ್ಗೆ ನಮಗಿದ್ದ ಜ್ಞಾನವು ಅಪೂರ್ಣವಾದದ್ದೆಂದೇ ಹೇಳಬಹುದು. ಹಿಮಾಲಯವು ನಯನ ಮನೋಹರವಾದದ್ದು. ಇಲ್ಲಿಯ ಹಿಮನದಿಗಳು, ಆಳವಾದ ಕೊಳ್ಳಗಳು, ಎತ್ತರವಾದ ಶಿಖರಗಳು, ದಟ್ಟವಾದ ಕಾಡುಗಳು, ಕಿರೀಟದಂತೊಪ್ಪುವ ಹಿಮಪ್ರದೇಶಗಳು ಪೂರ್ವದ ಜನರನ್ನು ದಂಗುಬಡಿಸಿದವು. ಅವರು ಸೃಷ್ಟ್ಯೋಪಾಸಕರಿದ್ದದರಿಂದ ಈ ಪರ್ವತವನ್ನು ದೈವಮಾಲಿಕೆಯಲ್ಲಿ ಸೇರಿಸಿ ಇದಕ್ಕೆ ಶಿವ ಎಂದು ಹೆಸರಿಟ್ಟರು. ಶಿವ ಅಂದರೆ ಶುಭ. ಹಿಂದೂ ಜನರ ತ್ರಿದೇವತೆಗಳಲ್ಲೊಬ್ಬನಾದ ಶಿವನ ಹೆಸರುಗಳೆಲ್ಲ ಈ ಪರ್ವತದ ಲಕ್ಷಣಗಳನ್ನು ಸಾರುತ್ತವೆ. ಏಕಾಂತದಲ್ಲಿ ಯೋಗಸಾಧನೆಗೆ ಯೋಗ್ಯಸ್ಥಳವೆಂದು ತಿಳಿದು ಇತ್ತಕಡೆಗೆ ಮುನಿಗಳು ಸಾಗಹತ್ತಿದರು. ಇಲ್ಲಿ ಇರುವದೇ ಸ್ವರ್ಗಸುಖವೆಂದು ಭಾವಿಸಿ ಇದರ ಆಯಾಯಾ ಭಾಗಗಳಿಗೆ ಸ್ವರ್ಗ ಎಂಬರ್ಥ ಬರುವ ಹೆಸರುಗಳನ್ನಿಟ್ಟರು. ಪಾಂಡವರು ಕುರುಕ್ಷೇತ್ರದ ಯುದ್ಧಾನಂತರ ಸ್ವರ್ಗಾರೋಹಣ ಮಾಡಿದರೆಂದು ಹೇಳುವಲ್ಲಿ ಅವರು ಹಿಮಾಲಯದ ಮಾರ್ಗವಾಗಿ ತಿಬೇಟಕ್ಕೆ ಹೋದರೆಂದು ಹೇಳುವವರು ಈಗ ಎಷ್ಟೋ ಜನರುಂಟು. ಹೀಗೆ ಹಿಮಾಲಯವು ಈಗಲೂ ಮುನಿಗಳ ಬೀಡು ಮುಕ್ತಿಯ ತವರ್ಮನೆಯಾಗಿ ಭಾವಿಸಲ್ಪಡುತ್ತದೆ.

—(ಮುಂದೆ ಸಾಗುವದು)

ಕನ್ನಡ "ವರ್ಥಪ್ರಾಯಿಜ" ಪರೀಕ್ಷೆ ೧೯೩೪

ಪರೀಕ್ಷೆಯ ತಾರೀಖು ಮತ್ತು ಸ್ಥಳ:—

೧೯೩೪ನೆಯ ಇಸವಿಯ ಮಾರ್ಚ ತಿಂಗಳ ೧ನೆಯ ತಾರೀಖು (ಗುರುವಾರ) ೧೨ ಗಂಟೆಯಿಂದ ಮತ್ತು ಮುಂದಿನ ಎರಡು ದಿವಸಗಳಲ್ಲಿ ಧಾರವಾಡ ಟ್ರೇನಿಂಗ ಸ್ಕೂಲಿನಲ್ಲಿ ಪರೀಕ್ಷೆಯು ನಡೆಯುವದು.

ಪರೀಕ್ಷೆಯ ವಿಷಯ ಮೊದಲಾದವು:—

(ಅ) ಹಳಗನ್ನಡ ಮತ್ತು ಹೊಸಗನ್ನಡ ಗದ್ಯ ಪದ್ಯ ಭಾಗಗಳ ಅರ್ಥವಿವರಣೆ ಮಾಡಲಿಕ್ಕೂ ಅವುಗಳಿಗೆ ಟೀಕೆ ಟಿಪ್ಪಣೆಗಳನ್ನು ಬರೆಯಲಿಕ್ಕೂ ಹಳೆಯ ಅಥವಾ ಹೊಸಗನ್ನಡದಲ್ಲಿ ನಿಬಂಧ ಬರೆಯಲಿಕ್ಕೂ ವಿದ್ಯಾರ್ಥಿಗಳು ಸಮರ್ಥರಾಗಿರಬೇಕು.

(ಬ) ವರ್ಥಸಾಹೇಬರು ರಚಿಸಿರುವ ಪ್ರಾಕ್ಕಾವ್ಯಮಾಲೆ ಎಂಬ ಗ್ರಂಥವನ್ನು ಸಾದ್ಯಂತವಾಗಿ ಓದಿ ಸಂಪೂರ್ಣವಾಗಿ ತಿಳಿದುಕೊಂಡಿರಬೇಕು. ಪರೀಕ್ಷೆಯಲ್ಲಿ ಅರ್ಥವಿವರಣೆ, ಟೀಕೆ ಟಿಪ್ಪಣೆ, ಸ್ವತಂತ್ರ ನಿಬಂಧ, ಪದ್ಯರಚನೆ ಈ ವಿಷಯಗಳ ಸಮಾವೇಶ

ವಾಗವದು. ವಿದ್ಯಾರ್ಥಿಯು ಪರೀಕ್ಷೆಗಿರುವ ಒಟ್ಟು ಗುಣಗಳಲ್ಲಿ ೧೦೦ಕ್ಕೆ ೭೫ಕ್ಕಿಂತ ಕಡಿಮೆಯಲ್ಲದಷ್ಟು ಗುಣಗಳನ್ನು ಪಡೆದಿರಬೇಕು; ಮತ್ತು ಯಾವದೊಂದು ವಿಷಯವನ್ನು ತೀರ ಅಸಮಾಧಾನಕರವಾಗಿ ಬರೆದು ನಾಪಾಸಾಗಿರಕೂಡದು.

ಪರೀಕ್ಷೆಯ ಇನಾಮು ಮೊದಲಾದವು:—

ಮೇಲೆ ಹೇಳಿದ ವಿಷಯಗಳಲ್ಲಿ ಪರೀಕ್ಷೆ ಕೊಟ್ಟು ಆ ನಿಯಮಗಳಿಗನುಸಾರವಾಗಿ ಪಾಸಾಗಿ ಮೊದಲನೆಯ ನಂಬರು ಪಡೆದ ದಕ್ಷಿಣ ಭಾಗದೊಳಗಿನ ಉತ್ತಮ ವಿದ್ಯಾರ್ಥಿಗೆ ೮೦ ರೂ. ಇನಾಮು ದೊರೆಯುವದು.

ಅರ್ಜಿ ಮಾಡತಕ್ಕ ಅವಧಿ:—

ಪರೀಕ್ಷೆಗೆ ಕೂಡಲಪೇಕ್ಷಿಸುವವರು ೧೯೩೪ಳನೆಯ ಇಸವಿಯ ಫೆಬ್ರುವರಿ ತಿಂಗಳ ಮೊದಲನೆಯ ತಾರೀಖಿನೊಳಗಾಗಿ ಮೆ॥ ಎಜ್ಯುಕೇಶನಲ್ ಇನ್ಸಪೆಕ್ಟರ, ದಕ್ಷಿಣಭಾಗ ಇವರಿಗೆ ಮುಟ್ಟುವಂತೆ ಅರ್ಜಿಯನ್ನು ಮಾಡತಕ್ಕದ್ದು.

ಮಿಶ್ರವಾಕ್ಯಗಳ ವಿಭಜನೆ

ಲೇಖಕ:— ಪಂಡಿತ ಕೇಶವಶರ್ಮಾ ಗಲಗಲಿ

೧೯೩೯

ನಾಗವರ್ಮನು ಕನ್ನಡ ಭಾಷೆಯಲ್ಲಿ ವ್ಯಾಕರಣ, ಕಾವ್ಯ ಮುಂತಾದ ಗ್ರಂಥಗಳನ್ನು ಬರೆದು, ...ಷೆಯನ್ನು ಅಲಂಕರಿಸಿದ್ದಲ್ಲದೆ, ಅದನ್ನು ಊರ್ಜಿತಸ್ಥಿತಿಗೆ ತಂದನೆಂದು ಹೇಳಬಹುದು.

ಪ್ರಧಾನ ವಾಕ್ಯ — ನಾವು ಹೇಳಬಹುದು.

ಅಂಗವಾಕ್ಯ— (ಅ) ನಾಗವರ್ಮನು ಕನ್ನಡ ಭಾಷೆಯಲ್ಲಿ ವ್ಯಾಕರಣ, ಕಾವ್ಯ ಮುಂತಾದ ಗ್ರಂಥಗಳನ್ನು ಬರೆದು.,

(ಆ) ಆ ಭಾಷೆಯನ್ನು ಅಲಂಕರಿಸಿದ್ದು.,

(ಇ) ಅದನ್ನು ಊರ್ಜಿತಸ್ಥಿತಿಗೆ ತಂದನು.

ವಾಕ್ಯ ಎಂತಹ ವಾಕ್ಯ	ಕರ್ತೃವಿಗೆ ಸಂಬಂಧಿಸಿದ ಪದ	ಕರ್ತೃ	ಕರ್ಮಕ್ಕೆ ಸಂಬಂಧಿಸಿದ ಪದ	ಕರ್ಮ	ಕ್ರಿಯಾಪದಕ್ಕೆ ಸಂಬಂಧಿಸಿದ ಪದ	ಕ್ರಿಯಾಪದ (ಕ್ರಿಯಾವಾಚಕ)
ಪ್ರಧಾನವಾಕ್ಯ ನಾವು ಹೇಳಬಹುದು.	...	ನಾವು	...	...	...	ಹೇಳಬಹುದು
ಅಂಗವಾಕ್ಯ						
ನಾಗವರ್ಮನು... ಬರೆದು.	...	ನಾಗವರ್ಮನು	...	ವ್ಯಾಕರಣ, ಕಾವ್ಯ ಮುಂತಾದ ಗ್ರಂಥಗಳನ್ನು	ಕನ್ನಡ ಭಾಷೆಯಲ್ಲಿ	ಬರೆದು
ಆ ಭಾಷೆಯನ್ನು ಅಲಂಕರಿಸಿದ್ದು.	...	...	ಆ	ಭಾಷೆಯನ್ನು	...	ಅಲಂಕರಿಸಿದ್ದು
ಅದನ್ನು ... ... ತಂದನು.	...	...	...	ಅದನ್ನು	ಊರ್ಜಿತ ಸ್ಥಿತಿಗೆ	ತಂದನು

ಟಿಪ್ಪಣಿ— ನಾಗವರ್ಮನು ಅದನ್ನು ಊರ್ಜಿತಸ್ಥಿತಿಗೆ ತಂದನು. ಎಂಬ ಅಂಗವಾಕ್ಯವು ...ನವಾಕ್ಯದ ಕರ್ಮಕಾರಸ್ಥಾನದಲ್ಲಿರುವದು. ಅರ್ಥಾತ್ ನಾಮಸ್ಥಾನೀಯ ಉಪವಾಕ್ಯವು. ಈ ...ವಾಕ್ಯಕ್ಕೆ (ಅ) ಅಂಗವಾಕ್ಯವು ಕಾಲವಾಚಕ ಕ್ರಿಯಾವಿಶೇಷಣ ಸ್ಥಾನೀಯ ಉಪವಾಕ್ಯವಾಗಿ ...ಧ ಪಟ್ಟಿದೆ.

ಎರಡನೇ, ಮೂರನೇ ಅಂಗವಾಕ್ಯಗಳು ಪರಸ್ಪರ ಸಹಕಾರಿತೆಯಿಂದ ಇದ್ದು ಅಲ್ಲದೆ ಎಂಬುವದ ಸಮುಚ್ಚಯಿಸಲ್ಪಟ್ಟದೆ ಎಂದು ಹೇಳಬಹುದು.

೧೯೪೦

ರನ್ನನು ತನ್ನ ಕವಿತಾಶಕ್ತಿಯಿಂದ ರಾಜಾಸ್ಥಾನಗಳಲ್ಲಿ ಪ್ರಬಲನಾಗಿ, ಕವಿಚಕ್ರವರ್ತಿ ಲಾದ ಬಿರುದುಗಳನ್ನು ಸಂಪಾದಿಸಿ, ಪಂಪ, ಹೊನ್ನರೆಂಬ ಪ್ರಖ್ಯಾತ ಕವಿಗಳ ಮಾಲಿಕೆಯಲ್ಲಿ ದನು.

ಮುಖ್ಯವಾಕ್ಯ—ರನ್ನನು ಪಂಪ, ಹೊನ್ನರೆಂಬ ಪ್ರಖ್ಯಾತ ಕವಿಗಳ ಮಾಲಿಕೆಯಲ್ಲಿ ಸೇ

ಅಂಗವಾಕ್ಯ—(ಅ) ರನ್ನನು ತನ್ನ ಕವಿತಾಶಕ್ತಿಯಿಂದ ರಾಜಸ್ಥಾನಗಳಲ್ಲಿ ಪ್ರಬಲನಾ

(ಆ) ರನ್ನನು ಕವಿಚಕ್ರವರ್ತಿ ಮೊದಲಾದ ಬಿರುದುಗಳನ್ನು ಸಂಪಾ

ವಾಕ್ಯ ಎಂತಹ ವಾಕ್ಯ	ಕರ್ತೃಗೆ ಸಂಬಂಧಿಸಿದ ಪದ	ಕರ್ತೃ	ಕರ್ಮಕ್ಕೆ ಸಂಬಂಧಿಸಿದ ಪದ	ಕರ್ಮ	ಕ್ರಿಯಾಪದಕ್ಕೆ ಸಂಬಂಧಿಸಿದ ಪದ	ಕ್ರಿ
ಪ್ರಧಾನವಾಕ್ಯ ರನ್ನನು ... ... ಸೇರಿದನು.	...	ರನ್ನನು	...	...	ಪಂಪ, ಹೊನ್ನರೆಂಬ ಪ್ರಖ್ಯಾತ ಕವಿಗಳ ಮಾಲಿಕೆಯಲ್ಲಿ	ಸೇ
ಅಂಗವಾಕ್ಯ						
(ಅ) ರನ್ನನು ... ಪ್ರಬಲನಾಗಿ	...	ರನ್ನನು	...	...	ತನ್ನ ಕವಿತಾಶಕ್ತಿಯಿಂದ ರಾಜಸ್ಥಾನಗಳಲ್ಲಿ	ಪ್ರ
(ಆ) ರನ್ನನು ...ಸಂಪಾದಿಸಿ	...	ರನ್ನನು	ಕವಿಚಕ್ರವರ್ತಿಮೊದಲಾದ	ಬಿರುದುಗಳನ್ನು	...	ಸಂ

ಟಿಪ್ಪಣಿ— ಅ, ಆ ಅಂಗವಾಕ್ಯಗಳು ಪ್ರಧಾನವಾಕ್ಯದ ಕಾಲವಾಚಕ ಕ್ರಿಯಾವಿಶೇಷ ದಲ್ಲಿರುವವು. ಇವು ಕ್ರಿಯಾವಿಶೇಷಣೇ ಭೂತಖಂಡವಾಕ್ಯಗಳು.

ಉದಾಹರಣಗಳು

ವಾಕ್ಯ—(೧) (೧೯೩೧ನೆಯ ವ್ಹ. ಫಾ. ಪರೀಕ್ಷೆ)

ಹಿಮಾಲಯದ ಅಡಿಯಲ್ಲಿ ದಂಡಿನೊಡನೆ ಇಳಿದಿರುವಾಗ, ಅರಸುಮಗನು ಒಂದುದಿನ ಬೇಟೆ ಹೊರಟು ಕಾನನದೊಳಗೆ ಕಿನ್ನರ ದಂಪತಿಗಳನ್ನು ಕಂಡು ಅವನ್ನು ಹಿಡಿಯ ಬೇಕೆಂಬ ಲವ ಯಿಂದ ಅವುಗಳ ಸಮೀಪಕ್ಕೆ ಹೋದನು.

ಪ್ರಧಾನವಾಕ್ಯ:— ಅರಸು ಮಗನು ಲವಲವಿಕೆಯಿಂದ ಅವುಗಳ ಸಮೀಪಕ್ಕೆ ಹೋದನು.
ಅಂಗವಾಕ್ಯ:— (ಅ) ಹಿಮಾಲಯದ ಅಡಿಯಲ್ಲಿ ದಂಡಿನೊಡನೆ ಇಳಿದಿರುವಾಗ
(ಬ) ಅರಸುಮಗನು ಒಂದುದಿನ ಬೇಟೆಯಾಡ ಹೊರಟು
(ಕ) ಕಾನನದೊಳಗೆ ಕಿನ್ನರ ದಂಪತಿಗಳನ್ನು ಕಂಡು
(ಡ) ಅವನ್ನು ಹಿಡಿಯಬೇಕು.

ವಾಕ್ಯ ಎಂತಹವಾಕ್ಯ	ಸಂಬಂಧಕ ಶಬ್ದ	ಕರ್ತೃವಿಗೆ ಸಂಬಂಧಿಸಿದ ಪದ	ಕರ್ತೃ	ಕರ್ಮಕ್ಕೆ ಸಂಬಂಧಿಸಿದ ಪದ	ಕರ್ಮ	ಕ್ರಿಯಾಪದಕ್ಕೆ ಸಂಬಂಧಿಸಿದ ಪದ	ಕ್ರಿಯಾಪದ (ಕ್ರಿ. ವಾ.)
…ನ ವಾಕ್ಯ …ರಸು ಮಗನು …ಹೋದನು			ಅರಸು ಮಗನು			ಲವಲವಿಕೆಯಿಂದ ಅವುಗಳ ಸಮೀಪಕ್ಕೆ	ಹೋದನು
ವಾಕ್ಯ ಹಿಮಾಲಯದ ·ಇಳಿದಿರುವಾಗ	ಆಗ		,,			ಹಿಮಾಲಯದ ಅಡಿಯಲ್ಲಿ	ಇಳಿದಿರುವಾಗ
ಅರಸು ಮಗನು …ಹೊರಟು			,,			ದಂಡಿನೊಡನೆ ಒಂದುದಿನ	ಬೇಟೆಯಾಡ ಹೊರಟು.
ಕಾನನದೊಳಗೆ …ಕಂಡು			,,		ಕಿನ್ನರ ದಂಪತಿಗಳನ್ನು	ಕಾನನದೊಳಗೆ	ಕಂಡು
	ಎಂಬ		,,		ಅವನ್ನು		ಹಿಡಿಯಬೇಕು.

ಟಿಪ್ಪಣಿ:— ಅ ಬ ಕ ಅಂಗವಾಕ್ಯಗಳು ಪ್ರಧಾನವಾಕ್ಯಕ್ಕೆ ಕ್ರಿಯಾ ವಿಶೇಷಣ ಸ್ಥಾನದಲ್ಲಿವೆ. (ಡ) ಅಂಗವಾಕ್ಯವು ಮುಖ್ಯವಾಕ್ಯದ ನಾಮಸ್ಥಾನೀಯ ಉಪವಾಕ್ಯವಾಗಿದ್ದು ಉದ್ದೇಶ್ಯಾರ್ಥಕ ಚತುರ್ಥೀ ಕಾರಕದ ಕಾರ್ಯವನ್ನು ಮಾಡುವುದು.

ವಾಕ್ಯ:—(೨) ೧೯೩೨ (ವ್ಹ. ಫಾ. ಪರೀಕ್ಷೆ.)

ಈ ಭರತಖಂಡದಲ್ಲಿ ಸುಮಾರು ಎರಡು ಸಾವಿರ ವರ್ಷಗಳಹಿಂದೆ ಬೌದ್ಧ ಧರ್ಮವ ಧರ್ಮವನ್ನು ಬದಿಗೊತ್ತಿ ಮೇರೆದಪ್ಪಿ, ಹಬ್ಬಿದರೂ ಅದು ಅಲ್ಲಿ ನೆಲೆಗೊಳ್ಳದೆ ಕಾಲಾಂತ ಮುರಿದು ಮೂಲೆಗೊತ್ತಲ್ಪಟ್ಟಿತು.

ಮುಖ್ಯವಾಕ್ಯ— ಬೌದ್ಧ ಧರ್ಮವು ಕಾಲಾಂತರದಿಂದ ಮುರಿದು ಮೂಲೆಗೊತ್ತ

ಅಂಗವಾಕ್ಯಗಳು— (ಅ) ಈ ಭರತಖಂಡದಲ್ಲಿ ಸುಮಾರು ಎರಡು ಸಾವಿರ ವರ್ಷಗ ಬೌದ್ಧ ಧರ್ಮವು ವೇದಧರ್ಮವನ್ನು ಬದಿಗೊತ್ತಿ

(ಆ) ಬೌದ್ಧ ಧರ್ಮವು ಮೇರೆದಪ್ಪಿ

(ಇ) ಬೌದ್ಧ ಧರ್ಮವು ಹಬ್ಬಿದರೂ

(ಈ) ಅದು ಅಲ್ಲಿ ನೆಲೆಗೊಳ್ಳದೆ

ವಾಕ್ಯ ಎಂತಹ ವಾಕ್ಯ	ಕರ್ತೃ ಸಂಬಂಧಪದ	ಕರ್ತೃ	ಕರ್ಮ ಸಂಬಂಧಪದ	ಕರ್ಮ	ಕ್ರಿಯಾಪದಕ್ಕೆ ಸಂಬಂಧಿಸಿದಪದ	ಕ್ರಿ (ಕ್ರಿ
ಪ್ರಧಾನ ವಾಕ್ಯ ಬೌದ್ಧ ಧರ್ಮವು...ಮುರಿದು ಮೂಲೆಗೊತ್ತಲ್ಪಟ್ಟಿತು.		ಅ. ಕ.	...	ಬೌದ್ಧ ಧರ್ಮವು	ಕಾಲಾಂತರದಿಂದ	ಮುರಿ ಗೊತ್ತ
ಅಂಗವಾಕ್ಯ						
(ಅ) ಈ ಭರತಖಂಡದಲ್ಲಿ... ಬದಿಗೊತ್ತಿ	...	ಬೌದ್ಧ ಧರ್ಮವು	...	ವೇದಧರ್ಮವನ್ನು	ಈ ಭರತ ಖಂಡದಲ್ಲಿ	ಬದಿ
(ಆ) ಬೌದ್ಧ ಧರ್ಮವು ಮೇರೆ ದಪ್ಪಿ	...	,,	...	... ...	... ...	ಮೇ
(ಇ) ಬೌದ್ಧ ಧರ್ಮವು ಹಬ್ಬಿದರೂ	...	,,	...	... ...	... ...	ಹ
(ಈ) ಅದು ಅಲ್ಲಿ ನೆಲೆಗೊಳ್ಳದೆ	...	ಅದು	...	... ...	ಅಲ್ಲಿ	ನೆಲೆ

ಟಿಪ್ಪಣಿ:— (ಅ) ಅಂಗವಾಕ್ಯವು (ಆ) ಅಂಗವಾಕ್ಯದ ಕ್ರಿಯಾವಿಶೇಷಣಸ್ಥಾನದಲ್ಲಿ
(ಆ) ಅಂಗವಾಕ್ಯವು (ಇ) ಅಂಗವಾಕ್ಯಕ್ಕೆ ಕ್ರಿಯಾವಿಶೇಷಣಸ್ಥಾನದಲ್ಲಿ
(ಈ) ಅಂಗವಾಕ್ಯವು ಮುಖ್ಯವಾಕ್ಯದ ವಿಶೇಷಣ ಸ್ಥಾನದಲ್ಲಿರುವದು.

ವಾಕ್ಯ:—(೩) (೧೯೩೩ ವ್ಹ. ಫಾ. ಪರೀಕ್ಷೆ.)

ನಾನು ನದಿಯಲ್ಲಿ ಮುಳುಗಿದಾಗ, ಯಾವ ಉದ್ಭ್ರಾಂತ ವಿಚಾರಗಳು ನನ್ನ ಮನದಲ್ಲುಂಟಾ ಿ, ಯಾವ ವಿಚಾರಗಳ ಅನುಭವವು ಒಂದು ಕ್ಷಣಹೊತ್ತು ನನಗೆ ಬಂದಿತೋ; ಅವನ್ನು ನಾನೀಗ ಸಲಾರೆನು.

ಪ್ರಧಾನವಾಕ್ಯ— ಅವನ್ನು ನಾನೀಗ ಬಣ್ಣಿಸಲಾರೆನು.

(ಅ) ನಾನು ನದಿಯಲ್ಲಿ ಮುಳುಗಿದಾಗ.

ಅಂಗವಾಕ್ಯಗಳು— (ಇ) ಯಾವ ಉದ್ಭ್ರಾಂತ ವಿಚಾರಗಳು, ನನ್ನ ಮನದಲ್ಲುಂಟಾದವು.

(ಈ) ಯಾವ ವಿಚಾರಗಳ ಅನುಭವವು ಒಂದು ಕ್ಷಣಹೊತ್ತು ನನಗ ಬಂದಿತು.

ವಾಕ್ಯ ಎಂತಹ ವಾಕ್ಯ	ಕರ್ತೃವಿಶೇಷಣ	ಕರ್ತೃ	ಕರ್ಮವಿಶೇಷಣ	ಕರ್ಮ	ಕ್ರಿಯಾಪದಕ್ಕೆ ಸಂಬಂಧಿಸಿದ ಪದ	ಕ್ರಿಯಾಪದ
ನವಾಕ್ಯ ಅವನ್ನು... ಣ್ಣಿಸಲಾರೆನು	...	ನಾನು	...	ಅವನ್ನು	ಈಗ	ಬಣ್ಣಿಸಲಾರೆನು
ವಾಕ್ಯ ನಾನು...ಮುಳುಗಿದಾಗ	...	ನಾನು	...	... ...	ನದಿಯಲ್ಲಿ	ಮುಳುಗಿದಾಗ
ಉದ್ಭ್ರಾಂತ ವಿಚಾರ ಳು ಮನದಲ್ಲುಂಟಾದವು	ಯಾವ ಉದ್ಭ್ರಾ.	ವಿಚಾರ ಗಳು	...	... ...	ಮನದಲ್ಲಿ	ಉಂಟಾದವು
ಯಾವ ವಿಚಾರಗಳ... ಂದಿತು	ಯಾವ ವಿಚಾರಗಳ	ಅನುಭವವು	...	... ...	ಒಂದು ಕ್ಷಣ ಹೊತ್ತು ನನಗೆ	ಬಂದಿತು

ಟಿಪ್ಪಣಿ— (ಅ) ಅಂಗವಾಕ್ಯವು (ಈ) ಅಂಗವಾಕ್ಯದ ಕಾಲವಾಚಕ ಕ್ರಿಯಾವಿಶೇಷಣ ಸ್ಥಾನೀಯ ಉಪವಾಕ್ಯವು.

(ಇ, ಈ) ಅಂಗವಾಕ್ಯಗಳು ಪ್ರಧಾನವಾಕ್ಯದ ಕರ್ಮಕಾರಕಸ್ಥಾನದಲ್ಲಿವೆ.

ವರ್ಥ್ನಾ ಪ್ರಾಯಿಜ್ ಪರೀಕ್ಷೆ (೧ನೆಯ ಪೇಪರು)

ಸ್ಥಳ:- ಟ್ರೇನಿಂಗ್‌ಸ್ಕೂಲ್ ಧಾರವಾಡ.

ಬುಧವಾರ ೧ ನೆಯ ಮಾರ್ಚ ೧೯೩೩. ವೇಳೆ-೩ ಘಂಟೆಗಳು.

ಪ್ರಾಕ್ಕಾವ್ಯಮಾಲೆ.

(೧) ಕೆಳಗಿನ ಪದ್ಯಗಳಲ್ಲಿ ಬೇಕಾದ ಎರಡರ ಸರಳಾನುವಾದವನ್ನು ಬರೆದು ಅವುಗಳಲ್ಲಿರುವ ಕವಿತ್ವಗುಣಗಳನ್ನು ಹೇಳಿರಿ—

ತೆಂಕಣಗಾಳಿ ಸೋಂಕಿದೊಡಮೊಳ್ನುಡಿಗೇಳ್ದೊಡಮಿಂಪನಾಳ್ದಗೇ ।
ಯಂಕಿಮಿವೊಕ್ಕೊಡಂ ಬಿರಿದ ಮಲ್ಲಿಗೆ ಗಂಡೊಡಮಾದಕೆಂದಲಂ ॥
ಪಂಗೆಡೆಗೊಂಡೊಡಂ ಮಧುಮಹೋತ್ಸವ ಮಾದೊಡಮೇನನೆಂಬೆನಾ ।
ರಂಕುಸಮಿಟ್ಟೊಡಂ ನೆನೆವುದೆನ್ನಮನಂ ಬನವಾಸಿದೇಶಮಂ ॥ ೧ ॥
ನೆರೆದೈಸಂಜೆಯೊಳೆಂದು ಕಾಯ್ದೊದೆದೊಡೇನಾತ್ಮಾಂಗದೊಳ್ರೋಹಿಣೀ ।
ಚರಣಾಲಕ್ತಕರಾಗ ಮಚ್ಚಿರಿದುದೋ ಮೇಣ್ಯಾಮಿಸೀ ಕಾಮಿನೀ ।
ವಿರಹಂ ಪೊಣ್ಮಿದುದೋ ತನೋಗಜದ ಕೋಡೇರಿಂದಮೇಂ ನೊಂದುದೋ ।
ಹರಿಣಂ ತಾನೆನಿಸಿತ್ತು ರಕ್ತರುಚಿಯಿಂ ಬಿಂಬಂ ಸುಧಾಸೂತಿಯಾ ॥ ೨ ॥
ಕಲಿಯನೆ ಪಂದೆಮಾಳ್ಪ ಕಡುವಂದೆಯ ನೊಳ್ಗಲಿಮಾಳ್ಪ ತಕ್ಕನಂ ।
ಪೊಲೆಯನೆ ಮಾಳ್ಪ ಮುಂ ಪೊಲೆಯನಂ ನೆರೆತಕ್ಕನೆ ಮಾಳ್ಪ ತನ್ನೊಳೆ ॥
ಗ್ಗಲಿಸಿ ಪೊದಳ್ದ ಪರ್ಬಿದವಿವೇಕತೆಯಿಂ ನೃಪಚಿತ್ತವೃತ್ತಿ ಸಂ ।
ಚಲಮದರಿಂದ ಮೋಲಗಿಸಿ ಬಾಳ್ವುದೆ ಕಷ್ಟಮಿಳಾಧಿನಾಥರಂ ॥ ೩ ॥

(೨) ಕೆಳಗಿನ ಪದ್ಯವಾಕ್ಯಗಳ ಸಂದರ್ಭವನ್ನು ಹೇಳಿ ಅರ್ಥವನ್ನು ಸ್ಪಷ್ಟಗೊಳಿಸಿರಿ:—

(ಅ) ಮಣಿದು ಕೂಪದ ಜೀವನವ ಕಡೆಗಣಿಸದೇ ಘಟಯಂತ್ರ ?

(ಬ) ನದಿಗಳಗಳೆಯು ಹಾಸು ನವವಿಷವುದರದೀಪನ ಚೂರ್ಣವಾವಂಗದಲಿ ಸಾಪತ್ನರಲಿ ಸದರವ ಕಾಣೆ.

(ಕ) ಕುಲಸತಿಯು ವೊಲು ಭಕ್ತಿ ಬೆಲೆಣ್ಣಿನ ವೊಲಾಬ್ರಾಹ್ಮ್ಯ.

(೩) ಷಡಕ್ಷರಿಯ ಕವಿತ್ವಶಕ್ತಿ, ಕುಮಾರವ್ಯಾಸನ ಕವಿತಾಗುಣಗಳು, ಸರ್ವಜ್ಞನ ಭಾಷಾಶೈಲಿ ಇವುಗಳನ್ನು ಗ್ರಂಥಾಧಾರಗಳಿಂದ ವಿವರಿಸಿ ಹೇಳಿರಿ.

(೪) ಮುಂಜಿ ಬೇಡವೆಂದು ಬಸವಣ್ಣನು ಮಾದರಸನ ಬಳಿಯಲ್ಲಿ ಪ್ರತಿಪಾದಿಸಿದುದನ್ನು (ಬ) ಮನೋವೇಗನು ಈಶ್ವರನ ದೇವತ್ವವನ್ನು ನಿರಾಕರಿಸಿರುವದನ್ನು (ಕ) ಸರ್ವಜ್ಞನು ಕುಲಪದ್ಧತಿಯನ್ನು ನಿರಾಕರಿಸಿರುವದನ್ನು ವಿಶದವಾಗಿ ಬರೆಯಿರಿ.

(೫) ಕೆಳಗಿನ ಪದ್ಯಗಳಿಗೆ ವ್ಯಾಖ್ಯಾನವನ್ನು ಬರೆಯಿರಿ—

ಜಲನಿಧಿ ಜಂಭವೈರಿಗರಿಯಂ ಗಿರಿಯಂ ಬಿಡು ಬೇಗಮೆಂದು ಬಂ।
ದುಲಿವವೊಲೊಪ್ಪೆಸುಸ್ತನಿತಮುಚ್ಚಟತಟತ್ಕರವಾಳನಾಂತ ತ॥
ಜ್ಜಲದ ಭಟಂಗದಂ ಕುಡದೆ ತನ್ನಯ ಜೀವನವಿತ್ತುದಬ್ಧಿ ಭೂ॥
ತಲದೊಳೆ ಸತ್ವಶಾಲಿಪಗೆಗೇಂ ಮರೆವೊಕ್ಕರ ನೀಯಲಾರ್ಪನೇ ? ೧ ॥

ಧೃತಚಂಚಲಮತಿಚಪಲ । ಸ್ಥಿತಿಜಡಭರಿತಂ ಕಟುಸ್ವರಂ ಬರಿವೇಘಂ ॥
ನುತಹಂಸಂ ತಳದರ್ದುಮುಲಿ। ನತರಂ ಬರೆ ಶುಚಿಸುವೃತ್ತನೇನಿರ್ದಪನೆ॥೨॥

(ವ್ಯಾಖ್ಯಾನವು- ಭಾವ, ಅಲಂಕಾರ, ಛಂದಸ್ಸು, ಕಾವ್ಯಗುಣ, ವ್ಯಾಕರಣ ವಿಚಾರ ಮುಂತಾದ ವಿಷಯಗಳನ್ನೊಳಗೊಂಡಿರಬೇಕು.)

(೬) (ಅ) ಪ್ರಾಕ್ಕಾವ್ಯ ಮಾಲೆಯೊಳಗಿನ ಕಾವ್ಯಗಳು ಕನ್ನಡದ ಯಾವ ಯಾವ ಕಾಲದ ಭಾಷೆಯನ್ನೊಳಗೊಂಡಿರುವವು ? (ಗ್ರಂಥಸ್ಥ-ಆಧಾರಗಳನ್ನು ತೋರಿಸಿರಿ)

ಅಥವಾ

ಪ್ರಾಕ್ಕಾವ್ಯಮಾಲೆಯೊಳಗಿನ ಕಾವ್ಯಪುಷ್ಪಗಳು ಯಾವ ಉದ್ದೇಶಗಳನ್ನಿಟ್ಟುಕೊಂಡು ಆಯ್ದುಕೊಳ್ಳಲ್ಪಟ್ಟಿವೆ ? ಆ ಉದ್ದೇಶ್ಯಗಳು ಎಷ್ಟು ಮಟ್ಟಿಗೆ ಈಡೇರಿವೆ ?

(ಬ) ಕುಮಾರವ್ಯಾಸ, ಸರ್ವಜ್ಞ ಈ ಕವಿಗಳ ವಿಷಯವಾಗಿ ನಿಮಗೆ ಗೊತ್ತಿದ್ದ ಸಂಗತಿಗಳನ್ನು ಸಂಕ್ಷೇಪವಾಗಿ ಬರೆಯಿರಿ.

(೭) ಕೆಳಗಿನ ಪದ, ವಾಕ್ಯಗಳಿಗೆ ವ್ಯಾಕರಣಟಿಪ್ಪಣಿಗಳನ್ನು ಬರೆಯಿರಿ.

ಕಂಬನಿಗಳಿಂ, ನೋಡಿ ನೋಡಿ, ಅಹಿಪತಿಯೂ, ಜೇಯನೂಕದು ಭೀಮನೊಡನೆ, ಸಿರಿಯು ಹೇಳ್ವರೆ ಹಸ್ತಿನಾಪುರದರಸುಗಳ ಸಂತಾನ, ಆನಾಷಾಢಭೂತಿಯ ಮಗನೆಂ, ಆಯ್ತು, ಆಕ್ಕುಂ, ತವಿಪುದು.

ವರ್ಘ ಪ್ರಾಯಿಜ ಪರೀಕ್ಷೆ (೨ನೆಯ ಪೇಪರು

ಸ್ಥಳ— ಟ್ರೇನಿಂಗ್ ಸ್ಕೂಲ್ ಧಾರವಾಡ. ಗುರುವಾರ ತಾ. ೨ ನೆಯ ಮಾರ್ಚ ೧೯೩೩.

ವೇಳೆ— ೩ ಘಂಟೆಗಳು ವಿಷಯ-ಹಳಗನ್ನಡ-ವಾಕ್ಯರಚನೆ ಮತ್ತು ಪದ್ಯರಚನೆ

(೧) ಕೆಳಗಿನ ವಿಷಯುಗಳಲ್ಲಿ ಯಾವದೊಂದರ ವಿಷಯವಾಗಿ ೩೨ ಸಾಲುಗಳಷ್ಟು ಕವಿತೆಗಳನ್ನು ರಚಿಸಿರಿ:—

(ಅ) ಉಗಿಬಂಡಿ (ಬ) ವಿಧುರನ ಮದುವೆ (ಕ) ರಾಷ್ಟ್ರಭಕ್ತಿ.

—o—

(೨) ಕೆಳಗೆ ಕೊಟ್ಟ ವಿಷಯುಗಳಲ್ಲಿ ಯಾವದೊಂದನ್ನು ಕುರಿತು ಹಳಗನ್ನಡದಲ್ಲಿ ೪೦ ಪಂಕ್ತಿಗಳಷ್ಟು ನಿಬಂಧವನ್ನು ಬರೆಯಿರಿ:—

(೧) ಒಳ್ಳಿದರ ಒಡನಿರ್ದ ಕಳ್ಳನೊಳ್ಳಿದನಕ್ಕು ।
ಒಳ್ಳಿದ ಕಳ್ಳನೊಡನಾಡೆಯುವಶುದ್ಧ
ಕಳ್ಳನೇ ಅಕ್ಕು ಸರ್ವಜ್ಞ ॥

(೨) ಚಿತ್ತವೃತ್ತಿಯು ನರಿದು ಹತ್ತೆವಿಡಿದೋಲಯಿಸು ।
ಚಿತ್ತವ ಪಡೆದು ಮದವಾಗೆ ಮೊಲ ನಾಯಿ ।
ಹತ್ತಿದಂತಕ್ಕು ಸರ್ವಜ್ಞ ॥

ವರ್ಘ ಪ್ರಾಯಿಜ್ ಪರೀಕ್ಷೆ (೩ನೆಯ ಪೇಪರು)

ಸ್ಥಳ—ಟ್ರೇನಿಂಗ್‌ಸ್ಕೂಲ್ ಧಾರವಾಡ. ಶುಕ್ರವಾರ ತಾ॥ ೩ನೆಯ ಮಾರ್ಚ ೧೯೩೩ ವೇಳೆ—೩ ಘಂಟೆಗಳು.

ವಿಷಯ—ಹೊಸಗನ್ನಡ ನಿಬಂಧ

(೧) ಕೆಳಗೆ ಕೊಟ್ಟ ವಿಷಯುಗಳಲ್ಲಿ ಒಂದನ್ನು ಕುರಿತು (ಹೊಸಗನ್ನಡದಲ್ಲಿ) ನಿಬಂಧವನ್ನು ಬರೆಯಿರಿ:—

(ಅ) ಕನ್ನಡ ವಾಙ್ಮಯವನ್ನು ಅಭಿವೃದ್ಧಿಗೊಳಿಸುವ ಉಪಾಯುಗಳು

(ಬ) ಅಸ್ಪೃಶ್ಯತಾ ನಿವಾರಣೆ.

ಸೂಟಿಯ ಶಿಕ್ಷಣಯೋಜನೆ ೧೯೩೩

ಕಾರ್ಯಕ್ರಮ

ಸೋಮವಾರ	**೧-೫-೩೩**	
ಮುಂಜಾನೆ	೮-೮.೩೦	ಅಧ್ಯಕ್ಷರ ಆರಂಭದ ಭಾಷಣ
	೮.೪೦-೯	ಹುಡುಗರ ಡ್ರಿಲ್, ಟ್ರೇ. ಸ್ಕೂಲಿನ ಪ್ರಾ, ಸ್ಕೂ.
	೯.೧೦-೧೦	ಗಣಿತಪಾಠ, ಬಾಲಕರ ವರ್ಗ, ಎಣಿಕೆಯ ಬಗ್ಗೆ ಮೊದಲನೆಯ ಪಾಠ
	೧೦.೧೦-೧೧	ವಾಚನ ಪಾಠ. ೩ನೆಯ ಇಯತ್ತೆ. ಮೌನವಾಚನ.
ಮಧ್ಯಾಹ್ನ	೩-೩.೪೦	ಬಾಲಕರ ವರ್ಗದ ಶಿಕ್ಷಣ, ಈ ವರ್ಗದಲ್ಲಿ ಹುಡುಗರು ಬಹಳ ಕಾಲ ನಿಲ್ಲದಿರುವ ಬಗ್ಗೆ ಮಾಡತಕ್ಕ ಉಪಾಯಗಳು.
	೩.೪೫-೪.೩೦	ಕಥೆಯ ಪಾಠ ೧ನೆಯ ಇಯತ್ತೆ.
	೪.೨೦-೫	ಕವಿತೆಯ ಪಾಠ- ಬಾಲಕರ ವರ್ಗ.
ಮಂಗಳವಾರ	**೨-೫-೩೩**	
ಮುಂಜಾನೆ	೮-೮.೩೦	ಹುಡುಗೆಯರ ಡ್ರಿಲ್- ಹೆ. ಮ. ಟ್ರೇ. ಕಾಲೇಜು
	೯-೧೦	ಭೂಗೋಲ ಪಾಠ. ೪ನೆಯ ಇಯತ್ತೆ. ಮುಂಬಯಿ ಇಲಾಖೆಯ ಜನರ ಉದ್ಯೋಗಗಳು.
	೧೦.೧೦-೧೧	ಗಣಿತ ಪಾಠ, ೧ನೆಯ ಇ॥ ಎಕ್ಕಮ ದಶಮಗಳ ಬಗ್ಗೆ ಮೊದಲನೆಯ ಪಾಠ.
ಮಧ್ಯಾಹ್ನ	೩-೪	ಟ್ರೇ. ಸ್ಕೂಲಿನ ಪ್ರಾ. ಸ್ಕೂಲಿನ ಕೆಲಸದ ನಿರೀಕ್ಷಣ.
	೪-೫	ಬರಹ ಕಲಿಸುವ ತತ್ವಗಳ ಬಗ್ಗೆ ವಿಚಾರಗಳು.
ಬುಧವಾರ	**೩-೫-೩೩**	
ಮುಂಜಾನೆ	೮-೮.೩೦	ಹುಡುಗರ ಆಟಗಳು- ಟ್ರೇ. ಸ್ಕೂ. ಪ್ರಾ. ಸ್ಕೂ.
	೮.೪೦-೯.೨೦	ಗಣಿತ ಪಾಠ, ೨ನೆಯ ಇಯತ್ತೆ. ಅಪೂರ್ಣಾಂಕದ ಬಗ್ಗೆ ಮೊದಲನೆಯ ಪಾಠ
	೯.೩೦-೧೦.೧೫	ಭೂಗೋಲ ಪಾಠ, ೩ನೆಯ ಇಯತ್ತೆ, ನಕಾಶ ಓದುವದು.
ಮಧ್ಯಾಹ್ನ	೩-೫	ಹೆ. ಮ. ಟ್ರೇ. ಕಾಲೇಜದ ಪ್ರಾ. ಸ್ಕೂಲಿನ ಕೆಲಸದ ನಿರೀಕ್ಷಣ.
ಗುರುವಾರ	**೪-೫-೩೩**	
ಮುಂಜಾನೆ	೮-೯.೩೦	ಪ್ರಾ. ಶಾಲೆಗಳ ಶಿಕ್ಷಕರ ಹಾಗು ವಿದ್ಯಾರ್ಥಿಗಳ ಕೆಲಸದ ಪ್ರದರ್ಶನ.

	೯-೩೦–೧೦-೨೦	ಗಣಿತ ಪಾಠ, ೩ನೆಯ ಇಯತ್ತೆ, ಏಕಮಾನ ಪದ್ಧತಿಯ ಬಗ್ಗೆ ಮೊದಲನೆಯ ಪಾಠ.
	೧೦-೨೦– ೧೧	ವ್ಯಾಕರಣ ಪಾಠ. ೪ನೆಯ ಇಯತ್ತೆ.
ಮಧ್ಯಾಹ್ನ	೩– ೩-೪೦	ಪ್ರ. ವಿಮರ್ಶೆಯ ಪಾಠ. ೪ನೆಯ ಇಯತ್ತೆ. ಹೂವು.
	೩-೪೦– ೪.೨೦	ಕವಿತೆಯ ಪಾಠ, ೩ನೆಯ ಇಯತ್ತೆ,
	೪-೨೦– ೫	ನಿಬಂಧ ಪಾಠ, ೩ನೆಯ ಇಯತ್ತೆ ಮೇಲಿನ ಪಾಠದಲ್ಲಿ ಕಲಿತದ್ದನ್ನು ಕುರಿತು.
ಶುಕ್ರವಾರ	**೫-೫-೩೩**	
ಮುಂಜಾನೆ	೮– ೯.೩೦	ಪ್ರಾ. ಶಾಲೆಗಳ ಶಿಕ್ಷಕರ ಹಾಗು ವಿದ್ಯಾರ್ಥಿಗಳ ಕೆಲಸದ ಪ್ರದರ್ಶನ.
	೯-೩೦– ೧೦-೨೦	ಗಣಿತ ಪಾಠ, ೪ನೆಯ ಇಯತ್ತೆ– ಚೌರಸ ಅಳತೆ.
	೧೦-೨೦– ೧೧	ಡ್ರಾಯಿಂಗ ಪಾಠ, ೩ ಅಥವಾ ೪ನೆಯ ಇಯತ್ತೆ.
ಮಧ್ಯಾಹ್ನ	೩ — ೩-೪೦	ಇತಿಹಾಸ ಪಾಠ– ೪ನೆಯ ಇಯತ್ತೆ, ಕರ್ನಾಟಕದ ಪ್ರಾಚೀನ ಅರಸರಲ್ಲೊಬ್ಬರ ಬಗ್ಗೆ.
	೩-೪೦– ೪-೨೦	ಶಾಸ್ತ್ರೀಯ ಪಾಠ. ೬ ಇಲ್ಲವೆ ೭ನೆಯ ಇಯತ್ತೆ,
	೪-೨೦– ೫.	ವಾಚನ ಪಾಠ, ೭ನೆಯ ಇಲ್ಲವೆ ೭ನೆಯ ಇಯತ್ತೆ,
ಶನಿವಾರ	**೬-೫-೩೩**	
ಮುಂಜಾನೆ	೮ — ೮-೩೦	ಹುಡುಗೆಯರ ಆಟಗಳು. ಹೆ. ಮು. ಟ್ರೇ. ಕಾಲೇಜದ ಪ್ರಾ. ಸ್ಕೂಲು.
	೯ — ೯-೪೦	ಗಣಿತ ಪಾಠ. ೧ನೆಯ ಇಯತ್ತೆ ಚೌರಸದ ಡಿಝಾಯಿನುಗಳು.
	೯-೪೦– ೧೦-೨೦	ಗಣಿತ ಶಿಕ್ಷಣದ ತತ್ವಗಳ ಬಗ್ಗೆ ಚರ್ಚೆ.
	೧೦-೨೦– ೧೧.	ಕೆಳಗಿನ ಇಯತ್ತೆಗಳಿಗೆ ನಿಬಂಧ ಕಲಿಸುವ ಬಗ್ಗೆ ವಿವೇಚನೆ.
ಮಧ್ಯಾಹ್ನ	೩– ೪	ಅಧ್ಯಕ್ಷರ ಸಮಾರೋಪಣದ ಭಾಷಣ
	೪– ೫	ಚಹ ವಗೈರೆ.

ಈ ಕಾರ್ಯಕ್ರಮದಲ್ಲಿ ಅವಶ್ಯ ಕಂಡಲ್ಲಿ ಬದಲಾವಣೆ ಮಾಡಲಾದೀತು.

೧–೩–೩೩ }

V. N. MAGDAL
ಹೆ. ಮಾ. ಟ್ರೇ. ಸ್ಕೂ. ಧಾರವಾ

ಪುಸ್ತಕ ವಿಮರ್ಶೆ

ನುಡಿಗನ್ನಡಿ ೧ ನೇ ಭಾಗ

ಪುಟ ೧–೬೬ **ಬೆಲೆ ೦–೩–೬**

ಲೇಖಕರು:—ಶ್ರೀ. ಮ. ಪ್ರ. ಪೂಜಾರ ಕನ್ನಡ ಪಂಡಿತ, ಟ್ರೇ. ಸ್ಕೂ. ಧಾರವಾಡ.

ಈ ಪುಸ್ತಕವು ನೂತನ ಶಿಕ್ಷಣಕ್ರಮಕ್ಕನುಸರಿಸಿ ಬರೆಯಲ್ಪಟ್ಟದೆ. ರೂಢಿಯ ವಾಕ್ಯಗಳಿಂದ ಪ್ರಾರಂಭಿಸಿ ವಾಕ್ಯ, ಪದ, ಕರ್ತೃ, ಕರ್ಮ ಮುಂತಾದ ವಿಷಯಗಳು ಚನ್ನಾಗಿ ವಿವೇಚಿಸಲ್ಪಟ್ಟಿವೆ. ಈ ವ್ಯಾಕರಣವು 'ಗೊತ್ತಿದ್ದದ್ದರಿಂದ ಗೊತ್ತಿಲ್ಲದ್ದಕ್ಕೆ ಸಾಗು' ಎಂಬ ಶಿಕ್ಷಣತತ್ವಕ್ಕನುಸರಿಸಿ ಬರೆಯಲ್ಪಟ್ಟದ್ದರಿಂದ ಮೊದಲಿನಂತೆ ನೀರಸವಾಗದೆ ಸರಸವಾಗಿದೆ. ಪ್ರತಿಯೊಂದು ಪಾಠದ ಕೊನೆಯಲ್ಲಿ ಅಭ್ಯಾಸ ಮತ್ತು ಪ್ರಶ್ನಗಳು ಎಂಬ ವಿಭಾಗವು ಇದ್ದದ್ದರಿಂದ ಕಲಿತ ವಿಷಯವು ದೃಢವಾಗಿ ಶಿಕ್ಷಕರಿಗೆ ವಿಷಯ ಸಾಗಿಸಲು ಒಳ್ಳೇ ಅನುಕೂಲವಾಗಿದೆ. ಮೊದಲನೆಯ ಖಂಡದಲ್ಲಿ ವಾಕ್ಯ, ಕರ್ತೃ, ಕರ್ಮ, ಕ್ರಿಯಾಪದ, ನಾಮ, ವಿಶೇಷಣ, ಸರ್ವನಾಮ, ಅವ್ಯಯ ಈ ವಿಷಯಗಳ ಬಗ್ಗೆ ವಿವೇಚನೆಯದೆ. ೨ನೆಯ ಖಂಡದಲ್ಲಿ ಆಖ್ಯೇಯ, ಆಖ್ಯಾತ ಮುಂ. ಗಳು ಚನ್ನಾಗಿ ತಿಳಿಯುವಂತೆ ಬರೆಯಲ್ಪಟ್ಟಿವೆ. ಕೊನೆಗೆ ಪ್ರಯೋಗದ ಬಗ್ಗೆ ವಿಚಾರವದೆ.

ಚಿಕ್ಕಮಕ್ಕಳಿಗೆ ವ್ಯಾಕರಣ ವಿಷಯದ ಸಾಮಾನ್ಯಜ್ಞಾನವು ಒಳ್ಳೇ ರೀತಿಯಿಂದ ಆಗುವಂತೆ ಸಶಾಸ್ತ್ರವಾಗಿಯೂ ಶಿಕ್ಷಣಕ್ರಮಕ್ಕನುಸರಿಸಿಯೂ ಇಯತ್ತೆಗೆ ತಕ್ಕಷ್ಟಾಗುವಂತೆಯೂ ಈ ಪುಸ್ತಕವು ಬರೆಯಲ್ಪಟ್ಟದೆ. ಪಾಠಗಳನ್ನು ಪ್ರತ್ಯೇಕವಾಗಿ ವಿಂಗಡಿಸಿದ್ದರಿಂದ ಶಿಕ್ಷಕರಿಗೆ ತುಂಬಾ ಮಾರ್ಗದರ್ಶಿಯಾಗಿದೆ. ಇದರಿಂದ ಈ ವಿಷಯದ ಶಿಕ್ಷಣದ ತೊಂದರೆಯು ಬಹು ಕಡಿಮೆಯಾಯಿತೆಂದು ಹೇಳಬಹುದು.

ಕಲಿತ ವಿಷಯಗಳ ಸ್ಪಷ್ಟವಾದ ಕಲ್ಪನೆಯುಂಟಾಗುವದರ ವಿಷಯವಾಗಿ ಗ್ರಂಥಕರ್ತರು ಒಳ್ಳೇ ಲಕ್ಷತೆಗೆದುಕೊಂಡಿರುವರು. ಈ ಪುಸ್ತಕದಿಂದ ಬಾಲಕರ ಎದುರಿಗೆ ವ್ಯಾಕರಣ ವಿಷಯವನ್ನು ಯಾವರೀತಿಯಿಂದ ಇಡಬೇಕೆಂಬದರ ಬಗ್ಗೆ ಶಿಕ್ಷಕರಿಗೆ ಜ್ಞಾನವಾಗುವಂತೆ ಇರುವದು. ಗ್ರಂಥಕರ್ತರ ವಿದ್ಯೆ, ಶ್ರಮ, ಅನುಭವಗಳ ಉಪಯೋಗವನ್ನು ಎಲ್ಲ ಶಿಕ್ಷಕರು ಮಾಡಿಕೊಳ್ಳಬೇಕು.

Reg. No. B. 2567

೫೫

ನೇ ವಯಸ್ಸಿನಲ್ಲಿ ನೀವು ಯಾವ ಸ್ಥಿತಿಯಲ್ಲಿರುವಿರೆಂಬದರ ವಿಚಾರ ಮಾಡಿರುವಿರಾ! ತಾರುಣ್ಯವು ಹೊರಟಿನ್ಮುವಾಗೆ ವೃದ್ಧಾವಸ್ಥೆಯ ಚಿತ್ರವು ಮುಂದೆ ನಿಲ್ಲದಿರುವದು ಸಹಜವೇ. ಆಗ್ಗೆ ಹಣವಿಲ್ಲದಿದ್ದರೆ ಬಾಳು ಕೀಳಾಗುವದೆಂಬದನ್ನು ನೀವು ವಿಚಾರಿಸುವದು ಯುಕ್ತವೇ. ಮೊದಲಿನ ಹಾಗೆಯೇ ಮುಪ್ಪಿನ ಕಾಲವನ್ನು ಸೌಖ್ಯದಿಂದ ಕಳೆಯುವದು ಹೇಗೆ...? ಭೆಟ್ಟಿಯಾಗಿರಿ ಇಲ್ಲವೆ ಪತ್ರ ಬರೆಯಿರಿ.

ಎಸ್. ಜಿ. ಹಾಚ್ಯಾಪೂರ

ಚಿಕ್ಕೋಡಿ.

ಉತ್ತಮ ಮಸೀ ಚೀಟುಗಳು

ನೀಲೀಕಪ್ಪು, ಕೆಂಪು, ಜಾಂಬಳಿ ಮಸಿಯ ಚೀ-ಗಳು ಈ ಕಂಪನಿಯು ಬಹಳ ಜನರಿಂದ ಶಿಫಾರಸ ಪಡೆದು ಮೆಡಲ್ಲುಗಳನ್ನು ಸಂಪಾದಿಸಿರುತ್ತದೆ.

ದರಗಳು

೧೦೦ ಚೀಟುಗಳಿಗೆ		೦—೭
೫೦೦	,,	೧—೧
೧೦೦೦	,,	೩—೦
೧೦೦೦೦	,, ೨೭—೮—೦ (ರೇಲ್ವೆ	

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರಮಾಡಿ

ಕರ್ನಾಟಕ ಇಂಕಕಂಪನಿ,

ಬಾಗಲಕೋ

ಸರಕಾರದಿಂದ ಮಂಜೂರಾದ

ಆರೋಗ್ಯ ಶಾಸ್ತ್ರದ ಹೊಸ ಟೆಕ್ಸ್ಟ ಪುಸ್ತಕವು

ಶರೀರ ಸಂಗೋಪನ ಶಾಸ್ತ್ರ.

ಬೆಲೆ ೧೦ ಆಣೆ ಕಮಿಶನ್ ೧೦೦ಕ್ಕೆ ೨೦.

ಲೇಖಕ:—ದ. ಬಾ. ಬರ್ವೆ, ಬಿ. ಎಜಿ ರಿಸರ್ಚ ವರ್ಕರ, ಶೇತಕೀ ಕಾಲೇಜ, ಪುಣೆ.

ಈ ಪುಸ್ತಕದಲ್ಲಿ ಕನ್ನಡ ೫, ೬, ೭, ಹಾಗು ವ್ಹ. ಫಾಯನಲ್ ಪರೀಕ್ಷೆಗೆ ಬೇಗುವ ಎಲ್ಲ ವಿಷಯವು ಬಂದಿಳುವದು. ಇದರ ಮರಾಠೀ ಆವೃತ್ತಿಯು ಮಧ್ಯಭಾ ಬಹುತರ ಎಲ್ಲ ಸಾಲೆಗಳಲ್ಲಿ ಟೆಕ್ಸ್ಟ, ಎಂದು ಉಪಯೋಗವಾಗುತ್ತಿರುವದು. ಸರಕಾ ಟ್ರೇನಿಂಗ ಕಾಲೇಜುಗಳು ಹಾಗು ಪ್ರ್ಯಾಕ್ಟಿಸಿಂಗಸ್ಕೂಲುಗಳಲ್ಲಿಯೂ ಇದೇ ಟೆಕ್ ಎಂದು ಉಪಯೋಗವಾಗುತ್ತಿರುವದು.

ಈ ಪುಸ್ತಕವನ್ನು ತಜ್ಞರು ತುಂಬಾ ಹೊಗಳಿದ್ದಾರೆ. ಬೆಲೆಯಲ್ಲಿ ಇಷ್ಟು ಅಗ್ಗವಾ ಪುಸ್ತಕವು ಬೇರೊಂದಿಲ್ಲ. ಪುಸ್ತಕದಲ್ಲಿ ೨೨೫ ಪುಟಗಳೂ, ೫೫ ಆಕೃತಿಗಳೂ (ಲಾಯಿ ಬ್ಲಾಕ್ಸ) ೨ ಬಣ್ಣದ ಆಕೃತಿಗಳೂ ಒಂದು ನಕಾಶವೂ ಇರುವವು.

ಪುಸ್ತಕಗಳು ಸಿಕ್ಕುವ ಸ್ಥಳಗಳು:—

ಸ್ಟುಡಂಟ್ಸ ಓನ್ ಬುಕ್‌ಡಿಪೋ, ಧಾರವಾಡ, ತ. ನಾ. ಗೋಡಬೋಲೆ, ಪುಣೆ ಹಾಗು ಬೆಳಗಾಂವ, ಹುಬ್ಬಳ್ಳಿ, ಕಾರವಾರ, ವಿಜಾಪುರ ಇಲ್ಲಿಯ ಎಲ್ಲ ಬುಕ್‌ಸೇಲರುಗಳ

Reg. No. B. 2567

ಕನ್ನಡ
ಪ್ರಾಥಮಿಕ ಶಿಕ್ಷಣ

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

Kannada Prathamik Shikshana

— APRIL 1933 —

ಸಂಪಾದಕ—ವೆಂಕಟೇಶ ನರಸಿಂಗರಾವ ಮಗದಾಳ ಬಿ. ಎ.,

ಸಂಪುಟ ೭೦] ಏಪ್ರಿಲ ೧೯೩೩ [ವರ್ಷ ೫ ಸಂ. ೧

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ	ಪುಟ
೧.	ಕವಿತಾ ಶಿಕ್ಷಣ	೧
೨.	ಕಾಪೀ ಬರೆಹ	೯
೩.	ನಿಬಂಧ	೧೧
೪.	ಬಹುವ್ರೀಹಿ ಸಮಾಸ ವಿಚಾರ	೧೩
೫.	ಹಿಂದುಸ್ತಾನದ ಪ್ರಾ. ಸ್ವರೂಪವೂ ಇತಿಹಾಸದ ಮೇಲೆ ಅದರ ಪರಿಣಾಮವೂ	೧೭
೬.	ಫಿಲಿಫಾಯಿನ ದ್ವೀಪಗಳು	೩೦
೭.	ಕಡೇ ಬಾಜೀರಾಯನ ಕೊನೆಯ ಗತಿಯು	೩೩
೮.	ಚಿತ್ತೂರ ಚಿಂತನೆ	೩೬
೯.	ಸೂಟಿಯ ಶಿಕ್ಷಣಯೋಜನೆ	೩೯
೧೦.	ಉರ್ದು ಪುಸ್ತಕಗಳ ಯಾದಿಯು	೩೮

Printed by K. R. Bhise at the Karnatak Printing Works, Dharwar
& Published by V. N. Magdal, B.A.,
Head Master, Training School, Dharwar, at his Office

ಬರೆದು ಬಂದ ಪತ್ರದ ಸಾರಾಂಶ

ಬಾಗಲಕೋಟ ತಾ॥ ಶಿಕ್ಷಕರ ಸಮ್ಮೇಲನ. ತಾ॥ ೫-೪-೧೯೩೩. ವಿಜಾಪುರ ಜಿ. ಡಿ. ಲೋ. ಬೋ. ಪ್ರೆಸಿಡೆಂಟರೂ, ವಿಜಾಪುರ ಜಿ. ಸ್ಕೌಟ ಕಮಿಶನರರೂ ಆದ ರಾ. ಸಾ. ದೇಶಮುಖರವರು ಅಧ್ಯಕ್ಷರು. ವಿಜಾಪುರ ಡಿ. ಸ್ಕೂ. ಬೋ. ಅ. ಆಫಿಸರ ರಾದ ಮೆ॥ ಜಗತಾಪರವರೂ, ಡಿ. ಸ್ಕೂ. ಬೋ. ಮೆಂಬರರಾದ ಮೆ. ಮಾಚಾ ಅವರೂ ಬಾಗಲಕೋಟ ಮು. ಅ. ಈ. ಆದ ಮೆ. ದೇವೂರವರೂ ವಿಜಾಪುರ ಡಿ. ಸ್ಕೂ. ಬೋ. ಸುಪರವಾಯಿಜರರಾದ ಮೆ. ಶೆಟ್ಟಿಯವರೂ ಬೇರೆ ಸದ್ಗೃಹಸ್ಥರೂ ಬಾಗಲಕೋಟ ತಾ. ನ ಶಿಕ್ಷಕವೃಂದವೂ, ನೆರೆಹೊರೆಯ ಶಿಕ್ಷಕರೂ ಈ ಸಮ್ಮೇಲನಕ್ಕೆ ಬಂದಿದ್ದರು.

ಕಾರ್ಯಕ್ರಮ—

(೧) ಕಲಿಸಿದ ಪಾಠಗಳು.	ಕಲಿಸಿದವರು
(೧) ಹೊಸಪದ್ಧತಿಯ ಡ್ರಿಲ್	ಮಿ. ಬನ್ನಿಗೋಳ ಮಠ ಮಾ. ಶಿರೂ
(೨) ಮೊದಲಿನ ೪ ಇಯತ್ತೆಗಳಿಗೆ	,, ಶೆಟ್ಟಿ ಸುಪ್ಪರವಾಯಿರು

ಇವರಲ್ಲದೆ ಮಿ. ಶಾಳಿಕೋಟಿ, ಮಿ. ಹೆರಕಲ್, ಮಿ. ಕರೋಶಿ ಮುಂತಾದ ಶಿಕ್ಷಕರು ಬೇರೆ ಬೇರೆ ವಿಷಯಗಳನ್ನು ಕಲಿಸಿದರು.

(೨) ಶಿಕ್ಷಣ ವಿಷಯಕ ಚರ್ಚೆ. (೩) ಆಭಾರಮನ್ನಣೆ. (೪) ಆಟಗಳೂ ಶರ್ಯತುಗಳೂ. (೫) ಇನಾಮು ಹಂಚುವದು (ಮೆ॥ ಜಗತಾಪ ಸಾಹೇಬರವ ಹಸ್ತದಿಂದ). ಶಿರೂರ ಶಾಲೆಯಲ್ಲಿ ತಯಾರಾದ ಶಿಕ್ಷಣೋಪಕರಣಗಳು ಆನಂದಕರವಾ ಗಿದ್ದವು. ಸಮ್ಮೇಲನವು ಸಂಪೂರ್ಣವಾಗಿ ಯಶಸ್ವಿಯಾಯಿತು. ಇದು ಶಿಕ್ಷಣಾ ಕಾರಿಗಳಿಗೂ, ಬಾಗಲಕೋಟ ತಾ. ಶಿಕ್ಷಕವೃಂದಕ್ಕೂ ಭೂಷಣಾಸ್ಪದವಾದ ಸಂಗತಿಯು

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:—ವೆಂಕಟೇಶ ನರಸಿಂಗರಾವ ಮುಗದಾಳ, ಬಿ. ಎ.,

ಸಂಪುಟ ೨೦ ||| ಏಪ್ರಿಲ ೧೯೩೩ ||| ವರ್ಷ೫; ಸಂ.೧

ಕವಿತಾ ಶಿಕ್ಷಣ

ಸಾಲೆಯಲ್ಲಿ ಕಲಿಸುತ್ತಿರುವ ಹಲವು ವಿಷಯಗಳ ಶಿಕ್ಷಣ ಪದ್ಧತಿಗಳಲ್ಲಿ ಹೆಚ್ಚು ಕಡಿಮೆಗಳಾಗುತ್ತಿರುವವಷ್ಟೇ. ಇವುಗಳಲ್ಲಿ ಕವಿತೆಯ ಶಿಕ್ಷಣದಲ್ಲಿ ಶಿಕ್ಷಣ ಶಾಸ್ತ್ರಜ್ಞರು ವಿಶೇಷ ಬದಲಾವಣೆಯಾಗಬೇಕೆಂದು ಅಭಿಪ್ರಾಯ ಪಡುತ್ತಿರುವರೆಂಬ ಬಗ್ಗೆ ಕಳೆದ ವರ್ಷದಲ್ಲಿ ಪ್ರಾಥಮಿಕ ಶಿಕ್ಷಣದ ಸಂಚಿಕೆಗಳಲ್ಲಿ ಒಂದೆರಡು ಸಾರೆ ಉಲ್ಲೇಖಿಸಲಾಗಿದೆ. ಸಣ್ಣ ಮಕ್ಕಳಿಗೆ ಕವಿತೆ ಕಲಿಸುವ ಉದ್ದೇಶದಲ್ಲಿ ಈಗಿನ ವಿದ್ವಾಂಸರು ಹೊಸ ವಿಚಾರಗಳನ್ನು ಪ್ರಕಟ ಪಡಿಸುತ್ತಿರುವರು. ಇವುಗಳನ್ನು ಮನನ ಮಾಡುವದು ಪ್ರಾ. ಶಿಕ್ಷಕರ ಕರ್ತವ್ಯವು. ಈ ಬಗ್ಗೆ ನಾವು ಓದಿದ ಒಂದು ಇಂಗ್ಲಿಷ ಪುಸ್ತಕದಲ್ಲಿ ಇರುವ ವಿವೇಚನೆಯನ್ನು ನಮ್ಮ ವಾಚಕರಿಗಾಗಿ ಇಲ್ಲಿ ಕೊಡುವೆವು. ಕವಿತಾ ಶಿಕ್ಷಣದ ಹೊಸ ಪದ್ಧತಿಯನ್ನು ಶಕ್ಯವಿರುವ ಮಟ್ಟಿಗಾದರೂ ಶಿಕ್ಷಕರು ರೂಢಿಯಲ್ಲಿ ತರುವರೆಂದು ನಾವು ಕೋರುತ್ತೇವೆ. ಸದ್ಯದ ವಾಚನ ಪುಸ್ತಕಗಳಲ್ಲಿರುವ ಕವಿತೆಗಳನ್ನು ಈ ಪದ್ಧತಿಯಿಂದ ಕಲಿಸುವದು ಸುಲಭವಲ್ಲೆಂದು ನಾವು ಒಪ್ಪಿಕೊಳ್ಳುತ್ತೇವೆ. ಆದರೂ ಈ ಪದ್ಧತಿಯನ್ನು ಪುರಸ್ಕರಿಸುವದು ಸರಿಯೆಂದು ತೋರುವ ಶಿಕ್ಷಕರು ಸಣ್ಣ ಹುಡುಗರಿಗೆ ಕೆಲವಾದರೂ ಹೊಸ ಕವಿತೆಗಳನ್ನು ಕಲಿಸಿ ಅನುಭವ ಪಡೆದು, ಇವರಿಗೆ ತಕ್ಕವೆಂದು ತೋರುವ ಕವಿತೆಗಳ ಒಂದು ಸಂಗ್ರಹವನ್ನು ಮಾಡಿ ಪ್ರಸಿದ್ಧ ಪಡಿಸಿದರೆ ಅದರಿಂದ ಇತರ ಶಿಕ್ಷಕರಿಗೂ ವಿಶೇಷವಾಗಿ ಬಾಲವೃಂದಕ್ಕೂ ಒಳ್ಳೇ ಲಾಭವಾಗುವದೆಂದು ನಮ್ಮ ಅಭಿಪ್ರಾಯವು. ಅಲೆಕ್ಸಾಂಡರ ಹ್ಯಾಡೋ ಎಮ್. ಎ. ಎಂಬ ಸದ್ಗೃಹಸ್ಥರು "ಕವಿತಾ ಶಿಕ್ಷಣ" ಎಂಬ ತಮ್ಮ ಗ್ರಂಥದಲ್ಲಿ ಬರೆದಿರುವದು ಏನೆಂದರೆ:—

ಕವಿತೆಯನ್ನು ಶಾಲೆಯಲ್ಲಿ ಕಲಿಸುವ ಉದ್ದೇಶವೇನು ?

ಶಾಲೆಯಲ್ಲಿ ನಾವು ಕಲಿಸುವ ಗಣಿತ, ಇತಿಹಾಸ, ಭೂಗೋಲ, ಅದೇಕೆ ವಾಚನ ಈ ವಿಷಯಗಳಂತೆ ಕವಿತೆಯು ಜ್ಞಾನ ಮಾಡಿಕೊಡುವ ವಿಷಯವಲ್ಲ. ಮೇಲೆ ಹೇಳಿದ ವಿಷಯಗಳಲ್ಲಿ ಜ್ಞಾನಾರ್ಜನೆಯು ಕೇವಲ ಅಥವಾ ಮುಖ್ಯವಾದ ಅಂಗವಿರುವದು. ಕವಿತೆಯಲ್ಲಿ ಕೆಲವು ಮನೋಭಾವಗಳನ್ನು ಜಾಗ್ರತಗೊಳಿಸುವ ದಿರುವದು. ಇದು ಸಾಧ್ಯವಾದರೆ ಮಾತ್ರ ಈ ವಿಷಯವನ್ನು ಕಲಿಸುವ ಉದ್ದೇಶವು ಸಫಲವಾದಂತಾಯಿತು. ಈ ದೃಷ್ಟಿಯಿಂದ ಇದು ಡ್ರಾಯಿಂಗ, ಗಾಯನ ಈ ವಿಷಯಗಳಂತೆ ಒಂದು ಕಲೆಯು. ಶಾಲೆಯ ವಿಷಯಗಳಲ್ಲಿ ಕವಿತೆಯನ್ನು ಸಮಾವೇಶ ಮಾಡುವ ಉದ್ದೇಶವು ಒಂದೇ ಇರತಕ್ಕದ್ದು. ಅದು ಯಾವದೆಂದರೆ, ಹುಡುಗರಲ್ಲಿರುವ ಸೌಂದರ್ಯದ ಭಾವನೆಗೆ ಪುಟಕೊಟ್ಟು ಅದನ್ನು ವಿಕಾಸಗೊಳಿಸುವದು. ಸೌಂದರ್ಯದಲ್ಲಿ ಸಂತೋಷವು ತುಂಬಿರುವದು. ಈ ಸೌಂದರ್ಯವನ್ನು ಮನಗಂಡು ಸಂತೋಷವನ್ನು ಪಡೆಯುವ ಶಕ್ತಿಯನ್ನು ಚಿಕ್ಕಮಕ್ಕಳಲ್ಲಿ ವೃದ್ಧಿಪಡಿಸುವದು ಮಹತ್ವವಾದದ್ದು. ಯಾಕೆಂದರೆ ಹೀಗೆ ಮಾಡುವದರಿಂದ ಮಾನವ ಜೀವನವನ್ನು ನಾವು ಸುಲಭವೂ ಸುಸಾಧ್ಯವೂ ಆದ ಮಾರ್ಗದಿಂದ ಮೇಲು ಪಂಕ್ತಿಗೆ ಏರಿಸಿದಂತಾಗುವದು.

ಕವಿತೆಯನ್ನು ಕಲಿಸಲು ಅರ್ಹವೆನಿಸುವ ಶಿಕ್ಷಕನು ಎಂಥವನಿರಬೇಕು?

ಆತನು ಕವಿತೆಯನ್ನು ಪ್ರೀತಿಸುತ್ತಿರಬೇಕು. ತಾನು ಕಲಿಸಬೇಕೆನ್ನುವ ಕವಿತೆಯ ಬಗ್ಗೆ ಅವನಲ್ಲಿ ಪೂರ್ಣವಾದ ಮೆಚ್ಚಿಗೆ ಇರತಕ್ಕದ್ದು; ಅದಕ್ಕೆ ಆತನು ಮೋಹಿತನಾಗಿರಬೇಕು. ಯಾಕೆಂದರೆ ಯಾವ ಕವಿತೆಯಿಂದ ತನ್ನ ಮನೋಭಾವಗಳು ಜಾಗೃತಿಯನ್ನು ಹೊಂದಿರುವವೋ ಆ ಭಾವಗಳನ್ನು ಇತರರಲ್ಲಿ ಜಾಗೃತಿಗೊಳಿಸುವದು ಮಾತ್ರ ಆತನಿಗೆ ಶಕ್ಯವಿರುವದು. ಕವಿತೆಯನ್ನು ಕಲಿಸುವವನಲ್ಲಿ ಕವಿತೆಯು ಜೀವಿಸಿರಬೇಕು; ಹೀಗಿದ್ದರೆ ಮಾತ್ರ ಅದು ಜೀವಕಳೆಯುಳ್ಳದ್ದಾಗುವದು; ಅದರಲ್ಲಿರುವ ಸೌಂದರ್ಯವು ಆತನಿಗೆ ಗೋಚರವಾಗುವದು. ಇದರಿಂದ ಅವನಿಗೆ ಸಂತೋಷವು ಉಂಟಾಗುವದು; ಜೀವನದಲ್ಲಿ ಹಿತವನ್ನು ಪಡೆಯುವ ಶಕ್ತಿಯು ಆತನಲ್ಲಿ ಬಂದಿರುವದು; ಈ ಒಳಿತನ್ನು ಇತರರಿಗೆ ಒದಗಿಸಿಕೊಡುವ ಸಾಮರ್ಥ್ಯವು ಅವನಲ್ಲಿ ತಲೆದೋರುವದು.

ಕಲಿಸುವ ಕವಿತೆಗಳನ್ನು ಆರಿಸುವ ಬಗ್ಗೆ

ಕವಿತೆಯು ಮಹತ್ವದ್ದು; ಅದರಲ್ಲಿ ಬಂದಿರುವ ಮಾತುಗಳ ಬಗ್ಗೆ ಶಿಕ್ಷಕನಿಗೆ ಬಗೆಬಗೆಯ ಪ್ರಶ್ನೆಗಳನ್ನು ಕೇಳಲಿಕ್ಕೆ ಬರುವದೆಂಬ ಸಂಗತಿಯು ಮಹತ್ವ

ದ್ದಲ್ಲ. ಇಂಥ ಪ್ರಶ್ನಗಳನ್ನು ಹೆಚ್ಚಾಗಿ ಕೇಳಬಲ್ಲವನು ಮೇಲಾದ ಕವಿತಾ ಶಿಕ್ಷಕನಲ್ಲ; ಪ್ರಶ್ನಗಳ ಸಂಖ್ಯೆಯಿಂದಾಗಲಿ ಚಿಕ್ಕಮಕ್ಕಳು ಇವಕ್ಕೆ ಕೊಡುವ ಸರಿಯಾದ ಉತ್ತರಗಳಿಂದಾಗಲಿ ನಾವು ಕವಿತೆಯ ಯೋಗ್ಯತೆಯನ್ನಾಗಲಿ ಶಿಕ್ಷಕನ ಕವಿತೆ ಕಲಿಸುವ ಸಾಮರ್ಥ್ಯವನ್ನಾಗಲಿ ಅಳತೆಗಟ್ಟುವದಿಲ್ಲ. ಆ ಕವಿತೆಯಲ್ಲಿ ಲೀನರಾಗಿ ಹುಡುಗರು ಹೊಂದುವ ಆನಂದವನ್ನು ನೋಡಿ ಕವಿತೆಯು ಅವರಿಗೆ ತಕ್ಕುದೆಂದೂ ಶಿಕ್ಷಕನು ಕವಿತೆಕಲಿಸುವದರಲ್ಲಿ ಹುರಿಯಾಳೆಂದೂ ನಿರ್ಣಯಿಸುವೆವು. ಶಿಕ್ಷಕನ ಪ್ರಶ್ನಗಳಿಂದ ಹುಡುಗರು ಕವಿತೆಯಲ್ಲಿ ಮಗ್ನರಾಗಬೇಕು. ಅದರಲ್ಲಿರುವ ಸೌಂದರ್ಯವು ಅವರಿಗೆ ಹೊಳೆಯಬೇಕು; ಇದರಿಂದ ಉಂಟಾಗುವ ಸಂತೋಷವು ಅವರನ್ನು ಆವರಿಸಬೇಕು. ಕವಿತಾ ಶಿಕ್ಷಣದಲ್ಲಿ ಈ ಬಗೆಯ ಪ್ರಶ್ನಗಳೇ ಮಹತ್ವವಾದವು.

ಕವಿತೆಗಳೆಂದರೆ ಬುದ್ಧಿ ಪರೀಕ್ಷೆಯ ಸಾಧನಗಳಲ್ಲ; ಇವುಗಳನ್ನು ಬುದ್ಧಿಪರೀಕ್ಷೆಗಾಗಿ ಉಪಯೋಗಿಸುವದನ್ನು ನಾವು ನೋಡಿರುವೆವು. ಆದರೆ ಅವುಗಳ ಉದ್ದೇಶವು ಬುದ್ಧಿ ಪರೀಕ್ಷೆಯು ಸರ್ವಥಾ ಅಲ್ಲ.

ಮೇಲಾದ ಕವಿತೆಗಳಲ್ಲಿ ನೀತಿಯ ಮಾತುಗಳು ಇರುವದಿಲ್ಲ. ನೀತಿಯ ಉಪದೇಶಗಳನ್ನೊಳಗೊಂಡ ಕವಿತೆಗಳೇ ಸಣ್ಣ ಮಕ್ಕಳಿಗೆ ತಕ್ಕ ಕವಿತೆಗಳೆಂದು ಕೆಲವರು ಭಾವಿಸುವದುಂಟು. ಇದು ಸರಿಯಲ್ಲ. ನೀತಿಯ ಜ್ಞಾನಕ್ಕಾಗಿ ನಾವು ಕವಿತೆಗಳನ್ನು ಕಲಿಸುವದಿಲ್ಲ.

ಬೇರೊಬ್ಬರು ಪ್ರೀತಿಸುವರೆಂದು ನಾವು ಪ್ರೀತಿಸಲಿಕ್ಕಾಗುವದಿಲ್ಲ. ನಾವು ಮೆಚ್ಚಿದ್ದರಲ್ಲಿಯೇ ನಮಗೆ ಪ್ರೀತಿಯು ಉಂಟಾಗುವದು. ಯಾವ ಕವಿತೆಗಳಿಂದ ನಾವು ಮುಗ್ಧರಾಗುವೆವೋ ಅವುಗಳಲ್ಲಿಯೇ ನಮಗೆ ಮನಸಾಗುವದು. ಬೇರೆಯವರು ಒಂದು ಕವಿತೆಯು ಬಹಳ ಸರಸವಾಗಿದೆಯೆಂದು ಹೇಳಿದ್ದಕ್ಕಾಗಿ ನಮಗೆ ಅದು ರಸಭರಿತವಾಗದು. ಅದರ ರಸವನ್ನು ನಾವು ಆಸ್ವಾದಿಸಿದಾಗಲೇ ಅದರ ಸೌಂದರ್ಯವು ನಮಗೆ ಹೊಳೆಯುವದು; ಅದರಲ್ಲಿ ನಾವು ಲೀನರಾಗುವೆವು. ಆದ್ದರಿಂದ ಕವಿತ ಕಲಿಸುವ ಹುರುಪುಳ್ಳ ಪ್ರತಿಯೊಬ್ಬ ಶಿಕ್ಷಕನು ಯಾವ ಕವಿತೆಗಳಿಂದ ತಾನು ಮೋಹಿತನಾರುವನೋ ಅಂಥವುಗಳ ಒಂದು ಪ್ರತ್ಯೇಕವಾದ ಸಂಗ್ರಹವನ್ನು ಮಾಡಿಟ್ಟುಕೊಂಡಿರಬೇಕು. ಈ ಸಂಗ್ರಹದಲ್ಲಿರುವ ಒಂದೊಂದು ಕವಿತೆಯನ್ನು ಶಿಕ್ಷಕನು ಮನಸೊಪ್ಪಿ ಕಲಿಸುವನು. ಇದನ್ನು ಕಲಿತ ವಿದ್ಯಾರ್ಥಿಗಳ ಕಣ್ಣಲ್ಲಿ ಕಾಣುವ ಸಂತೋಷದ ಬೆಳಕನ್ನು ನೋಡಿ ಅವನು ಕೃತಾರ್ಥನಾಗುವನು. ಈ ಧನ್ಯತೆಯೇ ಅವನ ಪಾರಿತೋಷಿಕವು. ಇದನ್ನು ಅನುಭವಿಸಿ ಸಂತುಷ್ಟನಾದವನೇ ಖರಿತ ಕವಿತಾ ಶಿಕ್ಷಕನು.

ಕವಿತೆಯ ಸೌಂದರ್ಯವನ್ನು ಕಂಡು ಅದರಿಂದ ಬಾಲಕರನ್ನು ಸಂತುಷ್ಟರನ್ನಾಗಿ ಮಾಡುವದು ನಮ್ಮ ಮೊದಲಿನ ಕಾರ್ಯವು; ನಾವು ಅದನ್ನು ಹೆಚ್ಚೆಚ್ಚು ಕಲಿಸುತ್ತ ಹೋದಂತೆ ಅವರಲ್ಲಿ ಈ ಸಂತೋಷವು ಹೆಚ್ಚಾಗತಕ್ಕದ್ದು.

ಕವಿತೆಯ ಶಿಕ್ಷಣದ ಉಪೋದ್ಘಾತ ಪ್ರಕಾರಗಳು:—

ಇವುಗಳಲ್ಲಿ ಕೀಳೆನಿಸುವವುಗಳನ್ನು ಮೊದಲು ಹೇಳುವೆವು.

೧. ಕವಿ ಚರಿತ್ರೆಯನ್ನು ಹೇಳಿ ಆರಂಭಿಸುವದು ಸರಿಯಲ್ಲ. ಕವಿತೆಯು ಚರಿತ್ರೆಯಲ್ಲ; ನಮಗೆ ಕವಿತೆಯನ್ನು ಕಲಿಸಬೇಕಾಗಿರುವದೆಂಬದನ್ನು ಮರೆಯಲಾಗದು. ಕವಿಯ ಚರಿತ್ರೆಗೆ ಸಂಬಂಧಿಸಿದ ವಿವರಣಗಳಿಗೆ ಇದರಲ್ಲಿ ಸ್ಥಳವಿರುವದಿಲ್ಲ. ಕವಿತೆಯಿಂದ ವಿದ್ಯಾರ್ಥಿಗಳಲ್ಲಿ ಉಂಟಾಗುವ ಸಂತೋಷಕ್ಕೆ ಇವು ಕಾರಣೀಭೂತವಾಗುತ್ತಿದ್ದರೆ ಆ ಮಾತು ಬೇರೆ. ಕವಿಯು ಹೇಳುವದನ್ನು ಹುಡುಗರು ಮೊದಲು ಕೇಳಲಿ; ಆತನ ಮಾತಿನಲ್ಲಿ ಅವರು ಲೀನರಾಗಿ ಸಂತೋಷಪಡಲಿ. ಆ ಬಳಿಕ ಕವಿಯ ಚರಿತ್ರವನ್ನು ಹೇಳಲಿಕ್ಕೆ ಹೊತ್ತು ಉಳಿಯುವದಿಲ್ಲೆಂದು ನಿಮಗೆ ಅನಿಸಬಹುದು. ಇದಕ್ಕಾಗಿ ವ್ಯಥೆ ಪಡುವಕಾರಣವಿಲ್ಲ. ಹುಡುಗರಿಗೂ ಕವಿತೆಗೂ ನಡುವೆ ಬೇರೆ ಯಾವ ರಗಳೆಯು ಬೇಡ.

ವಿವರಣೆಯಿಂದ ಕವಿತೆಯ ಪಾಠವನ್ನು ಆರಂಭಿಸುವದು.

೨. ಕೆಲವರು ಮೊದಲು ಕರಿಹಲಗೆಯಮೇಲೆ ಕಠಿಣ ಶಬ್ದಗಳನ್ನೂ ಅವುಗಳ ಅರ್ಥವನ್ನೂ ಬರೆದಿಡುವದುಂಟು. ಆದರೆ ಇದರಿಂದ ವಿದ್ಯಾರ್ಥಿಗಳಿಗೆ ಪ್ರಯೋಜನವಾಗುವದಿಲ್ಲ. ಸಂದರ್ಭವನ್ನು ತಪ್ಪಿಸಿ ಶಬ್ದಾರ್ಥಗಳನ್ನು ಬರೆಯುವದರಿಂದ ಅವು ಹೆಚ್ಚು ಗಡಚಾಗುತ್ತವೆ. ಕವಿತೆಯ ಅರ್ಥವು ಪೂರ್ಣವಾಗಿ ತಿಳಿದಹೊರತು ಅದರ ಭಾವವು ಅವರಲ್ಲಿ ಬಿಂಬಿಸಲಾರದೆಂದು ಆಕ್ಷೇಪಿಸಬೇಡಿರಿ. ಒಮ್ಮೆ ಮಾತ್ರ ಕವಿತೆಯನ್ನು ಓದಿ ಅದರ ಭಾವವನ್ನೆಲ್ಲ ಅರಿತು ಕೊಳ್ಳುವದು ಯಾರಿಗೂ ಅರಿದಾದದ್ದು. ಎರಡನೆಯ ಸಾರೆ ಇಲ್ಲವೆ ಮೂರನೆಯ ಸಾರೆ ಅದನ್ನು ಓದಿದರೂ ಭಾವವು ಪೂರ್ಣವಾಗಿ ಗೋಚರವಾಗದು.

ಒಮ್ಮೊಮ್ಮೆ ಕವಿತೆಯಲ್ಲಿ ಒಂದ ಕಥೆಯ ಅಥವಾ ಭಾವದ ಸಂಕ್ಷಿಪ್ತ ವಿವರಣವನ್ನು ಆರಂಭದಲ್ಲಿ ಹೇಳುವದುಂಟು, ಭಾವಗಳು ಬಹಳ ಗಡಚಾಗಿದ್ದರೆ ಇಲ್ಲವೆ ಕವಿತೆಯ ಭಾಷೆಯು ಬಹಳ ಬಿಗುವು ಉಳ್ಳದ್ದಿದ್ದರೆ ಮಾತ್ರ ಹೀಗೆ ಆರಂಭಿಸಬಹುದು. ಆದರೆ ಕವಿಯೇ ತಾನು ಹೇಳಬೇಕೆಂದಿರುವದನ್ನು ಹೇಳಲಿ. ಇದನ್ನು ಹುಡುಗರು ಏನಿಲ್ಲೆಂದರೂ ಎರಡು ಸಾರೆಯಾದರೂ ಆತನ ಮಾತು

ಗಳಲ್ಲಿಯೇ ಕೇಳಲಿ. ಈ ವರೆಗೆ ಕವಿತೆಯ ಬಗ್ಗೆ ಯಾವ ವಿವೇಚನೆಯೂ ತಕ್ಕುದಲ್ಲ, ಹುಡುಗರಲ್ಲಿ ಭಾವವನ್ನು ಅನುಭವಿಸುವ ಶಕ್ತಿಯೂ ಅರ್ಥವನ್ನು ತಿಳಿದುಕೊಳ್ಳುವ ಸಾಮರ್ಥ್ಯವೂ ಸ್ವಲ್ಪವಾದರೂ ಇರುವವು. ಇವುಗಳನ್ನು ಉಪಯೋಗಿಸಿ ವಿಕಾಸಪಡಿಸಿಕೊಳ್ಳಲಿಕ್ಕೆ ಅವರಿಗೆ ಉತ್ತೇಜನಕೊಡಿರಿ.

೩ ಕವಿತೆಯ ಭಾವವನ್ನು ಗ್ರಹಿಸಲಿಕ್ಕೆ ಹುಡುಗರ ಮನಸ್ಸನ್ನು ಸಿದ್ಧಮಾಡಿಟ್ಟುಕೊಳ್ಳಲಿಕ್ಕೆಂದು ಕೆಲವರು ಉಪೋದ್ಘಾತವನ್ನು ಮಾಡುವದುಂಟು. ಕವಿತಾ ಶಿಕ್ಷಣದಲ್ಲಿ ನುರಿತ ಶಿಕ್ಷಕರು ಹೀಗೆ ಆರಂಭಿಸುವದುಂಟು. ಆದರೆ ಕವಿಯನ್ನೂ ಹುಡುಗರನ್ನೂ ಕೂಡಿಸಲಿಕ್ಕೆ ಹೆಣಗುವ ಕಾರಣವಿಲ್ಲ. ಅವರು ತಾವಾಗಿಯೇ ಪರಿಚಯಮಾಡಿಕೊಂಡು ಒಳ್ಳೇ ಸ್ನೇಹಿತರಾಗುವರು. ನೀವು ಆ ಕವಿತೆಗೆ ನೋಹಿತರಾಗಿದ್ದರೆ ತೀರಿತು. ಅದು ನಿಮ್ಮ ವಿದ್ಯಾರ್ಥಿಗಳ ಹೃದಯದಲ್ಲಿ ಸೇರಿ ಅಲ್ಲಿ ನಲಿದಾಡಲಿಕ್ಕೆ ಅದನ್ನು ನುಡಿದು ನೆರವಾಗುವದೇ ನಿಮ್ಮ ಮುಖ್ಯ ಕೆಲಸವು.

ಕವಿತೆಯನ್ನು ಓದುವದು.

ಕವಿತೆಯು ಕಣ್ಣಿನ ಕಲೆಯಲ್ಲ; ಕಿವಿಯ ಕಲೆಯು. ಅಂದರೆ ಕವಿತೆಯು ದನಿಯ ರೂಪದಿಂದ ಶ್ರವಣೇಂದ್ರಿಯದ ಮಾರ್ಗವಾಗಿ ನಮ್ಮ ಮನಸ್ಸನ್ನು ಪ್ರವೇಶಿಸತಕ್ಕದ್ದು; ಬರೆದ ಇಲ್ಲವೆ ಅಚ್ಚುಹಾಕಿದ ಶಬ್ದಗಳರೂಪದಿಂದ ಕಣ್ಣಿನಿಂದ ನಮ್ಮನ್ನು ಸೇರತಕ್ಕದ್ದಲ್ಲ. ಅಚ್ಚುಹಾಕಿದ ಕವಿತೆಗಳನ್ನೋದಿಯೋದಿ ನಮಗೆ ರೂಢಿಯಾಗಿರುವ ಮೂಲಕ ಈ ಮಾತನ್ನು ನಾವು ಮರೆತು ಬಿಟ್ಟಿರುವೆವು. ಅಚ್ಚಿನಲ್ಲಿರುವ ಶಬ್ದಗಳು ಕವಿತೆಯಲ್ಲ. ಹುಡುಗರು ಕವಿತೆಯನ್ನು ಕೇಳಲಿ. ಅದರ ನಾದವು ಅವರ ಕಿವಿಯಲ್ಲಿ ತುಂಬಿ ಮನದಲ್ಲಿ ಸೇರಲಿ, ಸಾಮಾನ್ಯ ಬುದ್ಧಿಯ ಹುಡುಗನು ಕವಿತೆಯನ್ನು ತಿಳಿದುಕೊಳ್ಳಬೇಕಾದರೆ ಶಿಕ್ಷಕನು ಅವನಿಗೆ ಹ್ಯಾಗೆ ನೆರವಾಗಬೇಕು! ಶಿಕ್ಷಕನು ಅವನ ಮುಂದೆ ಆ ಕವಿತೆಯನ್ನು ನುಡಿಯಲಿ, ಧಾಟಿಯಿಂದ ಅನ್ನಲಿ, ಇದೇ ಶಿಕ್ಷಕನಿಂದ ಹುಡುಗನಿಗೆ ದೊರೆಯಬೇಕಾದ ನೆರವು.

ಕಲಿಸುವದಕ್ಕೂ ಮೊದಲು ಹುಡುಗರಿಂದ ಒಂದೊಂದು ಶ್ಲೋಕವನ್ನು ಓದಿಸಬೇಡಿರಿ. ಕವಿತೆಯನ್ನು ಅನ್ನುವದರಲ್ಲಿ ನುರಿತವನು ಸಹ ಹೊಸ ಕವಿತೆಯನ್ನು ನೋಡಿದಕೂಡಲೆ ಅದನ್ನು ಸರಿಯಾಗಿ ಅನ್ನಲಾರನು. ಇದು ಅವನಿಗೂ ಸಾಧ್ಯವಲ್ಲ. ಯಾಕೆಂದರೆ ಕವಿತೆಯ ಭಾವವು ಅವನನ್ನು ಲೀನಗೊಳಿಸಿರುವದಿಲ್ಲ; ಅಂದಮೇಲೆ ಅವನು ಅದನ್ನು ಸರಿಯಾಗಿ ಅನ್ನುವದಾದರೂ ಹ್ಯಾಗೆ!

ಕೆಲವರಂತೂ ಕವಿತೆಯನ್ನು ಅಸಹ್ಯಬರುವಹಾಗೆ ಓದುವರು. ಇದು ಶುದ್ಧ ಅಧಿಕ ಪ್ರಸಂಗತನವು. ಆ ಕವಿತೆಯ ಮಾನಖಂಡನವು. ಸರಸ್ವತಿಯ ಅವಹೇಲ

ನವು. ಹುಡುಗರ ಸೌಂದರ್ಯದ ಭಾವನೆಯನ್ನು ವಿಕಾಸಗೊಳಿಸಿ, ಕವಿತೆಯಲ್ಲಿರುವ ಸೌಂದರ್ಯವನ್ನು ಕಂಡುಹಿಡಿಯಲಿಕ್ಕೆ ಅವರನ್ನು ಸಿದ್ಧಪಡಿಸಿ, ತಾವಾಗಿಯೇ ಹೊಸ ಹೊಸ ಕವಿತೆಗಳನ್ನೋದಿ ಅವುಗಳ ರಸಾಸ್ವಾದದಿಂದ ಸಂತೋಷವನ್ನು ಪಡಲಿಕ್ಕೆ ಅವರಿಗೆ ಕಲಿಸಬೇಕಾದರೆ ಕವಿತೆಗಳ ಬಗ್ಗೆ ಅವರಿಗೆ ಉಂಟಾಗುವ ಭಾವನೆಗಳನ್ನು ಹೊಂದಲು ಅವರಿಗೆ ನಾವು ಕಾಲಾವಧಿಯನ್ನು ಕೊಡಲೇಬೇಕು; ಕೇಳಿ ಬಾಯಿಂದ ಅಂದು ಗ್ರಹಿಸಲಿಕ್ಕೆ ಅವನಿಗೆ ಉತ್ತೇಜನ ಕೊಡಬೇಕು; ಕವಿತೆಯ ಬಗ್ಗೆ ಅವರಲ್ಲಿ ಮೂಡುವ ಭಾವನೆಗಳೇ ಅವರ ಪಾಲಿನ ಸತ್ಯವೆಂಬದನ್ನು ಅವರಿಗೆ ಮನಗಾಣಿಸಿಕೊಡಬೇಕು. ನಾವು ಅವರಿಗೆ ಈ ಕೆಲಸದಲ್ಲಿ ದಾರಿ ತೋರಿಸಬಾರದೆಂತಲ್ಲ. ನಮ್ಮಿಂದ ಅವರಿಗೆ ನೆರವು ದೊರೆಯಬೇಕು. ತಕ್ಕ ಕವಿತೆಗಳನ್ನು ಆರಿಸಿ ಅವರ ಮುಂದಿಡುವದು; ಇವುಗಳನ್ನೋದಿ ತಿಳಿದುಕೊಂಡ ಬಳಿಕ ಅವುಗಳಲ್ಲಿರುವ ಅವರ ಶಕ್ತಿಗೆ ಮೀರಿದ ಹೊಸ ಸೌಂದರ್ಯಗಳನ್ನು ತೋರಿಸುವದು ಇವೆರಡು ರೀತಿಯಿಂದ ನಾವು ಅವರಿಗೆ ಸಹಾಯಮಾಡತಕ್ಕದ್ದು.

ಕವಿತೆಯನ್ನು ಅನ್ನಿರಿ; ಅವರಿಗೆ ಅದು ತಿಳಿಯುವವರೆಗೆ ತಿರುತಿರುಗಿ ಅದನ್ನು ಅನ್ನಿರಿ, ಅಂದರೆ ನೀವು ಈ ಬಗ್ಗೆ ಮಾಡತಕ್ಕ ಎಲ್ಲಕ್ಕೂ ಹೆಚ್ಚಿನ ಕರ್ತವ್ಯವನ್ನು ಮಾಡಿದಂತಾಗುವದು. ಇದರಿಂದ ಚಂದವಾದದ್ದನ್ನು ಪ್ರೀತಿಸಲಿಕ್ಕೆ ನೀವು ಕಲಿಸಿದಂತಾಯಿತು. ನರವು ಮಾಡುವದು ಮತ್ತೇನೂ ಉಳಿಯಲಿಲ್ಲವೇ ? ಉಳಿಯಿತು, ಅವರಲ್ಲಿ ಉಂಟಾದ ಸೌಂದರ್ಯದ ಪ್ರೀತಿಯು ಕವಿತೆ ತಿಳಿಯ ಹತ್ತಿದಂತೆ ವೃದ್ಧಿಯಾಗಲಿಕ್ಕೆ ನೀವು ಅವರಿಗೆ ನರವಾಗುವದು ಮಾತ್ರ ಉಳಿಯಿತು.

ಕವಿತೆಯನ್ನು ಕಲಿಸುವ ಪದ್ಧತಿಯು

ನಾವು ಕಲಿಸಬೇಕಾಗುವ ಕವಿತೆಯು ನಮಗೆ ಬಾಯಿಪಾಠ ಬರುವದು ಮಹತ್ವವಾದದ್ದು. ಕವಿತೆಯನ್ನು ಒಮ್ಮೆ ಎರಡುಸಾರೆ ಅಂದರೆ ಆಯಿತು. ಆಮೇಲೆ ಕೂಡಲೆ ಕವಿತೆಯ ಮುಖ್ಯಭಾವದ ಕಡೆಗೆ ಸಾಗಿರಿ. ಕವಿತೆಯನ್ನು ಬರೆಯಲು ಕವಿಯನ್ನು ತೊಡಗಿಸಿದ ಅಂದವಾದ ಭಾವನೆ, ಚಂದವಾದ ದೃಶ್ಯ, ಇಲ್ಲವೆ ಮೋಹಕವಾದ ಕಥೆ ಕಲ್ಪನೆಗಳನ್ನು ಅವರ ಮುಂದೆ ಇಡಿರಿ. ಮೊದಲನೆಯ ಶ್ಲೋಕದ ಮೊದಲನೆಯ ಸಾಲಿನಿಂದ ಆರಂಭಿಸಿ ಒಂದೊಂದು ಶ್ಲೋಕವನ್ನು ತಿಳಿಸಿಕೊಡುತ್ತ ಕಠಿಣವಾದ ಶಬ್ದಗಳನ್ನೂ ಅಲಂಕಾರಗಳನ್ನೂ ಅವು ಬಂದಂತೆ ವಿವರಣೆ ಮಾಡುತ್ತ ಹೋಗಬೇಡಿರಿ. ಸ್ವಾರಸ್ಯದ ಮಾತನ್ನು ಅವರ ಮುಂದಿಟ್ಟು ಕವಿತೆಯಲ್ಲಿ ಬಂದ ವಿವರವಾದ ಸಂಗತಿಗಳು ಈ ಮುಖ್ಯ ಮಾತನ್ನು ಹ್ಯಾಗೆ ಪುಷ್ಟೀಕರಿಸುತ್ತವೆಂಬದನ್ನು ನಿಮ್ಮ ಶಿಕ್ಷಣವು ಸ್ಪಷ್ಟಮಾಡಲಿ. ಹುಡುಗರು ಏನೂ ತಿಳಿಯದವರೆಂದೂ

ನಿಮಗೆ ಎಲ್ಲವೂ ಗೊತ್ತಾಗಿದೆಯೆಂದೂ ಅವರ ಭಾವನೆಯಾಗಲಾಗದು. ನೀವು ಅವರ ವಿಶ್ವಾಸದ ಗೆಳೆಯರು. ಅವರ ಸಹಾಯಕರು. ಸಹಕಾರಿತೆಯಿಂದ ಅವರೂ ನೀವೂ ಕೂಡಿಯೇ ಕವಿತೆಯ ಸ್ವಾರಸ್ಯವನ್ನು ಕಂಡುಹಿಡಿಯುವವರು ಎಂದು ಅವರ ಪೂರ್ಣ ಮನವರಿಕೆಯಾಗಲಿ. ಪ್ರಶ್ನ ಕೇಳಿ ಅವರ ತಪ್ಪುಗಳನ್ನು ತಿದ್ದುವಿರೆಂದು ಅವರ ಭಾವನೆಯಾಗಗೊಡಬೇಡಿರಿ. ಅವರ ಜ್ಞಾನವನ್ನು ಪರೀಕ್ಷಿಸುವದು ನಿಮ್ಮ ಕೆಲಸವಲ್ಲ. ಕವಿತೆಯ ಭಾವವು ನಿಮ್ಮ ಪಾಠವನ್ನು ಪೂರ್ಣವಾಗಿ ಆವರಿಸಲಿ ನಿಮ್ಮ ಧ್ವನಿ, ನಿಮ್ಮ ಚಲನವಲನ (manner) ಬಹಳ ಹೇಳುವದೇನು! ಎಲ್ಲವೂ ಕವಿತೆಯ ಭಾವಕ್ಕೆ ಹೊಂದಿಕೆಯುಳ್ಳದ್ದಾಗಿರಲಿ. ಹುಡುಗರನ್ನು ಜಗ್ಗಿ, ದೂಡಿ, ತಿರುವಿ ತಿಳಿದುಕೊಳ್ಳಹೇಳಿ, ಚೀರಿ ಬೆದರಿಸಿ ಬೆಯ್ದು ತಿದ್ದಿ ತೀಡಿ ಅವರ ತಪ್ಪುಗಳನ್ನು ಹೊರಗೆಳೆದು ಅವರ ಮಾನಭಂಗಮಾಡಿ ಕವಿತೆಯನ್ನು ತಿಳಿಸಿ ಕಲಿಸಿ ಮುಗಿಸಿ ಅವರಲ್ಲಿ ಕವಿತೆಯ ಬಗ್ಗೆ ಸಂತೋಷವು ಹುಟ್ಟಲೆಂದು ಕೋರುವದು ಮರುಳತನವಲ್ಲವೆ!

ಹುಡುಗರು ಶಾಲೆಯಲ್ಲಿ ಕವಿತೆಯನ್ನು ಅನ್ನಬಾರದೇನು!

ಅನ್ನಲೇ ಬೇಕೆಂದು ನಾವು ಒತ್ತಾಯಪಡಿಸುವದಿಲ್ಲ. ಅನ್ನಲಿಚ್ಛೆಯುಳ್ಳವರು ಬೇಕಾದರೆ ಪ್ರಯತ್ನಮಾಡಬಹುದು. ಇದಕ್ಕೆ ನಾವು ಉತ್ತೇಜನಕೊಡತಕ್ಕದ್ದು. ದೊಡ್ಡ ಹುಡುಗರಿಗೆ ಕವಿತೆ ಅನ್ನುವ ಮನಸಿರುವದಿಲ್ಲ. ಇವರನ್ನು ಒತ್ತಾಯಪಡಿಸಬಾರದು. ಕವಿತೆಯ ಪಾಠವು ಆನಂದಮಯವಿರಬೇಕು; ಇದರಲ್ಲಿ ಯಾವ ಕಾರಣದಿಂದಲೂ ಮನಸ್ಸು ಅಸ್ವಸ್ಥವಿರಲು ಎಡೆಯಾಗಗೊಡಬಾರದು.

ಹುಡುಗರಿಗೆ ಕವಿತೆಯನ್ನಲಿಕ್ಕೆ ಹ್ಯಾಗೆ ನೆರವಾಗಬಹುದು?

ಕವಿತೆಯನ್ನು ಧಾಟಿಯಿಂದ ಅಂದದ್ದನ್ನು ಕೇಳಿದರೆ ನಮಗೆ ಕವಿತೆಯ ಭಾವವು ತಿಳಿಯುವದು; ಅದನ್ನು ಧಾಟಿಯಿಲ್ಲದೆ ಓದಿದರೆ ರಸವು ಹುಟ್ಟದು. ಧಾಟಿಯಿಂದ ಅಂದ ಕವಿತೆಯನ್ನು ಕೇಳಿದಕೂಡಲೆ ನಮ್ಮ ಮನೋಭಾವಗಳು ಜಾಗ್ರತವಾಗಿ ಹೊರಬೀಳಲು ಹಾತೊರೆಯುವವು. ನಾವು ಅದನ್ನು ಅನ್ನುವದರಿಂದ ಈ ಮನೋಭಾವಗಳು ಸಮಾಧಾನ ತಾಳುವವು.

ಕವಿತೆಯನ್ನು ಕಲಿತು ನಮ್ಮ ಹುಡುಗರು ಹೀಗೆ ಮಾಡುತ್ತ ಹೋಗಬೇಕೆಂಬದೇ ನಮ್ಮ ಉದ್ದೇಶವು. ನೀವು ಕವಿತೆಯನ್ನು ಧಾಟಿಗೆ ಸರಿಯಾಗಿ ಅಂದು ತೋರಿಸದಿದ್ದರೆ ಕವಿತೆಯೆಂದರೆ ಗಾಯನ ಎಂಬದು ಎಷ್ಟೋ ಜನರ ಲಕ್ಷ್ಯದಲ್ಲಿ ಬರುವದಿಲ್ಲ. ಕವಿತೆಯಲ್ಲಿರುವ ನಾದ ಸೌಂದರ್ಯಕ್ಕೆ ಅವರು ಎರವಾಗುತ್ತಾರೆ.

ಒಂದೊಂದು ತಾಸಿನಲ್ಲಿ ಹುಡುಗರು ತಾವಾಗಿ ಆರಿಸಿತಂದ ಕವಿತೆಗಳನ್ನು ಅವರಿಗೆ ತಮ್ಮ ಗೆಳೆಯರ ಮುಂದೆ ಓದಗೊಡುವದು ಬಹಳ ಮಹತ್ವವಾದದ್ದು. ಪ್ರತಿಯೊಬ್ಬನು ಓದಿ ಮುಗಿಸಿದ ಬಳಿಕ ಆ ಕವಿತೆಯ ಭಾವವು ಯಾವ ಭಾಗದಲ್ಲಿ ಇನ್ನೂ ಹೆಚ್ಚು ಪರಿಣಾಮಕರವಾಗಿ ಮನದಲ್ಲಿ ಮೂಡುವಂತೆ ಹ್ಯಾಗೆ ಓದಿರಬಹು ದೆಂಬದರ ಬಗ್ಗೆ ವರ್ಗದ ಹುಡುಗರಿಂದ ಟೀಕೆಗಳನ್ನು ನಾವು ಅಪೇಕ್ಷಿಸಬಹುದು, ಈ ಬಾಬಿನ ಬಗ್ಗೆ ಹುಡುಗರಿಗೆ ಉತ್ತೇಜನಕೊಟ್ಟರೆ ಅವರು ಮನಸು ಬಿಚ್ಚಿ ಮಾತಾಡುವರು. ಆದರೆ ಕವಿತೆಯನ್ನು ಅನ್ನಲಿಕ್ಕೆ-ಭಾವವು ಬೋಧವಾಗುವಂತೆ ಅನ್ನಲಿಕ್ಕೆ ಪ್ರಯತ್ನಪಡುವ ಪ್ರತಿಯೊಬ್ಬ ವಿದ್ಯಾರ್ಥಿಗೆ ನಾವು ಉತ್ತೇಜನ ಕೊಡಲಿಕ್ಕೆ ಬೇಕೆಂಬದನ್ನು ಮಾತ್ರ ಶಿಕ್ಷಕರು ಮರೆಯಲಾಗದು.

ಕವಿತೆಯನ್ನು ಓದುವದು, ಅನ್ನುವದು ಹಾಗು ಕಲಿಸುವದು.

ಕವಿತೆಗಳನ್ನು ಕಲಿಸುವದಕ್ಕಿಂತ ಅಂದು ತೋರಿಸುವದಕ್ಕಾಗಿ ಶಿಕ್ಷಕನು ಹೆಚ್ಚು ವೇಳೆಯನ್ನು ಕೊಡಬಹುದು. ಒಂದು ಕವಿತೆಯನ್ನು ಕಲಿಸಿ, ಹತ್ತು ಹನ್ನೆರಡು ಕವಿತೆಗಳನ್ನು ಅವರಿಗೆ ಓದಿ (ಅಂದು)ತೋರಿಸುವದು ಒಳಿತು. ಕೆಲವು ಕವಿತೆಗಳನ್ನಾದರೂ ಕಲಿಸುವದು ಅವಶ್ಯವು. ಯಾಕೆಂದರೆ ಕವಿತೆಯಿಂದ ಎಷ್ಟು ಬಗೆ ಯಲ್ಲಿ ಸಂತೋಷ ಹೊಂದಬಹುದೆಂಬದು ಇದರಿಂದ ಹುಡುಗರಿಗೆ ಗೊತ್ತಾಗುವದು. ಆದರೂ, ಹುಡುಗರಿಗೆ ಹೆಚ್ಚಾಗಿ ಕವಿತೆಗಳನ್ನು ಓದಿ (ಅಂದು) ತೋರಿಸಲಿಕ್ಕಾಗಿ ನಾವು ವೇಳೆಯನ್ನು ಅವಶ್ಯವಾಗಿ ಕಾದಿಟ್ಟುಕೊಳ್ಳತಕ್ಕದ್ದು. ನಾವು ಕಲಿಸುವ ಪ್ರತಿಯೊಂದು ಕವಿತಾಪಾಠದಲ್ಲಿ ಎಲ್ಲ ಹುಡುಗರು ಸಂತೋಷವನ್ನು ಪಡೆಯುವ ರೆಂಬದು ನಿಶ್ಚಿತವಾದದ್ದಲ್ಲ. ಕೆಲವರಮೇಲೆ ಅದರ ಪರಿಣಾಮವು ಆಗಲಿಕ್ಕಿಲ್ಲ. ಆದರೆ ಪ್ರತಿಯೊಬ್ಬ ಹುಡುಗನು ತನ್ನ ಮನಸೆಳೆಯುವಂಥ ಕೆಲವು ಕವಿತೆಗಳ ನ್ನಾದರೂ ಕೇಳಿರಬೇಕು. ಇವುಗಳಿಂದ ಅವನ ಕಲ್ಪನಾಶಕ್ತಿಯು ವಿಕಾಸಹೊಂದ ಬೇಕು; ಅವನ ಮನೋಭಾವಗಳೂ ಜಾಗ್ರತವಾಗಬೇಕು.

ಕವಿತೆಯನ್ನು ಅನ್ನುವ (ಓದುವ) ಚಟವುಳ್ಳವರನ್ನಾಗಿ ಮಾಡುವದೇ ನಮ್ಮ ಉದ್ದೇಶವಿರತಕ್ಕದ್ದೆಂಬದನ್ನು ನಾವು ಮರೆಯಲಾಗದು. ಕಾವ್ಯ ಪಂಡಿತರನ್ನು ನಾವು ಮಾಡಲು ಹೊರಟಿರುವದಿಲ್ಲ. ನಮ್ಮ ನೆರವಿಲ್ಲದೆ ಕೆಲವರು ಕಾವ್ಯಕೋವಿದ ರಾಗಬಹುದು. ಆದರೆ ನಮ್ಮ ಹುಡುಗರಲ್ಲಿ ಬಹುಜನರು ಕಾವ್ಯವನ್ನು ಓದುವ ದರಿಂದಲೇ ಸಂತೋಷಪಡೆಯುವ ಲವಲವಿಕೆಯುಳ್ಳವರಾಗುವರು.

ಕಾಪೀಬರೆಹ

ನಮ್ಮ ಸಾಲೆಗಳಲ್ಲಿ ೨ನೇ ಇಯತ್ತೆಯಿಂದ ಮೇಲಿನ ಎಲ್ಲ ವರ್ಗಗಳಲ್ಲಿ ಕಾಪೀ ಬರೆಹವು ಸಾಗುತ್ತದೆ. ಉಕ್ತಲೇಖನ, ಶುದ್ಧಲೇಖನ ಮೊದಲಾದ ಬರೆಹಗಳ ಸಂಗಡವೇ ಕಾಪೀಬರೆಹವು ನಡೆಯುವದು. ಮೊದಮೊದಲು ಇದಕ್ಕಾಗಿ ಬೇರೆ ಬೇರೆ ವರ್ಗಗಳ ಕ್ರಮಾನುಸಾರವಾಗಿ ಸಣ್ಣ ದೊಡ್ಡ ಕಿತ್ತೆಗಳು ಇದ್ದವು. ಈಗಾದರೂ ತಾಲೂಕಿನ ಮೂಲೆಯಲ್ಲಿದ್ದ ಕೆಲವು ಸಾಲೆಗಳಲ್ಲಿ ಅವುಗಳನ್ನು ಕಾಣಬಹುದೆಂದು ತೋರುತ್ತದೆ. ಅವುಗಳನ್ನು ಯಾರೂ ಉಪಯೋಗಿಸದಿದ್ದರೆ ಅವು ಅಚ್ಚು ಆಗುತ್ತಿದ್ದಿಲ್ಲ; ಪೇಟೆಯಲ್ಲಿ ಮಾರಾಟಕ್ಕೆ ಸಿಗುತ್ತಿದ್ದಿಲ್ಲ. ಈಗ್ಯೂ ಅವುಗಳನ್ನು ಅಂಗಡಿಗಳಲ್ಲಿ ಕಾಣಬಹುದೆಂದ ಬಳಿಕ ಕೆಲವರಾದರೂ ಅವುಗಳನ್ನು ಉಪಯೋಗಿಸುತ್ತಿರಬಹುದೆಂದು ನಮ್ಮ ಅನುಮಾನ. ಈ ಕಿತ್ತೆಗಳಲ್ಲಿ ಪ್ರಮಾಣಗಳ ಕ್ರಮವಿದ್ದಾಗ್ಯೂ ಅಕ್ಷರಗಳ ಸೌಲಭ್ಯ-ದೌರ್ಲಭ್ಯಗಳ ಕಡೆಗೆ ಲಕ್ಷ್ಯವಿದ್ದಿಲ್ಲ. ಅದರಲ್ಲಿ ಉಪಯೋಗಿಸಿದ ಶಬ್ದಗಳ ಅರ್ಥವು ಕೂಡ ಆಗುತ್ತಿದ್ದಿಲ್ಲ. ಉದಾ:—ದರಬಂದಗಿ ಹಜರತ್. ಯಾವ ವಿಷಯವು ಮಕ್ಕಳಿಗೆ ತಿಳಿಯುವದಿಲ್ಲವೋ ಆ ವಿಷಯವನ್ನು ನಾವು ಯಾಕೆ ಕಲಿಸಬೇಕು !

ಇತ್ತೀಚೆಗೆ ಕಿತ್ತೆಗಳ ಬದಲಾಗಿ ಕಾಪೀ ಪುಸ್ತಕಗಳು ಬಂದಿವೆ. ಅವು ಬೇರೆ ಬೇರೆ ಜನರಿಂದ ಅಚ್ಚು ಹಾಕಿವೆ. ಅವುಗಳಲ್ಲಿ ಕೂಡ ಕೆಲವು ದೋಷಗಳು ಕಂಡುಬಂದಿವೆ. ಕೆಲವು ಕಾಪೀ ಪುಸ್ತಕಗಳಲ್ಲಿ ಮೊದಮೊದಲು ಅಕ್ಷರಗಳ ಭಾಗಗಳನ್ನು ಅಂದರೆ ವರ್ತುಲ, ಕೊಂಬು, ತಲೆಕಟ್ಟು ಮೊದಲಾದವುಗಳನ್ನು ಕೊಟ್ಟಿರುವರು. ಪೂರ್ಣ ಅಕ್ಷರಗಳನ್ನೇ ಯಾವಾಗಲೂ ಬರೆಯಲು ಹೇಳಬೇಕೆಂದು ಬಲ್ಲವರು ಹೇಳುವರು. ಇನ್ನು ಕೆಲವು ಅಕ್ಷರಗಳ ಅರ್ಧಭಾಗವನ್ನು ಕೊಟ್ಟು ಇಲ್ಲವೆ ಟಿಮ್ಕಿಗಳನ್ನು ಕೊಟ್ಟು ಆ ಅಕ್ಷರಗಳನ್ನು ಪೂರ್ಣ ಮಾಡಲು ಕಾದಿಟ್ಟಿರುವರು. ಇದಾದರೂ ತಪ್ಪೆಂದು ತಜ್ಞರು ಸಾರುವರು. ಅಕ್ಷರಗಳೆಂದರೆ ಡ್ರಾಯಿಂಗದಲ್ಲಿ ತೆಗೆಯುವ ಚಿತ್ರವಲ್ಲ. ಚಿತ್ರದಲ್ಲಿದ್ದ ಸೌಕರ್ಯವು ಅಕ್ಷರ ಬರೆಹದಲ್ಲಿರುವದಿಲ್ಲ. ಒಮ್ಮೆ ಬರೆಯಲು ಪ್ರಾರಂಭಮಾಡಿದ ಅಕ್ಷರವನ್ನು ಒಮ್ಮೆಲೇ ಪೂರ್ಣ ಮಾಡುವದು ಉತ್ತಮ ಮಾರ್ಗವೆಂದು ಹೇಳುತ್ತಾರೆ. ಇದಲ್ಲದೆ ಬೇರೆ ಬೇರೆ ವರ್ಗಗಳಲ್ಲಿ ಕಾಪೀಬರೆಹದ ಅಕ್ಷರಗಳ ಪ್ರಮಾಣದಲ್ಲಿಯೂ ಐಕಮತ್ಯ ಇದ್ದಂತೆ ಕಂಡು ಬಂದಿಲ್ಲ. ಈ ವಿಷಯವಾಗಿ ಕೆಲವರು ಕಾಪೀಬರೆಹದಲ್ಲಿ ಅಕ್ಷರಗಳು ದೊಡ್ಡವು ಇರಬೇಕೆನ್ನುವರು. ಬೇರೆ ಕೆಲವರು ಹೀಗಿರದೆ ಮಕ್ಕಳು ಆಯಾ ವರ್ಗಗಳಲ್ಲಿ ಶುದ್ಧಲೇಖನ, ನಿಬಂಧ ಮೊದಲಾದ ಬರೆಹಗಳಲ್ಲಿ ಬರೆಯುವ ಅಳತೆಯಷ್ಟೇ ಪ್ರಮಾಣವು ಕಾಪೀಬರೆಹದ ಅಕ್ಷರಗಳಲ್ಲಿರಬೇಕೆಂದು ಹೇಳುವರು. ಏನೇ ಇರಲಿ, ಎರಡು ಅಳತೆ

ಗಳ ನಡುವೆ ಅಭ್ಯಂತರವು ಆದಷ್ಟು ಕಡಿಮೆ ಇರಬೇಕೆಂದು ನಮ್ಮ ಅಭಿಪ್ರಾಯ. ಕಾಪಿಗಳನ್ನು ಬರೆಯುವಾಗ ಅಕ್ಷರಗಳ ಸೌಂದರ್ಯಕ್ಕಾಗಿ ಪಡುವ ಶ್ರಮದಷ್ಟು ಇತರ ವೇಳೆಯ ಬರೆಹದಲ್ಲಿ ಕೊಡಲಿಕ್ಕಾಗುವದಿಲ್ಲ. ಆದಕಾರಣ ಈ ಎರಡು ಪ್ರಮಾಣಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಇದ್ದರೆ ಅಡ್ಡಿಯಿಲ್ಲ. ಉದಾ:—೨ನೇ ಇಯತ್ತೆಯಲ್ಲಿ ಶುದ್ಧ ಲೇಖನದ ಅಳತೆಯು ಸಾಧಾರಣವಾಗಿ ⅜ ಇಂಚು ಇರುವದು. ಆದರೆ ಕಾಪೀಬರೆಹದಲ್ಲಿ ½ ಇಂಚಿನಗಿಂತ ಹೆಚ್ಚು ದೊಡ್ಡ ಅಕ್ಷರಗಳನ್ನು ಬರೆಯಿಸಬಾರದೆಂದು ನಮ್ಮ ಅಭಿಪ್ರಾಯ. ಮಕ್ಕಳ ಸ್ನಾಯುಗಳು ಬಲಪಟ್ಟಿರುವದಿಲ್ಲೆಂಬ ಮಾತು ನಿಜವಾಗಿದ್ದಾಗ್ಯೂ ತೀರ ದೊಡ್ಡ ಅಕ್ಷರಗಳನ್ನು ಬರೆಯುವದಾದರೂ ಅವರಿಗೆ ಒಂದು ದೊಡ್ಡ ಶ್ರಮದ ಕೆಲಸವೆಂದು ಅನಿಸುತ್ತಿರಲಿಕ್ಕೆ ಬೇಕು. ಕಾಪೀಬರೆಹದಂತೆ ಕೆಲವುಟ್ಟಿಗಾದರೂ ಇತರ ವೇಳೆಯ ಲೇಖನ ಕಾಲಕ್ಕೆ ಅಕ್ಷರಗಳ ಸೌಂದರ್ಯದ ಕಡೆಗೆ ಮಕ್ಕಳು ಜಾಗ್ರುತರಾಗಿದ್ದರೆ ಅವರ ಬರೆಹವು ಅಚ್ಚುಕಟ್ಟಾದದ್ದಾಗುವದು. ಪ್ರಾರಂಭದ ಕಾಪೀಬರೆಹದ ಪಾಠಗಳಲ್ಲಿ ಮುದ್ರಿತಪಟ್ಟ ಕಾಪಿಗಳಲ್ಲಿಯ ಅಕ್ಷರಗಳ ಮಾದರಿಗಿಂತಲೂ ಶಿಕ್ಷಕರು ಮಕ್ಕಳೆದುರಿಗೆ ಕರೀಹಲಗೆಯ ಮೇಲೆ ಬರೆದು ತೋರಿಸಿದ ಸಜೀವ ಅಕ್ಷರಗಳೇ ಇರಬೇಕೆಂದು ನಮ್ಮ ತಿಳಿವಳಿಕೆ. ಇನ್ನು ಕೆಲವು ಕಡೆಗೆ ಚಿತ್ರಗಳನ್ನಾಗಲಿ ಕಾಪಿಯ ಅಕ್ಷರಗಳನ್ನಾಗಲಿ ತೀಡುವ ರೂಢಿಯಿರುವದು. ಇದರಿಂದ ಯಾವ ಪ್ರಯೋಜನವೂ ಇರುವದಿಲ್ಲ. ಅಲ್ಲದೆ ಮಕ್ಕಳು ಅದರಲ್ಲಿ ಮನಸ್ಸನ್ನಿಡದೆ ಯಾಂತ್ರಿಕ ರೀತಿಯಿಂದ ಈ ಕೆಲಸವನ್ನು ಮಾಡುವರು. ಈ ಪ್ರಕಾರ ಮೇಲೆ ಹೇಳಿದ ಅನೇಕ ದೋಷಗಳಿರುವವು. ಇವುಗಳನ್ನು ತಪ್ಪಿಸುವದಕ್ಕಾಗಿ ಇಲ್ಲಿ ಕೆಲವು ಸೂಚನೆಗಳು ಕೊಟ್ಟಿವೆ.

೧. ಅಕ್ಷರಗಳನ್ನು ಕರೀ ಹಲಗೆಯ ಮೇಲೆ ಬರೆದು ತೋರಿಸಬೇಕು. ಆಗ ಮಕ್ಕಳು ಶಿಕ್ಷಕರು ಹೇಗೆ ಬರೆಯುವರೆಂಬದನ್ನು ಲಕ್ಷ್ಯಕೊಟ್ಟು ನಿರೀಕ್ಷಿಸಬೇಕು.

೨. ಗೆರೆ ಹೊಡೆದ ಕಾಪಿ ಪುಸ್ತಕಗಳು ಮಕ್ಕಳ ಕೈಯಲ್ಲಿರಬೇಕು. ಸರಿಯಾಗಿ ಕೆತ್ತಿದ ಲೆಕ್ಕಣಿಕೆಗಳೇ ಅವರ ಬಳಿಯಲ್ಲಿರಬೇಕು. ಈ ಕೆಲಸದ ಭಾರವು ಶಿಕ್ಷಕರ ಮೇಲೆಯೇ ಇರುವದು.

೩. ಮಕ್ಕಳು ಸರಿಯಾಗಿ ಕೂಡಬೇಕು; ಪುಸ್ತಕಗಳನ್ನೂ ಲೆಕ್ಕಣಿಕೆಗಳನ್ನೂ ಸರಿಯಾಗಿ ಹಿಡಿಯಬೇಕು.

೪. ಶಿಕ್ಷಕರು ಕರೀ ಹಲಗೆಯ ಮೇಲೆ ಬರೆದದ್ದನ್ನು ಮನಸ್ಸಿನಲ್ಲಿಟ್ಟುಕೊಂಡು ಆ ಪ್ರಮಾಣದ ಅಕ್ಷರಗಳನ್ನು ಮಕ್ಕಳು ಬರೆಯಬೇಕು. ನಡುನಡುವೆ ಮುಖಗಳನ್ನೆತ್ತಿ ಕರೀ ಹಲಗೆಯ ಕಡೆಗೆ ನೋಡಬಾರದು. ಪ್ರಾರಂಭ ಮಾಡಿದ ಅಕ್ಷರವು ಒಂದೇ ಪಟ್ಟಿಗೆ

ಪೂರ್ಣವಾಗಬೇಕು. ತಲೆಕಟ್ಟು, ಕೊಂಬು ಮೊದಲಾದವುಗಳನ್ನು ಮಾಡುವಾಗ ಕಾಗದಕ್ಕೆ ಹಚ್ಚಿದ ಲೆಕ್ಕಣಿಕೆಯನ್ನು ಎತ್ತಲು ಅಡ್ಡಿಯಿಲ್ಲ.

೫. ಶಿಕ್ಷಕರು ಮಕ್ಕಳ ಮಧ್ಯದಲ್ಲಿ ತಿರುಗಬೇಕು. ಹಾಗೂ ಸೂಚನೆಗಳನ್ನು ಕೊಡಬೇಕು. ಅಲ್ಲದೆ ಮಕ್ಕಳ ಕೈಯೊಳಗಿನ ಲೆಕ್ಕಣಿಕೆಯನ್ನು ಹಿಡಿದು ಮಕ್ಕಳಿಗೆ ಅಕ್ಷರಗಳ ರೂಢಿ ಮಾಡಿಸಬಾರದು. ಅಂದರೆ ಮಕ್ಕಳ ನಿರೀಕ್ಷಣ ಅನುಕರಣ ಶಕ್ತಿಗಳಿಗೆ ಗಮನವಿರಬೇಕು. ಅನೇಕರು ಒಂದೇತರದ ತಪ್ಪುಗಳನ್ನು ಮಾಡುತ್ತಿದ್ದರೆ, ಬರೆಯುವದನ್ನು ನಿಲ್ಲಿಸಿ, ಅವುಗಳನ್ನು ಕರೀಹಲಗೆಯ ಮೇಲೆ ಬರೆದು ತೋರಿಸಬೇಕು.

೬. ಅಕ್ಷರಗಳು ತೀರ ದೊಡ್ಡವು ಇರಕೂಡದು; ತೀರ ಸಣ್ಣವು ಇರಕೂಡದು. ತೀರ ಗಡಿಬಿಡಿಯಿಂದ ಬರೆಯಬಾರದು; ತೀರ ಸಾವಕಾಶ ಬರೆಯಬಾರದು.

೭. ಮುಖಗಳನ್ನು ಸೊಟ್ಟ ಮಾಡಬಾರದು; ನಾಲಗೆಯನ್ನು ತೆಗೆಯಬಾರದು.

೮. ಕೆಲವು ಮಕ್ಕಳು ಕಾಪೀಬರೆಹವನ್ನು ಚೆನ್ನಾಗಿ ಬರೆಯುತ್ತಿದ್ದರೂ ಇತರ ವೇಳೆಯಲ್ಲಿ ಅಕ್ಷರಗಳನ್ನು ಕೆಡಿಸಿಕೊಳ್ಳುವರು; ಇತ್ತಕಡೆಗೆ ಶಿಕ್ಷಕರು ಹೆಚ್ಚು ಜಾಗ್ರತರಾಗಿರಬೇಕು.

೯. ಕೆಲವು ವರ್ಗಗಳಲ್ಲಿ ಮೊದಲು ಕಚ್ಚಾ ಕೆಲಸ, ನಂತರ ಪಕ್ಕಾ ಕೆಲಸವೆಂದು ಅದೇ ಬರೆಹವು ಪುನಃ ಪುನಃ ಸಾಗುತ್ತವೆ. ವರ್ಗದಲ್ಲಿ ನಡೆಯುವ ಎಲ್ಲ ಬರೆಹವು ಯಾವಾಗಲೂ ಪಕ್ಕಾ ಇರತಕ್ಕದ್ದು. ಕಚ್ಚಾ ಕೆಲಸಕ್ಕೆ ಅಸ್ಪದವಿರಕೂಡದು; ಅಂದರೆ ಕಚ್ಚಾ ಕೆಲಸದಲ್ಲಿಯೂ ಬರೆಹವು ಅಸಡ್ಡಾಳವಾದದ್ದು ಇರಕೂಡದು.

೧೦. ಪರೀಕ್ಷಕರಿಗೆ ತೋರಿಸುವ ಬರೆಹವು ಒಂದು; ಸಾಮಾನ್ಯವಾಗಿ ಮಕ್ಕಳು ತಮಗಾಗಿ ರೂಢಿ ಮಾಡುವ ಬರೆಹವು ಒಂದು; ಹೀಗೆ ಭೇದ ಮಾಡಬಾರದು.

ನಿಬಂಧ

ಈ ವಿಷಯವು ನಮ್ಮ ಸಾಲೆಗಳಲ್ಲಿ ಸರಿಯಾಗಿ ಸಾಗುವದಿಲ್ಲೆಂದು ಹೇಳಲು ಖೇದವಾಗುತ್ತಿದ್ದರೂ ಹಾಗೆ ಮಾಡದೆ ಇರಲಾರೆವು. ಈ ವಿಷಯುವನ್ನು ಕುರಿತು ನಮ್ಮಲ್ಲಿ ಅಚ್ಚಾದ ಪುಸ್ತಕಗಳು ತೀರ ಕಡಿಮೆ. ಈಗ ಪ್ರಸಿದ್ಧವಾದ ಪುಸ್ತಕಗಳಲ್ಲಿ ವಿಷಯ ಸಂಗ್ರಹವು ಸಾಕಷ್ಟು ಇಲ್ಲ. ಈಗಿನ ಕಾಲದಲ್ಲಿ ಮಕ್ಕಳು ತಾವಾಗಿಯೇ ವಿಷಯವನ್ನು ತಿಳಿಯುತ್ತಿರಬೇಕು, ಶಿಕ್ಷಕರು ಅವರಿಗೆ ಆಗಾಗ ನೆರವಾಗಬೇಕೆನ್ನುವರಷ್ಟೇ ! ಅಲ್ಲದೆ ಈ ವಿಷಯವಾಗಿ ನಮ್ಮ ಮಕ್ಕಳಲ್ಲಿ ಯಾವತರದ ತಳಹದಿಯು ಇರುವದಿಲ್ಲ. ಅಂದರೆ ಮೇಲಿನ ವರ್ಗಗಳಲ್ಲಿ ಮಕ್ಕಳು ಬರುವವರೆಗೆ ನಿಬಂಧದ ಗಂಧವು ಕೂಡ ಅವರಿಗೆ ಸೋಂಕಿರುವದಿಲ್ಲ. ಯಾವದೊಂದು ಸಂಗತಿಯ ವಿಷಯವಾಗಿ ಮಕ್ಕಳಲ್ಲಿ ವಿಚಾರಸಂಗ್ರಹ ಅದರ ಕೂಡ ಪದಸಾಮಗ್ರಿ, ಅದಕ್ಕೆ ತಕ್ಕ ವಾಕ್ಯರಚನಾ ಸಾಮರ್ಥ್ಯ, ಇವು ಇದ್ದರೆ

ಈ ವಿಷಯವು ಸುಗಮವಾಗುವದು. ಮೊದಲಿನಿಂದ ಮಕ್ಕಳಿಗೆ ತಮ್ಮ ತಮ್ಮ ವಿಚಾರಗಳನ್ನು ತಮ್ಮ ಮಾತಿನಲ್ಲಿಯೇ ಹೇಳುವ ರೂಢಿಯನ್ನು ಮಾಡಿಕೊಟ್ಟರೆ ಮುಂದೆ ಅವರಿಗೆ ವಿಷಯವು ದುರ್ಗಮವಾಗಲಾರದು.

ಮಕ್ಕಳಲ್ಲಿ ಈ ಬಲ ಬರಬೇಕಾದರೆ ಶಿಕ್ಷಕರು ಬಾಲಕರ ವರ್ಗದಿಂದ ಮೇಲಿನ ಎಲ್ಲ ಇಯತ್ತೆಗಳಲ್ಲಿ ಕೆಳಗೆ ಕೊಟ್ಟ ವಿಷಯಗಳನ್ನು ಹೇಳುತ್ತಿರಬೇಕು. ಮೊದಲು ಕೆಲವು ಮಾತುಗಳನ್ನು ಬಾಯಿಂದ ಹೇಳಿಸಿ ಅಂದರೆ ವಾಚನಿಕ ನಿಬಂಧವನ್ನು ಮಾಡಿಸಿ ನಂತರ ಅವರ ಕಡೆಯಿಂದ ಪುಸ್ತಕಗಳಲ್ಲಿ ಬರಿಸುವ ರೂಢಿಯನ್ನು ಮಾಡಿಸಬೇಕು. ಶಬ್ದಸಂಗ್ರಹ, ತಕ್ಕ ವಾಕ್ಯರಚನೆ, ವಿಚಾರ, ವಿಘಟನಗಳಲ್ಲಿ ಶಿಕ್ಷಕರು ನೆರವಾಗಬಹುದು. ರೂಢಿ ಮಾಡಿಸುವ ವಿಷಯಗಳು:—

೧. ಕಥೆಯನ್ನು ಹೇಳಿ, ಅದರ ಸಾರಾಂಶವನ್ನು ಬಾಯಿಂದ ಕೇಳಿಕೊಂಡು, ಪುಸ್ತಕಗಳಲ್ಲಿ ಬರಿಸುವದು.

೨. ಎದುರಿನಲ್ಲಿಟ್ಟ ಚಿತ್ರವನ್ನು ನೋಡಿ ಕಥೆಯನ್ನು ಕಟ್ಟುವದು.

೩. ಎದುರಿನಲ್ಲಿದ್ದ ಚಿತ್ರದ ವರ್ಣನೆ ಮಾಡುವದು.

೪. ನೋಡಿದ ವಸ್ತುವರ್ಣನೆಯನ್ನು ಮಾಡುವದು.

೫. ನಡುನಡುವೆ ಬಿಟ್ಟ ಶಬ್ದಗಳನ್ನು ಹೊಂದಿಸಿ ಕಥೆಯನ್ನು ಪೂರ್ಣ ಮಾಡುವದು.

೬. ಅರ್ಧ ಹೇಳಿದ ಕಥೆಯನ್ನು ಮಕ್ಕಳು ತಮ್ಮ ಕಲ್ಪನಾಶಕ್ತಿಯನ್ನುಪಯೋಗಿಸಿ ಪೂರ್ಣ ಮಾಡುವದು.

೭. ಸಂಭಾಷಣೆಗಳಲ್ಲಿರುವ ಜನರ ಭಾಷೆಯಲ್ಲಿ ಮಾತಾಡುವದು.

೮. ಅಚೇತನ ವಸ್ತುಗಳು ಚೇತನಗಳೆಂದು ಮಾತಾಡುವದು.

೯. ಪತ್ರ ಬರೆಹ.

೧೦. ಹಬ್ಬ, ಉತ್ಸವ, ಜಾತ್ರೆಗಳ ವರ್ಣನೆ.

೧೧. ವಾಚನ ಪಾಠದ ಕಥೆಯನ್ನು ತಮ್ಮ ಭಾಷೆಯಲ್ಲಿ ಹೇಳುವದು; ಕವಿತೆಗಳ ಸಾರಾಂಶವನ್ನು ಬರೆಯುವದು.

೧೨. ಪ್ರವಾಸ, ವಾಚನಾಲಯ, ನೈರ್ಮಲ್ಯ ಮೊದಲಾದ ವಿಷಯಗಳ ಮೇಲೆ ನಿಬಂಧವನ್ನು ಬರಿಸುವದು.

ಈ ಪ್ರಕಾರ ಶಿಕ್ಷಕರು ಮೆಟ್ಟುಮೆಟ್ಟಿನಿಂದ ವಿಷಯಜ್ಞಾನ ಮಾಡಿಕೊಟ್ಟು ಬಾಯಿಂದ ಉತ್ತರಗಳನ್ನು ತೆಗೆದುಕೊಂಡು, ಮಕ್ಕಳಿಗೆ ಬರೆಯಲು ರೂಢಿಯನ್ನು ಮಾಡಿಸಬೇಕು. ಅವರು ಬರೆದ ಎಲ್ಲ ಪುಸ್ತಕಗಳನ್ನು ತಿದ್ದಿಕೊಡಬೇಕು. ಸಾಮಾನ್ಯ ತಪ್ಪುಗಳನ್ನು ವರ್ಗದಲ್ಲಿ ತಿಳಿಸಿ ಹೇಳಬೇಕು. ಹೀಗೆ ಮಾಡಿದರೆ ವ್ಯಾಕರಣ ಶುದ್ಧವಾದ ಭಾಷೆಯು ಮಕ್ಕಳಲ್ಲಿ ತಾನಾಗಿ ಹುಟ್ಟುವದು.

ಬಹುವ್ರೀಹಿ ಸಮಾಸ ವಿಚಾರ

ಲೇಖಕ: — ಪಂಡಿತ ಕೇಶವ ಶರ್ಮಾ, ಗಲಗಲಿ

ಅನ್ವಿತ ಪದಗಳ ಏಕೀಕರಣವೇ ಸಮಾಸವು. ಘಟಕ ಪದಗಳ ಪ್ರಾಧಾನ್ಯ ನಿಬಂಧನದಿಂದ ಸಮಾಸವನ್ನು ನಾಲ್ಕು ವಿಧವಾಗಿ ವಿಂಗಡಿಸುತ್ತಾರೆ.

(೧) ಪೂರ್ವ ಪದಾರ್ಥ ಪ್ರಧಾನವಾಗಿದ್ದರೆ ಅವ್ಯಯೀಭಾವ (೨) ಉತ್ತರ ಪದಾರ್ಥ ಪ್ರಧಾನವಾಗಿದ್ದರೆ ತತ್ಪುರುಷ (೩) ಉಭಯ ಪದಾರ್ಥ ಪ್ರಧಾನವಾಗಿದ್ದರೆ ದ್ವಂದ್ವ (೪) ಅನ್ಯಪದಾರ್ಥ ಪ್ರಧಾನವಾಗಿದ್ದರೆ ಬಹುವ್ರೀಹಿ. ಈ ವಿಭಾಗಪದ್ಧತಿಯೇ ಕಾರ್ಯಕಾರಿಯಾಗಿದೆ ಇದನ್ನೇ ಆಚಾರ್ಯ ಪಾಣಿನಿಯು ಆದರಿಸಿದ್ದಾನೆ. ಈ ವಿಭಾಗ ಪದ್ಧತಿಗೂ ಅಪವಾದಗಳಿವೆ. ಈ ನಿಯಮವೂ ವ್ಯಾಪಕವಾಗಿಲ್ಲ. ಎರಡು ಮೂರು, ಏಳೆಂಟು ಎಂಬ ಬಹುವ್ರೀಹಿಯು ಉಭಯ ಪದಾರ್ಥಪ್ರಧಾನವಾಗಿದೆ. ಕೇವಲ ಆ ಅಧಿಕಾರದಲ್ಲಿ ಆ ಆ ಕಾರ್ಯಗಳನ್ನುಂಟುಮಾಡಿಕೊಳ್ಳುವದಕ್ಕಾಗಿ ಆಚಾರ್ಯ ಪಾಣಿನಿಯು ತತ್ಪುರುಷಾದಿ ಸಂಜ್ಞೆಗಳನ್ನು ಮಾಡಿಕೊಂಡಿದ್ದಾನೆಂದು ತಿಳಿದುಕೊಳ್ಳಬೇಕು.

ವಿಶೇಷಣವಾಚಿಯಾದ ನಾಮಪದವು ಸಮಾನಾಧಿಕರಣವಿಶೇಷ್ಯವಾಚಿಯಾದ ಉತ್ತರಪದದೊಡನೆ ಸಮಾಸವಾದರೆ ಬಹುವ್ರೀಹಿ ಎನ್ನುವರು. ಬಹುವ್ರೀಹಿಯಲ್ಲಿ ಅನ್ಯಪದಾರ್ಥ ಗಮ್ಯಮಾನ (ತೋರುವದು) ವಾಗಿರಬೇಕು. ಪ್ರಥಮಾ ವಿಭಕ್ತಿಯು ಹೊರ್ತಾಗಿ ಉಳಿದ ವಿಭಕ್ತಿಗಳಲ್ಲಿ ಬಹುವ್ರೀಹಿ ಸಮಾಸವಾಗುವದು. ಪೀತವಾದ ಅಂಬರ (ಹಳದಿ ಬಟ್ಟೆ) ವು ಯಾವನಿಗೋ ಅವನು ಪೀತಾಂಬರನು (ಹರಿಯು). ಪ್ರಾಪ್ತವಾದ ಉದಕವು (ಯಾವ ಊರನ್ನು ಕುರಿತು) ಪ್ರಾಪ್ತೋದಕವಾದ ಗ್ರಾಮವು ದ್ವಿತೀಯಾ ಬಹುವ್ರೀಹಿ). ಊಢವಾದ ರಥವು ಏತರಿಂದೋ ಅದು ಊಢರಥವಾದ ಕುದುರೆ (ರಥವನ್ನು ಹೊರುವ ಕುದುರೆ) ತೃತೀಯಾ ಬಹುವ್ರೀಹಿ. ಉಪಹೃತವಾದ ಪಶುವು ಯಾವನಿಗೋ ಅವನು. ಉಪಹೃತ ಪಶು ರುದ್ರನು (ಪಶುವನ್ನು ರುದ್ರನಿಗೆ ಕಾಣಿಕೆ ಕೊಟ್ಟಿದೆ) ಚತುರ್ಥೀ (ಬಹುವ್ರೀಹಿ). ಯಾವ ಥಾಲಿಯಿಂದ ಓದನವನ್ನು (ಅನ್ನವನ್ನು) ಉದ್ಧರಿಸಿದುದೋ ಆ ಥಾಲಿಯು ಉದ್ಧೃತೋದನವಾದ ಥಾಲಿಯು. (ಪಂಚಮೀ ಬಹುವ್ರೀಹಿ) ಚಿತ್ರವಾದ ಗೋಗಳು ಯಾವನವೋ ಅವನು ಚಿತ್ರಗು (ದೇವದತ್ತನು) ಷ. ಬಹುವ್ರೀಹಿ. ಕರಿದು ಕೊರಲು ಆವನದೋ ಅವನು ಕರಿಗೊರಲನು (ಷ. ಬ.) ವೀರ ಪುರುಷರು ಯಾವ ಗ್ರಾಮದಲ್ಲಿಯೋ ಅದು ವೀರಪುರುಷಗ್ರಾಮವು. (ಸಪ್ತಮೀ ಬಹುವ್ರೀಹಿ).
* ಗ್ರಹಣ ವಿಷಯಕವಾದ ಪದವು ಸಪ್ತಮ್ಯಂತವಾಗಿ † ಪ್ರಹರಣ ವಿಷಯಕ

---

* ಗ್ರಹಣ=ಹಿಡಿಯುವದು. † ಪ್ರಹರಣ ಅಂದರೆ ಹೊಡೆಯುವದು.

ವಾಗ ಪದವು ತೃತೀಯಾಂತವಾಗಿ ಸರೂಪವಾಗಿರಬೇಕು. ಇಂತಹ ಯುದ್ಧವು ಪ್ರವೃತ್ತವಾಯಿತು ಈ ಅರ್ಥದಲ್ಲಿ ಕರ್ಮವ್ಯತೀಹಾರವು ತೋರುವಲ್ಲಿ ಬಹುವ್ರೀಹಿ ಸಮಾಸವಾಗುವದು.

ಏತರಲ್ಲಿ ಪರಸ್ಪರ ಗ್ರಹಣವನ್ನು ಮಾಡುವರೋ ಏತರಿಂದ ಪರಸ್ಪರರು ಪ್ರಹಾರವನ್ನು ಮಾಡುವರೋ, ಅಲ್ಲಿ ಪ್ರವರ್ತಮಾನವಾದ ಸರೂಪಪದವು ಅಲ್ಲಿಯೇ ಒದಗಿ ಬರುವ ನಾಮಪದದೊಡನೆ ಸಮಾಸವನ್ನು ಪಡೆಯುವದು. ಅನ್ಯಾರ್ಥವು ಯುದ್ಧವು ತೋರುತ್ತಿರಬೇಕೆಂದು ಶಾಸನಕಾರನು.

ಕರ್ಮ ವ್ಯತೀಹಾರ ಬಹುವ್ರೀಹಿಯಲ್ಲಿ ಪೂರ್ವ ಪದಾಂತವು ದೀರ್ಘವಾಗುತ್ತದೆ. ಕೇಶಗಳಲ್ಲಿ ಕೇಶಗಳಲ್ಲಿ ಹಿಡಿದು ಯಾವ ಯುದ್ಧವು ಪ್ರವೃತ್ತವಾದುದೋ ಅದು ಕೇಶಾಕೇಶಿ. ದಂಡಗಳಿಂದ ದಂಡಗಳಿಂದ ಹೊಡೆದು ಯಾವ ಯುದ್ಧವು ಪ್ರವೃತ್ತವಾದುದೋ ಅದು ದಂಡಾದಂಡಿ. ಮುಷ್ಟಿಯಿಂದ ಮುಷ್ಟಿಯಿಂದ ಹೊಡೆದು ಯಾವ ಯುದ್ಧವು ಪ್ರವೃತ್ತವಾದುದೋ ಅದು ಮುಷ್ಟೀ ಮುಷ್ಟಿ. ಇದರಂತೆ ಹಸ್ತಾಹಸ್ತಿ ಮುಸಲಾ ಮುಸಲಿ * ಕೋಲಿನಿಂದ ಕೋಲಿನಿಂದ ಹೊಡೆಯುವದು ಯಾವ ಯುದ್ಧದಲ್ಲಿಯೋ ಅದುವೆ ಕೋಲಾಕೋಲಿ. ಬಾಹೂಬಾಹವಿ. ಪ್ರತ್ಯುದಾಹರಣಗಳು:—ಪರಸ್ಪರವೆಂದೇಕೆ? ಕೋಲನ್ನು ಒಬ್ಬರೇ ಹಿಡಿದರೆ ಅದು ಕೋಲಾಕೋಲಿ ಯಾಗದು. ಹಲ್ಲನ್ನು ಹಲ್ಲವನ್ನು ಮೆಟ್ಟಿ ಮಾಡುವ ಯುದ್ಧವು ಸಮಾಸವಾಗಲಾರದು. ಯುದ್ಧವೇ ಏಕೆ ತೋರುತ್ತಿರಬೇಕು? ಕೈಯನ್ನು ಕೈಯನ್ನು ಹಿಡಿದು ಮಾಡುವ ವಿನೋದವು ಅಥವಾ ಆಟವು ಸಮಾಸವಾಗದು. ಸರೂಪವೆಂದೇಕೆ? ಕಯ್ಯನೋ ಕಾಲನೋ ಹಿಡಿದು ಮಾಳ್ಪ ಜಗಳವು ಇಲ್ಲಿ ಆಗದು.

ಬಹುವ್ರೀಹಿಯು ಉಪಮಾನ ಪೂರ್ವಪದವಾಗಿದ್ದರೆ ಉತ್ತರ ಪದಕ್ಕೆ ಲೋಪವುಂಟಾಗುವದು. ಉಷ್ಟ್ರ (ಒಂಟೆ) ದ ಮುಖದಂತೆ ಮುಖವು ಆವನದೋ ಅವನು ಉಷ್ಟ್ರಮುಖನು. ಮೃಗದ ಅಕ್ಷಿಯಂತೆ ಅಕ್ಷಿ (ಕಣ್ಣು)ಗಳು ಅವಳಿಗೋ ಅವಳು ಮೃಗಾಕ್ಷಿಯು.

ಅಪುತ್ರನೆಂಬಲ್ಲಿ ಅವಿದ್ಯಮಾನವಾದ ಪುತ್ರನು ಆವನಿಗೋ ಅವನು ಅಪುತ್ರನು ಎಂದು ವಿಗ್ರಹ ಮಾಡಬೇಕು. ಇದರಂತೆ ಅವಿದ್ಯಮಾನ ಭಾರ್ಯೆಯು ಆವನಿಗೋ ಅವನು ಅಭಾರ್ಯನು (ಹೆಂಡತಿಯಿಲ್ಲದವನು) ಎಂದು ಮಾಡಬೇಕು. ಇವೆಲ್ಲ ಸಂಸ್ಕೃತ ವ್ಯಾಕರಣದಲ್ಲಿ ಸಿದ್ಧಿಸುವವು. ವಿಸ್ತಾರಕ್ಕಿಲ್ಲಿ ಕಾರಣವಿಲ್ಲ.

---

* ಮುಸಲ = ಒನಕೆ.

ವಿಕಲ್ಪವಾಗಲಿ, ಸಂಶಯವಾಗಲಿ ತೋರುವಲ್ಲಿ ಸಾರಿ ಈ ಅರ್ಥವು ತೋರುವಲ್ಲಿ ಸಂಖ್ಯಾವಾಚಿಯಾದ ನಾಮಪದವು ಸಂಖ್ಯೇಯಾರ್ಥದಲ್ಲಿ ವರ್ತಮಾನವಾದ ಸಂಖ್ಯಾವಾಚಿಯಾದ ಉತ್ತರಪದ ನಾಮಪದದೊಡನೆ ಸಮಾಸವನ್ನು ಪಡೆಯುವದು.

ವಿಕಲ್ಪ ಸಂಶಯಗಳಲ್ಲಿ ಭೇದವುಂಟು. ಊಟಕ್ಕೆ ಮೊಸರನ್ನು ಆಗಲಿ ಹಾಲನ್ನಾಗಲಿ ತಕ್ಕೊಂಡು ಬಾ ಎಂಬಲ್ಲಿ ವಿಕಲ್ಪವು ಹಾಲೋ ಮೊಸರೋ ನಾನು ತಿಳಿಯಲಾರೆ. ದೇವರೋ ದೆವ್ವವೋ ನಾನು ತಿಳಿಯಲಾರೆನು ಎಂಬಲ್ಲಿ ಸಂಶಯವು. ವಿಕಲ್ಪವು ನಿರ್ಣಯರೂಪವಾಗಿರುವದು. ಸಂಶಯವು ಅನಿರ್ಣಯ ರೂಪವಾಗಿರುವದು.

ಎರಡಾಗಲಿ, ಮೂರಾಗಲಿ ವಿಕಲ್ಪಾರ್ಥದಲ್ಲಿ ಎರಡುಮೂರು, ಎರಡೋ ಮೂರೋ ಸಂಶಯಾರ್ಥದಲ್ಲಿ ಎರಡುಮೂರು. ನಾಲ್ಕೋ ಅಯ್ದೋ ನಾಲ್ಕಯ್ದು. ಹತ್ತೋ ಎಂಟೋ ಹತ್ತೆಂಟು. ಬಾರಿ ಈ ಅರ್ಥದಲ್ಲಿ–ಎರಡು ಸಾರಿ ಐದು ಈರೈದು. ಎರಡು ಸಾರಿ ಹತ್ತು ಇಪ್ಪತ್ತು. ಮೂರು ಸಾರಿ ಹತ್ತು ಮೂವತ್ತು. ಹತ್ತೂ ಮೂರೂ ಹದಿಮೂರು ದ್ವಂದ್ವ ಸಮಾಸವಾಗುವದು. ಆದರೆ ಮೂವತ್ತು ನಾಲ್ವತ್ತು ಅರುವತ್ತು ಇವು ಬಹುವ್ರೀಹಿ ಸಮಾಸವಾಗುವವು. ಪ್ರತ್ಯುದಾಹರಣಗಳು :— ವಿಕಲ್ಪ ಸಂಶಯಾರ್ಥಕಗಳೇ ಏಕೆ ಇರಬೇಕು, ಎರಡೂ ಮೂರೂ ; ಎರಡೇ ! ಮೂರೇ ! ಸಂಖ್ಯೇಯವೆಂದೇ ಏಕೆ ! ಹಾರುವರ ನೂರೋ ಐಯ್ವತ್ತೋ ! ಸಂಖ್ಯಾವಾಚಿಯಾದ ಉತ್ತರಪದದಿಂದೇಕೆ ! ಆನೆ ಎರಡೋ ಕಲ್ಲೋ. ಸಂಖ್ಯೆಯೆಂದೇಕೆ ! ಕುದುರೆಯೋ ಹತ್ತಾನೆಯೋ !

ಎರಡು ದಿಗ್ವಾಚಕ ಶಬ್ದಗಳು ನಡುವಿನ ದಿಕ್ಕನ್ನು ತೋರಿಸುವಲ್ಲಿ ಬ. ವ್ರೀ. ಸಮಾಸವನ್ನು ಪಡೆಯುವವು.

ಪೂರ್ವ ಮತ್ತು ಉತ್ತರ ದಿಕ್ಕಿನ ನಡುವಿನ ಮೂಲೆ ಉತ್ತರ ಪೂರ್ವವು (ಐಶಾನಿ.) ದಕ್ಷಿಣ ಪಶ್ಚಿಮ ದಿಕ್ಕುಗಳ ನಡುವಿನ ಮೂಲೆ ದಕ್ಷಿಣ ಪಶ್ಚಿಮ.

ಕನ್ನಡ ಕವಿತೆಗಳಲ್ಲಿ ಸಂಸ್ಕೃತ ಭಾಷೆಯು ಕೂಡಿಕೊಂಡಿದೆ. ಆದುದರಿಂದ ಕೆಲವು ಸಂಸ್ಕೃತ ಬಹುವ್ರೀಹಿ ಸಮಾಸಗಳ ವಿಗ್ರಹವನ್ನಷ್ಟೇ ಇಲ್ಲಿ ಬರೆಯುವೆವು.

ಹತ್ತರ ಸಮೀಪಕ್ಕೆ ಇರುವದು. ಉಪದಶ (ಒಂಬತ್ತು ಅಥವಾ ಹನ್ನೊಂದು. ಸುಮಾರು ಹತ್ತು.)

ಮೂವತ್ತಕ್ಕಿಂತ ದೂರಲ್ಲ, ಅದೂರ ತ್ರಿಂಶ. ಆಸನ್ನವಿಂಶ, ಸುಮಾರು ಇಪ್ಪತ್ತು. ಸ್ತ್ರೀಯು ಪ್ರಮಾಣವು ಯಾವನಿಗೋ ಅವನು ಸ್ತ್ರೀಪ್ರಮಾಣನು. ಪದ್ಮದಂತೆ ಗಂಧವು ಯಾವಳಿಗೋ ಅವಳು ಪದ್ಮಗಂಧಿ. ಮೂರ್ಖನಾದ ಭ್ರಾತಾರ (ತಮ್ಮನು) ನು ಆವನಿಗೋ ಅವನು ಮೂರ್ಖ ಭ್ರಾತೃಕನು. ಇತ್ಯಾದಿ.

ಹಿಂದುಸ್ತಾನದ ಪ್ರಾ. ಸ್ವರೂಪವೂ ಇತಿಹಾಸದ ಮೇಲೆ ಇದರಿಂದುಂಟಾದ ಪರಿಣಾಮವೂ

ಲೇಖಕರು :—ಶ್ರೀ. ಎ. ವ್ಹಿ. ಪ್ಯಾಥ್ಯು ಹಾಗು ಶ್ರೀ. ಆಯರ್. ಪಿ. ನಿಂಬಾಳಕರ.

(ಹಿಂದಿನ ಸಂಚಿಕೆಯಿಂದ ಮುಂದೆ ಸಾಗಿದ್ದು.)

೨. ಸಿಂಧು ಗಂಗಾ ನದಿಗಳ ಬೈಲು ಪ್ರದೇಶ:—ಸಿಂಧು ಗಂಗಾನದಿಗಳ ಬೈಲು ಪ್ರದೇಶವು ಹಿಂದುಸ್ತಾನದ ಉತ್ತರ ಭಾಗವನ್ನೆಲ್ಲ ಸಂಪೂರ್ಣವಾಗಿ ಆಕ್ರಮಿಸಿರುತ್ತದೆ. ಇದನ್ನು ಪಶ್ಚಿಮದಲ್ಲಿ ಕೀರ್ಥರ ಪರ್ವತಗಳೂ ಉತ್ತರದಲ್ಲಿ ಹಿಮಾಲಯವೂ ಪೂರ್ವದಲ್ಲಿ ಆಸಾಮದ ಗುಡ್ಡಗಳೂ ದಕ್ಷಿಣದಲ್ಲಿ ವಿಂಧ್ಯಪರ್ವತ ಛೋಟಾನಾಗಪುರದ ಗುಡ್ಡಗಳೂ ಸುತ್ತುಗಟ್ಟಿರುತ್ತವೆ. ಇದು ೧೯೦೦ ಮೈಲು ಉದ್ದವಿದ್ದು ಇದರ ಕ್ಷೇತ್ರಫಲವು ೩೦೦೦೦ ಚ. ಮೈಲಿರುತ್ತದೆ. ಈ ಬೈಲು ಪ್ರದೇಶವನ್ನು ಅರವಲೀ ಪರ್ವತಗಳು ಎರಡು ಭಾಗಗಳಾಗಿ ವಿಭಾಗಿಸುತ್ತವೆ. ಗಂಗೆಯ ತಗ್ಗು ಪ್ರದೇಶವು ದಕ್ಷಿಣಕ್ಕೆ ಕ್ರಮೇಣ ಎತ್ತರವಾಗುತ್ತ ನಡೆದು ಒಂದು ತ್ರಿಕೋಣಾಕೃತಿಯ ತಪ್ಪಲುಭೂಮಿಯನ್ನುಂಟುಮಾಡಿದೆ. ಸಿಂಧುವಿನ ತಗ್ಗು ಪ್ರದೇಶದ ದಕ್ಷಿಣ ಭಾಗವು ಬಹುತರ ಉಸುಕಿನ ಮರುಭೂಮಿ ಇರುತ್ತದೆ. ಸಿಂಧು ಗಂಗಾನದಿಗಳ ಬೈಲು ಪ್ರದೇಶದಲ್ಲಿ ಪಂಜಾಬು ಸಿಂಧ ಪ್ರಾಂತ, ದಿಲ್ಲಿ, ಆಗ್ರಾ ಅಯೋಧ್ಯಗಳ ಸಂಯುಕ್ತ ಪ್ರಾಂತ, ಬಿಹಾರ, ಬಂಗಾಲ ಪ್ರಾಂತಗಳು ಬರುತ್ತವೆ.

ಈ ಭಾಗದಲ್ಲಿ ಸಿಂಧು, ಗಂಗಾ, ಯಮುನಾ, ಗೋಗರಾ, ಗಂಡಕಿ, ಕಾಶಿ ಮೊದಲಾದ ನದಿಗಳು ಹರಿಯುತ್ತಿರುತ್ತವೆ. ಇತಿಹಾಸ ದೃಷ್ಟಿಯಿಂದ ಇವುಗಳಲ್ಲಿ ಸಿಂಧು, ಗಂಗಾ ಮತ್ತು ಸರಸ್ವತಿ ನದಿಗಳು ಬಹಳ ಮಹತ್ವದವಿರುತ್ತವೆ.

ಮೊಟ್ಟಮೊದಲು ಈ ದೇಶವನ್ನು ವಾಯುವ್ಯ ದಿಶೆಯಿಂದ ಅತಿ ಸಾಹಸದಿಂದ ಒಳನುಗ್ಗಿದ ಆರ್ಯರು ಪಂಜಾಬದಲ್ಲಿ ಸಿಂಧು ಮೊದಲಾದ ಸಪ್ತ ನದಿಗಳ ಮಹಾ ಜಲಾಶಯವನ್ನು ಕಂಡು, ಇಲ್ಲಿಯ ಸೃಷ್ಟಿಸೌಂದರ್ಯ, ಒಕ್ಕಲತನದ ಅನುಕೂಲತೆ, ಕುರಿದನಗಳಿಗೆ ಒಳ್ಳೇ ಹುಲ್ಲುಗಾವಲುಗಳನ್ನು ಕಂಡು ಬೆರಗಾಗಿ ಸರಸ್ವತೀ ನದಿಯ ತೀರದಲ್ಲಿ ತಮ್ಮ ಆದಿ ವಸಾಹತವನ್ನು ಸ್ಥಾಪಿಸಿ, ಈ ಪ್ರಾಂತಕ್ಕೆ ಸಿಂಧುವೆಂದು ಹೆಸರಿಟ್ಟರು. ಸಿಂಧುವೆಂದರೆ ಸಮುದ್ರ. ಮುಂದೆ ಈ ದೇಶಕ್ಕೆ ದಂಡೆತ್ತಿ ಬಂದ ಇರಾಣಿಯರು ಸಿಂಧುವನ್ನು ಹಿಂದುವೆಂದು ಕರೆಯಹತ್ತಿದರು. ಬರಬರುತ್ತ ಈ ಹೆಸರು ಈ ದ್ವೀಪಕಲ್ಪಕ್ಕೆಲ್ಲ ಬಂದು ಈಗ ಈ ದೇಶಕ್ಕೆ ಹಿಂದುಸ್ತಾನವೆಂದು ಹೇಳುತ್ತಿರುತ್ತಾರೆ. ಆರ್ಯರು ಸರಸ್ವತೀ ನದಿಯ ತೀರದಲ್ಲಿ ನೂರಾರು ವರ್ಷಗಳವರೆಗೆ ಇದ್ದರು. ಇವರು ಸೃಷ್ಟ್ಯೋ

ವಾಸಕರಿದ್ದ ಮೂಲಕ ಈ ನದಿಯನ್ನು ವಿದ್ಯಾದೇವತೆಯೆಂದು ಭಾವಿಸಿದರು. ಮುಂದೆ ಇವರು ಕ್ರಮೇಣ ಆಗ್ನೇಯದಿಶೆಯಿಂದ ಮುಂದೆ ಸಾಗುತ್ತ ಗಂಗೆಯ ಬೈಲನ್ನು ಸೇರಿದರು. ಸದಾ ತುಂಬಿ ಹರಿಯುವ ಗಂಗೆಯ ಮಹತ್ವವು ಅಷ್ಟಿಷ್ಟಲ್ಲ, ಇದರ ತೀರವು ಬಹು ಬೆಳೆಯುಳ್ಳದ್ದು. ಸಿಂಧದಂತೆ ಉಗ್ರವಾದದ್ದಲ್ಲ. ಅತಿ ಮಂದಗತಿಯಿಂದ ಗಂಭೀರವಾಗಿ ಹರಿಯುವಂಥಾದ್ದು. ನೌಕಾಗಮನಕ್ಕೆ ಯೋಗ್ಯವಾದದ್ದು. ಇವೆಲ್ಲ ಕಾರಣಗಳಿಂದ ಗಂಗಾ ತೀರವು ಇವರಿಗೆ ಅತಿಪ್ರಿಯದೇಶವಾಯಿತು. ಹೀಗಾಗಿ ಇಲ್ಲಿಯೇ ಪೌರಾಣಿಕ ರಾಜ್ಯಗಳಲ್ಲದೆ ಮೌರ್ಯ, ಗುಪ್ತ ಮೊದಲಾದ ಅನೇಕ ಪ್ರಾಚೀನರಾಜ್ಯಗಳು ಉದಯವಾದವು. ದೊಡ್ಡ ದೊಡ್ಡ ಪಟ್ಟಣಗಳು ಕಟ್ಟಲ್ಪಟ್ಟವು. ಹಿಂದುಸ್ಥಾನದಲ್ಲಿ ನೆಲೆಗೊಂಡ ಆರ್ಯ ಸಂಸ್ಕೃತಿಯು ಇಲ್ಲಿಯೇ ಪ್ರಾರಂಭವಾಯಿತು. ಹಿಂದುಸ್ಥಾನದ ಸಾರ್ವಭೌಮತ್ವಕ್ಕಾಗಿ ಇದರ ನೆರೆಯಲ್ಲಿಯೇ ಅನೇಕ ಘನಘೋರ ಸಂಗ್ರಾಮಗಳಾದವು. ಹೀಗೆ ಗಂಗಾ ತೀರವು ಸರ್ವರ ಅಭಿಮಾನದಾಗರವಾಗಿ ಇದು ದೇವಮಾಲಿಕೆಯಲ್ಲಿ ಸೇರಿಸಲ್ಪಟ್ಟಿತು. ಹಿಮಾಲಯವನ್ನು ಈ ಮೊದಲೇ ಶಿವ ಎಂಬ ಹೆಸರಿನಿಂದ ಪೂಜಿಸತೊಡಗಿದ್ದರು. ಗಂಗೆಯು ಹಿಮಾಲಯದಲ್ಲಿ ಉಗಮಿಸಿದ್ದರಿಂದ ಇದನ್ನು ಶಿವನಹೆಂಡತಿ ಎಂದು ಹೇಳ ತೊಡಗಿದರು. ಇದಕ್ಕಿರುವ ಇತರ ಹೆಸರುಗಳೆಲ್ಲ ಹಿಮಾಲಯಕ್ಕೂ ಈ ನದಿಗೂ ಇರುವ ಸಂಬಂಧವನ್ನು ವ್ಯಕ್ತಪಡಿಸುತ್ತವೆ.

೩. **ದಕ್ಷಿಣ ತಪ್ಪಲದ ಭೂಮಿ:**-ಇದು ವಿಂಧ್ಯಾದ್ರಿಯ ದಕ್ಷಿಣಕ್ಕೆ ನೀಲಗಿರಿಯ ವರೆಗೆ ಪೂರ್ವ ಪಶ್ಚಿಮ ಘಟ್ಟಗಳ ಮಧ್ಯದಲ್ಲಿರುತ್ತದೆ. ಇದರಲ್ಲಿ ವರ್ಹಾಡ, ನಿಜಾಮನ ರಾಜ್ಯ, ಮಹಾರಾಷ್ಟ್ರ, ಮುಂಬಯಿ ಕರ್ನಾಟಕ, ಮೈಸೂರುಪ್ರಾಂತ, ಕೊಡಗು ದೇಶಗಳು ಬರುತ್ತವೆ. ಇಲ್ಲಿ ಗೋದಾವರಿ, ಕೃಷ್ಣಾ, ತುಂಗಭದ್ರಾ, ಕಾವೇರಿ ಮೊದಲಾದ ನದಿಗಳು ಹರಿಯುತ್ತವೆ.

ಈ ತಪ್ಪಲು ಭೂಮಿಯು ಪೌರಾಣಿಕ ಕಾಲದಲ್ಲಿ ದಟ್ಟವಾದ ಅರಣ್ಯದಿಂದ ತುಂಬಿತ್ತು. ವಿಂಧ್ಯೆಯು ಉತ್ತರದ ದಾಳಿಗಳನ್ನು ತಡೆದು ನಿಲ್ಲಿಸಿತು. ಹೀಗಾಗಿ ಆರ್ಯರು ಉತ್ತರ ಹಿಂದುಸ್ಥಾನವನ್ನು ವ್ಯಾಪಿಸಿ ಅನೇಕ ಶತಮಾನಗಳ ವರೆಗೆ ದಕ್ಷಿಣ ಹಿಂದುಸ್ಥಾನಕ್ಕೆ ಬಂದಿರಲಿಲ್ಲ. ಅಗಸ್ತ್ಯ ಮುನಿಯು ದಕ್ಷಿಣಕ್ಕೆ ಬಂದ ಮೊದಲನೇ ಆರ್ಯವಂಶಜನಂತೆ. ಇವನು ತನ್ನ ಅನೇಕ ಶಿಷ್ಯರೊಂದಿಗೆ ದಕ್ಷಿಣಕ್ಕೆ ಸಾಗಿ ಇಲ್ಲಿ ತನ್ನ ಆಶ್ರಮವನ್ನು ಹಾಕಿದನೆಂದು ಹೇಳುತ್ತಾರೆ. ಆ ಕಾಲಕ್ಕೆ ಇಲ್ಲಿ ಇದ್ದ ದ್ರಾವಿಡರಿಗೂ ಇವರಿಗೂ ಮೇಲಿಂದ ಮೇಲೆ ಕಾಳಗಗಳಾಗಿದ್ದು ದ್ರಾವಿಡರನ್ನು ಆರ್ಯ ಗ್ರಂಥಕಾರರು ರಾಕ್ಷಸರೆಂತಲೂ ಇಲ್ಲಿಯ ಮೂಲ ನಿವಾಸಿಗಳನ್ನು ವಾನರರೆಂತಲೂ ಕರೆದಿರುತ್ತಾರೆ. ಇವೆರಡೂ ಜನಾಂಗಗಳ ಧರ್ಮಗಳು ಬೇರೆ ಬೇರೆ ಇದ್ದದರಿಂದ ಇವರಲ್ಲಿ

ಅನೇಕ ಧರ್ಮ ಯುದ್ಧಗಳಾಗಿರುತ್ತವೆ. ರಾಮರಾವಣರ ಯುದ್ಧವು ಇದಕ್ಕೆ ಉತ್ತಮ ಉದಾಹರಣವು. ಕಾಲಗತಿಯಿಂದ ದ್ರವಿಡರು ಆರ್ಯದೇವತೆಗಳಿಗೆ ಶರಣು ಹೊಕ್ಕರು; ದ್ರವಿಡ ಧರ್ಮದ ಕಲ್ಪನೆಗಳೆಷ್ಟೋ ಆರ್ಯರಲ್ಲಿ ಸೇರಿ ಹೋದವು. ಆದರೂ ದಾಕ್ಷಿಣಾತ್ಯರ ಹೋಲಿಕೆ, ಇರವು, ಆಚಾರಗಳು ಔತ್ತರಾತ್ಯರ ಹೋಲಿಕೆ, ಇರವು ಆಚಾರಗಳಿಂದ ಭಿನ್ನವಾಗಿರುತ್ತವೆ.

ಇಲ್ಲಿ ಪೌರಾಣಿಕ ಕಾಲದಲ್ಲಿ ಅನೇಕ ದ್ರವಿಡ ಹಾಗೂ ಮೂಲನಿವಾಸಿಗಳ ರಾಜ್ಯಗಳಿದ್ದವೆಂದು ಕಾಣುತ್ತದೆ. ಆದರೆ ಆ ರಾಜ್ಯಗಳು ಮತ್ತು ಅವುಗಳ ವಿಸ್ತಾರ, ಇವುಗಳ ಬಗ್ಗೆ ನಿಶ್ಚಯಾತ್ಮಕವಾಗಿ ಹೇಳಲಿಕ್ಕೆ ಬರುವದಿಲ್ಲ. ಆದರೆ ಕ್ರಿಸ್ತ ಶಕದ ಆರಂಭದಲ್ಲಿ ಇಲ್ಲಿ ಆಂಧ್ರ ಭೃತ್ಯರು ಸಾರ್ವಭೌಮರಾಗಿದ್ದರು. ಇವರ ನಂತರ ಈ ತಪ್ಪಲು ಭೂಮಿಯಲ್ಲಿ ಚಾಲುಕ್ಯರು, ರಾಷ್ಟ್ರಕೂಟರು, ಕದಂಬರು, ಯಾದವರು ಒಂದೊಂದು ಕಾಲದಲ್ಲಿ ಸಾರ್ವಭೌಮರಾಗಿದ್ದರು. ಮತ್ತು ಇವರೆಲ್ಲರೂ ತಮ್ಮ ತಮ್ಮೊಳಗೆ ಬಡೆದಾಡುವದರಲ್ಲಿಯೇ ವೇಳೆ ಕಳೆದರು. ಇವರಲ್ಲಿ ಚಾಲುಕ್ಯರು ಮಾತ್ರ ಒಂದು ಕಾಲಕ್ಕೆ ದಕ್ಷಿಣ ಹಿಂದುಸ್ಥಾನವನ್ನೆಲ್ಲ ಪಾದಾಕ್ರಾಂತ ಮಾಡಿದ್ದಲ್ಲದೆ ಉತ್ತರ ಹಿಂದುಸ್ಥಾನದಲ್ಲಿಯೂ ಅಭಿಯೋಗ ಮಾಡಿ ಬಹಳ ಸೀಮೆಯನ್ನು ಸಂಪಾದಿಸಿದ್ದರು. ಈ ಎಲ್ಲ ರಾಜ್ಯಗಳು ಕ್ರಮೇಣ ಅಸ್ತವಾಗುತ್ತ ಕಡೆಯಲ್ಲಿ ಮುಸಲ್ಮಾನರ ದಾಳಿಗಳಿಂದ ಪೂರಾ ಹಾಳಾಗಿ ಹೋದವು.

೪. **ಸಮುದ್ರ ಕರಾವಳಿಯ ಪ್ರದೇಶ** –ಹಿಂದುಸ್ಥಾನವು ಮೂರು ನಿಟ್ಟುಗಳಲ್ಲಿ ಸಮುದ್ರದಿಂದ ಸುತ್ತುಗಟ್ಟಲ್ಪಟ್ಟಿರುತ್ತದೆ. ಮತ್ತು ಈ ಸಮುದ್ರಕ್ಕೆ ಸಮಾಂತವಾಗಿ ಪಶ್ಚಿಮ ನಿಟ್ಟಿನಲ್ಲಿ ೨೦ ರಿಂದ ೬೦ ಮೈಲುಗಳ ಅಂತರದಲ್ಲಿ ಪಶ್ಚಿಮ ಘಟ್ಟಗಳು ಪೂರ್ವ ನಿಟ್ಟಿನಲ್ಲಿ ೧೦೦-೨೦೦ ಮೈಲುಗಳ ಅಂತರದಲ್ಲಿ ಪೂರ್ವ ಘಟ್ಟಗಳೂ ಹಬ್ಬಿರುತ್ತವೆ. ಪಶ್ಚಿಮ ಕರಾವಳಿಯಲ್ಲಿ ಅಲ್ಲಲ್ಲಿಗೆ ಚಿಕ್ಕ ಚಿಕ್ಕ ನದಿಗಳು ಹರಿಯುತ್ತವೆ. ಸಹ್ಯಾದ್ರಿಯು ಈ ಕರಾವಳಿಗಳಿಗೂ ದಕ್ಷಿಣದ ತಪ್ಪಲಿಗೂ ಮಧ್ಯದಲ್ಲಿ ಇದ್ದು ಇವೆರಡೂ ಕಡೆಗಳ ಜನರಲ್ಲಿಯ ಹೊಕ್ಕುಬಳಿಕೆಯನ್ನು ನಿಲ್ಲಿಸಿ ಇವೆರಡೂ ಕಡೆಗಳ ಜನರಲ್ಲಿ ವ್ಯತ್ಯಾಸವನ್ನುಂಟು ಮಾಡಿರುತ್ತದೆ. ಪೂರ್ವದ ಕರಾವಳಿಯು ವಿಸ್ತಾರವಾದದ್ದಿದ್ದು ಇದಕ್ಕೂ ತಪ್ಪಲು ಭೂಮಿಗೂ ಮಧ್ಯದಲ್ಲಿ ಹಬ್ಬಿದ ಪೂರ್ವ ಘಟ್ಟವು ಅಲ್ಲಲ್ಲಿಗೆ ಬಿಡಿಬೆಟ್ಟಗಳಾಗಿ ಹಬ್ಬಿದ್ದು ಪಶ್ಚಿಮಘಟ್ಟದಲ್ಲಿ ಹುಟ್ಟಿದ ನದಿಗಳಿಗೆ ಸಮುದ್ರಕ್ಕೆ ಸೇರಲು ಮಾರ್ಗಗಳನ್ನುಂಟು ಮಾಡಿರುತ್ತದೆ. ಇಲ್ಲಿಯ ಜನರಿಗೂ ದಕ್ಷಿಣದ ತಪ್ಪಲಿನ ಜನರಿಗೂ ಹೊಕ್ಕುಬಳಿಕೆಗೆ ಬಹಳ ಅಭ್ಯಂತರವಿಲ್ಲದ್ದರಿಂದ ಇವೆರಡೂ ನಿಟ್ಟಿನ ಜನರಲ್ಲಿ ವಿಶೇಷ ಅಂತರವಿರುವದಿಲ್ಲ. ಈ ಕರಾವಳಿಯ ದಕ್ಷಿಣ ಭಾಗವು ದ್ರವಿಡರ ಮೂಲ ನೆಲೆಯಾಗಿತ್ತು. ಇಲ್ಲಿ ಪೌರಾಣಿಕ ಕಾಲದಿಂದ ದ್ರವಿಡ ರಾಜ್ಯಗಳಾದ ಚೋಳ, ಪಾಂಡ್ಯ, ಪಲ್ಲವ ರಾಜ್ಯಗಳು

ಇದ್ದು ಇವು ನಿರಂತರ ತಮ್ಮೊಳಗೆ ಬಡಿದಾಡುತ್ತಿದ್ದವಲ್ಲದೆ ಕರ್ನಾಟಕದಲ್ಲಿದ್ದ ಚಾಲುಕ್ಯ, ರಾಷ್ಟ್ರಕೂಟ ಮೊದಲಾದ ರಾಜ್ಯಗಳೊಂದಿಗೆ ಹೊಡೆದಾಡುತ್ತ ೧೩ನೆಯ ಶತಮಾನದ ವರೆಗೂ ಅಸ್ತಿತ್ವದಲ್ಲಿದ್ದು ಮುಸಲ್ಮಾನರ ಹೊಡತಕ್ಕೀಡಾಗಿ ಹಾಳಾಗಿ ಹೋದವು. ಪೂರ್ವ ಕರಾವಳಿಯ ಜನರು ಸಿಂಹಳದ್ವೀಪ, ಸುಮಾತ್ರಾ, ಜಾವಾ ಮೊದಲಾದ ಪೂರ್ವದ್ವೀಪ ಗಳೊಂದಿಗೆ ವ್ಯಾಪಾರ ಮಾಡುತ್ತಿದ್ದರು.

ಹಿಂದುಸ್ತಾನದಲ್ಲಿ ನೆಲೆಗೊಂಡಿದ್ದ ಹಿಂದೂ ಧರ್ಮವು ಈಗಿನ ಸ್ವರೂಪಕ್ಕೆ ಬರ ಲಿಕ್ಕೆ ಅನೇಕ ಕಾರಣಗಳಿರುತ್ತವೆ. ಉತ್ತರದಲ್ಲಿ ಜೈನ ಮತ್ತು ಬೌದ್ಧ ಧರ್ಮಗಳಿಂದ ಹಿಂದೂ ಧರ್ಮದಲ್ಲಿ ಮಾರ್ಪಾಟವಾಯಿತೆಂಬದು ಎಲ್ಲರಿಗೂ ಒಪ್ಪಿಗೆಯಾದ ಮಾತೇ ಸರಿ. ತದ್ರೋಪಾದಿಯಲ್ಲಿ ಕ್ರೈಸ್ತ ಧರ್ಮವೂ ಹಿಂದೂ ಧರ್ಮದ ಸ್ವರೂಪದಲ್ಲಿ ಹೆಚ್ಚು ಕಡಿಮೆಯನ್ನುಂಟು ಮಾಡಿರುತ್ತದೆಂದು ಹೇಳಬಹುದು. ಕ್ರಿ. ಶ. ೧ನೆಯ ಶತಮಾನದ ಮಧ್ಯದಲ್ಲಿ ಕ್ರೈಸ್ತ ಧರ್ಮವು ಪಶ್ಚಿಮ ಕರಾವಳಿಯಲ್ಲಿ ಪಸರಿಸಿತು. ಯೇಸುಕ್ರಿಸ್ತನ ಶಿಷ್ಯತೋಮನು ಈ ಧರ್ಮವನ್ನು ಇಲ್ಲಿಗೆ ತಂದನೆಂದು ಹೇಳುತ್ತಾರೆ. ಮುಂದೆ ಈ ಧರ್ಮವು ದಕ್ಷಿಣ ಕರಾವಳಿಯ ಮುಖ್ಯ ಧರ್ಮಗಳಲ್ಲೊಂದಾಗಿ ಪಲ್ಲಟಿಸಿತು.

ಇದೇ ಸುಮಾರಿಗೆ ಅಥವಾ ಇದಕ್ಕೂ ಪೂರ್ವದಲ್ಲಿ ಯೆಹೂದಿಯರು ವ್ಯಾಪಾರದ ನಿಮಿತ್ತವಾಗಿ ಪಾಲೆಸ್ತಾಯಿನದಿಂದ ಗುಳೆ ತೆಗೆದು ಮಲಬಾರದ ದಕ್ಷಿಣದಲ್ಲಿ ಕೋಚೀನ ದಲ್ಲಿ ಬಂದು ನೆಲಿಸಿದರು. ಇವರಲ್ಲಿ ಕರಿ ಯೆಹೂದಿಯರೆಂದು ಬಿಳಿ ಯೆಹೂದಿಯ ರೆಂದೂ ಎರಡು ಪಂಗಡಗಳಿರುತ್ತವೆ. ಕರಿ ಯೆಹೂದಿಯರು ಇಲ್ಲಿಗೆ ಬಂದದ್ದು ಮೊದಲು. ಇವರು ಹಿಂದುಸ್ತಾನಕ್ಕೆ ಬಂದು ಎರಡು ಸಾವಿರ ವರ್ಷಗಳಾದಾಗ್ಯೂ ಹಿಂದು ಸ್ಥಾನದ ಹವೆಯಿಂದ ಇವರ ಮುಖಚರ್ಯದಲ್ಲಿ ಸ್ವಲ್ಪವಾದರೂ ಬದಲಾಗದೆ ಇವ ರಿರುವ ಬೀದಿಗಳಲ್ಲಿ ಇವರನ್ನು ನೋಡಿದರೆ ಯರೂಸಲೇಮಿನ ಬೀದಿಗಳಲ್ಲಿ ಇವರನ್ನು ಕಂಡಂತೆ ಭಾಸವಾಗುತ್ತದೆ. ಮುಂದೆ ಕೆಲಕಾಲದನಂತರ ಕೆಲ ಯೆಹೂದಿಯರು ಮುಂಬಯಿ ಪುಣೆಗಳಲ್ಲಿ ಬಂದು ನೆಲಿಸಿದರು.

೭ನೇ ಶತಮಾನದ ಮಧ್ಯದಲ್ಲಿ ಇರಾಣಿಯರು ಮುಸಲ್ಮಾನರ ಉಪಟಳದಿಂದ ಅವರ ಕಾಟತಪ್ಪಿಸಿಕೊಳ್ಳುವದಕ್ಕಾಗಿ ಖಂಬಾಯತ ಅಖಾತದಲ್ಲಿರುವ ಸಂಜಾನಾ ಬಂದರದಲ್ಲಿ ಬಂದಿಳಿದರು. ಇವರು ಈಗ ಮುಂಬಯಿ, ಸುರತ, ಅಹಮ್ಮದಾಬಾದ ಮೊದ ಲಾದ ಪಟ್ಟಣಗಳಲ್ಲಿ ಪ್ರಮುಖ ವ್ಯಾಪಾರಸ್ಥರಾಗಿರುವರು.

ಈ ಪ್ರಕಾರ ಪಶ್ಚಿಮ ಕರಾವಳಿಯಲ್ಲಿ ಪರದೇಶಗಳ ಜನರು ಬಂದು ವಾಸ ಮಾಡಿದ್ದು ಈ ನಿಟ್ಟಿನವರು ಪಶ್ಚಿಮದೇಶಗಳವರೊಂದಿಗೆ ಅತಿ ಪ್ರಾಚೀನ ಕಾಲದಿಂದಲೇ ವ್ಯಾಪಾರ ಮಾಡುತ್ತಿದ್ದರೆಂಬದಕ್ಕೆ ಸಾಕ್ಷಿಗಳಾಗಿರುತ್ತವೆ.

ಫಿಲಿಫಾಯಿನ ದ್ವೀಪಗಳು

(ಒಂದು ಮಹಾರಾಷ್ಟ್ರಭಾಷೆಯ ಲೇಖನದ ಆಧಾರದಿಂದ ಬರೆದದ್ದು)

ಈ ದ್ವೀಪಗಳು ಹಿಂದುಸ್ಥಾನದ ಪೂರ್ವ ದಿಕ್ಕಿಗೆ ಪ್ಯಾಸಿಫಿಕ್ ಮಹಾಸಾಗರದಲ್ಲಿ ಅವೆ. ಅವುಗಳ ಒಟ್ಟು ಸಂಖ್ಯೆಯು ೭೦೮೩ ಅದೆ. ಅವುಗಳಲ್ಲಿ ಬಹಳ ದ್ವೀಪಗಳು ತೀರ ಸಣ್ಣವು. ಲೂರ್ಝೋನ ಮಿಂಡೋನ ಈ ದ್ವೀಪಗಳು ಮಾತ್ರ ದೊಡ್ಡವಿರುತ್ತವೆ. ಅವುಗಳ ಕ್ಷೇತ್ರಫಲವು ಸರಾಸರಿ ೪೦ ಸಾ. ಚೌ ಮೈಲು ಅದೆ.

೧. ಜನಸಂಖ್ಯೆ, ಜನಾಂಗ ಇತ್ಯಾದಿ— ಲೂರ್ಝೋನ ದ್ವೀಪದ ವಸತಿಯು ಒಟ್ಟು ದ್ವೀಪಗಳ ಜನಸಂಖ್ಯೆಯ ಅರ್ಧದಷ್ಟು ಮಾತ್ರ ಅದೆ. ಮಿಂಡನೋ ದ್ವೀಪವು ಸ್ವಭಾವಸಿದ್ಧವಾದ ಸುಂದರ ಸ್ಥಳದಲ್ಲಿದೆ. ಅಲ್ಲಿಯೂ ಜನಸಂಖ್ಯೆಯು ಚೆನ್ನಾಗಿ ನೆಲಸಿದೆ. ಫಿಲಿಫೈನ ದ್ವೀಪಗಳ ಒಟ್ಟು ಜನಸಂಖ್ಯೆಯು ೧ ಕೋಟಿ ೫ ಲಕ್ಷವಿದೆ. ಈ ಜನಸಂಖ್ಯೆಯಲ್ಲಿ ೪೭ ಬೇರೆ ಬೇರೆ ಜಾತಿಗಳ ಜನರಿದ್ದಾರೆ. ೮೦ ಭಾಷೆಗಳು ಅಲ್ಲಿ ನಡೆಯುತ್ತವೆ. ಅಲ್ಲಿಯ ಪ್ರಜೆಗಳಲ್ಲಿ ಸ್ವಧರ್ಮದ ಬಂಧನವು ವಿಶೇಷ ಬಿಗಿಯಾಗಿರದ್ದರಿಂದ ಕ್ರೈಸ್ತ ಧರ್ಮವೇ ಬಲುಬೇಗ ವ್ಯಾಪಿಸಿವೆ. ಅದರಲ್ಲಿ ೧೦೦ಕ್ಕೆ ೮೦ರಂತೆ ಜನರು ಕ್ರಿಸ್ತೀಧರ್ಮಕ್ಕೆ ಸೇರಿದ್ದಾರೆ. ಉಳಿದವರು ಮುಸಲ್ಮಾನೀ, ಬೌದ್ಧ (ಚೀನೀ) ಮೂಲ ಜನ (ಕಾಡುಧರ್ಮ) ಇತ್ಯಾದಿ ಮತಾವಲಂಬಿಗಳಾಗಿದ್ದಾರೆ. ಸುಮಾರು ೩ ಲಕ್ಷ ಮುಸಲ್ಮಾನರು ಇದ್ದಾರೆ. ಚೀನೀಜನರಾದರೂ ೧ ಲಕ್ಷ ಇರುವರು. ಚೀನೀ ಜನರು ನಮ್ಮ ದೇಶದ ಮಾರವಾಡಿಗಳಂತೆ ಬರಿಗೈಯಿಂದ ಇಲ್ಲಿಗೆ ಬಂದು ವ್ಯಾಪಾರ ಮಾಡಿ ಲಕ್ಷಾಧೀಶರಾಗಿದ್ದಾರೆ. ತೀರ ಸಣ್ಣ ಕಿರಾಣಿ ಜಿನಸುಗಳಿಂದ ಮುತ್ತು ಬಂಗಾರಗಳ ವರೆಗೆ ಎಲ್ಲ ಜಿನಸುಗಳ ವ್ಯಾಪಾರವು ಚೀನೀಯರ ಕೈಯಲ್ಲಿಯೇ ಅದೆ.

೨. ಬೆಳೆ— ಮುಸಲ್ಮಾನರು ಮಿಂಡನೋ, ಸುಲು ಈ ಭಾಗಗಳಲ್ಲಿ ವಾಸಿಸುತ್ತಾರೆ. ಈ ಭಾಗವು ನಂದನವನದಂತೆ ಫಲಕಾರಿಯಾಗಿದೆ. ಈ ದ್ವೀಪಗಳು ವಿಷುವೃತ್ತಕ್ಕೆ ಸಮೀಪಿಸಿದ್ದರಿಂದಲೂ ಆಗ್ನೇಯದ ಮಾನ್ಸೂನಗಾಳಿಗೆ ನಿಲುಕುವದರಿಂದಲೂ ಮಳೆಯು ನಿಜ ಚೀನಭಾಗದಂತೆ ಚೆನ್ನಾಗಿ ಆಗುತ್ತದೆ. ಉಷ್ಣ ಕಟಿಬಂಧದ ಎಲ್ಲ ಪೈರುಗಳ ಅಂದರೆ ತಂಬಾಕು, ತೆಂಗು, ಬಾಳೆ, ಭತ್ತ, ಮಸಾಲೆ ಸಾಮಾನುಗಳು ಮುಂತಾದವುಗಳ ಬೆಳೆಯುತ್ತವೆ. ಇಲ್ಲಿ ಸರ್ವೋತ್ಕೃಷ್ಟವಾದ ನಾರು ಸಿದ್ಧವಾಗುತ್ತದೆ. ತರತರ ಕಾಯಿಪಲ್ಲೆಗಳೂ ವಿಪುಲವಾಗಿ ಬರುತ್ತವೆ.

ಖನಿಜ — ಇಲ್ಲಿ ಖನಿಜಗಳನ್ನು ತೆಗೆಯುವ ಹೋರಿಯು ಭರದಿಂದ ನಡೆದಿಲ್ಲ ಒಟ್ಟು ಕ್ಷೇತ್ರದ ೧/೯ ಭಾಗವು ಒಕ್ಕಲತನಕ್ಕೆ ಸಾಗು ಆಗಿದೆ. ಕೆಲಭಾಗದಲ್ಲಿ ಬಂಗಾರ ಮ್ಯಾಂಗೇನೀಜ, ಪೆಟ್ರೋಲ, ಕಲ್ಲಿದ್ದಲಿ ಇವುಗಳ ಖಣಿಗಳು ಬೇಕಾದಷ್ಟು ಇವೆ. ಆದರೂ ಮುಂದೆ ಇವುಗಳನ್ನು ತೆಗೆಯುವ ಉದ್ಯೋಗವು ನಡೆಯಬಹುದು. ಹಾಗೆಯೇ ಒಕ್ಕಲತನಕ್ಕಾಗಿ ಹೆಚ್ಚು ಭೂಮಿಯು ಸಾಗಾಗಬಹುದು.

ಜನಾಂಗ— ಇಲ್ಲಿಯ ಜನರು ಎತ್ತರವಾಗಿಯೂ ತೆಳ್ಳಗಾಗಿಯೂ ಇರುತ್ತಾರೆ. ಆದುದರಿಂದ ಚಪಲರಾಗಿರುವರು. ಅವರಲ್ಲಿ ಬೌದ್ಧಿಕ ಸಾಮರ್ಥ್ಯವೂ ಚೆನ್ನಾಗಿರುವದು. ಈ ಎರಡೂ ನಿಸರ್ಗಸಿದ್ಧ ಗುಣಗಳ ಮೂಲಕ ಇತರ ಸುಧಾರಿಸಿದ ದೇಶದವರಂತೆ ಉದ್ಯೋಗ ಮಾಡಬಲ್ಲರು. ಅವರು ದಿಟ್ಟರೂ ಸಾಹಸಿಗಳೂ ಇರುವರು; ಕಲಾಕೌಶಲ್ಯ, ಗಾಯನ, ವಾಙ್ಮಯಗಳಲ್ಲಿ ಮನಸ್ಸು ಹಾಕುತ್ತಲಿರುವರು. ಸಮಾಜದಲ್ಲಿ ಸ್ತ್ರೀಯರಿಗೆ ಗೌರವವಿರುವದು. ಸ್ತ್ರೀಯರು ಉದ್ಯೋಗಪ್ರಿಯರಾಗಿರುವರು. ಸ್ತ್ರೀಯರು ಒಕ್ಕಲತನವನ್ನೂ, ಕುಟುಂಬದ ಚರಿತಾರ್ಥಸಾಗಿಸುವ ನೂಲು ತೆಗೆಯುವದು, ಹೆಣೆಯುವದು, ಟೊಪ್ಪಿಗೆ ಮಾಡುವದು, ಕಟ್ಟಿಗೆಯ ಪಾತ್ರೆಗಳನ್ನು ಮಾಡುವದು ಮುಂತಾದ ಕೆಲಸಗಳನ್ನೂ ಮಾಡುತ್ತಾರೆ. ಆದುದರಿಂದ ಅವರು ಸ್ವಾವಲಂಬಿಗಳಾಗಿರುವರು.

ಇತಿಹಾಸ—ಸ್ಪೇನದ ಮ್ಯಾಗೆಲನ್ನನು ೧೫೨೧ರಲ್ಲಿ ಆಕಸ್ಮಾತ್ತಾಗಿ ದಾರಿತಪ್ಪಿ ಇಲ್ಲಿಗೆ ಬಂದನು. ಅಂದಿನಿಂದ ಸುಮಾರು ೪೦೦ ವರ್ಷಗಳ ವರೆಗೆ ಸ್ಪೇನದವರ ಕೈಯಲ್ಲಿಯೇ ಅಲ್ಲಿಯ ರಾಜಸತ್ತೆಯು ಉಳಿಯಿತು. ಮಧ್ಯದಲ್ಲಿ ಪೋರ್ತುಗೀಜರೂ ಡಚ್ಚರೂ ಅವರಿಂದ ಅದನ್ನು ಬಿಡುಗಡೆ ಮಾಡಲಿಕ್ಕೆ ಯತ್ನಿಸಿದರು. ಆದರೂ ಅದು ಸಾಧ್ಯವಾಗಲಿಲ್ಲ. ಅಲ್ಲಿಯ ಜನರಾದರೂ ತಾವು ಸ್ವತಂತ್ರವಾಗಲಿಕ್ಕೆ ಜಪಾನದವರ ಸಹಾಯ ಬೇಡಿದರು. ಅವರು ಸಹಾಯ ಮಾಡುವದಕ್ಕೆ ಬದಲಾಗಿ ಅಲ್ಲಿಯ ಪ್ರಮುಖರ ಹೆಸರನ್ನು ಸ್ಪೇನ ಸರಕಾರದವರಿಗೆ ತಿಳಿಸಿದರು. ಇವರು ಕೂಡಲೆ ಆ ಪ್ರಮುಖರನ್ನು ಚೆನ್ನಾಗಿ ಪ್ರತಿಬಂಧಿಸಿದರು. ಮುಂದಾದರೂ ಅವರು ಅಷ್ಟಕ್ಕೇ ಬಿಡದೆ ಇಂಗ್ಲೀಷರಿಗೆ ಹೇಳಿಕೊಂಡರು. ಅವರು ಅಮೇರಿಕದವರಿಗೆ ಸೂಚಿಸಿದರು. ಬಳಿಕ ಫಿಲಿಫಾಯಿನದವರು ಅಮೇರಿಕೆಯವರ ಸಹಾಯದಿಂದ ಸ್ಪೇನದವರನ್ನು ಹೊರಗಟ್ಟಿದರು. ಕೂಡಲೆ ೬೦-೭೦ ಸಾವಿರ ಅಮೇರಿಕನ್ ಸೈನ್ಯವು ಅಲ್ಲಿಗೆ ಬರಲು ಅವರು ತಮ್ಮನ್ನು ಸರಂಕ್ಷಿಸುವ ಕರಾರು ಹಾಕಿ ಅವರ ಅಧೀನವಾದರು. (೧೮೯೮) ಅಂದಿನಿಂದ ಇದು ಅಮೇರಿಕೆಯವರ ಕೈಯಲ್ಲಿಯೇ ಅದೆ. ಮುಂದೆ ಪಾರಿಸದಲ್ಲಿ ಅಮೇರಿಕೆಯವರಿಗೂ ಸ್ಪೇನರಿಗೂ ಒಪ್ಪಂದವಾಗಿ ಅಮೇರಿಕೆಯವರು ೬ ಕೋಟಿ ರೂಪಾಯಿಗಳನ್ನು ಸ್ಪೇನರಿಗೆ ಕೊಟ್ಟು ಗೆದೆಯದೆ ಇದ್ದ ಫಿಲಿಪೈನದ ಮಿಕ್ಕ ದ್ವೀಪಗಳನ್ನು ಕೊಂಡು ಕೊಂಡರು. ಅಂದಿನಿಂದ ಇಡಿಯ ಫಿಲಿಪೈನ ದ್ವೀಪವು ಅಮೇರಿಕೆಯವರ ಹಸ್ತಗತವಾಗಿದೆ.

ರಾಜ್ಯಪದ್ಧತಿ— ೧೯೧೬ರಲ್ಲಿ ಆದ ಜೇಮ್ಸ್ ಆ್ಯಕ್ಟಿನ ಪ್ರಕಾರ ಅಲ್ಲಿ ತ್ರಿದಳ ರಾಜ್ಯ ಪದ್ಧತಿಯು ಆರಂಭವಾಗಿದೆ. ೧ ಕಾರ್ಯಕಾರೀಮಂಡಲ. ೨ ಕಾಯಿದೆಮಂಡಲ. ೩ ನ್ಯಾಯಖಾತೆ. ಈ ಪ್ರಕಾರ ಮೂರು ಭಾಗಗಳಿದ್ದು ಕಾರ್ಯಕಾರೀಮಂಡಳದಲ್ಲಿ ಗ॥ ಜನರಲ್ಲನೂ ಅವನ ೬ ಖಾತೆಗಳ ಸೆಕ್ರೆಟರಿಗಳೂ ಇರುತ್ತಾರೆ. ಈ ಖಾತೆಗಳ ರಾಜ್ಯ ಕಾರಭಾರವು ನಮ್ಮಲ್ಲಿಯ ಖಾತೆಗಳಂತೆಯೇ ನಡೆಯುತ್ತದೆ. ಇದಲ್ಲದೆ ಗ॥ ಜನರಲ್ಲನು

ತನ್ನ ಸಹಾಯಕ್ಕಾಗಿ ಕೌನ್ಸಿಲ್ ಆಫಸ್ಟೇಟನ್ನು ರಚಿಸಿಕೊಳ್ಳುತ್ತಾನೆ. ಅದರಲ್ಲಿ ವ್ಹಾಯಿಸ್ ಗವ್ಹರ್ನರ, ಸಿನೇಟದ ಅಧ್ಯಕ್ಷ ಮುಂತಾದವರು ಇರುತ್ತಾರೆ. ಕಾಯಿದೆ ಮಂಡಳಲ್ಲಿ ಒಂದು ಸಭಾಗೃಹವೂ ಮತ್ತು ಸಿನೇಟವೂ ಇರುತ್ತವೆ. ಸರಕಾರದ ಪತಿಯಿಂದ ಮೂವರು ಸಭಾಸದರು ಇರುತ್ತಾರೆ. ೧೨ ಲಕ್ಷ ಜನರಿಗೆ ಮತದಾನದ ಹಕ್ಕು ಅದೆ. ನ್ಯಾಯಖಾತೆಯಲ್ಲಿ ವರಿಷ್ಠಕೋರ್ಟು ಮ್ಯುನಸಿಪಲ್ ಕೋರ್ಟ ಮೊದಲಾದವು ಸಮಾವೇಶವಾಗುತ್ತವೆ. ನ್ಯಾಯಾಧೀಶನನ್ನು ಗವ್ಹರ್ನರ ಜನರಲ್ಲನು ಸಿನೇಟದ ಸಹಾಯದಿಂದ ಆರಿಸುತ್ತಾನೆ. ವರಿಷ್ಠ ಕೋರ್ಟಿನ ನ್ಯಾಯಾಧೀಶನನ್ನು ಅಮೇರಿಕೆಯಿಂದ ಆರಿಸಿ ಕಳುಹುತ್ತಾರೆ. ಈ ಖಾತೆಯಲ್ಲಿ ಅಮೇರಿಕನ್ನರು ೬ ಜನರು ಇರುತ್ತಾರೆ. ಬರಬರುತ್ತ ಫಿಲಿಫಾಯಿನ್ನರನ್ನೇ ಸರಕಾರದ ಕೆಲಸಕ್ಕೆ ಹೆಚ್ಚು ಹೆಚ್ಚು ನಿಯಮಿಸತೊಡಗಿದ್ದಾರೆ. ಒಟ್ಟಿನ ಮೇಲೆ ಹೊಸ ಪದ್ಧತಿಯಿಂದ ಅಲ್ಲಿಯ ರಾಜ್ಯಕಾರಭಾರವು ನಡೆಯತೊಡಗಿದೆಯೆಂದು ಹೇಳಬಹುದು.

ಪೂರ್ವದಿಕ್ಕಿನಲ್ಲಿ ಜಪಾನವು ಪ್ರಬಲ ರಾಷ್ಟ್ರವಾಗಿದೆ. ಅದು ವ್ಯಾಪಾರ ರಾಜಕೀಯ ಸತ್ತೆಗಳ ಸಲುವಾಗಿ ಹೆಣಗುತ್ತಿರುವದು. ಈಗಂತೂ ಚೀನದವರೊಡನೆ ಯುದ್ಧ ಮಾಡತೊಡಗಿದೆ. ಅಮೇರಿಕೆಯವರೂ ವ್ಯಾಪಾರದ ಸಂರಕ್ಷಣೆ ಮಾಡಿಕೊಳ್ಳಬೇಕಾಗಿದೆ. ಫಿಲಿಫೈನವು ಕೈಯಲ್ಲಿದ್ದರೆ ಪೂರ್ವದಿಕ್ಕಿನ ವ್ಯಾಪಾರವು ಅಮೇರಿಕದವರ ಕೈಯಲ್ಲಿ ಉಳಿಯುತ್ತದೆ. ಫಿಲಫೈನವು ಅಮೇರಿಕೆಯವರ ಆಶ್ರಯದಲ್ಲಿರದೆ ಹಾಗೇ ಇದ್ದರೆ ಇಷ್ಟೊತ್ತಿಗೆ ಜಪಾನವು ಅಲ್ಲಿ ಕಾಲುಚಾಚುತ್ತಿತ್ತು. ಆದದರಿಂದ ಫಾಸಿಫಿಕ್ ಮಹಾಸಾಗರದ ತಮ್ಮ ವ್ಯಾಪಾರದ ಸುರಕ್ಷತೆಗೋಸ್ಕರ ಫಾಸಿಫಿಕ್ ಮಹಾಸಾಗರದೊಳಗಿನ ಕೆಲವು ಬಂದರಗಳೂ ಮೇಲೆ ಬರೆದಂತೆ ಫಿಲಿಫೈನವೂ ಅಮೇರಿಕೆಯವರ ಸ್ವಾಧೀನದಲ್ಲಿರಬೇಕಾಗಿದೆ. ಮುಖ್ಯವಾಗಿ ಚೀನದಲ್ಲಿ ತಮ್ಮ ವ್ಯಾಪಾರ ನಡೆಯಿಸುವದಕ್ಕೋಸ್ಕರ ಫಿಲಿಫೈನ, ಗುಆಮು, ಹವಾಈ, ಅನಾಲಾಸ್ಕಾ ಈ ಮೊದಲಾದ ದ್ವೀಪಗಳು ಅಮೇರಿಕೆಯವರ ಆಧೀನದಲ್ಲಿ ಇರಲಿಕ್ಕೆ ಬೇಕು. ಗುಆಮು ದ್ವೀಪಕ್ಕೆ ಎದುರಾಗಿಯೇ ಜಪಾನರ ಮಾರ್ಶಲ್, ಕಾರೋಲೈನಾ ದ್ವೀಪಗಳಿವೆ. ಸಮೀಪದಲ್ಲಿಯೇ ಇಂಗ್ಲಿಷರ ಹಾಂಗಕಾಂಗ ದ್ವೀಪವೂ ಫ್ರೆಂಚರ ಇಂಡಿಯನ್ ಚೈನವೂ ಅವೆ. ಆಸ್ಟ್ರೇಲಿಯದ ವ್ಯಾಪಾರವೂ ಕೂಡ ಇದೇ ಮಾರ್ಗದಲ್ಲಿಯೇ ನಡೆಯುತ್ತದೆ.

ಸಾನ್ ಫ್ರಾನ್ಸಿಸ್ಕೋದಿಂದ ಫಿಲಿಫೈನವು ೭ ಸಾವಿರ ಮೈಲದೆ. ಟೋಕಿಓದಿಂದ ೧೫೦೦ ಮೈಲು ದೂರದಲ್ಲಿದೆ. ಫಾಸಿಫಿಕ ಮಹಾಸಾಗರದ ತಮ್ಮ ಸುರಕ್ಷತತೆಯ ಸಲುವಾಗಿ ಚೀನ, ಅಮೇರಿಕಾ, ಇಂಗ್ಲಿಷ, ಫ್ರೆಂಚ ಇವರೆಲ್ಲರು ತಮ್ಮತಮ್ಮೊಳಗೆ ಸ್ನೇಹಭಾವವನ್ನು ಕಾಯಬೇಕು. ಈ ವಿವರಣೆಯಿಂದ ಭೂಗೋಲ ಜ್ಞಾನವು ಸದ್ಯದ ಇತಿಹಾಸಕ್ಕೂ ಅವರವರ ಸುರಕ್ಷತತೆಗೂ ಎಷ್ಟು ನಿಕಟಸಂಬಂಧವುಳ್ಳದ್ದಾಗಿದೆ ಎಂದು ಸಹಜವಾಗಿ ತಿಳಿಯುವಂತಿದೆ.

ಕಡೇ ಬಾಜೀರಾಯನ ಕೊನೆಯ ಗತಿಯು

ಮಹಾರಾಷ್ಟ್ರಭಾಷೆಯ ಲೇಖದ ಆಧಾರದಿಂದ ಬರೆದದ್ದು.

ಕೋರೆಗಾಂವ ಅಷ್ಟೆ ಕಾಳಗಗಳನಂತರ ಬಾಜೀರಾಯನು ಎದೆಗುಂದಿದನು. ಅಂದಿನಿಂದ ಪುಣೆಯ ಸಿಂಹಾಸನದ ಆಶೆಯನ್ನು ಬಿಡಲಾರಂಭಿಸಿದನು. ಅವನು ಮೊದಲೇ ಚಂಚಲನು. ಈಗಲಂತೂ ಸುಮ್ಮ ಸಮ್ಮನೆ ಒಂದೆಡೆಯಿಂದ ಮತ್ತೊಂದೆಡೆಗೆ ಸಂಚರಿಸತೊಡಗಿದನು. ಎಲ್ಲಿಗೆ ಹೋದರೂ ಮನಸ್ಸಿಗೆ ಸಮಾಧಾನವೆನಿಸದಾಯಿತು. ಆಶ್ರಯಕ್ಕಾಗಿ ನಾಗಪುರದ ಭೋಸಲೆಯ ಕಡೆಗೆ ಹೋದನು. ಅಲ್ಲಿಯೂ ಅವನಿಗೆ ಅನುವು ದೊರೆಯಲಿಲ್ಲ. ಬಳಿಕ ದಿಕ್ಕಗಾಣದಂತಾಗಿ ಸಾತಪುಡಾದ ಘಟ್ಟಗಳ ಮಾರ್ಗದಿಂದ ಮಹೇಶ್ವರದ ಹತ್ತಿರ ನರ್ಮದಾ ನದಿಯನ್ನು ಇಳಿದು ಸಿಂದೆಯ ಕಡೆಗೆ ಹೋಗಬೇಕೆಂದು ಹೊರಟನು.

ಮಾಳವಾದಲ್ಲಿ ಪೆಂಡಾರಿಗಳ ಹಾವಳಿಯು ಅದೇ ಶಾಂತವಾಗಿತ್ತು. ಪೆಂಡಾರಿಗಳು ನಿರಾಶರಾಗಿ ಮನೆಸೇರಿದ್ದರು ಬಯಕೆಯು ಪೂರ್ಣವಾಗದ್ದರಿಂದಲೂ ಅವರಿಗೆ ಉದ್ಯೋಗವು ಸಿಗದಾದ್ದರಿಂದಲೂ ಅವರು ಚಡಪಡಿಸುತ್ತಲಿದ್ದರು. ಆಗ ಬಾಜೀರಾಯನಂಥವನು ಅವರ ಮುಂದಾಳುವಾಗಿದ್ದರೆ ಅವರು ಸಮ್ಮನೆ ಎಂದೂ ಕೂಡುತ್ತಿದ್ದಿಲ್ಲ. ಸಿಂದೆ ಹೋಳಕರರು ಮೊದಲಿನಿಂದಲೂ ಪೇಶ್ವೆಮನೆತನದ ಉಪ್ಪುಂಡವರು. ಬಾಜೀರಾಯನ ಹೃದಯದ್ರಾವಕವಾದ ಈಗಿನ ದುಸ್ಥಿತಿಯು ಪ್ರತ್ಯಕ್ಷವಾಗಿ ಅವರ ಕಣ್ಣಿಗೆ ಬಿದ್ದಿದ್ದರೆ ಅವರ ಅಂತಃಕರುಣರಸವೂ ಅವರ ಸ್ವಾಭಾವಿಕವಾದ ವೀರರಸವೂ ಉಕ್ಕದೆ ಬಿಡುತ್ತಿದ್ದಿಲ್ಲ.

ಇತ್ತ ಸರಜಾನ ಮಾಲಕಮ್ ಸಾಹೇಬನಾದರೂ ಒಳ್ಳೇ ಮುತ್ಸದ್ದಿಯು. ಅವನು ಯಾರಿಗೂ ಸೊಪ್ಪು ಹಾಕುವಂತೆ ಇದ್ದಿದ್ದಿಲ್ಲ. ಆಗಿನ ಪರಿಸ್ಥಿತಿಗನುಸರಿಸಿ ಬಾಜೀರಾಯನು ಮುಂದೆ ಗತಿಗಾಣದೆ ಆಶ್ರಯಕ್ಕೆ ಹೋಗಬಹುದಾದ ಸ್ಥಳಗಳನ್ನೆಲ್ಲ ಊಹಿಸಿ ಬಾಜೀರಾಯನಿಗೆ ಪ್ರತಿಬಂಧವಾಗುವಂತೆ ಇಂಗ್ಲೀಷ ಸೈನ್ಯದ ಪಾಳಯವನ್ನು ಅಲ್ಲಲ್ಲಿ ಬಿಡಿಸಿದ್ದನು. ಅದು ಹ್ಯಾಗೆಂದರೆ—ಮಹೇಶ್ವರಕ್ಕೆ ಸಮೀಪವಾಗಿದ್ದ ಮಂಡಲೇಶ್ವರ ಕೋಟೆಯಲ್ಲಿ ಕರ್ನಲ್‌ಸ್ಮಿಥನು ಸೈನ್ಯದೊಂದಿಗೆ ಬಾಜೀರಾಯನ ಬರವನ್ನು ನಿರೀಕ್ಷಿಸುತ್ತಲಿದ್ದನು. ಈ ಕೋಟೆಯು ಪೇಶವೆಯ ಕೈಯೊಳಗೆ ಇದ್ದರೂ ಬಲಾತ್ಕಾರದಿಂದ ವಶಮಾಡಿಕೊಂಡಿದ್ದನು. 'ಗೂಳಿ ಬಿದ್ದರೆ ಆಳಿಗೊಂದು ಕಲ್ಲು' ಎಂಬಂತೆ ಬಾಜೀರಾಯನ ಸ್ಥಿತಿಯಾಗಿತ್ತು. ಹುಶಂಗಾಬಾದದ ಪಶ್ಚಿಮಕ್ಕೆ ೨೦ ಮೈಲಿನ ಮೇಲಿದ್ದ ಕೋಠಾರ ಎಂಬಸ್ಥಳದಲ್ಲಿ ನರ್ಮದಾ ನದಿಯನ್ನು ದಾಟಲಿಕ್ಕೆ ಒಳ್ಳೆಯ ಅನುಕೂಲವಾಗಿದ್ದಿತು. ಅಲ್ಲಿ ಜನರಲ್

ವಾಟ್ಸನ್ನನು ಫಿರಂಗಿಯೊಂದಿಗೆ ಬಾಜೀರಾಯನ ಹಾದಿನೋಡುತ್ತಲಿದ್ದನು. ದಕ್ಷಿಣದ ಜಾಲಸಂ ಎಂಬಲ್ಲಿಂದ ಜನರಲ್ ಡೊವ್ಹಟನ್ನನು ಬಾಜೀರಾಯನ ಬೆನ್ನುಹತ್ತಿದ್ದನು. ಹೀಗಾಗಿ ಚಕ್ರವ್ಯೂಹದಂತೆ ಎತ್ತನೋಡಿದತ್ತ ಇಂಗ್ಲಿಷ ಸೈನ್ಯದ ಸುಳುವೇ ಅವನಿಗೆ ತೋರಲಾರಂಭಿಸಿತು.

ಮೇಲೆ ವಿವರಿಸಿದಂತೆ ಸಿದ್ಧತೆಮಾಡಿ ಮಾಲಕಮ್ ಸಾಹೇಬನು ಮಹೂ ಎಂಬಲ್ಲಿ ನಿಂತು ಮುಂದಾಗುವದನ್ನು ನಿರೀಕ್ಷಿಸುತ್ತಲಿದ್ದನು. ರಾಜಕಾರಣಕ್ಕೂ ಭೂಗೋಲಜ್ಞಾನಕ್ಕೂ ಇದ್ದ ಸಂಬಂಧವು ಮೇಲಿನ ಸಂಗತಿಯಿಂದ ಗೊತ್ತಾಗುವಂತೆ ಅದೆ.

ಬಾಜೀರಾಯನಿಗೂ ಸರಜಾನ ಮಾಲಕಮ್ ಸಾಹೇಬನಿಗೂ ಅತಿಶಯ ಪರಿಚಯವಿತ್ತು. ಆದದರಿಂದ ಬಾಜೀರಾಯನ ಸ್ವಭಾವ, ಗುಣಗಳು ಮಾಲಕಮ್ ಸಾಹೇಬನಿಗೆ ಚಿನಾಗಿ ಗೊತ್ತಾಗಿದ್ದವು. ತನ್ನ ಸನ್ನಾಹಕ್ಕೆ ಬೆದರಿ ಬಾಜೀರಾಯನು ತನ್ನ ಕಡೆಗೆ ಆಲೋಚನೆಗಾಗಿ ಬರುವನೆಂದು ಮಾಲಕಮ್ ಸಾಹೇಬನು ತಿಳಿದಿದ್ದನು. ಅದೇಪ್ರಕಾರವಾಗಿ ೧೮೧೮ ನೆಯ ಇಸವಿಯ ಮೇತಿಂಗಳಿನ ೧೬ನೆಯ ತಾರೀಖಿನ ದಿವಸ ಪೇಶವೆಯ ಇಬ್ಬರು ವಕೀಲರು ಆತನ ಪತ್ರಸಹಿತವಾಗಿ ಮಾಲಕಮ್ ಸಾಹೇಬನ ಪಾಳಯಕ್ಕೆ ಬಂದರು. ಆ ಪತ್ರದಲ್ಲಿ ಮಾಲಕಮ್ ಸಾಹೇಬನು ತನ್ನ ಬಿಡಾರಕ್ಕೆ ಕೆಲವೊಂದು ಸಂಗತಿಯ ಗುಪ್ತಾಲೋಚನೆಗಾಗಿ ಬರಬೇಕೆಂದು, ಉಲ್ಲೇಖವಿತ್ತು. ಮುತ್ಸದ್ದಿಯಾದ ಮಾಲಕಮ್ ಸಾಹೇಬನು ತಾನಾಗಿ ಹೋಗದೆ ಪ್ರತಿ ಪತ್ರವನ್ನು ಕೊಟ್ಟು ಪದ್ಧತಿಗೆ ಸರಿಯಾಗಿ ಇಬ್ಬರು ವಕೀಲರ ಕೈಯಲ್ಲಿ ಉತ್ತರ ಬರೆದು ಕಳಿಸಿಕೊಟ್ಟನು. ಅವನು ಆ ಪತ್ರದಲ್ಲಿ ಪೇಶವೆಗೆ ಸ್ವಚ್ಛವಾಗಿ ಬರೆದದ್ದೇನೆಂದರೆ "ಇನ್ನು ನೀವು ಹೀಗೆ ಕಾಲವಿಲಂಬ ಮಾಡಬಾರದು. ಹೀಗೆ ಮಾಡಿದರೆ ನಿಮ್ಮ ರಾಜ್ಯವು ನಿಮಗೆ ಉಳಿಯುವಂತೆ ಇಲ್ಲ. ಬೇಕಾದರೆ ನಮ್ಮ ಕೂಡ ಪುನಃ ಯುದ್ಧ ಮಾಡಬಹುದು. ಇಲ್ಲವೆ ನಾವು ಹೇಳಿದಂತೆ ಕೇಳಬಹುದು. ನಿಮ್ಮ ಅಭಿಪ್ರಾಯವನ್ನು ಬಹಳ ತೀವ್ರವಾಗಿ ತಿಳಿಸಬೇಕು" ಇತ್ಯಾದಿ.

ಪತ್ರ ಮುಟ್ಟಿ ಅಭಿಪ್ರಾಯವು ಅವಗತವಾದ ಕೂಡಲೆ ಬಾಜೀರಾಯನ ಮೋರೆಯು ಸಪ್ಪಗಾಯಿತು. ಅದೇ ಪತ್ರದಲ್ಲಿ ಅವನ ನಂಬಿಗೆಯವರಾಗಿ ಸಂಗಡಿಗರಾದ ಸರದಾರರು ಬಾಜೀರಾಯನಿಗೆ ತಕ್ಕ ಸಲಹೆಯನ್ನು ಕೊಡದಿದ್ದರೆ ಮುಂದೆ ಅವರ ಜಹಾಗೀರುಗಳು ಅವರಿಗೆ ನಡೆಯಲಿಕ್ಕಿಲ್ಲವೆಂಬದಾಗಿ ಉಲ್ಲೇಖವಿತ್ತು. ಅದನ್ನು ನೋಡಿದ ಕೂಡಲೆ ಅವರೂ ತೆಪ್ಪಗಾದರೂ. ಕೂಡಲೆ ಬಾಜೀರಾಯನು ಸ್ವಸಂರಕ್ಷಣದ ಬಗ್ಗೆ ಸೈನ್ಯವನ್ನು ತೆಗೆದುಕೊಂಡು ಸಮೀಪದಲ್ಲಿ ಬಿಟ್ಟು ಮಾಲಕಮ್ ಸಾಹೇಬರ ದರ್ಶನಕ್ಕೆ ಬಂದನು.

ಆಗ ಪರಸ್ಪರ ಯೋಗಕ್ಷೇಮ ಕೇಳಿಕೊಂಡನಂತರ ಬಾಜೀರಾಯನು ಸರ ಕಾನ ಮಾಲಕಮ್ ಸಾಹೇಬರಿಗೆ ತನ್ನ ಹಿತಾಹಿತದ ಬಗ್ಗೆ ಆಪ್ತಾಲೋಚನೆ ಕೇಳಿ ಕೊಂಡನು. ಬಾಜೀರಾಯನು ತನ್ನ ಮಾತಿನ ಮೇಲೆ ನಂಬುಗೆ ತೋರಿಸಿದ್ದನ್ನು ತಿಳಿದು ಮಾಲಕಮ್ ಸಾಹೇಬನು ಆತನ ವಿಷಯವಾಗಿ ಸಹಾನುಭೂತಿಯುಳ್ಳವ ನಾಗಿ ಅಂದದ್ದೇನಂದರೆ-"ನೀವು ಯುದ್ಧದ ಗೊಡಿವೆ ಬಿಟ್ಟು ನಮ್ಮ ಸ್ವಾಧೀ ನಕ್ಕೆ ಬಂದರೆ ೮ ಲಕ್ಷಕ್ಕಿಂತ ಕಡಿಮೆಯಲ್ಲದಷ್ಟು ಹಣವನ್ನು ವರ್ಷದ ಖರ್ಚಿ ಗಾಗಿ ನಮ್ಮ ಸರಕಾರದಿಂದ ಕೊಡಿಸುವೆನು. ಅದನ್ನು ತೆಗೆದುಕೊಂಡು ನಿಮ್ಮ ಸ್ವಭಾವಕ್ಕೂ ಧರ್ಮಕ್ಕೂ ಅನುಸರಿಸಿ ಗಂಗಾತೀರದ ಯಾವದೊಂದು ಪುಣ್ಯಸ್ಥಳ ದಲ್ಲಿ ವಾಸಿಸಬಹುದು, ವಿಚಾರ ಮಾಡಿ ತಾವು ತಿಳಿಸಿರಿ" ಇತ್ಯಾದಿ.

ಬಾಜೀಯರಾಯನು ಆಲೋಚನೆಗಾಗಿ ಸಮೀಪದಲ್ಲೇ ಇದ್ದ ತನ್ನ ಪಾಳ ಯಕ್ಕೆ ಹೋಗಿ ಮುಖ್ಯ ಸರದಾರರನ್ನು ಕರೆದು ವಿಚಾರಿಸಿದನು. ಸಾತಾರೆಯ ಮಹಾರಾಜರೂ ಚಿಮಾಜಿ ಅಪ್ಪಾನೂ ನಿಪ್ಪಾಣಿ ಅಪ್ಪಾದೇಸಾಯಿಯೂ ನಾಗೋ ಪಂತ ಆಪಟೆಯೂ ಮೊದಲೇ ಬಾಜೀರಾಯನಿಂದ ದೂರವಾಗಿದ್ದರು. ಸಣ್ಣ ಪುಟ್ಟ ಸರದಾರರು ಅವನೊಂದಿಗೆ ಇದ್ದರು. ಬಾಜೀರಾಯನು ಜಾಣನಾಗಿದ್ದರೂ ಇಂಥ ಪೊತ್ತನ್ನು ತಂದುಕೊಳ್ಳುತ್ತಿದ್ದಿಲ್ಲ. ಓಡುವ ದೈವವನ್ನು ಬೆನ್ನು ಹತ್ತುವರು ಯಾರು! ಕಾಲಕ್ಕೆ ತಕ್ಕಂತೆ ಮನುಷ್ಯನ ಬುದ್ಧಿಯು ಹರಿಯುತ್ತಿರುತ್ತದೆ. ತನ್ನ ನೆನ್ನು ತನಗೆ ಕಾಣುವದಿಲ್ಲವೆಂದು ಅನ್ನುವ ಹಿರಿಯರ ಮಾತಿನ ಇಂಗಿತವಾದರೂ ಇದೇ ಇರುತ್ತದೆ. ತನಗೆ ತಿಳಿಯದಾದರೆ ಕೇಳಿಕೊಳ್ಳಲಿಕ್ಕೆ ತಕ್ಕ ಸ್ಥಳಗಳನ್ನಾ ದರೂ ಕಾದು ಇಟ್ಟುಕೊಳ್ಳುವದು ಯುಕ್ತವಾದದ್ದು. ಈ ವಿಚಾರವನ್ನು ಬಾಜೀರಾ ಯನು ಮೀರಿ ನಡೆದುದರಿಂದ ಹಾನಿಗೊಳಗಾದನು. ಆತನ ಅದೂರದರ್ಶಿತ್ವವೂ ಅವಿವೇಕತನವೂ ಅವನನ್ನು ಮೂಲೆಗೊತ್ತಿದವು. ಶಿವಾಜಿ ಮಹಾರಾಜರ ಗನೀಮೀ ಕಾವ್ಯಪದ್ಧತಿಯನ್ನೂ ಮಂತ್ರಿಗಳ ಬಹುಮತವನ್ನೂ ಗುರುಹಿರಿಯರ ಉಪದೇಶ ವನ್ನೂ ಮೀರಿನಡೆದುದರಿಂದ ಪೇಶವೆಯು ದುಃಖಕ್ಕೆ ಬೀಡಾದನು. ಶ್ರೀಮಂತನು ತಾನೊಬ್ಬನೇ ಶಿರಿಯಿಂದ ದೂರಾಗದೆ ಪರಿವಾರಕ್ಕೆಲ್ಲ ಬಡತನದ ಪನಿವಾರನ್ನು ಹಂಚಿದನು. ಮಿಂಚಿಹೋದ ಮಾತಿಗೆ ಚಿಂತಿಸಿ ಫಲವಿಲ್ಲವೆಂಬಂತೆ ಬಾಜೀರಾಯನ ಅವಸ್ಥೆಯಾಯಿತು. ಬಾಜೀರಾಯನು ಮಾತಿನಲ್ಲಿ ಮಾತಿಲ್ಲದವನಿರುವನೆಂದು ಮಾಲ ಕಮ್ ಸಾಹೇಬನಿಗೆ ಗೊತ್ತಿತ್ತು. ಯಾರಾದರೊಬ್ಬರು ಹೇಳಿದಂತೆ ಕೇಳಿ ಸಮೀ ಪದಲ್ಲಿದ್ದ ಸಿಂದೆಯ ಕೈಯ್ಯೊಳಗಿದ್ದ ಅಶೀರಗಡ ಕೋಟೆಗೆ ಬಾಜೀರಾಯನು ಹೋದರೆ ತಿರುಗಿ ವಶಮಾಡಿಕೊಳ್ಳಲಿಕ್ಕೆ ಎಷ್ಟೋ ತಿಂಗಳುಗಳು ಬೇಕಾಗುವ

ವೆಂದು ಮಾಲಕಮ್ ಸಾಹೇಬನು ಚೆನ್ನಾಗಿ ತಿಳಿದಿದ್ದನು. ಅದಕ್ಕಾಗಿಯೇ ತೀವ್ರ ಬರುವಂತೆ ಹೇಳಿಕಳುಹಿ ಬಾಜೀರಾಯನನ್ನು ಕಳಿಸಲಾರದೆ ಕಳಿಸಿ ಮಿಡುಕ ತೊಡಗಿದ್ದನು.

ಬಾಜೀರಾಯನಿಗೆ ದಿಕ್ಕು ತೋರದಾಯಿತು ಮಿಂಚೂರಕರ, ಪುರಂದ ಇವರ ಬಾಯಿಂದ ಯಾವ ಆಲೋಚನೆಗಳೂ ಹೊರಡಲಿಲ್ಲ. ಆದದರಿಂದ ಸುಮ್ಮ ಕುಳಿತುಬಿಟ್ಟನು.

ಇತ್ತ ಸರಜಾನ ಮಾಲಕಮ್ ಸಾಹೇಬನು ಸುಮ್ಮನೆ ಕೂಡುವ ಹಾಗಿದ್ದಿಲ್ಲ ಆದದರಿಂದ ತನ್ನ ಬೀಡು ಕಿತ್ತಿದನು. ಹಿಂದಿನಿಂದಲೂ ಎಡಬಲದಿಂದಲೂ ಇಂಗ್ಲಿಷ ಸರದಾರರೂ ತೋಫಿನ ಸಪ್ಪಳ ಮಾಡುತ್ತ ಬರಲಾರಂಭಿಸಿದನು. ಆದ ರಿಂದ ಬಾಜೀರಾಯನು ಎಲ್ಲ ಸರದಾರರನ್ನೂ ಸೈನ್ಯವನ್ನೂ ಬಹುಪರಿವಾರವನ್ನೂ ತೊರೆದು ಕೆಲಸೇವಕರೊಂದಿಗೆ ಮಾತ್ರ ಮಾಲಕಮ್ ಸಾಹೇಬರ ಸೂಚನೆಯಂತೆ ಅವರ ಹಸ್ತಗತನಾದನು.

ಹಿರಿಯರು ಗಳಿಸಿದ ಅತುಲವೈಭವವೂ ಗೌರವವೂ ಪರಿವಾರವೂ ಇವೆ ಬಾಜೀರಾಯನನ್ನು ಅಲ್ಪಕಾಲದಲ್ಲಿ ತೊರೆದು ಹೋದವು ' ಮಾಡಿದ್ದುಣ್ಣೋ ಮಹಾರಾಯಾ' ಎಂಬ ಮಾತು ಸುಳ್ಳಲ್ಲ.

ಚಿತ್ತೂರ ಚಿಂತನೆ

ಬರೆದವರು:—ಬಸವಂತ ವ್ಹಿ. ಮೂಲಿಮನಿ ಅಸಿ ಮಾಸ್ತರ ಗಂದಿಗವಾಡ

ಶರೀರ ಸ್ವಾಸ್ಥ್ಯ ರಕ್ಷಣೆಗೆ ಬ್ರಹ್ಮಚರ್ಯವೆಂಬ ಬಲವಾದ ಕೊತ್ತಲದ ಆ ಶ್ಯಕತೆ ಹೇಗೋ ಅದರಂತೆ ರಾಷ್ಟ್ರರಕ್ಷಣೆಗೆ ಕೋಟೆ-ಕೊತ್ತಲಗಳೇ ಬಲವಾ ಸಾಧನಗಳೆಂಬ ತಿಳಿವು ಹಿಂದಕ್ಕೊಮ್ಮೆ ವಿಶ್ವವನ್ನೇ ವ್ಯಾಪಿಸಿತ್ತು. ಅಂತೆಯೆ ಬಹುಬಲವಾದ ಕಿಲ್ಲೆಗಳು ಆ ಕಾಲದಲ್ಲಿ ಕಟ್ಟಲ್ಪಟ್ಟವು. ರಶಿಯಾದಲ್ಲಿ "ಪೋರ್ಟ ಆರ್ಥರ," ಬೆಲ್ಜಮ್ಮದಲ್ಲಿಯ "ಲೇಡೀಸ್ಮಿಥ್" ಮೊದಲಾದವುಗಳು ಮಾತಿಗೆ ಬಲವಾದ ಸಾಕ್ಷಿಗಳಾಗಿವೆ. ಆದುದರಿಂದೆ ಆ ಕಾಲಕ್ಕೆ "ಕೋಟೆ ಯುಗ"ವೆಂದರೆ ಅತ್ಯುಕ್ತಿಯಾಗದು. ಈ ಯುಗದಲ್ಲಿಯಾದರೂ ಹಿಂದೂದೇಶ ಹಿಂದುಳಿದಿದ್ದಿಲ್ಲ. "ಪ್ರಾಚೀನ ಜಗತ್ತಿನ ಇತಿಹಾಸದಲ್ಲಿ ಹೆಸರಾದ ರಾಷ್ಟ್ರಗ ಸಂಸ್ಕೃತಿಯ ಅರುಣೋದವಾಗುವ ಮೊದಲು ಭಾರತದ ಸಂಸ್ಕೃತಿರವಿಯು ನ ನೆತ್ತಿಯ ಮೇಲೆ ಬಂದು ತನ್ನ ದಿವ್ಯತೇಜದಿಂದೆ ಬೆಳಗುತ್ತಿದ್ದನೆ"ಂದು ೧೮೭೩ ಅಕ್ಟೋಬರ ತಿಂಗಳ "ಎಡಿಂಬರೋ ರಿವ್ಯೂ"ದಲ್ಲೊಬ್ಬ ಬರಹಗಾರರೆಂದಿರುವ

ನಮ್ಮ ಪ್ರಾಚೀನ ಭಾರತೀಯ ಸಂಸ್ಕೃತಿಯು ಪರಕೀಯರ ಬಲವಾದ ಪೆಟ್ಟುಗಳನ್ನು ಹಲವು ಸಾರೆ ತಿಂದಿತು. ನಮ್ಮ ಹಳೆಯ ಗುಡಿಗಳೆಲ್ಲ ಕೆಡವಲ್ಪಟ್ಟವು. ಮೂರ್ತಿಗಳು ಒಡೆಯಲ್ಪಟ್ಟವು. ಪ್ರಾಚೀನ ಗ್ರಂಥ ಸಂಗ್ರಹವು ಸುಡಲ್ಪಟ್ಟಿತು ಆದರೂ ಅವರ ಪೆಟ್ಟುಗಳಿಗೆ ಸೊಪ್ಪುಹಾಕದೆ, ಭಾರತೀಯ ಆರ್ಯ ಸಂಸ್ಕೃತಿಯು ಅಲ್ಲಲ್ಲಿ ಒಪ್ಪುತ್ತಿರುತ್ತದೆ. "ಪೋರ್ಟ ಆರ್ಥರ" ಹಾಗೂ "ಲೇಡೀ ಸ್ಮಿಥ"ದಂಥ ಕಿಲ್ಲೆಗಳು ಭಾರತದಲ್ಲಿ ಹಲವಿರುವವೆಂಬದು ಓದುಗರರಿಯದ ಸಂಗತಿಯಲ್ಲ. ವಸುಂಧರೆಯ ಕೋಟೆಗಳ ಮಾಲೆಯಲ್ಲಿ ಚಿತ್ತೂರ ಗಡವು ಕೊರಳ ಪದಕದಂತೊಪ್ಪುತ್ತಿರುವದು. ಅತ್ಯದ್ಭುತವಾದ ಈ ದುರ್ಗವನ್ನೀಕ್ಷಿಸಲು ಪರದೇಶಗಳಿಂದ ಹಲವು ಪ್ರವಾಸಿಕರು ಬರುತ್ತಿರುವರು. ಹಾಗೂ ಪ್ರಾಚೀನ ಆರ್ಯ ಸಂಸ್ಕೃತಿಗೆ ಬೆರಳು ಕಚ್ಚುತ್ತಿರುವರು. ಈ ಗಡವು ಕಟ್ಟಲ್ಪಟ್ಟು ಅನೇಕ ಶತಮಾನಗಳು ಕಳೆದು ಹೋದವು. ಅನೇಕ ರಾಜಮನೆತನಗಳು ಆಳಿ ಅಳಿದವು. ಆದರೆ ಅಲ್ಲಿಯ ಆರ್ಯ-ಸಂಸ್ಕೃತಿ ಮಾತ್ರ ಅಚ್ಚಳಿದಿಲ್ಲ.

ಆರ್ಯ ಸಮಾಜ ಸ್ಥಾಪಕರಾದ ಶ್ರೀಮದ್ದಯಾನಂದ ಸರಸ್ವತಿಯವರು ಈ ಗಡವನ್ನೀಕ್ಷಿಸಿ ಒಂದು ತಣ್ಣನ್ನ ನಿಟ್ಟುಸಿರು ಬಿಟ್ಟು ಹೀಗೆಂದಿರುವರು. "ಅಮ್ಮಾ ಭಾರತಮಾತೆ, ನಿನ್ನಲ್ಲಿ ಇಂಥ ಗಟ್ಟಿ-ಮುಟ್ಟಾದ, ದುರ್ಜೇಯವಾದ ದುರ್ಗಗಳನೇಕ ಇದ್ದರೂ, ಬ್ರಹ್ಮಚರ್ಯ ಹಾಗೂ ಸಂಘಟನಗಳ ಅಭಾವದಿಂದೆ ಈ ದುರ್ದೆಶೆಗೀಡಾಗಿರುವಿಯಲ್ಲವೇ ?" ಸ್ವಾಮಿ ದಯಾನಂದರ ಈ ಉದ್ಗಾರದಿಂದೆ ಚಿತ್ತೂರ ದುರ್ಗದ ಭದ್ರತೆಯೊಡೆದು ಕಾಣದಿರದು.

ಇತಿಹಾಸ ಪ್ರಸಿದ್ಧವಾದ ಈ ದುರ್ಗವು ೬೬೦ ಫೂಟು ಎತ್ತರದ ಒಂದು ದಿನ್ನಯ ಮೇಲೆ ಕಟ್ಟಲ್ಪಟ್ಟಿರುವದು. ಇದನ್ನೇರಲು ರಾಜಮಾರ್ಗವಿದ್ದರೂ ಏರುವದು ಸುಲಭಸಾಧ್ಯವಲ್ಲ. ಡೊಂಕು ಡೊಂಕಾದ ಈ ಮಾರ್ಗದಲ್ಲಿ ಪೋಲ (ಕಿಂಡಿ) ಗಳುಂಟು. ಅವು (ಪೋಲ)ಗಳನ್ನು ಪುರಾಣಕಾಲದ ಪ್ರಸಿದ್ಧಪುರುಷರ ಹೆಸರಿನಿಂದ ಕರೆಯುತ್ತಿರುವರು. ಉದಾ: - ರಾಮಪೋಲ, ಗಣೇಶಪೋಲ, ಹನುಮಾನ್‌ಪೋಲ. ಒಂದಾನೊಂದು ಕಾಲದಲ್ಲಿ ವೈಭವದ ಶಿಖರವನ್ನಡರಿದ್ದ ಈ ಗಡದಲ್ಲಿ ಹಿಂದಿನ ಒಂದುನೂರನೆಯಂಶ ಶೋಭೆಕೂಡ ಉಳಿದಿರುವದಿಲ್ಲ. ಆದರೂ ಅರಮನೆ, ವಿಜಯಸ್ತಂಭ, ಕೀರ್ತಿಸ್ತಂಭ, ಮೊದಲಾದ ಕಟ್ಟಡಗಳು ನೋಡತಕ್ಕವುಗಳಾಗಿವೆ. ಪ್ರಾಚೀನ ಕಟ್ಟಡಗಳ ಭದ್ರತೆಯ ಮಾದರಿಯನ್ನು ತೋರುವ ಈ ಕಟ್ಟಡಗಳು ಕೊಂಚ ಕೂಡ ಅಚ್ಚಳಿದಿಲ್ಲ. ಪ್ರಾಚೀನ ಕಲಾ ಕೋವಿದರ ನೈಪುಣ್ಯತೆಯನ್ನು ಜಗತ್ತಿಗೆ ಸಾರುತ್ತ ಹಾಗೆಯೇ ನಿಂತಿರುವವು.

ಅರಮನೆ:—ಇದು ಬಹು ವಿಶಾಲವಾದದ್ದಿದ್ದು ತರತರದ ಕಲ್ಲುಗಳಿಂದ ಬಹು ರಮಣೀಯವಾಗಿ ತೋರುತ್ತಿದೆ. ಹಿಂದಿನ ಚಿತ್ರಗಾರರ ಮನೋಹರವಾದ ಚಿತ್ರಗಳು "ಕಲೆಯು ಧರ್ಮದ ಸಹಚರಿ"ಎಂದು ಕೂಗಿ ಹೇಳುತ್ತಲಿವೆ.

ವಿಜಯಸ್ತಂಭ:—೧೬೦ ಫೂಟು ಎತ್ತರವಾದ ಈ ಭವ್ಯವಾದ ಕಂಭವು ೯೦ ಲಕ್ಷ ರೂಪಾಯಿಗಳನ್ನು ತಿಂದದೆ. ಆ ಕಾಲದ ಮಾಳವದ ಸುಲ್ತಾನನಾದ ಖಿಲಿಜಿ ಮಹ್ಮದಶಹನನ್ನು ಹಣಿದ ಗುರುತಿದು! ಈ ಕಂಬವನ್ನೇರಿ ನೋಡಿದರೆ ಚಿತ್ತೂರ ಪಟ್ಟಣದ ನೋಟವು ಚಿತ್ತಾಕರ್ಷಕವಾಗಿದೆ. ಅಕಬರ ಬಾದಶಹನ ಬಾಯಿ ಬೆದರಿಕೆಗೆ ಸೊಪ್ಪು ಹಾಕದೆ ರಾಜಪುತ್ರರ ಕೆಚ್ಚಿದೆಯ ಪರಿಚಯವನ್ನು ಮಾಡಿಕೊಟ್ಟ ಜಯಮಲ್ಲ,ಫುತ್ತೂ ಎಂಬ ತಂದೆ ಮಕ್ಕಳ ಮಕಬರೆ(ಸಮಾಧಿ ಸ್ಥಳ) ಗಳು ಬಳಿಯಲ್ಲಿಯೇ ಅವೆ. ಭಾರತೀಯ ಆರ್ಯರ ಶೂರತನದ ಕುರುಹುಗಳಾದ ಇವು ಪ್ರತಿಯೊಬ್ಬ ಭಾರತೀಯನಲ್ಲಿ ಆ ಕ್ಷಣಮಟ್ಟಿಗಾದರೂ ವೀರಶ್ರೀಯ ಸಂಚಾರ ಮಾಡಗೊಡದಿರವು.

ಕೀರ್ತಿಸ್ತಂಭ:— ಇದು ಲಾಹೋರದಲ್ಲಿಯ ಜಹಾಂಗೀರನ ಮಕಬರೆಯ ಮೇಲಿನ ಮಿನಾರ (ಗೋಪುರ)ದ ತೆರನಿದ್ದು ಬಹು ಭವ್ಯವಾಗಿದೆ. ಇದನ್ನೇರಲು ಹಲವು ಸೋಪಾನಗಳಿದ್ದರೂ, ಯಾವಾಗಲೂ ವಿಶೇಷ ಕತ್ತಲೆಯಿರುವದರಿಂದ ಏರುವದು ಬಹು ದುಸ್ತರವಾಗಿದೆ.

ಅರಸುಕುಮಾರಿಯರು ನೀರಾಟವನ್ನಾಡುವ ಕೆರೆಗಳೂ, ಆ ಕೆರೆಗಳಿಗೆ ಹೋಗುವ ಗುಪ್ತ ಬೀದಿಗಳೂ, ಅನೇಕ ಅವೆ. ಸ್ವಚ್ಛತೆಯಿಲ್ಲದ್ದರಿಂದ ಆ ಬೀದಿಗಳು ಕಾಡ ಮೃಗಗಳ ಬೀಡುಗಳಾಗಿವೆ.

ಇವುಗಳಲ್ಲದೆ ಕಿಲ್ಲೆಯ ಮೇಲಿರುವ ಜೈನರ ಇಮಾರತುಗಳಲ್ಲಿಯು ಶಿಲ್ಪಕಲೆಯ ಮಿಗಿಲಾದದ್ದು. ಭಾರತೀಯ ಶಿಲ್ಪಕಲೆಯ ಮಾದರಿಯನ್ನಿಲ್ಲಿ ಕಾಣಬಹುದು.

ಆರ್ಯನಾರಿಯರ ಕೈಯನ್ನು ಅಲ್ಲಾವುದ್ದೀನನಿಗೆ ತೋರಿದ ಪವಿತ್ರ ಮೂರುತಿ ಪದ್ಮಿನಿಯ ಮಹಾಲು ಕೂಡ ಅಲ್ಲಿ ನೋಡ ಸಿಕ್ಕುತ್ತದೆ. ಆ ಯವನ ಭೂಪನ ಕಾಮಾಗ್ನಿಗೆ ತುತ್ತಾಗದೆ ಆ ವೀರಪತ್ನಿ—ವೀರಮಾತೆಯು ಅಗ್ನಿನಾರಾಯಣನ ರಥವನ್ನೇರಿ ಸಗ್ಗವನ್ನಡರಿದ ಸ್ಥಳವು ಹಿಂದಿನದನ್ನು ಹೇಳಿ ಕಳವಳನ್ನುಂಟು ಮಾಡುತ್ತದೆ.

ಭಾರತೀಯರ ಚಿತ್ರಕಲೆ, ಶಿಲ್ಪಕಲೆ, ಪವಿತ್ರತೆ, ವೀರತ್ವಗಳನ್ನು ಹೊಗಳುವ ಹೆಗ್ಗುರುತುಗಳಿಂದೊಡಗೂಡಿದ ಈ ದುರ್ಗವು ಸದ್ಯಕ್ಕೆ ಹಾಳು ಸುರಿಯುತ್ತಿದ್ದರೂ ಹಳೆಯದನ್ನು ಹೇಳಿ, ಮಲಗಿದ ಜನಾಂಗವನ್ನು ಬಡಿದೆಬ್ಬಿಸಿ, ನವಜೀವನವನ್ನು ತುಂಬುವ ಜೀವಾಳವಾಗಿದೆ ಎಂದು ಎದೆತಟ್ಟಿ ಹೇಳಬಹುದು.

ಸೂಟಿಯ ಶಿಕ್ಷಣ ಯೋಜನೆ. ೧೯೩೩

ಸಾಲೆಯಲ್ಲಿ ಕಲಿಸುವ ವಿಷಯಗಳಲ್ಲಿ ಪ್ರಕೃತಿ ವಿಮರ್ಶೆಯು ಒಂದಾಗಿರುವದಷ್ಟೇ. ಸಾಲೆಗೆ ಹೊಂದಿ ತೋಟಮಾಡಿಸಲು ಸ್ಥಳ ಮೊದಲಾದ ಅನುಕೂಲಗಳಿರುವದಿಲ್ಲೆಂದು ಈ ವಿಷಯವು ಸಾಮಾನ್ಯವಾಗಿ ದುರ್ಲಕ್ಷಿಸಲ್ಪಡುವದು. ಆದರೆ ಪ್ರಕೃತಿ ವಿಮರ್ಶೆ ಯೆಂದರೆ ವನಸ್ಪತಿಯ ವಿಮರ್ಶೆಯಷ್ಟೇ ಅಲ್ಲ. ಅದರಲ್ಲಿ ಸೂರ್ಯ, ಚಂದ್ರ ನಕ್ಷತ್ರಗಳು ಮೊದಲಾದ ಸೃಷ್ಟಿಚಮತ್ಕಾರಗಳನ್ನು ಅವಲೋಕನಮಾಡುವದೂ ಸಮಾವೇಶವಾಗು ವದು. ಇವುಗಳ ವಿಷಯದಲ್ಲಿ ಹಿಂದೂ ಜನರು ಆದಿಶಿಕ್ಷಕರು. ನಮ್ಮ ದೇಶದಲ್ಲಿ ದಿನದ ವ್ಯವಹಾರದಲ್ಲಿ ಹಿಂದೂ ಪದ್ಧತಿಯಿಂದಲೇ ಗ್ರಹ ನಕ್ಷತ್ರಗಳ ಗತಿಗಳನ್ನು ಎಣಿಸುವದು, ಹೇಳುವದು ರೂಢಿಯಲ್ಲಿವೆ. ಇವುಗಳ ಬಗ್ಗೆ ಅನೇಕರಲ್ಲಿ ಅಜ್ಞಾನವು ತುಂಬಿದೆ. ಆದ್ದರಿಂದ ಈ ಮನೋರಂಜಕವೂ ಉಪಯುಕ್ತವೂ ಆದ ವಿಷಯವನ್ನು ನಾವು ದುರ್ಲಕ್ಷಿಸುತ್ತೇವೆ.

ನಮ್ಮ ಸಾಲೆಗಳ ಇಯತ್ತೆ ಪತ್ರಿಕೆಯಲ್ಲಿ ಕಲಿಸಬೇಕೆಂದು ನಿರ್ದೇಶಿಸಿದ ಈ ವಿಷಯವನ್ನು ಕಲಿಸಲಿಕ್ಕೆ ಬೇಕಾಗುವ ಜ್ಞಾನವನ್ನೂ ಈ ವಿಷಯದಲ್ಲಿ ಹೆಚ್ಚಿನ ಜ್ಞಾನ ವನ್ನು ಮಾಡಿಕೊಳ್ಳಲಿಕ್ಕೆ ಅವಶ್ಯವಾದ ಜಿಜ್ಞಾಸೆಯನ್ನೂ ಉಂಟುಮಾಡುವಂತೆ ಕೆಲವು ಸಂಗತಿಗಳನ್ನು ವ್ಯಾಖ್ಯಾನರೂಪದಿಂದ ತಿಳಿಸಿಹೇಳಿ, ಇವುಗಳನ್ನು ಪ್ರತ್ಯಕ್ಷವಾಗಿ ಆಕಾಶ ದಲ್ಲಿ ತೋರಿಸಲಿಕ್ಕಾಗಿ ಜ್ಯೋತಿಷ ಶಾಸ್ತ್ರವನ್ನು ಅಭ್ಯಾಸಮಾಡಿ, ಪಂಚಾಂಗ ಮೊದಲಾದ ವುಗಳನ್ನು ಮಾಡುತ್ತ ಹೆಸರಾದ, ಸದ್ಯಕ್ಕೆ ಅಥಣಿಯ ಹಾಯಸ್ಕೂಲಿನಲ್ಲಿ ಶಿಕ್ಷಕರಾಗಿರುವ ಮ|| ರಾ|| ರಾ|| ಬಿ. ಎನ್. ಜೇರೆ ಬಿ. ಎ. ಈ ಮಹನೀಯರು ಶಿಕ್ಷಣಯೋಜನೆಗಾಗಿಯೇ ಧಾರವಾಡಕ್ಕೆ ಬಂದು ಪ್ರಾಥಮಿಕ ಶಿಕ್ಷಕರಿಗೆ ಜೋತಿಷಶಾಸ್ತ್ರದ ಕೆಲವು ಮಾಹಿತಿಯನ್ನು ದಿನಾಲು ಹೇಳುವದಲ್ಲದೆ ರಾತ್ರಿ ೮ ಘಂಟೆಗೆ ಗ್ರಹ ನಕ್ಷತ್ರಗಳನ್ನು ತೋರಿಸಲು ಒಪ್ಪಿ ಕೊಂಡಿರುವರು. ಆದ್ದರಿಂದ ಈ ಬಗ್ಗೆ ಕಾರ್ಯಕ್ರಮದಲ್ಲಿ ಸ್ವಲ್ಪ ಬದಲಾವಣೆ ಮಾಡಿದೆ; ಅಂದರೆ ನಾಲ್ಕು ದಿವಸ ದಿನಾಲು ಅರ್ಧ ತಾಸಿನಂತೆ ಇದಕ್ಕೆ ಅವಕಾಶವನ್ನು ಒದಗಿಸಿ ಕೊಟ್ಟಿದೆ.

ಬರೆದುಬಂದ ಪತ್ರ.

ಶಾಳಾ ಶಿಂದೀಕುರಬೇಟ ಜಿ. ಬೆಳಗಾವ— ಈ ಊರ ಕನ್ನಡ ಶಾಲೆಯು ಮಹಾಲಿಂಗೇಶ್ವರನ ಗುಡಿಯಲ್ಲಿದ್ದು ಅದರ ಕೋಣೆಗಳು ತೀರ ಬೀಳುವಂತೆ ಇದ್ದವು. ಅದನ್ನು ಶ್ರೀ ನರಸಪ್ಪ ಕಳಸಣ್ಣವರ, ಶ್ರೀ. ಸತ್ಯಪ್ಪ ಶೆಂಡೂರಿ, ರಾಮಪ್ಪ ಮಾನಿಗೋಳ ಇವರು ಸಾರ್ವಜನಿಕ ಹಣದೊಳಗಿಂದ ದುರಸ್ತ ಮಾಡಿಕೊಟ್ಟರು. ಇದೇ ಕೆಲಸಕ್ಕೆ ಆ ಶಾಲೆಯ ಹೆ. ಮಾ. ಮಿ. ಜಾಧವ ಇವರು ೧೦ ರೂ. ಕೊಟ್ಟರು. ಇದು ಸ್ತುತ್ಯವು.

ಪ್ರಕಟನೆ.

ಮುಂಬಯಿ ಇಲಾಖೆಯೊಳಗಿನ ಉರ್ದು ಶಾಲೆಗಳಿಗಾಗಿ ಉರ್ದು ಬುಕ್ ಕಮಿಟಿ (ಪೂನಾ) ಯವರು ೨೭-೮-೩೨ ನೇ ದಿವಸ ಮಂಜೂರ ಮಾಡಿದ ಪುಸ್ತಕಗಳ ಯಾದಿಯು.

ನಂಬರು	ಬುಕ್ಕುಗಳ ಹೆಸರು.	ಗ್ರಂಥಕರ್ತರು.	ಪ್ರಕಾಶಕರು.	ಬೆಲೆ.	ಯಾತಕ್ಕೋಸ್ಕರ ಮಂ. T. ಜಿ. L. ಆ P. ಪ್ರಾಯುಕ್ತ.
೧	ಅಸಾನೆ ಸರಫ ನಹು ಹಿಸ್ಸಯೆ ಅವ್ವಲ ಭಾಗ ೧ ೧ ನೆ ಆ. ೧೯೩೨	ಮುಸ್ತಾಸ್ರಝು ಅಹಮ್ಮದ ಹೆ. ಮಾ. ಸೆಂಟ್ರಲ್	ಗ್ರಂಥಕರ್ತರು	೮-೪-೦	ಉರ್ದು ಪ್ರಾ. ಶಾಲೆಗಳ ೪ನೇ ಇಯತ್ತೆಗಾಗಿ ಟೆಕ್ಸ್ಟ್
೨	ಬಚ್ಚ್ಯಾಕಿ ತಫಶಿರ ೧ನೇ ಆ. ೧೯೩೨	ಮೌಲ್ವಿ ಅಬು ಮಹಮ್ಮದ	ಗ್ರಂಥಕರ್ತರು, ದಫ್ತರ ಎ. ಕುರನಿ ತಹರೀಕ ಹೈದರಾಬಾದ (ಡೆಕ್ಕನ್)	೧-೦-೦	P. L. ಉರ್ದು ಪ್ರಾ. ಶಾಲೆಗಳಿಗಾಗಿ
೩	ಸದರ ಶಿಕಾರ ೧ನೇ ಆ. ೧೯೩೧	ಮುಫ್ತಿ ಎಚ್. ಡಿ ಇಕ್ಬಲ್ ಬಿ. ಎ. ಇಂಗ್ಲಿಷ ಟೀಚರ ಮುಸ್ಲೀಮ ಹೈಸ್ಕೂಲ ಗುಜರಾತ್ (ಪಂಜಾಬ)	ತಾಲೀಮ ಏಜನ್ಸಿ ಮೋಹಿಸಿರೋಡ ಲಾಹೋರ	೮-೩-೦	ಸದರ
೪	ರಮುಜಾನಕಿ ಕಾಹನಿ ಸದರ	ಸದರ	ಸದರ	೦-೪-೦	ಸದರ

೫	ತಾರೀಖೆ ಇಸ್ಲಾಮ ೧೯೩೧	ಮಿಸ್ ಫಾತಿಮಾ ಬೇಗಮ್. ಸುಪ. ಮುನಸಿಪಲ್ ಉರ್ದು ಗರ್ಲಸ್ಕೂಲ ಮುಂಬಯಿ	ದಿ. ಮ್ಯಾನೇಜರ ಜನರಲ್ ಸಪ್ಲಾಯ್ ಸ್ಟೋರ ಲಾಹೋರ	೦-೫-೦	ಸದರ
೬	ಅಖ್ಲಾಕಿ ಕಹಾನಿಯಾ (೧೯೨೮)	ಸದರ	ಸದರ	೦-೮-೦	ಸದರ
೭	ಬಚ್ಚೋಂಕಿ ಗೀತ ೧ನೇ ಆ. ೧೯೨೬	ಮೌಲ್ವಿ ಅಬ್ದುಲ್‌ಖಾದಿರ ಖಾನ 'ಹಾರಿರಾತ್' -ಎ- ಶಾನಿಪತಿ	ಗ್ರಂಥಕರ್ತ	೦-೮-೦	P. ಮತ್ತು L. ಉರ್ದು ಪ್ರಾ. ಶಾಲೆಗಳಿಗೆ
೮	ದರಬಾರಿ ರಿಸಾಲತ್ ೧ನೇ ಆ.೧೯೩೨	ಫೈಜಲುಲ್ಲಾ ಖಾನ ಶಾಹಜ ಹಾನಪುರಿ ಸುಪ. ಮದ್ರಾಸ -ಎ- ಹಾಸಿಮಿಯಾ ಮ ೦.೩	ಗ್ರಂಥಕರ್ತ	೦-೮-೦	ಟೀಚರ್ಸ ಲಾಯಬ್ರರಿ
೯	ಜಗ್ರಾಫಿಯಾ -ಎ-ಜದೀದ ಪಹಿಲಿ ಕಿತಾಬ ೧ನೇ ಆ. ೧೯೩೧	ಮುನಸಿಲಾಲ್ ಆಗ್ರಾವಾಲ, ಬಿ. ಈಡಿ (ಎಡಿನ್‌ಬರೋ) ಎಫ್. ಆರ್. ಜಿ. ಎಸ್. ಲಂಡನ್	ಮೆಸರ್ಸ ಮ್ಯಾಕ್ಮಿಲನ್ ಕ. ಮುಂಬಯಿ ಕಲಕತ್ತಾ	೦-೧೨-೦	ಸದರ
೧೦	ಅಫಸಾನೆ ಹಿಂದ ೧ನೇ ಆ. ೧೯೩೨	ಜಿ. ಎನ್. ಗೆನ್ಸ್	ಸದರ	೦-೧೨-೦	ಸದರ

ನಂಬರು.	ಬುಕ್ಕುಗಳ ಹೆಸರು.	ಗ್ರಂಥಕರ್ತರು.	ಪ್ರಕಾಶಕರು.	ಬೆಲೆ.	ಯಾವತರಗತಿಗೆ ಯೋಗ್ಯ ವಂ. T. ಬಿ. L. ಅ. P. ಪ್ರಾಯುಕ್ತವು.
೧೧	ಬಬೂಲ್ ಹಿಸಾಬ (ಫಾರ್‌ಟೀಚರ್ಸ) ೧ನೇ ಆ. ೧೯೩೨	ಶೇಖಚಂದ ಎಮ್. ಡಿ. ಬಿ. ಎ. ಟೀಚರ ರಾಜಕುಮಾರ ಕಾಲೇಜ ರಾಜಕೋಟ	ಶೇಖ ಬ್ರದರ್ಸ, ಗಣಿತ ಪ್ರವೇಶ ಮತ್ತು ಬಬೂಲ್ ಹಿಸಾಬ ಆಫೀಸ ಪುರಾ ಸ್ಟೇಶನ್‌ರೋಡ ರಾಜಕೋಟ	೦–೬–೦	ಸದರ
೧೨	ಪ್ಯಾರೆ ಬಚ್ಚೊಂಕಾ ಪ್ಯಾರಾ ಫಾಯದಾ ೧ನೇ ಆ. ೧೯೩೨	ಅಬ್ದುಲ್‌ಕಾದಿರ ಹೆ. ಮಾ. ಉರ್ದುಬಾಯ್ಜ ಸ್ಕೂ. ನಂ ೨೩ ಪೂನಾ ಸಿಟಿ.	ಗ್ರಂಥಕರ್ತ	೦–೨–೦	P. ಮತ್ತು L. ಉರ್ದು ಪ್ರಾಥಮಿಕ ಶಾಲೆಗಳಿಗೆ

ಸಹಿ— ಇಂಗ್ರೇಜಿ
ಸೆಕ್ರೆಟರಿ ಉರ್ದು ಬುಕ್ ಕಮೀಟಿ.

೭–೩–೧೯೩೩

ಸಚಿತ್ರ ಹೊಸಕನ್ನಡ ಬಾಲಬೋಧೆ

ನರಸಿಂಹ ಪುರಾಣಿಕರು ಬರೆದದ್ದು ಬೆಲೆ ೦-೪-೦

ಕನ್ನಡದಲ್ಲಿ ಬಾಲಕರಿಗಾಗಿಯೇ ಬರೆದ ಪುಸ್ತಕಗಳು ತೀರ ವಿರಳವಾಗಿರಲು ಅವರಿ ಾಗಿಯೇ ಬರೆಯಲು ಯತ್ನಿಸಿದ ಜನರು ಕಡಿಮೆಯಾಗಿರುವದೇ ಕಾರಣ. ಇತ್ತೀಚೆಗೆ ಾಲಕರಿಗಾಗಿ ಬರೆಯಲು ಹೊರಟವರಲ್ಲಿ ಬಹು ಜನರು ಬಾಲಬೋಧಿನಿ, ಶಿಶುಬೋಧಿನಿ, ಾಲಬೋಧೆ ಮುಂತಾದ ಹೆಸರುಗಳಿಂದ ಮಕ್ಕಳ ಅಕ್ಷರ ಶಿಕ್ಷಣಕ್ಕೆ ಸಹಾಯವಾಗುವ ಾಠಪುಸ್ತಕಗಳನ್ನೇ ಬರೆದು ಮುಗಿಸಿ ತೃಪ್ತರಾದಂತೆ ಕಂಡುಬರುವದು. ಬಾಲಕರ ್ವತಂತ್ರ ವಾಚನಕ್ಕೆ ಅರ್ಹವಾದ ಚಿಕ್ಕ ಪುಸ್ತಕಗಳೂ ಕಡಿಮೆ. ಪಾಠಶಾಲೆಯ ಪುಸ್ತಕ ಳೇ ಆದರೂ ಆಗಲಿ, ಅಕ್ಷರ ಶಿಕ್ಷಣದ ಮುಂದೆ ಸಾಗಿ ಮೊದಲನೆಯ ಇಯತ್ತೆಯ ದ್ಯಾರ್ಥಿಗಳ ವಾಚನ ಪುಸ್ತಕವನ್ನು ಬರೆಯಲು ಯತ್ನಿಸಿದವರು ಕೂಡ ತೀರ ವಿರಳ. ದೇಕೆ ಲೇಖಕರು ಇಷ್ಟು ಅಲ್ಪ ಸಂತುಷ್ಟರಾಗಿರುವರೋ ತಿಳಿಯದು.

ಪ್ರಸ್ತುತ ಪುಸ್ತಕದಲ್ಲಿ ಅಕ್ಷರ ಶಿಕ್ಷಣವು ಶಬ್ದವಾಚನದಿಂದ ಪ್ರಾರಂಭವಾಗಿದೆ. ಲ್ಲ ಮೂಲಾಕ್ಷರಗಳೂ ಬರುವ ವರೆಗೆ ಗುಣಿತಾಕ್ಷರಗಳು ಪ್ರಾರಂಭವಾಗಿಲ್ಲ. ಏತ ಪು. ೧೫)ದ ಚಿತ್ರವು ಸರಿಯಾಗಿದ್ದಂತಿಲ್ಲ. ಹಾರಕ, ತಾಕಣ, ಬಂಡಿಯ ಹಾರಿಯ ಾಲು, ನೊದೆ, ಬುವ್ವ ಮುಂತಾದವುಗಳಿಗೆ ಬಾಲಕರಿಗೆ ಅರ್ಥವಾಗದು. ಮ್ಯೆಯ್ಯಿ, ಕೈಯಿ ುಂತಾದ ರೂಪಗಳು ವ್ಯಾಕರಣಕ್ಕೆ ಸಮ್ಮತವಾಗಲಾರವು. ಒಟ್ಟಿನಮೇಲೆ ಈಗಾಗಲೇ ಈ ವಿಷಯದಲ್ಲಿ ಎಳೆಂಟು ಪುಸ್ತಕಗಳು ಪ್ರಚಾರದಲ್ಲಿರುವದರಿಂದ ಇದಕ್ಕೆ ಎಷ್ಟು ುಟ್ಟಿಗೆ ಸಹಾಯ ಸಂಪತ್ತಿಯು ದೊರೆಯಬಹುದೋ ಹೇಳಲಾಗುವದು.

ಗೀತಾರ್ಥ ಬೋಧಿನಿ ಬೆಲೆ ೦-೧೨-೦

ಶ್ರೀ. ಬಾ. ವಾ. ದೇಟಗೇರಿ (ಮಾಸ್ತರ ನರೇಂದ್ರ)

ಲೋಕಮಾನ್ಯ ಟಿಳಕರ “ ಗೀತಾರಹಸ್ಯ ”ವೇ ಇದಕ್ಕೆ ಆಧಾರ ಗ್ರಂಥ. ಮೂಲ ೀತೆಯ ೧೮ ಅಧ್ಯಾಯಗಳಲ್ಲಿ ಬಂದಿರುವ ವಿಚಾರಗಳನ್ನು ಸುಲಭವಾದ ಭಾಮಿನೀ ಟ್ಪದಿಯಲ್ಲಿ ಬರೆದಿರುವ ಈ ಗ್ರಂಥವು ಕನ್ನಡಿಗರ ಆದರಕ್ಕೆ ಪಾತ್ರವಾಗಬಹುದೆಂದು ಂಬುವೆವು. ಅಪ್ಪಿತಪ್ಪಿ ಸೇರಿರುವ ವ್ಯಾಕರಣ ದೋಷಗಳು, ತಿಳಿಯದೆಯೆ ನುಸುಳಿ ುವ ಪರಭಾಷೆಯ ಪದಪ್ರಯೋಗಾದಿಗಳು, ಬರೆಹ ಮುದ್ರಣಗಳ ಸಮಯದಲ್ಲಿ ಕೈ ಪ್ಪಿ ಬಿದ್ದಿರುವ ಅಲ್ಪ ದೋಷಗಳು ಇವು ಮುಂದಣ ಮುದ್ರಣದಲ್ಲಿ ಸರಿಯಾಗುವ ೆಂದು ನಂಬಿ ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ನೋಡುವರೆಂದೂ ಗ್ರಂಥ ರ್ತರ ಈ ಪ್ರಥಮ ಪ್ರಯತ್ನವನ್ನು ಪ್ರೋತ್ಸಾಹಿಸುವರೆಂದೂ ಭಾವಿಸುವೆವು.

Reg. No. B. 2567

೫೫

ನೇ ವಯಸ್ಸಿನಲ್ಲಿ ನೀವು ಯಾವ ಸ್ಥಿತಿಯಲ್ಲಿರುವಿರೆಂಬದರ ವಿಚಾರ ಮಾಡಿರುವಿರಾ! ತಾರುಣ್ಯವು ಹೊರಟಿಹೋಗುವಾಗ ವೃದ್ಧಾವಸ್ಥೆಯ ಚಿತ್ರವು ಮುಂದೆ ನಿಲ್ಲದಿರುವದು ಸಹಜವೇ. ಆಗ್ಗೆ ಹಣವಿಲ್ಲದಿದ್ದರೆ ಬಾಳು ಕೀಳಾಗುವದೆಂಬದನ್ನು ನೀವು ವಿಚಾರಿಸುವದು ಯುಕ್ತವೇ. ಮೊದಲಿನ ಹಾಗೆಯೇ ಮುಪ್ಪಿನ ಕಾಲವನ್ನು ಸೌಖ್ಯದಿಂದ ಕಳೆಯುವದು ಹೇಗೆ...? ಭೆಟ್ಟಿಯಾಗಿರಿ ಇಲ್ಲವೆ ಪತ್ರ ಬರೆಯಿರಿ.

ಎಸ್. ಜಿ. ಶಾಚ್ಯಾಪೂರ

ಚಿಕ್ಕೋಡಿ.

ಸ್ಯಾಂಪಲ್] [ಫುಕ್ಕ

ಉತ್ತಮ ಮಸೀ ಚೀಟುಗಳು

ನೀಲೀಕಪ್ಪು, ಕೆಂಪು, ಜಾಂಬಳಿ ಮಸಿಯ ಚೀಟುಗಳು ಈ ಕಂಪನಿಯು ಬಹಳ ಜನರಿಂದ ಶಿಫಾರಸ ಪಡೆದು ಮೆಡಲ್ಲುಗಳನ್ನು ಸಂಪಾದಿಸಿರುತ್ತದೆ.

ದರಗಳು

೧೦೦	ಚೀಟುಗಳಿಗೆ	೦—೭-
೫೦೦	,,	೧—೧೪
೧೦೦೦	,,	೩—೦-
೧೦೦೦೦	,,	೨೭—೮—೦ (ರೇಲ್ವೆ ಫ್ರಿ

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರಮಾಡಿ

ಕರ್ನಾಟಕ ಇಂಕ ಕಂಪನಿ,

ಬಾಗಲಕೋ

ಸರಕಾರದಿಂದ ಮಂಜೂರಾದ

ಆರೋಗ್ಯ ಶಾಸ್ತ್ರದ ಹೊಸ ಟೆಕ್ಸ್ಟ ಪುಸ್ತಕವು

ಶರೀರ ಸಂಗೋಪನ ಶಾಸ್ತ್ರ.

ಬೆಲೆ ೧೦ ಆಣೆ   ಕಮಿಶನ್ ೧೦೦ಕ್ಕೆ ೨೦.

ಲೇಖಕ:—ದ. ಬಾ ಬರ್ವೇ,. ಬಿ. ಎಜಿ ರಿಸರ್ಚ ವರ್ಕರ, ಶೇತಕೀ ಕಾಲೇಜ, ಪುಣೆ.

ಈ ಪುಸ್ತಕದಲ್ಲಿ ಕನ್ನಡ ೫, ೬, ೭, ಹಾಗು ವ್ಹ. ಫಾಯನಲ್ ಪರೀಕ್ಷೆಗೆ ಬೇಕಾಗುವ ಎಲ್ಲ ವಿಷಯವು ಬಂದಿರುವದು. ಇದರ ಮರಾಠೀ ಆವೃತ್ತಿಯು ಮಧ್ಯಭಾಗ ಬಹುತರ ಎಲ್ಲ ಸಾಲೆಗಳಲ್ಲಿ ಟೆಕ್ಸ್ಟ, ಎಂದು ಉಪಯೋಗವಾಗುತ್ತಿರುವದು. ಸರಕಾರಿ ಟ್ರೇನಿಂಗ ಕಾಲೇಜುಗಳು ಹಾಗು ಪ್ರ್ಯಾಕ್ಟಿಸಿಂಗಸ್ಕೂಲುಗಳಲ್ಲಿಯೂ ಇದೇ ಟೆಕ್ಸ ಎಂದು ಉಪಯೋಗವಾಗುತ್ತಿರುವದು.

ಈ ಪುಸ್ತಕವನ್ನು ತಜ್ಞರು ತುಂಬಾ ಹೊಗಳಿದ್ದಾರೆ. ಬೆಲೆಯಲ್ಲಿ ಇಷ್ಟು ಅಗ್ಗವಾ ಪುಸ್ತಕವು ಬೇರೊಂದಿಲ್ಲ. ಪುಸ್ತಕದಲ್ಲಿ ೨೨೫ ಪುಟಗಳೂ, ೫೫ ಆಕೃತಿಗಳೂ (ಲಾಯಿನ ಬ್ಲಾಕ್ಸ) ೨ ಬಣ್ಣದ ಆಕೃತಿಗಳೂ ಒಂದು ನಕಾಶವೂ ಇರುವವು.

ಪುಸ್ತಕಗಳು ಸಿಕ್ಕುವ ಸ್ಥಳಗಳು:—

ಸ್ಟುಡಂಟ್ಸ ಓನ್ ಬುಕ್‌ಡಿಪೋ, ಧಾರವಾಡ, ತ. ನಾ. ಗೋಡಬೋಲೆ, ಪುಣೆ, ಹಾಗು ಬೆಳಗಾಂವ, ಹುಬ್ಬಳ್ಳಿ, ಕಾರವಾರ, ವಿಜಾಪುರ ಇಲ್ಲಿಯ ಎಲ್ಲ ಬುಕ್‌ಸೇಲರುಗಳಲ್ಲಿ

Reg. No. B. 2567

ಕನ್ನಡ

ಪ್ರಾಥಮಿಕ ಶಿಕ್ಷಣ

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

Kannada Prathamik Shikshana

— MAY & JUNE 1933 —

ಸಂಪಾದಕ— **ವೆಂಕಟೇಶ ನರಸಿಂಗರಾವ ಮುಗದಾಳ** ಬಿ. ಎ.,

ಸಂಪುಟ ೭೦] ಮೇ-ಜೂನ ೧೯೩೩ [ವರ್ಷ ೫ ಸಂ ೨-೩

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ	ಪುಟ
೧.	ಸೂಟಿಯ ಶಿಕ್ಷಣಯೋಜನೆ	೧
೨.	ಕವಿತೆಗಳು	೨೧
೩.	ಜನಸಾಮಾನ್ಯ ಶಿಕ್ಷಣ	೨೫
೪.	ನಿಬಂಧ ಲೇಖನ	೨೭
೫.	ಸಿಂಹಳ ದ್ವೀಪ	೩೬
೬.	ಶಿಕ್ಷಣದ ಬಗ್ಗೆ ಪ್ರಮುಖರ ಅಭಿಪ್ರಾಯಗಳು	೩೯
೭.	ದ್ವಂದ್ವ ಸಮಾಸ ವಿಚಾರ	೪೭
೮.	ನೇಪಾಳದೇಶ	೫೧
೯.	ಹೊಸದಾಗಿ ಆದ ಅದ್ಭುತ ಪ್ರಯತ್ನಗಳು	೫೫
೧೦.	ಹೆ. ಮ. ಮು. ಪರೀಕ್ಷೆಯ ಪರಿಣಾಮ	೫೭
೧೧.	ಪ್ರಕಟನೆಗಳು	೫೯

Printed by K. R. Bhise at the Karnatak Printing Works, Dharwar
& Published by V. N. Magdal, B.A.,
Head Master, Training School, Dharwar, at his Office

ಪ್ರಕಟನೆ

" ಹಿಂದುಸ್ತಾನದ ಭೂಗೋಲ "

ವಿ. ವ್ಹಿ. ಎನ್. ಮುಗದಾಳಕೃತ

ಈ ಪುಸ್ತಕದ ಹೊಸ ಆವೃತ್ತಿಯು ಈಗ ಅಚ್ಚಾಗಿದೆ. ಈ ಆವೃತ್ತಿಯಲ್ಲಿ ಹೊ
ನಕಾಶಗಳೂ ಆಕೃತಿಗಳೂ ಚಿತ್ರಗಳೂ ಸೇರಿಸಲ್ಪಟ್ಟಿವೆ. ಪುಸ್ತಕವು ಪೂರ್ಣವಾಗಿ
ಬೆಳಿಸಲ್ಪಟ್ಟಿದೆ. ಹಲವು ಅನುಭವಿಕ ಶಿಕ್ಷಕರ ಸೂಚನೆಗಳು ಅನುಸರಿಸಲ್ಪಟ್ಟಿ

ಬೆಲೆ ೮ ಆಣೆ

" ಏಶಿಯಾಖಂಡದ ಭೂಗೋಲ "

ವಿ. ವ್ಹಿ. ಎನ್. ಮುಗದಾಳಕೃತ

ಹೊಸ ಪದ್ಧತಿಯ ಮೇರೆಗೆ ಚಿತ್ರ ನಕಾಶಗಳಿಂದ ಕೂಡಿದೆ. **ಬೆಲೆ ೮ ಆ**
ಇಂಗ್ಲಿಷ ಶಾಲೆಗಳಲ್ಲಿ ಸಹ ಉಪಯೋಗಿಸಲು ಮಂಜೂರಾಗಿದೆ.

ಪುಸ್ತಕಗಳು ಸಿಕ್ಕುವ ಸ್ಥಳ:—

ವಿ. ಏ. ಆರ್ ಶಿವನಾಗಪ್ಪ

ವಾಗ್ವಿಲಾಸ ಬುಕ್‌ಡಿಪೋ,

ದುರ್ಗದ ಬೈಲು,

ಹುಬ್ಬಳ್ಳಿ

ಹಾಗೂ ಕರ್ನಾಟಕದ ಎಲ್ಲ ಮುಖ್ಯ ಬುಕ್‌ಸೇಲರರಲ್ಲಿ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:— **ವೆಂಕಟೇಶ ನರಸಿಂಗರಾವ ಮುಗದಾಳೆ, ಬಿ. ಎ.,**

ಸಂಪುಟ ೭೦ ||| ಮೇ, ಜೂನ ೧೯೩೩ ||| ವರ್ಷ೫; ಸಂ. ೨-೩

ಸೂಟಿಯ ಶಿಕ್ಷಣಯೋಜನೆ ೧೯೩೩

ಹಿಂದಿನ ವರುಷದಂತೆ ಧಾರವಾಡದ ಶಿಕ್ಷಕಶಿಕ್ಷಣಾಲಯಗಳ ಚಾಲಕರು ಈ ವರುಷವೂ ಪ್ರಾಥಮಿಕ ಶಿಕ್ಷಕರಿಗೋಸ್ಕರ ಬೇಸಿಗೆಯ ಸೂಟಿಯ ಆರಂಭದ ಆರು ದಿನಗಳವರೆಗೆ ಶಿಕ್ಷಣಯೋಜನೆಯನ್ನು ಏರ್ಪಡಿಸಿದ್ದು ಎಲ್ಲ ಶಿಕ್ಷಕರಿಗೂ ಗೊತ್ತಿದ್ದ ಸಂಗತಿಯು. ಈ ಯೋಜನೆಯು ಮೇ ತಿಂಗಳ ೧ನೆಯ ತಾರೀಖಿನಿಂದ ೬ನೆಯ ತಾರೀಖು ಪೂರ್ಣ ಆರುದಿವಸಗಳವರೆಗೆ ಟ್ರೇನಿಂಗ ಕಾಲೇಜದ ಜನರಲ್ ಹಾಲಿನಲ್ಲಿ ಒಳ್ಳೇ ವಿಜೃಂಭಣೆಯಿಂದ ನೆರವೇರಿತು. ಕಳೆದ ವರುಷ ಬಂದಿದ್ದ ಶಿಕ್ಷಕ ಶಿಕ್ಷಿಕೆಯರ ಸಂಖ್ಯೆಗಿಂತ ಈ ವರುಷದ ಸಂದಣಿಯು ಹೆಚ್ಚಾಗಿದ್ದಿತ್ತು. ಶಿಕ್ಷಕ ಶಿಕ್ಷಿಕೆಯರು ತಮ್ಮ ಸಣ್ಣ ಬೇಸಿಗೆಯ ಸೂಟಿಯ ಆರಂಭದ ದಿವಸಗಳನ್ನು, ಹಿಂದುಮುಂದೆ ನೋಡದೆ, ತಮ್ಮ ಉದ್ಯೋಗಕ್ಕೆ ಅವಶ್ಯವೆನಿಸುವ ಹೊಸ ಜ್ಞಾನವನ್ನು ಸಂಪಾದಿಸುವದರಲ್ಲಿ ಉತ್ಸುಕತೆಯಿಂದ ಕಳೆದರು. ಮೇ ತಿಂಗಳ ಆರಂಭವೆಂದರೆ ಬೇಸಿಗೆಯ ಭರವು; ವರ್ಷದವರೆಗೆ ಕಷ್ಟದಿಂದ ದುಡಿದು ಬಳಲಿ ಬೆಂಡಾದ ಶಿಕ್ಷಕರಿಗೆ ವಿಶ್ರಾಂತಿಯನ್ನು ಹಾರೈಸುವ ದಿನಗಳ ಆರಂಭಕಾಲವು. ಇಂಥ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಶಿಕ್ಷಕವೃಂದವು ನಮ್ಮ ವಿಜ್ಞಾಪನೆಯನ್ನು ಮನ್ನಿಸಿ ಇಲ್ಲಿಗೆ ಬಂದು, ಕಷ್ಟನಷ್ಟಗಳನ್ನು ಎಣಿಸದೆ, ನಾವು ಏರ್ಪಡಿಸಿದ ಶಿಕ್ಷಣ ಯೋಜನೆಯನ್ನು ಪೂರ್ಣ ಯಶಸ್ವಿಯಾಗಿ ಮಾಡಿದ್ದರ ಬಗ್ಗೆ ನಮ್ಮ ದಕ್ಷಿಣಭಾಗದ ಶಿಕ್ಷಕವೃಂದವನ್ನು ನಾವು ಮನಃಪೂರ್ವಕವಾಗಿ ಅಭಿನಂದಿಸುವೆವು.

ಈ ಕಾರ್ಯದ ಸಾಂಗತೆಗೆ ಹೋದವರುಷದಂತೆ ಈ ವರುಷವೂ ದಕ್ಷಿಣಭಾಗದ ಎಲ್ಲ ಸ್ಕೂಲಬೋರ್ಡುಗಳ ಚಾಲಕರು ನಮಗೆ ಮನಮುಟ್ಟಿ ನೆರವಾದರು. ಈ

ಬಗ್ಗೆ ಅವರ ಉಪಕಾರವನ್ನು ನಾವು ಮೊದಲು ಸ್ಮರಿಸತಕ್ಕದ್ದು. ಮುಖ್ಯವಾಗಿ ಬಹುತರ ಎಲ್ಲ ಬೋರ್ಡುಗಳ ಅಡ್ಮಿನಿಸ್ಟ್ರೇಟಿವ ಆಫೀಸರರು ಕೆಲವು ತಿಂಗಳ ಮೊದಲೇ ಧಾರವಾಡದಲ್ಲಿ ಕಲೆತು ಅನುಭವಿಕರಾದ ಸುಪರವಾಯಿಝರರನ್ನು ಬರಮಾಡಿಕೊಂಡು ಈ ವರುಷದ ಕಾರ್ಯಕ್ರಮವನ್ನು ನಿಶ್ಚಯಿಸಿದ್ದಲ್ಲದೆ, ಅವರಲ್ಲಿ ತಾವೂ ಭಾಗತೆಗೆದುಕೊಂಡು ನಾವು ಆರಂಭಿಸಿದ ಶಿಕ್ಷಣ ಯೋಜನೆಯನ್ನು ಯಶಸ್ವಿಯನ್ನಾಗಿಮಾಡಲು ನಿರ್ಧರಿಸಿದ್ದಲ್ಲದೆ ಶಿಕ್ಷಕರಿಗೆ ಪ್ರಿಯವಾಗುವಂತೆಯೂ ಲಾಭಕರವಾಗುವಂತೆಯೂ ಮಾಡಿದ್ದಕ್ಕಾಗಿ ಅವರ ಆಭಾರವನ್ನು ಮನ್ನಿಸುವದೂ ನಮ್ಮ ಆದ್ಯಕರ್ತವ್ಯವು. ಈ ಕಾರ್ಯದಲ್ಲಿ ಧಾರವಾಡ ಜಿಲ್ಹೆಯ ಅಡ್ಮಿನಿಸ್ಟ್ರೇಟಿವ ಆಫೀಸರರಾದ ಮಿ|| ಆರ್. ಕೆ. ನಾಯಕ ಬಿ. ಎ. ಇವರ ಉಪಕಾರವು ಹಿರಿದಾದದ್ದು. ಇವರು ಆರಂಭದಿಂದ ಕೊನೆಯುವರೆಗೆ ನಮ್ಮ ವ್ಯವಸ್ಥೆಯ ಬಗ್ಗೆ ಸಲಹೆಗಳನ್ನು ಕೊಡುತ್ತ ತೊಡಕು ಬಂದಾಗ ಅವುಗಳನ್ನು ನೀಗಲು ನೆರವಾಗುತ್ತ ನಮ್ಮ ಭಾರವನ್ನು ಹಗುರುಮಾಡುತ್ತಿದ್ದರು.

ಇಷ್ಟು ದೊಡ್ಡ ಶಿಕ್ಷಕವೃಂದಕ್ಕೆ ಪಾಠಪದ್ಧತಿಗಳ ಆತಿಥ್ಯವನ್ನು ನೀಡುವ ಸೇವೆಗೆ ನಾವು ಸಿದ್ಧರಾಗಿರತಕ್ಕದ್ದು. ಆದರೆ ಇವರ ಇಳಕೊಳ್ಳುವ ವ್ಯವಸ್ಥೆ, ಭೋಜನ ಸೌಕರ್ಯ ಮೊದಲಾದವುಗಳನ್ನು ಮಾಡುವದು ಸುಲಭಸಾಧ್ಯವಲ್ಲ. ಹೆಣ್ಣುಮಕ್ಕಳಿಗಾಗಿ ಟ್ರೇನಿಂಗ ಕಾಲೇಜದಲ್ಲಿ ವ್ಯವಸ್ಥೆಯಾಗಿತ್ತು; ಕೆಲವು ಜನ ಶಿಕ್ಷಕರು ಟ್ರೇನಿಂಗ ಸ್ಕೂಲದಲ್ಲಿಯೂ ಇಳಕೊಂಡಿದ್ದರು. ಬಹುಜನರು ತಮ್ಮ ಆಪ್ತೇಷ್ಟರ ಆತಿಥ್ಯವನ್ನು ಸ್ವೀಕರಿಸಿದ್ದರು. ಧಾರವಾಡವು ಎಂದಿಗೂ ನೀರಿನ ಅರಬಿನ ಮೂಲಕ ಹೆಸರಾಗಿದೆ. ಈಗ ಊರೊಳಗೆ ನಳಗಳು ಇರುವ ಮೂಲಕ ಈ ತಾಪವನ್ನು ಮರೆಯಬಹುದಾಗಿದೆ. ಆದರೂ ಎರಡು ದಿನಗಳವರೆಗೆ ಒಮ್ಮಿಂದೊಮ್ಮೆ ನಳಗಳು ನಿಂತು ಹೋದಮೂಲಕ ಬಂದವರಿಗೆ ಬಹಳ ಶ್ರಮವಾಯಿತು. ಇದಕ್ಕಾಗಿ ನಮಗೆ ಬಹಳ ಕೆಡಕೆನಿಸಿತು. ಆದಾಗ್ಯೂ ಈ ಊರಲ್ಲಿರುವ ಶ್ರೀ ಮುರುಘರಾಜೇಂದ್ರ ಸ್ವಾಮಿಗಳವರ ಅನ್ನಛತ್ರದ ವ್ಯವಸ್ಥಾಪಕರು ಶಿಕ್ಷಣ ಯೋಜನೆಗೆ ಬಂದ ಲಿಂಗಾಯತ ಶಿಕ್ಷಕರ ಭೋಜನವೇ ಮೊದಲಾದ ಅನುಕೂಲಗಳನ್ನು ಏನೂ ಖರ್ಚಿಲ್ಲದೆ ಮಾಡಿದ್ದಕ್ಕಾಗಿ ಅವರ ಉಪಕಾರವು ಅತಿಶಯವಾಯಿತು. ಸುಮಾರು ಇನ್ನೂರು ಜನ ಶಿಕ್ಷಕರು ಅವರ ಆಮಂತ್ರಣವನ್ನು ಸ್ವೀಕರಿಸಿ ಸೌಖ್ಯದಿಂದ ಇದ್ದರು. ಈ ಬಗೆಯ ಸೌಲಭ್ಯವನ್ನು ಒದಗಿಸಿಕೊಟ್ಟು ಶಿಕ್ಷಕವೃಂದದ ಶ್ರಮವನ್ನೂ ನಮ್ಮ ಭಾರವನ್ನೂ ಪರಿಹರಿಸಿದ್ದಕ್ಕಾಗಿ ನಾವು ಅವರಿಗೆ ಸದಾ ಋಣಿಯಾಗಿರುವೆವು.

ಶಿಕ್ಷಣ ಯೋಜನೆಯು ಫಲದ್ರೂಪವಾಗಲು ನಮಗೆ ಹಲವು ಬಗೆಯಿಂದ ಸಹಾಯಮಾಡಿದ ಸ್ನೇಹಿತರ ಉಪಕಾರವನ್ನು ಸ್ಮರಿಸುವಾಗ ಒಬ್ಬ ಮಹನೀಯರ ಹೆಸರನ್ನು ಮೊದಲು ಹೇಳಬೇಕಾಗಿತ್ತು. ಅವರೇ ಈ ಶಿಕ್ಷಣ ಯೋಜನೆಯ ಮೂಲ ಪುರುಷರು. ಅವರ ಆಗ್ರಹದ ಮೂಲಕವೇ ನಾವು ಈ ಭಾರವನ್ನು ವಹಿಸಿದೆವು. ಅವರ ಪ್ರೇರಣೆಯೇ

ನಮ್ಮನ್ನು ಹುರುದುಂಬಿಸಿದ್ದು. ಅವರ ನೇತೃತ್ವದಲ್ಲಿ ಯಾವತ್ತು ಕಾರ್ಯಕ್ರಮವು ಸಾಗಿದ ಮೂಲಕವೇ ಇದು ಯಶಸ್ವಿಯಾದದ್ದು. ಶಿಕ್ಷಕವೃಂದದಲ್ಲಿ ಅವರಿಗಿರುವ ವಾತ್ಸಲ್ಯವೂ ಅವರ ಉದ್ಯೋಗದ ಬಗ್ಗೆ ಅಭಿಮಾನವೂ ಅವರ ಅಭ್ಯುದಯ ಬಗ್ಗೆ ಆತುರವೂ ಅಧಿಕಾರಿಗಳೆನಿಸುವವರಲ್ಲಿ ಸಾಮಾನ್ಯವಾಗಿ ಇಷ್ಟು ಘನವಾಗಿ ತೋರಿಬರುವದಿಲ್ಲ. ಕನ್ನಡ ಭಾಷೆಯು ತಮಗೆ ಬಾರದಿದ್ದರೂ ದಿನಾಲು ನಡೆದಿದ್ದ ಕಾರ್ಯಕ್ರಮಕ್ಕೆ ತಪ್ಪದೆ ಬಂದು ಶಾರೀರಿಕ ತಾಪವನ್ನು ಲೆಕ್ಕಿಸದೆ, ಮುಂಜಾನೆ ೮ ರಿಂದ ಸಂಜೆಯ ೮ರ ವರೆಗೆ ಕಾರ್ಯಕಲಾಪಗಳನ್ನು ನೋಡುತ್ತ, ಸಲಹೆಗಳನ್ನು ಕೊಡುತ್ತ ಶಿಕ್ಷಕರ ಬಗ್ಗೆ ತಮಗಿದ್ದ ಸಹಾನುಭೂತಿಯನ್ನು ಮೇಲಿಂದಮೇಲೆ ವ್ಯಕ್ತಪಡಿಸುತ್ತ ತಮ್ಮ ಜ್ಞಾನಾನುಭವಗಳ ಲಾಭವನ್ನು ನಮಗೆಲ್ಲ ಮಾಡಿಕೊಡುತ್ತ ಈ ಮಹನೀಯರು ನಮ್ಮೆಲ್ಲರನ್ನು ತಮ್ಮ ಉದಾತ್ತ ಚರಿತೆಯಿಂದ ಮುಗ್ಧರನ್ನಾಗಿ ಮಾಡಿದರು. ಈ ಬಗ್ಗೆ ಮೆ|| ವಕೀಲಸಾಹೇಬರ ಉಪಕಾರವನ್ನು ತೀರಿಸುವದು ಸಾಧ್ಯವಲ್ಲ.

ಇರಲಿ, ಈ ವರುಷ ನಡೆದ ಪಾಠಗಳೂ ಉಪನ್ಯಾಸಗಳೂ ಚರ್ಚೆಗಳೂ ಕಳೆದ ವರುಷಕ್ಕಿಂತ ಮೇಲು ಪಂಕ್ತಿಯವಿದ್ದವೆಂದು ಹೇಳಲು ನಮಗೆ ತುಂಬಾ ಸಮಾಧಾನವೆನಿಸುತ್ತದೆ. ಮೂವರು ಅಡ್ಮಿನಿಸ್ಟ್ರೇಟಿವ ಆಫೀಸರರೂ ಮೂವರು ಸುಪರವಾಯಿಝರರೂ ಈ ವರುಷದ ಕಾರ್ಯಕಲಾಪಗಳಲ್ಲಿ ಭಾಗತೆಗೆದುಕೊಂಡರು. ತಜ್ಞರಾದ ಮಾಧ್ಯಮಿಕ ಶಿಕ್ಷಕರೂ ನಮಗೆ ನೆರವಾದರು. ಇವರಲ್ಲಿ ಮಿ. ಜೇರೆ ಇವರು ಇದಕ್ಕಾಗಿಯೇ ಅಥಣಿಯಿಂದ ಇಲ್ಲಿಗೆ ಬಂದು ಆರುದಿನ ಇಲ್ಲಿಯೇ ಇದ್ದರು.

ಶಿಕ್ಷಣಯೋಜನೆಯ ಮುಖ್ಯ ಉದ್ದೇಶವನ್ನು ಕುರಿತು ಒಂದೆರಡು ಮಾತುಗಳನ್ನು ಬರೆಯುವೆವು. ಶಿಕ್ಷಣ ಪ್ರಪಂಚದಲ್ಲಿ ಕಳೆದ ಹತ್ತು ವರುಷಗಳಲ್ಲಿ ಸುಧಾರಿಸಿದ ದೇಶಗಳಲ್ಲಿ ಆಗಿರುವಷ್ಟು ಹಾಗು ಸದ್ಯಕ್ಕೂ ಆಗುತ್ತಿರುವಷ್ಟು ಸುಧಾರಣೆಯು ಕಳೆದ ಇಷ್ಟೇ ಅವಧಿಯಲ್ಲಿ ಎಂದೂ ಆಗಿರಲಿಲ್ಲವೆಂದು ಖಂಡಿತವಾಗಿ ಹೇಳಬಹುದು. ಈ ಸುಧಾರಣೆಯ ಬಹುತರ ಅಂಶವು ಪ್ರಾಥಮಿಕ ಶಿಕ್ಷಣದಲ್ಲಿ ಆಗುತ್ತಿರುವದು. ಪ್ರಾಥಮಿಕ ಶಿಕ್ಷಕರು ಇದನ್ನು ಅರಿತು ತಾವೂ ಮುಂದುವರಿಯುವದು ಯೋಗ್ಯವು. ಇವು ತಟಸ್ಥವೃತ್ತಿಯ ದಿವಸಗಳಲ್ಲ. ಈ ಕೆಲಸದಲ್ಲಿ ಟ್ರೇನಿಂಗ ಸಂಸ್ಥೆಗಳ ಮೇಲೆ ಒಂದು ವಿಶಿಷ್ಟ ಭಾರವಿರುವದು. ಇದನ್ನು ವಹಿಸಲು ಪ್ರಯತ್ನಪಡುವದು ನಮ್ಮ ಕರ್ತವ್ಯವು. ಆದರೆ ವಿದೇಶಗಳಲ್ಲಿ ಅನುಭವ ತೆಗೆದುಕೊಂಡು ಮೇಲಾದವೆಂದು ಕಂಡ ಪದ್ಧತಿಗಳನ್ನು ನಾವು ಕಣ್ಣುಮುಚ್ಚಿಕೊಂಡು ಅನುಸರಿಸುವದು ಸರ್ವಥಾ ಸರಿಯಲ್ಲ. ನಮ್ಮಲ್ಲಿಯ ಪರಿಸ್ಥಿತಿಯಲ್ಲಿ ಇವು ಎಷ್ಟರಮಟ್ಟಿಗೆ ಸಾಧ್ಯವೂ ನಿಜವೂ ಇರುವವೆಂಬದನ್ನು ನಾವು ಎಚ್ಚರದಿಂದ ಪರೀಕ್ಷಿಸಬೇಕು. ಈ ಕೆಲಸದಲ್ಲಿ ಪ್ರಾಥಮಿಕ ಶಿಕ್ಷಕರ ಸಹಾಯವು ನಮಗೆ ಅತ್ಯವಶ್ಯವಾದದ್ದು. ಆದ್ದರಿಂದಲೇ ಅವರೊಡನೆ ನಾವು ವಿಚಾರವಿನಿಮಯ ಮಾಡಲು ಈ ಯೋಜನೆಯನ್ನು ಏರ್ಪಡಿಸಿರುವೆವು.

ಶಿಕ್ಷಣಯೋಜನೆಯಲ್ಲಿ ತಜ್ಞರು ತೋರಿಸುವ ಪದ್ಧತಿಗಳು ಮೇಲಾದವೆಂದೂ ಇವುಗಳನ್ನು ಕುರಿತು ಚರ್ಚಿಸಬಾರದೆಂದೂ ನಮ್ಮ ಅಭಿಪ್ರಾಯವಿಲ್ಲ. ಈ ಮಾತನ್ನು ಶಿಕ್ಷಕರು ಲಕ್ಷ್ಯದಲ್ಲಿಡತಕ್ಕದ್ದು. ಒಬ್ಬ ಇಂಗ್ಲಿಷ ಕವಿಯು ಹೇಳಿದ ಮಾತನ್ನು ನಾವು ನಮ್ಮ ಹೆಗ್ಗುರಿಯಾಗಿಟ್ಟುಕೊಂಡಿರುವೆವು. ಸದ್ಯದ ನಮ್ಮ ಜ್ಞಾನ, ಅನುಭವ ಇವಕ್ಕೆ ತಕ್ಕಂತೆ ನಮಗೆ ಸರಿದೋರುವ ಪದ್ಧತಿಗಳನ್ನು ನಾವು ಮನಮುಟ್ಟಿ ರೂಢಿಯಲ್ಲಿ ತರತಕ್ಕದ್ದು. ಇವು ಸರ್ವತೋಮುಖವಾಗಿಯೂ ಸಾರ್ವತ್ರಿಕವಾಗಿಯೂ ಸರಿಯಾಗಿರುವವೆಂದು ಹೇಳುವ ಅಧಿಕಾರವು ಯಾರಿಗೂ ಬರಲಾರದು. ಮುಂದೆಬರುವವರು ನಮಗಿಂತ ಜಾಣ್ಮೆಯುಳ್ಳವರಾಗಬಹುದು. ಅವರು ತಮ್ಮ ಅನುಭವಕ್ಕೆ ತಕ್ಕಂತೆ ಈ ಪದ್ಧತಿಗಳಲ್ಲಿ ಹೆಚ್ಚುಕಡಿಮೆ ಮಾಡಿಕೊಳ್ಳಬಹುದು. ಆದರೆ ನಾವು ನಮ್ಮ ಅನುಭವಗಳನ್ನು ಮುಂದಿನ ಶಿಕ್ಷಕರಿಗೆ ಕೊಡತಕ್ಕದ್ದು.

ಶಿಕ್ಷಣಯೋಜನೆಗೆ ಬಂದು ಈ ಕೆಲಸದಲ್ಲಿ ನಮಗೆ ನೆರವಾದ ಶಿಕ್ಷಕರಿಗೆ ತಮ್ಮ ಅನುಭವಗಳನ್ನೂ ಅಭಿಪ್ರಾಯಗಳನ್ನೂ ಪೂರ್ಣವಾಗಿ ವಿದ್ವಜ್ಜನರ ಹಾಗು ತಮ್ಮ ಸಹೋದ್ಯೋಗಿಗಳ ಮುಂದೆ ಹೇಳಲಿಕ್ಕೆ ಅವಕಾಶವು ದೊರೆಯಲಿಲ್ಲವೆಂಬ ಕೊರತೆಯು ಉಳಿದಿರುವದೆಂಬದನ್ನು ನಾವು ಬಲ್ಲೆವು. ಶಿಕ್ಷಕರ ಈ ಅಭಿಪ್ರಾಯಗಳು ವಿಶೇಷ ಮಹತ್ವವಾದವೆಂಬದನ್ನು ನಾವು ಒಪ್ಪಿಕೊಳ್ಳುವೆವು. ಅವುಗಳನ್ನು ತಿಳಿದುಕೊಳ್ಳಲು ನಾವು ಸಾಧ್ಯವಿರುವಷ್ಟು ಹೊತ್ತನ್ನು ಉಪಯೋಗಿಸಿರುವೆವು. ಶಿಕ್ಷಣಯೋಜನೆಯಲ್ಲಿ ಚರ್ಚೆಯಲ್ಲಿಯೇ ಬಹಳಹೊತ್ತು ಕಳೆಯುವದು ಫಲದಾಯಕವಲ್ಲೆಂದು ನಮಗೆ ಅನುಭವ ಬಂದಿದೆ. ಕಲಿಸಿದ ಪಾಠಗಳ ಬಗ್ಗೆಯೂ ವಿಚಾರಿಸಿದ ಶಿಕ್ಷಣ ವಿಷಯಗಳ ಬಗ್ಗೆಯೂ ಸಭೆಯಲ್ಲಿ ಹೊರಟ ಮಾತುಗಳ ಬಗ್ಗೆ ಪೂರ್ಣ ವಿಚಾರಮಾಡಿ ಮಹತ್ವದ ಮಾತುಗಳ ಬಗ್ಗೆ ಪ್ರಾಥಮಿಕ ಶಿಕ್ಷಣದದಲ್ಲಿ ಚರ್ಚೆ ನಡಿಸುವದರಿಂದ ಹೆಚ್ಚು ಲಾಭವಾಗುವದೆಂದು ನಮ್ಮ ಅಭಿಪ್ರಾಯವು. ಇದರಿಂದ ನಮ್ಮ ಚರ್ಚೆಯ ಫಲಿತಾಂಶವು ಶಿಕ್ಷಕವೃಂದಕ್ಕೆಲ್ಲ ಗೊತ್ತಾಗುವದು.

ಶಿಕ್ಷಣಯೋಜನೆಗೆ ಅಪರಿಹಾರ್ಯವಾದ ಕಾರಣಗಳ ಮೂಲಕ ಬರಲಿಕ್ಕಾಗದ ಶಿಕ್ಷಕರಿಗಾಗಿ ನಾವು ಅಲ್ಲಿ ಯಥಾಕ್ರಮವಾಗಿ ನಡೆದ ಸಂಗತಿಗಳನ್ನು ಸಂಕ್ಷೇಪದಲ್ಲಿ ಇಲ್ಲಿ ಹೇಳುವೆವು.

ಸೋಮವಾರ ತಾ. ೧–೫–೩೩ನೇ ದಿವಸ ಮುಂಜಾನೆ ಸರಿಯಾಗಿ ೮ ಗಂಟೆಗೆ ಮೆ॥ ಕೇ. ಎಸ್. ವಕೀಲ ಎಮ್. ಈ. ಡಿ., ಎಫ್. ಆರ್. ಜಿ. ಎಸ್. ಎ. ಇ. ದ.ಭಾ. ಇವರು ಸಭೆಗೆ ಬಂದು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದರು. ಶಿಕ್ಷಕವೃಂದವೂ ಅಧಿಕಾರಿವರ್ಗವೂ ವಿದ್ಯಾಭಿಮಾನಿಗಳಾದ ಕೆಲವು ಸದ್ಗೃಹಸ್ಥರೂ ಉತ್ಸುಕತೆಯಿಂದ ನೆರೆದಿದ್ದರು.

ಮಿ॥ ಪ್ರೆಸಿಡೆಂಟ ಸಾಹೇಬರು ಪ್ರಾಸ್ತಾವಿಕ ಭಾಷಣದಲ್ಲಿ ಶಿಕ್ಷಕವೃಂದವನ್ನು ಕುರಿತು ನುಡಿದದ್ದೇನೆಂದರೆ:—

ಈಗ ಕುತೂಹಲಪೂರ್ವಕವಾಗಿ ನೆರೆದ ಪ್ರಾಥಮಿಕ ಶಿಕ್ಷಕರ ದಟ್ಟಣೆಯನ್ನು ನೋಡಿ ನನಗೆ ಬಹಳ ಸಂತೋಷವೆನಿಸುತ್ತದೆ. ವರ್ಷಾನುವರ್ಷ ಶಿಕ್ಷಣಪ್ರಪಂಚದಲ್ಲಿ ಪಂಶ್ರಮವಮಾಡುತ್ತ ಶಿಕ್ಷಣದ ಅಂಗಾಂಗಗಳಂತೆ ಇರುವ ಶಿಕ್ಷಕವರ್ಗಕ್ಕೂ ಅವರ ಅಧಿಕಾರಿವರ್ಗಕ್ಕೂ ವಿಚಾರವಿನಿಮಯಕ್ಕಾಗಿ ಇಂಥ ಪ್ರಸಂಗಳು ಅವಶ್ಯವಾಗಿ ಬೇಕೇಬೇಕು.

೧. ಪ್ರಾಥಮಿಕ ಶಿಕ್ಷಕರ ಯೋಗ್ಯತೆ:— ನನ್ನ ಅನುಭವಕ್ಕೆ ಬಂದ ಒಂದು ಮಾತನ್ನು ನಿಮ್ಮೆದುರಿಗೆ ಇಡುವದು ಅವಶ್ಯವೆಂದು ನನಗೆ ತೋರುತ್ತದೆ. ಆ ಸಂಗತಿಯು ಶಿಕ್ಷಕವರ್ಗದ ಸಾಮಾನ್ಯವಾದ ಒಂದು ತಪ್ಪು ಇರುವದು. ಅದರ ಯೋಗದಿಂದ ಅವರ ಅಧಿಕಾರಸ್ಥರಲ್ಲಿ ಸಹ ಅದೇ ತಪ್ಪು ನೆಲೆಗೊಂಡಿರುವದೆಂದು ನನ್ನ ಅಭಿಪ್ರಾಯವು. ಆ ತಪ್ಪು ಯಾವದೆಂದರೆ— ಪ್ರಾಥಮಿಕ ಶಿಕ್ಷಕರು ತಾವು ಮಾಧ್ಯಮಿಕ ಹಾಗು ಉಚ್ಚ ಶಿಕ್ಷಣಾಧ್ಯಾಪಕರಿಗಿಂತ ಅಥವಾ ಸರಕಾರದ ಬೇರೆ ಖಾತೆಯ ನೌಕರರಿಗಿಂತ ಕಡಿಮೆ ಯೋಗ್ಯತೆಯವರಿರುವೆವೆಂದು ತಿಳಿದುಕೊಂಡಿರುವದು. ಅವರಲ್ಲಿ ದೃಢವಾದ ಈ ಕಲ್ಪನೆಯನ್ನು ಕಿತ್ತೊಗೆಯಲಿಕ್ಕೆ ಅಧಿಕಾರಸ್ಥರು ಪ್ರಯತ್ನಿಸಿದರೂ ಅದು ಕಡಿಮೆಯಾಗದಷ್ಟು ಭರದಲ್ಲಿರುವದು. ಹೀಗೆ ನಿಮ್ಮ ಯೋಗ್ಯತೆಯ ವಿಷಯ ವಾಗಿ ನೀವೇ ಕಡಿಮೆಯವರೆಂದು ಗಟ್ಟಿಯಾಗಿ ತಿಳಿದುಕೊಂಡಿರುವದರಿಂದ ಅದೇ ಭಾವನೆಯೇ ಸರಕಾರದ ಅಧಿಕಾರಸ್ಥರ ಇಲ್ಲವೆ ಸಂಸ್ಥೆಗಳ ಚಾಲಕರ ಇಲ್ಲವೆ ಗ್ರಾಮಮುಖಂಡರ ಮನಸ್ಸಿನಲ್ಲಿ ತುಂಬಲು ನೀವೇ ಕಾರಣವಾಗಿರುವಿರಿ.

ಮಾಧ್ಯಮಿಕ ಉಚ್ಚ ಶಿಕ್ಷಣಾಲಯಗಳ ಶಿಕ್ಷಕರು ನಿಮಗಿಂತ ಹೆಚ್ಚು ವಿಷಯಗ ಳನ್ನು ತಿಳಿದುಕೊಂಡಿರುವದು ನಿಜ. ಆದರೆ ಚಿಕ್ಕ ಬಾಲಕರನ್ನು ತಿದ್ದಿ ಯೋಗ್ಯ ಪ್ರಜೆ ಗಳಾಗುವದಾರಿಗೆ ಒಯ್ಯುವ ಆರಂಭದ ಮಹತ್ವದ ಮತ್ತು ಕಠಿನವಾದ ಕೆಲಸದ ಭಾರವು ಪ್ರಾಥಮಿಕ ಶಿಕ್ಷಕರ ಮೇಲಿರುವದೆಂಬದನ್ನು ನೀವು ಮರೆಯಲಾಗದು. ಈ ಕೆಲಸವು ಭಾವೀರಾಷ್ಟ್ರದ ತಳಹದಿಯಾಗಿರುವದು. ಇಂಥ ಶಿಕ್ಷಕ ವರ್ಗವು ತಾನೇ ಆಗಲಿ ಅಥವಾ ಅನ್ಯರಾಗಲಿ ಕಡಿಮೆ ಬೆಲೆಯದೆಂದು ತಿಳಿಯುವದು ಪ್ರಮಾದವಾಗಿರುವದು. ಸ್ಕಾಟ ಲಂಡದ ಜಾನ್‌ನಾಕ್ಸ ಎಂಬವರು ಪ್ರಾಥಮಿಕ ಶಿಕ್ಷಣವು ಮನುಷ್ಯತ್ವದ ತಳಹದಿಯಾಗಿ ರುವದು; ಹಾಗು ಈ ಕಾರ್ಯವು ಬಹಳ ನಾಜೂಕಾದದ್ದೂ ಮಹತ್ವದ್ದೂ ಆಗಿರು ವದು. ಆದದರಿಂದ ಪ್ರಾಥಮಿಕ ಶಿಕ್ಷಕರ ಕೆಲಸವು ಮಾಧ್ಯಮಿಕ ಉಚ್ಚ ಶಿಕ್ಷಣಾಲಯಗ ಳಲ್ಲಿ ಶಿಕ್ಷಣ ಕೊಡುವವರ ಕಾರ್ಯಕ್ಕಿಂತ ಕಡಿಮೆತರದ್ದಲ್ಲ, ಎಂದು ಹೇಳಿರುವದು ನಿಜ ವಾದ ಮಾತು. ಇಂಗ್ಲಂಡ ದೇಶದಲ್ಲಿ ಬಿ. ಎ. ಎಮ್. ಎ. ಪದವೀಧರರು ಪ್ರಾಥಮಿಕ

ಶಿಕ್ಷಕರ ಕೆಲಸವನ್ನು ಕೈಕೊಂಡಿರುವರು. ಶಿಕ್ಷಣದ ಕಾರ್ಯದಲ್ಲಿ ತೊಡಗಿರುವವರು ಇತರ ಯಾವ ಕಾರ್ಯಗಳಲ್ಲಿ ಕೆಲಸ ಮಾಡುವವರಿಗಿಂತ ಯಾವ ಅಂಶದಲ್ಲಿಯೂ ಎಷ್ಟ ರಿಂದಲೂ ಕಡಿಮೆ ಎಂಬ ಭಾವನೆಯು ನನ್ನ ಮನದಲ್ಲಿ ಎಂದೂ ಬಂದಿಲ್ಲ. ಈ ಭಾವ ನೆಯನ್ನು ಯಾವ ಪ್ರಸಂಗದಲ್ಲಿ ಯಾರಾಗಲಿ ನನ್ನ ಮುಂದೆ ಪ್ರತಿಪಾದಿಸಿದ್ದರೆ ನಾನು ಅವ ರನ್ನು ಖಂಡಿಸಿ ಶಿಕ್ಷಕರ ಉನ್ನತವಾದ ಕಾರ್ಯ ಕ್ಷೇತ್ರವನ್ನೂ ಮೇಲಾದ ಕಾರ್ಯ ಗಳನ್ನೂ ಪ್ರಕಟಿಸಿದ್ದೇನೆ.

ಪ್ರಾಥಮಿಕ ಶಿಕ್ಷಕರಲ್ಲಿ ಉಂಟಾದ ಕಡಿಮೆ ತರದ ಭಾವನೆಯನ್ನು ಆದಷ್ಟು ತೀವ್ರವಾಗಿ ನೀವು ನೀಗಿಕೊಳ್ಳಬೇಕು. ನಿಮ್ಮ ಕೈಲಾದಷ್ಟು ಪ್ರಯತ್ನ ಮಾಡಿ ನಿಮ್ಮಲ್ಲಿರುವ ಶಕ್ತಿಗಳನ್ನು ಪೂರ್ಣವಾಗಿ ಉಪಯೋಗಿಸಿ ಸಮಾಜದ ಹಿತವು ನಿಮ್ಮಿಂದ ಹ್ಯಾಗೆ ಸಿದ್ಧಿಸುತ್ತಿರುವದೆಂಬದನ್ನು ನೀವು ವ್ಯಕ್ತಪಡಿಸಬೇಕು. ನಿಮ್ಮನ್ನು ಸಮಾಜವು ದೂರೀಕರಿಸುವದು ಅಸಾಧ್ಯವು. ಎಷ್ಟೋ ವರ್ಷಗಳ ಶಿಕ್ಷಣದ ಅನುಭವವು ನಿಮ್ಮಲ್ಲಿ ಅಡಗಿರುವದು. ನಿಮ್ಮನ್ನು ಬಿಟ್ಟರೆ ಸಮಾಜಕ್ಕೆ ಗತಿಯಿಲ್ಲ. ಮುಂದಿನ ಕಾಲದಲ್ಲಿ ಪ್ರಾಥಮಿಕ ಶಿಕ್ಷಕರ ಮಹತ್ವವು ಬೆಳೆಯುವದೆಂಬದರಲ್ಲಿ ಸಂದೇಹವಿಲ್ಲ. ನಿಮ್ಮ ಯೋಗ್ಯತೆ ಯನ್ನು ಸಮಾಜದಲ್ಲಿ ಪ್ರಕಟಿಸುವದು ಪೂರ್ಣವಾಗಿ ನಿಮ್ಮ ಕೈಯಲ್ಲಿರುವದು, ಎಂಬ ದನ್ನು ಮರೆಯಬೇಡಿರಿ ನಿಮ್ಮ ಉದ್ಯೋಗದ ಮೇಲ್ಮೆಯನ್ನು ಲಕ್ಷ್ಯಕ್ಕೆ ತಂದು ಭಾವೀ ರಾಷ್ಟ್ರದ ಏಳಿಗೆಯು ನಿಮ್ಮನ್ನು ಬಹಳವಾಗಿ ಅವಲಂಬಿಸಿರುವದೆಂಬದನ್ನು ಮನ ದಲ್ಲಿಟ್ಟು ಮೀರಿದ ಯತ್ನಮಾಡಿ ನಿಮ್ಮ ಉದ್ಯೋಗವು ಸಫಲವಾಗಲಿಕ್ಕೆ ಬೇಕಾಗುವ ಜ್ಞಾನವನ್ನೂ ಜಾಣ್ಮೆಯನ್ನೂ ಪಡೆಯಲಿಕ್ಕೆ ಪ್ರಯತ್ನಮಾಡಿರಿ.

೨ **ಪ್ರಾಥಮಿಕ ಶಿಕ್ಷಕರ ಪಗಾರ :—** ಇತ್ತಿತ್ತಲಾಗಿ ಪ್ರಾಥಮಿಕ ಶಿಕ್ಷಕರ ಪಗಾರದ ನ್ಯೂನತೆಯ ಕೋಲಾಹಲವು ಕೇಳಬರುತ್ತಲಿರುವದು. ಪ್ರಾಥಮಿಕ ಶಿಕ್ಷಕರು ತಮ್ಮ ಕೆಲಸದ ವಿಷಯವಾಗಿ ಆದರಬುದ್ಧಿಯನ್ನು ಎಲ್ಲರಿಂದ ದೊರಕಿಸಿಕೊಳ್ಳುವದು ಮಹತ್ವದ ಹಾಗು ಮೊದಲನೆಯ ಕೆಲಸವಾಗಿರುವದು. ಮೊದಲು ತಮ್ಮ ಯೋಗ್ಯತೆ ಯನ್ನರಿತ ಆ ಮೇಲೆ ಅಧಿಕಾರಿಗಳ ಹಾಗು ಜನತೆಯ ಸಹಾನುಭೂತಿಯನ್ನು ದೊರಕಿಸಿ ಕೊಂಡರೆ ಪಗಾರದ ನ್ಯೂನತೆಯ ಪ್ರಶ್ನವು ತಾನೇ ಹೊರಟುಹೋಗುವದು. ಟ್ರೇಂಡ ರಾದ ಶಿಕ್ಷಕರ ಯೋಗ್ಯತೆಯು ಹೆಚ್ಚಿನದೆಂಬದನ್ನು ಸಮಾಜಕ್ಕೆ ಸಿದ್ಧಮಾಡಿ ತೋರಿಸಿ ಈ ವರ್ಗದ ಸಾರ್ವಜನಿಕ ನೌಕರರು ಸಮಾಜದ ಹಿತಕ್ಕೆ ಅತ್ಯಾವಶ್ಯಕರೆಂದು ತೋರಿ ಸಿದ ಹೊರತು ಗತ್ಯಂತರವಿಲ್ಲ.

ಸದ್ಯದ ಕಾಲದಲ್ಲಿ ಪಗಾರವನ್ನು ಕಡಿಮೆ ಮಾಡಬೇಕಾಗಿದೆ.

ಇತ್ತಿತ್ತಲಾಗಿ ಸಂಸ್ಥೆಗಳ ಕೈಯಲ್ಲಿ ಸರಕಾರದವರು ಅಧಿಕಾರ ಕೊಟ್ಟಿರುವರು. ಅವರು ತಮ್ಮ ತಮ್ಮ ಸ್ಥಾನಿಕ ಅನುಕೂಲತಾನುಕೂಲತೆಗಳ ಮೇರೆಗೆ ಶಿಕ್ಷಕರ ಪಗಾರ

ದಲ್ಲಿ ಹೆಚ್ಚುಕಡಿಮೆ ಮಾಡಿರುವರು. ಆದಪರಿಂದ ಶಿಕ್ಷಕರು ಸ್ವಲ್ಪ ಉದಾಸೀನರಾಗಿರಬಹುದು. ಸಂಘಶಕ್ತಿಯಿಂದಲೂ ಪರಿಸ್ಥಿತಿಯ ಅಭ್ಯಾಸದಿಂದಲೂ ಅವಶ್ಯವಿರುವ ಕಾಟಕಸರುಗಳನ್ನು ಹ್ಯಾಗೆ ದೂರ ಮಾಡಬೇಕೆಂಬದನ್ನು ಶಿಕ್ಷಕರು ತೋರಿಸಿದರೆ ಇವನ್ನು ಕೈಕೊಳ್ಳುವ ಮಾರ್ಗವನ್ನು ಕುರಿತು ಮೇಲಧಿಕಾರಿಗಳು ವಿಚಾರಮಾಡುವರೆಂಬದರಲ್ಲಿ ಸಂದೇಹವಿಲ್ಲ.

ಹೋದವರ್ಷದಂತೆ ಈ ವರ್ಷವೂ ಸೂಟಿಯಲ್ಲಿ ಶಿಕ್ಷಣಯೋಜನೆಯ ಕಾರ್ಯವು ನಡೆದಿರುವದು. ಆದರೆ ಈ ವರ್ಷದ ಸಮ್ಮೇಲನವು ಒಂದಡಿ ಮುಂದಕ್ಕೆ ಸಾಗಿರುವದೆಂದು ಅದರ ಕಾರ್ಯಕ್ರಮದಿಂದ ವಿದಿತವಾಗುವಂತೆ ಅದೆ. ಬಹುತರ ಜಿಲ್ಲೆಗಳ ಆ್ಯಡ್‌ಮಿನಿಸ್ಟ್ರೇಟಿವ್ಹ ಆಫೀಸರರನ್ನೂ ಸುಪರ್ವಾಯಿಝರರನ್ನೂ ಆಲೋಚಿಸಿ ಈ ಕಾರ್ಯಕ್ರಮವು ಸಿದ್ಧಮಾಡಲ್ಪಟ್ಟಿದೆ. ಸುಪರ್ವಾಯಿಝರರೂ ಆ್ಯಡ್ಮಿನಿಸ್ಟ್ರೇಟಿವ್ಹ ಆಫೀಸರರೂ ಶಿಕ್ಷಣ ಪಾಠಗಳನ್ನು ತೆಗೆದುಕೊಂಡಿರುವರು. ಮುಖ್ಯವಾಗಿ ಎಲ್ಲ ಶಿಕ್ಷಕರ ವೇಳೆ, ಶ್ರಮ ಹಾಗು ಖರ್ಚು ಇವುಗಳ ಸದುಪಯೋಗವಾಗುವಂತೆ ಶಿಕ್ಷಣಯೋಜನೆಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಈ ಶಿಕ್ಷಣಯೋಜನೆಯ ಪರಂಪರೆಯು ವರ್ಷಾನುವರ್ಷ ನಡೆದು ನಿಮ್ಮ ಉದ್ಯೋಗದಲ್ಲಿ ನಿಮಗೆ ಬರುವ ತೊಂದರೆಗಳು ಕಡಿಮೆಯಾಗುತ್ತ ಹೋಗಿ ನಿಮ್ಮ ಗೌರವವು ಅಧಿಕಾರಿಗಳಲ್ಲಿಯೂ ಸಮಾಜದಲ್ಲಿಯೂ ಬೆಳೆಯುವಂತೆ ಮಾಡಲು ಪ್ರಯತ್ನಪಡುವಿರೆಂದು ನಾನು ನೆರೆನಂಬಿದ್ದೇನೆ.

ಆ ಬಳಿಕ ಎಲ್ಲರೂ ಪ್ರಾ. ಸ್ಕೂಲಿನ ವಿದ್ಯಾರ್ಥಿಗಳ ಒಟ್ಟು ಡ್ರಿಲ್ ನೋಡುವದಕ್ಕಾಗಿ ಹೋದರು. ಇದನ್ನು ಕಳೆದ ವರುಷ ನಾವು ಪ್ರಾಥಮಿಕ ಶಿಕ್ಷಣದಲ್ಲಿ ಪ್ರಕಟಿಸಿದ "ನೀಬರ್ಸ್‌ಡ್ರಿಲ್" ಎಂಬ ಪದ್ಧತಿಯಿಂದಲೇ ವಿದ್ಯಾರ್ಥಿಗಳು ಮಾಡಿತೋರಿಸಿದರು. ಶಾಲೆಯ ಯಾವತ್ತೂ ವಿದ್ಯಾರ್ಥಿಗಳು ದಿನಾಲು ಆರಂಭದಲ್ಲಿ ಒತ್ತಟ್ಟಿಗೆ ಕಲೆತು ಶಾರೀರಿಕ ಶಿಕ್ಷಣದಿಂದಲೇ ವಿದ್ಯಾರಂಭವನ್ನು ಮಾಡುವದು ಒಳಿತಾದದ್ದೆಂದು ತೋರಿಸುವದೇ ಇದರ ಉದ್ದೇಶವು. ಇದರಲ್ಲಿ ಚಟುವಟಿಕೆಯಿಂದ ಹಾಗು ಆಯಾಸ್ನಾಯುಗಳ ಯೋಗ್ಯ ಉಪಯೋಗವನ್ನು ಮಾಡಿ ಪ್ರತಿಯೊಂದು ಎಕ್ಸರ ಸಾಯುಜವನ್ನು ಎಲ್ಲ ಹುಡುಗರು ಏಕಕಾಲಕ್ಕೆ ಮಾಡುವದು ಮಹತ್ವವಾದದ್ದು.

ಎಲ್ಲರೂ ಇದನ್ನು ನೋಡಿ ಸಭಾಮಂದಿರಕ್ಕೆ ದಯಮಾಡಿಸಿದಬಳಿಕ ೧೧ಕ್ಕೆ ಸರಿಯಾಗಿ ಹೆ. ಟ್ರೇ. ಕಾಲೇಜದ ಪ್ರಾ. ಸ್ಕೂಲಿನ ಶಿಕ್ಷಕಿಯರಿಂದ ಮಿಸೆಸ್ ಮೂಕಯ್ಯನಮಠ ಇವರು ಬಾಲಿಕೆಯರ ವರ್ಗಕ್ಕೆ 'ಹತ್ತರ' ಗಂಟಿನ ಆರಂಭದ ಪಾಠವನ್ನು ಕಲಿಸಿ ತೋರಿಸಿದರು. ಗಣಿತದ ಹೊಸ ಅಭ್ಯಾಸ ಪತ್ರಿಕೆಯನ್ನು ಪರಿಣಾಮಕರವಾಗಿ

ಕಲಿಸಬೇಕಾದರೆ ಕೆಲವು ಮಾತುಗಳನ್ನು ಲಕ್ಷ್ಯದಲ್ಲಿಡಬೇಕಾಗುವದು. ಆರಂಭದ ಪಾಠಗಳು ಬಹಳ ಸಾವಕಾಶವಾಗಿ ನಡೆಯಬೇಕು; ಎಲ್ಲ ಹುಡುಗರೂ ಉಪಕರಣಗಳ ಉಪಯೋಗವನ್ನು ಮಾಡಲೇಬೇಕು. ಈ ಉಪಕರಣಗಳಿಂದ ತಾವು ಮಾಡುವ ಕೃತಿಗೂ ಲೆಕ್ಕವನ್ನು ಬರೆಯುವ ಕ್ರಮಕ್ಕೂ ಇರುವ ಸಂಬಂಧವು ಸ್ಪಷ್ಟವಾಗಿ ಹುಡುಗರ ಮನದಲ್ಲಿ ಬರಲಿಕ್ಕೇಬೇಕು. ಉಪೋದ್ಘಾತದಲ್ಲಿಯೂ ಪಾಠದ ಕೊನೆಗೂ ಬಾಯಿಲೆಕ್ಕಗಳನ್ನು ಬಹಳವಾಗಿ ಉಪಯೋಗಿಸಬೇಕು. ಮಿಸೆಸ್ ಮೂಕಯ್ಯನವರ ಇವರು ಕಲಿಸಿದ ಪಾಠದಲ್ಲಿ ಇವೆಲ್ಲ ತತ್ವಗಳು ಅನುಸರಿಸಲ್ಪಟ್ಟಿದ್ದವು.

ಆ ಬಳಿಕ ಪ್ರಾ. ಸ್ಕೂಲದ ಹೆ. ಮಾ. ಮಿ|| ಕುರಡಿ ಇವರು ೪ನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ ತೆನ್ನಾಲಿರಾಮಕೃಷ್ಣನು ಕಳ್ಳರನ್ನು ಮೋಸಮಾಡಿದ್ದು ಎಂಬ ಪಾಠವನ್ನು ಭಾಷಾಪಾಠವಾಗಿ (ವಾಚನ ಪಾಠವಲ್ಲ) ಕಲಿಸಿ ತೋರಿಸಿದರು. ಇದರಲ್ಲಿ ಮೊದಲು ಪಾಠದ ಕಥೆಯನ್ನು ಹೇಳುತ್ತ, ಏತದ ಒಂದು ಮಾದರಿಯನ್ನು ತೋರಿಸಿ ಶಬ್ದಪರಿಚಯ ಮಾಡಿಕೊಟ್ಟರು. ಬಳಿಕ ಮಾದರಿಗಾಗಿ ಪಾಠವನ್ನು ಓದಿತೋರಿಸಿ, ಶಬ್ದಕೋಶವನ್ನು (ಬರೆದು ತಂದದ್ದು) ಹುಡುಗರ ಮುಂದಿಟ್ಟು, ಪಾಠವನ್ನು ಮನದಲ್ಲಿಯೇ ಅವರಿಗೆ ಓದಿಕೊಳ್ಳ ಹೇಳಿ, ಅವರಿಗೆ ಎಷ್ಟು ತಿಳಿದಿದೆ ಎಂಬದನ್ನು ಪ್ರಶ್ನೆಗಳಮೂಲಕ ತಿಳಿದುಕೊಂಡು, ಕಲಿತ ಒಂದೆರಡು ಹೊಸಶಬ್ದಗಳನ್ನು ತಮ್ಮ ಸ್ವಂತವಾಕ್ಯಗಳಲ್ಲಿ ಉಪಯೋಗಮಾಡಹೇಳಿ, ಪಾಠ ಮುಗಿಸಿದರು.

ಭಾಷಾಪಾಠದಲ್ಲಿ ಈ ಮೆಟ್ಟಿಗಳನ್ನು ಮಾಡಿಕೊಂಡಕಾರಣ, ಅವುಗಳ ಉದ್ದೇಶ ಈ ಬಗ್ಗೆ ಪಂಡಿತ ಪೂಜಾರರು ಶನಿವಾರ ಉಪನ್ಯಾಸಮಾಡಿದರು. ಅದರ ಸಾರಾಂಶವನ್ನು ಮುಂದಿನ ಸಂಚಿಕೆಯಲ್ಲಿ ಕೊಡುವೆವು. ಮಧ್ಯಾಹ್ನ ೩ ಗಂಟೆಗೆ ಬಾಲಕರ ವರ್ಗವನ್ನು ಕಲಿಸುವಬಗ್ಗೆ ಬರುವ ತೊಂದರೆಗಳು ಅವುಗಳನ್ನು ನಿವಾರಿಸುವ ಉಪಾಯಗಳು ಹಾಗು ಬಾಲಕರ ವರ್ಗದಲ್ಲಿ ಆಗುವ ಹುಡುಗರ ಸಂಖ್ಯಾಹಾನಿಯನ್ನು ನಿಲ್ಲಿಸಲು ಮಾಡಬಹುದಾದ ಯೋಜನೆಗಳು ಈ ಮಹತ್ವದ ವಿಷಯವನ್ನು ಕುರಿತು ಧಾರವಾಡ ಸ್ಕೂ. ಬೋ. ಸುಪರವಾಯಿಝರರಾದ ಮಿ|| ಮರಡೂರ ಇವರು ವಿವರವಾಗಿ ಉಪನ್ಯಾಸ ಮಾಡಿದರು. ಈ ಬಗ್ಗೆ ಸಂಜೆಗೆ ೫ ಹೊಡೆದಬಳಿಕ ಮತ್ತೆ ಸ್ವಲ್ಪ ಚರ್ಚೆಯೂ ಆಯಿತು. ಮಿ|| ಮರಡೂರ ಇವರ ಭಾಷಣದ ಸಾರಾಂಶವನ್ನು ಮುಂದೆ ಕೊಡುವೆವು. ೩-೫೦ಕ್ಕೆ ವಿಜಾಪುರದ ಮಿ|| ಮಹಾಂತಣ್ಣನವರ ಇವರು ಬಾಲಕರ ವರ್ಗಕ್ಕೆ ಗಿಳಿಯು ಹಣ್ಣು ತಿನ್ನುವ ಬಗ್ಗೆ ಒಂದು ಕವಿತೆಯ ಪಾಠವನ್ನು ಕಲಿಸಿ ತೋರಿಸಿದರು. ೪-೩೦ರಿಂದ ೫ರ ವರೆಗೆ ಅಥಣಿಯ ಹಾಯಸ್ಕೂಲಿನ ಅಧ್ಯಾಪಕರೂ ಜ್ಯೋತಿಷ ಶಾಸ್ತ್ರ ವಿಶಾರದರೂ ಆದ ಮಿ|| ಜೇರೆ ಬಿ. ಎ. ಇವರು ಜ್ಯೋತಿಷಶಾಸ್ತ್ರದ ಇತಿಹಾಸ, ಕಾಲಗಣನೆಯಕ್ರಮ ಮೊದಲಾದವುಗಳನ್ನು ತಿಳಿಸಿ ಹೇಳಿದರು.

ಮಂಗಳವಾರ ಮುಂಜಾನೆ ೮ ಗಂಟೆಗೆ ಹೈ ಟ್ರೇ. ಕಾಲೇಜದ ಪ್ರಾ. ಸ್ಕೂಲಿನ ವಿದ್ಯಾರ್ಥಿನಿಯರ ಡ್ರಿಲ್ಲು ನಡೆಯಿತು. ೯ಕ್ಕೆ ಸರಿಯಾಗಿ ಅದೇ ಕಾಲೇಜದ ಪ್ರಾ. ಸ್ಕೂಲಿನ ಶಿಕ್ಷಕಿಯರಾದ ಮಿಸೆಸ್ ಬಿಸ್ಕೂರ ಇವರು ೧ನೆಯ ಇಯತ್ತೆಯ ಬಾಲಿಕೆಯರಿಗೆ ಬಿಚ್ಚು ಗಂಟಿನ ಪದ್ಧತಿಯ ವಜಾಬಾಕಿಯ ಆರಂಭದ ಗಣಿತ ಪಾಠವನ್ನು ಕಲಿಸಿ ತೋರಿಸಿದರು. ೧೦ಕ್ಕೆ ಸರಿಯಾಗಿ ಧಾರವಾಡದ ಅ|| ಡೆ. ಎ. ಇ. ರಾದ ಮಿ|| ಉಲ್ಲಾಳ ಬಿ. ಎ. ಇವರು ೪ನೆಯ ಇಯತ್ತೆಗೆ ಮುಂಬಯಿ ಇಲಾಖೆಯ ಜನರ ಉದ್ಯೋಗಗಳು ಎಂಬ ಭೂಗೋಲದ ಪಾಠವನ್ನು ಕಲಿಸಿ ತೋರಿಸಿದರು.

ಮಧ್ಯಾಹ್ನ ೨ ರಿಂದ ೪ರ ವರೆಗೆ ಎಲ್ಲರೂ ಟ್ರೇ. ಸ್ಕೂಲಿನ ಪ್ರಾ. ಸ್ಕೂಲಿಗೆ ಹೋಗಿ ಅಲ್ಲಿ ನಿರೀಕ್ಷಣೆ ಮಾಡಿದರು. ಮುಖ್ಯವಾಗಿ ಬಾಲಕರ ವರ್ಗದಲ್ಲಿ ವಾಚನ ಬರಹಗಳಲ್ಲಿ ಉಪಯೋಗಿಸುವ ಪಟಗಳು, ಗಣಿತ ಕಲಿಸುವ ಉಪಕರಣಗಳು, ಡ್ರಾಯಿಂಗ ಕಲಿಸುವ ಕ್ರಮ ಮೊದಲಾದವು ನೋಡತಕ್ಕವಿದ್ದವು; ೪ ಗಂಟೆಗೆ ಧಾರವಾಡ ಡಿ. ಸ್ಕೂ. ಬೋರ್ಡಿನ ಅ| ಆ| ರಾದ ಮಿ|| ನಾಯಿಕ ಬಿ. ಎ. ಇವರು ಕನ್ನಡ ಲಿಪಿ ಹಾಗು ಬರಹ, ಇವುಗಳನ್ನು ಕಲಿಸುವದರಲ್ಲಿ ಆಗುತ್ತಿರುವ ದೋಷಗಳು ಈ ಬಗ್ಗೆ ಉಪನ್ಯಾಸಮಾಡಿದರು. ಇದರ ಸಾರಾಂಶವನ್ನು ಮುಂದೆ ಕೊಡುವೆವು. ಬಳಿಕ ೫ರ ವರೆಗೆ ಮಿ|| ಜೇರೆ ಇವರ ಜ್ಯೋತಿಷ ಶಾಸ್ತ್ರದ ವ್ಯಾಖ್ಯಾನವಾಯಿತು. ದಿವಸ, ತಿಥಿ, ಭಾಸ್ಕರಾಚಾರ್ಯರು ಹೇಳಿದ ದಿನಗಳ ಅನುಕ್ರಮದ ಉಪಪತ್ತಿ, ಸೂರ್ಯಮಾಸ ಚಂದ್ರಮಾಸ, ಇವು ಆ ದಿವಸದ ವಿಷಯಗಳಾಗಿದ್ದವು. ಸಂಜೆಯ ೭ ಗಂಟೆಗೆ ಮಿ|| ಮರಡೂರ ಇವರು ಮ್ಯಾಜಿಕ್ ಲಾಂಟರ್ನದ ಚಿತ್ರಗಳ ನೆರವಿನಿಂದ ಕರ್ನಾಟಕದ ಇತಿಹಾಸದ ಬಗ್ಗೆ ವ್ಯಾಖ್ಯಾನ ಹೇಳಿದರು. ಇವರು ಉಪಯೋಗಿಸಿದ ಚಿತ್ರಗಳೆಲ್ಲ ಪ್ರಾ. ಸ್ಕೂಲಿನ ಅಧ್ಯಾಪಕರಾದ ಮಿ|| ಕುಂಬಾರ ಇವರು ತೆಗೆದ ಛಾಯಾಚಿತ್ರಗಳಿಂದ ತಯಾರಿಸಿದವಾಗಿದ್ದವು. ಈ ಕೆಲಸದಲ್ಲಿ ಪ್ರಾ. ಶಿಕ್ಷಕರೊಬ್ಬರು ಮನಸ್ಸು ಹಾಕಿ ಚಿತ್ರಗಳನ್ನು ತಯಾರಿಸಿದ್ದು ಶಿಕ್ಷಕ ವೃಂದಕ್ಕೆ ಭೂಷಣವಾದದ್ದು. ಮಿ|| ಮರಡೂರ ಇವರ ವ್ಯಾಖ್ಯಾನದ ಸಾರಾಂಶವನ್ನು ಮುಂದೆ ಕೊಡುವೆವು. ರಾತ್ರಿ ೯ ಗಂಟೆಗೆ ಮಿ|| ಜೇರೆ ಇವರು ಆಕಾಶದಲ್ಲಿ ನಕ್ಷತ್ರಗಳ ಗತಿಯ ಬಗ್ಗೆ ತಿಳಿಸಿದರು. ಆ ದಿನ ರಾತ್ರಿ ದೂರದರ್ಶಕ ಯಂತ್ರದಿಂದ ಚಂದ್ರನ ನಿರೀಕ್ಷಣಮಾಡುವ ಸಂಕಲ್ಪವಿತ್ತು. ಆದರೆ ಆ ದಿನವೂ ಮುಂದೆ ಎರಡು ದಿನಗಳವರೆಗೂ ಮೋಡ ಕವಿದದ್ದರಿಂದ ಇದು ಸಿದ್ಧಿ ಹೊಂದಲಿಲ್ಲ.

ಬುಧವಾರ ಮುಂಜಾನೆ ೮ರಿಂದ ೮-೩೦ರ ವರೆಗೆ ಪ್ರಾ. ಸ್ಕೂಲಿನ ಹುಡುಗರ ಸ್ಕೌಟ ಆಟಗಳನ್ನು ನೋಡುವದಾಯಿತು. ಈ ಆಟಗಳಲ್ಲಿ ತೀರ ಸಣ್ಣ ಬಾಲಕರಿಂದ ದೊಡ್ಡವರವರೆಗೆ ಆಡಬಹುದಾದ ಅನೇಕ ಪ್ರಕಾರಗಳಿರುವವು. ಇವುಗಳಲ್ಲಿ ಕೆಲವನ್ನು ಆರಿಸಿಗೊಂಡು ದಿನಾಲು ಸಂಜೆಗೆ ಹುಡುಗರಿಂದ ಆಡಿಸುವದು ಮಹತ್ವದಾದದ್ದು.

ಇವುಗಳನ್ನು ಈ ಭಾಗದ ಸ್ಕೌಟ ವ್ಯವಸ್ಥಾಪಕರಾದ ಮಿ॥ ಚಾರ ಬಿ. ಎ. ಇವರು ಪ್ರಾಥಮಿಕ ಶಿಕ್ಷಣದಲ್ಲಿ ಇತ್ತಲಾಗಿ ಕನ್ನಡದಲ್ಲಿ ವಿವರವಾಗಿ ಬರೆದಿರುವ ಮೂಲಕ ಶಿಕ್ಷಕರಿಗೆ ಒಳ್ಳೇ ಅನುಕೂಲವಾಗಿರುವದು. ಇದೇ ಸಮಯದಲ್ಲಿ ಪ್ರಾ. ಸ್ಕೂಲಿನ ಬಾಲಕರ ವರ್ಗ ಹಾಗು ೧ನೆಯ ಇಯತ್ತೆಯ ಹುಡುಗರು ಸಂಗೀತ ಸಾಭಿನಯ ಡ್ರಿಲ್‌ಮಾಡಿ ತೋರಿಸಿದರು. ಪ್ರಾ. ಸ್ಕೂಲಿನ ಬಾಲಕರ ವರ್ಗದ ಶಿಕ್ಷಕರಾದ ಮಿ॥ ಕುಲಕರ್ಣಿ ಇವರು ಪಿಟೀಲಿನಮೇಲೆ ಹಾಡು ಕೂಡಿಸಿ ಹುಡುಗರಿಂದ ಹಾಡಿಗೆ ತಕ್ಕಂತೆ ಅಭಿನಯ ಗಳನ್ನು ಮಾಡಿಸುತ್ತ ಡ್ರಿಲ್‌ಮಾಡಿಸಿದರು. ಇದು ನೋಡಲಿಕ್ಕೆ ಮುದ್ದಾಗಿರುವದು ಮಹತ್ವವಾದದ್ದಲ್ಲ. ಇದು ಚಿಕ್ಕ ಬಾಲಕರಿಗೆ ಬಹಳ ಸೇರುತ್ತದೆ ಇದರಿಂದ ಅವರಿಗೆ ಮನೋರಂಜನೆಯೂ ವ್ಯಾಯಾಮವೂ ಆಗುವದಲ್ಲದೆ ಶಿಕ್ಷಣವೂ ದೊರೆಯುವದು. ನಮ್ಮ ಪ್ರಾ. ಶಿಕ್ಷಕರು ಇದರಲ್ಲಿ ಮನಸು ಹಾಕಿದರೆ ಇಂಥ ಸಾಭಿನಯ ಡ್ರಿಲ್ಲನ್ನು ಸಂಗೀತ ದೊಡನೆ ಹಲವು ಬಗೆಯಿಂದ ನಡೆಯಿಸುವ ಒಂದು ಪುಸ್ತಕವು ಪ್ರಸಿದ್ಧವಾಗಬಹುದೆಂದು ನಮ್ಮ ಕೋರಿಕೆ. ೮-೪೦ಕ್ಕೆ ಹೆ. ಟ್ರೇ. ಕಾಲೇಜಿನ ಪ್ರಾ. ಸ್ಕೂಲಿನ ಶಿಕ್ಷಕಿಯರಾದ ಮಿಸೆಸ್ ಚಿಕ್ಕಮಠ ಇವರು ೨ನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ ಅರ್ಧ ಹಾಗು ಕಾಲು ಈ ಗಣಿತ ವಿಷಯದ ಬಗ್ಗೆ ಆರಂಭದ ಪಾಠವನ್ನು ಕಲಿಸಿದರು. ಹತ್ತಕ್ಕೆ ಸರಿಯಾಗಿ ಅದೇ ಕಾಲೇಜಿನ ಶಿಕ್ಷಕಿಯರಾದ ಮಿಸೆಸ್ ಶಾಸ್ತ್ರಿಯವರು ೧ನೆಯ ಇಯತ್ತೆಯ ಬಾಲಿಕೆ ಯರಿಗೆ ೧ನೆಯ ಪುಸ್ತಕದ ೧ನೆಯ ಪಾಠವನ್ನು ಕಲಿಸಿದರು. ಈ ಬಾಲಿಕೆಯರು ವರ್ಗ ದಲ್ಲಿ ಹೆ. ಮ. ಪ್ರಾ. ಸ್ಕೂಲಿನಲ್ಲಿ ನಡೆಯುವ ವಿಶಿಷ್ಟಪದ್ಧತಿಯಿಂದ ಶಬ್ದಗಳನ್ನೂ ರಟ್ಟಿನ ಮೇಲೆ ಇಲ್ಲವೆ ಕ. ಹ. ಮೇಲೆ ಬರೆದ ಕೆಲವು ಸಣ್ಣ ವಾಕ್ಯಗಳನ್ನೂ ಓದಲಿಕ್ಕೆ ಕಲಿತಿದ್ದರು. ಪಠ್ಯಪುಸ್ತಕವನ್ನು ಅವರು ಓದಲಾರಂಭಿಸಿದ್ದು ಈ ದಿನವೇ. ಈ ದೃಷ್ಟಿಯಿಂದ ಪಾಠವು ಒಳ್ಳೇ ಮನೋರಂಜಕವಾದದ್ದಾಯಿತು

ಮಧ್ಯಾಹ್ನ ೩ರಿಂದ ೫ರವರೆಗೆ ಹೆ. ಟ್ರೇ. ಕಾಲೇಜದ ಪ್ರಾ. ಸ್ಕೂಲಿನ ಅಭ್ಯಾಸಕ್ರಮದ ಅವಲೋಕನವು ಸಾಗಿತು. ಅಲ್ಲಿ ಬಾಲಿಕೆಯರ ವರ್ಗದಲ್ಲಿ ಚಿಕ್ಕಮಕ್ಕಳಿಗೆ ತಮ್ಮ ಕಲ್ಪನೆ ವಿಚಾರಗಳನ್ನು ಹೇಳಲಿಕ್ಕೂ ತಮಗೆ ಬಂದಂತೆ ಚಿತ್ರ ತೆಗೆಯಲಿಕ್ಕೂ ದೊರೆಯುವ ಸ್ವಾತಂತ್ರ್ಯವೂ ಆತ್ಮಪ್ರಕಟನೆಯಲ್ಲಿ ಅವರಿಗೆ ದೊರೆಯುವ ಉತ್ತೇಜನವೂ ಶಬ್ದ, ವಾಕ್ಯ, ಗಣನೆ ಇವುಗಳನ್ನು ಕಲಿಸಲಿಕ್ಕೂ ದೃಢಪಡಿಸಲಿಕ್ಕೂ ಸಿದ್ಧವಿರುವ ಹಲವು ಬಗೆಯ ಉಪಕರಣಗಳೂ ಯೋಜನೆಗಳೂ ಡ್ರಾಯಿಂಗ ಕಲಿಯಲಿಕ್ಕೆ ಇರುವ ತರತರದ ಸೌಕರ್ಯಗಳೂ ಚಿಕ್ಕಮಕ್ಕಳು ಈ ವಿದ್ಯಾರ್ಜನೆಯಲ್ಲಿ ತೋರಿಸುವ ಲವಲವಿಕೆಯೂ ಈ ಆರಂಭದ ವರ್ಗದ ಆರಂಭದ ತರಗತಿಯಲ್ಲಿಯೇ ಕೂಸುಗಳು ಮಾತಾಡಲಿಕ್ಕೆ ಮಾಡುವ ಪ್ರಯತ್ನಗಳೂ ನೋಡುವಂತಿದ್ದವು. ಒಂದೆರಡು ತಾಸುಗಳಲ್ಲಿ ಇವನ್ನು ನೋಡಿ ಸಂತೋಷ ಪಡುವದಾಗುತ್ತಿತ್ತೇ ಹೊರತು ಈ ಪದ್ಧತಿಗಳನ್ನೂ ಅವುಗಳ ವಿನ

ರವನ್ನೂ ಯಥಾಕ್ರಮವಾಗಿ ಅಭ್ಯಾಸಿಸುವದು ಸುಸಾಧ್ಯವೆನಿಸಲಿಲ್ಲ. ಮೆ॥ ಲೇಡೀ ಸಾಹೇಬರು ಅಲ್ಲಿಯೇ ನಿಂತು ಕೇಳಿದವರಿಗೆಲ್ಲ ತಮ್ಮ ಯೋಜನೆಗಳನ್ನು ತಿಳಿಸಿ ಹೇಳುತ್ತಿದ್ದರು. ಇವುಗಳನ್ನು ವಿವರವಾಗಿ ಪ್ರಾಥಮಿಕ ಶಿಕ್ಷಣದಲ್ಲಿ ಅಚ್ಚು ಹಾಕಿದರೆ ಶಿಕ್ಷಕರಿಗೆ ನಿಜವಾಗಿ ಉಪಯೋಗವಾಗುವದೆಂದು ತಿಳಿಸಲು ಅವರು ಈ ಕಾರ್ಯಕ್ಕೆ ಸಮ್ಮತಿಸಿರುವರು. ಮುಂದಿನ ಕೆಲವು ಸಂಚಿಕೆಗಳಲ್ಲಿ ನಾವು ಇವನ್ನು ಪ್ರಕಟಿಸಬೇಕೆಂದಿರುವೆವು. ಈ ಪ್ರಾ. ಸ್ಕೂಲಿನ ಇತರ ಇಯತ್ತೆಗಳ ಶಿಕ್ಷಣ ಕ್ರಮದಲ್ಲಿಯೂ ನೋಡತಕ್ಕ ಅಂಶಗಳು ಹಲವಿದ್ದವು.

ಸಂಜೆಗೆ ೭ಕ್ಕೆ ಸರಿಯಾಗಿ ಮಿ. ಉಲ್ಲಾಳ ಬಿ. ಎ. ಇವರು ಸಿಂಹಳದ್ವೀಪದ ಬಗ್ಗೆ ಸಚಿತ್ರ ವ್ಯಾಖ್ಯಾನವನ್ನು ಹೇಳಿದರು. ಇದರ ಸಾರಾಂಶವನ್ನು ಮುಂದೆ ಕೊಟ್ಟಿರುವೆವು. ರಾತ್ರಿ ೯ರಿಂದ ೧೦ರವರೆಗೆ ಮಿ. ಜೇರೆ ಇವರು ಆಕಾಶದಲ್ಲಿ ಧ್ರುವ, ಸಪ್ತರ್ಷಿ ಮೊದಲಾದ ನಕ್ಷತ್ರ ಪುಂಜಗಳನ್ನು ತೋರಿಸಿದ್ದಲ್ಲದೆ, ನಕ್ಷತ್ರಗಳ ಸಹಾಯದಿಂದ ರಾತ್ರಿಯಲ್ಲಿ ವೇಳೆಯನ್ನು ಹೇಳುವ ಸುಲಭವಾದ ಕ್ರಮವನ್ನು ತೋರಿಸಿದರು. ಗುರುವಾರ ಮುಂಜಾನೆ ೭-೩೦ರಿಂದ ೮ರ ವರೆಗೆ ಹೆ. ಟ್ರೇ. ಕಾಲೇಜಿನ ಪ್ರಾ. ಸ್ಕೂಲಿನ ವಿದ್ಯಾರ್ಥಿನಿಯರ ಆಟಗಳಾದವು. ೮-೩೦ ಕ್ಕೆ ಪ್ರಾ. ಸ್ಕೂಲಿನ ಶಿಕ್ಷಕರಾದ ಮಿ. ಹಿರೇಮಠ ಇವರು ೩ನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ ಗಣಿತ ವಿಷಯದಲ್ಲಿ ಏಕಮಾನ ಪದ್ಧತಿಯ ಮೊದಲನೆಯ ಪಾಠವನ್ನು ಕಲಿಸಿದರು. ಬಳಿಕ ಮಿ. ಮರಡೂರ ಇವರು ೧ನೆಯ ಇ. ಗೆ ಕಥೆಯೊಂದನ್ನು ಕಲಿಸಿದರು. ಕಥೆಗಳನ್ನು ಕಲಿಸುವ ಉದ್ದೇಶಗಳು ಹಲವಿದ್ದರೂ ನಮ್ಮ ಶಾಲೆಗಳಲ್ಲಿ ಹುಡುಗರಿಗೆ ಮಾತಾಡಲಿಕ್ಕೆ ನಾವು ಕಲಿಸುವ ರೂಢಿಯು ಕಡಿಮೆ ; ಆದ್ದರಿಂದ ಕಥಾಪಾಠಗಳಲ್ಲಿಯೇ ನಿಬಂಧ ಪಾಠದ ಅಂಶವನ್ನು ಹ್ಯಾಗೆ ಸೇರಿಸಿಕೊಳ್ಳಬಹುದೆಂಬದನ್ನು ತೋರಿಸುವದು ಅವರ ಉದ್ದೇಶ್ಯವಾಗಿತ್ತು. ೧೦-೩೦ಕ್ಕೆ ವಿಜಾಪುರದ ಡಿ. ಸ್ಕೂ. ಬೋರ್ಡಿನ ಸುಪರವಾಯಿಝರರಾದ ಮಿ. ಶೆಟ್ಟಿ ಇವರು ವ್ಯಾಕರಣದ ಆರಂಭದ ಪಾಠವನ್ನು ಕಲಿಸಿದರು.

ಮಧ್ಯಾಹ್ನ ೩ರಿಂದ ೪ರ ವರೆಗೆ ಹೆ. ಟ್ರೇ. ಕಾಲೇಜಿನ ಪ್ರಾ. ಸ್ಕೂಲಿನ ಶಿಕ್ಷಕಿಯರಾದ ಮಿಸೆಸ್ ಕಟ್ಟಿಮಠ ಇವರು ಹೊಸ ಕವಿತೆಯ ಒಂದು ಪಾಠವನ್ನು ೩ನೆಯ ಇಯತ್ತೆಗೆ ಕಲಿಸಿದರು. ಇವರು ಕಲಿಸಿದ ಕವಿತೆಯನ್ನು ಮುಂದೆ ಕೊಟ್ಟಿರುವೆವು. ಈ ಪಾಠವು ಪೂರ್ಣ ಪರಿಣಾಮಕಾರಿಯಾದ ಮೂಲಕವೋ ಅಥವಾ ನಮಗೆ ತಿಳಿಯದ ಯಾವ ಕಾರಣದ ಮೂಲಕವೋ ಅನೇಕ ಶಿಕ್ಷಕರಲ್ಲಿಯೂ ಕೆಲವು ಜನ ಅಧಿಕಾರಿಗಳಲ್ಲಿಯೂ ಪಾಠದ ಪೂರ್ವಪರಿಚಯವು ವಿದ್ಯಾರ್ಥಿಗಳಿಗೆ ಆಗಿರಬೇಕೆಂಬ ಸಂಶಯ ಪಿಶಾಚಿಯು ಸೇರಿಕೊಂಡಿತು. ವಿದ್ಯಾರ್ಥಿನಿಯರು ಅಲ್ಪಕಾಲದಲ್ಲಿ ಇಷ್ಟೆಲ್ಲ ಗ್ರಹಣ ಮಾಡಿ ಹೇಳುವದು ಸೋಜಿಗವಾದದ್ದೆಂದೂ ಕವಿತೆಯ ಧಾಟಿಯನ್ನು ಅಷ್ಟು ಚೆನ್ನಾಗಿ

ಅನ್ನುವದು ಪೂರ್ವ ಶಿಕ್ಷಿತರಿಂಗಲ್ಲದೆ ಇತರರಿಗೆ ಅರಿದಾದ್ದರಿಂದಲೂ ಕೆಲವರು ಸಂಶಯಪಟ್ಟರು. ಆದರೆ ಆ ಕವಿತೆಯನ್ನು ವಿದ್ಯಾರ್ಥಿನಿಯರು ಸಭೆಯಲ್ಲಿಯೇ ಮೊದಲು ನೋಡಿದ್ದೆಂದು ನಾವು ಖಂಡಿತವಾಗಿ ಹೇಳುವೆವು. ಮೇಲಾಗಿ ಮೊದಲೇ ಕಲಿಸಿಕೊಂಡು ಬಂದ ವಿದ್ಯಾರ್ಥಿಗಳು ಶಿಕ್ಷಕರು ಕೇಳುವದಕ್ಕಿಂತ ಮೊದಲೇ ತಮ್ಮ ಪಾಲಿಗೆ ಮೀಸಲಿಟ್ಟ ಉತ್ತರಗಳನ್ನು ನುಡಿದು ಬಿಡುವದು ತೀರ ಸಾಮಾನ್ಯ ಲಕ್ಷಣವೆಂದು ಪ್ರತಿಯೊಬ್ಬ ಶಿಕ್ಷಕನಿಗೆ ಗೊತ್ತಿರುವ ಮಾತು. ಇಂಥ ಒಂದು ಉತ್ತರವೂ ಹುಡಿಗೆಯರಿಂದ ಬರಲಿಲ್ಲ. ಹೆ. ಟ್ರೇ. ಕಾಲೇಜಿನ ಪ್ರಾ. ಸ್ಕೂಲಿನಲ್ಲಿ ಕವಿತೆಯ ಪಾಠಗಳು ನಡೆದಾಗ ಬೇಕಾದ ಶಿಕ್ಷಕರು ತೀಸದೆ ಹೋಗಿ ಪಾಠ ಕ್ರಮವನ್ನೂ ವಿದ್ಯಾರ್ಥಿನಿಯರ ಉತ್ತರಗಳನ್ನೂ ನೋಡಿ ತಮ್ಮ ಸಂಶಯವನ್ನು ದೂರಮಾಡಿಕೊಳ್ಳಬಹುದೆಂದು ಹೇಳುವದಕ್ಕಿಂತ ಸಂಶಯ ಪಿಶಾಚಿಯನ್ನು ಹೊಡೆದೋಡಿಸುವ ಬೇರೊಂದು ಉಪಾಯವನ್ನು ನಾವು ಕಾಣೆವು. ಮುಂದೆ ಅರ್ಧ ಗಂಟೆಯವರೆಗೆ ಹುಬ್ಬಳ್ಳಿಯ ಮ್ಯುನಿಸಿಪಲ್ ಸ್ಕೂ. ಬೋರ್ಡಿನ ಅ|| ಅ|| ರಾದ ಮಿ. ಗಾಂವಕರ ಬಿ. ಎ. ಇವರು ತಾವು ರಚಿಸಿದ ಕವಿತೆಗಳನ್ನು ಸ್ಫೂರ್ತಿದಾಯಕವಾಗಿ ಅಂದು ತೋರಿಸಿದರು. ಕವಿತಾ ಪಾಠಗಳು ಶ್ರಾವ್ಯ ಕಾವ್ಯಗಳ ಭಾಗಗಳೆಂಬದು ಎಲ್ಲರ ಮನಸಿಗೂ ಚೆನ್ನಾಗಿ ಹೊಳೆಯಿತು. ಆ ಬಳಿಕ ಕನ್ನಡ ಶಿಕ್ಷಕ ವೃಂದಕ್ಕೆ ಪೂರ್ಣ ಪರಿಚಿತರಾದ "ಆನಂದ ಕವಿ"ಗಳು ತಾವು ರಚಿಸಿದ ಒಂದೆರಡು ಕವಿತೆಗಳನ್ನು ಸಭಿಕರು ತಲೆದೂಗುವಂತೆ ಅಂದರು. ಇವುಗಳಲ್ಲೊಂದಾದ "ಜೋಗದ ಜಲಪಾತ"ವೆಂಬದನ್ನು ಮುಂದೆ ಕೊಟ್ಟಿರುವೆವು. ೪–೧೦ ರಿಂದ ೫ರ ವರೆಗೆ ಶಿಕ್ಷಕರಿಗೆ ವರ್ಗದಲ್ಲಿ ಒದಗುವ ತೊಂದರೆಗಳು ಈ ವಿಷಯದ ಬಗ್ಗೆ ಚರ್ಚೆಯಾಯಿತು. ನಮ್ಮಲ್ಲಿ ಉಪಯೋಗದಲ್ಲಿರುವ ಕ್ರಮಿಕ ವಾಚನ ಪುಸ್ತಕಗಳಲ್ಲಿ ಚಿತ್ರಗಳು ಪಾಠಗಳ ವಿಷಯಕ್ಕೆ ಹೊಂದಿಕೆಯುಳ್ಳವಿರುವದಿಲ್ಲವೆಂದು ಒಬ್ಬರು ಆಕ್ಷೇಪಿಸಿದರು; ಈ ಬಗ್ಗೆ ವಿಚಾರ ನಡೆದಿರುವದೆಂದು ಹೇಳಿದ್ದಾಯಿತು. ಇತ್ತಲಾಗಿ ಮುಲ್ಕೀಪರೀಕ್ಷೆಯ ಪ್ರಶ್ನಕಾಗದಗಳಲ್ಲಿ ನಿಯಮಿತವಾದ ಪಠ್ಯಪುಸ್ತಕಗಳಲ್ಲಿ ಇಲ್ಲದ ಪ್ರಶ್ನಗಳು ವಿಶೇಷವಾಗಿ ಬರಲಾರಂಭಿಸಿದ್ದರಿಂದ ವಿದ್ಯಾರ್ಥಿಗಳನ್ನು ನಪಾಸು ಮಾಡಬೇಕೆಂಬ ಉದ್ದೇಶವು ಇರುವದೋ ಹೇಗೆ ಎಂಬ ಸಂಶಯಕ್ಕೆ ಅವಕಾಶ ದೊರೆಯುತ್ತದೆಂದು ಒಬ್ಬರು ಹೇಳಿದರು. ಉದಾಹರಣಾರ್ಥವಾಗಿ ಮೈಸೂರ ಹಾಗು ಹೈದರಾಬಾದ ಪ್ರಾಂತಗಳ ಪ್ರಾ. ಸ್ವರೂಪವು ಕನ್ನಡದಲ್ಲಿ ಉಪಲಬ್ಧವಿರುವ ಯಾವ ಭೂಗೋಲ ಪುಸ್ತಕಗಳಲ್ಲಿಯೂ ಕೊಟ್ಟಿಲ್ಲವೆಂದು ತೋರಿಸಿದರು. ಈ ಆಕ್ಷೇಪಕ್ಕೆ ಸಮಾಧಾನ ಹೇಳುವವರು ಅಂದದ್ದು:—ವಿದ್ಯಾರ್ಥಿಗಳನ್ನು ನಪಾಸು ಮಾಡುವದೇ ಪರೀಕ್ಷಕರ ಉದ್ದೇಶ್ಯವೆಂದೆಣಿಸಿದರೆ ಅವರು ಇಷ್ಟು ಸಂಶಯಾಸ್ಪದವಾದ ಉಪಾಯವನ್ನು ಮಾಡಬೇಕಾಗುವದಿಲ್ಲೆಂಬದು ಸ್ಪಷ್ಟವು. ಬೇಲಿಯು ಹೊಲದ ರಕ್ಷಣೆಗಾಗಿರುವದು. ಅದೇ ಹೊಲವನ್ನು ನುಂಗಹತ್ತಿದರೆ ಮುಂದೆ ಹೊಲವನ್ನು ಕಾಯುವವರಾರು? ನಮ್ಮಲ್ಲಿ ಪರೀ

ಷ್ಟಿಗೆ ಕೊಟ್ಟಿರುವ ಅತಿಮಹತ್ವದ ಮೂಲಕ ಶಿಕ್ಷಣದ ನಿಜವಾದ ಉದ್ದೇಶವೂ ವಿದ್ಯಾರ್ಥಿಗಳ ನಿಜವಾದ ಶಿಕ್ಷಣವೂ ಕೈಗೂಡುವದಿಲ್ಲ. ಪುಸ್ತಕಗಳನ್ನು ಗಟ್ಟಿ ಮಾಡಲಿಕ್ಕಾಗಿ ಹುಡುಗರು ಹುಟ್ಟುವದಿಲ್ಲ. ಯಥಾರ್ಥ ಜ್ಞಾನವನ್ನು ಪಡೆದು ಬದ್ಧಿ ಸಂಸ್ಕಾರವನ್ನು ಪಡೆಯಲು ಅವರು ಸಾಲೆಗೆ ಬರುವರು. ಆದ್ದರಿಂದ ಪುಸ್ತಕಗಳನ್ನು ಪೂರ್ಣವಾಗಿ ಅವಲಂಬಿಸದೆ ಇತರ ಉಪಕರಣಗಳ ಸಹಾಯದಿಂದ ಈ ಉದ್ದೇಶವು ಸಫಲವಾಗುವಂತೆ ಶಿಕ್ಷಣ ಕೊಡುವ ಮಾರ್ಗಗಳ ಕಡೆಗೆ ಶಿಕ್ಷಕರ ಲಕ್ಷ್ಯವು ಹೋಗಬೇಕೆಂಬದೇ ಇಂಥ ಪ್ರಶ್ನಗಳನ್ನು ಕೇಳುವ ಗುರಿಯು. ನಾರ್ವೇ, ಈಕ್ವೆಡೋರ ಮೊದಲಾದ ಪ್ರಾಂತಗಳ ಪ್ರಾ. ಸ್ವರೂಪವು ಪಠ್ಯಪುಸ್ತಕಗಳಲ್ಲಿ ಕೊಟ್ಟಿರುವ ಮೂಲಕ ಕಂಠಪಾಠ ಮಾಡಲಿಕ್ಕೆ ಹಾಗು ಮಾಡಿಸಲಿಕ್ಕೆ ಅನುವಿರುವದು. ಆದರೆ ನಮ್ಮ ನೆರೆಯ ಪ್ರಾಂತಗಳಾದ ಮೈಸೂರು, ಹೈದರಾಬಾದ ಇವುಗಳ ಪ್ರಾ. ಸ್ವರೂಪವು ಬೇಕಾದ ಒಂದು ಛಾಪಿಯ ನಕಾಶದಿಂದ ಗೊತ್ತಾಗಬಹುದು. ಇವನ್ನು ನಕಾಶಗಳಲ್ಲಿ ತೋರಿಸಿದರೆ, ವಿದ್ಯಾರ್ಥಿಗಳಿಗೆ ನಿಜವಾದ ಜ್ಞಾನವು ಸುಲಭವಾಗಿ ಆಗುವದು. ಈಕ್ವೆಡೋರದ ಮಾಹಿತಿಗಿಂತ ನಮ್ಮ ಕರ್ನಾಟಕದ ಭಾಗವಾದ ಮೈಸೂರ ಪ್ರಾಂತದ ಜ್ಞಾನವು ನಮಗೂ ನಮ್ಮ ವಿದ್ಯಾರ್ಥಿಗಳಿಗೂ ಹೆಚ್ಚು ಮಹತ್ವವಾದದ್ದೆಂಬ ಬಗ್ಗೆ ಭಿನ್ನಾಭಿಪ್ರಾಯವಾಗದು. ೫ರ ವರೆಗೆ ಮಿ. ಜೇರಿ ಇವರು ಹಗಲು ರಾತ್ರಿಗಳ ಕಾಲಮಾನದಲ್ಲಿಯ ವ್ಯತ್ಯಾಸಗಳು ಈ ವಿಷಯವನ್ನು ಸ್ಪಷ್ಟವಾಗಿ ವಿವರಿಸಿದರು. ರಾತ್ರಿ ೯ರಿಂದ ೧೦ರವರೆಗೆ ಗ್ರಹ ನಕ್ಷತ್ರಗಳ ಅವಲೋಕನವಾಯಿತು.

ಶುಕ್ರವಾರ ದಿವಸ ಮುಂಜಾನೆ ೮ ರಿಂದ ೯ ರ ವರೆಗೆ ಶಿಕ್ಷಕರು ತಯಾರಿಸಿದ ಶಾಲೋಪಯುಕ್ತವಾದ ಉಪಕರಣಗಳು, ವಿದ್ಯಾರ್ಥಿಗಳ ಶಾಲೆಯ ಕೈಕೆಲಸಗಳು ಇವುಗಳ ಮಾದರಿಗಳ ಪ್ರದರ್ಶನವನ್ನು ನೋಡುವದಾಯಿತು. ಬೇರೆ ಬೇರೆ ಜಿಲ್ಲೆಗಳ ಶಿಕ್ಷಕರು ಬಗೆಬಗೆಯ ಮಾದರಿಗಳನ್ನು ತಂದಿದ್ದರು. ಇವುಗಳಲ್ಲಿ ಅಕ್ಷರ, ಶಬ್ದ, ಸುಲಭ ವಾಚನಪಾಠಗಳು, ಅಂಕೆ, ಮಗ್ಗಿ, ಗಣಿತದ ಆರಂಭದಪಾಠಗಳು, ಕಥೆಗಳು, ಭೂಗೋಲದ ನಕಾಶ ಹಾಗು ಪಟ ಇವುಗಳ ಬಗ್ಗೆ ತಯಾರಿಸಿದ ಉಪಕರಣಗಳೇ ಬಹಳವಾಗಿದ್ದವು. ಡ್ರಾಯಿಂಗದ ಪಾಠಕ್ರಮವನ್ನು ತೋರಿಸುವ ಮಾದರಿಗಳೂ ಇದ್ದವು. ಕೆಲವು ಶಿಕ್ಷಕರು ಆರ್ಲಿನ ಮಾದರಿಗಳನ್ನೂ ಕಾಗದ, ರಟ್ಟುಗಳಿಂದ ಮಾಡಿದ ಮಾದರಿಗಳನ್ನೂ ತಂದಿದ್ದರು. ಹೆಣ್ಣುಮಕ್ಕಳ ಸಾಲೆಯವರು ಕಾಗದದ ಕೆಲಸ, ಹೊಲಿಗೆಯ ಕೆಲಸ, ಕಶೀದೆಯ ಕೆಲಸ ಇವುಗಳ ಮೇಲಾದ ಮಾದರಿಗಳನ್ನು ಇಟ್ಟಿದ್ದರು. ವಿದ್ಯಾರ್ಥಿಗಳ ಕೆಲಸದ ಮಾದರಿಗಳು ಸಾಕಷ್ಟು ಇರಲಿಲ್ಲವೆಂದು ತಜ್ಞರು ಅಭಿಪ್ರಾಯಪಟ್ಟರು. ಕೆಲವು ಶಾಲೆಗಳಲ್ಲಿ ತಯಾರಾದ ಚಿತ್ರಗಳು, ಮಾದರಿಗಳು ಮೊದಲಾದವು ಪ್ರಶಂಸನೀಯವಾಗಿದ್ದವು. ಒಟ್ಟಿನ ಮೇಲೆ ನಮ್ಮ ಪ್ರಾಥಮಿಕ ಶಿಕ್ಷಕರಲ್ಲಿ ಉಪಕ

ರಣಗಳನ್ನು ತಯಾರಿಸುವ ಜಾಣ್ಮೆಯು ಮೇಲ್ಪರದ್ದಿರುವದೆಂದೂ ಈ ಬಗ್ಗೆ ಅವರಿಗೆ ಉತ್ತೇಜನ ದೊರೆಯುವದು ಅವಶ್ಯವೆಂದೂ ಅನುಭವಿಕ ಅಧಿಕಾರಿಗಳ ಅಭಿಪ್ರಾಯವಾಯಿತು.

ಹುಲಕೋಟಿಯ ಶಾಲೆಯ ಒಕ್ಕಲತನದ ವರ್ಗಗಳ ಶಿಕ್ಷಕರೂ ಬೈಲಹೊಂಗಲ ಶಾಲೆಯ ಬಡಿಗತನದ ಶಾಲೆಯ ಶಿಕ್ಷಕರೂ ತಮ್ಮ ತಮ್ಮ ಶಿಕ್ಷಣಕ್ಕೆ ಸಂಬಂಧಿಸಿದ ಮಾದರಿಗಳನ್ನು ತಂದಿದ್ದರು.

ಸ್ವಂತ ಖರ್ಚಿನಿಂದ ಇವೆಲ್ಲ ಉಪಕರಣಗಳನ್ನು ಪ್ರದರ್ಶನಕ್ಕೆ ತಂದಿಟ್ಟ ಶಿಕ್ಷಕರ ಉಪಕಾರವನ್ನು ನಾವು ಮನಃಪೂರ್ವಕವಾಗಿ ನೆನಿಸುವೆವು.

೯-೧೦ಕ್ಕೆ ಪ್ರಾ. ಸ್ಕೂಲಿನ ಶಿಕ್ಷಕರಾದ ಮಿ॥ ಬಶೆಟ್ಟೆಯ್ಯನವರ ಇವರು ನಾಲ್ಕನೆಯ ಇಯತ್ತೆಗೆ “ ಕ್ಷೇತ್ರಮಾಪನದ ” ಮೊದಲನೆಯ ಗಣಿತ ಪಾಠವನ್ನು ಕಲಿಸಿದರು. ಬಳಿಕ ಮಿ॥ ಮುಗದಾಳ ಬಿ. ಎ. ಇವರು ೩ನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ ನಕಾಶವಾಚನದ ಭೂಗೋಲ ಪಾಠವನ್ನು ಕಲಿಸಿ ತೋರಿಸಿದರು.

ಮಧ್ಯಾಹ್ನ ೩ಕ್ಕೆ ಕಾರವಾರ ಜಿಲ್ಹೆಯ ಅ್ಯ. ಅ॥ ರಾದ ಮಿ॥ ಕಸಬೇಕರ ಬಿ. ಎ. ಇವರು ೪ನೆಯ ಇಯತ್ತೆಗೆ “ವಿದ್ಯಾರಣ್ಯ”ರ ಬಗ್ಗೆ ಇತಿಹಾಸ ಪಾಠವನ್ನು ಕುಶಲತನದಿಂದ ಕಲಿಸಿದರು. ಮುಂದೆ ಧಾರವಾಡದ ಹಾಯಸ್ಕೂಲಿನ ಶಿಕ್ಷಕರಾದ ಮಿ॥ ಕಾಮತ ಬಿ. ಎ. ಇವರು ಶಿಕ್ಷಣಶಾಸ್ತ್ರದಲ್ಲಿ ಹೊಸದಾಗಿ ರೂಢವಾಗುತ್ತಿರುವ “ ಬುದ್ಧಿಪರೀಕ್ಷೆ ”ಯ ಕ್ರಮವನ್ನು ಕುರಿತು ವ್ಯಾಖ್ಯಾನ ಹೇಳಿದರು. ಈ ಬಗ್ಗೆ ಮುಂದೆ ಬರೆಯುವೆವು. ಈ ಪರೀಕ್ಷೆಯ ಪ್ರಶ್ನಗಳನ್ನೂ ಅವುಗಳಿಂದ ಬುದ್ಧಿಯ ತರಗತಿಯನ್ನು ನಿರ್ಣಯಿಸುವ ಪ್ರಕಾರಗಳನ್ನೂ ಇವರು ಉದಾಹರಣಗಳೊಡನೆ ತಿಳಿಸಿಕೊಟ್ಟರು. ಆ ಬಳಿಕ ಚಂದ್ರನ ಕಲೆಗಳು, ಇವುಗಳ ಸಹಾಯದಿಂದ ತಿಥಿಯನ್ನು ಗೊತ್ತುಹಚ್ಚುವದು ಈ ವಿಷಯದ ಬಗ್ಗೆ ಮಿ॥ ಜೇರಿ ಇವರು ಸೋಪಪತ್ತಿಕವಾಗಿ ಉಪನ್ಯಾಸ ಮಾಡಿದರು. ರಾತ್ರಿ ೮-೧೦ರ ವರಿಗೆ ಚಂದ್ರಮಂಡಲದ ನಿರೀಕ್ಷಣೆ ಮಾಡಿದ್ದಾಯಿತು.

ಶನಿವಾರ ಮುಂಜಾನೆ ಮತ್ತೆ ಒಂದು ತಾಸಿನವರೆಗೆ ಪ್ರದರ್ಶನವನ್ನು ನೋಡುವದಾಯಿತು. ೯ರಿಂದ ೧೦ರ ವರಿಗೆ ಪಂಡಿತ ಪೂಜಾರ ಇವರು ಟ್ರೇ. ಸ್ಕೂಲಿನ ಪ್ರಾ. ಸ್ಕೂಲಿನಲ್ಲಿಯೂ ಹೆ. ಟ್ರೆ. ಕಾಲೇಜಿನ ಪ್ರಾ. ಸ್ಕೂಲಿನಲ್ಲಿಯೂ ೨ನೆಯ ಇಯತ್ತೆಯಿಂದ ಮೇಲಿನ ಇಯತ್ತೆಗಳ ವರಿಗೆ ಭಾಷಾಪಾಠಗಳನ್ನು ಕಲಿಸುವಾಗ ಮಾಡಿಕೊಂಡ ಮೆಟ್ಟುಗಳನ್ನೂ ಅವುಗಳ ಉದ್ದೇಶಗಳನ್ನೂ ವಿವರಿಸಿ ಹೇಳಿದರು. ಇದರ ಸಾರಾಂಶವನ್ನೂ ಈ ಬಗ್ಗೆ ಶಿಕ್ಷಕರು ಹೇಳಿದ ಆಕ್ಷೇಪಗಳನ್ನೂ ತಜ್ಞರು ಪ್ರಕಟಿಸಿದ ಅಭಿಪ್ರಾಯಗಳನ್ನೂ ಸಂಕ್ಷೇಪದಲ್ಲಿ ಮುಂದೆ ಕೊಡುವೆವು. ಆ ಬಳಿಕ ಗಣಿತ ಶಿಕ್ಷಣದ ಪದ್ಧತಿ

ಗಳ ಬಗ್ಗೆ ಚರ್ಚೆಯಾಗಬೇಕಾಗಿತ್ತು. ಒಬ್ಬ ಶಿಕ್ಷಕರು ವರ್ಗಮೂಲ, ವಿಶೇಷವಾಗಿ ಘನಮೂಲ ಇವುಗಳನ್ನು ತೆಗೆಯುವ ಪದ್ಧತಿಗಳ ಉಪಪತ್ತಿಯನ್ನೂ ಇದನ್ನು ವಿದ್ಯಾರ್ಥಿಗಳಿಗೆ ತಿಳಿಸುವ ಕ್ರಮವನ್ನೂ ತಿಳಿಸಬೇಕಾಗಿ ಕೇಳಿದರು. ಘನಮೂಲದ ಲೆಕ್ಕಗಳನ್ನು ಈಗ ಕೇಳುವದಿಲ್ಲ; ಅಭ್ಯಾಸಪತ್ರಿಕೆಯಲ್ಲಿ ಇವು ಕೊಟ್ಟಿಲ್ಲ; ಸಣ್ಣ ಸಂಖ್ಯೆಗಳ ಘನಮೂಲವನ್ನು ಅವಯವಗಳ ಸಹಾಯದಿಂದ ತೆಗೆದರೆ ಸಾಕು, ಎಂದು ಸಮಾಧಾನ ಹೇಳಲಾಯಿತು. ಆದರೂ ಸಂಶಯವು ದೂರಾಗಲಿಲ್ಲ, ಎಂಬ ದೂರು ಹಾಗೇ ಉಳಿಯಿತು. ಈ ಮಾಹಿತಿಯನ್ನು ಈ ಪತ್ರಿಕೆಯ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು. ೧೧ರಿಂದ ೧೧ರ ವರೆಗೆ ಹೆ. ಟ್ರೇ. ಕಾಲೇಜಿನ ಲೇಡೀ ಸುಪರಿಂಟೆಂಡೆಂಟರಾದ ಮಿಸ್ ಬ್ಲ್ಯಾಕ್ಸಟನ್ ಇವರು ಬರೆದುಕೊಟ್ಟ ಟಿಪ್ಪಣೆಗಳ ಸಹಾಯದಿಂದ ಮಿ॥ ಮಗದಾಳ ಇವರು ಪ್ರಾ. ಶಾಲೆಗಳಲ್ಲಿ ತೀರ ಕೆಳಗಿನ ಇಯತ್ತೆಗಳಲ್ಲಿ ನಿಬಂಧ ವಿಷಯವನ್ನು ಹ್ಯಾಗೆ ಆರಂಭಿಸಬಹುದು, ಕ್ರಮವಾಗಿ ಅವನ್ನು ೧, ೨, ೩, ೪ ಈ ಇಯತ್ತೆಗಳಲ್ಲಿ ಹ್ಯಾಗೆ ಸಾಗಿಸಬಹುದು ಎಂಬ ಬಗ್ಗೆ ತಿಳಿಸಿದರು. ಹೆ. ಟ್ರೇ. ಕಾಲೇಜದ ಪ್ರಾ. ಸ್ಕೂಲಿನಲ್ಲಿ ಈ ವಿಷಯದ ಬಗ್ಗೆ ಪೂರ್ಣ ಲಕ್ಷ್ಯಕೊಟ್ಟು ಇದರ ಅನುಭವವನ್ನು ತೆಗೆದುಕೊಂಡಿರುವ ಮೂಲಕ ಈ ಉಪನ್ಯಾಸವು ಬಹಳ ಮಹತ್ವದ್ದೆನಿಸಿತು. ಇದರ ಸಾರಾಂಶವನ್ನು ಮುಂದೆ ಕೊಟ್ಟಿರುವೆವು.

ಮಧ್ಯಾಹ್ನ ಮೂರು ಗಂಟೆಗೆ ಸರಿಯಾಗಿ ಮಿ॥ ವಿನಾಯಕರಾವ ಜೋಶಿ ಬಿ. ಎ. ರಿಟಾಯರ್ಡ ಎ. ಇ. ದ. ಭಾ. ಇವರು 'ಜನಸಾಮಾನ್ಯರ ಶಿಕ್ಷಣದ ಅವಶ್ಯಕತೆ' ಈ ವಿಷಯವನ್ನು ಕುರಿತು ಉಪನ್ಯಾಸ ಮಾಡಿದರು. ಶಿಕ್ಷಣ ವಿಷಯದಲ್ಲಿ ಇವರಿಗಿದ್ದ ಅಭಿಮಾನ ಆಸಕ್ತಿಗಳೂ ಜನಸಾಮಾನ್ಯರ ಶ್ರೇಯೋಭಿವೃದ್ಧಿಯ ಬಗ್ಗೆ ಇರುವ ಲವಲವಿಕೆಯೂ ವಿಷಯಜ್ಞಾನವೂ ಈ ಉಪನ್ಯಾಸದಲ್ಲಿ ಸ್ಪಷ್ಟವಾಗಿ ಕಂಡವು. ಇದರ ಸಾರಾಂಶವನ್ನು ಮುಂದ ಕೊಟ್ಟಿರುವೆವು. ಬಳಿಕ ಈ ವರುಷದ ವರ್ಥಪ್ರಾಯಿಝು ಪರೀಕ್ಷೆಯ ಮೇಲಾಟದಲ್ಲಿ ಮೊದಲನೆಯ ನಂಬರು ಪಡೆದ ಮಿ॥ ಸಂಗಯ್ಯ ವೀರಸಂಗಯ್ಯ ಕಲ್ಮಠ ಬಿ. ಎ. ಕನ್ನಡ ಶಾಲೆ ೧೧೧ ಇವರಿಗೆ ಪ್ರೆಸಿಡೆಂಟ ಸಾಹೇಬರು ಸ್ವಹಸ್ತದಿಂದ ೮೦ ರೂ. ನಗದು ಇನಾಮು ಕೊಟ್ಟರು. ಈ ಪರೀಕ್ಷೆಗೆ ದಕ್ಷಿಣಭಾಗದಲ್ಲಿ ಹೊಸಹಳಗನ್ನಡವನ್ನು ಚೆನ್ನಾಗಿ ಅಭ್ಯಾಸ ಮಾಡಿ ಬೇಕಾದವರು ಕೂಡಬಹುದು. ಈ ವರುಷ ಪದವೀಧರರಾದ ಮಿ॥ ಕಲ್ಮಠ ಇವರು ಈ ಇನಾಮವನ್ನು ಪಡೆದ ಬಗ್ಗೆ ಸಾಹೇಬರು ಅವರನ್ನು ಅಭಿನಂದಿಸಿದರು. ಕನ್ನಡ ಭಾಷೆಯ ಅಭ್ಯಾಸದ ಪ್ರೋತ್ಸಾಹಕ್ಕಾಗಿ ಇನಾಮು ನ್ನಿಟ್ಟ ಮಿಶನರೀ ದೊರೆಗಳಾದ ರೆ. ವರ್ಥ ಇವರ ಉದಾರಸ್ವಭಾವವನ್ನೂ ಕನ್ನಡದ ಬಗ್ಗೆ ಅಭಿಮಾನವನ್ನೂ ಹೊಗಳಿದರು.

ಆ ಬಳಿಕ ಪ್ರೆಸಿಡೆಂಟ ಸಾಹೇಬರ ಸಮಾರೋಪಣ ಭಾಷಣವಾಯಿತು. ಮೆ॥ ವಕೀಲ ಸಾಹೇಬರು ಆಗ ನುಡಿದುದರ ಮುಖ್ಯಾಂಶವೇನೆಂದರೆ :—

ಇದೀಗ ನನ್ನ ನೌಕರಿಯು ಕೊನೆಯ ಸಮಯವು. ಈ ಪ್ರಸಂಗಕ್ಕೆ ನಾನು ಕರ್ನಾಟಕಕ್ಕೆ ಬಂದೆನು. ಹೊಸ ಶಿಕ್ಷಣ ಪುಸ್ತಕಗಳನ್ನೂ ಕ್ರಮಗಳನ್ನೂ ಓದುವದರಲ್ಲಿಯು ಕೆಲಸ ಮಾಡುವದರಲ್ಲಿಯೂ ವೇಳೆ ದೊರೆಯದ್ದರಿಂದ ಕನ್ನಡ ಭಾಷೆಯನ್ನು ಕಲಿಯು ಕೆಲಸವು ನನ್ನಿಂದ ಆಗಲಿಲ್ಲ. ಅದರಿಂದ ಈ ಶಿಕ್ಷಣ ಯೋಜನೆಯಲ್ಲಿ ಕನ್ನಡದ ನಡೆದ ಭಾಷಣಗಳನ್ನು ತಿಳಿದುಕೊಳ್ಳಲಿಕ್ಕೆ ನನಗೆ ಆಗಲಿಲ್ಲ. ಅದಕ್ಕಾಗಿ ನನಗೆ ಅ ಸಮಾಧಾನವೆನಿಸುತ್ತದೆ. ಆದರೆ ತಾವೆಲ್ಲರೂ ಬೇರೆ ಬೇರೆ ಕಡೆಯಿಂದ ಬಂದು ಇ ನಡೆದ ಪಾಠಗಳನ್ನು ನೋಡಿಕೊಂಡು ನಿಮಗೆ ತೋರಿದ ಸಂಶಯಗಳನ್ನು ಕೇಳಿಕೊಂಡ ಪ್ರಾತಃಕಾಲದ ೭ ಘಂಟೆಯಿಂದ ನಡುವೆ ತುಸು ವೇಳೆ ಬಿಟ್ಟು ಸಂಜೆಗೆ ಬಿಸಿಲಿನ ತಾ ಪವನ್ನು ಲಕ್ಷಿಸದೆ ಶಾಂತರೀತಿಯಿಂದ ಒಂದೇ ಸವನೆ ಕುಳಿತು ಹೊಸಜ್ಞಾನ ಸಂಪಾದಿ ದ್ದನ್ನು ನೆನಿಸಿದರೆ ನನಗೆ ಬಹಳ ಸಮಾಧಾನವಾಗುತ್ತದೆ. ಈಗ ನೀವು ಗಳಿಸಿದ ಹೊ ಜ್ಞಾನವನ್ನು ನಿಮ್ಮ ಪ್ರತಿನಿತ್ಯದ ಕೆಲಸದಲ್ಲಿ ಉಪಯೋಗಿಸಿಕೊಳ್ಳುವಿರೆಂದು ನಾನ ತುಂಬಾ ನಂಬಿದ್ದೇನೆ. ಈ ಮೊದಲು ಶ್ರೀ ಮಾನ್ ವಿನಾಯಕರಾವ ಜೋಶಿ ರಿಟ ಯರ್ಡ ಎ. ಇ. ರವರು ಹೇಳಿದಂತೆ ಶಿಕ್ಷಣದ ಉದ್ದೇಶಗಳು ಎರಡು ವಿಧವಾಗಿರುತ್ತವ (೧) ಮನುಷ್ಯನು ದೊಡ್ಡವನಾಗುತ್ತ ನಡೆದಂತೆ ಶಿಕ್ಷಣ ಪಡೆದು ತನ್ನ ಶಕ್ತಿಗಳನ ಪೂರ್ಣವಾಗಿ ವಿಕಾಸ ಪಡಿಸಿಕೊಂಡು ವ್ಯವಹಾರದಲ್ಲಿ ತನ್ನ ಹಿತವನ್ನು ಸಾಧಿಸಿಕೊಳ ವದು. (೨) ಮೇಲೆ ಹೇಳಿದಂತೆ ತನ್ನ ಶಕ್ತಿಯನ್ನು ಬರಿ ಸ್ವಾರ್ಥಕ್ಕಾಗಿ ಉಪಯೋಗಿ ಕೊಳ್ಳದೆ ಸಮಾಜ ಸೇವೆಯ ಕೆಲಸದಲ್ಲಿ ಸವಿಸುವದು. ಇವೆರಡೂ ಉದ್ದೇಶಗಳ ಸಫಲವಾಗುವಂತೆ ನಿಮ್ಮಲ್ಲಿ ಬರುವ ಚಿಕ್ಕಮಕ್ಕಳ ಶಿಕ್ಷಣವನ್ನು ಸಾಗಿಸಿರಿ ಹಾಗು ಎ ಡನೆಯ ಉದಾತ್ತ ಉದ್ದೇಶವನ್ನು ಕೊನೆಗಾಣಿಸದ ಶಿಕ್ಷಿತನ ಶಿಕ್ಷಣವು ಸರಿಯಾದ ಶಿಕ್ಷ ಣವೆನಿಸಲಾರದೆಂಬದನ್ನು ಮರೆಯ ಬೇಡಿರಿ.

ಹೋದ ವರ್ಷದ ಶಿಕ್ಷಣ ಯೋಜನೆಯ ಕಾರ್ಯಕ್ರಮಕ್ಕಿಂತಲೂ ಈ ವರ್ಷ ಕಾರ್ಯಕ್ರಮವು ವಿಶಿಷ್ಟತರದ್ದಾಗಿದೆ. ನಮ್ಮ ಕರ್ನಾಟಕದ ಬಹುತರ ಲೋ. ಬೋ ಸಂಸ್ಥೆಗಳ ಅ್ಯ. ಆಫೀಸರರು ಸುಪರ್ವಾಯಿಝರರು ಹಾಗು ಇತರ ತಜ್ಞರು ಇವ ಆಲೋಚನೆಯ ಮೇರೆಗೆ ಈಗ ನಡೆದ ಎಲ್ಲ ವಿಷಯಗಳ ಕಾರ್ಯಕ್ರಮವು ಗೊತ್ತು ಮಾಡಲ್ಪಟ್ಟದೆ. ಅವರೆಲ್ಲರೂ ಬಹುತರವಾಗಿ ಇಲ್ಲಿ ನಡೆದ ಪಾಠಗಳಲ್ಲಿ ಭಾಗತೆಗೆದು ಕೊಂಡಿದ್ದಾರೆ.

ಇಲ್ಲಿ ತೋರಿಸಿದ ಶಿಕ್ಷಣದ ಪದ್ಧತಿಯಿಂದಲೇ ಪ್ರತಿಯೊಬ್ಬನು ಕಲಿಸಬೇಕೆಂದ ನನ್ನ ಅಭಿಪ್ರಾಯವಿಲ್ಲ. ನೀವಿರುವ ಊರ ಪರಿಸ್ಥಿತಿ, ವಿದ್ಯಾರ್ಥಿಗಳ ಹಾಗು ಪಾಲಕರ ಗುಣಸ್ವಭಾವಗಳ ಸ್ಥಿತಿಗತಿ, ಕಾಲಮಾನ ಇವುಗಳಿಗನುಸರಿಸಿ ಅವುಗಳಲ್ಲಿ ಬದಲು ಮಾಡಿ ಕೊಂಡು ಬೇಕಾದ ರೀತಿಯಿಂದ ಕಲಿಸಬಹುದು. ಆದುದರಿಂದ ಹೀಗೆಯೇ ಕಲಿಸಬೇ

ಬೆಂದು ಆಗ್ರಹ ತೊಡುವದು ಸರಿಯಲ್ಲವೆಂದು ನಾನು ಮತ್ತೊಮ್ಮೆ ಗಟ್ಟಿಯಾಗಿ ಹೇಳು ವೆನು; ಹಾಗೆಯೇ ನೀವಾದರೂ ಹಿಂದಿನ ಶಿಕ್ಷಣದ ಪಾಠಗಳು, ಹಿಂದಿನಕ್ರಮಗಳು ಇವು ಗಳ ವಿಷಯವಾಗಿ ಇಲ್ಲದ ಅಭಿಮಾನ ತಾಳಬಾರದೆಂದು ಕೋರುವೆನು. ಶಿಕ್ಷಕವರ್ಗವು ಇತರ ಜನರಂತೆ ಪುರಾಣ ಮಾರ್ಗಗಳನ್ನು ಸುಲಭವಾಗಿ ಬಿಡಲಿಚ್ಛಿಸುವದಿಲ್ಲ. ಈಗ ಏನು ನಡೆದಿದೆ ? ಮುಂದೆ ಏನು ಮಾಡತಕ್ಕದ್ದು ? ಅದಕ್ಕಾಗಿ ಎದರುಗಳು ಏನೇನು ಇರುವವು ? ಇತ್ಯಾದಿ ವಿಷಯಗಳನ್ನು ವಿಚಾರಿಸಿ ಶಿಕ್ಷಣವನ್ನು ಸಾಗಿಸಬೇಕು.

ಶ್ರೀ ವಿನಾಯಕರಾಯರು ಈಗ ಹೇಳಿದಂತೆ ' ಜನಸಾಮಾನ್ಯರ ಶಿಕ್ಷಣವು ಈಗ ಅತ್ಯಾವಶ್ಯಕವು ' ಎನ್ನುವದಕ್ಕಿಂತ ಸಾರ್ವತ್ರಿಕ ಶಿಕ್ಷಣವು- ಎಲ್ಲ ಜಾತಿಯವರ, ಎಲ್ಲ ವರ್ಗದವರ, ಎಲ್ಲ ದರ್ಜೆಯವರ ಶಿಕ್ಷಣವು— ಅವಶ್ಯವೆಂದು ಹೇಳುವದು ಸಮಂಜಸ ವೆಂದು ನನಗೆ ತೋರುತ್ತದೆ. ನಾನು ಇಂಗ್ಲಂಡ, ಜಪಾನ, ಅಮೇರಿಕಾ ಮೊದಲಾದ ದೇಶಗಳನ್ನೂ ಅಲ್ಲಿ ಇರುವ ಶಿಕ್ಷಣ ಸಂಸ್ಥೆಗಳನ್ನೂ ಶಿಕ್ಷಣ ಕ್ರಮಗಳನ್ನೂ ನೋಡಿ ದ್ದೇನೆ. ಅಲ್ಲಿಯ ಪರಿಸ್ಥಿತಿ, ಅದಕ್ಕನುರೂಪವಾದ ಶಿಕ್ಷಣಪದ್ಧತಿ, ಅದರಿಂದಾಗುತ್ತಿ ರುವ ಶಿಕ್ಷಣದ ಲಾಭ ಇವುಗಳನ್ನು ಕಣ್ಣಾರೆ ಕಂಡಿದ್ದೇನೆ. ಇಂಗ್ಲಂಡ ಅಮೇರಿಕೆಗಳಲ್ಲಿ ಅಕ್ಷರಜ್ಞರ ಪ್ರಮಾಣವು ದೊಡ್ಡದಿರುವದು ಜಪಾನ ದೇಶದಲ್ಲಿಯಂತೂ ೧೦೦ಕ್ಕೆ ೯೯ರ ವರೆಗೆ ಅಕ್ಷರಜ್ಞರ ಸಂಖ್ಯೆಯು ಅದೆ. ನಮ್ಮಲ್ಲಿ ಈ ಸಂಖ್ಯೆಯು ತೀರ ಸ್ವಲ್ಪ ವಿರುವದು. ಈ ದೋಷಕ್ಕೆ ನಾವೇ ಕಾರಣರು. ಶಿಕ್ಷಣದ ಮಹತ್ವವನ್ನೂ ಬೆಲೆ ಯನ್ನೂ ತಿಳಿದು ಸುಧಾರಣೆಗಾಗಿ ಪ್ರತಿಯೊಬ್ಬ ಶಿಕ್ಷಕನು ಹೆಣಗಾಡಬೇಕು. ಹಾಗೆಯೇ ಜನತೆಯೂ ಅವನಿಗೆ ಸಹಾಯ ಮಾಡಬೇಕು. ಕೇವಲ ಸರಕಾರದ ಮೇಲೆ ಇಲ್ಲವೆ ಬೋರ್ಡುಗಳಮೇಲೆ ಎಲ್ಲ ಭಾರವನ್ನು ಹೊರಿಸಬಾರದು. ಶಿಕ್ಷಣದ ಲಾಭವು ಜನ ಸಾಮಾನ್ಯರ ಕಣ್ಣಿನಲ್ಲಿ ತುಂಬಿರಬೇಕು. ಅಂದಿಗೆ ಶಿಕ್ಷಕನ ಎದೆಯೊಡೆಯುವ ನಿತ್ಯದ ತೊಂದರೆಗಳು — ಅನಿಯಂತ್ರಿತತನ, ಅನಾಸಕ್ತಿ — ಅಸ್ತವಾಗುವವು.

ಜಪಾನದ ಶಿಕ್ಷಣ ಪ್ರಪಂಚದಲ್ಲಿರುವ ಗುಣವೊಂದನ್ನು ಕುರಿತು ವಿಚಾರಿಸಿರಿ. ಜಪಾನ ದೇಶದಲ್ಲಿ ಒಬ್ಬನು ಜ್ಞಾನ ಸಂಪಾದಿಸಿದರೆ ಅವನು ಮತ್ತೊಬ್ಬನಿಗೆ ಆ ಜ್ಞಾನ ದಾತೃವಾಗುವದು ತನ್ನ ಕರ್ತವ್ಯವೆಂದು ಬಗೆಯುತ್ತಾನೆ. ಈ ಉದಾತ್ತ ವಿಚಾರವು ನಮ್ಮಲ್ಲಿಯ ಶಿಕ್ಷಿತರಲ್ಲಿ ನೆಲೆಗೊಳ್ಳಲಿಕ್ಕೆಬೇಕು. ಇದೇ ಶಿಕ್ಷಣವೃದ್ಧಿಯ ಸುಲಭ ಮಾರ್ಗವಾಗಿರುವದು. ಇದಕ್ಕನುಸರಿಸಿ ಬೇರೆ ಬೇರೆ ವರ್ಗದ ಉದ್ಯೋಗದ ಜನರಿಗೆ ಅವರವರ ಅನುಕೂಲತೆಯ ಮೇರೆಗೆ ಶಿಕ್ಷಣ ಕೊಡುವದಕ್ಕಾಗಿ ಕಂಟಿನ್ಯುಯೇಶನ್ ಸ್ಕೂಲುಗಳೂ ರಾತ್ರಿ ಶಾಲೆಗಳೂ ಹೇರಳವಾಗಿ ಬೇಕು. ನಮ್ಮ ಇಲಾಖೆಯಲ್ಲಿ ೩೬ ಸಾವಿರ ಜನ ಶಿಕ್ಷಕರಿರುವರು. ಅವರೆಲ್ಲರೂ ಮೇಲೆ ಹೇಳಿದ ಮಾರ್ಗದಲ್ಲಿ ಕೆಲಸ ಮಾಡಿದರೆ ಸಾಮಾನ್ಯ ಜನರ ಶಿಕ್ಷಣವು ಭರದಿಂದ ಸಾಗುವದು. ಆದಿತ್ಯವಾರ,

ಸೂಟಿಯ ದಿನ, ಹಬ್ಬದ ದಿನ ಇವುಗಳನ್ನಷ್ಟೇ ಉಪಯೋಗಿಸಿಕೊಂಡರೂ ಎಷ್ಟೋ ಕೆಲಸವಾಗುವದು. ನಮ್ಮ ಈ ಕೆಲಸದಲ್ಲಿ ನಡುವೆ ಯಾರೂ ಬರಲಾರರು. ಬಲವಾದ ಪ್ರಯತ್ನಗಳನ್ನು ಮಾಡಿ ನಮ್ಮ ಪಂಕ್ತಿಯಲ್ಲಿದ್ದ ಚೀನವು ಜನಶಿಕ್ಷಣದಲ್ಲಿ ಮುಂದಡಿಯಿಡುತ್ತಿರುವದು.

ನಮ್ಮ ಗುಜರಾಥ ಪ್ರಾಂತದ ವಾಡಿ ಎಂಬ ತಾಲೂಕಿನ ದೃಷ್ಟಾಂತವು ಈ ವಿಷಯದಲ್ಲಿ ತಕ್ಕದ್ದಾಗಿದೆ. ಅಲ್ಲಿಯ ಶಿಕ್ಷಕರು ಕೇವಲ ಜನತೆಯ ಪ್ರೋತ್ಸಾಹದಿಂದ ರಾತ್ರಿ ಶಾಲೆಗಳನ್ನು ಕೆಲದಿನ ನಡೆಯಿಸಲು ಅಲ್ಲಿಯ ಶಿಕ್ಷಣದ ಸರಾಸರಿಯು ೧೦೦ಕ್ಕೆ ೬ರಿಂದ ೯ರವರೆಗೆ ಏರಿತು. ಈ ಶಿಕ್ಷಕರಿಗೆ ೫ ರೂ. ಅಲಾವನ್ಸ ದೊರೆಯುತ್ತಿತ್ತು ಬೋರ್ಡಿನಿಂದಲ್ಲ; ಜನತೆಯಿಂದ. ಜನತೆಯ ಸಹಾನುಭೂತಿಯೂ ಸಹಾಯವೂ ಈ ಕೆಲಸಕ್ಕೆ ಮಹತ್ವವಾದವು. ಇದೇ ಕ್ರಮವನ್ನು ಹೆಚ್ಚಾಗಿ ಕೈಕೊಂಡರೆ ಮುಂದೆ ಹೋದ ದೇಶಗಳಂತೆ ನಮ್ಮಲ್ಲಿಯೂ ಸಾಕ್ಷರತೆಯ ಪ್ರಮಾಣವು ಬೆಳೆಯಲಾರದೇ?

ಜಪಾನ ದೇಶದಲ್ಲಿ ಅಧಿಕಾರಸ್ಥರು ತಮ್ಮ ಶಿಪಾಯರ ವೇಳೆಯನ್ನು ವ್ಯರ್ಥವಾಗಿ ಹೋಗಗೊಡದೆ ಅವರಿಗೆ ಅಕ್ಷರಾಭ್ಯಾಸಮಾಡಿಸಿ ಕೈಲಾದಷ್ಟು ಸಹಾಯ ಮಾಡಿ ಶಿಕ್ಷಣ ಪಡೆಯಲು ನೆರವಾಗುವರು. ಮತ್ತು ಈ ಮೂಲಕ ಇಂಥ ಶಿಪಾಯಿಗಳು ಕಾರಕೂನರಾದದ್ದನ್ನಾಗಲಿ ಅಥವಾ ಅದೇ ಅಧಿಕಾರಸ್ಥರ ಸ್ಥಳದಲ್ಲಿ ವಿರಾಜಮಾನರಾದದ್ದನ್ನಾಗಲಿ ಕಾಣಬಹುದು. ಜನಸಾಮಾನ್ಯರಲ್ಲಿ ಶಿಕ್ಷಣವು ತೀವ್ರವಾಗಿ ಹರಡಬೇಕಾದರೆ ಜನರು ಸರಕಾರದಕಡೆಗೇ ದೃಷ್ಟಿಯಿಟ್ಟು ಸುಮ್ಮನೆ ಕೂಡಲಿಲ್ಲ. ತಾವಾಗಿ ಪ್ರವೃತ್ತರಾದರು. ಸದ್ಯದ ಹೀನ ಸ್ಥಿತಿಯ ದೋಷವನ್ನು ಇನ್ನೊಬ್ಬರ ಮೇಲೆ ಹೊರಿಸಿ ತಟಸ್ಥರಾಗಿ ಕೂಡುವದಕ್ಕಿಂತ ಶಿಕ್ಷಣಾಭಿಮಾನಿಯಾದ ಪ್ರತಿಯೊಬ್ಬ ವ್ಯಕ್ತಿಯು ಕಾರ್ಯೋನ್ಮುಖನಾಗಿ ಅದನ್ನು ಬೆಳೆಯಿಸಲು ತನ್ನ ಕೈಯಿಂದಾದಷ್ಟು ಹೆಣಗಾಡುವದು ಯುಕ್ತವು.

ಈ ಯೋಜನೆಯ ಚಾಲಕರಾದ ಮಿಸ್ ಲ್ಯಾಕ್ಸಟನ್ ಹಾಗು ಮಿ|| ಮಗದಾಳ ಇವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುವೆನು. ಶಿಕ್ಷಣ ಸಂಸ್ಥೆಗಳ ಷಣ್ಮಾಸದ ಕೊನೆಯಲ್ಲಿ ಕಾರ್ಯಭಾರದಿಂದ ಬಳಲುತ್ತಿದ್ದರೂ ಅವರೀರ್ವರು ಒಳ್ಳೆಯ ಹುರುಪಿನಿಂದ ದುಡಿದು ಈ ಸಪ್ತಾಹದ ಯೋಜನೆಯ ವ್ಯವಸ್ಥೆಯನ್ನು ಪೂರ್ಣ ಯಶಸ್ವಿಯಾಗುವಂತೆ ಮಾಡಿರುವರು. ಶ್ರೀ ನಾಯಕ, ಶ್ರೀ ಜಗತಾಪ ಶ್ರೀ ಕಸಬೇಕರ ಇವರೇ ಮೊದಲಾದವರು ಈ ಶಿಕ್ಷಣ ಯೋಜನಾಕಾರ್ಯಕ್ಕೆ ಯೋಗ್ಯ ಸಲಹೆಗಳನ್ನು ಕೊಟ್ಟದ್ದಲ್ಲದೆ ಪಾಠಗಳಲ್ಲಿ ಭಾಗ ತೆಗೆದುಕೊಂಡರು. ಆದದರಿಂದ ಈ ಕಾರ್ಯದ ಶ್ರೇಯಸ್ಸು ಅವರಿಗೂ ಸಲ್ಲುವದು. ಈ ಶಿಕ್ಷಣಯೋಜನೆಯಲ್ಲಿ ಶ್ರೀ ಜೇರೆ, ಶ್ರೀ ಕಾಮತ, ಶ್ರೀ ಜೋಸಿ ಇಂಥ ತಜ್ಞರನ್ನು ಕರೆಯಿಸಿಕೊಂಡು ಅವರಿಂದ ಶಿಕ್ಷಕವೃಂದಕ್ಕೆ ವಿಷಯಜ್ಞಾನವನ್ನಾಗಲಿ

ನುಭವ ಜ್ಞಾನವನ್ನಾಗಲಿ ಮಾಡಿಕೊಡುವ ಮಹತ್ವದ ಕಾರ್ಯವು ಅಡಕವಾಗಿದೆ. ದು ಸ್ತುತ್ಯವು. ಇವರೆಲ್ಲರ ಉಪಕಾರವನ್ನೂ ಬೇಸಿಗೆಯ ಸೂಟಿಯು ಆರಂಭವಾಗು ಲೇ ನಿಮ್ಮ ನಿಮ್ಮ ಊರುಗಳಿಂದ ಇಲ್ಲಿಗೆ ಆಸ್ಥೆಯಿಂದ ಹೊರಟು ಬಂದು ಇಲ್ಲಿ ನಡೆ ದ್ದರ ಲಾಭವನ್ನು ಮಾಡಿಕೊಳ್ಳಲಿಕ್ಕೆ ಪ್ರಯತ್ನಪಟ್ಟ ನಿಮ್ಮನ್ನು ನಾನು ಅಭಿನಂದಿ ಸುವೆನು.

ಆ ಬಳಿಕ ಪ್ರೆಸಿಡೆಂಟ ಸಾಹೇಬರು ಕನ್ನಡ ಭಾಷೆಯನ್ನು ಅರಿಯದಿದ್ದರೂ ಈ ರುದಿನಗಳವರೆಗೆ ಮುಂಜಾನೆಯಿಂದ ಸಂಜೆಯವರೆಗೆ ದಿನಾಲು ಬಂದು ಶಿಕ್ಷಕವೃಂದಕ್ಕೆ ಹುರುಪುಕೊಟ್ಟು ಶಿಕ್ಷಣ ಯೋಜನೆಯ ಕಾರ್ಯಕ್ರಮದಲ್ಲಿಯ ಪ್ರತಿಯೊಂದು ಂಶವು ಸಮಾಧಾನಕರವಾಗಿ ನಡೆಯುವಂತೆ ನೋಡಿಕೊಂಡದ್ದಕ್ಕಾಗಿಯೂ ಶಿಕ್ಷಕ ವೃಂದದಲ್ಲಿ ತೋರಿಸಿದ ಅವರ ಕಾಳ್ಮೆ ಹಾಗು ಆರಂಭದ ಹಾಗು ಸಮಾರೋಪಣದ ತಮ್ಮ ಭಾಷಣದಲ್ಲಿ ಬೋಧಿಸಿದ ಜ್ಞಾನ, ತೋರಿಸಿದ ಮಾರ್ಗ, ಹುಟ್ಟಿಸಿದ ಹುರುಪು ಮೊದ ಲಾದವುಗಳಿಗಾಗಿಯೂ ಮಿ॥ ಮಗದಾಳರೂ ಮಿ॥ ನಾಯಕ ಮಿ॥ ಶೆಟ್ಟಿ ಮೊದಲಾದ ವರೂ ಅವರ ಬಗ್ಗೆ ಧನ್ಯವಾದಗಳನ್ನು ಹೇಳಿದರು. ಆ ಸಮಯಕ್ಕೆ ತಕ್ಕಂತೆ ಕಲಘ ಟಗಿಯ ಅ॥ ಮಾ॥ ರಾದ ಮಿ॥ ಮಿಠಾಯಿಗಾರ ಇವರು ಅಭಿನಂದನಪರವಾದ ಪದ್ಯ ವೊಂದನ್ನು ರಚಿಸಿ ಅಂದು ತೋರಿಸಿದರು. ಇದನ್ನು ಮುಂದೆ ಕೊಟ್ಟಿರುವೆವು.

ಕೊನೆಗೆ ಎಲ್ಲರೂ ಕೂಡಿ ಚಹ, ಉಪಹಾರ ಮೊದಲಾದವುಗಳನ್ನು ಸೇವಿಸಿದ್ದಾ ಯಿತು. ಒಟ್ಟಿನಮೇಲೆ ಈ ಶಿಕ್ಷಣ ಯೋಜನೆಯ ಆರು ದಿನಗಳೂ ನಾವು ಸಂಕಲ್ಪಿಸಿ ಕೊಂಡಂತೆ ನಮ್ಮ ನಮ್ಮ ಉದ್ಯೋಗದ ವಿಷಯಗಳ ಅಭ್ಯಾಸದಲ್ಲಿ ಶೀವ್ರವಾಗಿ ಹೋದವು. ಹೊರಗಿನಿಂದ ಬಂದ ಶಿಕ್ಷಕರೆಲ್ಲ ನಮ್ಮಲ್ಲಿ ಅಭಿಮಾನವಿಟ್ಟು, ಅವರಿಗೊದಗಿದ ಸಣ್ಣ ದೊಡ್ಡ ತೊಂದರೆಗಳನ್ನು ಎಣಿಸದೆ ಕಾರ್ಯೈಕ ಪರವಶರಾಗಿ ಸಮಾಧಾನದಿಂದ ಇದ್ದು ನಮ್ಮನ್ನು ಋಣಿಯಾಗಿ ಮಾಡಿದರು. ಹೀಗೆ ಸರ್ವತೋಮುಖವಾದ ಸಹಕಾರಿತೆ ಯಿಂದಲೂ ಸಹಾನುಭೂತಿಯಿಂದಲೂ ಸಂಕಲ್ಪಿತ ಕಾರ್ಯವು ಸಾಂಗವಾದಬಗ್ಗೆ ನಾವು ಪರಮೇಶ್ವರನನ್ನು ವಂದಿಸುತ್ತೇವೆ.

ವಿತೆ, ಉಪನ್ಯಾಸ, ವ್ಯಾಖ್ಯಾನಗಳು: —

ಸೂಟಿಯ ದಿನ, ಹಬ್ಬದ ದಿನ ಇವುಗಳನ್ನಷ್ಟೇ ಉಪಯೋಗಿಸಿಕೊಂಡರೂ ಎಷ್ಟೋ ಕೆಲಸವಾಗುವದು. ನಮ್ಮ ಈ ಕೆಲಸದಲ್ಲಿ ನಡುವೆ ಯಾರೂ ಬರಲಾರರು. ಬಲವಾದ ಪ್ರಯತ್ನಗಳನ್ನು ಮಾಡಿ ನಮ್ಮ ಪಂಕ್ತಿಯಲ್ಲಿದ್ದ ಚೀನವು ಜನಶಿಕ್ಷಣದಲ್ಲಿ ಮುಂದಡಿಯಿಡುತ್ತಿರುವದು.

ನಮ್ಮ ಗುಜರಾಥ ಪ್ರಾಂತದ ವಾಡಿ ಎಂಬ ತಾಲೂಕಿನ ದೃಷ್ಟಾಂತವು ಈ ವಿಷಯದಲ್ಲಿ ತಕ್ಕದ್ದಾಗಿದೆ. ಅಲ್ಲಿಯ ಶಿಕ್ಷಕರು ಕೇವಲ ಜನತೆಯ ಪ್ರೋತ್ಸಾಹದಿಂದ ರಾತ್ರಿ ಶಾಲೆಗಳನ್ನು ಕೆಲದಿನ ನಡೆಯಿಸಲು ಅಲ್ಲಿಯ ಶಿಕ್ಷಣದ ಸರಾಸರಿಯು ೧೦೦ಕ್ಕೆ ೭ರಿಂದ ೯ರವರೆಗೆ ಏರಿತು. ಈ ಶಿಕ್ಷಕರಿಗೆ ೫ ರೂ. ಅಲಾವನ್ಸ ದೊರೆಯುತ್ತಿತ್ತು ಬೋರ್ಡಿನಿಂದಲ್ಲ ; ಜನತೆಯಿಂದ. ಜನತೆಯ ಸಹಾನುಭೂತಿಯೂ ಸಹಾಯವೂ ಈ ಕೆಲಸಕ್ಕೆ ಮಹತ್ವವಾದವು. ಇದೇ ಕ್ರಮವನ್ನು ಹೆಚ್ಚಾಗಿ ಕೈಕೊಂಡರೆ ಮುಂದೆ ಹೋದ ದೇಶಗಳಂತೆ ನಮ್ಮಲ್ಲಿಯೂ ಸಾಕ್ಷರತೆಯ ಪ್ರಮಾಣವು ಬೆಳೆಯಲಾರದೇ ?

ಜಪಾನ ದೇಶದಲ್ಲಿ ಅಧಿಕಾರಸ್ಥರು ತಮ್ಮ ಶಿಪಾಯರ ವೇಳೆಯನ್ನು ವ್ಯರ್ಥವಾಗಿ ಹೋಗಗೊಡದೆ ಅವರಿಗೆ ಅಕ್ಷರಾಭ್ಯಾಸಮಾಡಿಸಿ ಕೈಲಾದಷ್ಟು ಸಹಾಯ ಮಾಡಿ ಶಿಕ್ಷಣ ಪಡೆಯಲು ನೆರವಾಗುವರು. ಮತ್ತು ಈ ಮೂಲಕ ಇಂಥ ಶಿಪಾಯಿಗಳು ಕಾರಕೂನರಾದದ್ದನ್ನಾಗಲಿ ಅಥವಾ ಅದೇ ಅಧಿಕಾರಸ್ಥರ ಸ್ಥಳದಲ್ಲಿ ವಿರಾಜಮಾನರಾದದ್ದನ್ನಾಗಲಿ ಕಾಣಬಹುದು. ಜನಸಾಮಾನ್ಯರಲ್ಲಿ ಶಿಕ್ಷಣವು ತೀವ್ರವಾಗಿ ಹರಡಬೇಕಾದರೆ ಜನರು ಸರಕಾರದಕಡೆಗೇ ದೃಷ್ಟಿಯಿಟ್ಟು ಸುಮ್ಮನೆ ಕೂಡಲಿಲ್ಲ. ತಾವಾಗಿ ಪ್ರವೃತ್ತರಾದರು. ಸದ್ಯದ ಹೀನ ಸ್ಥಿತಿಯ ದೋಷವನ್ನು ಇನ್ನೊಬ್ಬರ ಮೇಲೆ ಹೊರಿಸಿ ತಟಸ್ಥರಾಗಿ ಕೂಡುವದಕ್ಕಿಂತ ಶಿಕ್ಷಣಾಭಿಮಾನಿಯಾದ ಪ್ರತಿಯೊಬ್ಬ ವ್ಯಕ್ತಿಯು ಕಾರ್ಯೋನ್ಮುಖನಾಗಿ ಅದನ್ನು ಬೆಳೆಯಿಸಲು ತನ್ನ ಕೈಯಿಂದಾದಷ್ಟು ಹೆಣಗಾಡುವದು ಯುಕ್ತವು.

ಈ ಯೋಜನೆಯ ಚಾಲಕರಾದ ಮಿಸ್ ಲ್ಯಾಕ್ಸಟನ್ ಹಾಗು ಮಿ॥ ಮಗದಾಳ ಇವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುವೆನು. ಶಿಕ್ಷಣ ಸಂಸ್ಥೆಗಳ ಷಣ್ಮಾಸದ ಕೊನೆಯಲ್ಲಿ ಕಾರ್ಯಭಾರದಿಂದ ಬಳಲುತ್ತಿದ್ದರೂ ಅವರೀರ್ವರು ಒಳ್ಳೆಯ ಹುರುಪಿನಿಂದ ದುಡಿದು ಈ ಸಪ್ತಾಹದ ಯೋಜನೆಯ ವ್ಯವಸ್ಥೆಯನ್ನು ಪೂರ್ಣ ಯಶಸ್ವಿಯಾಗುವಂತೆ ಮಾಡಿರುವರು. ಶ್ರೀ ನಾಯಕ, ಶ್ರೀ ಜಗತಾಪ ಶ್ರೀ ಕಸಬೇಕರ ಇವರೇ ಮೊದಲಾದವರು ಈ ಶಿಕ್ಷಣ ಯೋಜನಾಕಾರ್ಯಕ್ಕೆ ಯೋಗ್ಯ ಸಲಹೆಗಳನ್ನು ಕೊಟ್ಟದ್ದಲ್ಲದೆ ಪಾಠಗಳಲ್ಲಿ ಭಾಗ ತೆಗೆದುಕೊಂಡರು. ಆದದರಿಂದ ಈ ಕಾರ್ಯದ ಶ್ರೇಯಸ್ಸು ಅವರಿಗೂ ಸಲ್ಲುವದು. ಈ ಶಿಕ್ಷಣಯೋಜನೆಯಲ್ಲಿ ಶ್ರೀ ಜೇರೆ, ಶ್ರೀ ಕಾಮತ, ಶ್ರೀ ಜೋಶಿ ಇಂಥ ತಜ್ಞರನ್ನು ಕರೆಯಿಸಿಕೊಂಡು ಅವರಿಂದ ಶಿಕ್ಷಕವೃಂದಕ್ಕೆ ವಿಷಯಜ್ಞಾನವನ್ನಾಗಲಿ

ನುಭವ ಜ್ಞಾನವನ್ನಾಗಲಿ ಮಾಡಿಕೊಡುವ ಮಹತ್ವದ ಕಾರ್ಯವು ಅಡಕವಾಗಿದೆ. ದು ಸ್ತುತ್ಯವು. ಇವರೆಲ್ಲರ ಉಪಕಾರವನ್ನೂ ಬೇಸಿಗೆಯ ಸೂಟಿಯು ಆರಂಭವಾಗು ಲೇ ನಿಮ್ಮ ನಿಮ್ಮ ಊರುಗಳಿಂದ ಇಲ್ಲಿಗೆ ಆಸ್ಥೆಯಿಂದ ಹೊರಟು ಬಂದು ಇಲ್ಲಿ ನಡೆ ದ್ದರ ಲಾಭವನ್ನು ಮಾಡಿಕೊಳ್ಳಲಿಕ್ಕೆ ಪ್ರಯತ್ನಪಟ್ಟ ನಿಮ್ಮನ್ನು ನಾನು ಅಭಿನಂದಿ ಸುವೆನು.

ಆ ಬಳಿಕ ಪ್ರೆಸಿಡೆಂಟ ಸಾಹೇಬರು ಕನ್ನಡ ಭಾಷೆಯನ್ನು ಅರಿಯದಿದ್ದರೂ ಈ ರುದಿನಗಳವರೆಗೆ ಮುಂಜಾನೆಯಿಂದ ಸಂಜೆಯವರೆಗೆ ದಿನಾಲು ಬಂದು ಶಿಕ್ಷಕವೃಂದಕ್ಕೆ ಹುರುಪುಕೊಟ್ಟು ಶಿಕ್ಷಣ ಯೋಜನೆಯ ಕಾರ್ಯಕ್ರಮದಲ್ಲಿಯ ಪ್ರತಿಯೊಂದು ಂಶವು ಸಮಾಧಾನಕರವಾಗಿ ನಡೆಯುವಂತೆ ನೋಡಿಕೊಂಡದ್ದಕ್ಕಾಗಿಯೂ ಶಿಕ್ಷಕ ವೃಂದದಲ್ಲಿ ತೋರಿಸಿದ ಅವರ ತಾಳ್ಮೆ ಹಾಗು ಆರಂಭದ ಹಾಗು ಸಮಾರೋಪಣದ ತಮ್ಮ ಭಾಷಣದಲ್ಲಿ ಬೋಧಿಸಿದ ಜ್ಞಾನ, ತೋರಿಸಿದ ಮಾರ್ಗ, ಹುಟ್ಟಿಸಿದ ಹುರುಪು ಮೊದ ಲಾದವುಗಳಿಗಾಗಿಯೂ ಮಿ॥ ಮುಗದಾಳರೂ ಮಿ॥ ನಾಯಕ ಮಿ॥ ಶೆಟ್ಟಿ ಮೊದಲಾದ ವರೂ ಅವರ ಬಗ್ಗೆ ಧನ್ಯವಾದಗಳನ್ನು ಹೇಳಿದರು. ಆ ಸಮಯಕ್ಕೆ ತಕ್ಕಂತೆ ಕಲಘ ಟಗಿಯ ಅ॥ ಮಾ॥ ರಾದ ಮಿ॥ ಮಿಠಾಯಿಗಾರ ಇವರು ಅಭಿನಂದನಪರವಾದ ಪದ್ಯ ವೊಂದನ್ನು ರಚಿಸಿ ಅಂದು ತೋರಿಸಿದರು. ಇದನ್ನು ಮುಂದೆ ಕೊಟ್ಟಿರುವೆವು.

ಕೊನೆಗೆ ಎಲ್ಲರೂ ಕೂಡಿ ಚಹ, ಉಪಹಾರ ಮೊದಲಾದವುಗಳನ್ನು ಸೇವಿಸಿದ್ದಾ ಯಿತು. ಒಟ್ಟಿನಮೇಲೆ ಈ ಶಿಕ್ಷಣ ಯೋಜನೆಯ ಆರು ದಿನಗಳೂ ನಾವು ಸಂಕಲ್ಪಿಸಿ ಕೊಂಡಂತೆ ನಮ್ಮ ನಮ್ಮ ಉದ್ಯೋಗದ ವಿಷಯಗಳ ಅಭ್ಯಾಸದಲ್ಲಿ ಶೀಘ್ರವಾಗಿ ಹೋದವು. ಹೊರಗಿನಿಂದ ಬಂದ ಶಿಕ್ಷಕರೆಲ್ಲ ನಮ್ಮಲ್ಲಿ ಅಭಿಮಾನವಿಟ್ಟು, ಅವರಿಗೊದಗಿದ ಸಣ್ಣ ದೊಡ್ಡ ತೊಂದರೆಗಳನ್ನು ಎಣಿಸದೆ ಕಾರ್ಯೈಕ ಪರವಶರಾಗಿ ಸಮಾಧಾನದಿಂದ ಇದ್ದು ನಮ್ಮನ್ನು ಋಣಿಯಾಗಿ ಮಾಡಿದರು. ಹೀಗೆ ಸರ್ವತೋಮುಖವಾದ ಸಹಕಾರಿತೆ ಯಿಂದಲೂ ಸಹಾನುಭೂತಿಯಿಂದಲೂ ಸಂಕಲ್ಪಿತ ಕಾರ್ಯವು ಸಾಂಗವಾದಬಗ್ಗೆ ನಾವು ಪರಮೇಶ್ವರನನ್ನು ವಂದಿಸುತ್ತೇವೆ.

ಕವಿತೆ, ಉಪನ್ಯಾಸ, ವ್ಯಾಖ್ಯಾನಗಳು:

ಜೋಗದ ಜಲಪಾತ

ಜೋಗದ ಜಲಪಾತ

(“ಆನಂದಕವಿ” ರಚಿತ)

ಜೋ ! ಜೋ ! ಎನ್ನುತ ಜೋಗದ ತಡಿಸಲು ನಲಿನಲಿದಾಡುತ ಹಾಡುತಿದೆ !
ಸೋಜಿಗದಿಂದಲಿ ಸೃಷ್ಟಿಯ ಸೊಬಗನು ನೋಡಿರಿ ! ಎನ್ನುತ ಕೂಗುತಿದೆ !

೧

ರಾಜಾತಡಿಸಲು ನಲಿಯುತಿದೆ
ಸೋಜಿಗದಿಂದಲಿ ಉಲಿಯುತಿದೆ
ಧಡಧಡಯೆನ್ನುತ ಹರಿಯುತಿದೆ
ಗಡಗಡ ಗದರಿಸಿ ಬೀಳುತಿದೆ
ತಂತುರಹನಿಯನು ಚಿಮ್ಮುತಿದೆ
ಚಿಂತೆಯನೆಲ್ಲವ ಕಳೆಯುತಿದೆ
ಕನ್ನಡ ಸೊಬಗನು ಸೂಸುತಿದೆ
ಕನ್ನಡಿಯಂದದಿ ಹೊಳೆಯುತಿದೆ
ಬೆಟ್ಟದ ಸಿರಿಯನು ಬೀರುತಿದೆ
ದಿಟ್ಟಿಗೆ ಚಂದವು ತೋರುತಿದೆ
ಬಗೆಬಗೆ ಬಣ್ಣದಿ ಹೊಳೆಯುತಿದೆ
ತಗೆಬಗೆಯೆಲ್ಲವ ಕಳೆಯುತಿದೆ
ನಗೆಮೊಗದಿಂದಲಿ ನಲಿಯುತಿದೆ
ಜಗವನು ಅಚ್ಚರಿಗೊಳಿಸುತಿದೆ
ಕಡಲೊಡೆಯನ ಗಡ ನಮಿಸುತಿದೆ
ಸಡಗರದಿಂದಲಿ ಸಾಗುತಿದೆ
ಸುಂದರ ತಡಿಸಲು ನೋಡಲು ಬನ್ನಿರಿ ! ಎನ್ನುತ ಮೋದದಿ ಕೂಗುತಿದೆ
ಬಂಧುರ ಭಾವದಿ ನಲಿಯುತ ಕೆಲೆಯುತ ಸಾಗರದೊಡೆಯನ ಹಾಡುತಿದೆ !

೨

ಅಬ್ಬರತಡಿಸಲು ಹಾರುತಿದೆ
ನಿಬ್ಬಣದಂದದಿ ಕುಣಿಯುತಿದೆ
ಇಬ್ಬಣದಿಂದಲಿ ಜಿಗಿಯುತಿದೆ
ಅಬ್ಬಬ್ಬೆನ್ನುತ ಉಲಿಯುತಿದೆ

ಪ್ರಾಥಮಿಕ ಶಿಕ್ಷಣ

ಕಾಮನ ಬಿಲ್ಲನು ತೋರುತಿದೆ
ಸೋಮನ ತೆರದಲಿ ಜೋಳೆಯುತಿದೆ
ಪ್ರಾತಃಕಾಲದಿ ಮೆರೆಯುತಿದೆ
ಕೌತುಕದಿಂದಲಿ ಕುಣಿಯುತಿದೆ
ಮೋಹನಮಂತ್ರವ ಹಾಡುತಿದೆ
ಮಂಜುಳ ಗಾನವ ಮಾಡುತಿದೆ
ಮಿನುಗುತ ಮಿಂಚುತ ಹರಿಯುತಿದೆ
ಬನಸಿರಿ ಬಳಿಯಲಿ ಚಿಮ್ಮುತಿದೆ
ಚಿನುಮಯ ಶಿವಶಿವ ! ಎನ್ನುತಿದೆ
ಬಿನದದಿ ಸಾಗರ ಸೇರುತಿದೆ
ಸಂತಸದಿಂದಲಿ ಹರಿಯುತಿದೆ
ಪ್ರಾಂತದ ಸಿರಿಯನು ಪೊಗಳುತಿದೆ
ಪರಮ ಶರಾವತಿ ಪಾವನ ತಡಿಸಲು ದೇವನ ಮಹಿಮೆಯ ಪೊಗಳುತಿದೆ!
ಹರುಷದಿ ಸಾಗರ ನೋಡಲು ಕೂಡಲು ನಲಿನಲಿದೀಗಳೆ ಸಾಗುತಿದೆ !

೨

ಬಾಣದತಡಿಸಲು ಬೀಳುತಿದೆ
ಜಾಣ್ಮೆಯ ನೋಡಲು ಕರೆಯುತಿದೆ
ಹಾಲಿನ ತೆರದಲಿ ಹರಿಯುತಿದೆ
ಲೀಲಾ ಮಹಿಮೆಯ ತೋರುತಿದೆ
ರೇಶಿಮೆಯೆಳೆಯೊಲು ಜೋಳೆಯುತಿದೆ
ರಸಿಕರ ಮನವನು ಸೆಳೆಯುತಿದೆ
ಜಸವನು ಜಗದಲಿ ಹರಡುತಿದೆ
ನಸುನಗೆಯಿಂದಲಿ ಕುಣಿಯುತಿದೆ
ವಸುಧೆಗೆ ಕೌತುಕ ತೋರುತಿದೆ
ಪ್ರಾಸದ ತೆರದಲಿ ಮೆರೆಯುತಿದೆ
ಹರಹರ ! ಎನ್ನುತ ಹರಿಯುತಿದೆ
ಹಿರಿದಹ ಪಾತಕ ಕಳೆಯುತಿದೆ
ಅತಿ ತ್ವರೆಯಿಂದಲಿ ಸುರಿಯುತಿದೆ
ಪ್ರತಿಭೆಯ ಸೊಂಪನು ಸೂಸುತಿದೆ
ಚತುರತೆಯಿಂದಲಿ ಉಲಿಯುತಿದೆ

ಜೋಗದ ಜಲಪಾತ

ಮತಿಯನು ಮೋಹವಗೊಳಿಸುತಿದೆ
ಹಿರಿಹಿರಿ ! ಹಿಗ್ಗುತ ಹರಿಯುತಿದೆ
ಹರುಷದಿ ಸಾಗರ ಸೇರುತಿದೆ
ಸೃಷ್ಟಿಯ ಸೊಬಗನು ನೋಡಿರಿ ! ನೋಡಿರಿ ! ಎನ್ನುತ ಜನರನು ಕರೆಯುತಿದೆ !
ಬೆಟ್ಟದ ಬೆಡಗನು ಹಾಡಿರಿ ! ಹಾಡಿರಿ ! ಎನ್ನುತ ಬಿಡದಲೆ ಕೂಗುತಿದೆ !

ಗೌರವವನಿತೆಯು ಹಾಡುತಿದೆ
ಗೌರವದಿಂದಲಿ ಉಲಿಯುತಿದೆ
ಅಂದದಿ ಚಂದದಿ ನಲಿಯುತಿದೆ
ಸುಂದರ ಗಾನವ ಮಾಡುತಿದೆ
ಮುತ್ತಿನ ಮಳೆಯೊಲು ಸುರಿಯುತಿದೆ
ಚಿತ್ತಕೆ ಶಾಂತಿಯನೀಯುತಿದೆ
ತಾಯಿಯ ಸಿರಿಯನು ಪೊಗಳುತಿದೆ
ಮಾಯಾಭ್ರಾಂತಿಯ ಮರೆಸುತಿದೆ
ಈಶನ ಲೀಲೆಯ ತೋರುತಿದೆ
ಆಸ್ತಿಕ ಭಾವವು ಜನಿಸುತಿದೆ
ನಾಸ್ತಿಕ ಕಲ್ಪನೆ ನಶಿಸುತಿದೆ
“ ಅಸ್ತಿಕ ! ಅಸ್ತಿಕ ! ” ಎನ್ನುತಿದೆ
ಜೋಗವು ಜೋ ! ಜೋ ! ಹಾಡುತಿದೆ
ರಾಗದಿ ಜನರನು ಕರೆಯುತಿದೆ
ತಾಳದಿ ಮೇಳದಿ ಕುಣಿಯುತಿದೆ
ನಲಿನಲಿದೀಗಲೆ ಕೂಗುತಿದೆ
ನನ್ನಿಯು ಸುಂದರ ! ಸುಂದರ ನನ್ನಿಯು ! ಎನ್ನುತ ಗಾನವ ಮಾಡುತಿದೆ !
ಕನ್ನಡನಾಡಿನ ಕೌತುಕ ತೋರಲು ಸನ್ನುತ ಜನರನು ಕರೆಯುತಿದೆ !

ಸುಂದರನ ಚಂದ್ರ.

(ನೆಯ ೩॥ ಗೆ ಮಿಸೆಸ್ ಕಟ್ಟೀಮನಿ, ಬಿ. ಮಿ. ಪ್ರೊ. ಸ್ಕೂ. ಹೆ. ಟ್ರೇ. ಕಾ. ಇವರು ಕಳಿಸಿದ್ದು)

ಕತ್ತಲಿಗೆತ್ತಿದ ಲಾಂದರದಂತೆ ಬೆಳಗುತಲಿದ್ದನು ಚಂದಿರನು ॥
ಚೆಲ್ಲಿದ ಮುತ್ತಿನ ನಡುವಿನಲಿಟ್ಟ ವಜ್ರದ ಬಿಲ್ಲೆಯು ಚಂದಿರನು ॥ ೧ ॥

ಚಂದ್ರನು ಮೇಲಾಕಾಶದಲ್ಲಿದ್ದನು ಚೆಲ್ಲುತ ತಿಳಿಬೆಳದಿಂಗಳನು ॥
ನಮ್ಮನೆಯಂಗಳದಲಿ ಮಲಗಿದ್ದನು ಸುಂದರನರಳಿಸಿ ಕಂಗಳನು ॥ ೨ ॥

ಒಳ್ಳೆಯ ಮಕ್ಕಳ ಸ್ನೇಹಿತನವನು ಆಕಾಶದೊಳಿಹ ಚಂದಿರನು ॥
ಎರಡೇ ವರುಷದ ಹಸುಗೂಸವನು ಅಂಗಳದೊಳಗಿಹ ಸುಂದರನು ॥ ೩ ॥

ಕಣ್ಣಾಮುಚ್ಚೆಯನಾಡುತ ಚಂದ್ರನು ಮೋಡದಮರೆಯಲಿ ತಲೆಮರೆಸಿ ॥
'ಅಜ್ಜಿ' ಎನ್ನುತ ಹೊರಗಡೆ ಬರುವನು ತಿಳಿಬೆಳದಿಂಗಳ ಮಳೆಗರೆಸಿ ॥ ೪ ॥

'ಚಂದಕಿಮಾಮ! ಚಕ್ಕುಲಿಮಾಮ!' ಸುಂದರ ಚಂದ್ರನ ಕಾಡುವನು ॥
ಕಣ್ಣಿಗೆ ಮುಚ್ಚಿದ ಕೈಗಳನಗಲಿಸಿ 'ಐ' ಎನ್ನುತ ನೋಡುವನು ॥ ೫ ॥

ಸುಂದರ ನಿಂತವ ನೊಡನಾಡುತಲಿರೆ ನಿದ್ದೆಯು ಕಣ್ಣಿಗೆ ಹತ್ತುವದು ॥
ಚಂದಿರನೆರಚುವ ತಿಳಿ ಬೆಳದಿಂಗಳು ಭೂಮಿಯು ನೆಲ್ಲವಮುತ್ತುವುದು ॥ ೬ ॥

ನಿದ್ದೆಯಲಿದ್ದರು "ಚಂದಕಿಮಾಮ" ! ಎನ್ನುತ ಸುಂದರಕನವರಿಸಿ ॥
ಕೂಗಲು ಚಂದ್ರನು ಸುಂದರನಿಗೆ ಬಲು ಮುತ್ತನ್ನಿಡುವನು ನಗುಸುರಿಸಿ ॥ ೭ ॥

ಮೊ॥ ವಿನಾಯಕರಾವ ಜೋಸಿ, ರಿ. ಎ. ಇ. ದ. ಭಾಗರವರ ಭಾಷಣ

ಜನಸಾಮಾನ್ಯ ಶಿಕ್ಷಣ

ಈಗ ಎಲ್ಲ ದೇಶಗಳಲ್ಲಿಯೂ ಜನಸಂಖ್ಯೆಯೂ ಜನತೆಯ ಗರಜೂ ಹೆಚ್ಚಾಗುತ್ತ ನಡೆದಿರುವದರಿಂದ ಜನರ ಜೀವನಕಲಹವು ಕಠಿಣವಾಗತೊಡಗಿರುವದು. ಆದುದರಿಂದ ಎಲ್ಲ ದೇಶಗಳೂ ತಮ್ಮ ತಮ್ಮ ಹೊಟ್ಟೆಬಟ್ಟೆಗಳಿಗಾಗಿ ಹೆಣಗಾಡತೊಡಗಿರುವವು; ಈ ಬಗೆಯ ಈ ಕಾಲಕ್ಕೆ ಜೀವನಕಲಹದ ಪರಸ್ಪರ ಮೇಲಾಟ (Competition) ದ ಕಾಲವೆಂದು ಹೇಳಬಹುದು. ಈ ಪ್ರಕಾರ ಕಾಲಕ್ರಮವು

ಬದಲಾದುದರಿಂದ ಅದರ ಮೂಲಾಧಾರವಾದ ಶಿಕ್ಷಣಕ್ರಮವೂ ಬದಲಾಗಲಿಕ್ಕೆ ಬೇಕೆಂಬದು ಸಹಜವು. ಇಷ್ಟು ದಿವಸದಂತೆ ಕೆಲ ಜನರು ಬೌದ್ಧಿಕ ಶಿಕ್ಷಣವನ್ನೇ ಉದ್ದಕ್ಕೆ ಒಂದೇ ಸವನೆ ಪಡೆಯುತ್ತ ಕೂಡುವದೂ, ಮಿಕ್ಕವರು ಅಶಿಕ್ಷಿತರಾಗಿ ಉಳಿಯುವದೂ ದೇಶಕ್ಕೆ ಅನಿಷ್ಟವಾದದ್ದು. ಆದುದರಿಂದ ಬಹುತರ ಜನ ಸಮೂಹವು ಸಾಕ್ಷರಿಗಳಾಗುವದು ಅತ್ಯವಶ್ಯವು. ಒಮ್ಮೆಲೆ ಶಿಕ್ಷಿತರ ಸಂಖ್ಯೆಯು ಬೆಳೆಯಲು ಒಂದು ವಿಶಿಷ್ಟತರದ ಶಿಕ್ಷಣ ಪದ್ಧತಿಯು ಬೇಕು. ಆ ಶಿಕ್ಷಣ ಪದ್ಧತಿಯಿಂದ ಬಹುತರ ಎಲ್ಲ ಜನರೂ ಓದು ಬರಹವನ್ನು ಆದಷ್ಟು ಬೇಗ ಕಲಿತು ಸಾಮಾನ್ಯ ಜ್ಞಾನವನ್ನು ಹೊಂದಬೇಕು. ಈ ಬಗೆಯ ವಿಶಿಷ್ಟವಾದ ಸಾಮಾನ್ಯ ಶಿಕ್ಷಣಕ್ಕೆ ಜನಸಾಮಾನ್ಯ ಶಿಕ್ಷಣವೆಂದೆನ್ನಬೇಕು.

ದೇಶ, ಕಾಲ ಮಾನಗಳ ಪದ್ಧತಿಯನ್ನು ಪ್ರತಿಯೊಬ್ಬನು ತಿಳಿಯುವದು ಆವಶ್ಯಕವು. ತಾನು ಯಾವ ಸ್ಥಿತಿಯಲ್ಲಿರುವೆನೆಂಬದನ್ನು ಪ್ರತಿಯೊಬ್ಬನು ಅರಿತರೆ ಮುಂದೆ ಏನು ಮಾಡಬೇಕೆಂಬದನ್ನು ಅಂದರೆ ತನ್ನ ಕರ್ತವ್ಯಕರ್ಮವನ್ನು ಅವನು ತಿಳಿಯಲು ಸಮರ್ಥನಾಗುವನು. ಜಗತ್ತಿನ ವರ್ತಮಾನ ಕಾಲದ ಜ್ಞಾನವು ಆಗಬೇಕಾದರೆ ಅವನು ವರ್ತಮಾನಪತ್ರಗಳನ್ನೂ ಮಾಸಿಕ ಪತ್ರಿಕೆಗಳನ್ನೂ ಓದಬೇಕಾಗುವದು. ತೀವ್ರವಾಗಿ ಓದುಕಲಿಯಬೇಕಾದರೆ ಆರಂಭಕ್ಕೆ ತಕ್ಕಂಥ ಅಚ್ಚುಹಾಕಿದ ಪುಸ್ತಕಗಳು ಬೇಕು. ಆರಂಭದ ಓದುಕಲಿಸಲಿಕ್ಕೆ ಪ್ರಾಥಮಿಕ ಶಿಕ್ಷಕರೇ ತಕ್ಕವರು. ಅಥವಾ ಓದುಬರಹಬಲ್ಲ ಮತ್ತೊಬ್ಬನ ನೆರವಾದರೂ ಬೇಕು. ಈ ತರದ ಶಿಕ್ಷಣವು ನಡೆಯುವಾಗ ಶಿಕ್ಷಣಕ್ರಮಕ್ಕೇನೂ ವಿಶೇಷ ಪ್ರಾಶಸ್ತ್ಯವಿಲ್ಲ; ಯಾಕೆಂದರೆ ಈ ಶಿಕ್ಷಣದ ಧ್ಯೇಯವು ಬೇಗ ವ್ಯವಹಾರ ಸಮರ್ಥರಾದ ಪ್ರಜೆಗಳನ್ನು ಉಂಟುಮಾಡುವದೇ ಆಗಿರುವದು. ಯಾರ ಸಹಾಯ ದಿಂದಲೇ ಆಗಲಿ ಸ್ವಲ್ಪ ಓದಲಿಕ್ಕೆ ಬಂದಕೂಡಲೆ ತಮ್ಮ ತಮ್ಮ ಆರಾಮದ ವೇಳೆಯಲ್ಲಿ ಭಾರತ ರಾಮಾಯಣ ಕಥೆಗಳನ್ನು ಓದಲು ಉಪಕ್ರಮಿಸಬೇಕು. ಇದರಿಂದ ಧಾರ್ಮಿಕ ಶಿಕ್ಷಣವು ದೊರೆಯುವದು.

ಯಾವಾಗಲಾದರೂ ಮದ್ಯಪಾನನಿಷೇಧ, ಗ್ರಾಮಸುಧಾರಣೆ ಇವೇ ಮೊದ ಲಾದ ವಿಷಯಗಳ ಬಗ್ಗೆ ತಜ್ಞರ ಕಡೆಯಿಂದ ಭಾಷಣಗಳನ್ನು ಕೊಡಿಸುತ್ತಿರ ಬೇಕು. ಜಪಾನ ದೇಶದಲ್ಲಿ ಸಹಕಾರಿತೆಯ ಮಹತ್ವದ ಬಗ್ಗೆ ಸಾಮಾನ್ಯ ಜನ ತೆಯ ಮುಂದೆ ತಜ್ಞರ ವ್ಯಾಖ್ಯಾನಗಳು ಆಗುತ್ತಿರುವವು. ಹಳ್ಳಿಗಾಡ ಜನರು ವಿಶೇಷವಾಗಿ ಲಾವಣಿಗಳಿಗೆ ಮೆಚ್ಚುವರು. ಉಪದೇಶಪರವಾದ ವಿಷಯಗಳನ್ನು ಲಾವಣಿಗಳಲ್ಲಿ ರಚಿಸಿ ಜನತೆಯ ಮುಂದೆ ಚೆನ್ನಾಗಿ ಹಾಡಿ ತೋರಿಸಬೇಕು. ಈ ತರದ ಕವನಗಳನ್ನು ಜನರು ಪ್ರೀತಿಯಿಂದ ಕೇಳುವರು. ಈ ರೀತಿಯಿಂದ

ಅವರಲ್ಲಿ ಓದಿದ್ದನ್ನು ಕೇಳುವ ಅಭಿರುಚಿಯು ಉಂಟಾಗುವಂತೆ ಪ್ರಯತ್ನಿಸಬೇಕು. ಈ ಪ್ರಕಾರ ಓದುವದರಿಂದಲೂ ಕೇಳುವದರಿಂದಲೂ ಶಿಕ್ಷಣಕೊಡುವದಲ್ಲದೆ ನೋಡುವದರಿಂದಲೂ ಸಹ ಶಿಕ್ಷಣಕೊಡಲಿಕ್ಕೆ ಬರುತ್ತದೆ. ಜನತೆಯ ಮುಂದೆ ಮಂಡಿಸತಕ್ಕ ವಿಷಯವನ್ನು ಹಾವಭಾವಪೂರ್ವಕವಾದ ಸಿನೇಮಾದ ರೂಪದಿಂದ ಇಟ್ಟರೆ ಪ್ರೇಕ್ಷಕರ ಮನಸ್ಸಿನ ಮೇಲೆ ಒಳ್ಳೇ ಪರಿಣಾಮವಾಗುತ್ತದೆ.

ಈಗ ಜೀವನಕಲಹದ ಹೋರಾಟದ ಕಾಲವಿರುವದೆಂದು ಈ ಮೊದಲೇ ಹೇಳಿದ್ದೇವೆ. ಆದುದರಿಂದ ಉದ್ಯೋಗದಲ್ಲಿ ಸೇರಿಕೊಂಡು ಕಲಿಯಲಿಕ್ಕೆ ಅನುಕೂಲವಾದ ಕಂಟಿನ್ಯೂಏಶನ್ ಸ್ಕೂಲುಗಳೂ ರಾತ್ರಿಶಾಲೆಗಳೂ ಬೇಕು. ಐತಿಹಾಸಿಕ ಭೌಗೋಲಿಕ ಸಂಗತಿಗಳನ್ನು ದೊಡ್ಡ ದೊಡ್ಡ ಪುಸ್ತಕಗಳ ರೂಪದಿಂದ ಇಟ್ಟು ಕಲಿಸುವದಕ್ಕಿಂತ ಅವೇ ವಿಷಯಗಳನ್ನು ನಕಾಶರೂಪದಿಂದ ಇಟ್ಟು ವಿಷಯಗಳನ್ನು ವಿದ್ಯಾರ್ಥಿಗಳೇ ಗ್ರಹಿಸಲು ಸಮರ್ಥರಾಗುವಂತೆ ಮಾಡಬೇಕು. ಇದಕ್ಕೇ ನಕಾಶವಾಚನವೆನ್ನಬಹುದು.

ಈ ವರೆಗೆ ಶಿಕ್ಷಿತನು ಅಶಿಕ್ಷಿತವರ್ಗವನ್ನು ಸಾಮಾನ್ಯವಾಗಿ ಸಹಜರೀತಿಯಿಂದ ತಿದ್ದುವ ರೀತಿಯನ್ನು ಹೇಳಿದ್ದಾಯಿತು. ಹಾಗು ಶಿಕ್ಷಿತ ಜನರಲ್ಲಿ ಯೋಗ್ಯವಾದ ಭಾವನೆಗಳನ್ನು ಅಂದರೆ ಪರಸ್ಪರ ಸಹಕಾರ, ರಾಜನಿಷ್ಠೆ, ದೇಶಸೇವೆ ಪರರ ಸೊತ್ತಿನ ಪರಾಙ್ಮುಖತ್ವ, ಸಂಕಟಸಮಯದಲ್ಲಿ ನೆರವಾಗೋಣ, ನಿಷ್ಕಾಮ ಕರ್ಮ ಇವೇ ಮೊದಲಾದ ಸದ್ಗುಣಗಳ ಭಾವನೆಗಳನ್ನು ನೆಲೆಗೊಳಿಸುವಂತೆ ಈ ಶಿಕ್ಷಣದ ಧ್ಯೇಯವಿರಬೇಕು.

ಈ ತರದ ವೆಚ್ಚವಿಲ್ಲದೆ ಶಿಕ್ಷಣವನ್ನು ಬೆಳಸುವ ಸುಲಭಮಾರ್ಗವನ್ನು ಹೇಳಿ ಶ್ರೀ. ಜೋಶಿಯವರು ಮುಖ್ಯವಾಗಿ ಈ ಕೆಲಸವು ಪ್ರಾಥಮಿಕ ಶಿಕ್ಷಕರ ಕೈಯಲ್ಲಿರುವದೆಂದೂ ಸೂಚಿಸಿದರು.

ಕೆಳಗಿನ ಇಯತ್ತೆಗಳಲ್ಲಿ ನಿಬಂಧ ಲೇಖನವನ್ನು ಕಲಿಸುವ ಬಗ್ಗೆ

[ಮಿಸ್. ಲ್ಯಾಕ್ಸ್‌ಟನ್ ಲೇಡೀ ಸುಪರಿಂಟೆಂಡೆಂಟ, ಹೆ. ಟ್ರೇ. ಕಾ ಧಾರವಾಡ ಇವರು ಬರೆದ ಟಿಪ್ಪಣಿಗಳ ಆಧಾರದಿಂದ ಮಿ|| ಮುಗದಾಳ ಇವರು ಹೇಳಿದ್ದು]

ನಿಬಂಧವೆಂದರೆ ನಮಗೆ ಗೊತ್ತಿರುವ ಸಂಗತಿಗಳನ್ನೂ ನಮ್ಮ ಮನಸ್ಸಿನಲ್ಲಿ ಬರುವ ವಿಚಾರಗಳನ್ನೂ ಸುಲಭವೂ ಸ್ಪಷ್ಟವೂ ಆದ ಭಾಷೆಯಲ್ಲಿ ಬಾಯಿಮಾತಿನಿಂದಲೂ ಬರೆಹದಿಂದಲೂ ತಿಳಿಸುವದು.

ಶಾಲೆಯಲ್ಲಿ ನಾವು ಹುಡುಗರಿಗೆ ಕಲಿಸುವ ಹಲವು ವಿಷಯಗಳಲ್ಲಿ ಭಾಷೆಯು ಒಳ್ಳೇ ಮಹತ್ವವಾದದ್ದೆಂದು ಎಲ್ಲರೂ ಒಪ್ಪಿಕೊಳ್ಳುವರು. ಗ್ರಂಥಗಳನ್ನು ಓದಿ ತಿಳಿದುಕೊಳ್ಳಲಿಕ್ಕೆ ಬಂದರೆ ಭಾಷಾಭ್ಯಾಸದ ಉದ್ದೇಶವು ತಕ್ಕಮಟ್ಟಿಗೆ ಸಫಲವಾದಂತಾಯಿತು. ಉತ್ತಮವಾದ ಗ್ರಂಥಗಳನ್ನು ಓದುವ ಲವಲವಿಕೆಯು ಉಂಟಾದರೆ ಈ ಉದ್ದೇಶದ ಬಹಳ ಭಾಗವು ಫಲಕಾರಿಯಾಯಿತೆನ್ನಬಹುದು. ಆದರೆ ಭಾಷೆಯನ್ನು ಪರಿಣಾಮಕರವಾಗುವಂತೆ ಉಪಯೋಗಿಸುವ ರೂಢಿಯಾಗುವವರೆಗೆ ಭಾಷೆಯ ಅಭ್ಯಾಸವು ಪೂರ್ಣವಾಯಿತೆಂದು ಹೇಳಲಾಗದು. ಸುಲಭವೂ ಸರಳವೂ ಸುಶ್ರಾವ್ಯವೂ ಆದ ಭಾಷೆಯನ್ನು ಬಾಯಿಂದಲೂ ಬರಹದಲ್ಲಿಯೂ ಉಪಯೋಗಿಸುವದೇ ನಿಬಂಧವು. ಈ ಕಲೆಯು ತಕ್ಕಮಟ್ಟಿಗಾದರೂ ಶಾಲೆ ಬಿಡುವ ವಿದ್ಯಾರ್ಥಿಗಳಲ್ಲಿ ಇರತಕ್ಕದ್ದು. ಆದ್ದರಿಂದ ಭಾಷೆಯನ್ನು ಕಲಿಸುವ ಮಹತ್ವದ ಉದ್ದೇಶಗಳಲ್ಲಿ ಇದೊಂದು, ಎಂಬದು ನಿರ್ವಿವಾದವು.

ಇನ್ನು ಶಾಲೆಯಲ್ಲಿ ಮಾಡಿಸುವ ಭಾಷಾಭ್ಯಾಸವನ್ನು ಕುರಿತು ವಿಚಾರಿಸಲು ಮೊದಲಿನ ಎರಡು ಉದ್ದೇಶಗಳ ಕಡೆಗೆ ನಮ್ಮ ಲಕ್ಷ್ಯವು ತಕ್ಕಮಟ್ಟಿಗೆ ಹೋಗುವದೆಂದು ಹೇಳಬಹುದು. ನಮ್ಮ ಶಾಲೆಗಳಲ್ಲಿ ಈ ಎರಡು ಉದ್ದೇಶಗಳು ಸಹ ಚೆನ್ನಾಗಿ ಸಾಧಿಸುವದಿಲ್ಲೆಂದು ಅನುಭವಿಕರು ಹೇಳುವದುಂಟು. ಆದರೆ ನಿಬಂಧದ ಶಿಕ್ಷಣದ ಬಗ್ಗೆ ಮಾತ್ರ ನಮ್ಮಿಂದ ಆಗತಕ್ಕ ಕೆಲಸವು ಸ್ವಲ್ಪವೂ ಆಗುವದಿಲ್ಲೆಂದು ಧಾರಾಳವಾಗಿ ಹೇಳಬಹುದು. ನಮ್ಮಲ್ಲಿ ೫–೬ ಇಯತ್ತೆಗಳ ವಿದ್ಯಾರ್ಥಿಗಳು ಉತ್ತರಕೊಡುವಾಗ ಉಪಯೋಗಿಸುವ ವಾಕ್ಯಸರಣಿಯನ್ನೂ ಮುಲ್ಕೀ ಪರೀಕ್ಷೆಗೆ ಕೂಡುವ ವಿದ್ಯಾರ್ಥಿಗಳು ನಿಬಂಧವೆಂದು ಬರೆಯುವ ಉತ್ತರಗಳನ್ನೂ ನೋಡಿದರೆ ಈ ಸಂಗತಿಯು ಮನವರಿಕೆಯಾಗುವದು.

ಈ ದುಃಸ್ಥಿತಿಯ ಮೂಲಕಾರಣವೆಂದರೆ ಈ ವಿಷಯವನ್ನು ನಾವು ಶಾಲೆಗಳಲ್ಲಿ ತೀವ್ರವಾಗಿ ಆರಂಭಿಸದಿರುವದು. ಮಾತೃಭಾಷೆಯನ್ನು ತಿಳಿದುಕೊಳ್ಳುವದೂ, ಆ ಬಳಿಕ ಅದನ್ನು ಭಾವ ಬೋಧಕವಾಗಿ ಓದುವದೂ ನಿಜವಾಗಿ ಬಹಳ ಶ್ರಮಸಾಧ್ಯವಾದವುಗಳಲ್ಲ; ಆದರೆ ಅದನ್ನು ಬಾಯಿಮಾತಿನಲ್ಲಾಗಲಿ ಬರಹ ಮೂಲಕವಾಗಲಿ ಉಪಯೋಗಿಸಿ ನಮ್ಮ ಮನಸಿನಲ್ಲಿ ಬಂದ ನಾಲ್ಕು ವಿಚಾರಗಳನ್ನು ಸುಬೋಧವಾಗುವಂತೆಯೂ ಬೇಸರ ಹುಟ್ಟದಂತೆಯೂ ಪರರ ಮುಂದಿಡುವದು ಶ್ರಮಸಾಧ್ಯವು. ಆದ್ದರಿಂದ ಈ ವಿಷಯದ ಬಗ್ಗೆ ಅಭ್ಯಾಸವು ಆದಷ್ಟು ತೀವ್ರವಾಗಿ ಆರಂಭವಾಗಿ ಕ್ರಮದಿಂದ ಸಾಗುವದು ಮಹತ್ವವಾದದ್ದು.

ಹುಡುಗರ ವಿಷಯಪತ್ರಿಕೆಯಲ್ಲಿ ನಿಬಂಧವಿಷಯವನ್ನು ೫ನೆಯ ಇಯತ್ತೆಯಲ್ಲಿ ಪತ್ರಬರೆಹದ ಮೂಲಕ ಆರಂಭಿಸಬೇಕೆಂದು ಹೇಳುವ ಮೂಲಕ ಈ ದುಃಸ್ಥಿ

ತ್ತಿಯು ಉಂಟಾಗಿರುವದೆಂದು ಶಿಕ್ಷಕರು ಹೇಳುವದುಂಟು. ಒಮ್ಮಿಂದೊಮ್ಮೆ ಪತ್ರಗಳನ್ನು ಬರೆದು ತಮ್ಮ ಇಂಗಿತವನ್ನು ಇತರರಿಗೆ ತಿಳಿಸುವ ಕಲೆಯು ಬರುವದು ದುಃಸಾಧ್ಯವು. ವ್ಯವಹಾರದ ಪತ್ರಗಳನ್ನು ಬರೆಯುವ ತರಗತಿಗೆ ಬರಬೇಕಾದರೆ ಹಿಂದೆ ಇರುವ ಮೆಟ್ಟುಗಳು ಆಗಿರತಕ್ಕದ್ದು. ಆದರೆ ಬಾಯಿ ಮಾತಿನ ಮೂಲಕ ಹಾಗು ಬರೆಹದ ಮೂಲಕ ತಾವು ನೋಡಿದ, ಕೇಳಿದ ಅಥವಾ ಓದಿದ ಅಂತೂ ತಮಗೆ ಪೂರ್ಣಪರಿಚಿತವಿರುವ ಸಂಗತಿಗಳನ್ನು ಯಥಾಕ್ರಮವಾಗಿ ಹೇಳಲಿಕ್ಕೂ ಬರೆಯಲಿಕ್ಕೂ ರೂಢಿಯಾಗಿರತಕ್ಕದ್ದು. ವಿಷಯ ಪತ್ರಿಕಾಕಾರರು ಈ ಸಂಗತಿಯನ್ನು ಗೃಹೀತವೆಂದಿಟ್ಟುಕೊಂಡಂತೆ ತೋರುತ್ತದೆ. ೧೫ ವರುಷಗಳ ಹಿಂದೆ ಹುಡಿಗೆಯರ ಹೊಸ ಅಭ್ಯಾಸಪತ್ರಿಕೆಯನ್ನು ಮಾಡಿದಾಗ ಈ ಮಾತು ಸ್ಪಷ್ಟಮಾಡಲ್ಪಟ್ಟಿತು. ಆ ವಿಷಯಪತ್ರಿಕೆಯಲ್ಲಿ ನಿಬಂಧವನ್ನು ಭಾಷಾವಿಷಯದ ಒಂದು ಪ್ರತ್ಯೇಕವಾದ ಅಂಗವೆಂದಿಟ್ಟುಕೊಂಡು ಆರಂಭದ ಇಯತ್ತೆಯಿಂದ ಪ್ರತಿಯೊಂದು ಇಯತ್ತೆಯಲ್ಲಿ ಈ ಬಗ್ಗೆ ಎಷ್ಟೆಷ್ಟು ಪ್ರಗತಿಯಾಗಿರಬೇಕೆಂಬ ಬಗ್ಗೆ ಹೇಳಲ್ಪಟ್ಟಿದೆ.

ಇರಲಿ, ವಿಷಯ ಪತ್ರಿಕೆಯಲ್ಲಿ ಸ್ಪಷ್ಟವಾಗಿ ಹೇಳಿರಲಿ ಹೇಳದಿರಲಿ, ನಿಬಂಧ ಲೇಖನ ಕಲೆಯು ನಮ್ಮ ವಿದ್ಯಾರ್ಥಿಗಳಲ್ಲಿ ರೂಢವಾಗುವದು ಅವಶ್ಯವೆಂದು ನಾವು ಒಪ್ಪಿಕೊಂಡ ಬಳಿಕ ಅದನ್ನು ಯಾವ ಇಯತ್ತೆಯಲ್ಲಿ ಆರಂಭಿಸಿ, ಕ್ರಮವಾಗಿ ಯಾವ ಯಾವ ಮೆಟ್ಟುಗಳನ್ನು ಮಾಡಿ, ಯಾವ ಪದ್ಧತಿಯಿಂದ ಕಲಿಸತಕ್ಕದ್ದೆಂಬದನ್ನು ನಿಷ್ಕರ್ಷಿಸುವದು ಅವಶ್ಯವಾದದ್ದು. ಇದನ್ನು ಇಲ್ಲಿಯ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜದ ಪ್ರಾ. ಸ್ಕೂಲಿನಲ್ಲಿ ಅನುಭವ ತೆಗೆದುಕೊಂಡಿದೆ. ಅಲ್ಲಿರುವ ವಿದ್ಯಾರ್ಥಿನಿಯರ ನಿಬಂಧ ಲೇಖನ ಕಲೆಯಲ್ಲಿಯ ಜಾಣ್ಮೆಯು ನೋಡತಕ್ಕದ್ದಾಗಿದೆ. ಆದ್ದರಿಂದ ಅಲ್ಲಿ ನಡೆದ ಅಭ್ಯಾಸಕ್ರಮವನ್ನು ಮೆ॥ ಲೇಡೀಸುಪರಿಂಟೆಂಡರ ಅನುಮತಿಯಿಂದ ನಾವು ಇಲ್ಲಿ ಕೊಡುತ್ತೇವೆ. ಇದರಲ್ಲಿರುವ ಮೆಟ್ಟುಗಳಲ್ಲಿ ಏನೂ ಹೆಚ್ಚುಕಡಿಮೆಯಾಗಬಾರದೆಂದು ನಾವು ಅಭಿಪ್ರಾಯಪಡುವದಿಲ್ಲ. ಅವರಿಗೆ ಬಂದ ಅನುಭವವನ್ನು ಶಿಕ್ಷಕರು ಲಕ್ಷ್ಯದಲ್ಲಿಟ್ಟು ತಮಗೆ ತೋರುವ ಹೆಚ್ಚುಕಡಿಮೆಗಳನ್ನು ಮಾಡಿ ಈ ವಿಷಯವನ್ನು ರೂಢಿಮಾಡಿಸಿ ತಮ್ಮ ಅನುಭವವನ್ನು ಶಿಕ್ಷಕ ವೃಂದಕ್ಕೆ ತಿಳಿಸಬೇಕೆಂಬದೇ ನಮ್ಮ ಉದ್ದೇಶವು.

ನಿಬಂಧ ವಿಷಯವನ್ನು ಆದಷ್ಟು ತೀವ್ರ ಆರಂಭಿಸತಕ್ಕದ್ದು. ಪ್ರಾ. ಸ್ಕೂಲಿನಲ್ಲಿ ಇದನ್ನು ಬಾಲಿಕೆಯರ ವರ್ಗದಲ್ಲಿಯೇ ಆರಂಭಿಸುವರು. ಈ ವರ್ಗದಲ್ಲಿ ಅಲ್ಲಿ ಮೂರು ಭಾಗಗಳಿರುತ್ತವೆ. ಕ ಭಾಗದಲ್ಲಿ ಸಾಲೆಗೆ ಬಂದ ಆರಂಭದ ಹುಡಿಗೆಯರಿರುವರು. ಇವರಿಗೆ ಸಣ್ಣ ಸಣ್ಣ ಶಬ್ದಗಳನ್ನು ಓದಲಿಕ್ಕೂ ಅಂಕೆಗಳ

ಬೇರೀಜು ವಜಾಬಾಕಿಗಳನ್ನು ವಸ್ತುಗಳ ಸಹಾಯದಿಂದ ಮಾಡಲಿಕ್ಕೆ ಬಂದಿ ತೆಂದರೆ ಬ ಭಾಗದಲ್ಲಿ ಕೂಡಿಸುವರು. ಅ ಭಾಗದ ವಿದ್ಯಾರ್ಥಿನಿಯರು ಸ್ವಲ್ಪ ದಿನಗಳಲ್ಲಿ ಬಾಲಿಕೆಯರ ವರ್ಗದ ಶಿಕ್ಷಣವನ್ನು ಮುಗಿಸಿ ೧ನೆಯ ಇಯತ್ತೆಗೆ ಹೋಗಲಿಕ್ಕೆ ತಕ್ಕವರಾಗುವರು. ಹುಡುಗರು ಸಾಲೆಗೆ ಬಂದ ದಿವಸದಿಂದಲೇ ಬಾಯಿ ನಿಬಂಧವು ಆರಂಭವಾಗುತ್ತದೆ.

ತೀರ ಚಿಕ್ಕಮಕ್ಕಳಲ್ಲಿ ಸಹ ತಾವು ನೋಡುವ ಮಾಡುವ ಸಂಗತಿಗಳ ಬಗ್ಗೆ ಮಾತಾಡಬೇಕೆಂಬ ಹಂಬಲವಿರುವದು. ಇವು ತಮಗೆ ಸಂಬಂಧಿಸಿದ ಮಾತು ಗಳಿದ್ದರಂತೂ ಅವರು ಆ ಬಗ್ಗೆ ತೊದಲುನುಡಿಯಿಂದ ತಮಗೆ ಬಂದಂತೆ ಮಾತಾ ಡುವದುಂಟು. ಅವರಲ್ಲಿ ತೋರುವ ಈ ಪ್ರವೃತ್ತಿಗೆ ಸಾಕಷ್ಟು ಅನುವು ಕೊಡು ವದರಲ್ಲಿಯೇ ಶಿಕ್ಷಿಕೆಯ ಜಾಣ್ಮೆಯು ಕಂಡುಬರುವದು. ಶಿಕ್ಷಿಕೆಯು ಪ್ರತಿ ಯೊಬ್ಬ ಹುಡಿಗೆಯ ಕೂಡ ಅವರ ಮನೆ, ಪ್ರೀತಿಯ ಪ್ರಾಣಿಗಳು, ಸಾಲೆಗೆ ಬರುವಾಗ ಅವರು ಲಕ್ಷ್ಯವಿಟ್ಟು ನೋಡಿದ ನೋಟಗಳು ವೊದಲಾದವುಗಳ ಬಗ್ಗೆ ಸಂಭಾಷಣೆ ಮಾಡುವ ರೂಢಿಯಿಡತಕ್ಕದ್ದು. ಹೀಗೆ ಅವರಿಗೆ ಮಾತಾಡಲಿಕ್ಕೆ ಉತ್ತೇಜನ ಕೊಡುವದೇ ಬಾಯಿನಿಬಂಧದ ಆರಂಭವು.

ಅವರಿಗೆ ಶುದ್ಧವಾಗಿಯೂ ಸರಳವಾಗಿಯೂ ಸ್ಪಷ್ಟವಾಗಿಯೂ ಮಾತಾಡ ಲಿಕ್ಕೆ ಕಲಿಸುವದು ಈ ಅವಧಿಯಲ್ಲಿ ನಮ್ಮ ಉದ್ದೇಶವಲ್ಲ. ತಮ್ಮ ಅನುಭವ ಗಳನ್ನು ತಮಗೆ ಮಾತಾಡಿ ತಿಳಿಸಲಿಕ್ಕೆ ಬರುವದೆಂಬ ಭಾವನೆಯನ್ನು ಉಂಟು ಮಾಡುವದೇ ತೀರ ಮಹತ್ವದ ಸಂಗತಿಯು. ತನಗೆ ಮಾತಾಡಲಿಕ್ಕೆ ಬರುವ ದೆಂದು ಆ ಕೂಸಿಗೆ ಅನಿಸಿದರೆ ನಮ್ಮ ಕಾರ್ಯವು ಫಲವತ್ತಾಯಿತು. ಈ ವಿಶ್ವಾಸವು ಅವರಲ್ಲಿ ಉಂಟಾಗಬೇಕಾದರೆ ಶಿಕ್ಷಿಕೆಯು ಪ್ರತಿಯೊಬ್ಬ ವಿದ್ಯಾರ್ಥಿಯ ಬಗ್ಗೆ ಪೂರ್ಣಪ್ರೇಮವನ್ನು ವ್ಯಕ್ತಪಡಿಸುವದು ಅವಶ್ಯವಾದದ್ದು. ಯೋಗ್ಯ ಕಾಲದಲ್ಲಿ ಅವರೊಡನೆ ಸಹಾನುಭೂತಿಯನ್ನು ತೋರಿಸುವ ಜಾಣ್ಮೆಯು ಶಿಕ್ಷಿಕೆಗೆ ಹಸ್ತವಾಗಿರಬೇಕು. ಸಹಾನುಭೂತಿಯೆಂದರೆ ಅವರಿಗೆ ಮಾತಾಡಲಿಕ್ಕೆ ಪ್ರತ್ಯಕ್ಷ ಸಹಾಯಮಾಡುವದೆಂಬ ತಪ್ಪು ತಿಳುವಳಿಕೆಯನ್ನು ಮಾಡಿಕೊಳ್ಳಲಾಗದು. ಅಂದರೆ ಮಾತಾಡುವ ರೂಢಿಮಾಡಿಸಲಿಕ್ಕೆಂದು ಶಿಕ್ಷಿಕೆಯು ತಾನು ಮಾತಾಡಿ ತೋರಿಸಿ ಹೀಗೆ ಹೇಳೆಂದು ಉತ್ತೇಜನಕೊಡುವದುಂಟು. ಈ ತರದ ಸಹಾಯ ದಿಂದ ಬಾಯಿನಿಬಂಧಕ್ಕೆ ಈ ಆರಂಭದ ಅವಧಿಯಲ್ಲಿ ತೊಡಕು ಉಂಟಾಗುವದೇ ಹೊರತು ಸಹಾಯವು ಆಗುವದಿಲ್ಲ. ಮಾತಾಡುವದು ಒಂದು ಕಲೆಯು; ಹುಡು ಗರು ಅದನ್ನು ರೂಢಿಮಾಡತಕ್ಕದ್ದು. ಅದಕ್ಕೆ ಉತ್ತೇಜನಕೊಟ್ಟರೆ ಸಾಕು. ಅವರಿಗೆ ಮಾತಾಡಲಿಕ್ಕೆ ಹುರುಪುಗೊಳಿಸುವದೇ ಈ ಅವಧಿಯಲ್ಲಿ ಮಹತ್ವ

ವಾದದ್ದು. ಸರಿಯಾಗಿ ಮಾತಾಡುವದನ್ನು ಆದಷ್ಟು ಶೀಘ್ರ ಕಲಿಸಬೇಕೆಂದು ಅವರ ಮಾತುಗಳನ್ನು ಶಿಕ್ಷಿಕೆಯು ತಾನು ನುಡಿಯಬಾರದು.

ಹೀಗೆ ತಮಗೆ ಮಾತಾಡಲಿಕ್ಕೆ ಬರುವದೆಂಬ ವಿಶ್ವಾಸವು ಅವರಲ್ಲಿ ಮೂಡಿ ದೃಢವಾದ ಬಳಿಕ ೧ ವರ್ಗದಲ್ಲಿಯೇ ಈ ಬಗ್ಗೆ ಹೆಚ್ಚು ರೂಢಿಯನ್ನು ಕೊಡಲಿಕ್ಕಾಗಿ ಕೆಲವು ಉಪಾಯಗಳನ್ನು ಮಾಡಬಹುದು. ಇವುಗಳಲ್ಲಿ ಇಡಿ ವರ್ಗದ ಮುಂದೆ ಅವರಿಗೆ ಮಾತಾಡಗೊಡುವದು ಮೊದಲನೆಯದು. ಮೊದಮೊದಲು ಇಡಿ ವರ್ಗವನ್ನು ಸುತ್ತಲು ಕೂಡಿಸಿಗೊಂಡು ಒಬ್ಬ ಹುಡಿಗೆಗೆ ಏನಾದರೊಂದು ಕೆಲಸವನ್ನು ಮಾಡಹೇಳಿ (ಉದಾ: ಬೀಸುವದು) ಶಿಕ್ಷಿಕೆಯು ಆಕೆಗೆ ನೀನು ಏನು ಮಾಡುತ್ತಿರುವಿ ? ಎಂದು ಕೇಳುವರು. ಆ ಹುಡಿಗೆ ನಾನು ಬೀಸುತ್ತಿರುವೆನು, ಎಂದು ಹೇಳುವಳು. ಆ ಹುಡಿಗೆಯು ವರ್ಗಕ್ಕೆ ' ನಾನು ಏನು ಮಾಡುತ್ತಿರುವೆನು ? ಎಂದು ಕೇಳುವಳು. ನೀನು ಬೀಸುತ್ತಿರುವಿ ಎಂದು ಒಬ್ಬಳು ಹೇಳುವಳು. ಆ ಬಳಿಕ ನಾನು, ನೀನು, ಅವಳು, ವರ್ತಮಾನ, ಭೂತ, ಭವಿಷ್ಯಕಾಲ ಇವುಗಳ ಉಪಯೋಗವು ಸರಿಯಾಗಿ ಆಗುವಂತೆ ಪ್ರಶ್ನೋತ್ತರಗಳನ್ನು ಮಾಡಿಸಬಹುದು. ಇಂಥ ಕೆಲವು ಪಾಠಗಳಾದ ಬಳಿಕ ಸಾಮಾನುಗಳನ್ನು ಮಾರುವವರಾಗಿ ಬೀದಿಯಲ್ಲಿ ಬರುವವರಾಗಲಿಕ್ಕೆ (ಉದಾ : ಬಳೆತೊಡಿಸುವವರು, ಪಾತ್ರೆಮಾರುವವರು)ಹೇಳಿ ನೀನು ಯಾರು? ಏನುತಂದಿರುವೆ? ಗಂಗೆಯ ಅವ್ವನು ಏನುಕೊಂಡಳು, ಒಂದೊಂದು ಬಳೆಗೆಷ್ಟು ಹೇಳುವಿ? ಇವೇ ಮೊದಲಾದ ಹುಡಿಗೆಯರಿಗೆ ಪರಿಚಯವಿದ್ದ ಪ್ರಶ್ನೋತ್ತರಗಳು ಹೊರಡಲು ಅನುವು ಕೊಡತಕ್ಕದ್ದು. ಸ್ಟೇಶನದಲ್ಲಿ ಚಹ, ಹಣ್ಣು, ಮಿಠಾಯಿಮಾರುವವರು ಬರುವದುಂಟು. ಈ ಬಗ್ಗ ಹುಡಿಗೆಯರು ಮಾತಾಡಬಹುದು.

ಇಂಥ ಕೆಲವು ಪಾಠಗಳಾದ ಬಳಿಕ ಕೆಲವು ಶಬ್ದಗಳನ್ನು ಕ. ಹ. ಮೇಲೆ ಬರೆದು ಅವುಗಳನ್ನು ಉಪಯೋಗಿಸಿ ಮಾತಾಡಲಿಕ್ಕೆ ರೂಢಿ ಮಾಡಿಸತಕ್ಕದ್ದು. ಉದಾ: ಗೊಂಬೆ, ಚಂಡು, ಬಳೆ ಮುಂ. ಈ ಪದ್ಧತಿಯಿಂದ ಬಾಯಿ ನಿಬಂಧವು ಶೀಘ್ರವಾಗಿ ಆರಂಭವಾಗಿ ಆಟದಂತೆ ಸಾಗಿ ಚಿಕ್ಕಮಕ್ಕಳಲ್ಲಿ ಮಾತಾಡುವ ಬಗ್ಗೆ ಆತ್ಮವಿಶ್ವಾಸವು ಹುಟ್ಟುವದು. ಈ ಪರಿಯಿಂದ ೧ ಹಾಗು ೭ ಭಾಗಗಳಲ್ಲಿ ನಿಬಂಧ ಶಿಕ್ಷಣವು ಪ್ರಾರಂಭವಾಗಬಹುದು.

ಇಷ್ಟಾಗುವಷ್ಟರಲ್ಲಿ ವಿದ್ಯಾರ್ಥಿನಿಯರು ಬಾಲಿಕೆಯರ ವರ್ಗದ ೨ ಭಾಗಕ್ಕೆ ಬರಲು ತಕ್ಕವರಾಗಿರುವರು. ಈ ಭಾಗದಲ್ಲಿ ಕೆಲವು ಶಬ್ದಗಳನ್ನು ಬರೆದು ಅವುಗಳ ಸಹಾಯದಿಂದ ಪೂರ್ಣ ಮಾತುಗಳನ್ನು ಆಡಲಿಕ್ಕೆ ಹುರುವು ಕೊಡಬಹುದು. ಉದಾ: ಆಕಳು, ಕರ, ಗವಳಿಗ, ಗಂಗೆ, ಕೂಸು, ಹಾಲು, ಮೊಸರು

ಇವುಗಳ ಸಹಾಯದಿಂದ ಹುಡಿಗೆಯರು (ಇದಕ್ಕೆ ಚಿತ್ರದ ನೆರವು ಇದ್ದರೆ ಒಳ್ಳೆಯದು). ಈ ಆಕಳು ಚಂದವದೆ; ಬದಿಗೆ ಕರ ನಿಂತಿದೆ; ಗವಳಿಗನು ಹಾಲು ಹಿಂಡುವನು; ಗಂಗೆಯು ಕೂಸಿಗೆ ಹಾಲು ಒಯ್ಯುವಳು; ಹಾಲಿನಿಂದ ಮೊಸರು ಮಾಡುವರು ಎಂಬ ಮಾತುಗಳನ್ನು ಹೇಳುವರು. ಇವುಗಳನ್ನು ಪುಸ್ತಕಗಳಲ್ಲಿ ಹುಡುಗರಿಂದ ಬರೆಯಿಸಬಹುದು. ಹೀಗೆ, ಬಾಲಿಕೆಯರ ವರ್ಗದಲ್ಲಿಯೇ ಬಾಯಿ ನಿಬಂಧವೂ ಬರೆಹಮೂಲಕನಿಬಂಧವೂ ಆರಂಭವಾಗುವವು. ವೇಳಾಪತ್ರಿಕೆಯಲ್ಲಿ ನಿಬಂಧಕ್ಕೆಂದು ೨ ತಾಸು ಕಾಲವು ಕಾಯ್ದಿಡಲ್ಪಟ್ಟಿರುವದು. ಆದರೆ ಈ ವಿಷಯವನ್ನು ಎಲ್ಲ ಪಾಠಗಳಿಗೆ ಸಂಬಂಧಿಸಿ ಕಲಿಸಲು ತೆರವಿರುವದೆಂಬದನ್ನು ಶಿಕ್ಷಕರು ಲಕ್ಷ್ಯದಲ್ಲಿಡತಕ್ಕದ್ದು.

ಮೊದಲನೆಯ ಇಯತ್ತೆಯಲ್ಲಿ ಚಿತ್ರವನ್ನು ತೋರಿಸಿ ಅದರಲ್ಲಿ ಇರುವದನ್ನು ಮಾತ್ರ ಹೇಳುವ ಕೆಲವು ಪಾಠಗಳನ್ನು ಮಾಡಿಸಬಹುದು. ಇದರಿಂದ ಭಾಷೆಯ ತಕ್ಕ ಉಪಯೋಗವನ್ನು ಮಾಡುವ ರೂಢಿಯಾಗತಕ್ಕದ್ದು. ಬಳಿಕ ಚಿತ್ರಗಳನ್ನು (ಒಂದು, ಎರಡು, ಮೂರು) ಉಪಯೋಗಿಸಿ ಅವು ಹೇಳುವ ಕಥೆಯನ್ನು ಕಟ್ಟಿಸಬಹುದು. ಇದಲ್ಲದೆ ಹುಡಿಗೆಯರಿಗೆ ಭೂಗೋಲ, ಸೃಷ್ಟಿಜ್ಞಾನ ಈ ವಿಷಯಗಳಲ್ಲಿ ಬಂದ ಜನರ ಬಗ್ಗೆ, ವನಸ್ಪತಿಗಳ ಬಗ್ಗೆ ಮಾತಾಡಲಿಕ್ಕೆ ಉತ್ತೇಜನ ಕೊಡತಕ್ಕದ್ದು. ಹೀಗೆ ಮಾತಾಡುವಾಗ ಮೊದಲು ಏನು ಹೇಳತಕ್ಕದ್ದು, ಬಳಿಕ ಏನು ಹೇಳತಕ್ಕದ್ದು ಎಂಬದರ ಕಲ್ಪನೆಯು ಹುಡಿಗೆಯರಿಗೆ ಹೊಳೆಯುವದು. ಈ ಪಾಠಗಳು ಸಣ್ಣವಿರಬೇಕೆಂಬದನ್ನೂ ಹುಡುಗರಿಗೆ ಅವರು ಹೇಳುವ ಬಗ್ಗೆ ಉತ್ತೇಜನ ಕೊಡುವದು ಮಹತ್ವವಾದದ್ದೆಂಬದನ್ನೂ ಅವರು ಬಿಡುವ ಮಾತುಗಳ ಕಡೆಗೆ ನಾವು ಲಕ್ಷ್ಯ ಎಳೆಯಬಾರದೆಂಬದನ್ನೂ ಮರೆಯಲಾಗದು. ಈ ಅವಧಿಯಲ್ಲಿಯೂ ಉತ್ತೇಜನ ಕೊಡುವದರಿಂದ ಮಾತಾಡುವ ಹಾಗು ಬರೆಯುವ ಕಲೆಯು ಮುಂದುವರೆಯುವಂತೆ ಅವರ ಕೊರತೆಗಳನ್ನು ತೋರಿಸಿ ಅವರ ಹುರುಪನ್ನು ಕಳೆಯುವದರಿಂದ ಉದ್ದೇಶವು ಸಫಲವಾಗಲಾರದೆಂಬದನ್ನು ಶಿಕ್ಷಕರು ಮರೆಯಕೂಡದು.

ಎರಡನೆಯ ಇಯತ್ತೆಯಲ್ಲಿ ಶಿಕ್ಷಕರು ಸಣ್ಣ ಕಥೆಗಳನ್ನು ಹೇಳಿ ಅದರ ಸಾರಾಂಶವನ್ನು ಹುಡುಗರಿಂದ ತಿರುಗಿ ಹೇಳಿಸಬಹುದು; ಹಾಗು ಅದನ್ನು ಬರೆಯಿಸಬಹುದು. ಬಳಿಕ ಇವೇ ಕಥೆಗಳಲ್ಲಿ ಬಂದ ವಿಷಯಗಳನ್ನು ಕುರಿತು ಹುಡುಗರಿಂದ ಸಂಭಾಷಣ ಮಾಡಿಸಬಹುದು. ಉದಾ: ನರಿಯೂ ಕುರಿಮರಿಯೂ ಈ ಕಥೆಯನ್ನು ಹೇಳಿ, ಬರೆದ ಬಳಿಕ ಹುಡುಗರಲ್ಲಿ ಒಬ್ಬನು ನರಿಯಾಗಿಯೂ ಒಬ್ಬನು ಕುರಿಮರಿಯಾಗಿಯೂ ಬರೇ ಸಂಭಾಷಣ ಮಾಡಬಹುದು. ಈ ಸಂಭಾಷಣವನ್ನು

ಬರೆಯುಬಹುದು. ಇಂಥ ಕೆಲವು ಪಾಠಗಳಾದ ಬಳಿಕ ಶಿಕ್ಷಕನು ಕರಿಹಲಗೆಯ ಮೇಲೆ ಒಂದು ಸಣ್ಣ ಕಥೆಯನ್ನು ಬರೆಯುವಾಗ ಅದರೊಳಗಿನ ಕೆಲವು ಮುಖ್ಯ ಶಬ್ದಗಳನ್ನು ಬಿಟ್ಟು ಬಿಡಬಹುದು. ಇವುಗಳನ್ನು ಪೂರ್ಣಮಾಡಿ ಹುಡುಗರು ಆ ಕಥೆಯನ್ನು ಹೇಳಬಹುದು. ಈ ಪಾಠದಲ್ಲಿ ಯೋಗ್ಯ ಶಬ್ದಗಳ (ನಾಮ, ಸರ್ವನಾಮ, ವಿಶೇಷಣಗಳ) ಉಪಯೋಗದ ರೂಢಿಯು ಚೆನ್ನಾಗಿ ಆಗುವದು. ಈ ಎಕ್ಸರಸಾಯಿಜವು ಕಥೆಗಳ ಮುಖಾಂತರವೇ ಚೆನ್ನಾಗಿ ನಡೆಯುವದೆಂದು ಅನುಭವದಿಂದ ಗೊತ್ತಾಗಿರುವದು. ಇವಲ್ಲದೆ ಹುಡುಗರಿಂದ ಅವರು ಓದಿದ ವಾಚನ ಪುಸ್ತಕದೊಳಗಿನ ಕಥೆಗಳ ಹಾಗು ಕವಿತೆಗಳ ಸಾರಾಂಶವನ್ನೂ ಬರೆಯಿಸಬಹುದು.

ಮೂರನೆಯ ಇಯತ್ತೆಯಲ್ಲಿ ಕಥಾಭಾಗವನ್ನು ಹೇಳಿ ಇಲ್ಲವೆ ಬರೆದು ಪೂರ್ಣ ಮಾಡಿಸಬಹುದು. ಈ ಬಗೆಯ ಪಾಠಗಳಲ್ಲಿ ಹುಡುಗರ ಕಲ್ಪನಾಶಕ್ತಿಗೆ ಒಳ್ಳೇ ರೂಢಿಕೊಟ್ಟಂತಾಗುವದು. ಹುಡುಗರು ಒಳ್ಳೇ ಆತುರದಿಂದ ಕೆಲಸಕ್ಕೆ ತೊಡಗುವರು. ಉದಾ: ಒಂದು ಕಾಗೆಯು ಮಾಂಸದ ಕರಣೆಯನ್ನು ಕಚ್ಚಿಕೊಂಡು ಒಂದು ಗಿಡದ ಟೊಂಗೆಯಮೇಲೆ ಕೂತಿತು. ಇದನ್ನು ನೋಡಿ ಮಾಂಸವನ್ನು ಅಪಹರಿಸಬೇಕೆಂದು ಒಂದು ಠಕ್ಕ ನರಿಯು ಅಲ್ಲಿಗೆ ಬಂದು ಕಾಗೆಯ ಬಣ್ಣವನ್ನೂ ಮೂಗನ್ನೂ ಬಣ್ಣಿಸಿತು. ಕಾಗೆಯು ಇದಕ್ಕೆ ಉಬ್ಬಿ ನರಿಯ ಕಡೆಗೆ ಡೌಲಿನಿಂದ ನೋಡಹತ್ತಿತು. ಮುಂದೆ ಏನೇನಾಯಿತು ? ಆ ಬಳಿಕ ಹುಡಿಗೆಯರು ಓದದೆ ಇರುವ ಸುಲಭವಾದ ಕವಿತೆಯನ್ನು ಕ. ಹ. ಮೇಲೆ ಬರೆದು ಅದರ ಸಾರಾಂಶವನ್ನು ಹೇಳಲಿಕ್ಕೂ ಬರೆಯಲಿಕ್ಕೂ ರೂಢಿಮಾಡಿಸಬೇಕು. ಇಂಥ ಕವಿತೆಗಳು ಇತ್ತಲಾಗಿ ಬೇಕಾದಷ್ಟು ಪ್ರಸಿದ್ಧವಾಗಿರುವವು. ಇದೇ ಇಯತ್ತೆಯಲ್ಲಿ ಕಥೆಗಳನ್ನು ನಾಟ್ಯರೂಪವಾಗಿ ಆಡಿಸಬಹುದು. ಮೇಲೆ ಎರಡನೆಯ ಇ. ಲ್ಲಿ ಕಥೆಗಳಿಂದ ಸಂಭಾಷಣೆಗಳನ್ನು ಕಟ್ಟುವ ರೂಢಿಯು ಹೇಳಿದೆ. ಈ ಇಯತ್ತೆಯಲ್ಲಿ ಸ್ವಲ್ಪ ದೊಡ್ಡ ಕಥೆಗಳನ್ನು ನಾಟಕದಂತೆ ಆಡಿಸಬಹುದು. ಇದನ್ನು ಮಾಡುವಾಗ ಶಿಕ್ಷಕರು ಸಹಾಯಮಾಡುವ ಕಾರಣವಿಲ್ಲ.

ನಾಲ್ಕನೆಯ ಇಯತ್ತೆಯಲ್ಲಿ ಅಚೇತನ ವಸ್ತುಗಳನ್ನು ಸಚೇತನವೆಂದು ಭಾವಿಸಿ ಹುಡುಗರು ಸಂಭಾಷಗಳನ್ನು ಮಾಡಬಹುದು ; ಹಾಗು ಬರೆಯಬಹುದು. ಉದಾ: ಮಾವಿನಗಿಡ, ಜಾಲಿಯಮರ. ಇದರಲ್ಲಿ ಕಲ್ಪನಾಶಕ್ತಿಗೂ ವಾಕ್ಯರಚನೆಗೂ ಭಾವನೆಗಳನ್ನು ಹೊರಗೆಡವಲಿಕ್ಕೂ ಹುಡುಗರಿಗೆ ಒಳ್ಳೇ ಆಸ್ಪದ ದೊರೆಯುವದು. ಇಂಥ ಪಾಠಗಳಲ್ಲದೆ ಚಿತ್ರವಾಚನ, ಇತಿಹಾಸ-ಭೂಗೋಲ ಪಾಠಗಳಲ್ಲಿ ಬಂದ ಜನರ ಹಾಗು ವ್ಯಕ್ತಿಗಳ ವರ್ಣನ ಮೊದಲಾದವುಗಳನ್ನು ಹೇಳುವ ಹಾಗು ಬರೆಯುವ ರೂಢಿಮಾಡಿಸಬಹುದು. ಕೊನೆಗೆ ಈ ಇಯತ್ತೆಯಲ್ಲಿ ಸಣ್ಣ

ಸಣ್ಣ ವ್ಯವಹಾರದ ಪತ್ರಗಳನ್ನು ಬರೆಯುವ ರೂಢಿಮಾಡಿಸಬಹುದು. ಇನ್ನ
ಗಳಲ್ಲಿ ಹೇಳುವ ವಿಷಯಗಳು, ಅವುಗಳ ಬಗ್ಗೆ ಯಥಾಯೋಗ್ಯವಾಗಿ ಮಾಡು
ವ್ಯಾಕರಣಗಳು, ವಿರಾಮಚಿಹ್ನಗಳ ಉಪಯೋಗ ಈ ಸಂಗತಿಗಳ ಕಡೆಗೆ ಹುಡುಗ
ಲಕ್ಷ್ಯವನ್ನು ಎಳೆಯಬಹುದು. ಸಾಮಾನ್ಯವಾಗಿ ನಮ್ಮಲ್ಲಿ ಪತ್ರಬರಹವೆಂದ
ಲಾವಣಿಪತ್ರ, ಮನೆ ಹೊಲಗಳನ್ನು ಬರೆಯಿಸಿಕೊಳ್ಳುವ ಪತ್ರ, ಪ್ರಾಮಿಸ
ನೋಟ ಮೊದಲಾದವುಗಳ ಮಾದರಿಗಳನ್ನು ಹುಡುಗರಿಗೆ ಬರಕೊಳ್ಳಹೇಳಿ ಬರೆದು
ಪಾಠಮಾಡ ಹೇಳುವದುಂಟು. ಇದಕ್ಕೂ ಪತ್ರಬರೆಹಕ್ಕೂ ಏನೂ ಸಂಬಂಧವಿಲ್ಲ
ಸ್ನೇಹಿತರಿಗೆ, ತಾಯ್ತಂದೆ ಅಣ್ಣತಮ್ಮ ಮೊದಲಾದ ಆಪ್ತರಿಗೆ, ಶಿಕ್ಷಕ
ಅಂಗಡಿಕಾರರು ಮೊದಲಾದವರಿಗೆ ಬರೆಯುವ ಪತ್ರಗಳನ್ನು ಸ್ವಲ್ಪದರಲ್ಲಿ ಯಥಾ
ಯೋಗ್ಯವಾಗಿ ಬರೆಯುವದೇ ನಿಬಂಧಕ್ಕೆ ಸಂಬಂಧಿಸುವದು. ನಮ್ಮಲ್ಲಿ ಪತ್ರದಲ್ಲಿ
ಒಕ್ಕಣಿಕೆಗಳನ್ನು ಬಹು ವಿವರವಾಗಿಯೂ (ಅಶುದ್ಧವಾಗಿಯೂ) ಬರೆಯಿಸು
ದುಂಟು. ಉದಾ: ತೀರ್ಥಸ್ವರೂಪ ಪರವಂದ್ಯ ತಂದೆಯವರ ಪಾದಪದ್ಮಗಳಿ
ಬಾಲಕನಾದ ಚಿ॥ ರಘುನಾಥನು ಮಾಡುವ ಶಿರಸಾಷ್ಟಾಂಗ ನಮಸ್ಕಾರಗಳು
ಇಲ್ಲಿ ಎಲ್ಲರೂ ಕ್ಷೇಮ. ಅಲ್ಲಿನ ಸುಕ್ಷೇಮವನ್ನು ಬಾಲಕನಿಗೆ ತಿಳಿಸಿ ಕೃತಾರ್ಥ
ಗೊಳಿಸಬೇಕು. ಈಗ ಪತ್ರಬರೆಯಲಿಕ್ಕೆ ಕಾರಣವೇನೆಂದರೆ:— ಮುಂ. ಇದೆಲ್ಲ
ವನ್ನು ಉಭಯ ಕ್ಷೇಮ. ತಂದೆಯವರಿಗೆ ನ॥ಳು. ಎಂಬ ಮೂರು ನಾಲ್ಕು ಶಬ್ದ
ಗಳಲ್ಲಿ ಮುಗಿಸಬಹುದು.

ಮೇಲಿನ ನಾಲ್ಕು ಇ. ಗಳ ನಿಬಂಧ ಶಿಕ್ಷಣದ ವಿವರಣೆಯಲ್ಲಿ ಬಾಯಿ
ಮಾತಿನ ನಿಬಂಧವೂ ಬರೆಹ ಮೂಲಕ ನಿಬಂಧವೂ ಕೂಡಿಯೇ ಸಾಗಿರುವವೆಂ
ದನ್ನು ಮರೆಯಲಾಗದು. ಹುಡುಗರಲ್ಲಿ ಇವುಗಳನ್ನು ರಚಿಸುವ ಜಾಣ್ಮೆಯ
ಹೆಚ್ಚಾದಂತೆ ಹೆಚ್ಚಿನ ವಿಷಯಗಳೂ ಬಗೆ ಬಗೆಯ ಪಾಠಗಳೂ ಇರುವ ಮೂಲ
ವಿಷಯ ಶಿಕ್ಷಣದಲ್ಲಿ ಯಾವಾಗಲೂ ನಾವೀನ್ಯತೆಯು ಸೇರಿ ಬೇಸರಕೆ
ಇಂಬಿಲ್ಲದಾಗುವದು.

ಇನ್ನು ನಿಬಂಧರಚನೆಯ ಪಾಠದಲ್ಲಿ "ತಿದ್ದುವ" ಯೋಜನೆಯ ಬಗ್ಗೆ ಕೆಲ
ಮಾತುಗಳನ್ನು ಹೇಳುವದು ಅವಶ್ಯವಿರುವದು.

ಬಾಲಕರ ವರ್ಗದಲ್ಲಿ "ತಿದ್ದುವ" ಬಗ್ಗೆ ಶಿಕ್ಷಕರು ಬಹಳ ಎಚ್ಚರದಿಂದ
ಬೇಕೆಂದು ಈ ಮೊದಲೇ ಹೇಳಿದೆ. ಶಿಕ್ಷಕರು ತಮ್ಮ ತಪ್ಪುಗಳನ್ನು ತಿದ್ದುವ
ರೆಂಬ ಭಾವನೆಯು ಆ ಸಣ್ಣ ಬಾಲಕರ ಮನದಲ್ಲಿ ಬಂದ ಕೂಡಲೆ ಅವರ ಬಾಯಿ
ಕಟ್ಟಾಗುವದು. ಆಗ ತಿದ್ದುವದು ನಮ್ಮ ಉದ್ದೇಶವಿರುವದಿಲ್ಲ; ಮಾತಾಡಲಿಕ್ಕೆ
ಉತ್ತೇಜನ ಕೊಡುವದೇ ನಮ್ಮ ಗುರಿಯಾಗಿರಬೇಕು. ಸ್ವಲ್ಪವೂ ಅಂಜಿಕೆ

ಯಿಲ್ಲದೆ ಹುಡುಗರಿಗೆ ಮನಬಂದಂತೆ ಮಾತಾಡಗೊಡಿರಿ. ತಿದ್ದುವದು ಅನಿವಾರ್ಯವೆಂದು ತೋರಿದರೆ ಒಳ್ಳೇ ಸ್ನೇಹಭಾವದಿಂದ ಅವರಿಗೆ ತಿಳಿಯಗೊಡದೆ ತಿದ್ದಿರಿ. ತಿದ್ದುವದರಿಂದ ಶುದ್ಧ ಭಾಷೆಯ ರೂಢಿಯಾಗುವದೆಂಬದನ್ನು ಸ್ವಲ್ಪ ಮರೆಯಿರಿ. ಶುದ್ಧ ಮಾತುಗಳು ಹುಡುಗರಿಂದ ಹೊರಡಬೇಕಾದರೆ "ತಿದ್ದು"ವದಕ್ಕಿಂತ ಶಿಕ್ಷಕರು ಆದಷ್ಟು ಶುದ್ಧ ಭಾಷೆಯನ್ನು ಯಾವಾಗಲೂ ಆಡುತ್ತಿರುವದು ಮೇಲಾದ ಉಪಾಯವು. ಹುಡುಗರು ಅನುಕರಣದಿಂದ ಶುದ್ಧ ಮಾತನ್ನು ಕಲಿಯುವರು.

ಸಣ್ಣ ಹುಡುಗರ ವಾಕ್ಯಗಳಲ್ಲಿ ತಪ್ಪುಗಳಾಗುವದು ಸ್ವಾಭಾವಿಕವು. ವಾಕ್ಯದೋಷಗಳಿಗಿಂತ ಅರ್ಥದೋಷದ ಕಡೆಗೆ ಲಕ್ಷ್ಯಹೋಗಲಿ. ಅರ್ಥವಾಗುವಂತೆ ಹಾಗು ಓದಲಿಕ್ಕೆ ನೆಟ್ಟಗನಿಸುವಂತೆ ಬರೆದ ಅಥವಾ ಹೇಳಿದ ಮಾತುಗಳಿಗೆ ಉತ್ತೇಜನ ಕೊಡುವದರಿಂದ ಆಗುವಷ್ಟು ಲಾಭವು ತಪ್ಪುಗಳನ್ನು ತಿದ್ದುವದರಿಂದ ಆಗುವದಿಲ್ಲ. ಗುಣಗಳನ್ನು ಶ್ಲಾಘಿಸಿರಿ; ದೋಷಗಳ ಬಗ್ಗೆ ಸುಮ್ಮನೆ ಇರುವದು ಒಳಿತು.

ಹುಡುಗರಿಂದ ಅವರು ಬರೆದದ್ದನ್ನು ತಿರುಗಿ ಓದಿಸಿರಿ; ಅವರಿಗೆ ತಮ್ಮ ನಿಬಂಧವು ತಮ್ಮ ಉತ್ತಮ ಪ್ರಯತ್ನದ ಫಲವೆನಿಸುವ ರೂಢಿಮಾಡಿರಿ. ಇದನ್ನು ಸಾಧಿಸಿಕೊಳ್ಳುವದು ಪ್ರತಿಯೊಬ್ಬ ಶಿಕ್ಷಕನ ಕೈಯಲ್ಲಿರುವದು.

ಮೊದಮೊದಲು ಶಬ್ದಗಳ ಅಕ್ಷರಯೋಜನೆ, ವಿರಾಮಚಿಹ್ನ, ಒಂದೇ ಶಬ್ದವನ್ನು ಮೇಲಿಂದ ಮೇಲೆ (ಉದಾ: ಮತ್ತು ಈ ಶಬ್ದವನ್ನು) ಉಪಯೋಗ ಮಾಡುವ ಚಟ, ಇವುಗಳ ಕಡೆಗೆ ಲಕ್ಷ್ಯಕೊಡಿರಿ. ಅಕ್ಷರಯೋಜನೆಯ ದೋಷಗಳನ್ನು ತಿದ್ದಲಿಕ್ಕೆ ತಪ್ಪಿದ ಶಬ್ದಗಳ ಶುದ್ಧರೂಪವನ್ನು ನಿಬಂಧದ ಕೊನೆಗೆ ೩-೪ ಸಾರೆ ಬರೆಯಹೇಳುವ ರೂಢಿಯು ಸಾರ್ವತ್ರಿಕವಾಗಿರುವದು. ಹೀಗೆ ಮಾಡುವದಕ್ಕಿಂತ ಕೊನೆಯ ಒಂದು ಪುಟವನ್ನು ಕಾಯ್ದಿಟ್ಟು ಅದರಲ್ಲಿ ಆಯಾ ಹುಡುಗನು ಮಾಡುವ ಇಂಥ ದೋಷಗಳ ಶುದ್ಧರೂಪವನ್ನು ಒಮ್ಮೆ ಬರೆಯಿಸಿ, ಬಹಳಸಾರೆ ಅವನ್ನು ಓದಿಸಿರಿ. ಇದರಿಂದ ಒಳ್ಳೇ ಪರಿಣಾಮವಾಗಬಹುದು. ಅನೇಕ ಸಾರೆ ಕಥೆಗಳಲ್ಲಿ ಕಠಿಣ ಇಲ್ಲವೆ ಅಪರಿಚಿತ ಶಬ್ದಗಳು ಬರುವವು. ಇವುಗಳನ್ನು ದೃಢಪಡಿಸದೆ ಬರೆಯಗೊಡಬೇಡಿರಿ. ಬರೆಯುವ ಮೊದಲು ಇಂಥ ಶಬ್ದಗಳನ್ನು ಕ. ಹ. ಮೇಲೆ ಬರೆದು ನೋಡಿಕೊಳ್ಳಲಿಕ್ಕೆ ಹೇಳಿರಿ. ತಪ್ಪಿದ ಬಳಿಕ ತಿದ್ದುವದಕ್ಕಿಂತ ತಪ್ಪಾಗದಂತೆ ಎಚ್ಚರಗೊಳ್ಳುವದು ಮೇಲು.

ಒಂದು ಮಾತನ್ನು ಮರೆಯಬೇಡಿರಿ. ನಾವೆಲ್ಲರೂ ಚೆನ್ನಾಗಿ ದುಡಿಯಬೇಕಾದರೆ ಉತ್ತೇಜನವು ಬೇಕೆನ್ನುವೆವಷ್ಟೇ. ಹುಡುಗರಲ್ಲಿಯೂ ಈ ಆಶೆಯು

ಇರುವದು; ಬಲವಾಗಿರುವದು. ಆದ್ದರಿಂದ ಅವರ ಗುಣಗಳನ್ನೇ ಹೆಚ್ಚಿ ಹೇಳಿರಿ. ಇವ್ವಗಳ ಸುಧಾರಣೆಯಾದಂತೆ ಅವಗುಣಗಳೂ ದೋಷಗಳೂ ಕಡಿಮೆ ಯಾಗುವವು; ಹುಡುಗರು ಶ್ರಮಬಟ್ಟು ಬರೆದದ್ದನ್ನೆಲ್ಲ ಶಿಕ್ಷಕನು ಕೆಂಪುಮ ಯಿಂದ ಕಾಟುಹೊಡೆದರೆ ಹುಡುಗರ ಮನಸಿನ ಮೇಲೆ ಕೆಟ್ಟ ಪರಿಣಾಮವಾಗ ವದು. ಅವರಿಗೆ ತಪ್ಪುಗಳನ್ನು ತಿದ್ದಿಕೊಳ್ಳುವ ಮನಸಾಗದು; ಅವರು ಹುರು ಇಲ್ಲದಾಗುವರು; ಬೇಸರದಿಂದ ಕೆಲಸಮಾಡಲಾರಂಭಿಸುವರು.

ಸಿಂಹಳದ್ವೀಪವು

ಈ ಮ್ಯಾಜಿಕ್ ಲ್ಯಾಂಟರ್ನ ಪಾಠದ ದೃಶ್ಯವು ಮೆ. ಉಲ್ಲಾಳ ಸೀನಿಯರ ಅ. ಡಿ ಎ. ಇ. ಧಾರವಾಡರವರಿಂದ ತಾ. ೩-೫-೧೯೩೩ನೆಯ ದಿವಸ ತೋರಿಸಲ್ಪಟ್ಟಿತು. ಇದ ಭೂಗೋಲದ ಜ್ಞಾನವಾಗುವಂತೆ ಚೆನ್ನಾಗಿ ಕೊಡಲ್ಪಟ್ಟಿದ್ದರಿಂದ ಬೋಧಪ್ರದವಾಗಿದೆ ಇದರ ಸಾರಾಂಶವನ್ನು ಸಂಕ್ಷೇಪದಲ್ಲಿ ಕೊಟ್ಟಿರುವೆವು.

ಪ್ರಾಕೃತಿಕ ಸ್ವರೂಪ— ಇದು ದ್ವೀಪವದೆ. ಹಿಂದುಸ್ಥಾನದ ಕಡೆಗಿದ್ದ ಭಾಗ ಚೂಪಾಗಿ ಮುಂದೆ ಗೋಲಾಕಾರವಾಗಿ ದಕ್ಷಿಣಕ್ಕೆ ಅಗಲವಾಗುತ್ತ ಹೋಗಿದೆ. ಪರ್ವ ತಗಳೂ ಅದೇರೀತಿಯಾಗಿ ದಂಡೆಗೆ ಸಮಾಂತರವಾಗಿ ಹಬ್ಬಿವೆ. ಅವು ದಕ್ಷಿಣದ ಕಡೆ ಎತ್ತರವಾಗುತ್ತ ನಡೆದಿವೆ. ದಕ್ಷಿಣದಲ್ಲಿ ಆಡಾಮ್ಸ ಪೀಕವೆಂಬ ಶಿಖರವುಂಟು. ದಂ ಗುಂಟ ಕೊಂಕಣ ಪಟ್ಟಿಯಂತೆ ಬೈಲುಭಾಗವದೆ. ಎತ್ತರವಾದ ಭಾಗದ ತುಂ ಗುಡ ಗಳೂ ಬನಗಳೂ ಹಬ್ಬಿವೆ.

ಸಿಂಹಳದ್ವೀಪದ ಭೂಭಾಗದ ಮೂರು ತುಂಡುಗಳು

(೧) ಸಮುದ್ರ ದಂಡೆಯ ಪ್ರದೇಶದ ಬೈಲು— ಬತ್ತ, ತೆಂಗು, ಯಾಲಕ್ಕಿ ಬೆ ಯುವ ಪ್ರದೇಶ

(೨) ದಂಡೆಗೆ ಸಮಾಂತರವಾಗಿ ಏರುತ್ತ ಒಳಗೆ ಸಾಗಿದ ಗುಡ್ಡದ ಪ್ರದೇಶ,-ಗುಡ್ಡ ಗಳ ಓರೆಯಲ್ಲಿ ಹತ್ತಿಯ ಹೊಲಗಳೂ ದಾಲಚಿನ್ನಿಯ ಬನಗಳೂ ಅವೆ.

(೩) ಗುಡ್ಡಗಾಡು ಶಿಖರದ ಪ್ರದೇಶ,-ಇಲ್ಲಿ ಚಹ, ರಬ್ಬರದ ತೋಟಗಳೂ ಗುಡ್ಡಗಳಲ್ಲಿ ದನ ಮೇಯಿಸುವ ಹುಲ್ಲು ಭೂಮಿಗಳೂ ಅವೆ.

ಮಳೆ—ವಿಷುವೃತ್ತಕ್ಕೆ ೮ ಅಂಶ ಮಾತ್ರ ದೂರ ಇರುವದರಿಂದಲೂ ನೈಋತ್ಯ ಹಾಗು ಈಶಾನ್ಯ ಮನ್ಸೂನಗಾಳಿಗಳ ಮಾರ್ಗದ ನಡುವೆ ಇರುವದರಿಂದಲೂ ದಕ್ಷಿಣಕ್ಕೆ ಎತ್ತರವಾದ ಗುಡ್ಡದ ಪ್ರದೇಶವಿರುವದರಿಂದಲೂ ಬೇಕಾದಷ್ಟು ಮಳೆ ಆಗುವದು. ಎರಡು ಮನ್ಸೂನಗಳ ಮಾರ್ಗದಲ್ಲಿರುವದರಿಂದಲೂ ಆ ಮನ್ಸೂನಗಳ ಕಾಲಮಾನವು ಬೇರೆ ಬೇರೆ ಇರುವದರಿಂದಲೂ ಒಂದೇ ಗುಡ್ಡದ ಒಂದು ಮಗ್ಗಲಲ್ಲಿ ಒಳ್ಳೇ ಮಳೆ ಇರುವಾಗ ಮತ್ತೊಂದು ಮಗ್ಗಲು ತೀರ ಒಣ ಪ್ರದೇಶವಿರುವದು. ಅಲ್ಲಲ್ಲಿಯೂ ಸ್ಥಾನ ಮಹತ್ವಕ್ಕನುಸರಿಸಿ ಮಳೆಯು ಹೆಚ್ಚು ಕಡಿಮೆ ಆಗುವದು. ಗುಡ್ಡದಿಂದ ದಂಡೆಯು ಸಮೀಪವಿರುವದರಿಂದ ನಮ್ಮಲ್ಲಿಯ ಕೊಂಕಣ ಪಟ್ಟಿಯಂತೆ ಸಣ್ಣ ನದಿಗಳು ಮಾತ್ರ ಸಮುದ್ರದ ಕಡೆಗೆ ಹರಿಯುವವು.

ಇಲ್ಲಿ ಕೆರೆಗಳ ಸಂಖ್ಯೆಯೂ ಹೆಚ್ಚು. ಸಣ್ಣ ದ್ವೀಪವಿದ್ದರೂ ಋತುಮಾನವು ಬೇರೆ ಬೇರೆ ಕಡೆಗೆ ಬೇರೆ ಬೇರೆಯಾಗಿರುವ ಕಾರಣವನ್ನು ಹೇಳಿದೆ. ಒಂದೇ ಗುಡ್ಡದ ಬೇರೆ ಬೇರೆ ಕಡೆಯಲ್ಲಿ ಗಿಡಗಳು ಹೂ ಬಿಡುವ ಕಾಲದ ಅಂತರವು ೬ ತಿಂಗಳು ಇರುವದು.

ಬೆಳೆ— ಚಹ, ರಬ್ಬರು, ಸಿಂಕೋನಾ, ಸ್ವಲ್ಪ ಹತ್ತಿ, ದಾಲಚಿನ್ನಿ, ತೆಂಗು, ಮೆಣಸು, ಯಾಲಕ್ಕಿ, ತೊಲೆಗಳು, ಬತ್ತ, ಹಣ್ಣು, ಬಾಳೆಮರಗಳು.

ಉದ್ಯೋಗ— ಒಕ್ಕಲತನ, ಚಹ, ರಬ್ಬರು ಸಿಂಕೋನಾಗಳ ವ್ಯವಸಾಯ ಮೀನಹಿಡಿಯುವದು, ಹಗ್ಗಹೊಸೆಯುವದು, ಬುಟ್ಟಿಹೆಣೆಯುವದು, ಆನೆಹಿಡಿದು ಸಾಕುವದು, ಉಪ್ಪು ತಯಾರಿಸುವದು, ತೊಲೆಕಡಿಯುವದು, ಸ್ವಲ್ಪ ಖನಿಜದ ಹೋರೆ, ಮುತ್ತುತೆಗೆಯುವದು, ಬೇಟೆ ಆಡುವದು, ಆಭರಣಮಾಡುವದು, ನೆಯ್ಯುವದು.

ಜನಾಂಗ— ಇಲ್ಲಿಗೆ ಸುಮಾರು ೨॥ ಸಾವಿರ ವರ್ಷಗಳ ಹಿಂದೆ ಬಂಗಾಲದ ಕಡೆಯಿಂದ ಜನರು ಬಂದರು. ಅವರೇ ಸಿಂಘಲೀ ಎಂಬ ಜನಾಂಗದವರು. ಮೂಲ ನಿವಾಸಿಗಳು ವೆದ್ದಾ ಎಂಬ ಹೆಸರಿನವರು. ಗುಡ್ಡದಲ್ಲಿ ಆಜಾನುಬಾಹುಗಳಾಗಿರುವರು. ಇವರು ಬೇಟೆ ಆಡುವದರಲ್ಲಿಯೂ ಬಿಲ್ಲುಹೊಡೆಯುವದರಲ್ಲಿಯೂ ಕುಶಲರು. ಊರಲ್ಲಿ ವಾಸಮಾಡಿದ ಮೂಲನಿವಾಸಿಗಳು ಒಕ್ಕಲತನ ಮಾಡುವರು. ಮದ್ರಾಸ ಇಲಾಖೆಯಿಂದ ಇಲ್ಲಿಗೆ ಒಕ್ಕಲಾಗಿ ಬಂದವರೇ ತಮಿಳರೆಂಬ ಜನಾಂಗದವರು. ಅವರು ಕೂಲಿ ಮಾಡಿ ಉಪಜೀವಿಸುವರು. ಸಿಂಹಲದ್ವೀಪದಲ್ಲಿ ಇವರ ಸಂಖ್ಯೆ ಹೆಚ್ಚಾಗಿದೆ.

ಇಲ್ಲಿಗೆ ಪೋರ್ತುಗೀಜ, ಇಂಗ್ಲಿಷ ಡಚ್ಚ ಜನಾಂಗಗಳು ಒಂದಾನೊಂದು ಕಾಲಕ್ಕೆ ೧೬ನೇ ಶತಮಾನದಿಂದ ಬರತೊಡಗಿದ್ದದರಿಂದ ಇಲ್ಲಿ ಕಾಣುವರು. ಚಹ ರಬ್ಬರಿನ ತೋಟಗರೂ ವ್ಯಾಪಾರಿಗಳೂ ಯುರೋಪಿಯರು ಆಗಿರುವರು.

ಈ ಪ್ರಕಾರ ಬೇರೆ ಬೇರೆ ಜನಾಂಗದವರಿರುವದರಿಂದ ಉಡಿಗೆ ತೊಡಿಗೆಗಳು ಭಿನ್ನ ಭಿನ್ನವಾಗಿರುವವು. ಉಷ್ಣ ಹವೆ ಇರುವದರಿಂದ ಒಟ್ಟಿನ ಮೇಲೆ ಮೈ ಮೇಲೆ ಬಟ್ಟೆಗಳಿರುವದು ಸ್ವಲ್ಪ. ಯುರೋಪೀಯರು ಮಾತ್ರ ತಮ್ಮ ದೇಶದ ಪದ್ಧತಿಯಂತೆ ಡ್ರೆಸ್ ಮಾಡಿಕೊಳ್ಳುವರು. ಮಿಶ್ರವರು ತಲೆತುಂಬ ಕೂದಲಬಿಡುವರು. ಸಿಂಘಲೀ ಜನರು ತ್ರಿಕೋನಾಕೃತಿಯುಳ್ಳ ಹಣಿಗೆಗಳನ್ನು ತಲೆಗೂದಲಲ್ಲಿ ಸೇರಿಸಿಕೊಳ್ಳುವರು. ಅದು ಇವರಿಗೆ ಆಭರಣದಂತೆ ಇರುವದು.

ಕೆಲವರು ಕ್ಯಾಂಬಿ ಎಂಬ ಒಂದೇ ವಸ್ತ್ರವನ್ನು ಟೊಂಕಕ್ಕೆ ಸುತ್ತುವರಿದುಕೊಳ್ಳುವರು. ಕೆಲವರು ಇದಲ್ಲದೆ ಜಾಕೀಟ ಹಾಕಿಕೊಳ್ಳುವರು. ಅದು ನಮ್ಮಲ್ಲಿಯ ಪೋಲಕದಂತೆ ಕಾಣುವದು. ಗಂಡಸರು ಕೆಲವರು ಗಡ್ಡ ಬೆಳಸುವರು. ಸಿಂಘಲೀ ಜನರು ಉಷ್ಣ ಹವೆಯು ಮೂಲಕ ಬೈಲಿನಲ್ಲಿ ಕೂತು ಕೆಲಸಮಾಡುವದೇ ಬಹಳ. ಶಾಲೆಗಳು ಸಹ ಗಿಡದ ಕೆಳಗೆ ನಡೆಯುವವು. ಮಳೆ ಬಂದಾಗ ಮಾತ್ರ ಒಳಸೇರುವದಕ್ಕಾಗಿ ಇಮಾರತುಗಳು ಇರುವವು.

ಧರ್ಮ—ಬೇರೆ ಬೇರೆ ಜನಾಂಗದವರಿರುವದರಿಂದ ಭಿನ್ನ ಭಿನ್ನ ಧರ್ಮಗಳೂ ಗುಡಿ ಮಸೀದೆಗಳೂ ಕಾಣುವವು. ಹಿಂದಕ್ಕೆ ಬೌದ್ಧಧರ್ಮವು ಇಲ್ಲಿ ಪ್ರಚಾರದಲ್ಲಿ ಬಂತು. ಎಲ್ಲೆಲ್ಲಿ ನೋಡಿದರೂ ಬುದ್ಧನ ಮೂರ್ತಿಗಳೂ ಸ್ತೂಪಗಳೂ ಬೌದ್ಧಮಾದರಿಯ ಡಗೋಬಾಗಳು ಕಣ್ಣಿಗೆ ಬೀಳುವವು. ಪ್ರತಿಯೊಂದು ಗುಡಿಯಲ್ಲಿ ಬುದ್ಧನ ಎಲುವನ್ನಾಗಲಿ, ಕೂದಲನ್ನಾಗಲಿ ಹುಗಿದಿಟ್ಟ ಗೋಲಾಕೃತಿಯ ಇಮಾರತೇ ಡಗೋಬಾ ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವದು. ಬೌದ್ಧರ ಧರ್ಮಸೂಚಕವಾದ ಹಳೇ ಆಲದ ಮರಗಳು ಬುದ್ಧನ ಸ್ಮಾರಕಗಳಾಗಿ ಅಲ್ಲಲ್ಲಿ ತೋರುವವು. ಅವು ೨ ಸಾವಿರ ವರ್ಷಗಳ ಕೆಳಗಿನವೆಂದು ಉದ್ಭಿಜ್ಜ ಶಾಸ್ತ್ರಜ್ಞರು ಹೇಳುವರು.

ಪ್ರವಾಸದ ಸಾಧನಗಳು— ಉಗೆಬಂಡಿ-ಕೋಲಂಬೋದಿಂದ ಎಲ್ಲ ಕಡೆಗೆ ರೇಲ್ವೆಗಳು ಹೋಗಿರುವವು. ದಕ್ಷಿಣಕ್ಕೆ ಗ್ಯಾಲೀ ಬಂದರದ ವರೆಗೂ ಉತ್ತರಕ್ಕೆ ಅನುರಾಧಾಪುರದವರೆಗೂ ಅಲ್ಲಿಂದ ಮುಂದೆ ಜಾಫನಾದವರೆಗೂ ರೇಲ್ವೆಮಾರ್ಗವಿದೆ.

ಉಗೆಹಡಗಗಳು ಜಗತ್ತಿನ ಎಲ್ಲ ಭಾಗಗಳಿಂದ ಕೋಲಂಬೋ, ಗ್ಯಾಲೀ ಬಂದರಗಳಿಗೆ ಬರುವವು. ಕೋಲಂಬೋ ಬಂದರದಲ್ಲಿ ಹಡಗಗಳಿಗೆ ಕಲ್ಲಿದ್ದಲಿ ತುಂಬುವರು. ಅದು ಪಡಮೂಲೆಯಿದ್ದಂತೆ ಅದೆ.

ರಿಕ್‌ಷಾ ಎಂಬ ಬಂಡಿಗಳು ಮನುಷ್ಯವಾಹಕವಾಗಿರುವವು. ಒಳಗೆ ಜನರನ್ನು ಕೂಡಿಸಿಕೊಂಡು ಜಪಾನದ ಪದ್ಧತಿಯಂತೆ ಒಬ್ಬ ಮನುಷ್ಯನು ವೇಗದಿಂದ ಓಡುವನು.

ಎಲಿಯು ದರವು ತೀರ ಸ್ವಲ್ಪ. ಎರಡೆತ್ತಿನ ಬಂಡಿಗಳು ಕೊಲ್ಲಾರಿಹಾಕಿಕೊಂಡು ವಾಸಮಾಡುವವು. ಕೋಣಗಳು ಒಕ್ಕಲತನಕ್ಕೆ ಉಪಯೋಗಿಸಲ್ಪಡುವವು. ದೊಡ್ಡ ಟ್ಟಣಗಳಲ್ಲಿ ಟ್ರಾಮವೇ ಗಾಡಿಗಳೂ ಇರುವವು. ನಮ್ಮಲ್ಲಿಯಂತೆ ಕಾರಾಯಂತ್ರಗಳು ರುವದೂ ಸಹಜವೇ.

ದೊಡ್ಡಪಟ್ಟಣಗಳೂ ಪ್ರಸಿದ್ಧ ಸ್ಥಳಗಳೂ

ನುವೆರಾ ಎಲಿಯಾ— ತಂಪುಸ್ಥಳ. ಇದು ಎತ್ತರ ಪ್ರದೇಶವಿರುವದರಿಂದ ಮ್ಲಾ ಉಟಕಮಂಡಗಳಂತೆ ಗವ್ಹರ್ನರರು ಬೇಸಿಗೆ ಕಾಲಕ್ಕೆ ಹೋಗುವ ಸ್ಥಳ ಗಿದೆ. **ಕೋಲಂಬೋ**— ಜಗತ್ತಿನ ಪಡಮೂಲೆಯ ಬಂದರ. ಕೋಲಂಬೋದ ನ್ನಾಡು ಬೆಳೆಯುಳ್ಳದ್ದು ಇದ್ದದರಿಂದ ಮುಂಬಯಿಯಂತೆ ಪ್ರಸಿದ್ಧವದೆ. **ತ್ರಿಂಕೋ ಮಾಲಿ**— ಸ್ವಾಭಾವಿಕ ಬಂದರ. ಹಿಂದಕ್ಕೊಮ್ಮೆ ಬ್ರಿಟಿಶರ ಹಡಗುಪಡೆಯ ಸ್ಥಳವು. ಸು ದಾರಿಯಲ್ಲಿ ಇಲ್ಲದ್ದರಿಂದಲೂ ಹಿನ್ನಾಡು ಬಂಜೆ ಭೂಮಿಯಾದ್ದರಿಂದಲೂ ಹಿಂದೆ ತ್ತು. **ಕ್ಯಾಂಡಿ**—ಹಳೇರಾಜಧಾನಿ, ೨೧೦೦ ಫೂ. ಎತ್ತರವಾದ ಬೆಟ್ಟಗಳ ಮೇಲೆ ಅದೆ. ಗ ಬೌದ್ಧರ ಕ್ಷೇತ್ರಸ್ಥಳ. ಕ್ಯಾಂಡಿಯಲ್ಲಿ ಪುರಾತನಕಾಲದ ನ್ಯಾಯ ಸಭಾಮಂಟಪವು ಗಲೂ ನೆಟ್ಟಗೆ ಅದೆ. ಇದನ್ನು ಪುರಾತನಕಾಲದ ಅರಸನು ಕಟ್ಟಿಸಿದ್ದಾನೆ. ಗ್ಯಾಲಿ— ಇದಾದರೂ ಬಂದರಸ್ಥಳ. ಮೀನುಗಾರರು ಮೀನು ಹಿಡಿಯುವರು.

ಶಿಕ್ಷಣದ ಬಗ್ಗೆ ಪ್ರಮುಖರ ಅಭಿಪ್ರಾಯಗಳು

ಈ ಬೇಸಿಗೆಯ ಸೂಟಿಯಲ್ಲಿ ಧಾರವಾಡದಲ್ಲಿ ೧೧ನೆಯ ಅಖಿಲಭಾರತ ವೀರಶೈವ ಮಹಾಸಭೆಯು ಕೂಡಿತ್ತು. ಇದರಲ್ಲಿ ವೀರಶೈವ ಶಿಕ್ಷಣ ಸಂಮ್ಮೇಲನವು ನೆರೆದದ್ದು ಇದೇ ಮೊದಲನೆಯ ಸಾರೆ. ಈ ಸಭೆಗಳಲ್ಲಿ ಕರ್ನಾಟಕದ ಪ್ರಮುಖ ಲಿಂಗಾಯತ ವಿದ್ವಾಂಸರು ಸದ್ಯದ ಶಿಕ್ಷಣ ಪ್ರಪಂಚದಲ್ಲಿ ನಡೆವಿರುವ ವಿಶೇಷ ಸಂಗತಿಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಕೊಟ್ಟಿರುವರು. ಕರ್ನಾಟಕದಲ್ಲಿ ಲಿಂಗವಂತರೇ ಬಹುಜನರಿರುವ ಮೂಲಕ ಇವರ ಆಲೋಚನೆಗಳು ನಮ್ಮ ನಾಡಿನ ಸದ್ಯದ ಶಿಕ್ಷಣಕ್ಕೆ ಪೂರ್ಣವಾಗಿ ಅನ್ವ ಯಿಸುವವೆಂದು ಹೇಳಬಹುದು. ಆದ್ದರಿಂದ ಪ್ರಚಲಿತವಾದ ಮಹತ್ವದ ವಿಷಯಗಳ ಬಗ್ಗೆ ಈ ಮಹನೀಯರ ಅಭಿಪ್ರಾಯಗಳನ್ನು ನಮ್ಮ ವಾಚಕರ ಅವಗಾಹನೆಗಾಗಿ ಇಲ್ಲಿ ಕೊಡುವೆವು.

ಶಿಕ್ಷಣ ಸಮ್ಮೇಲನದ ಪ್ರಾಸ್ತಾವಿಕ ಭಾಷಣವನ್ನು ಶ್ರೀ ಶಿದ್ದಪ್ಪ ಹೊಸಮನಿ ಬಿ. ಎ. ಎಲ್. ಎಲ್. ಬಿ. ಇವರು ಮಾಡಿದರು. ಸದ್ಯದ ಶಿಕ್ಷಣವು ಯಾವ ದಿಶೆಯಲ್ಲಿ ಮುಖ್ಯವಾಗಿ ಸಾಗಬೇಕೆಂಬ ಬಗ್ಗೆ ಇವರು ನುಡಿದದ್ದು :—

ಸದ್ಯಕ್ಕೆ ಪ್ರಜಾಸತ್ತಾತ್ಮಕ ಕಾಲವು ಪ್ರಾಪ್ತವಾಗಿದೆ. ಪ್ರತಿಯೊಬ್ಬನೂ ರಾಜ್ಯ ಘಟನೆಯಲ್ಲಿ ತನ್ನ ಸ್ಥಾನ, ಅಧಿಕಾರ, ಅವಶ್ಯಕತೆಗಳನ್ನು ಅರಿತುಕೊಳ್ಳುವದು ಅವಶ್ಯವದೆ. ಇದಕ್ಕಾಗಿ ಪ್ರತಿಯೊಬ್ಬನಿಗೂ ಅಕ್ಷರ ಜ್ಞಾನವಾದರೂ ಬೇಕೇಬೇಕು. ಈಗಿನಂತೆ ಅಕ್ಷರ ಜ್ಞಾನವಿಲ್ಲದಿದ್ದರೆ ಸಾಗುವದಿಲ್ಲ. ಕಾರಣ ಪ್ರಾಥಮಿಕ ಶಿಕ್ಷಣವು ಸಂಪೂರ್ಣವಾಗಿ ಬೆಳೆದು ನಿರಕ್ಷರತೆಯು ಹೋಗಲಿಕ್ಕೆಬೇಕು. ಇದಕ್ಕಾಗಿ ಒತ್ತಾಯದ ಶಿಕ್ಷಣವು ದೊರೆಯಲಿಕ್ಕೆ ಬೇಕು. ಸರಕಾರದ ಬೆಂಬಲವು ಜಪಾನ, ಜರ್ಮನಿ ಮೊದಲಾದ ದೇಶಗಳಲ್ಲಿದ್ದಂತೆ ದೊರೆಯಲಿಕ್ಕೆ ಬೇಕು. ನಮ್ಮ ಸರಕಾರವು ದುಡ್ಡಿನ ಅಭಾವವನ್ನು ಮುಂದೆ ಮಾಡಿ ಒತ್ತಾಯದ ಶಿಕ್ಷಣಕ್ಕೆ ಬೆಂಬಲವನ್ನು ಕೊಟ್ಟಿಲ್ಲ. ಆದ್ದರಿಂದ ಈ ಒತ್ತಾಯದ ಶಿಕ್ಷಣದ ಭಾರವು ನಮ್ಮ ಸಮಾಜದ ಮೇಲೆ ಅದೆ. ಇದನ್ನು ನೆರವೇರಿಸಲಿಕ್ಕೆ ಧನವಂತರು ಉದಾರ ಬುದ್ಧಿಯಿಂದ ಧನಸಹಾಯ ಮಾಡಲಿಕ್ಕೆ ಬೇಕು. ಉತ್ಸಾಹಿ ವಿದ್ಯಾವಂತರು ಕೆಲವಂಶದಿಂದ ಸ್ವಾರ್ಥತ್ಯಾಗಮಾಡಿ ಈ ಉದ್ಯೋಗವನ್ನು ಕೈಕೊಳ್ಳಬೇಕು. ಇದರಿಂದ ಕೆಲವು ವಿದ್ಯಾವಂತರಿಗೆ ಸಮಾಜ ಸೇವೆಯ ಸಂಗಡ ಉಪಜೀವನವೂ ಆದೀತು. ವಿದ್ಯಾವರ್ಧಕ ಫಂಡಿನವರು ಫಂಡಿನ ಸಹಾಯದಿಂದ ಇಂಥ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಬೇಕು. ಶಿಕ್ಷಣ ಸಂಸ್ಥೆಯವರು ಬರೇ ಮಾಧ್ಯಮಿಕ ಮತ್ತು ಉಚ್ಚ ಶಿಕ್ಷಣವನ್ನಷ್ಟೇ ಕೈಕೊಳ್ಳದೆ ಪ್ರಾಥಮಿಕ ಶಿಕ್ಷಣವನ್ನೂ ಲಕ್ಷಿಸಬೇಕು. ಅಂದರೆ ಸದ್ಯದಲ್ಲಿ ಶಾಲೆಗಳಿಲ್ಲದ ಅನೇಕ ಹಳ್ಳಿಗಳಿಗೆ ಶಿಕ್ಷಣ ಸೌಲಭ್ಯಗಳು ಸಿಗುವವು. ಇಲ್ಲದೆ ಹೋದರೆ ಸರಕಾರಕ್ಕೇ ಆಗಲಿ, ಅಥವಾ ಸ್ಥಾನಿಕ ಸಂಸ್ಥೆಗಳಿಗೇ ಆಗಲಿ ಈ ಭಾರವನ್ನು ಬಿಟ್ಟರೆ ಕಲ್ಪಾಂತರದವರೆಗೂ ಹಳ್ಳಿಗಳು ಶಿಕ್ಷಣವನ್ನು ಪಡೆಯುವಂತೆಯಿಲ್ಲ. ಈ ಪ್ರಕಾರವಾಗಿ ಈಗಿದ್ದ ವಿದ್ಯಾಸಂಸ್ಥೆಗಳು ಬಹು ಅಂಶದಿಂದ ಈ ಭಾರವನ್ನು ವಹಿಸಲಿಕ್ಕೇಬೇಕು.

ಉದ್ಯೋಗ ಶಿಕ್ಷಣದ ಅವಶ್ಯಕತೆಯನ್ನು ಕುರಿತು ಇವರು ಹೇಳಿದ್ದು.

ಸದ್ಯಕ್ಕೆ ಕೊಡುತ್ತಿರುವ ಪ್ರಾಥಮಿಕ ಜ್ಞಾನದಿಂದ ವಿದ್ಯಾರ್ಥಿಗಳಿಗೆ ಅಕ್ಷರ ಜ್ಞಾನವಷ್ಟೇ ಆಗುತ್ತದಲ್ಲದೆ ಬೇರೆ ಯಾವ ಉದ್ಯೋಗದ ಜ್ಞಾನವೂ ಆಗುವದಿಲ್ಲ. ಆದ್ದರಿಂದ ಪ್ರಾಥಮಿಕ ಶಾಲೆಗಳಲ್ಲಿ ನೂಲುವದು, ನೇಯುವದು, ಲೆಕ್ಕ ಪತ್ರಗಳನ್ನಿಡುವದು, ಸಾಧಾರಣ ಯಂತ್ರಜ್ಞಾನ ಮಾಡಿಕೊಡುವದು, ಮೊದಲಾದ ಸಾಮಾನ್ಯ ಉಪಯೋಗಕ್ಕೆ ಬೀಳುವ ತರತರದ ಜ್ಞಾನವನ್ನು ಮಾಡಿಕೊಡುವದು ಅವಶ್ಯವದೆ. ಈ ತರದ ವಿದ್ಯೆಯನ್ನು ಕೊಡಲಿಕ್ಕೆ ಶಾಲೆಗಳು ವಿಪುಲವಾಗಿ ಬೇಕಾಗುತ್ತವೆ. ಶಾಲೆಯನ್ನು ಇಡ

ಯುಂಟು. ಇಲ್ಲಿಯಾದರೂ ದ್ವಂದ್ವದ ಮುಖ್ಯ ಲಕ್ಷಣವಾದ ಚಕಾರಾರ್ಥವು ಇರಲೇಬೇಕು.

ವಕ್ರದಂಡನೂ ಕುಟಿಲದಂಡನೂ ವಕ್ರದಂಡರು ಅಥವಾ ಕುಟಿಲದಂಡರು.

ಇಲ್ಲಿ ವಕ್ರ ಕುಟಿಲ ಶಬ್ದಗಳು ಸಮಾನಾರ್ಥಕವಾಗಿವೆ. ದ್ವಂದ್ವಸಮಾಸ ವಾದಾಗ ವಕ್ರ ಇಲ್ಲವೆ ಕುಟಿಲ, ಯಾವದಾದರೊಂದೇ ಪದವು ಉಳಿವುದು. ಅಕ್ಷವೂ ಅಕ್ಷವೂ ಅಕ್ಷವೂ ಅಕ್ಷಗಳು. ರೂಪದಿಂದ ಅರ್ಥದಿಂದ ಅಕ್ಷಪದಗಳೆಲ್ಲ ಸಮಾನವಾಗಿವೆ.

ಜಾಣನೂ ಚತುರನೂ ಜಾಣರು ಇಲ್ಲವೆ ಚತುರರು. (ಅರ್ಥದಿಂದ ಸಮಾನ ಪದಗಳು) ಇಲ್ಲಿ ಒಂದು ಪದವೇ ಉಳಿಯುವದು. ಇಲ್ಲಿ ಜಾಣರು ಎಂದು ಆಗಿ ಪೂರ್ವಪದವು ಉಳಿಯಬಹುದು. ಆದರೂ ಅಲ್ಲಿ ಉತ್ತರ ಪದದ ಅರ್ಥವಿದೆ.

ಏಕಶೇಷದಲ್ಲಿ ಪುರುಷವಾಚಕ ಸ್ತ್ರೀವಾಚಕ ಶಬ್ದಗಳಿದ್ದರೆ ಪುರಷವಾಚಕವೇ ಉಳಿಯುವದು. ಹಂಸನೂ ಹಂಸಿಯೂ ಹಂಸರು. ತರುಣನೂ ತರುಣಿಯೂ ತರುಣರು. ಸ್ತ್ರೀಲಿಂಗ ಪುಲ್ಲಿಂಗ ನಪುಂಸಕಲಿಂಗ ಶಬ್ದಗಳು ಕೂಡಿ ಇರುವಲ್ಲಿ ಕಡೆಯ ಶಬ್ದವು ಯಾವ ಲಿಂಗದ್ದಿರುವದೋ ಅದುವೇ ಉಳಿಯುವದೆಂದು ಶಾಸನಕಾರನು ಹೇಳುವನು.

ಸ್ತ್ರೀ.	ಪು.	ಪು.
ಆಕೆಯೂ	ಆತನೂ	ಅವರು.
ಪು.	ನ.	ನ.
ಆತನೂ	ಅದೂ	ಅವು.
ನ.	ಸ್ತ್ರೀ.	ಸ್ತ್ರೀ. ಲಿ.
ಅದೂ	ಆಕೆಯೂ	ಅವರು

ತಾನು ನೀನು ನಾನು ಮೊದಲಾದ ಸರ್ವನಾಮಗಳು ಉಳಿದ ಶಬ್ದದೊಡನೆ ಪ್ರಯುಕ್ತವಾಗಿದ್ದರೆ ಇವೇ (ಸ. ನಾ) ಉಳಿಯುವವು.

ಜಿನದತ್ತನೂ	ನಾನೂ	ನಾವು.
ಯಜ್ಞದತ್ತನೂ	ನೀನೂ	ನೀವು.
ಇವನೂ	ದೇವದತ್ತನೂ	ಇವರು.
ವಿಷ್ಣುಮಿತ್ರನೂ	ತಾನೂ	ತಾವು.
ತಾನೂ	ನೀನೂ	ನೀವು.
ನಾನೂ	ಊರ ಜನರೂ	ನಾವು.
ನೀನೂ	ನಾನೂ	ನಾವು.
ನೀನೂ	ಸರ್ವ ಜನರೂ	ನೀವು.

ತಾಯಿ ಶಬ್ದವು ತಂದೆ ಶಬ್ದದೊಡನೆ ಉಕ್ತವಾಗಿದ್ದರೆ ತಂದೆ ಶಬ್ದವೊಂದೇ ಉಳಿವುದು.

ತಂದೆಯೂ ತಾಯಿಯೂ ತಂದೆಗಳು. (ಮಾತಾ ಚ ಪಿತಾಚ ಪಿತರೌ)

ಅಣ್ಣ ತಮ್ಮಂದಿರುಗಳಲ್ಲಿ ಮಗನು ಮಗಳುಗಳಲ್ಲಿ ಒಂದೇ ಉಳಿವುದು.

ಭ್ರಾತಾರನೂ ಸ್ವಸಾರಳೂ ಭ್ರಾತೃಗಳು. ಮಗನೂ ಮಗಳೂ ಮಕ್ಕಳು.

ಅತ್ತೆ ಮಾವಂದಿರಲ್ಲಿ 'ಮಾವ' ವಾಚಕಶಬ್ದವು ಉಳಿಯುವದು. ಶ್ವಶ್ರುವೂ (ಅತ್ತೆ) ಶ್ವಶುರನೂ (ಮಾವನೂ) ಶ್ವಶುರರು.

ಸಮಾಹಾರದಲ್ಲಿ ಒಟ್ಟು ತೋರುವದರಿಂದ ಅಲ್ಲಿ ಏಕವಚನವು ಬರುವುದು ಸ್ವಾಭಾವಿಕ. ಆದರೆ ಇತರೇತರ ಯೋಗವಿರುವಲ್ಲಿಯೂ ಕೆಲವೆಡೆಗೆ ದ್ವಂದದಲ್ಲಿ ಏಕವಚನವುಂಟಾಗುವದು.

ಪ್ರಾಣಿಗಳ ಅಂಗವಾಚಕಶಬ್ದಗಳಿರುವಲ್ಲಿ, ಸೇನಾಂಗವಾಚಕ ಪದಗಳಿರುವಲ್ಲಿ ತೂರ್ಯ (ವಾದ್ಯ)ದ ಅಂಗವಾಚಕಪದಗಳಿರುವಲ್ಲಿ ದ್ವಂದ್ವವು ಏಕವಚನದ್ದಾಗುವದು

ಪ್ರಾಣ್ಯಂಗಕ್ಕೆ—ಪಾಣಿಯೂ ಪಾದವೂ ಪಾಣಿಪಾದವು (ಏಕವಚನ).

ಮಾರ್ದಂಗಿಕ– ಪಾಣವಿಕ– ತೂರ್ಯಾಂಗಕ್ಕೆ. ಹಸ್ತಿಯೂ ಅಶ್ವವೂ ಹಸ್ತ್ಯಶ್ವವು, ಸೇನೆಯ ಅಂಗಕ್ಕೆ.

ಜಾತಿವಾಚಿ ಪದಗಳಿರುವಲ್ಲಿ ದ್ವಂದ್ವವು ಏಕವಚನದ್ದಾಗುವದು. ಪ್ರಾಣಿವಾಚಿಯಾಗಿರಕೂಡದು. ಮೃತ್ಪಾಷಾಣವು (ಮಣ್ಣೂ–ಕಲ್ಲೂ).

ಕ್ಷುದ್ರ ಜಂತುಗಳ ಸಮೂಹಾರವು ತೋರುವಲ್ಲಿ ಏಕವಚನವಾಗುವದು. ತಗಣಿಯೂ ಚಿಕ್ಕಾಡುಗಳೂ ತಗಣಿ-ಚಿಕ್ಕಾಡು. ನೊಣವೂ ನೊರಜುಗಳೂ ನೊಣ-ನೊರಜು. (ವಿಪುಲ ಬಡವರ ಮನೆಯಲ್ಲಿ.)

ಗ್ರಾಮವರ್ಜ್ಯನದೀ ದೇಶವಾಚಕ ಪದಗಳು ಭಿನ್ನಲಿಂಗಗಳಾಗಿರುವಲ್ಲಿ ಸಮಾಹಾರದಲ್ಲಿ ದ್ವಂದ್ವವು ಏಕವಚನದ್ದಾಗುವದು. ಗಂಗೆಯೂ ಶೋಣವೂ ಗಂಗಾಶೋಣವು. (ಗಂಗೆ ಸ್ತ್ರೀಲಿಂಗವೆಂದು ತಿಳಿದರೆ).

ವಿರುದ್ಧಾರ್ಥಕವಾದ ಅದ್ರವ್ಯವಾಚಕಶಬ್ದಗಳಿರುವಲ್ಲಿ ದ್ವಂದ್ವವು ವಿಕಲ್ಪದಿಂದ ಏಕವಚನದ್ದಾಗುವದು. ಶೀತವೂ ಉಷ್ಣವೂ ಶೀತೋಷ್ಣವು ಇಲ್ಲವೆ ಶೀತೋಷ್ಣಗಳು.

ಶಾಶ್ವತವಿರೋಧವಿರುವಲ್ಲಿ (ಸಮಾಹಾರದ್ವಂದ್ವ) ಅಹಿನಕುಲವು. ಗೋವ್ಯಾಘ್ರವು ಕಾಕೋಲೂಕವು. (ಕಾಗೆ ಗೂಗೆ). ಮಾರ್ಜಾರಮೂಷಕವು (ಬೆಕ್ಕು ಇಲಿ).

ನೇಪಾಳದ ವರ್ಣನೆ

(ಒಂದು ಮಹಾರಾಷ್ಟ್ರ ಪತ್ರಿಕೆಯಿಂದ ಸಂಗ್ರಹಿಸಿದ್ದು.)

ಬರೆಹಗಾರ:—ಶ್ರೀ. ಲಕ್ಷ್ಮಣ, ವಿಶ್ವನಾಥ, ಫಾಟಕ, ಅಣ್ಣಿಗೇರಿ.

ನೇಪಾಳವು ದೊಡ್ಡ ದೊಡ್ಡ ಪರ್ವತ, ವಿಪುಲವಾದ ನದಿ, ದಟ್ಟವಾದ ಅರಣ್ಯ, ಬೆಳೆಯುಳ್ಳ ಕಂದರ ಇವುಗಳಿಂದಲೇ ವ್ಯಾಪಿಸಿದ್ದು, ಅದರ ಸೌಂದರ್ಯವು ಅತ್ಯಂತ ಪ್ರೇಕ್ಷಣೀಯವಾಗಿದೆ. ಪಾಟಣಾ ಎಂಬದು ನೇಪಾಳದ ಹಳೆಯ ರಾಜಧಾನಿಯಿದ್ದು, ಕಾಷ್ಟಮಂಡಪ ಅಥವಾ ಕಾಟಮಾಂಡು ಎಂಬದು ಅದರ ಈಗಿನ ಹೊಸ ರಾಜಧಾನಿಯಾಗಿದೆ. ಕಾಟಮಾಂಡುವು ವಿಷ್ಣುಮತಿ-ವಾಘಮತಿ ನದಿಗಳ ಸಂಗಮದ ಮೇಲೆ ಇದೆ. ಇದು ೨೦ ಮೈಲು ಉದ್ದವಾದ ಒಂದು ಇಳುಕಲಿನ ಮೇಲೆ ನೆಲಸಿದ್ದು, ಇದರ ಸುತ್ತುಮುತ್ತಲು ನಿಸರ್ಗನಿರ್ಮಿತವಾದ ಗುಡ್ಡದ ಕೋಟೆಯಿದೆ. ಇದಕ್ಕೆ ೩೦ ಅಗಸೆಗಳಿದ್ದು, ಒಳಗೆ ಅಷ್ಟೇ ಪ್ರಮುಖ ಪೇಟೆಗಳಿವೆ. ಅವುಗಳಲ್ಲಿ ಎರಡೂ ಬದಿಗೆ ೩|೪ ಅಂತಸ್ತಿನ ಹಂಚಿನ ಕಟ್ಟಡಗಳಿದ್ದು, ಅಲ್ಲಲ್ಲಿ ನೆಲಕ್ಕೆ ಕಲ್ಲು ಇಲ್ಲವೆ ಇಟ್ಟಂಗಿ ಹೊದಿಸಿದ ಪ್ರಶಸ್ತವಾದ ಅನೇಕ ಚೌಕುಗಳಿವೆ. ಅವುಗಳೊಳಗೆ ರಾಣೀತಲಾವದ ಸಮೀಪದಲ್ಲಿರುವ ಆಸನಟೋಲಾ ಇಂದ್ರಚೌಕ ಹಾಗು ದರಬಾರಚೌಕ ಇವೆರಡು ವಿಶೇಷ ಪ್ರೇಕ್ಷಣೀಯವಾಗಿವೆ. ಪಟ್ಟಣದ ಉಳಿದ ಎಲ್ಲ ಭಾಗಗಳಲ್ಲಿ ಕಿ೨ ಅಗಲಾದ ಸಂದಿಯ ದಾರಿಗಳಿದ್ದು, ಅವುಗಳಲ್ಲೆಲ್ಲ ಗಲಿಚ್ಛವೂ, ಸ್ವಾಸ್ಥ್ಯನಾಶಕವೂ ಆದ ವಾತಾವರಣವೇ ಕಂಡುಬರುತ್ತದೆ. ಪುರದ ಮಧ್ಯಭಾಗದಲ್ಲಿ ಪ್ರಚಂಡವಾದ ರಾಜಪ್ರಾಸಾದವಿದ್ದು, ಅದರ ಎದುರಿಗಿರುವ ಚೌಕುಗಳಲ್ಲಿ ಅನೇಕ ಸುಂದರವಾದ ದೇವಾಲಯಗಳಿವೆ. ಅವುಗಳೊಳಗಿನ ಕೆತ್ತಿಗೆಯ ಕೆಲಸವು ಬಹಳ ಸುಶೋಭಿತವಿದೆ. ಮಹಾದ್ವಾರದಲ್ಲಿ ಪ್ರೇಕ್ಷಣೀಯವಾದ ಎರಡು ಕೃತ್ರಿಮ ಸಿಂಹಗಳ ಪ್ರತಿಮೆಗಳಿವೆ. ಸಮೀಪದಲ್ಲಿಯೇ ದೇವಾಲಯಗಳಿದ್ದ ಮೂಲಕ ಅವುಗಳೊಳಗಿನ ಅನೇಕ ಗಂಟೆಗಳಿಂದ ಒಮ್ಮೆಲೇ ಹೊರಡುವ ಕರ್ಣಮಧುರವಾದ ಸಂಯುಕ್ತ ಧ್ವನಿಯನ್ನು ಕೇಳಿ, ಇಲ್ಲಿ ಆಗಮಿಸಿದ ಪ್ರೇಕ್ಷಕನ ಮನಸ್ಸು ತಲ್ಲೀನವಾಗಿ, ಅವನಿಗೆ ಒಂದು ಬಗೆಯ ಸ್ವರ್ಗೀಯ ಆನಂದವೇ ಪ್ರಾಪ್ತವಾಗುವದು!

ನೇಪಾಳದೊಳಗಿನ ರಾಜ್ಯಶಾಸನವು ಮೊದಲು ಬಹಳ ಕಠೋರವಿತ್ತು. ಕ್ಷುಲ್ಲಕ ಅಪರಾಧ ಮಾಡಿದವರಿಗೆ ಸಹ ಅವಯವ ಕೊಯಿಸಿಕೊಳ್ಳುವ ಶಿಕ್ಷೆಯನ್ನು ವಿಧಿಸುತ್ತಿದ್ದರು. ಹೀನ ಜಾತಿಯವನು ತಾನು ಉಚ್ಚ ವರ್ಣದವನೆಂದು ಹೇಳಿಕೊಳ್ಳಹತ್ತಿದರೆ ಅವನನ್ನು ಗುಲಾಮನೆಂದು ತಿಳಿದು ಮಾರಿ ಬಿಡುತ್ತಿದ್ದರು! ಆದರೆ ಈಗ ಗುಲಾಮರ

ವ್ಯವಹಾರವನ್ನು ಕಾಯದೆಯಿಂದ ಪೂರ್ಣವಾಗಿ ನಿಲ್ಲಿಸಿದ್ದು, ಫಾಶಿಯು ಶಿಕ್ಷೆಯು ಸಹ ರಾಜಕೀಯ ಗುಹ್ನೆಗಳ ಮಟ್ಟಿಗೆ ಉಪಯೋಗಿಸಬೇಕೆಂದು ಗೊತ್ತಾಗಿದೆ. ಗೋವಧಕ್ಕೆ ಮಾತ್ರ ದೇಹದಂಡದ ಶಿಕ್ಷೆಯಿದೆ.

ಪ್ರತಿಯೊಬ್ಬನು ದಂಡಿನಲ್ಲಿ ಸರತಿಯಂತೆ ಕೆಲಸ ಮಾಡಲೇಬೇಕೆಂಬ ನಿಯಮವಿರುವ ಮೂಲಕ ನೇಪಾಳದಲ್ಲಿ ೧೬,೦೦೦ ರೂಪಾಯಿ ಪಗಾರದ ಮೇಲೆಯೇ ಯುದ್ಧ ಸಮಯದಲ್ಲಿ ೭೦,೦೦೦ ಯುದ್ಧವಿಶಾರದ ಸೈನ್ಯವನ್ನು ರಣಭೂಮಿಯ ಮೇಲೆ ಒಮ್ಮೆಲೇ ತಂದು ನಿಲ್ಲಿಸಲಿಕ್ಕೆ ಬರುವದು. ಸೈನ್ಯದ ರಚನೆ-ಶಿಕ್ಷಣ ಇವೆಲ್ಲ ಆಂಗ್ಲ ಪದ್ಧತಿಯಂತೆಯೇ ಇವೆ. ಸೈನ್ಯದೊಳಗಿನ ಅಧಿಕಾರದ ಸ್ಥಳಗಳೆಲ್ಲ ರಾಜಮನೆತನದವರಿಗೆಯೇ ದೊರೆಯುವವು. ಪ್ರಧಾನಪುತ್ರರೇ ವಿವಿಧ ಖಾತೆಗಳ ಅಧಿಕಾರಿಗಳಾಗುವರು.

ನೇಪಾಳದಲ್ಲಿ ಏಕತಂತ್ರದ ರಾಜ್ಯಪದ್ಧತಿಯಿದ್ದರೂ ಅದು ಆ ನಾಡಿಗೆ ಅತ್ಯಂತ ಹಿತಪ್ರದವೇ ಆಗಿದೆ. ಯಾಕಂದರೆ ರಾಜರೂ, ಮಂತ್ರಿಗಳೂ ಪ್ರಜಾಸೇವೆಯಲ್ಲಿಯೇ ತಮ್ಮ ಸೌಖ್ಯದ ಸರ್ವಸ್ವವಿರುವದೆಂದು ತಿಳಿಯುತ್ತಾರೆ. ಹಿಂದಿನ ಮಂತ್ರಿಗಳಾದ ಚಂದ್ರಸಮಶೇರ ಜಂಗಬಹಾದ್ದೂರರವರು ತಮ್ಮ ಸ್ವತಹದ ೫೦,೦೦೦ ರೂಪಾಯಿಗಳನ್ನು ವೆಚ್ಚಮಾಡಿ ಪ್ರಜೆಗಳಿಗೆ ಪುಕ್ಕಟೆಯಾಗಿ ನೀರು ಕುಡಿಸಿರುವರು. ನಳದಿಂದ ಕಾಟಮಾಂಡುವಿನಲ್ಲಿ ನೀರು ತಂದು, ವಿದ್ಯುತ್ತು ಆಡಿಸಿ, ಅದಕ್ಕೆ ಒಜ್ಜೆ ಹೊರಲಿಕ್ಕೆ ಹಚ್ಚಿ, ಕೂಲಿಯವರ ಕಷ್ಟವನ್ನು ಕಡಿಮೆ ಮಾಡಿರುವರು. ತಮ್ಮ ಪ್ರಾಂತದಲ್ಲಿ ಅಮಲೇಖಗಂಜದ ವರೆಗೆ ರೇಲ್ವೆಯನ್ನು ಹಾಕಿರುವರು. ಚಂದ್ರಗಂಜದ ಹತ್ತರ ಕೃಷಿಯ ಅನುಕೂಲತೆಗಾಗಿ ಅನೇಕ ಕಾಲವೆಗಳನ್ನು ತೆಗೆಯಿಸಿರುವರು. ಸಂಸ್ಥಾನಕ್ಕೆ ಇದು ಅತ್ಯಂತ ಭೂಷಣವಾದ ಸಂಗತಿಯಲ್ಲವೇ !

ನೇಪಾಳದ ನಿವಾಸಿಗಳಿಗೆ ತಮ್ಮ ಮಹಾರಾಜರಿಗೆ ಭೆಟ್ಟಿಯಾಗಿ ಸುಖದುಃಖಗಳನ್ನು ಹೇಳಿಕೊಳ್ಳಲಿಕ್ಕೆ ವಿಶೇಷ ಸೌಲಭ್ಯವಿದೆ. ಮಹಾರಾಜರು ಜನರ ಮುಜರೆಗಳನ್ನು ತೆಗೆದುಕೊಳ್ಳುತ್ತ ಮಧ್ಯಾಹ್ನದಲ್ಲಿ ತಮ್ಮ ಪರಿವಾರದೊಡನೆ ನಗರ ನಿರೀಕ್ಷಣೆಗಾಗಿ ಹೊರಡುವರು. ಆಗ ಪ್ರಜೆಗಳಿಗೆ ಅವರ ಸಮಕ್ಷಮದಲ್ಲಿ ಲೇಖ ಮೂಲಕವಾಗಿ ತಮ್ಮ ದೂರು ಹೇಳಿಕೊಳ್ಳಲಿಕ್ಕೆ ಬರುವದು.

ನೇವಾರೀ ಸ್ತ್ರೀಯರು ನಮ್ಮಲ್ಲಿಯವರಂತೆ ಮೂಗು-ಕಿವಿಗಳಲ್ಲಿ ನತ್ತು-ಬುಗುಡಿಗಳನ್ನು ಹಾಕಿಕೊಳ್ಳುತ್ತಾರೆ. ಸುವಾಸನೆಯ ಪುಷ್ಪಗಳ ಮೇಲೆ ಅವರ ಪ್ರೀತಿ ಬಹಳ. ಅಲ್ಲಿಯ ಭೋಟಿಯಾ ಎಂಬ ಮತ್ತೊಂದು ಜಾತಿಯ ಸ್ತ್ರೀಯರು ನಮ್ಮಲ್ಲಿಯ ಒಡ್ಡರ ಹೆಂಗಸರಂತೆ ಹೊಳೆಯುವ [illegible] ಮಣಿಗಳ ಮಾಲೆಗಳನ್ನೂ, ಹಿತ್ತಾಳಿಯ ಅಥ

ರಣಗಳನ್ನೂ ಹಾಕಿಕೊಳ್ಳುತ್ತಾರೆ. ರಾಜಮಹಿಳೆಯರು ತಮ್ಮ ಟೊಂಕದ ಒಂದು ಬದಿಯಲ್ಲಿ ಖಡ್ಗವನ್ನು ಇಳಿಬಿಡುತ್ತಾರೆ.

ನೇಪಾಳದಲ್ಲಿ ಬ್ರಾಹ್ಮಣರನ್ನು ಹೊರತುಪಡಿಸಿ ಉಳಿದ ಎಲ್ಲ ಜನರು ಮಾಂಸಾಹಾರದ ದೆಸೆಯಿಂದ ಒಂದಿಲ್ಲೊಂದು ಜಾತಿಯ ಪ್ರಾಣಿಯನ್ನು ಸಾಕುವ ಪರಿಪಾಠವಿದೆ. ಮಗರ ಜಾತಿಯ ಜನರಿಗೆ ತುಂಡಾ ಎಂಬ ಜಾತಿಯ ಕುರಿಯು ಬಹಳ ಪ್ರಿಯವಿದ್ದು, ಗುರಂಗ ಜಾತಿಯ ಜನರಿಗೆ ಹಂದಿಯು ವಿಶೇಷ ಪ್ರಿಯವಾಗಿದೆ. ಆದರೂ ಅಕ್ಕಿಯ ಅನ್ನ ಸರಸೋದ ಪಲ್ಲೆ ಇವೇ ಬಡಬಗ್ಗರ ಖಾದ್ಯದ ಮುಖ್ಯ ಪದಾರ್ಥಗಳಾಗಿವೆ. ಅಲ್ಲಿ ಹೈನವು ವಿಪುಲವಿದೆ. ಜನರು ಮಾತ್ರ ದೀನರೂ, ದರಿದ್ರರೂ, ಅಲ್ಪ ಸಂತುಷ್ಟರೂ ಇರುವರು. ಬಹುಶಃ ಕೂಲಿಯ ಮೇಲೆಯೇ ಎಲ್ಲರ ನಿರ್ವಾಹ ಸಾಗುವದು. ನೇಪಾಳದ ಜನರು ತೃಷ್ಣೆಯ ತೃಪ್ತಿಗಾಗಿ ಗೋದಿ-ಅಕ್ಕಿಗಳಿಂದ 'ರುಕ್ಸಿ' ಎಂಬ ಒಂದು ಪ್ರಕಾರದ ಮದ್ಯವನ್ನು ಮಾಡಿ ಕುಡಿಯುವರು. ಪಾಶ್ಚಿಮಾತ್ಯರ ಸಂಸರ್ಗದಿಂದ ಇತ್ತಿತ್ತಲಾಗಿ ನೇಪಾಳದ ಕೆಲ ಶ್ರೀಮಂತ ಜನರಲ್ಲಿ ವಿದೇಶೀಯ ಮದ್ಯದ ಪ್ರಸಾರವಾಗ ತೊಡಗಿದೆ.

ನೇಪಾಳದಲ್ಲಿ ಪರಧರ್ಮ ಪ್ರಚಾರಕ್ಕೆ ಕಾಯದೆಯ ಬಂಧನವಿದೆ. ಕಾಶ್ಮೀರೀ ಇರಾಣೀ ಜಾತಿಯ ಮುಸಲ್ಮಾನರು ಕಾಟ ಮಾಂಡುವಿನಲ್ಲಿ ಬಹಳ ವರ್ಷಗಳ ಹಿಂದೆಯೇ ಸ್ಥಾಯಿಕರಾಗಿರುವರು. ಭೋತನಾಥದ ಹತ್ತರ ಭೋತಾನೀ-ತಿಬೇಟೀ ಬೌದ್ಧರು ವಾಸ ಮಾಡಿಕೊಂಡಿರುವರು.

ನೇಪಾಳದಲ್ಲಿ ಸಹಗಮನದ ಪದ್ಧತಿಯು ಕಟ್ಟಳೆಯಿಂದ ನಿಲ್ಲಿಸಲ್ಪಟ್ಟಿದೆ. ಆದರೆ ಬಾಲವಿವಾಹಗಳು ಮಾತ್ರ ಇನ್ನೂ ಬಳಕೆಯಲ್ಲಿವೆ. ಪುರುಷರು ಅನೇಕ ಸ್ತ್ರೀಯರೊಡನೆ ವಿವಾಹ ಮಾಡಿಕೊಳ್ಳುವದು ವಿಶೇಷ ಭೂಷಣವೆಂದು ತಿಳಿಯುತ್ತಾರೆ. ವೇಶ್ಯಾ ವ್ಯವಹಾರವು ಮಾತ್ರ ಅಸ್ತಂಗತವಾದಂತಾಗಿದೆ.

ವಿಧುರರೂ, ವಿಧವೆಯರೂ ಸಂತಾನೇಚ್ಛೆಯಿಂದ ಮತ್ತೊಮ್ಮೆ ವಿವಾಹಬದ್ಧರಾಗಲಿಕ್ಕೆ ಬರುವದು. ಆದರೆ ಅಂಥ ವಿವಾಹಿತರನ್ನು ಹಂವರದಲ್ಲಿ ಮಾತ್ರ ಬರಕೊಡುವದಿಲ್ಲ. ಪುನರ್ವಿವಾಹಿತರ ಸಂತತಿಯೊಡನೆ ಪ್ರಥಮ ವಿವಾಹದ ಸಂತತಿಯವರು ಅನ್ನೋದಕ-ಶರೀರಸಂಬಂಧಗಳ ವ್ಯವಹಾರ ಮಾಡಲಿಕ್ಕೆ ಯಾವ ಅಡ್ಡಿಯೂ ಇಲ್ಲ.

ನೇವಾರೀ ಬಾಲಿಕೆಯರು ಚಿಕ್ಕತನದಲ್ಲಿ ಮೊದಲು ಶ್ರೀಫಳದೊಡನೆ ವಿವಾಹಬದ್ಧರಾಗಿರುತ್ತಾರೆ. ಮುಂದೆ ಋತುಮತಿಯರಾದಮೇಲೆ ಯೋಗ್ಯವರನೊಡನೆ ಅವರ ಪರಿಣಯವಾಗುತ್ತದೆ. ದುರ್ದೈವದಿಂದ ವೈಧವ್ಯ ಪ್ರಾಪ್ತವಾದರೂ ಅವರು ಹಣೆಯಮೇಲೆ ಕುಂಕುಮ ಹಚ್ಚುವದನ್ನು ಮಾತ್ರ ಬಿಡುವದಿಲ್ಲ.

ಪ್ರಾಥಮಿಕ ಶಿಕ್ಷಣ

ಶ್ರೀಮದಾದ್ಯ ಶಂಕರಾಚಾರ್ಯರು ಶ್ರೀ ಪಶುಪತೇಶ್ವರನ ಅರ್ಚನೆಗಾಗಿ ಅನ್ಯೋಷಾಹಾರಿಗಳಾದ ಅರ್ಚಕರನ್ನೇ ನಿಯಮಿಸಬೇಕೆಂದು ಆಜ್ಞೆಮಾಡಿರುವ ಮೂಲಕ ರಾಜರು ನರ್ಮದಾನದಿಯ ದಕ್ಷಿಣದ ಪ್ರಾಂತದಲ್ಲಿ ಜನ್ಮಿಸಿದ ಬ್ರಾಹ್ಮಣರನ್ನೇ ಅರ್ಚನೆಗಾಗಿ ನಿಯಮಿಸುವರು. ಮಹಾಶಿವರಾತ್ರಿಯ ದಿವಸ ರಾಜರು ಸ್ವತಃ ಶ್ರೀ ಪಶುಪತೇಶ್ವರನ ಮಂದಿರಕ್ಕೆ ಬಂದು, ದೇವಪೂಜೆ, ಪುರೋಹಿತ ಪೂಜೆ ಮೊದಲಾದ ಧಾರ್ಮಿಕ ವಿಧಿಗಳನ್ನು ಜರುಗಿಸುತ್ತಾರೆ.

ಹಿಂದುಸ್ತಾನದ ಯಾವ ಭಾಗದಲ್ಲಿಯೂ ಬೆಳೆಯದಂಥ ನಾನಾ ಪ್ರಕಾರದ ಹಣ್ಣಿನ ಗಿಡಗಳೂ, ಔಷಧದ ವನಸ್ಪತಿಗಳೂ, ವಿವಿಧ ಪ್ರಕಾರದ ಧಾನ್ಯಗಳೂ ನೇಪಾಳದಲ್ಲಿ ಬೆಳೆಯುತ್ತವೆ. ತೆರಾಯಿಯಲ್ಲಿ ಅಕ್ಕಿ, ಅಫು, ತಂಬಾಕ, ಕಬ್ಬು, ಸರಸ ಈ ಬೆಳೆಗಳ ಬಹುದೊಡ್ಡ ಉತ್ಪನ್ನವಿದೆ. ಅರಣ್ಯಭಾಗದಲ್ಲಿ ಶಾಲ, ಸುಂದರಿ; ತಿಲಪತ್ರ, ತಮಾಲಪತ್ರ, ಮಂದಾರ, ಮಂಡಲ, ಶಿರಸ, ದೇವದಾರ, ಶಿಂಗಾಡಿ ಮೊದಲಾದ ಬಹು ದೊಡ್ಡ ವೃಕ್ಷಗಳೂ, ಅಕ್ರೋಡ, ಝಾಲೂ, ಕುಂಠುರೂ, ಅನನಸ ಮೊದಲಾದ ಹಣ್ಣಿನ ಗಿಡಗಳೂ, ಡಾಂಬರ, ಕರ್ಪುರ, ಹತ್ತಿ ಇವು ಉತ್ಪನ್ನವಾಗುವ ಗಿಡಗಳೂ, ಸುಗಂಧದ ವೃಕ್ಷಗಳೂ ಅಲ್ಲಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಸಾಕಷ್ಟು ನೀರಿನ ಅನುಕೂಲತೆ ಇರುವಲ್ಲಿ ಮಂಜಿಷ್ಠ ಹಾಗು ಹೆಚ್ಚು ಉಷ್ಣತೆಯಿರುವಲ್ಲಿ ದ್ರಾಕ್ಷೆ, ಕಬ್ಬು ಇವುಗಳ ವಿಶೇಷ ಉತ್ಪನ್ನವಿದೆ. ಗುಡ್ಡದ ಭಾಗದಲ್ಲಿ ಬೆತ್ತ-ಬಿದುರುಗಳ ಬನಗಳೂ ತೂತಫಳ, ರಾಸಬೇರಿ, ಪಿಸ್ತೆ ಮೊದಲಾದ ಹಣ್ಣಿನ ಗಿಡಗಳೂ ಹೆಚ್ಚಾಗಿ ಬೆಳೆಯುತ್ತವೆ.

ನೇಪಾಳದ ಭೂಗರ್ಭದಲ್ಲಿ ಬಹುಶಃ ಎಲ್ಲ ಪ್ರಕಾರದ ಖನಿಜಗಳು ದೊರೆಯುತ್ತವೆ. ಗುಡ್ಡದ ಭಾಗದಲ್ಲಿ ಬೆಲೆಯುಳ್ಳ ಕಲ್ಲುಗಳೂ, ಧಾತುವಿನ ಕಣಗಳೂ ದೊರೆಯುವದರಿಂದ ಅಲ್ಲಿ ಅವುಗಳ ಖಣಿಗಳು ಹೊರಡಬಹುದೆಂದು ಎನಿಸುತ್ತದೆ. ತುಸು ನೆಲವನ್ನು ಕೆದರಿದ ಕೂಡಲೇ ತಾಮ್ರ-ಕಬ್ಬಿಣಗಳ ಅದುರುಗಳು ಕಂಡುಬರುತ್ತವೆ. ಗಂಧಕವು ಇಲ್ಲಿ ವಿಪುಲವಾಗಿ ದೊರೆಯುತ್ತಿದ್ದು, ಅದೆಲ್ಲ ಈಗ ಪರದೇಶಕ್ಕೆ ಹೋಗುತ್ತದೆ.

ನೇಪಾಳದಲ್ಲಿ ದೊರೆಯುವ ಕಲ್ಲುಗಳಲ್ಲಿ ಸುಣ್ಣದ ಹರಳುಗಳೂ ಬೇರೆ ಕೆಲವು ಕೆಂಪು-ಹಳದೀ ಬಣ್ಣದ ಕಲ್ಲುಗಳೂ ಮುಖ್ಯವಾಗಿವೆ. ಶ್ರೀ ಪಶುಪತೇಶ್ವರನ ಮಂದಿರದಿಂದ ೮-೯ ಮೈಲಿನಮೇಲೆ ಸುಂದರೀಜಲ ಎಂಬಲ್ಲಿ ಒಂದು ದೊಡ್ಡ ಬೆಣ್ಣೆಯ ಮುದ್ದೆಯಂಥ ಶುಭ್ರವಾದ ಗುಡ್ಡವು ಕಾಣಿಸುತ್ತದೆ. ಅದು ಕೇವಲ ಅಭ್ರಕದಿಂದಲೇ ತುಂಬಿರುವದಂತೆ ! ಅದೇ ಹಾದಿಯನ್ನು ಹಿಡಿದು ವೀರಗಂಜದ ಮೇಲಿಂದ ಭೀಮಫೇಡಿಗೆ ಬಂದರೆ ಪಾಟೆಯಕಲ್ಲು, ಸಂಗಮರವರಿ ಕಲ್ಲು, ಕಬ್ಬಿಣ ಇವುಗಳ ಗುಡ್ಡಗಳು ಕಣ್ಣಿಗೆ ಬೀಳುತ್ತವೆ. ಗುರ್ಖಾ ಎಂಬಲ್ಲಿ ಬಹಳ ನುಣುಪಾದ ಒಂದು ಬಗೆಯ ಪಾಷಾಣ ದೊರೆಯುತ್ತದೆ.

ಅದನ್ನು ತಿಕ್ಕಿದರೆ ರತ್ನದಂತೆ ಅದರಲ್ಲಿ ಹೊಳಪು ಹುಟ್ಟುವದು! ಇದೇ ಸ್ಥಳದಲ್ಲಿ ಬಹಳ ಜಿಗುಟಾಗಿರುವ ಒಂದು ಪ್ರಕಾರದ ಮೇಲಾದ ಮಣ್ಣು ದೊರೆಯುತ್ತದೆ. ಸಿಮೆಂಟನಂಥ ಕಾಠಿಣ್ಯವು ಅದರಲ್ಲಿದೆ. ಸದ್ಯದಲ್ಲಿ ಅದು ಪರದೇಶಕ್ಕೆ ಹೋಗಲಿಕ್ಕೆ ಆರಂಭವಾಗಿದೆ.

ನೇಪಾಳದಲ್ಲಿ ಚಾಕುವಿನಿಂದ ಸುಲಭವಾಗಿ ಕೊಯ್ಯಲಿಕ್ಕೆ ಬರುವಂಥ ಹಾಗು ದೀವಟಿಗೆ ಉರಿದಂತೆ ಭುರು ಭುರು ಉರಿಯುವ ೩-೪ ಪ್ರಕಾರದ ಜಾತಿಯ ಕಟ್ಟಿಗೆ ದೊರೆಯುತ್ತದೆ. ಜಿಗುಟು ಮಣ್ಣು, ಗ್ರಾಫಾಯಿಟ ಇವುಗಳಾದರೂ ಹೇರಳವಾಗಿ ದೊರೆಯುತ್ತವೆ, ಅದರಿಂದ ಸೀಸ ಪೇನ್ಸಿಲು, ಕಡ್ಡಿಯ ಪೆಟ್ಟಿಗೆ ಇವುಗಳನ್ನು ತಯಾರಿಸಲಿಕ್ಕೆ ಅಲ್ಲಿ ಬಹಳ ಅನುಕೂಲತೆಯಿದೆ.

ನೇಪಾಳದಲ್ಲಿ ಸದ್ಯಕ್ಕೆ ತಾಮ್ರ-ಹಿತ್ತಾಳಿಗಳ ಪಾತ್ರೆಗಳು, ಜೇಪು ಎಂಬ ಕಾಗದ, ಎಣ್ಣೆ-ನೂಲುಗಳ ಬಟ್ಟಿ, ನಾಣ್ಯ, ತೋಫು-ಬಂದೂಕು ಮೊದಲಾದ ಸಾಮಾನುಗಳನ್ನು ತಯಾರಿಸುವ ಅನೇಕ ಕಾರಖಾನೆಗಳಿವೆ. ಆದರೂ ದೊಡ್ಡ ದೊಡ್ಡ ಜಲ-ಪ್ರವಾಹಗಳಿಂದ ವಿದ್ಯುತ್ತನ್ನೂ, ಗಂಧಕದಿಂದ ಗಂಧಕಾಮ್ಲವನ್ನೂ, ಕಬ್ಬಿಣದಿಂದ ಉಕ್ಕನ್ನೂ, ತಯಾರಿಸುವ ಕಾರಖಾನೆಗಳನ್ನು ಹೆಚ್ಚಾಗಿ ನಿರ್ಮಿಸಿ, ಅಲ್ಲಿಯ ನಿವಾಸಿಗಳು ಯಂತ್ರಗಾರಿಕೆಯಲ್ಲಿ ಮುಂದೆ ಬರಲಿಕ್ಕೆ ಯತ್ನಿಸುವದು ಸದ್ಯದ ಪರಿಸ್ಥಿತಿಯಲ್ಲಿ ಬಹಳೇ ಅವಶ್ಯವಿದೆ.

ಹೊಸದಾಗಿ ಆದ ಅದ್ಭುತ ಪ್ರಯತ್ನಗಳು

ಒಬ್ಬ ಫ್ರೆಂಚ ಇಂಜನಿಯರನು ಜ್ವಾಲಾಮುಖಿಯ ಗರ್ಭದಲ್ಲಿ ೬೦೦ ಫೂಟುಗಳವರೆಗೆ ಇಳಿದು ಅಂತರಂಗಭಾಗದ ಭಾವಚಿತ್ರವನ್ನು ತೆಗೆದುಕೊಂಡು ಬಂದಿರುವನು. ಆ ಸಾಹಸಿಯ ಹೆಸರು ಮಿ. ಅಪ್ರಾಡ ಕಿರ್ನೆರ. ಶಾಸ್ತ್ರೀಯ ಶೋಧದಲ್ಲಿ ಅವನು ತೀರ ಆಸಕ್ತನಾಗಿ ಈ ಅಸಾಧ್ಯ ಶೋಧಮಾಡಲೆಳಸಿರುವನು. ಅವನು ಹೇಗೆ ತನ್ನ ಸಿದ್ಧತೆಯನ್ನಿಟ್ಟುಕೊಂಡಿದ್ದನೆಂದು ಯಾರಾದರೂ ಅಪೇಕ್ಷಿಸುವದು ಸಹಜ. ವೇಗದಿಂದ ಹಾರಿ ಬೀಳುವ ಕಲ್ಲಿನ ಚೂರುಗಳಿಂದ ರಕ್ಷಿಸಿಕೊಳ್ಳುವದಕ್ಕಾಗಿ ಹಿತ್ತಾಳಿಯ ಶಿರಸ್ತ್ರಾಣ ಧರಿಸಿದ್ದನು. 'ಆಸ್ಬೆಸ್ಟಾಸ' ಎಂಬ ಹೆಸರಿನ ಅಗ್ನಿನಿರ್ಭಯ ಖನಿಜ ಪದಾರ್ಥದ ಕವಚ ಧರಿಸಿದ್ದನು. ಬೂಟು, ಮೊದಲಾಗಿ ಎಲ್ಲ ಕವಚವೂ ಆ ಪದಾರ್ಥದ್ದೇ. ೮೦೦ ಫೂಟು ಉದ್ದವಿದ್ದ ಅದೇ ಪದಾರ್ಥದ ಹಗ್ಗ ಮಾಡಿಕೊಂಡಿದ್ದನು. ಶುದ್ಧಹವೆಗಾಗಿ ಆಕ್ಸಿ

ಜನದ ಸಂಗ್ರಹದ ಪಾತ್ರೆಯನ್ನು ಬೆನ್ನಿಗೆ ಕಟ್ಟಿಕೊಂಡಿದ್ದನು. ವಿದ್ಯುತ್ತಿನ ದೀವಿಗೆ, ಛಾಯಚಿತ್ರದ ಸಾಮುಗ್ರಿಗಳು ಸಂಗಡ ಇದ್ದವು.

ಇಷ್ಟೆಲ್ಲ ಸಿದ್ಧತೆಯಿಂದ ಸ್ಟ್ರಾಂಬೋಲಿದ್ವೀಪದ ಜಾಗೃತ ಜ್ವಾಲಾಮುಖಿಯಲ್ಲಿ ಮೇಲಿನ ಪ್ರಯೋಗವನ್ನು ಮಾಡಿದ್ದಾನೆ. ಅದರೊಳಗಿನ ಕಲ್ಲುಗಳು ಫಾರೈನಹೈಟ ೨೧೨೨ ಇದ್ದವಂತೆ! ತರತರದ ಬಣ್ಣಗಳ ಕುದಿಯುವ ಲಾಲಾರಸದ ವರ್ಣನೆ ಮಾಡಿರುವನು. ಅವನು ಹೊರಗೆ ಬಂದಕೂಡಲೆ ಬಾಯಿಂದ ರಕ್ತ ಸುರಿಯತೊಡಗಿತು. ತಕ್ಕ ಉಪಾಯುಗಳಿಂದ ಬೇಗನೆ ಎಚ್ಚತ್ತು ಬದುಕಿ ಉಳಿದಿರುವನು.

(೨) ಅಮೇರಿಕೆಯ ನ್ಯೂಯಾರ್ಕ ಶಹರವು ಸಂಪತ್ತಿನಿಂದ ಲಂಕೆಯಂತೆಯೂ ವಿಲಾಸದಲ್ಲಿ ಅಲಕಾವತಿಯಂತೆಯೂ ಶಿಲ್ಪ ಕೌಶಲ್ಯದಲ್ಲಿ ಮಯಪುರಿಯಂತೆಯೂ ಇರುವದು. ಅಲ್ಲಿ 'ರೆಡಿಯೋಸಿಟಿ ಮ್ಯೂಝಿಕ್ ಹಾಲ್' ಎಂಬದೊಂದು ಸಂಗೀತ ಮಂದಿರವಿರುವದು. ಇಂಥ ಮಂದಿರವು ಪೃಥ್ವಿಯಲ್ಲಿ ಬೇರೊಂದಿಲ್ಲ. ಈ ರಂಗಭೂಮಿಯು ಯಥೇಷ್ಟವಾದ ಅಳತೆಯುಳ್ಳದ್ದಿದ್ದು ಯಂತ್ರಸಹಾಯದಿಂದ ರಂಗಭೂಮಿಯನ್ನು ಕೆಳಗೆ ಮೇಲೆ ತಿರುಗಿಸುವಂತೆ ರಚನೆಯದೆ. ವಾದ್ಯ ಬಾರಿಸುವದಕ್ಕಾಗಿ ೧೦೦ ಮಂದಿ ಕೂಡುವಷ್ಟು ಸ್ಥಳವಿದೆ. ರಂಗಭೂಮಿಯಂತೆ ಆಸನವನ್ನೂ ಯಂತ್ರಸಹಾಯದಿಂದಲೇ ಬದಲಿಸಲಿಕ್ಕೆ ಬರುವಂತೆ ಅದೆ. ಪಡದೆ ಎತ್ತುವ ಹಾಕುವ ಕೆಲಸಗಳೆಲ್ಲ ಯಂತ್ರಗಳಿಂದಲೇ ನಡೆಯುತ್ತವೆ. ರಂಗಭೂಮಿಯ ಎಡಬಲ ಭಾಗಗಳಲ್ಲಿ ದೀಪಸ್ತಂಭಗಳು ಝಗಝಗಿಸುವಂತೆ ಮಾಡಿದ್ದಾರೆ. ಇಂಥ ಪ್ರತಿಯೊಂದು ಕಂಬಕ್ಕೂ ೨೦, ೨೫ ದೀವಿಗೆಗಳಿರುವವು. ಅವು ತಿರುಗುವಂತೆ ರಚನೆಯದೆ.

(೩) ಅಮೇರಿಕೆಯಲ್ಲಿ ರಿಓಕೊಲೋರಾದೋ ಎಂಬ ಹೆಸರಿನ ಹೊಳೆಯೊಂದುಂಟು. ಅದು ಎಷ್ಟೋ ವರ್ಷಗಳಿಂದ ಹರಿಯುವ ಸ್ಥಳವನ್ನು ಬಿಡಿಸಿ ಮನುಷ್ಯನಿರ್ಮಿತ ಬೊಗದೆಯಲ್ಲಿ ಅದನ್ನು ಹರಿಯುವಂತೆ ಮಾಡಿದ್ದಾರೆ. ಎಡಬಲದಲ್ಲಿದ್ದ ದೊಡ್ಡ ದೊಡ್ಡ ಪರ್ವತಮಯ ಶಿಲೆಗಳನ್ನು ಸುರಂಗಗಳಿಂದ ಒಡೆದು ಸಮನೆಲ ಮಾಡಿಕೊಂಡು ಈ ಅದ್ಭುತ ಕಾರ್ಯಕ್ಕಾಗಿ ಯತ್ನಿಸಿ ಪೂರ್ಣಮಾಡಿದ್ದಾರೆ. ಇದಕ್ಕಾಗಿ ೫ ಸಾವಿರ ಸುರಂಗಗಳನ್ನು ೧೫ ತಾಸುಗಳ ವರೆಗೆ ಹಚ್ಚಿದ್ದರಂತೆ.

ಶಾಸ್ತ್ರೀಯ ಶೋಧದ ಬಲದಿಂದ ಮನುಷ್ಯನು ನಿಸರ್ಗದೇವತೆಯ ಕೂಡ ಹ್ಯಾಗೆ ಹೋರಾಡುತ್ತಾನೆಂಬದರ ಜಿಜ್ಞಾಸಾತೃಪ್ತಿಗಾಗಿಯೂ ವಾಚಕರ ಬಹುಶ್ರುತತ್ವಕ್ಕಾಗಿಯೂ ಇದನು ಉಲ್ಲೇಖಿಸಿದೆ.

ಲಿಕ್ಕೆ ಸಾಕಷ್ಟು ಜನಸಂಖ್ಯೆಯಿಲ್ಲದ ಊರುಗಳಲ್ಲಿ ನಾಲ್ಕಾರು ಊರುಗಳನ್ನು ಕೂಡಿಸಿ ಒಂದು ಸಂಘವಮಾಡಿ ಆ ಸಂಘಕ್ಕೆ ತಕ್ಕಂತೆ ಒಂದು ಸಾಲೆಯನ್ನು ಕೊಡಬೇಕು. ಉದ್ಯೋಗ ಧಂದೆಗಳನ್ನು ಕಲಿಸುವಂಥ ಪ್ರಾಥಮಿಕ ಶಾಲೆಗಳಿಗೆ ನಮ್ಮ ಹಳ್ಳಿಗಳು ಅನುಕೂಲವಾಗಿವೆ. ಯಾಕಂದರೆ ದೊಡ್ಡ ಊರುಗಳಿಗೆ ಕಳಿಸಿ ಹೆಚ್ಚಿಗೆ ಖರ್ಚುಮಾಡಿ ವಿದ್ಯೆ ಕೊಡಿಸುವದು ನಮ್ಮ ಬಡಹಳ್ಳಿಗರಿಗೆ ಸಾಧ್ಯವಿಲ್ಲ. ಇಂಥ ಉದ್ಯೋಗ ಧಂದೆಗಳ ಜ್ಞಾನದೊಂದಿಗೆ ಅಕ್ಷರಜ್ಞಾನ ಮಾಡಿಕೊಡುವದೇ ನಮ್ಮ ಹಳ್ಳಿಗರಿಗೆ ಅವಶ್ಯವಾದ ವಿದ್ಯೆ ಇರುತ್ತದೆ.

ರಾತ್ರಿಶಾಲೆಗಳ ಆವಶ್ಯಕತೆಯನ್ನೂ, ಈ ಕೆಲಸದಲ್ಲಿ ಸಮಾಜದ ಮೇಲಿರುವ ಭಾರವನ್ನೂ ಕುರಿತು ಇವರು ಅಂದದ್ದು:—

ವಿದ್ಯಾರ್ಥಿ ದೆಸೆಯನ್ನು ದಾಟಿದ ಜನರಿಗೆ ವಿದ್ಯಾಭ್ಯಾಸಕ್ಕೆ ಮಾರ್ಗವಿಲ್ಲ. ಇವರು ಅಕ್ಷರಗಳ ಸಹಾಯ ಬೇಕಾದಂಥ ಉದ್ಯೋಗಗಳನ್ನು ಕೈಕೊಂಡಿರುವದರಿಂದ ಅಕ್ಷರಜ್ಞಾನವನ್ನು ಮುಂದುವರಿಸುವದಂತೂ ಇರಲಿ, ತಾವು ಚಿಕ್ಕಂದಿನಲ್ಲಿ ಕಲಿತದ್ದನ್ನು ಕಾಯ್ದುಕೊಳ್ಳಲಿಕ್ಕೂ ಅನುಕೂಲವಿಲ್ಲ. ಅಕ್ಷರಜ್ಞಾನವಿಲ್ಲದವರಂತೂ ಹಾಗೇ ಉಳಿದಿದ್ದಾರೆ. ಇವರಿಗಾಗಿ ರಾತ್ರಿಯ ಶಾಲೆಗಳನ್ನು ಏರ್ಪಡಿಸಬೇಕು. ಇದಕ್ಕೂ ಸರಕಾರದ ಸಹಾಯವಿಲ್ಲ. ಸರಕಾರದ ಸಹಾಯವನ್ನು ದೊರಕಿಸಲಿಕ್ಕೆ ಪ್ರಯತ್ನ ಮಾಡಬೇಕು. ಸಿಗದೆ ಇದ್ದಲ್ಲಿ ಸಮಾಜವೇ ಟೊಂಕ ಕಟ್ಟಬೇಕು.

ವಿದ್ಯೆಯು ಹೆಚ್ಚಿನ ಬೆಳವಣಿಗೆಗಾಗಿ ಸಮಾಜದಲ್ಲಿ ಅನುಕೂಲತೆ ಇರುವದು ನೆಟ್ಟಗೆ. ಇದಕ್ಕಾಗಿ ವಾಚನಾಲಯಗಳನ್ನು ಸ್ಥಾಪಿಸಬೇಕು. ವಾಚನಾಲಯಗಳು ಎರಡು ತರದವಿರಬೇಕು. (೧) ಸ್ಥಾಯಿಕ, (೨) ಸಂಚಾರಕ. ಈ ಸಂಸ್ಥೆಗಳ ಮೂಲಕ ವಿದ್ಯಾದಾನ ಮಾಡುವದು ಅವಶ್ಯವದೆ. ಇದಕ್ಕೂ ಸರಕಾರದ ಬೆಂಬಲವಿಲ್ಲ. ಸಮಾಜವೇ ಈ ಭಾರವನ್ನು ವಹಿಸಬೇಕು.

ಶಿಕ್ಷಣ ಸಮ್ಮೇಲನದ ಅಧ್ಯಕ್ಷ ಪದವಿಯನ್ನು ಮೈಸೂರ ಶಿಕ್ಷಕರ ಮಹಾವಿದ್ಯಾಲಯದ ಮುಖ್ಯೋಧ್ಯಾಪಕರಾದ ಡಾ. ಎಂ. ಸಿದ್ಧಲಿಂಗಯ್ಯ ಎಮ್. ಎ. ಬೀ. ಟಿ. ಪಿ. ಎಚ್. ಡಿ. ಡಿಪ್. ಎಡ್ಯು. ಈ ಮಹನೀಯರು ವಹಿಸಿದ್ದರು. ಶಿಕ್ಷಣದ ಉದ್ದೇಶವನ್ನು ಇವರು ಚೆನ್ನಾಗಿ ವ್ಯಕ್ತಪಡಿಸಿರುವರು.

ಈ ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳನ್ನು ಕುರಿತು ಪ್ರಸ್ತಾಪಿಸುವ ಮುನ್ನ, ವಿದ್ಯಾಭ್ಯಾಸ ಅಥವಾ ಶಿಕ್ಷಣವೆಂದರೇನೆಂಬುದನ್ನು ಸೂಕ್ಷ್ಮವಾಗಿ ತಮಗೆ ಅರಿಕೆಮಾಡಲೆಳಸುತ್ತೇನೆ. ಈಚೀಚೆಗೆ ಪ್ರಪಂಚದ ಎಲ್ಲ ಭಾಗಗಳಲ್ಲೂ ವಿದ್ಯೆ, ವಿದ್ಯಾಭ್ಯಾಸ, ಶಿಕ್ಷಣ, ಎಂಬೀ ಪದಗಳ ಅರ್ಥವು ಬಹಳ ಮಟ್ಟಿಗೆ ಬದಲಾಯಿಸುತ್ತ ಬಂದಿರು

ತ್ತದೆ. ಅಮೇರಿಕ ದೇಶದ ಶಿಕ್ಷಣ ತತ್ವವಿಶಾರದರಾದ ಜಾನ್ ಡ್ಯೂಯಿ (John Dewey) ಯವರ ಕೀರ್ತಿಯು ವಿಶೇಷವಾಗಿ ಹರಡಿರುವುದು ತಮಗೆಲ್ಲರಿಗೂ ತಿಳಿದೇ ಇರಬೇಕು. ಶಿಕ್ಷಣ ವಿಚಾರದಲ್ಲಿ ಅವರು ಹೇಳುವುದೇನೆಂದರೆ ಓದುವುದು, ಬರೆಯು ವುದು, ಲೆಕ್ಕಮಾಡುವುದು ಮಾತ್ರ ಶಿಕ್ಷಣವಲ್ಲ. ಜೀವನವೇ ಶಿಕ್ಷಣ, ಶಿಕ್ಷಣವೇ ಜೀವನ (Life is Education; Education is Life). ಜೀವನಕ್ರಮವಾ ದರೋ ದಿನ ದಿನಕ್ಕೂ ಬದಲಾಯಿಸುತ್ತಿದೆ. ಜೀವನದ ಹೊಡೆದಾಟದಲ್ಲಿ ಪ್ರತಿಯೊಬ್ಬ ನಿಗೂ ಬೇಕಾದ ಸಾಧನಗಳನ್ನೊದಗಿಸಿ ಸಜ್ಜುಗೊಳಿಸುವುದೇ ಶಿಕ್ಷಣದ ಉದ್ದೇಶ.

ನಮ್ಮ ದೇಶದ ಪಾಠಶಾಲೆಗಳಲ್ಲಿ ಸಾಧಾರಣವಾಗಿ ಮಾನಸಿಕ ವಿದ್ಯಾಭ್ಯಾಸಕ್ಕೆ ಅತಿ ಹೆಚ್ಚಾಗಿ ಗಮನ ಕೊಟ್ಟು, ಇತರ ಉದ್ದೇಶಗಳ ಕಡೆಗೆ ಲಕ್ಷ್ಯಕೊಡದಿರುವುದು ನಮ್ಮ ವಿದ್ಯಾಭ್ಯಾಸಕ್ರಮದ ಒಂದು ದೊಡ್ಡ ನ್ಯೂನತೆ. ಇನ್ನು ಮೇಲಾದರೂ ಶರೀರಾ ರೋಗ್ಯ ರಕ್ಷಣೆಗೆ ಆವಶ್ಯಕವಾದ ಶಿಕ್ಷಣ ಮತ್ತು ವ್ಯಾಯಾಮಾದಿಗಳಿಗೆ ತುಂಬಾ ಹೆಚ್ಚು ಗಮನ ಕೊಡಬೇಕು. ಈಗ ನಮ್ಮ ದೇಶದಲ್ಲಿ ಔದ್ಯೋಗಿಕ ಶಿಕ್ಷಣ ವಿಚಾರವು ಬಹಳ ಮಟ್ಟಿಗೆ ಚರ್ಚಿಸಲ್ಪಡುತ್ತಿದೆ. ಇದು ಬಹಳ ಮುಖ್ಯವಾದ ವಿಷಯ. ಪ್ರತಿಯೊಂದು ಹೈಸ್ಕೂಲಿನಲ್ಲಿಯೂ ವಿದ್ಯಾರ್ಥಿಯು, ಮುಂದೆ ತನ್ನ ಉದ್ಯೋಗವನ್ನು ಸರಿಯಾಗಿ ಚುನಾ ಯಿಸುವುದಕ್ಕೆ ಸಾಧಕವಾಗುವಂತೆ ನಾನಾ ಉದ್ಯೋಗಗಳ ಶಿಕ್ಷಣದ ಏರ್ಪಾಡು (Pre-vocational Training) ಮಾಡಬೇಕು. ನಮ್ಮ ಶಾಲೆಗಳಲ್ಲಿ ಈಗಿರ ತಕ್ಕ ನೈತಿಕ ಸಂಬಂಧವಾದ ಪಾಠಪ್ರವಚನವು ಸಾಲದು. ಬಾಲಕರು ಸ್ವತಂತ್ರವಾಗಿ ಆಲೋಚಿಸಿ ಉತ್ತಮ ನಡವಳಿಕೆಯಾವುದೆಂಬುದನ್ನು ಗ್ರಹಿಸಿ ಉತ್ತಮ ನಡವಳಿಕೆಯನ್ನು ಆಚರಣೆಗೆ ತರಲು ಸಹಾಯಕವಾಗುವಂತಹ ಸ್ಕೌಟ್ ಸಂಘ ಮುಂತಾದುವುಗಳನ್ನು ಹೆಚ್ಚು ಹೆಚ್ಚಾಗಿ ಏರ್ಪಾಡು ಮಾಡಬೇಕು. ನಮ್ಮ ದೇಶದಲ್ಲಿ ಸಾಧಾರಣವಾಗಿ ಪಂಗ ಡಗಳ ಅಭಿಮಾನ, ಜಾತಿಗಳ ಅಭಿಮಾನ ಇವೇ ಹೆಚ್ಚಾಗಿ, ನಾವೆಲ್ಲರೂ ಭಾರತಮಾತೆಯ ಪುತ್ರರು, ಭಾರತ ದೇಶದ ಹಿತವೇ ನಮ್ಮ ಹಿತವೆಂಬ ಭಾವನೆಯು ಬಹಳ ಮಟ್ಟಿಗೆ ಕಡಿ ಮೆಯಾಗಿರುವುದು ಕೇವಲ ಶೋಚನೀಯ ವಿಷಯವಾಗಿರುತ್ತದೆ. ಆದುದರಿಂದ ನಾವು ದೇಶವಾತ್ಸಲ್ಯ ಮಾತ್ರವಲ್ಲದೆ ಅಂತರರಾಷ್ಟ್ರೀಯ ವಾತ್ಸಲ್ಯವನ್ನೂ ಹೆಚ್ಚು ಮಾಡತಕ್ಕ ಶಿಕ್ಷಣ ಕ್ರಮವನ್ನೇರ್ಪಡಿಸಬೇಕು. ಅಲ್ಲದೆ ಪ್ರಪಂಚದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಗೂ ಕೆಲಸ ಮತ್ತು ವಿರಾಮ (work and leisure) ಎರಡೂ ಆವಶ್ಯಕ. ಆದರೆ ವಿರಾಮಕಾಲವನ್ನು ಹೇಗೆ ಸದುಪಯೋಗಪಡಿಸಿಕೊಳ್ಳಬೇಕೆಂಬುದನ್ನು ಅರಿತವರು ಅತಿ ವಿರಳ. ವಿದ್ಯಾರ್ಥಿಗಳ ಸರ್ವತೋಮುಖವಾದ ಅಂದರೆ (Health, Vocation, Intellect, Character, Citizenship, worthy use of leisure) ಶರೀರಾರೋಗ್ಯ, ಔದ್ಯೋಗಿಕ ಮಾನಸಿಕ ನೈತಿಕ ಅಭಿವೃದ್ಧಿ, ದೇಶವಾತ್ಸಲ್ಯ, ವಿರಾಮ

ಕಾಲ ಸದುಪಯೋಗ ಮುಂತಾದ ಉದ್ದೇಶಗಳನ್ನು ಫಲಕಾರಿಯನ್ನಾಗಿ ಮಾಡುವಂತಹ ಪಾಠಪ್ರವಚನಗಳೂ ಮತ್ತು ಶಿಕ್ಷಣ ವಿಧಾನವೂ ಅತ್ಯಾವಶ್ಯಕವೆಂಬ ಅಂಶವನ್ನು ನಾನು ಇಲ್ಲಿ ಅರಿಕೆ ಮಾಡಲಪೇಕ್ಷಿಸುತ್ತೇನೆ.

ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಇವರು ಹೇಳಿದ್ದು

ಬಾಲಕಿಯರಿಗೆ ಬೇಕಾದ ಗೃಹ ಕಾರ್ಯನಿರ್ವಾಹ ಮುಂತಾದ ವಿದ್ಯೆಯನ್ನು ಕಲಿಸಲು ತಕ್ಕ ಏರ್ಪಾಡುಗಳನ್ನು ಮಾಡಿದಲ್ಲಿ ಸಮಾಜದ ಹಿತವು ನೂರ್ಮಡಿಯಾಗಿ ಮುಂದುವರಿಯುವುದು. ಪ್ರಕೃತದಲ್ಲಿ ಗ್ರಾಮಾಂತರಗಳಲ್ಲೆಲ್ಲ ಸರ್ಕಾರಿ ಪ್ರಾಥಮಿಕ ಶಾಲೆಗಳು ಹೇರಳವಾಗಿ ಹುಟ್ಟಿರುವುದರಿಂದ, ಆಯಾಯ ಗ್ರಾಮಗಳಲ್ಲಿರುವ ಪ್ರತಿಯೊಬ್ಬ ವೀರಶೈವ ಮತೀಯನೂ ತನ್ನ ಹೆಣ್ಣು ಮಕ್ಕಳನ್ನು ತಪ್ಪದೆ ಪ್ರಾಥಮಿಕ ಶಾಲೆಗೆ ಕಳುಹಿಸಿಯೇ ತೀರಬೇಕೆಂದು, ಆ ಗ್ರಾಮದ ವೀರಶೈವ ಮುಖಂಡರು ಒತ್ತಾಯಪಡಿಸಬೇಕಾಗಿದೆ. ಅಲ್ಲದೆ ಪ್ರಾಥಮಿಕ ಶಾಲೆಯ ಶಿಕ್ಷಣವು ಮುಗಿದ ನಂತರ ನಮ್ಮ ವಿದ್ಯಾರ್ಥಿನಿಯರು ಹೆಚ್ಚು ವಿದ್ಯಾಭ್ಯಾಸಮಾಡಲು, ಸರ್ಕಾರದವರು ಸ್ಥಾಪಿಸಿರುವ ಮಿಡಲ್ ಮತ್ತು ಹೈಸ್ಕೂಲ್‌ಗಳು ಇಲ್ಲದಿರುವಕಡೆಗಳಲ್ಲಿ ನಮ್ಮ ಸಮಾಜದ ವಿದ್ಯಾಭಿಮಾನಿಗಳು ಖಾಸಗಿ ಮಿಡಲ್ ಮತ್ತು ಹೈಸ್ಕೂಲ್‌ಗಳನ್ನು ಸ್ಥಾಪಿಸಿ, ಅಲ್ಲಿ ನಮ್ಮ ಬಾಲಕಿಯರಿಗೆ ಗೃಹಕಾರ್ಯನಿರ್ವಾಹಕ್ರಮ, ವಿರಾಮಕಾಲವನ್ನು ಸದುಪಯೋಗಪಡಿಸಲು ಸಾಧಕವಾದ ಚಿತ್ರಕೆಲಸ, ಹೊಲಿಗೆ, ಸಂಗೀತ ಮುಂತಾದವುಗಳನ್ನು ಕಲಿಸಬೇಕಾದುದು ಅತ್ಯಾವಶ್ಯಕವಾಗಿದೆ.

ಮಹಾಸಭೆಯ ಅಧ್ಯಕ್ಷಸ್ಥಾನವನ್ನು ಉತ್ತರ ಕರ್ನಾಟಕದ ಜನರಿಗೆಲ್ಲ ಚಿರಪರಿಚಿತರಾದ ಶ್ರೀ. ರಾ|| ಸಾ|| ಫ. ಗು. ಹಳಕಟ್ಟಿ ಬಿ. ಎ. ಎಲ್, ಎಲ್. ಬಿ. ಇವರು ವಹಿಸಿದ್ದರು. ಇವರು ವಿಜಾಪುರದ ಮ್ಯುನಿಸಿಪಾಲಿಟಿಯ ಸ್ಕೂಲ ಬೋರ್ಡಿನ ಚೇರಮನ್ನರಿದ್ದು ಆ ಊರ ಪ್ರಾಥಮಿಕ ಶಿಕ್ಷಣದಲ್ಲಿ ಮನಸು ಹಾಕಿ ಅನೇಕ ಪ್ರಯೋಗಗಳನ್ನು ಮಾಡಿ ಅದನ್ನು ಮುಂದುವರಿಸುತ್ತಿರುವರು. ಇವರ ಅಭಿಪ್ರಾಯಗಳನ್ನು ಶಿಕ್ಷಕರು ಸೂಕ್ಷ್ಮವಾಗಿ ಅಭ್ಯಾಸಿಸುವರೆಂದು ನಾವು ಕೋರುತ್ತೇವೆ.

ನಮ್ಮ ಸದ್ಯದ ಶಿಕ್ಷಣದಲ್ಲಿಯ ಮಹತ್ವದ ದೋಷಗಳನ್ನು ಸಂಕ್ಷೇಪದಲ್ಲಿ ಇವರು ಮುಂದೆ ಕಾಣಿಸಿದಂತೆ ಸೂಚಿಸಿದರು.

ಶಿಕ್ಷಣವು ಸಂಸ್ಕೃತಿಗೆ ಪೋಷಕವೂ ವ್ಯವಹಾರ್ಯವೂ ಇರಬೇಕು.

ಶಿಕ್ಷಣಪದ್ಧತಿಯು ದೇಶದ ಸಂಸ್ಕೃತಿಗೆ ಪರಿಪೋಷಕವಾಗಿರತಕ್ಕದ್ದು. ಆದರೆ ಈ ಪ್ರಕಾರ ನಮಗೆ ಈಗ ದೊರಕುವ ಶಿಕ್ಷಣದ ವ್ಯವಸ್ಥೆಯು ಇರುವದಿಲ್ಲ. ಅದು ಈಗ ಸಂಪೂರ್ಣ ಪಾಶ್ಚಿಮಾತ್ಯ ಪದ್ಧತಿಯ ಅನುಕರಣವಾಗಿದೆ. ಹಿಂದೂವಾಙ್ಮಯ

ಅದರ ಉಜ್ವಲ-ಇತಿಹಾಸ ಅದರ ನಾಗರಿಕತೆ ಇವುಗಳ ಯೋಗ್ಯ ಜ್ಞಾನವು ಆಗುವಂತ
ಅದರ ವ್ಯವಸ್ಥೆಯು ಇರುವದಿಲ್ಲ. ಈಗ ನಾವು ಅನೇಕ ವಿಷಯುಗಳನ್ನು ಕಲಿಯುತ್ತಿ
ಬಹುದು. ಆದರೆ ನಮ್ಮದರ ಜ್ಞಾನವು ನಮಗೆ ಉಂಟಾಗಿರುವದಿಲ್ಲ. ಹಾಗೆಯೆ
ನಮ್ಮ ಶಿಕ್ಷಣಪದ್ಧತಿಯು ವ್ಯವಹಾರ್ಯವೂ ಇಲ್ಲ. ಇದರಿಂದ ನಮ್ಮಲ್ಲಿ ನಿರುದ್ಯೋಗವು
ಹೆಚ್ಚುತ್ತಲಿದೆ. ಈ ಕುಂದುಗಳನ್ನು ನಾವು ಹೋಗಲಾಡಿಸತಕ್ಕದ್ದು.

ಪ್ರಾಥಮಿಕ ಶಿಕ್ಷಣದ ವ್ಯವಸ್ಥೆಯು ಮ್ಯುನಿಸಿಪಾಲಿಟಿ ಹಾಗೂ ಲೋಕಲ
ಬೋರ್ಡುಗಳ ಕೈಸೇರಿದ್ದರ ಮೂಲಕ ಯಾವ ಸುಧಾರಣೆಗಳು ಅವಶ್ಯವಾಗಿರುವವೆಂ
ಬಗ್ಗೆ ಅವರು ನುಡಿದದ್ದು:—

ಶಿಕ್ಷಣದ ಯೋಗ್ಯತೆಯನ್ನು ಬೆಳೆಸುವ ಅವಶ್ಯಕತೆ.

ಪ್ರಾಥಮಿಕ ಶಿಕ್ಷಣಕ್ಕೋಸ್ಕರ ಬೋರ್ಡುಗಳು ಈಗ ಬಹಳ ಹಣವನ್ನು ವೆಚ್ಚ
ಮಾಡುತ್ತಲಿವೆ. ಆದರೆ ಅವುಗಳ ಕಾರ್ಯಗಳು ಮಾತ್ರ ಸಮಾಧಾನಕರವಾಗಿ ನಡೆ
ದಿರುವದಿಲ್ಲ. ಅವು ಒಂದು ವೇಳೆ ಈ ಕಾರ್ಯವನ್ನು ಸರಿಯಾಗಿ ಜರುಗಿಸಿದ್ದಾದರೆ
ಸಮಾಜದ ಅಭಿವೃದ್ಧಿಗೆ ಸ್ಥಿರತರವಾದ ತಳಹದಿಯನ್ನು ಹಾಕಿದಂತೆ ಆಗುತ್ತದೆ. ಈಗ
ಅವು ಶಿಕ್ಷಣದ ಸುಸ್ಥಿತಿ, ಅದರ ಯೋಗ್ಯತೆ, ಅದರ ಉಪಯುಕ್ತತೆ, ಅದರ ಕಾರ್ಯ
ಪದ್ಧತಿಯಲ್ಲಿ ಸುಧಾರಣೆ ಇವೇ ಮೊದಲಾದ ವಿಷಯುಗಳ ಕಡೆಗೆ ಸಂಪೂರ್ಣವಾಗಿ
ಲಕ್ಷಹಾಕತಕ್ಕದ್ದು. ಬರೇ ವಿದ್ಯಾರ್ಥಿಗಳ ಸಂಖ್ಯೆಯನ್ನು ಬೆಳೆಸುವದರ ಕಡೆಗೆ ಲಕ್ಷ
ಕೊಟ್ಟರೆ ಕಾರ್ಯವಾಯಿತೆಂದು ತಿಳಿಯಬಾರದು. ಇದು ಕಠಿಣ ಕೆಲಸವಲ್ಲ. ಶಾಲೆ
ಗಳ ಸಂಖ್ಯೆಯನ್ನು ಬೆಳೆಸಿದರೆ ವಿದ್ಯಾರ್ಥಿಗಳ ಸಂಖ್ಯೆಯು ತಾನೇ ಬೆಳೆಯುವದು
ಆದರೆ ಶಿಕ್ಷಣದ ಯೋಗ್ಯತೆಯನ್ನು ಹೆಚ್ಚಿಸುವದು ಅತ್ಯಂತ ಮಹತ್ವವಾದದ್ದು. ಚಿಕ್ಕ
ಮಕ್ಕಳಲ್ಲಿ ಶಿಕ್ಷಣದ ಅಂಕುರವು ಸರಿಯಾಗಿ ನಾಟಬೇಕು. ಅಂದರೆ ಮಾತ್ರ ಅದು
ಮುಂದೆ ಭರದಿಂದ ಬೆಳೆದು ಅದರ ಪರಿಣಾಮವು ದೇಶಕ್ಕೆ ಹಿತಕರವಾಗುವದು. ಇಲ್ಲ
ದಿದ್ದರೆ ಹಣದ ಅಪವ್ಯಯವೇ ಸರಿ. ಸರಕಾರದವರು ಹೆಚ್ಚಿಗೆ ಹಣ ಕೊಡುವ
ದಿಲ್ಲೆಂಬುದೇನೋ ನಿಜವು. ಆದರೆ ಬೋರ್ಡುಗಳು ತಮಗೆ ದೊರೆದ ಹಣವನ್ನು
ಯೋಗ್ಯ ರೀತಿಯಿಂದ ಖರ್ಚು ಮಾಡಿ, ತಮ್ಮ ಕೈಯಲ್ಲಿರುವ ವಿದ್ಯಾರ್ಥಿಗಳಿಗೆ
ಯೋಗ್ಯ ಶಿಕ್ಷಣವು ದೊರೆಯುವಂತೆ ಮಾಡುವ ಧೋರಣವನ್ನು ಅವು ಸ್ವೀಕರಿಸಬೇ
ಕೆಂದು ನಾನು ಸೂಚಿಸುತ್ತೇನೆ.

ಸದ್ಯದ ವ್ಯವಸ್ಥೆಯಲ್ಲಿರುವ ದೋಷಗಳನ್ನು ಅವರು ಮನಸುಬಿಚ್ಚಿ ಧೈರ್ಯದಿಂದ
ಸಮಾಜದ ಮುಂದೆ ಇಟ್ಟಿರುವರು. ಯಾವದೊಂದು ಮಹತ್ವದ ಸಂಸ್ಥೆಯ ವ್ಯವಸ್ಥೆ
ಯಲ್ಲಿ ಆರಂಭದಲ್ಲಿ ಕೆಲವು ದೋಷಗಳು ಸಮಾಜದಲ್ಲಿ ಸೇರಿಕೊಳ್ಳುವದು ಸೋಜಿಗವಲ್ಲ.

ಹೆ. ಮಕ್ಕಳ ಮುಲ್ಕೀಪರೀಕ್ಷೆಯ (೧೯೩೩) ಪರಿಣಾಮವು

ಧಾರವಾಡ ಸೆಂಟರ (ಕನ್ನಡ)

ನಂ.	ಹೆಸರು	ಪಡೆದ ಗುಣಗಳು
೧.	ಧೋ. ಬ. ಐಯಾತದಕರ	೪೨೬
೨.	ಗೌ. ಹ. ಬೆಣ್ಣಿ	೪೧೯
೩.	ಕೃ. ಶಾ. ಕಲಘಟಗಿ	೪೦೬
೪.	ಪಾ. ವೀ. ಧವಳೆ	೩೯೮
೫.	ಗಂ. ಹು. ಜಾಧವ	೩೯೦
೬.	ವೀ. ಸಿ. ಕಲ್ಯಾಣಿ	೩೮೭
೭.	ಮೀ. ಸು. ಉಳ್ಳೀಗಡ್ಡಿ	೩೭೮
೮.	ಚಿ. ದೇ. ಕಬ್ಬುಲಗೇರಿ	೩೭೬
೯.	ಗೌ. ದ. ಅವಲಕ್ಕಿ	೩೭೧
೧೦.	ಶಂ. ಘ. ತಳವಾರ	೩೫೯
೧೧.	ಹ. ಅ. ಚಂದಾನವರ	೩೪೮
೧೨.	ದ್ವಾ. ರಾ. ಕಾನುಗೋವಿ	೩೪೫
೧೩.	ಅಂ. ಘ. ಚಿಕ್ಕುಂಬಿ	೩೪೪
೧೪.	ಪಾ. ಶಿ. ಜವಳಿ	೩೩೬
೧೫.	ಕ್ಯಾ. ಜೋ. ಪೆಂಟರ	೩೩೪
೧೬.	ರಾ. ಬ. ಸವದತ್ತಿ	೩೧೯
೧೭.	ಮ. ಗು. ಕಲ್ಲೂರ	೩೧೩
೧೮.	ಲೀ. ನಿ. ರಾಮಶಾಲ	೨೯೯

ಹುಬ್ಬಳ್ಳಿ ಸೆಂಟರ

೧.	ರು. ವೀ. ಎಕ್ಕೇರಿಮಠ	೪೫೫
೨.	ಅ. ಗೋ. ಬ್ಯಾಕೋಡೆ	೩೯೩
೩.	ಬ. ಯ. ಅಗಡಿ	೩೪೬
೪.	ಗಂ. ಶಿ. ಕಲ್ಮಠ	೩೪೫
೫.	ಶಾಂ. ದೇ. ನಿರಂಜನ	೩೩೯
೬.	ರ. ಗೋ. ಮಳಗಿಕರ	೩೩೯
೭.	ಗಂ. ದೇ. ಗುಂಡ್ಮಿ	೩೩೭
೮.	ಗಂ. ಮ. ಮಿರಜಿ	೩೧೭
೯.	ಪ್ರ. ಸ. ಮದಕಟ್ಟಿ	೩೧೦
೧೦.	ಮ. ಇ. ಗೋಪಾಳಿ	೩೨೫

ಮರಾಠಿ

೧.	ಮಿ. ಜ. ಗೋಕರ್ಣ	೩೫೨

ಗದಗ ಸೆಂಟರ

೧.	ಮೆ. ಚೌ. ಜಳ್ಳಿ	೩೫೭
೨.	ರು. ಮಾ. ನಿಗದೆ	೩೩೪
೩.	ಜ. ಅ. ಖೋಡೆ	೩೩೨
೪.	ಶಾಂ. ಸೋ. ಸುತ್ತೂರಮಠ	೩೨೫
೫.	ಶಾಂ. ವೀ. ಕಡಗದ	೩೨೧
೬.	ಬಾ. ಭೀ. ಕುಲಕರ್ಣಿ	೨೯೫

ಬೆಳಗಾವ ಸೆಂಟರ

೧.	ಸಾ. ಕಾ. ಲಕ್ಷ್ಮಿ	೪೧೩
೨.	ಸು. ಗ. ಜೋಶಿ	೩೬೮
೩.	ಕಾ. ಬಾ. ಕುಮಾರಮಠ	೩೬೧
೪.	ಗಂ. ಭೀ. ಭೋಸಲೆ	೩೪೯
೫.	ಲ. ಶಾಂ. ಹೊಲೇರ	೩೪೧
೬.	ಚಂ. ಅಂ. ದೇಸಾಯಿ	೩೩೯
೭.	ಕ. ಓ. ಭಾಟೆ	೩೨೭
೮.	ಕಾ. ಬ. ಪೂಜಾರ	೩೨೬
೯.	ವೀ. ಬ. ಚಪ್ಪಾಳಿ	೩೨೩
೧೦.	ಯ. ಮ. ಇಂಗಳಗಿ	೩೧೯
೧೧.	ರ. ಮ. ಬೆನಾಡಿ	೩೧೪
೧೨.	ಸ. ಭಾ. ಶೆಟ್ಟಿ	೨೭೯

ಮರಾಠಿ

೧. ಮ. ದು. ಧೋಪೇಶ್ವರಕರ ೪೫೦
೨. ಲೀ. ವೆಂ. ಸವಣೂರ ೪೨೬
೩. ಗೋ. ಗ. ಬಾಂಬುಲಕರ ೩೬೪
೪. ವ. ಗೋ. ಧೋಪೇಶ್ವರ ೩೬೧
೫. ಅ. ವಿ. ಶಿರಗಾಂವಕರ ೩೫೭
೬. ಶ. ಲ. ನಾತು ೩೩೮
೭. ಸು. ಸ. ಮಹಾರ ೩೩೭
೮. ಸ. ಗಂ. ಘಾಟಕ ೩೩೩
೯. ಗಂ. ವಾ. ಗೋಖಲೆ ೩೨೮
೧೦. ಸೋ. ಸ. ಭೋಸಲೆ ೩೨೩
೧೧. ಅ. ಗೋ. ನಿಂಬಾಳಕರ ೩೧೯
೧೨. ವೇ. ನಾ. ಕಾಳೆ ೩೧೮
೧೩. ಅ. ಗ. ಪಾಟೀಲ ೩೧೬
೧೪. ಇಂ. ವಾ. ಬುದ್ಧಿಕೋಟ ೩೦೮
೧೫. ಬ. ಸಿ. ಮುನೇನಮಠ ೩೦೬
೧೬. ಸು. ಗ. ನಾಡಿಗೇರ ೨೮೦

ವಿಜಾಪೂರ ಸೆಂಟರ (ಕನ್ನಡ)

೧. ಪ್ರ. ಭ. ಪೂಜಾರ ೪೨೫
೨. ಹ. ಯ. ಮೋಪಗಾರ ೪೨೨
೩. ಸಾ. ಬ. ಹಿಂದಿ ೪೦೧
೪. ಈ. ಮ. ಶೀಲವಂತರ ೩೫೯
೫. ಅಂ. ಭೀ. ಬಡಿಗೇರ ೩೩೨
೬. ಶಾ. ವಿ. ಭಂಗಾರ ೩೨೬
೭. ನೀ. ಸಂ. ಮುರಡಿ ೩೨೪
೮. ಭಾ. ಮ. ವಾರದ ೩೧೫
೯. ಮೀ. ವಿ. ಭಂಗಾರಿ ೩೧೪
೧೦. ಸಂ. ತಿ. ದೇವರಡ್ಡಿ ೩೧೨
೧೧. ಪಾ. ಬ. ಇಜರಿ ೨೯೯
೧೨. ಮು. ವೀ. ಮುಚಖಂಡಿ ೨೯೭

ಕಾರವಾರ ಸೆಂಟರ (ಕನ್ನಡ)

೧ ಮು. ವೆಂ. ಕಾನಡೆ ೩೦೯

ಮರಾಠಿ

೧. ಪ್ರೇ. ರು. ವಾಘ ೩೮೯
೨. ಅ. ಮ. ಪಾಲೇಕರ ೩೫೪
೩. ಕ. ಗ. ಬೋರಕರ ೩೫೨
೪. ಪೆ ವಾ. ಪಂಡಿತ ೩೪೯
೫. ಅಂ. ಪಾ. ಕಲ್ಯಾಣಪೂರಕರ ೩೩೬
೬. ಅಂ. ಆ. ದಿವಗಿ ೩೨೨
೭. ಮು. ಮು. ವೇಥೇಕರ ೩೧೭
೮. ಮಿ. ಶಿ. ವಾಘ ೩೧೫
೯. ಸುಂ. ಹೋ. ವಾಗಳೆ ೩೦೮
೧೦. ವಿ. ಮಾ. ಕುಲಕರ್ಣಿ ೩೦೬
೧೧. ಸು. ಸ. ಕಸಬೇಕರ ೩೦೫
೧೨. ತಾ. ಕೇ. ದೇಸಾಯಿ ೩೦೩
೧೩. ಇಂ. ವಿ. ಮುಜುಮದಾರ ೨೯೯
೧೪. ಸು. ದ. ವಾಘ ೨೯೫
೧೫. ಕ. ಗ. ನಾಡಕರ್ಣಿ ೨೮೭
೧೬. ಸಂ. ವೆಂ. ಗೋಕರ್ಣ ೨೭೮
೧೭. ಕಾ. ಬ. ಗುಡಿನೋ ೨೭೭

ಪ್ರಕಟಣೆ.

ಕನ್ನಡ ಬುಕ್ ಕಮಿಟಿಯವರು ಮಂಜೂರ ಮಾಡಿದ ಪುಸ್ತಕಗಳು.

ರಾವಸಾಹೇಬ ಎಫ್. ಜಿ. ಹಳಕಟ್ಟಿ ಬಿ.ಎ., ಎಲ್‌ಎಲ್.ಬಿ., ವಿಜಾಪೂರ

ಇವರು ಪ್ರಸಿದ್ಧಪಡಿಸಿದ ಮುಂದೆ ಕಾಣಿಸಿದ ಪುಸ್ತಕಗಳು ಮಾಧ್ಯಮಿಕ ಶಾಲೆಗಳ ಪ್ರಾಯಿಝು ಹಾಗು ವಿಧ್ಯಾರ್ಥಿಗಳ ಲಾಯಬ್ರರಿ ಬುಕ್ಕಾಗಿ ಮಂಜೂರಿಯಾಗಿವೆ.

೧.	ಬಸವೇಶ್ವರನ ವಚನಗಳು ೨ನೇಯ ಆ.	...	೧- ೮-೦
೨.	ಮಹಾದೇವಿಯಕ್ಕನ ವಚನಗಳು ೧೯೩೧	...	೦- ೬-೦
೩.	ಪ್ರಭುದೇವರ ವಚನಗಳು ೧೯೩೧	...	೨-೪ -೦
೪.	ಲಿಂಗ ಮತ್ತು ಪರಮಾತ್ಮನ ವಚನಗಳು ೧ನೇ ಆ.	...	೦-೧೨-೦
೫.	ಚನಲಿಂಗನ ವಚನಗಳು ೧ನೇ ಆ. ೧೯೨೭	...	೨- ೦-೦
೬.	ಏಕೋತ್ತರಶತಸ್ಥಲ ೧ನೇ ಆ.	...	೧- ೪-೦
೭.	ದೇವರದಾಸಿಮಯ್ಯನ ವಚನಗಳು ೧ನೇ ಆ.	...	೦-೧೦-೦
೮.	ಹಡಪದಪ್ಪಣ್ಣರ ವಚನಗಳು	...	೦- ೬-೦
೯.	ಲಿಂಗಮ್ಮನ ವಚನಗಳು ೧ನೇ ಆ.	...	೦- ೩-೦
೧೦.	ಸಕಲೇಶಮಾದರಸನ ವಚನಗಳು ೧ನೇ ಆ.	...	೦- ೩-೦
೧೧.	ಚನ್ನಬಸಪ್ಪ ಬಸಲಿಂಗಪ್ಪ ಧಾರವಾಡ ಇವರ ಜೀವನಚರಿತ್ರೆ ೧೯೩೦		೦- ೪-೦
೧೨.	ಶೂನ್ಯ ಸಂಪಾದನೆ ೧ನೇ. ಆ.	...	೩- ೦-೦
೧೩.	ಆದಯ್ಯನ ವಚನಗಳು ೧೯೩೧	...	೦- ೬-೦
೧೪.	ವಚನ ಶಾಸ್ತ್ರಸಾರ ಭಾಗ ೧ ೨ನೇ ಆ.	...	೩- ೦-೦
೧೫.	ಶ್ರೀ ಚನ್ನಬಸವೇಶ್ವರನ ವಚನಗಳು ೧ನೇ ಆ	...	೦-೧೨-೦
೧೬.	ಸಿದ್ಧರಾಮೇಶ್ವರನ ವಚನಗಳು ೧ನೇ ಆ.	...	೧- ೦-೦
೧೭.	ಗಣದಾಸಿ ವೀರಮ್ಮನವರ ವಚನಗಳು ೧ನೇ ಆ.	...	೦- ೪-೦

ನಂಬರು.	ಬುಕ್ಕುಗಳ ಹೆಸರು.	ಗ್ರಂಥಕರ್ತರು.	ಪ್ರಕಾಶಕರು.	ಬೆಲೆ.	ಯಾಕೆ ಕ್ಕೋಸ್ಕರ ಮಂ. T. ಟಿ. L. ಆ. P. ಪ್ರಾಯರುಥು.
೧೮	ದೇಶಭಕ್ತಿಯ ಕಥೆಗಳು ೧೯೩೦	ಮಿ. ಫ. ಗು. ಹಳಕಟ್ಟಿ ಬಿ. ಎ. ಎಲ್. ಎಲ್. ಬಿ.	ಮಿ. ಫ. ಗು. ಹಳಕಟ್ಟಿ ಬಿ. ಎ. ಎಲ್. ಎಲ್. ಬಿ.	೦—೩—೦	ಅ. ವ್ಹ. ಸ್ಕೂಲುಗಳ ಟೆಕ್ಸ್ಟ ಬುಕ್ಕಾಗಿ ಹಾಗು ಮಾಧ್ಯಮಿಕ ಶಾಲೆಗಳ ಪ್ರಾಯರುಥು ಹಾಗು ವಿದ್ಯಾರ್ಥಿಗಳ ಮಾಧ್ಯಮಿಕ ಶಾಲೆಗಳ ಲಾಯಬ್ರರಿ ಬುಕ್ಕಾಗಿ
೧೯	ಪ್ರಬುದ್ಧ ಒಕ್ಕಲಿಗ ವ್ಹಾಲ್ಯೂಮ ೨. ೧೯೩೨	ಮಿ. ವ್ಹಿ. ಸಿ. ಪಾವಟೆ	ವೇ. ಎಚ್. ಎಸ್. ಶಿವಲಿಂಗ ಶಾಸ್ತ್ರಿ ಧಾರವಾಡ	೦—೧೨—೦	ಪ್ರಾಥಮಿಕ, ಮಾಧ್ಯಮಿಕ ಶಾಲೆಗಳ ಸಪ್ಲಿಮೆಂಟರಿ ರೀಡರಾಗಿ ಆ. ವ್ಹ. ಶಾ. ಟೆಕ್ಸ್ಟ.
೨೦	ನಮ್ಮ ಊರಿನ ರಸಿಕರು	ಮಿ. ಜಿ. ಕೆ. ರಾಮಸ್ವಾಮಿ ಅಯ್ಯಂಗಾರ	ರಾಮಮೋಹನ ಕಂಪನಿ ಬಳೇಪೇಟೆ ಬೆಂಗಳೂರ	೧—೦—೦	ಸದರ
೨೧	ಹಳ್ಳಿಯ ಚಿತ್ರಗಳು	ಮಿ. ಜಿ. ಕೆ. ರಾಮಸ್ವಾಮಿ ಅಯ್ಯಂಗಾರ	ಸದರ	೧—೦—೦	ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿಗಳ ಲಾಯಬ್ರರಿ ಬುಕ್ಕಾಗಿ
೨೨	ಉದರವೈರಾಗ್ಯ (೧೯೩೦)	ಮಿ. ಆರ್. ವ್ಹಿ. ಜಾಹಗೀರದಾರ	ಆರ್. ವ್ಹಿ. ಜಹಾಗೀರದಾರ ಕರ್ನಾಟಕ ಕಾಲೇಜ ಧಾರವಾಡ	೧—೦—೦	ಸದರ
೨೩	ವೈದ್ಯರಾಜ ೧೯೩೨	ಶ್ರೀರಂಗ	ದಿ ಡ್ರಾಮಾಟಿಕ್ ಅಸೋಸಿಯೇಶನ್ ಕರ್ನಾಟಕ ಕಾಲೇಜ ಧಾರವಾಡ	೧—೦—೦	ಸದರ

೨೪	ಆಹುತಿ ೧೯೩೦	ಮಿ. ಎ. ಎನ್. ಕೃಷ್ಣರಾವ	ದಿ ವ್ಹಿ. ಜಿ. ಟಿ. ಜನರಲ್ ಏಜನ್ಸಿ ಬಳೇಪೇಟೆ ಬೆಂಗಳೂರ	೧—೦—೦	ಸದರ
೨೫	ಮಂಗಳೂರ ಸಾಯನ್ಸ ಸಿರೀಜ ಪ್ರಕೃತಿಶಾಸ್ತ್ರ ೧೯೨೯	ಟಿ. ಮಂಗೇಶರಾವ	ಬಾಸೆಲ ಮಿಶನ್ ಬುಕ್ ಟ್ರ್ಯಾಕ್ಟ ಡಿಪೋ ಮಂಗಳೂರ	೦—೬—೬	ಪ್ರಾಥಮಿಕ, ಮತ್ತು ಮಾಧ್ಯಮಿಕ, ಟ್ರೇನಿಂಗ ಸ್ಕೂಲಗಳ ಪಠ್ಯ ಪುಸ್ತಕ.
೨೬	ಮಾನಸ ಸರೋವರ ಮತ್ತು ಕೈಲಾಸಕ್ಷೇತ್ರ ಯಾತ್ರಾ ಪ್ರಕರ್ಣ ೧ನೇ ಆ. ೧೯೨೯	ಪಿ. ಎಸ್. ಶ್ರೀಕಂಠಶಾಸ್ತ್ರಿ	ಪಿ. ಎಸ್. ಶ್ರೀಕಂಠಶಾಸ್ತ್ರಿ ಶ್ರೀ. ಶಂಕರವಿಜಯ ಪ್ರೆಸ್ ಮೈಸೂರ	೦—೮—೦	ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿಗಳ ಇನಾಮು ಮತ್ತು ಲಾಯಬ್ರರಿ ಬುಕ್ಕಾಗಿ
೨೭	ಹರಿಹರನ ರಗಳೆಗಳು ೧ನೇ ಆವೃತ್ತಿ	ರಾವಸಾಹೇಬ ಎಫ್. ಜಿ. ಹಳಕಟ್ಟಿ	ರಾವಸಾಹೇಬ ಎಫ್. ಜಿ. ಹಳಕಟ್ಟಿ ಬಿ. ಎ. ಎಲ್. ಎಲ್. ಬಿ. ವಕೀಲ ವಿಜಾಪೂರ	೦—೯—೦	ಮಾಧ್ಯಮಿಕ ಶಾಲೆಗಳ ಪಠ್ಯ ಪುಸ್ತಕ
೨೮	ಆದದ್ದೇನು (೯೧೩೧)	ಮಿ. ಎನ್. ಕೃಷ್ಣರಾವ	ವ್ಹಿ. ಜಿ. ಟಿ. ಜನರಲ್ ಏಜನ್ಸಿ ಬಳೇಪೇಟೆ ಬೆಂಗಳೂರ	೦—೬—೦	ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿಗಳ ಲಾಯಬ್ರರಿ ಬುಕ್ಕಾಗಿ
೨೯	ಶ್ರೀ ಶಂಕರ ವಿಜಯ ಮೊದಲನೇ ಭಾಗ ೧೯೩೨	ಮಿ. ಪಿ. ಎಸ್. ಶ್ರೀಕಂಠಶಾಸ್ತ್ರಿ	ಪಿ. ಎಸ್. ಶ್ರೀಕಂಠಶಾಸ್ತ್ರಿ ಶಂಕರವಿಜಯ ಪ್ರೆಸ್ ಮೈಸೂರ	೩—೦—೦	ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿಗಳ ಇನಾಮು ಮತ್ತು ಲಾಯಬ್ರರಿ ಬುಕ್ಕಾಗಿ

ಅನುಕ್ರಮ.	ಬುಕ್ಕುಗಳ ಹೆಸರು.	ಗ್ರಂಥಕರ್ತರು.	ಪ್ರಕಾಶಕರು.	ಬೆಲೆ.	ಯಾತಕ್ಕೋಸ್ಕರ ಮಂ. T. ಟಿ.
೩೦	ಹಿಂದುಸ್ಥಾನದಲ್ಲಿಯ ಮುಸಲ್ಮಾನರ ಆಳಿಕೆ (ಅಥವಾ ಮುಹಮಡನ್ ರೂಲ ಇನ್ ಇಂಡಿಯಾ)	ಮಿ. ಎನ್. ಪಿ. ಮೋಡಕ	ಆರ್. ಆರ್. ಕಮಲಾಪೂರ ಗದಗ	೦—೮—೦	ಪ್ರಾಥಮಿಕ ಶಾಲೆಗಳ ಪಠ್ಯ ಪುಸ್ತಕ
೩೧	ನುಡಿಗನ್ನಡಿ ಮೊದಲನೇ ಭಾಗ ೧ (೧೯೩೩)	ಮಿ. ಎಮ್. ಪಿ. ಪೂಜಾರ	ಗ. ಬಿ. ಜೋಶಿ ಲಾಯಿನ್ ಬಜಾರ ಧಾರವಾಡ	೦—೩—೬	ಪ್ರಾಥಮಿಕ ಮಾಧ್ಯಮಿಕ ಶಾಲೆಗಳ ಪಠ್ಯಪುಸ್ತಕ
೩೨	ಶ್ರೀ ಕೃಷ್ಣಕಥಾ (೧೯೩೨)	ಮಿ. ಎಮ್. ಪಿ. ಪೂಜಾರ	ಚಿತ್ರಶಾಲಾ ಪ್ರೆಸ್ ಪುನಾ ನಂ. ೨	೦—೬—೦	ಸಪ್ಲಿಮೆಂಟರಿ ರೀಡರ (ಪ್ರಾಥಮಿಕ ಶಾಲೆಗಳಲ್ಲಿ)

ಮುಂಬಯಿ ಇಲಾಖೆಯೊಳಗಿನ ಉರ್ದು ಶಾಲೆಗಳಿಗಾಗಿ ಪುಣೆಯ ಉರ್ದು ಬುಕ್ ಕಮಿಟಿಯು ಮಂಜೂರ ಮಾಡಿದ ಪುಸ್ತಕಗಳ ಯಾದಿಯು.

ನಂ.	ಬುಕ್ಕುಗಳ ಹೆಸರು.	ಗ್ರಂಥಕರ್ತರು.	ಪ್ರಕಾಶಕರು.	ಬೆಲೆ.	ಯತಕ್ಕೋಸ್ಕರ ಮಂಜೂರ ಮಾಡಿದೆ
೧	ಜಗ್ರಾಫಿಯಾ—ಎ—ಝಿಲಾ—ಎ—ಪೂನಾ (ಉರ್ದು ಪ್ರಾ. ಶಾಲೆಗಳ ೩ನೆಯ ಇಯತ್ತೆಗಾಗಿ) ೧ನೆ ಆ. ೧೯೩೨	ಅಬ್ದುಲ್ ರಹಿಮಾನ ಅಹ ಮ್ಮದಸಾ॥ ಹೆ. ಮಾ. ಉರ್ದು ಮ್ಯು. ಸ್ಕೂಲ ನಂ. ೧೦ ಪೂನಾ ಸಿಟಿ.	ಗ್ರಂಥಕರ್ತ	೦—೫—೬	ಟೀಚರ್ಸ ಲಾಯಬ್ರರಿಗಾಗಿ

೧	ಉರ್ದುಕಾ ಕಾಯದಾ, ಹಿಸ್ಸಯೇ ಅವ್ವಲ್ ೮ನೇ ಆ. ೧೯೩೨	...	ದಿ ಅಂಜುಮನ್ ಎ. ಹಿಮಾ ಯತ್ ಎ. ಇಸ್ಲಾಮ್ ಲಾಹೋರ	೦—೦—೧೦	ವಿದ್ಯಾರ್ಥಿಗಳಿಗೆ ಉಪಯುಕ್ತ
೨	ಉರ್ದುಕಾ ಕಾಯದಾ ದುವಮ್ ೪ನೇ ಆ. ೧೯೨೯	...	ಸದರ	೦—೦—೧೦	ಸದರ
೩	ಉರ್ದುಕಿ ಪಹಿಲಿ ಕಿತಾಬ ೬ನೇ ಆ. ೧೯೩೨	...	ಸದರ	೦—೨—೪	P ಮತ್ತು L ಉರ್ದು ಪ್ರಾ. ಶಾ. ಬಾಯ್ಜ ಅ್ಯಂಡ ಗರ್ಲ ಶಾ. ಗಳಿಗೆ
೪	ಸದರ ದುಸರಿ ಕಿತಾಬ ೪ನೇ ಆ. ೧೯೩೧	...	ಸದರ	೦—೩—೬	ಸದರ
೫	ಸದರ ತಿಸರಿ ,,	...	ಸದರ	೦—೪—೯	ಸದರ
೬	ಸದರ ಚೌಥಿ	...	ಸದರ	೦—೬—೩	ಸದರ
೭	ಮುಫೀದುಲ್ ಅಥ್ಫಾಲ್ ೨ನೇ ಆ. ೧೯೩೦	ಮೌಲ್ವಿ ಕರಿಮುಹಮ್ಮದ ಹುಸೇನ ಟೀಚರ ಮದ್ರಾಸ ಎ–ಬೈತೂಲ ಉಲೂಮ್, ಮಾಲೇಗಾಂವ	ಗ್ರಂಥಕರ್ತ	೦—೨—೬	ಮತ್ತು L

ನಂ.	ಬುಕ್ಕುಗಳ ಹೆಸರು.	ಗ್ರಂಥಕರ್ತರು.	ಪ್ರಕಾಶಕರು.	ಬೆಲೆ.	ಯಾ ತರಗತಿಗೆ (ಸ್ಕೂಲಿಗೆ) ಮಂಜೂರ ಮಾಡಿದೆ
೯	ಜಗ್ರಾಫಿಯಾ —ಎ— ಜದೀದ ಪಹಿಲಿ ಕಿತಾಬ ೨ನೇ ಆ. ೧೯೩೨	ಮುನಸಿರಾಮ ಆಗ್ರಾವಾಲಾ ಬಿ. ಈ. ಡಿ. (ಎಡಿನ್‌ಬರೋ) ಎಫ್.ಆರ್.ಜಿ.ಎಸ್.ಲಂಡನ್	ಮೆ. ಮ್ಯಾಕ್ಮಿಲನ್ ಆ್ಯಂಡ ಕಂ। ಮುಂಬೈ	೦—೧೨—೦	ಸದರ
೧೦	ಆಸ್ಮಾನ ಯೆ ಹಿಂದ ೧ನೇ ಆ. ೧೯೩೨	...	ಸದರ	೦—೧೨—೦	ಸದರ
೧೧	ಆಯಿನೆ ಹಿಂದ ೧ನೇ ಆ. ೧೯೩೨	...	ಸದರ	೦—೧೫—೦	ಸದರ
೧೨	ಉರ್ದುಕಾ ಕಾಯಿದಾ ೧ನೇ ಆ. ೧೯೩೨	...	ದಿ ಅಂಜುಮನ್ ಹಿಮಾಯತ್ —ಎ— ಇಸ್ಲಾಮ ಲಾಹೋರ	೦—೦—೧೧	ಟೆಕ್ಸ್ಟ ಫಾರ ಮಕ್ತಾಬ್ಸ ಅನ್‌ಸುಯಿಟೇಬಲ್ ಆ್ಯಜ ಟೆಕ್ಸ್ಟ ಫಾರ ಉರ್ದು ಸ್ಕೂಲ
೧೩	ಉರ್ದುಕಿ ಪಹಿಲಿ ಕಿತಾಬ ೪೪ನೇ ಆ. ೧೯೩೧	...	ಸದರ	೦—೧—೧	ಸದರ
೧೪	ಉರ್ದುಕಿ ದುಸರಿ ಕಿತಾಬ ೪೨ನೇ ಆ. ೧೯೩೨	...	ಸದರ	೦—೩—೩	ಸದರ

ವ್ಯಕ್ತಿಯಂತೆ ಸಂಘಗಳೂ ತಪ್ಪುಗಳನ್ನು ಮಾಡಿ ಮಾಡಿ ಸುಧಾರಣೆಹೊಂದುತ್ತವೆ. ಆದಾಗ್ಯೂ ನಮ್ಮಲ್ಲಿ ಪರಿಸ್ಥಿತಿಯ ಮೂಲಕ ಸೇರಿಕೊಂಡಿರುವ ಕುಂದುಕೊರತೆಗಳನ್ನು ಸಮಾಜಪ್ರಮುಖರೂ ಶಿಕ್ಷಣಾಭಿಮಾನಿಗಳೂ ಆದ ಮಹಾನುಭಾವರು ಅಧಿಕಾರವಾಣಿಯಿಂದ ನುಡಿದಹೊರತು ಇವು ತೀವ್ರವಾಗಿ ಹೋಗಲಾರವು. ಶ್ರೀ. ಹಳಕಟ್ಟಿಯವರು ಈ ಬಗ್ಗೆ ಬಹು ವಿಷಾದಪೂರ್ವಕವಾಗಿ ಹೇಳಿದ್ದೇನೆಂದರೆ: —

ಬೋರ್ಡುಗಳ ಪರಾಙ್ಮುಖತೆ

ಸಭ್ಯಗೃಹಸ್ಥರೇ, ಶಿಕ್ಷಣಸುಧಾರಣೆಯ ವಿಷಯವು ಬಹು ವಿಸ್ತೃತವಾದದ್ದದೆ. ಅವುಗಳನ್ನು ನಾವು ಮಾಡಿದ್ದಾದರೆ ದೇಶದ ಪ್ರಗತಿಯು ಬಹು ಭರದಿಂದ ಸಾಗದೆ ಇರದು. ಈ ಸುಧಾರಣಾ ಕಾರ್ಯಗಳನ್ನೆಲ್ಲ ಈ ಪರಿಷತ್ತಿನ ಸಮಯದಲ್ಲಿ ನಾನು ವಿವರಿಸುವದು ಅಪ್ರಸ್ತುತವು. ಆದರೆ ಇಂಥ ಮಹತ್ವದ ವಿಷಯದ ಬಗ್ಗೆ ಬೋರ್ಡುಗಳು ಅತ್ಯಂತ ಅಜಾಗ್ರತೆ ಪಡುತ್ತಿರುವದರಿಂದ ಯೋಗ್ಯ ಶಿಕ್ಷಣ ಪ್ರಸಾರಕ್ಕೆ ಬಹಳ ಹಾನಿಯಾಗುತ್ತಲಿದೆ, ಎಂದು ನಾನು ಹೇಳದೆ ಇರಲಾರೆನು. ಬೋರ್ಡುಗಳಲ್ಲಿ ಅನೇಕ ಬಗೆಯ ಪಕ್ಷಪಾತಗಳು ನಡೆಯುತ್ತಲಿವೆ. ಮೆಂಬರರೂ ಬೋರ್ಡ ಅಧಿಕಾರಿಗಳೂ ಮಾಸ್ತರರ ನೇಮಣೂಕಿಗಳಿಗೆ ಮಾತ್ರ ಹೆಚ್ಚಾಗಿ ಲಕ್ಷಕೊಡುತ್ತಾರೆಯೇ ಹೊರ್ತು ಶಿಕ್ಷಣದ ನಿಜವಾದ ಕಾರ್ಯಗಳಿಗೆ ಲಕ್ಷಕೊಡುವದಿಲ್ಲ. ವರ್ಗಾವರ್ಗಿಗಳು ಅನಾವಶ್ಯಕವಾಗಿ ಮೇಲಿಂದ ಮೇಲೆ ಆಗುವದುಂಟು. ಶಿಕ್ಷಣಸುಧಾರಣಾ ವಿಷಯಗಳು ಬೋರ್ಡಿನ ಸಭೆಗಳಲ್ಲಿ ಆಗಿಂದಾಗ್ಗೆ ಚರ್ಚಿಸಲ್ಪಡುವದಿಲ್ಲ. ಇದರಿಂದ ಶಿಕ್ಷಕರು ತಮ್ಮ ನಿಜವಾದ ಶೈಕ್ಷಣಿಕ ಯೋಗ್ಯತೆಯನ್ನು ಹೆಚ್ಚಿಸಿಕೊಳ್ಳುವದನ್ನು ಬಿಟ್ಟುಕೊಟ್ಟಿರುವರು. ಈ ಮೂಲಕ, ಯೋಗ್ಯ ಶಿಕ್ಷಣ ಹೊಂದಿದ ವಿದ್ಯಾರ್ಥಿಗಳು ಪ್ರಾಥಮಿಕ ಶಾಲೆಗಳಿಂದ ಹೊರಡದಂತೆ ಆಗಿದೆ. ಇದರ ದುಷ್ಪರಿಣಾಮವು ಮಾಧ್ಯಮಿಕ ಶಿಕ್ಷಣದ ಮೇಲೆಯೂ ಆಗಹತ್ತಿದೆ. ಈಚೆಗೆ ಚುನಾವಣೆಗಳಲ್ಲಿ ಅತ್ಯಂತ ಈರ್ಷ್ಯಾಸೂಯೆಗಳು ಉಂಟಾಗುವದರಿಂದ ಇವುಗಳ ಪ್ರತಿಬಿಂಬವು ಬೋರ್ಡುಗಳ ಕಾರ್ಯಗಳಲ್ಲಿಯೂ ತೋರಹತ್ತಿದೆ. ಇದು ಸಮಾಜಕ್ಕೆ ಮತ್ತು ದೇಶಕ್ಕೆ ಘಾತಕವಲ್ಲವೇ ? ಇದು ಬಹುಜನ ಸಮಾಜದ ಪ್ರಗತಿಗೆ ಹಾನಿಕಾರಕವಲ್ಲವೇ ! ಈ ಸ್ಥಿತಿಯನ್ನು ಸುಧಾರಿಸಲಿಕ್ಕೆ ಪ್ರತಿಯೊಬ್ಬ ವೀರಶೈವನು ಮುಂದಾಗಬೇಕೆಂದು ನಾನು ಆಶಿಸುತ್ತೇನೆ.

ದೊಡ್ಡವರ ಶಿಕ್ಷಣದ ಬಗ್ಗೆ ಅವರು ನುಡಿದದ್ದು

ದೊಡ್ಡವರ ಶಿಕ್ಷಣ

ಬಹುಜನ ಸಮಾಜದಲ್ಲಿ ತೀವ್ರ ತಿಳುವಳಿಕೆಯು ಉತ್ಪನ್ನವಾಗಲಿಕ್ಕೆ ಒತ್ತಾಯದ ಶಿಕ್ಷಣವು ಆವಶ್ಯಕವಾಗಿರುವದೆಂಬುದೇನೋ ನಿಜವು. ಆದರೆ ಈಗಿನ ಅವನತಿಯ ಕಾಲ

ದಲ್ಲಿ ಸರಕಾರದಿಂದ ಹೀಗೆ ಸಹಾಯವಾದೀತೆಂದು ನಮಗೆ ತೋರುವದಿಲ್ಲ. ಆದರೂ ಜನರಲ್ಲಿ ತಿಳುವಳಿಕೆಯನ್ನು ಹರವಲಿಕ್ಕೆ ಅನೇಕ ಸಾಧನಗಳಿರುತ್ತವೆ. ಅತ್ತ ಕಡೆಗೆ ಅವರು ತಮ್ಮ ಲಕ್ಷವನ್ನು ಒಯ್ಯಬೇಕು. ಉದಾಹರಣಾರ್ಥವಾಗಿ ದೇಶದಲ್ಲೆಲ್ಲ ವಾಚನಾಲಯಗಳನ್ನೂ ದೊಡ್ಡವರ ಶಿಕ್ಷಣಾಲಯಗಳನ್ನೂ ಸ್ಥಾಪಿಸುವ ಕ್ರಮವನ್ನು ಕೈಕೊಳ್ಳಬೇಕು. ಜನತೆಯಲ್ಲಿ ಜ್ಞಾನಪ್ರಸಾರ ಮಾಡಲು ಇವು ಅತ್ಯುತ್ತಮ ಸಾಧನಗಳಾಗಿವೆ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ವಿಶೇಷವಾಗಿ ಮಧ್ಯಯುರೋಪಖಂಡದಲ್ಲಿ ಇಂಥ ಸಂಸ್ಥೆಗಳು ಬಲವಾದ ಸಾಮಾಜಿಕ ಕಾರ್ಯಗಳನ್ನು ಮಾಡುತ್ತಲಿವೆ. ಇವು ವಿಶೇಷವಾಗಿ ಹಿಂದುಳಿದ ವರ್ಗಗಳಿಗೆ ಉಪಯುಕ್ತವಾಗಿರುತ್ತವೆ. ದೊಡ್ಡವರ ಶಿಕ್ಷಣಾಲಯಗಳಿಗೆ ಔದ್ಯೋಗಿಕ ಸ್ವರೂಪವನ್ನು ನಾವು ಕೊಟ್ಟದ್ದಾದರೆ ಅವು ಹೆಚ್ಚಿಗೆ ಉಪಯುಕ್ತವಾಗುವವು.

ನಮ್ಮ ಶಿಕ್ಷಣವು ವ್ಯವಹಾರ್ಯವಿಲ್ಲೆಂಬದನ್ನು ಹೇಳಿ ಆ ಬಗ್ಗೆ ಮಾಡತಕ್ಕ ಉಪಾಯಗಳನ್ನು ಕುರಿತು ಅವರು ಅಂದದ್ದು :—

ಔದ್ಯೋಗಿಕ ಒಲವಿನ ಶಿಕ್ಷಣ

ಈಗ ನಮ್ಮ ಪ್ರಾಥಮಿಕ ಶಾಲೆಗಳಲ್ಲಿ ಒಕ್ಕಲತನದ ಒಲವಿನ ಶಿಕ್ಷಣವನ್ನು ಕೊಡುವದುಂಟು. ಅದರಂತೆಯೇ ಔದ್ಯೋಗಿಕ ಒಲವಿನ ಶಿಕ್ಷಣವನ್ನು ಇವುಗಳಲ್ಲಿ ಪ್ರಾರಂಭಿಸುವದು ಬಹಳ ಮಹತ್ವದ್ದೆಂದು ನನಗೆ ತೋರುತ್ತದೆ. ವಿಜಾಪುರ ಮುನಸಿಪಲ್ಲ ಶಾಲೆಗಳಲ್ಲಿ ಸ್ವಲ್ಪ ಇಂಗ್ಲಿಷ ಶಿಕ್ಷಣದೊಡನೆ ಈ ಔದ್ಯೋಗಿಕ ಒಲವಿನ ಶಿಕ್ಷಣವನ್ನು ಪ್ರಾರಂಭಿಸಿದ್ದು ಅದು ಉಪಯೋಗವುಳ್ಳದ್ದೆಂದು ನನ್ನ ಅನುಭವಕ್ಕೆ ಬಂದಿದೆ. ಇಂಥ ಒಲವಿನ ಶಿಕ್ಷಣವು ಚಿಕ್ಕಂದಿನಲ್ಲಿಯೇ ಇತರ ಅಭ್ಯಾಸದೊಡನೆ ನಡೆಯಬೇಕು. ಶಿಕ್ಷಣಕ್ರಮದಿಂದ ಭಿನ್ನವಾಗಿರಬಾರದು. ಯಾಕಂದರೆ ದೊಡ್ಡವರಾದ ಮೇಲೆ ಔದ್ಯೋಗಿಕ ಶಿಕ್ಷಣವು ಚನ್ನಾಗಿ ಹತ್ತುವದಿಲ್ಲ.

ಔದ್ಯೋಗಿಕ ಶಾಲೆಗಳು

ಉಚ್ಚ ಪ್ರಾಥಮಿಕ ಶಾಲೆಗಳಿಗೆ ಮತ್ತು ಹಾಯಸ್ಕೂಲುಗಳಿಗೆ ಹೊಂದಿ ಔದ್ಯೋಗಿಕ ಶಾಲೆಗಳು ಇರತಕ್ಕದ್ದು. ಹಣದ ದೃಷ್ಟಿಯಿಂದ ಇವುಗಳಿಂದ ಸ್ವಲ್ಪ ಹಾನಿಯಾದರೂ ಚಿಂತೆಯಿಲ್ಲ, ಇವುಗಳು ಅವಶ್ಯವಾಗಬೇಕು. ಬೋರ್ಡುಗಳೂ ನಮ್ಮ ಶಿಕ್ಷಣ ಸಂಸ್ಥೆಗಳೂ ಈ ಬಗ್ಗೆ ವಿಶೇಷ ಲಕ್ಷಗೊಡತಕ್ಕದ್ದು. ಮತ್ತು ಯೋಗ್ಯ ಅಭ್ಯಾಸಕ್ರಮಗಳನ್ನು ಏರ್ಪಡಿಸತಕ್ಕದ್ದು. ಧನಿಕರು ಇಂಥವುಗಳಿಗೋಸ್ಕರ ಸಹಾಯ ಮಾಡಬೇಕು. ಇವುಗಳಲ್ಲಿ ಡ್ರಾಯಿಂಗ, ಸಾಯನ್ಸ, ಕೈಗಾರಿಕೆ ಇವುಗಳನ್ನು ಸೇರಿಸಲೇಬೇಕು.

ದ್ವಂದ್ವಸಮಾಸ ವಿಚಾರ

ಲೇಖಕ:—ಪಂಡಿತ ಕೇಶವಶರ್ಮ ಗಲಗಲಿ.

ಅನೇಕ ನಾಮಪದಗಳು ಚಕಾರದ (ಮತ್ತು) ಅರ್ಥದಲ್ಲಿ ಕೂಡಿ ದ್ವಂದ್ವಸಮಾಸ ವುಂಟಾಗುವದು. ಚಕಾರದ ಅರ್ಥಗಳು ನಾಲ್ಕು (೧) ಸಮುಚ್ಚಯ (೨) ಅನ್ವಾಚಯ (೩) ಇತರೇತರಯೋಗ (೪) ಸಮಾಹಾರ.

ಎರಡರಲ್ಲಿ ಒಂದು ಆನುಷಂಗಿಕವಾಗಿದ್ದರೆ ಅನ್ವಾಚಯವೆನ್ನುವರು. ಭಿಕ್ಷೆಯನ್ನು ಬೇಡು; ಆಕಳನ್ನೂ ಹುಡುಕಿಕೊಂಡು ಬಾ. ಇಲ್ಲಿ ಭಿಕ್ಷೆಯನ್ನು ಬೇಡುವದು ಮುಖ್ಯವಾದದ್ದು. ಅದರ ಅನುಷಂಗ (ಸಂಬಂಧ) ದಿಂದ ಆಕಳನ್ನು ಹುಡುಕು. ಇಲ್ಲಿ ಭಿಕ್ಷೆಯನ್ನು ಬೇಡುತ್ತ ಆಕಳನ್ನು ಹುಡುಕುವದು ಸಹಜವಾಗಿ ಆಗಿರಬೇಕು. ಅದಕ್ಕಾಗಿ ವಿಶಿಷ್ಟಶ್ರಮವೇನು ಬೇಕಾಗಿಲ್ಲ. ಆ ಕರ್ಮವು ಸಹಜವಾಗಿ ಸಾಧಿಸಿರಬೇಕು. ಇಲ್ಲಿ ಚಕಾರದ ಅರ್ಥವಿದ್ದರೂ, ದ್ವಂದ್ವ ಸಮಾಸವಾಗಲಾರದು. ಯಾಕಂದರೆ ಸಮಾಸವಾಗಬೇಕಾದರೆ ಮುಖ್ಯವಾಗಿ ಸಾಮರ್ಥ್ಯ (ಸಂಗತಾರ್ಥತೆ) ಇರಬೇಕಾಗುತ್ತದೆ. ಅದು ಇಲ್ಲಿ ಇರುವದಿಲ್ಲ * ಸಮುಚ್ಚಯವೆಂದರೆ ಪರಸ್ಪರ ನಿರಪೇಕ್ಷವಾದ ಪದಗಳು ಒಂದರಲ್ಲಿ ಅನ್ವಯಿಸುವದು. ' ಈಶ್ವರನನ್ನೂ ಗುರುವನ್ನೂ ಭಜಿಸು; ' ಇಲ್ಲಿ ಈಶ್ವರನೂ ಗುರುವೂ ಪರಸ್ಪರ ನಿರಪೇಕ್ಷರಾಗಿರುವರು. ಇಲ್ಲಿಯೂ ಸಾಮರ್ಥ್ಯವಿಲ್ಲದ್ದರಿಂದ ಈಶ್ವರ ಗುರುಗಳನ್ನು ಭಜಿಸೆಂದು ದ್ವಂದ್ವ ಸಮಾಸವನ್ನು ಮಾಡಲಾಗದು. ಇನ್ನು ಉಳಿದ ಎರಡು ಚಕಾರದ ಅರ್ಥದಲ್ಲಿ ದ್ವಂದ್ವ ಸಮಾಸವುಂಟಾಗುವದು.

ಮಿಲಿತ (ಕೂಡಿದ) ಪಾದಗಳ ಅನ್ವಯವು (ಪರಸ್ಪರ ಸಂಬಂಧವು) ಇತರೇತರಯೋಗವು, ಸಮಾಹಾರವೆಂದರೆ ಸಮೂಹ (ಒಟ್ಟು) ಈ ಎರಡು ಅರ್ಥಗಳಲ್ಲಿ ದ್ವಂದ್ವ ಸಮಾಸವಾಗುವದು.

---

* ಸಾಮರ್ಥ್ಯವಿಲ್ಲದಿದ್ದರೆ ಸಮಾಸವೇ ಆಗುವದಿಲ್ಲ. ಸಾಮರ್ಥ್ಯವೆಂದರೆ ಒಂದು ಅರ್ಥವಾಗುವಿಕೆ (ಏಕಾರ್ಥೀಭಾವ.) ಅಳಿಯೂ ಗಿಳಿಗಳೂ ಅಳಿಗಿಳಿಗಳೆಂದು ಸಮಾಸವಾಗಬಹುದು. ಆದರೆ "ಹಾಡಿತು ಅಳಿ; ಗಿಳಿ ಓದಿತು" ಎಂಬಲ್ಲಿ ಅಳಿ ಗಿಳಿಗಳಲ್ಲಿ ಸಮಾಸವಾಗಲಾರದು. ಯಾಕೆಂದರೆ ಇಲ್ಲಿ ಏಕಾರ್ಥೀಭಾವವಿಲ್ಲ. ಜಗಳದಲ್ಲಿ ಜಾಣನು ಜಗಳಜಾಣನು ಎಂದು ಸಮಾಸವಾಗಬಹುದು. ಆದರೆ " ಬಯ್ದನು ಜಗಳದಲ್ಲಿ; ಜಾಣನು ಊಟದಲ್ಲಿ" ಎಂಬ ವಾಕ್ಯವಿದ್ದರೆ ಜಗಳ-ಜಾಣ-ಶಬ್ದಗಳಲ್ಲಿ ಸಮಾಸವಾಗಲಾರದು. ಯಾಕೆಂದರೆ ಸಾಮರ್ಥ್ಯವಿಲ್ಲ.

ಸಾಹಿತ್ಯವು (ಪದಗಳ ಅರ್ಥವು ಒಮ್ಮೆಲೆ ಪ್ರತೀತಿಯಾಗುವದು) ತೋರುತ್ತಿದ್ದರೆ ನಾಮಪದವು ಉತ್ತರ ಪದವಾದ ನಾಮಪದದೊಡನೆ ಸಮಾಸವಾಗುವದೇ ದ್ವಂದ್ವವೆಂದು ಶಾಸನಕಾರನು ಹೇಳುವನು.

ಇತರೇತರ ದ್ವಂದ್ವಕ್ಕೆ ಉದಾಹರಣೆಗಳು. ಮರವೂ ಗಿಡವೂ ಮರಗಿಡಗಳು. ಅಳಿಯೂ ಗಿಳಿಯೂ ಅಳಿಗಿಳಿಗಳೂ, ಕರಿಯೂ ತುರಗವೂ ಕರಿತುರಗಗಳು. ವಾಸುದೇವನೂ ಅರ್ಜುನನೂ ವಾಸುದೇವಾರ್ಜುನರು. ಕಾಮವೂ ಮದವೂ ಮತ್ಸರವೂ ಕಾಮಮದ ಮತ್ಸರಗಳು. ಗ್ರೀಷ್ಮವೂ ವಸಂತವೂ ಗ್ರೀಷ್ಮವಸಂತಗಳು.

ಸಮಾಹಾರಕ್ಕೆ ಹತ್ತೂ ಎಂಟೂ ಹದಿನೆಂಟು. ಹಸ್ತಿ (ಆನೆ) ಯೂ, ಅಶ್ವವೂ ರಥವೂ ಪದಾತಿಯೂ (ಕಾಲಾಳು) ಹಸ್ತ್ಯಶ್ವರಥ ಪದಾತವು. (ಸಮಾಹಾರದಲ್ಲಿ ಏಕವಚನವುಂಟಾಗುವದು ಸಮಾಸಾಂತದಲ್ಲಿ ಅಪ್ರತ್ಯಯವು ಸೇರಿದೆ) ಅರಿಸಿನವೂ ಕುಂಕುಮವೂ (ಇವುಗಳ ಒಟ್ಟು) ಅರಿಸಿನ ಕುಂಕುಮವು. ಹೂವೂ ವೀಳ್ಯವೂ ಇವುಗಳ ಒಟ್ಟು (Collection) ಹೂವೀಳ್ಯವು.

ದ್ವಂದ್ವ ಸಮಾಸವನ್ನು ಮಾಡುವಾಗ ಪಾಲಿಸಬೇಕಾದ ಕೆಲವು ಮುಖ್ಯ ನಿಯಮಗಳಿರುವವು. ಅವನ್ನಿಲ್ಲಿ ಹೇಳುವೆವು.

(೧) ಸ್ವರಾದಿ ಅಕಾರಾಂತ ಪದವನ್ನು ದ್ವಂದ್ವ ಸಮಾಸದಲ್ಲಿ ಮೊದಲು ಇಡುತ್ತಾರೆ. ಈಶನೂ ಕೃಷ್ಣನೂ, ಈಶಕೃಷ್ಣರು.

ಬಹುಪದಗಳಿರುವಲ್ಲಿ ಈ ನಿಯಮವಿಲ್ಲ, ಅಶ್ವವೂ ರಥವೂ ಇಂದ್ರನೂ ಅಶ್ವರಥೇಂದ್ರರು ಇಲ್ಲವೆ ಇಂದ್ರಾಶ್ವರಥಗಳು.

(೨) ಕಡಿಮೆ ಸ್ವರವುಳ್ಳ ಪದವನ್ನು ಮೊದಲು ಇಡುತ್ತಾರೆ. ಶಿವನೂ ಕೇಶವನೂ ಶಿವಕೇಶವರು. ಶಿವ ಇದರಲ್ಲಿ ಎರಡು ಸ್ವರಗಳಿವೆ, ಕೇಶವ ಶಬ್ದದಲ್ಲಿ ಮೂರು ಸ್ವರಗಳಿವೆ.

(೩) ಅಣ್ಣತಮ್ಮಂದಿರಲ್ಲಿ ಅಣ್ಣನ ಹೆಸರನ್ನು ಮೊದಲು ಇಡುವರು. ಯುಧಿಷ್ಠಿರನೂ ಅರ್ಜುನನೂ ಯುಧಿಷ್ಠಿರಾರ್ಜುನರು.

ಏಕಶೇಷದ್ವಂದ್ವ.

ರೂಪದಿಂದಾಗಲಿ, ಅರ್ಥದಿಂದಾಗಲಿ ಸಮಾನವಾಗಿರುವ ಪೂರ್ವಪದಗಳೆಲ್ಲ ಲುಪ್ತವಾಗಿ ಉತ್ತರಪದವೊಂದೆ ಉಳಿದದ್ದಾದರೆ ಅದಕ್ಕೆ ಏಕಶೇಷದ್ವಂದ್ವವೆನ್ನುವ ರೂಢಿ

ಪ್ರಕಟನೆ.

ಕನ್ನಡ ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಮಂಜೂರಾದ ಶಾಲೋಪಯೋಗಿ

ಪುಸ್ತಕಗಳು.

ನುಡಿಗನ್ನಡಿ (೧ನೇಯಭಾಗ) ಪಂ. ಪೂಜಾರಕೃತ. ಕನ್ನಡ ೪ನೇ ಇಯತ್ತೆಗಾಗಿ. ಇದರಲ್ಲಿ ೪ನೆಯ ಇಯತ್ತೆಗೆ ಬೇಕಾಗುವ ವ್ಯಾಕರಣವಿಷಯುಗಳು ಹೊಸ ಶಿಕ್ಷಣ ಪದ್ಧತಿಯನ್ನನುಸರಿಸಿ ಸುಲಭವಾಗಿ ಬರೆಯಲ್ಪಟ್ಟಿವೆ. ಒಂದೊಂದು ಪಾಠದಲ್ಲಿ ಒಂದೊಂದು ವಿಷಯವುಂಟು. ಪ್ರತಿಪಾಠದ ಕೊನೆಗೆ ಪ್ರಶ್ನೆಗಳೂ ಅಭ್ಯಾಸನಗಳೂ ಇವೆ. ಬೆಲೆ ೦—೩—೬. ಪ್ರಾ. ಮಾ. ಶಾ. ಗಳ ಟೆಕ್ಸ್ಟ್ ಎಂದು ಹೊಸದಾಗಿ ಮಂಜೂರಾಗಿದೆ.

ನುಡಿಗನ್ನಡಿ (೨ನೇಯ ಭಾಗ) ಪೂಜಾರಕೃತ. ಕನ್ನಡ ೫ನೆಯ ಇಯತ್ತೆಗಾಗಿ. ಅಭ್ಯಾಸಪತ್ರಿಕೆಯ ಮೇರೆಗೆ ಈ ಇಯತ್ತೆಗೆ ಬೇಕಾಗುವ ಎಲ್ಲ ವಿಷಯುಗಳು ಇದರಲ್ಲಿ ಚೆನ್ನಾಗಿ ವಿವೇಚಿಸಲ್ಪಟ್ಟಿವೆ. ಕೊನೆಗೆ "ಲೇಖನಚಿಹ್ನಗಳು" ಈ ವಿಷಯವು ಹೊಸದಾಗಿ ಸೇರಿಸಲ್ಪಟ್ಟಿದೆ. ಬೆಲೆ ೦—೪—೦.

ನುಡಿಗನ್ನಡಿ (೩ನೆಯ ಭಾಗ) ಪೂಜಾರಕೃತ. ೬—೭ ಇಯತ್ತೆಗಳಿಗಾಗಿ. ಇದರಲ್ಲಿ ಹೊಸಗನ್ನಡ ವ್ಯಾಕರಣದ ಮುಖ್ಯವಿಷಯುಗಳೂ ಛಂದಸ್ಸಿನ ಮುಖ್ಯ ವಿಷಯುಗಳೂ ಸೇರಿವೆ. ಬೆಲೆ ೦—೧೦—೦.

ಕಥಾರೂಪವಾದ ಕರ್ನಾಟಕದ ಇತಿಹಾಸ—ಏಚ್. ಜಿ. ಬೆಂಗೇರಿ ಬಿ. ಎ. (ಆನರ್ಸ.) ಮತ್ತು ಕುರಂದವಾಡಕೃತ. ಕನ್ನಡ ೪ನೆಯ ಇಯತ್ತೆಗಾಗಿ. ಟೆಕ್ಸ್ಟ ಎಂದು ಹೊಸದಾಗಿ ಮಂಜೂರಾಗಿದೆ. ೫ ನಕಾಶೆಗಳೂ ೧೩೫ ಚಿತ್ರಗಳೂ ಇವೆ. ಅಭ್ಯಾಸಪತ್ರಿಕೆಯ ಸೂಚನೆಯ ಮೇರೆಗೆ ಕರ್ನಾಟಕದ ಸಮಗ್ರ ಇತಿಹಾಸದ ಕಲ್ಪನೆ ಕೊಡುವ ೩೬ ಕಥೆಗಳು ಸುಲಭ ಆಕರ್ಷಕ ಭಾಷೆಯಲ್ಲಿ ಬರೆದಿವೆ. ಕಥೆಗಳ ನಡುವೆ ಐತಿಹಾಸಿಕಭಾಗವು ಕೊಟ್ಟಿದೆ. ಬೆಲೆ ೦—೬—೦.

ಗಣಿತಾದರ್ಶ. ೧—೨—೩ ಜೋಶಿಕೃತ. ೨—೩—೪ ಇಯತ್ತೆಗಳಿಗಾಗಿ. ಎಲ್ಲ ಕಡೆಗೆ ಪ್ರಸಾರವಾಗಿವೆ. ಬೆಲೆ ಕ್ರಮವಾಗಿ ೪—೬—೮ ಆಣೆಗಳು.

ಈ ಪುಸ್ತಕಗಳು ಎಲ್ಲ ಬುಕ್‌ಡಿಪೋಗಳಲ್ಲಿ ದೊರೆಯುವವು.

—ಪ್ರಕಾಶಕರು.

Reg. No. B. 2567

ಸರಕಾರದಿಂದ ಮಂಜೂರಾದ

ಆರೋಗ್ಯ ಶಾಸ್ತ್ರದ ಹೊಸ ಟೆಕ್ಸ್ಟ ಪುಸ್ತಕವು

ಶರೀರ ಸಂಗೋಪನ ಶಾಸ್ತ್ರ.

ಬೆಲೆ ೧೦ ಆಣೆ ಕಮಿಶನ್ ೧೦೦ಕ್ಕೆ ೨೦.

ಲೇಖಕ:—ದ. ಬಾ ಬರ್ವೆ, ಬಿ. ಎಜಿ. ರಿಸರ್ಚ ವರ್ಕರ, ಕೇತಕೀ ಕಾಲೇಜ, ಪುಣೆ.

ಈ ಪುಸ್ತಕದಲ್ಲಿ ಕನ್ನಡ ೫, ೬, ೭, ಹಾಗು ವ್ಹಾ. ಫಾಯನಲ್ ಪರೀಕ್ಷೆಗೆ ಬೇಕಾಗುವ ಎಲ್ಲ ವಿಷಯವು ಬಂದಿರುವದು. ಇದರ ಮರಾಠೀ ಆವೃತ್ತಿಯು ಮಧ್ಯಭಾಗದ ಬಹುತರ ಎಲ್ಲ ಸಾಲೆಗಳಲ್ಲಿ ಟೆಕ್ಸ್ಟ, ಎಂದು ಉಪಯೋಗವಾಗುತ್ತಿರುವದು. ಸರಕಾರದ ಟ್ರೇನಿಂಗ ಕಾಲೇಜುಗಳು ಹಾಗು ಪ್ರ್ಯಾಕ್ಟಿಸಿಂಗಸ್ಕೂಲುಗಳಲ್ಲಿಯೂ ಇದೇ ಟೆಕ್ಸ್ಟ ಎಂದು ಉಪಯೋಗವಾಗುತ್ತಿರುವದು.

ಈ ಪುಸ್ತಕವನ್ನು ತಜ್ಞರು ತುಂಬಾ ಹೊಗಳಿದ್ದಾರೆ. ಬೆಲೆಯಲ್ಲಿ ಇಷ್ಟು ಅಗ್ಗವಾದ ಪುಸ್ತಕವು ಬೇರೊಂದಿಲ್ಲ. ಪುಸ್ತಕದಲ್ಲಿ ೨೨೫ ಪುಟಗಳೂ, ೫೫ ಆಕೃತಿಗಳೂ (ಲಾಯಿನ್ ಬ್ಲಾಕ್ಸ) ೨ ಬಣ್ಣದ ಆಕೃತಿಗಳೂ ಒಂದು ನಕಾಶವೂ ಇರುವವು.

ಪುಸ್ತಕಗಳು ಸಿಕ್ಕುವ ಸ್ಥಳಗಳು:—

ಸ್ಟೂಡಂಟ್ಸ ಓನ್ ಬುಕ್‌ಡಿಪೋ, ಧಾರವಾಡ, ತ. ನಾ. ಗೋಡಬೋಲೆ,ಪುಣೆ, ಹಾಗು ಬೆಳಗಾಂವ, ಹುಬ್ಬಳ್ಳಿ, ಕಾರವಾರ, ವಿಜಾಪುರ ಇಲ್ಲಿಯ ಎಲ್ಲ ಬುಕ್ ಸೇಲರುಗಳಲ್ಲಿ

ಮಿ. ಸುರಜಭಾನ ಭವಾನಿಪ್ರಸಾದ ಆಲೂರ (ಪಾಂಡೆ) ಇವರು ಧಾರವಾಡ ಸರಕಾರಿ ಹಾಯಸ್ಕೂಲಿನಲ್ಲಿ ಶಿಕ್ಷಕರಾಗಿದ್ದರಷ್ಟೇ. ಇವರ ಚರಿತ್ರವನ್ನು ತಾ. ೧–೧೨–೧೯೩೩ರ ಒಳಗಾಗಿ ಕನ್ನಡದಲ್ಲಿ ಬರೆದು ಕಳಿಸಿದವರಲ್ಲಿ ಮೂವರಿಗೆ ರೂ. ೧೦; ರೂ. ೬; ರೂ. ೪ ಹೀಗೆ ಮೂರು ಇನಾಮುಗಳು, ೧-೧-೩೪ಕ್ಕೆ ಕೊಡಲ್ಪಡುವವು. ಇನಾಮುಗಳನ್ನು ನಿರ್ಣಯಿಸುವ ಪೂರ್ಣ ಅಧಿಕಾರವು ಕೆಳಗೆ ಸಹಿ ಮಾಡಿದವರಿಗೆ ಇರುವದು.

ಚಂ. ಸು. ಪಾಂಡೆ, ರಿಟಾಯರ್ಡ ಪೋಸ್ಟಮಾಸ್ತರ, ಶಿವಮೊಗ್ಗಾ.

ಸ್ಯಾಂಪಲ್] [ಪುಕ್ಕಟೆ

ಉತ್ತಮ ಮಸೀ ಚೀಟುಗಳು

ನೀಲೀಕಪ್ಪು, ಕೆಂಪು, ಜಾಂಬಳಿ ಮಸಿಯ ಚೀಟಿಗಳು ಈ ಕಂಪನಿಯು ಬಹಳ ಜನರಿಂದ ಶಿಫಾರಸ ಪಡೆದು ಮೆಡಲ್ಲುಗಳನ್ನು ಸಂಪಾದಿಸಿರುತ್ತದೆ.

ದರಗಳು

೧೦೦	ಚೀಟುಗಳಿಗೆ	೦—೭—೦
೫೦೦	,,	೧—೧೪—೦
೧೦೦೦	,,	೩—೦—೦
೧೦೦೦೦	,,	೨೭—೮—೦ (ರೇಲ್ವೆ ಫ್ರೀ)

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರಮಾಡಿರಿ.

ಕರ್ನಾಟಕ ಇಂಕ ಕಂಪನಿ,
ಬಾಗಲಕೋಟೆ

Reg. No. B. 2567

ಕನ್ನಡ
ಪ್ರಾಥಮಿಕ ಶಿಕ್ಷಣ

(ಇದರಲ್ಲಿ, ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

Kannada Prathamik Shikshana

— JULY 1933 —

ಸಂಪಾದಕ— **ವೆಂಕಟೇಶ ನರಸಿಂಗರಾವ ಮುಗದಾಳ** ಬಿ. ಎ.,

ಸಂಪುಟ ೭೦] ಜುಲೈ ೧೯೩೩ [ವರ್ಷ ೫ ಸಂ ೪

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ	ಪುಟ
೧.	ಬುದ್ಧಿ ಪರೀಕ್ಷೆ	೧–೧೮
೨.	ಚೀನೆಯ ಇಯತ್ತೆಯ ಭೂಗೋಲ	೧೯–೨೪
೩.	ಹಿಂದುಸ್ತಾನದಲ್ಲಿಯ ಕುರುಡುತನವನ್ನು ತಪ್ಪಿಸಲಿಕ್ಕೆ ಶಿಕ್ಷಕರು ಮಾಡಬಹುದಾದ ಉಪಾಯಗಳು	೨೫–೨೯
೪.	ಪುಸ್ತಕ ಪರಿಚಯ	೨೯–೩೦
೫.	ಪರೀಕ್ಷೆಯ ಪರಿಣಾಮ	೩೦–೩೧
೬.	ಬರೆದು ಬಂದ ಪತ್ರಗಳು	೩೨

Printed by K. R. Bhise at the Karnatak Printing Works, Dharwar
& Published by V. N. Magdal, B. A.,
Head Master, Training School, Dharwar, at his Office

ಬಣ್ಣದ ಹಾಗು ಸಾದಾ ನಕಾಶ-ಚಿತ್ರಗಳಿಂದೊಡಗೂಡಿದ

ಹಾಗು

ಪ್ರದೇಶ ಪದ್ಧತಿಯಿಂದ ಬರೆಯಲ್ಪಟ್ಟ

೪ನೆಯ ಇಯತ್ತೆಯ

ಸಚಿತ್ರ-ಭೂವರ್ಣನೆ

ಅಂದ ಮುದ್ರಣ! ಸುಂದರ ಚಿತ್ರ!! ಗ್ಲೇಜಕಾಗದ!!! ಚಿತ್ರ-ನಕಾಶ—೬೫

(ಬೆಲೆ:— ೭ ಆಣೆ)

ಮುನ್ನುಡಿ ಲೇಖಕರು:— ಎಮ್. ರಾಮಚಂದ್ರನ್
ಬಿ. ಎ. ಬೀ. ಟಿ. ಇ. ಆಫೀಸರ ಡಿ. ಎಸ್. ಬಿ. ಬೆಳಗಾವ.

ಈ ಭೂಗೋಲವು "ಗೊತ್ತಿದ್ದ ಸಂಗತಿಯಿಂದ ಗೊತ್ತಿಲ್ಲದ ಸಂಗತಿಗೆ ಸಾಗು" ಎಂಬ ಶಿಕ್ಷಣದ ತತ್ವಕ್ಕನುಸರಿಸಿ ಬರೆಯಲ್ಪಟ್ಟಿರುವದರಿಂದ ಶಿಕ್ಷಕರಿಗೆ ಭೂಗೋಲ ಶಿಕ್ಷಣವನ್ನು ಸಾಗಿಸಲು ಯೋಗ್ಯ ಮಾರ್ಗದರ್ಶಕವಾಗಿರುವದಲ್ಲದೆ ಪ್ರಸಂಗಕ್ಕೆ ತಕ್ಕ ಚಿತ್ರ-ನಕಾಶಗಳಿದ್ದು ವ್ಯವಹಾರಕ್ಕೆ ಉಪಯುಕ್ತವಾದ ವಿಷಯವು ಮನೋರಂಜಕವಾಗಿರುವದರಿಂದ ಬೇಸರಪಡೆಯದೆ ವಿಷಯ ಜ್ಞಾನಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಸುಲಭಸಾಧನವಾಗಿರುವದು. ಆದುದರಿಂದ ಭೂಗೋಲ-ವಿಷಯದಲ್ಲಿ ತಜ್ಞರಾದ ಪ್ರೊ. ಎಸ್. ಜೀ. ಪುರಾಣಿಕ ಎಂ. ಎ., ಹಂಸರಾಜ ಪ್ರಾಗಜಿ ಠಾಕರ್ಸಿ ಕಾಲೇಜ, ನಾಸಿಕ ಮತ್ತು ಶ್ರೀ. ಡಿ. ಎಸ್. ಪರಮಾಜ ಎಂ.ಎ., ಎಲ್‌ಎಲ್. ಬಿ. ವಕೀಲ ಬೆಳಗಾವ, ಮೊದಲಾದ ಪದವೀಧರರು ಸದ್ಯದ ಭೂಗೋಲ-ಶಿಕ್ಷಣಕ್ಕೆ ಕನ್ನಡದಲ್ಲಿ ಯೋಗ್ಯ ಸಾಧನ ಲಭಿಸಿತೆಂದು ಶಿಫಾರಸುಮಾಡಿರುವರು. ಕಾರಣ ಶಿಕ್ಷಕ-ಶಿಕ್ಷಿಕೆಯರು ಈ ಪುಸ್ತಕದ ಒಂದು ಪ್ರತಿಯನ್ನಾದರೂ ತೆಗೆದುಕೊಂಡು ಮನವರಿಕೆಮಾಡಿಕೊಳ್ಳಬೇಕಾಗಿ ಅಪೇಕ್ಷೆ.

ಟೀಪು:— ಮಾದರಿಯ ಪ್ರತಿ ಬೇಕಾದವರು ಕೆಳಗಣ ವಿಳಾಸಕ್ಕೆ ಎಂಟು ಆಣೆಗಳ ಪೋಸ್ಟ ಸ್ಟ್ಯಾಂಪ ಕಳುಹಿಸಿದಲ್ಲಿ ವ್ಹಿ. ಪಿ. ವೆಚ್ಚವಿಲ್ಲದೆ ಪುಸ್ತಕವು ಕೈಸೇರುವದು.

ವಿಳಾಸ:—

ಶ್ರೀಬಲಭೀಮ ಸ್ಟೋರ್ಸ, ಕಾಗವಾಡ.
ಜಿ. ಬೆಳಗಾಂವ,

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:— **ವೆಂಕಟೇಶ ನರಸಿಂಗರಾವ ಮುಗದಾಳ, ಬಿ. ಎ.,**

ಸಂಪುಟ ೨೦ ||| ಜುಲೈ ೧೯೩೩ ||| ವರ್ಷ ೫; ಸಂ. ೪

ಬುದ್ಧಿ ಪರೀಕ್ಷೆ

ಲೇಖಕರು:—ಶ್ರೀ. ವಿ. ವಿ. ಕಾಮತ ಬಿ. ಎ. ಟಿ ಡಿಪ್ (ಎಡಿನ್‌ಬರೋ) ಹಾಯಸ್ಕೂಲು ಧಾರವಾಡ

(ಶ್ರೀ. ಕಾಮತ ಇವರು ಕಳೆದ ಎರಡು ವರ್ಷದ ಶಿಕ್ಷಣ ಯೋಜನೆಗಳಲ್ಲಿ ಈ ಹೊಸ ವಿಷಯವನ್ನು ಕುರಿತು ಪ್ರಯೋಗ ಸಹಿತವಾಗಿ ಶಿಕ್ಷಕವೃಂದಕ್ಕೆ ಉಪನ್ಯಾಸ ಮಾಡಿದರು. ಆ ಉಪನ್ಯಾಸಗಳ ಸಾರಾಂಶವನ್ನು ನಮ್ಮ ವಿಜ್ಞಾಪನೆಯ ಮೇರೆಗೆ ಅವರು ಬರೆದು ಕಳಿಸಿರುವರು. ವಿಷಯವು ಹೊಸದಾದರೂ ಪ್ರಾ. ಶಿಕ್ಷಣದ ದೃಷ್ಟಿಯಿಂದ ಒಳ್ಳೇ ಮಹತ್ವದ್ದಾಗಿದೆ. ಆದ್ದರಿಂದ ಇದನ್ನು ನಮ್ಮ ವಾಚಕರು ಚೆನ್ನಾಗಿ ಅಭ್ಯಾಸಿಸುವರೆಂದು ನಂಬಿದ್ದೇವೆ.)

ಇತಿಹಾಸ:— ಅನಾದಿಕಾಲದಿಂದ ತತ್ವಜ್ಞಾನಿಗಳು ಮಾನವ ಮನಸ್ಸಿನ ಅಭ್ಯಾಸವನ್ನು ಒಳ್ಳೇ ಆಸಕ್ತಿಯಿಂದ ಮಾಡುತ್ತ ಬಂದಿರುವರು. ಪುರಾತನ ಕಾಲದಲ್ಲಿ ಪಾಶ್ಚಾತ್ಯರಲ್ಲಿ ಪ್ಲೇಟೋ, ಅರಿಸ್ಟಾಟಲ ಎಂಬ ತತ್ವಜ್ಞಾನಿಗಳು ಆಗಿಹೋಗಿರುವರು. ಅವರು ಮನಸ್ಸಿನ ನೆಲೆಯನ್ನು ಹಿಡಿದು ಅದರ ಕಾರ್ಯಗಳ ಸಂಬಂಧವನ್ನು ಗೊತ್ತು ಪಡಿಸುವದಕ್ಕೆ ಪ್ರಯತ್ನಪಟ್ಟಿರುವರು. ಇವರ ತರುವಾಯ ಯುರೋಪಖಂಡದಲ್ಲಿ ಕಾಲಕಾಲಕ್ಕೆ ಆಗಿಹೋದ ಅನೇಕ ತತ್ವಜ್ಞಾನಿಗಳು ಇದರ ಅಭ್ಯಾಸವನ್ನು ಮಾಡಿ ತಮ್ಮ ವಿಚಾರಗಳನ್ನು ಬರೆದಿಟ್ಟಿರುವರು; ಆದರೆ ಪ್ರಾಚೀನಕಾಲದ ತತ್ವಜ್ಞಾನಿಗಳು ತಮ್ಮ ಸ್ವಂತ ಮನಸ್ಸು ಯಾವಯಾವ ಕಾರ್ಯಗಳನ್ನು ಹ್ಯಾಗೆ ಮಾಡುತ್ತದೆಂಬದನ್ನು ಕಂಡುಹಿಡಿದು ಮಾನಸಶಾಸ್ತ್ರದ ವಿವರಣವನ್ನು ಮಾಡಿರುವರು. ಇಂದಿಗೂ ಎಷ್ಟೋ

ಮಾನಸಶಾಸ್ತ್ರಜ್ಞರು ಇದೇ ಕ್ರಮವನ್ನು ಅನುಸರಿಸಿ ಈ ಕೆಲಸವನ್ನು ನಡೆಸಿರುವರು. ಆದರೆ ಆಧುನಿಕ ಮಾನಸಶಾಸ್ತ್ರವಿವರಣೆಯಲ್ಲಿ ಇತರರ ಮನಸ್ಸಿನ ಕಾರ್ಯಗಳನ್ನು ನಿರೀಕ್ಷಿಸಿ ಮಾನಸಶಾಸ್ತ್ರದ ನಿಯಮಗಳನ್ನು ಕಟ್ಟುವದರ ಕಡೆಗೆ ಶಾಸ್ತ್ರಜ್ಞರ ಪ್ರವೃತ್ತಿಯು ಹೆಚ್ಚಾಗಹತ್ತಿರುವದು. ಹಳೆಯ ಪದ್ಧತಿಗೆ ಮಾನಸಶಾಸ್ತ್ರದಲ್ಲಿ **ಸ್ವಾನುಭವ ಮಾನಸಶಾಸ್ತ್ರ**ವೆಂದೂ ಹೊಸಪದ್ಧತಿಗೆ **ಪರಾನುಭವ** ಮಾನಸಶಾಸ್ತ್ರವೆಂದೂ ಹೆಸರು ಕೊಡಬಹುದು. ಹಳೆಯ ಪದ್ಧತಿಯಲ್ಲಿ ಸ್ವಪರೀಕ್ಷೆಮಾಡುವ ಪರಿಪಾಠವು ಇತ್ತು. ತಮಗೆ ಬಂದ ಅನುಭವಗಳ ಮೇಲಿಂದ ಶಾಸ್ತ್ರ ಸಿದ್ಧಾಂತಗಳನ್ನು ನಿರ್ಣಯಿಸುವ ಒಲವು ಪ್ರಬಲವಾಗಿತ್ತು. ಹೊಸಪದ್ಧತಿಯಲ್ಲಿ ಒಂದೇ ಪರಿಸ್ಥಿತಿಯಲ್ಲಿ ಹಲವರ ಮನಸ್ಸುಗಳು ಯಾವ ಕಾರ್ಯಗಳನ್ನು ಮಾಡುವವೆಂಬದನ್ನು ನೋಡಿ ಮನಸ್ಸಿನ ಕಾರ್ಯಗಳ ಒಲವನ್ನು ನಿಶ್ಚಯಿಸುವ ಪರಿಪಾಠವು ರೂಢಿಯಲ್ಲಿ ಬಂದಿರುವದು. ಉದಾಹರಣಾರ್ಥವಾಗಿ, ಬಣ್ಣದ ಚಿತ್ರ, ಬರಿಯಚಿತ್ರ ಇವುಗಳ ಕಡೆಗೆ ಬೇರೆ ಬೇರೆ ಹುಡುಗರ ಲಕ್ಷ್ಯವು ಯಾವ ಪ್ರಮಾಣದಿಂದ ಎಳೆಯಲ್ಪಡುವದು ? ಈ ಹೊಸಪದ್ಧತಿಯು ಅಸ್ತಿತ್ವದಲ್ಲಿ ಬಂದು ಹತ್ತಿಪ್ಪತ್ತು ವರುಷಗಳು ಮಾತ್ರ ಆಗಿರುವವು.

ಇನ್ನು ಮಾನಸಶಾಸ್ತ್ರದ ಅಭಿವೃದ್ಧಿಯು ಯಾವ ಯಾವ ಮೆಟ್ಟುಗಳಿಂದ ಮುಂದುವರಿದಿರುವದೆಂಬದನ್ನು ನಾವು ಸಂಕ್ಷೇಪದಲ್ಲಿ ತಿಳಿದುಕೊಳ್ಳೋಣ. ನಿಜವಾಗಿ ವಿಚಾರಿಸಿ ನೋಡಲು ಮಾನಸಶಾಸ್ತ್ರದ ಸಂಕುಚಿತವಾದ ಅರ್ಥವನ್ನು ಅಂದರೆ ಮನಸಿನ ಸುಸಂಬದ್ಧವೂ ವಿವರವೂ ಆದ ವರ್ಣನೆಯೇ ಮಾನಸಶಾಸ್ತ್ರವೆಂಬದನ್ನು ಲಕ್ಷ್ಯದಲ್ಲಿಟ್ಟರೆ ಪ್ರಾಚೀನ ಕಾಲದಲ್ಲಿ ಮಾನಸಶಾಸ್ತ್ರದ ಕಲ್ಪನೆಯು ಯಥಾರ್ಥವಾದದ್ದಿರಲಿಲ್ಲವೆಂದು ಹೇಳಬೇಕಾಗುವದು. ಆಗ ಮಾನವ ಮನಸ್ಸಿನ ಒಂದುಬಗೆಯ ತಾತ್ವಿಕ ವಿವೇಚನೆಯು ಮಾತ್ರ ಇತ್ತು. ಮನಸ್ಸು, ಆತ್ಮ ಇವುಗಳ ಸಂಬಂಧವನ್ನು ಗೊತ್ತುಪಡಿಸುವದಕ್ಕಾಗಿ ಆ ಕಾಲದ ತತ್ವಜ್ಞಾನಿಗಳು ಪ್ರಯತ್ನಪಟ್ಟರು. ಮನಸು ಹಾಗು ಆತ್ಮ ಇವುಗಳ ಸ್ವರೂಪಾದಿ ಸಂಬಂಧಗಳನ್ನು ಅವರು ತಾತ್ವಿಕ ಪರ್ಯಾಲೋಚನೆಗಳ ಮೂಲಕ ವಿವರಿಸಲು ಹೆಣಗಾಡಿದರು. ಇವುಗಳಿಗೆ ಸಂಬಂಧಪಡುವ ಪ್ರತಿಯೊಂದು ಪ್ರಶ್ನದ ಬಗ್ಗೆ ಭಿನ್ನ ಭಿನ್ನ ಮತಗಳು ಪ್ರಚಾರದಲ್ಲಿದ್ದವು. ಈ ಪರಸ್ಪರ ವಿರುದ್ಧಮತಗಳನ್ನು ಪ್ರತಿಪಾದಿಸುವ ತತ್ವಜ್ಞಾನಿಗಳ ಅಭಿಪ್ರಾಯಗಳನ್ನು ಒರೆಗೆ ಹಚ್ಚಿ ಯಾವದು ಅನುಭವಸಿದ್ಧವೆಂಬದನ್ನು ನಿಷ್ಕರ್ಷಿಸಲಿಕ್ಕೆ ಪ್ರಯೋಗಗಳನ್ನು ಮಾಡಿ ನೋಡುವ ಪದ್ಧತಿಗಳು ಉದಯವಾಗಿರಲಿಲ್ಲ. ಮಾನಸಶಾಸ್ತ್ರದ ಪ್ರಯೋಗ ಶಾಲೆಗಳು ಅಸ್ತಿತ್ವದಲ್ಲಿ ಬರುವವರೆಗೆ ಈ ಸ್ವಾನುಭವಜನ್ಯವೂ ತತ್ವಪ್ರಧಾನವೂ ಆದ ಮಾನಸಶಾಸ್ತ್ರದ ಅಭ್ಯಾಸವು ಮೇಲೆ ಕಾಣಿಸಿದಂತೆ ಸಂದಿಗ್ಧಾವಸ್ಥೆಯಲ್ಲೇ ಇದ್ದಿತು. ಮನಸಿನ ಮೇಲೆ ಬೇಕಾದ ಪ್ರಯೋಗಗಳನ್ನು ಮಾಡಿ ಇವುಗಳಿಂದ ಹೊರಡುವ ಅನುಮಾನಗಳನ್ನು

ದೀರ್ಘಪ್ರಯಾಸದಿಂದ ನಿಶ್ಚಯಿಸುವ ಕಾರ್ಯವು ಆರಂಭವಾದ ಕೂಡಲೆ ಮನಸಿನ ಪ್ರತಿಯೊಂದು ಕಾರ್ಯವನ್ನು ಸೂಕ್ಷ್ಮವಾಗಿ ಅಳೆಯಲು ಸಾಧ್ಯವಾಯಿತು. ಇಂಥ ಒಂದು ಮಾನಸಿಕ ಪ್ರಯೋಗಶಾಲೆಯು ಸುಮಾರು ೫೦ ವರ್ಷಗಳ ಪೂರ್ವದಲ್ಲಿ ಮಾತ್ರ ಮೊದಲು ಪ್ರಾರಂಭವಾಯಿತು. ಇದನ್ನು ಜರ್ಮನಿ ದೇಶದಲ್ಲಿ ಲೀಪಸಿಕ್ ಎಂಬಲ್ಲಿ 'ವಂಟ' ಎಂಬ ಶಾಸ್ತ್ರಜ್ಞನು ಏರ್ಪಡಿಸಿದನು. ಆತನು ಮನಸಿನ ಪ್ರತ್ಯೇಕವಾದ ಕಾರ್ಯಸ್ವರೂಪವನ್ನು ಪ್ರಯೋಗದಿಂದ ನಿಶ್ಚಯಿಸಲಿಕ್ಕೆ ಹವಣಿಸಿದನು. ಆತನ ಪ್ರಯತ್ನಗಳು ಮನಸಿನ ತೀರ ಸಾಮಾನ್ಯವಾದ ಕಾರ್ಯಗಳನ್ನು ಅಳೆಯುವದಕ್ಕಿಂತ ಮುಂದೆ ಹೋಗಲಿಲ್ಲ. ಬಗೆಬಗೆಯ ಇಂದ್ರಿಯಜನ್ಯ ಜ್ಞಾನವನ್ನು ಮಾಡಿಕೊಳ್ಳುವಾಗ ಮನಸು ಎಷ್ಟೆಷ್ಟು ತೀವ್ರವಾಗಿ ಕೆಲಸಮಾಡುವದು ? ಉದಾಹರಣಾರ್ಥವಾಗಿ ಶರೀರದ ಯಾವ ಭಾಗಗಳಲ್ಲಿ ಸ್ಪರ್ಶಜ್ಞಾನವು ಎಷ್ಟು ಸೂಕ್ಷ್ಮವಾಗಿ ಹಾಗು ಎಷ್ಟು ಸಣ್ಣ ಪ್ರದೇಶದಲ್ಲಿ ಯಾವ ಪ್ರಮಾಣದಿಂದ ಆಗುವದು ? ಶರೀರದ ಬೇರೆ ಬೇರೆ ಭಾಗಗಳಲ್ಲಿ ಒಂದು ಕಂಪಾಸಿನ ಎರಡು ತುದಿಗಳನ್ನು ಇಟ್ಟರೆ ಅವರ ಎರಡೂ ತುದಿಗಳ ಅಂತರವು ಎಷ್ಟಿರುವಾಗ ಆ ಎರಡೂ ಸ್ಥಳಗಳಲ್ಲಿ ಸ್ಪರ್ಶದ ಜ್ಞಾನವು ಮೆದುಳಿಗೆ ಆಗುವದು ? ಮುಂದೆ ಆ ಅಂತರವು ಎಷ್ಟು ಕಡಿಮೆಯಾದ ಬಳಿಕ ಎರಡೂ ತುದಿಗಳು ಶರೀರಕ್ಕೆ ತಗಲಿ ಇದ್ದರೂ ಕೂಡ ಒಂದೇ ತುದಿಯು ತಗಲಿದಂತೆ ಅನಿಸುವದು ? ಈ ಅಂತರವು ಶರೀರದ ಬೇರೆ ಬೇರೆ ಭಾಗಗಳಲ್ಲಿ ಎಷ್ಟೆಷ್ಟು ಇರುವದು ? ಎಷ್ಟೆಷ್ಟು ತೀವ್ರವಾಗಿ ಕೆಲಸಮಾಡುವದು? ಅಂದರೆ ಶರೀರದ ಯಾವ ಭಾಗದಲ್ಲಿ ಸ್ಪರ್ಶಜ್ಞಾನವು ತೀವ್ರವಾಗಿಯೂ ಸ್ಫುಟವಾಗಿಯೂ ಆಗುವದು ? ಎಲ್ಲಿ ಸಾವಕಾಶವಾಗಿಯೂ ಅಸ್ಪಷ್ಟವಾಗಿಯೂ ಆಗುವದು ? ಮನಸಿಗುಂಟಾಗುವ ಜ್ಞಾನಕ್ಕೂ ಆ ಜ್ಞಾನದ ಮೂಲಕ ಮನಸು ಸ್ನಾಯುಗಳನ್ನು ಕೆಲಸಕ್ಕೆ ಹಚ್ಚುವ ಕಾರ್ಯಕ್ಕೂ ಯಾವ ಸಂಬಂಧವಿರುವದು ?

ವಂಟನ ಕಾಲದಿಂದೀಚೆಗೆ ಪ್ರಯೋಗಾತ್ಮಕ ಮಾನಸಶಾಸ್ತ್ರಾಭ್ಯಾಸಕ್ಕೆ ಒಳ್ಳೇ ಕಳೆ ಏರಿತು. ಯುರೋಪದ ಬಹುತರ ದೇಶಗಳಲ್ಲೂ ಅಮೇರಿಕದಲ್ಲೂ ಮಾನಸಶಾಸ್ತ್ರದ ಪ್ರಯೋಗಶಾಲೆಗಳು ಸ್ಥಾಪಿಸಲ್ಪಟ್ಟವು. ಈ ಮಾನಸಶಾಸ್ತ್ರದ ಪ್ರಯೋಗಗಳು ಇಂಗ್ಲಂಡದಲ್ಲಿ ಒಂದು ವಿಶಿಷ್ಟದಿಶೆಯಲ್ಲಿ ವಿಶೇಷವಾಗಿ ನಡೆದವು. ಅಲ್ಲಿ ಸರ ಫ್ರಾನ್ಸಿಸ್ ಗಾಲ್ಟನ್ ಎಂಬ ಶಾಸ್ತ್ರಜ್ಞನೂ ಆತನ ಅನುಯಾಯಿಗಳೂ ಸಮಾಜಸ್ವಾಸ್ಥ್ಯದ ಅಂದರೆ ಶಾರೀರಿಕ ಮಾನಸಿಕ ಕುಂದುಕೊರತೆಗಳಿಲ್ಲದ ಸಮಾಜವನ್ನು ಉಂಟುಮಾಡುವ ಪ್ರಶ್ನವನ್ನು ಕುರಿತು ಅಭ್ಯಾಸಮಾಡತೊಡಗಿದರು. ಸರ್ವಾಂಗಸುಂದರವಾದ ಸಮಾಜವುಂಟಾಗಬೇಕಾದರೆ ಯಾವ ಉಪಾಯಗಳನ್ನು ಮಾಡಬೇಕಾಗುವದು? ಇವು ವ್ಯವಹಾರಸಾಧ್ಯವಾಗಬೇಕಾದರೆ ಮಾರ್ಗಗಳಾವವು ? ಎಂಬವನ್ನು ವಿಚಾರಿಸತೊಡಗಿದರು. ಸಮಾಜದಲ್ಲಿರುವ ರೋಗಾವಿಷ್ಟರು, ಅಂಗಹೀನರು, ಬುದ್ಧಿಶೂನ್ಯರು, ಶಕ್ತಿಗುಂದಿದವರು ಮೊದಲಾದ ಅನಿಷ್ಟ

ಶಗಳನ್ನು ಕ್ರಮೇಣ ಇಲ್ಲದಂತೆಮಾಡಿ ಬಲವಂತರೂ ಬುದ್ಧಿಶಾಲಿಗಳೂ ಮಾತ್ರ ಉಯುವ ಯೋಜನೆಗಳನ್ನು ಕುರಿತು ಇವರು ಪರ್ಯಾಲೋಚಿಸಹತ್ತಿದರು. ಬುದ್ಧಿಸಂಪನ್ನರೂ ಆರೋಗ್ಯಸಂಪನ್ನರೂ ಮಾತ್ರ ಮದುವೆಮಾಡಿಕೊಳ್ಳಬೇಕು; ಆರೋಗ್ಯವಿದವರೂ ಮಂದಬುದ್ಧಿಯುವರೂ ತಮ್ಮ ಜವಾಬುದಾರಿಯನ್ನು ಅರಿತು ವಿವಾಹಪರಾವೃತ್ತರಾಗಬೇಕು. ಇದಕ್ಕಾಗಿ ಯುಕ್ತಿ ಪ್ರಯುಕ್ತಿಗಳನ್ನು ಮಾಡಿ ಪರಿಪೂರ್ಣವಾ ಸಮಾಜವನ್ನು ನಿರ್ಮಿಸಬೇಕೆಂದು ಇವರು ಹೆಣಗಿದರು. ಈ ಪ್ರಯತ್ನಗಳ ಫಲವದರೆ ೧೮೮೪ ರಲ್ಲಿ ಸರ ಫ್ರಾನ್ಸಿಸರು ಏರ್ಪಡಿಸಿದ ಆಂಥ್ರೋಪೋಮೆಟ್ರಿಕ್ ಪ್ರಯೋಶಾಲೆಯು. ಈ ಶಾಲೆಯಲ್ಲಿ ಸಶಕ್ತರ ಮೇಲೆಯೂ ಅಶಕ್ತರ ಮೇಲೆಯೂ ಪ್ರಯೋಗಳನ್ನು ಮಾಡಿ ಅವರವರ ಮನಸು ಹಾಗು ಶರೀರ ಇವುಗಳಲ್ಲಿರುವ ಸಂಬಂಧವನ್ನು ಗೊತ್ತು ಮಾಡುತ್ತಿದ್ದರು.

೧೮೮೦ರಲ್ಲಿ ಗಾಲ್ಟನ್ ಎಂಬಾತನು ಇಂಥ ಮತ್ತೊಂದು ಪ್ರಯೋಗಶಾಲೆಯನ್ನು ಸ್ಥಾಪಿಸಿದನು. ಆದರೆ ಇವುಗಳಲ್ಲಿ ಮಾನಸಶಾಸ್ತ್ರದೃಷ್ಟಿಯಿಂದ ಹೇಳತಕ್ಕಂಥ ಕೆಲಸವು ಆಗಲಿಲ್ಲ. ಶಾಸ್ತ್ರಸಮ್ಮತವಾಗುವಂತೆ ಶರೀರ ಮನಸುಗಳ ಪರಸ್ಪರ ಸಂಬಂಧವನ್ನು ಗೊತ್ತುಹಚ್ಚುವ ನಿಯಮಗಳನ್ನು ಮೊದಲು ಕಂಡುಹಿಡಿದವನು 'ಕಾರ್ಲ ಪಿಯರಸನ್' ಎಂಬಾತನು. ಇವರೆಲ್ಲರು ಮಾಡಿದ ಪ್ರಗತಿಯನ್ನು ಅಳೆಯುವಾಗ ಇವೆಲ್ಲ ಪ್ರಯೋಗಗಳ ಸಹಾಯದಿಂದ ಮಾನಸಶಾಸ್ತ್ರವನ್ನು ಅಭ್ಯಾಸಿಸಲಾರಂಭಿಸಿದ ಪ್ರಥಮಪ್ರಯತ್ನಗಳೆಂಬದನ್ನು ನಾವು ಲಕ್ಷ್ಯದಲ್ಲಿಡಬೇಕು. ಈ ಆರಂಭದ ಅವಧಿಯಲ್ಲಿ ವಿಶೇಷ ಮಹತ್ವದ ಸಿದ್ಧಾಂತಗಳಾವವೂ ನಿಶ್ಚಿತವಾಗಲಿಲ್ಲ. ವಿಶಿಷ್ಟವಾದ ಒಂದು ಉತ್ತೇಜಕಕ್ಕೆ (Stimulus) ಬೇರೆ ಬೇರೆ ಜನರ ಮನಸ್ಸು ಯಾವ ಪ್ರಕಾರದಿಂದ ಯಾವ ಪ್ರಮಾಣದಿಂದ ಹಾಗು ಎಷ್ಟು ಹೊತ್ತಿನಲ್ಲಿ ಪ್ರತಿಕ್ರಿಯೆಗಳನ್ನು (Re-actions) ಉಂಟುಮಾಡುವದು ? ಒಂದು ಸಪ್ಪಳ ಮಾಡಿದ ಕೂಡಲೆ ವರ್ಗದಲ್ಲಿರುವ ಹುಡುಗರೆಲ್ಲ ಎದ್ದುನಿಲ್ಲಬೇಕೆಂದು ಆಜ್ಞಾಪಿಸಿ, ಸಪ್ಪಳವನ್ನು ಮಾಡಿದರೆ ಯಾರು ತೀವ್ರವಾಗಿ ಕೇಳಿ ತೀವ್ರವಾಗಿ ನಿಲ್ಲುವರು ? ಎಷ್ಟು ಜನರು ಕೇಳುವದರಲ್ಲಿ ತೀವ್ರತೆಯನ್ನು ತೋರಿಸಿದರೂ, ನಿಲ್ಲುವದರಲ್ಲಿ ಹಿಂದೆ ಬೀಳುವರು ? ಇಲ್ಲವೆ ಬೇರೆ ಬೇರೆ ಜನರ ಇಂದ್ರಿಯಗಳ ತೀಕ್ಷ್ಣತೆಯಲ್ಲಿ ಯಾವ ಹೆಚ್ಚುಕಡಿಮೆಗಳು ಕಾಣುವವು ? ಇವೇ ಮೊದಲಾದ ಮಾನಸ ಶಾಸ್ತ್ರಕ್ಕೆ ಸಂಬಂಧಿಸಿದ ವಿಶಿಷ್ಟ ಪ್ರಶ್ನೆಗಳ ವಿವೇಚನೆಯಲ್ಲಿ ಆ ಕಾಲದ ಶಾಸ್ತ್ರಜ್ಞರು ಮಗ್ನರಾಗಿದ್ದರು. ಇದು ಮಾನಸ ಶಾಸ್ತ್ರವನ್ನು ಸಶಾಸ್ತ್ರವಾಗಿಯೂ ಸಾನುಕ್ರಮವಾಗಿಯೂ ಅಭ್ಯಾಸಿಸಿದಂತಾಗಲಿಲ್ಲವೆಂಬದು ನಿಜವು. ಈ ಅಭ್ಯಾಸದಲ್ಲಿ ಇಂದ್ರಿಯಗಳ ತೀಕ್ಷ್ಣತೆಯನ್ನು ಅಳೆಯುವದರ ಕಡೆಗೆ ಮಾತ್ರ ವಿಶೇಷ ಲಕ್ಷ್ಯವು ಹೋಗಿತ್ತು. ಮನಸ್ಸಿನ ಇತರ ಕಾರ್ಯಗಳಾದ ಕಲ್ಪನೆ

ವಿಚಾರ, ನಿರ್ಣಯ ಮೊದಲಾದವುಗಳ ಬಗ್ಗೆ ಪ್ರಯೋಗಗಳು ವಿಶೇಷವಾಗಿ ಇರಲಿಲ್ಲ ಆದರೂ ಇದರಿಂದ ಬೇರೆ ಬೇರೆ ಜನರ ಮಾನಸಿಕ ಶಕ್ತಿಗಳು ಭಿನ್ನ ಭಿನ್ನವಿರುವವೆಂಬವು ಖಂಡಿತವಾಗಿ ಗೊತ್ತಾಯಿತು. ಆದ್ದರಿಂದ ಬೇರೆ ಬೇರೆ ಜನರ ಮಾನಸಿಕ ಕಾರ್ಯಗಳನ್ನು ಅಳೆದು ಅವರ ಮನಸ್ಸಿನ ಶಕ್ತಿಯನ್ನು ಒಂದು ಎಕ್ಕವಿನ ಪರಿಮಾಣದಿಂದ ಹೇಳುವ ಆವಶ್ಯಕತೆಯೂ ಅದನ್ನು ನಿಷ್ಕರ್ಷಿಸುವದೂ ಸ್ಪಷ್ಟವಾಗಿ ತೋರಿದವು. ಈ ಅವಧಿಯು ಸುಮಾರಿಗೆ ಬಿನೆಟನೆಂಬ ಹೆಸರಾದ ಫ್ರೆಂಚ ಮಾನಸಶಾಸ್ತ್ರಜ್ಞನ ಅಭಿಪ್ರಾಯಗಳು ಗ್ರಂಥಸ್ಥವಾಗಿ ವಿದ್ವಾಂಸರ ಕೈ ಸೇರಿದವು. ಈತನು ಮನಸಿನ ಶಕ್ತಿಯನ್ನು ಅಳೆಯುವ ಒಂದು ಪರಿಮಾಣವನ್ನೇ ಗೊತ್ತುಮಾಡಿದನು. ಇವನು ಮೊದಲು ನಿರೂಪಿಸಿದ ಮಾನಸಿಕಶಕ್ತಿ ಮಾಪನದ ಪರಿಮಾಣ ಕ್ರಮವು ಮೊದಲು ೧೯೦೫ರಲ್ಲಿ ಪ್ರಸಿದ್ಧವಾಯಿತು. ಇದನ್ನೇ ಸುಧಾರಿಸಿ ೧೯೦೮ರಲ್ಲಿ ಈತನು ಎರಡನೆಯದೊಂದು ಪರಿಮಾಣ ಕ್ರಮವನ್ನೂ ಮತ್ತೆ ೧೯೧೧ರಲ್ಲಿ ಮೂರನೆಯದನ್ನೂ ಪ್ರಸಿದ್ಧಪಡಿಸಿದನು. ಈ ಪರಿಮಾಣಗಳಿಂದ ಮಾನಸಶಾಸ್ತ್ರದ ಅಭ್ಯಾಸಕ್ಕೆ ಒಳ್ಳೇ ಕಳೆಯೇರಿದಂತಾಯಿತು.

ಹೀಗೆ ಕೆಲವರು ವಿದ್ವಾಂಸರು ಮಾನಸಶಾಸ್ತ್ರಾಭ್ಯಾಸದಲ್ಲಿ ಮನಸ್ಸು ಹಾಕುತ್ತಿರುವಾಗಲೇ ಇತರರು ಸಾಮಾಜಿಕ ಘಟನೆಯ ಒಂದು ಅತ್ಯಂತ ಮಹತ್ವದ ಪ್ರಶ್ನೆಯ ಬಗ್ಗೆ ವಿಚಾರಿಸ ಹತ್ತಿದರು. ಚಿಕ್ಕಮಕ್ಕಳ ಶಿಕ್ಷಣದಲ್ಲಿ ನಿರತರಾದ ವಿದ್ಯಾಭಿಮಾನಿಗಳು ಮಂದ ಬುದ್ಧಿಯ ಹುಡುಗರ ಶಿಕ್ಷಣವನ್ನು ಯಾವಪ್ರಕಾರದಿಂದ ಸಾಗಿಸಿದರೆ ಅವರು ಸಮಾಜದಲ್ಲಿ ನೆಮ್ಮದಿಯಿಂದ ಪ್ರಪಂಚಮಾಡಬಹುದೆಂಬದನ್ನು ಗೊತ್ತುಹಚ್ಚಲಿಕ್ಕೆ ಹಾತೊರೆಯಹತ್ತಿದರು. ರೋಮಾಯರ ಕಾಲದಲ್ಲಿ ಇಂಥ ಅಶಕ್ತ ಹಾಗು ಮಂಕು ಬುದ್ಧಿಯ ಶಿಶುಗಳನ್ನು ಮೃತ್ಯುವಿಗೆ ಗುರಿಮಾಡಿ ಸಮಾಜದಿಂದ ದೂರಮಾಡುತ್ತಿದ್ದರೆಂದು ಹೇಳಿದರು. ಆದರೆ ಕ್ರಿಸ್ತ ಧರ್ಮವು ಯುರೋಪಖಂಡದಲ್ಲಿ ನೆಲೆಗೊಂಡಂದಿನಿಂದ ಇಂಥ ಶಿಶುಗಳನ್ನು ಜನರು ದ್ವೇಷದಿಂದ ನೋಡದೆ ದಯಾದೃಷ್ಟಿಯಿಂದ ಈಕ್ಷಿಸಲಾರಂಭಿಸಿದರು. ಸಮಾಜವು ಇವರನ್ನು ರಕ್ಷಿಸತಕ್ಕದ್ದೆಂದು ಲೋಕಮತವಾಯಿತು. ಇವರಿಗೆ ಅಗತ್ಯವಿರುವ ಶಿಕ್ಷಣವನ್ನು ಕೊಡುವದು ಅವಶ್ಯವೆನಿಸಿತು. ಈ ಮೇರೆಗೆ ಮಂಕುಬುದ್ಧಿಯ ಚಿಕ್ಕಮಕ್ಕಳ ಮನಸ್ಸಿನ ಅಭ್ಯಾಸವನ್ನು ಕೆಲವರು ವಿದ್ವಾಂಸರು ಮುಖ್ಯವಾಗಿ ಕೈಕೊಂಡರು. ಆ ಕಾಲದಲ್ಲಿ ಈ ಮಂಕುಬುದ್ಧಿಯವರು ಮನುಷ್ಯರಲ್ಲಿ ಒಂದು ಪ್ರತ್ಯೇಕವಾದ ವರ್ಗಕ್ಕೆ ಸೇರಿದವರು, ಇವರಿಗೂ ಸಾಮಾನ್ಯ ಜನಸಮೂಹಕ್ಕೂ ಸ್ಪಷ್ಟವಾದ ಮಾನಸಿಕ ಭೇದವಿರುವದು, ಹಾಗು ಈ ಹೆಡ್ಡರ ಮಾನಸಿಕ ನ್ಯೂನತೆಗಳನ್ನು ಸರಿಗೊಳಿಸುವದು ಅಸಾಧ್ಯವು ಎಂಬ ಭಾವನೆಯು ರೂಢವಾಗಿತ್ತು. ಎಷ್ಟೋ ವಿದ್ವಾಂಸರು ಅನೇಕ ಪದ್ಧತಿಗಳಿಂದ ಇವರ ಶಿಕ್ಷಣವನ್ನು ಸಾಗಿಸಿ ಹೆಚ್ಚು ಕಡಿಮೆ ಜಯಹೊಂದಿದರೂ ಈ ಕಲ್ಪನೆಯು ಮಾತ್ರ ಅಸ್ತವಾಗಲಿಲ್ಲ. ಇದನ್ನು

ಮೊದಲು ಸ್ಪಷ್ಟವಾಗಿ ನಿರಾಕರಿಸಿದ ಶ್ರೇಯಸ್ಸು ಬಿನೆಟನಿಗೆ ಸೇರಿದೆ. ಈ ಮಂದಮತಿಗಳು ಇತರ ಮಾನವಜಾತಿಯ ಜನರಿಂದ ಪ್ರತ್ಯೇಕ ವರ್ಗದವರೆಂದೆನಿಸುವಷ್ಟು ಬೇರೆಯಾಗಿಲ್ಲವೆಂದೂ ಮನುಷ್ಯಕುಲದ ಮಾನಸಿಕ ಶಕ್ತಿಯ ವ್ಯತ್ಯಾಸವನ್ನು ಸ್ಪಷ್ಟಗೊಳಿಸಲಿಕ್ಕಾಗಿ ಅದನ್ನು ಒಂದು ನಿಚ್ಚಣಿಕೆಗೆ ಹೋಲಿಸಿ ಬೇರೆ ಬೇರೆ ಪ್ರಮಾಣದಲ್ಲಿ ಮಾನಸಿಕ ಶಕ್ತಿಯುಳ್ಳವರು ಇದರ ಒಂದೊಂದು ಹಲ್ಲೆಂದು ತಿಳಿದರೆ ಈ ಮೂಢ ಮತಿಗಳು ಈ ನಿಚ್ಚಣಿಕೆಯ ತೀರ ಕೆಳಗಿನ ಹಲ್ಲಿನಂತಿರುವರೆಂದೂ ಆತನು ಸಾರಿದನು. ಮೇಲಿನ ಒಂದೊಂದು ಹಲ್ಲಿನಮೇಲೆ ನಾವು ಏರಿಹೋದಂತೆ ಆಯಾ ವರ್ಗದಲ್ಲಿರುವ ಜನರ ಮನಸ್ಸು ಸುಧಾರಿಸುವದೆಂದೂ ಎಲ್ಲಕ್ಕೂ ಮೇಲಿನ ಹಲ್ಲಿನ ತರಗತಿಯಲ್ಲಿರುವ ಜನರೇ ಸಮಾಜದ ಪ್ರತಿಭಾಶಾಲಿಗಳೆಂದೂ ಆತನು ಪ್ರತಿಪಾದಿಸಿದನು. ಈ ಮೇರೆಗೆ ಮೂಢನೂ ಪ್ರತಿಭಾಶಾಲಿಯೂ ಒಂದೇ ನಿಚ್ಚಣಿಕೆಯ ತೀರ ಕೆಳಗಿನ ಹಾಗು ತೀರ ಮೇಲಿನ ಹಲ್ಲುಗಳಂತಿರುವರು. ಇವರ ಮಧ್ಯದಲ್ಲಿ ಬೇರೆ ಬೇರೆ ತರಗತಿಯಲ್ಲಿ ಸುಧಾರಣೆ ಹೊಂದಿದ ಮಾನಸಿಕ ಶಕ್ತಿಗಳುಳ್ಳ ಜನರು ಇರುವರು. ಈ ಮಾತನ್ನು ಸಿದ್ಧಪಡಿಸಬೇಕಾದರೆ ಒಂದು ಪ್ರತ್ಯೇಕವಾದ ಮನಃಪರೀಕ್ಷೆಯ ಪರಿಮಾಣವನ್ನು ಏರ್ಪಡಿಸಿ ಇದರ ಮೂಲಕ ಅನೇಕ ವ್ಯಕ್ತಿಗಳ ಮನಸ್ಸನ್ನು ಅಳತೆಮಾಡಿನೋಡಬೇಕಾಯಿತು. ಈ ಪರಿಮಾಣವನ್ನು ಹುಡುಕಿ ತೆಗೆದ ವಿದ್ವಾಂಸನು ಫ್ರೆಂಚ ಜನಾಂಗಕ್ಕೆ ಸೇರಿದ ಬಿನೆಟನೆಂಬಾತನೆಂದು ಈ ಮೊದಲೇ ನಾವು ಹೇಳಿರುವೆವು.

ಒಟ್ಟಿನಮೇಲೆ ಸದ್ಯದಲ್ಲಿ ಮಾನಸಶಾಸ್ತ್ರಜ್ಞರು ಒಂದು ಮಾತನ್ನು ಒಪ್ಪಿಕೊಂಡಿರುವರು. ಅದು ಯಾವದೆಂದರೆ— ಮಾನವ ಜಾತಿಗೆ ಸೇರಿದವರಲ್ಲಿ ಇಬ್ಬರ ಮನಸ್ಸು ಕೇವಲ ಒಂದೇ ತರದ್ದಿರುವದಿಲ್ಲ. ಶರೀರವೂ ಸಂಪೂರ್ಣವಾಗಿ ಒಬ್ಬನಂತೆಯೇ ಇನ್ನೊಬ್ಬನದಿರುವದಿಲ್ಲ. ಇದು ಎಲ್ಲರಿಗೂ ಗೊತ್ತಿರುವ ಮಾತು. ಇದರಂತೆಯೇ ಅವರವರ ಮನಸ್ಸಿನಲ್ಲಿಯೂ ಹೆಚ್ಚುಕಡಿಮೆಗಳು ಇರುವವು. ಒಂದು ಸಭೆಯಲ್ಲಿ ಕೂಡಿದ ೫೦೦ ಜನರಲ್ಲಿ ಪ್ರತಿಯೊಬ್ಬನನ್ನು ಶಾರೀರಿಕಲಕ್ಷಣಭೇದಗಳಿಂದ ಇತರರಿಂದ ಬೇರೆಯಾಗಿ ನಾವು ಗುರುತಿಸುವೆವಷ್ಟೇ. ಹಾಗೆಯೇ ಮಾನಸಿಕ ಲಕ್ಷಣ ಭೇದಗಳಿಂದಲೂ ನಾವು ಪ್ರತಿಯೊಬ್ಬನನ್ನು ಇತರರಿಂದ ಬೇರೆಯಾಗಿ ಗುರುತಿಸಬಹುದು. ಈ ೫೦೦ ಜನರನ್ನು ಅವರವರ ನಿಲುವಿಕೆಯ ಎತ್ತರದ ಪ್ರಮಾಣದಿಂದ ಒಂದು ಏರಿಕೆ ಇಲ್ಲವೆ ಇಳಿಕೆಯ ಕ್ರಮದಲ್ಲಿ ನಾವು ಸುಲಭವಾಗಿ ನಿಲ್ಲಿಸಬಲ್ಲೆವಷ್ಟೇ. ಹಾಗೆಯೇ ಇವರನ್ನು ಮಾನಸಿಕ ಶಕ್ತಿಗಳ ಹೆಚ್ಚುಕಡಿಮೆಯ ಕ್ರಮದಿಂದ ಸಾಲುಗೊಳಿಸಿ ನಿಲ್ಲಿಸಬಹುದು. ಇಷ್ಟು ಜನರನ್ನು ನಿಲ್ಲಿಸಿದಾಗ ಬದಿಬದಿಗಿರುವವರು ಒಂದೇ ಎತ್ತರದವರೆಂದು ಮೇಲೆ ಕಾಣುತ್ತಿದ್ದರೂ ಪ್ರತಿ ಜೋಡಿಯವರಲ್ಲಿ ನಮ್ಮ ಬರಿಗಣ್ಣಿಗೆ ಗೋಚರವಾಗದಿದ್ದರೂ ತೀರ ಸೂಕ್ಷ್ಮವಾದ ನಿಲುವಿಕೆಯ ಅಂತರವು ಇದ್ದೇ ಇರುವದೆಂದು ಸಿದ್ಧಮಾಡಿಕೊಡಬಹುದಾದಂತೆಯೇ

ವರ ಮಾನಸಿಕ ಶಕ್ತಿಗಳಲ್ಲಿ ಅತಿ ಸೂಕ್ಷ್ಮವಾದ ಹೆಚ್ಚುಕಡಿಮೆಯು ಇರುವದೆಂದು ೋರಿಸಿಕೊಡಬಹುದು. ಬಿನೆಟನು ಸಿದ್ಧಪಡಿಸಿದ ಬುದ್ಧಿಪರೀಕ್ಷೆಯ ಪರಿಮಾಣದಿಂದ ೇರೆ ಬೇರೆ ಜನರ ವಿವಿಧ ಮಾನಸಿಕ ಶಕ್ತಿಗಳನ್ನು ಆತನು ಅಳೆದುನೋಡಿ ಸಂಖ್ಯಾರೂಪ ಂದ ಅದರ ಪರಿಣಾಮವನ್ನು ಹೇಳಿ, ಒಂದು ಕೋಷ್ಟಕವನ್ನು ತಯಾರಿಸಿ, ಮಾನಸಿಕ ಕ್ತಿಗಳ ಪ್ರಮಾಣದ ಮೇರೆಗೆ ಜನರಲ್ಲಿ ಸಾಮಾನ್ಯವಾಗಿ ಆರೇಳು ತರಗತಿಗಳನ್ನು ಹೇಳಿ ವನು. ಆತನ ಸಿದ್ಧಾಂತವನ್ನು ರೇಖಾರೂಪವಾಗಿ ಮುಂದಿನಂತೆ ಸ್ಪಷ್ಟಮಾಡಬಹುದು.



ಇಲ್ಲಿ ಬುದ್ಧಿಯನ್ನು ಒಂದು ಸಂಖ್ಯಾಸರಣಿಯಲ್ಲಿ ತೋರಿಸಿರುವೆವು. ಜನರ ಸಂಖ್ಯೆಯನ್ನು ಪ್ರಮಾಣಾನುರೂಪವಾದ ಎತ್ತರದ ಗೆರೆಗಳಿಂದ ತೋರಿಸಿರುವೆವು. ಹೀಗೆ ಲೆಕ್ಕ ಮಾಡಲು, ಬೇಕಾದ ಒಂದು ಜನಸಂದಣಿಯ ರೇಖಾಕೃತಿಯು ಮೇಲಿನ ಚಿತ್ರದಲ್ಲಿ ತೋರಿಸಿದಂತೆ ಹೊರಡುವದು. ಸಂಖ್ಯಾಸರಣಿಯಲ್ಲಿ ತೋರಿಸಿದ ಸಂಖ್ಯೆಗಳು ಆಯಾ ಜನರ ಬುದ್ಧಿಯ ತರಗತಿಯನ್ನು (Intelligence Quotient) ಸೂಚಿಸುವವು. ತೀರ ಕನಿಷ್ಟವಾದ ಬುದ್ಧಿಯ ತರಗತಿಯು ೭೦, ಅದಕ್ಕೂ ಕಡಿಮೆಯೆಂದರೆ ೫೦ ಇರಬಹುದು. ಇದಕ್ಕೂ ಕಡಿಮೆ ಇರುವದು ಬಹಳ ಅಪರೂಪ. ಅಂದರೆ ಇಂಥ ಜನರ ಸಂಖ್ಯೆಯು ಬಹಳ ಕಡಿಮೆ. ತೀರ ಹೆಚ್ಚಿನದೆನಿಸಿದ ಬುದ್ಧಿಯ ತರಗತಿಯು ೧೪೦ ಅಥವಾ ೧೫೦ ಅಥವಾ ಅದಕ್ಕೂ ಹೆಚ್ಚು ಇರಬಹುದು. ಸಾಮಾನ್ಯಬುದ್ಧಿ ತರಗತಿಯುಳ್ಳವರ ಸಂಖ್ಯೆಯು ನೂರರಲ್ಲಿ ಸುಮಾರು ೫೦ ಇರುವದು. ಬೇಕಾದ ಒಂದು ಜನಸಮೂಹದಲ್ಲಿ ಅರ್ಧಜನರು ಸಾಧಾರಣ ಬುದ್ಧಿಶಕ್ತಿಯುಳ್ಳವರಿರುವರು ಈ ತರಗತಿಯು ಬಿನೆಟನ ಗಣನೆಯ ಪ್ರಕಾರ ೯೦-೧೧೦ ಈ ಎರಡು ಸಂಖ್ಯೆಗಳ ನಡುವಿನ ಸಂಖ್ಯೆಯಿಂದ ಸೂಚಿಸಲ್ಪಡುವದು. ತೀರಕಡಿಮೆತರಗತಿಯ ಬುದ್ಧಿಶಕ್ತಿಯುಳ್ಳವರು ನೂರರಲ್ಲಿ ಒಂದು ಈ ಪ್ರಮಾಣದಿಂದ ಹೊರಡುವರು. ಇವರನ್ನು ಸೂಚಿಸುವ ಸಂಖ್ಯೆಯು ಬಿನೆಟನ ಗಣನೆಯಲ್ಲಿ ೭೦ ಬರುವದು. ಇವರನ್ನೇ ನಾವು ಮಂಕುಗಳು ಇಲ್ಲವೆ ಮೂರ್ಖರೆಂದು ಕರೆಯುವೆವು. ಹಾಗೆಯೇ ತೀರ ಹೆಚ್ಚಿನ ತರಗತಿಯ ಬುದ್ಧಿಶಕ್ತಿಯುಳ್ಳವರು ನೂರರಲ್ಲಿ ಒಂದು ಈ ಪ್ರಮಾಣದಿಂದ ಇರುವರು. ಇವರನ್ನು ಸೂಚಿಸುವ ಸಂಖ್ಯೆಯು ೧೩೦ರ ಮೇಲೆ ಇರುವದು. ಇವರನ್ನು ಪ್ರತಿಭಾಶಾಲಿಗಳೆಂದು ನಾವು ಹೇಳುವದುಂಟು.

ಈ ಸಂಖ್ಯೆಗಳ ಸಹಾಯದಿಂದ ನಾವು ಬುದ್ಧಿಯ ತರಗತಿಯನ್ನು ಸಾಮಾನ್ಯ ಶಬ್ದಗಳಿಂ ಸೂಚಿಸುವಂಥ ಒಂದು ಕೋಷ್ಟಕವನ್ನು ಮಾಡಿಕೊಳ್ಳಬಹುದು.

ಹ್ಯಾಗೆಂದರೆ—

೭೦ಕ್ಕಿಂತ ಕಡಿಮೆ–ಮಂಕರು (ಮೂಢರು),	
೭೦–೭೯	(ಮಂಕರಿಗೂ ನ್ಯೂನ ಬುದ್ಧಿಯುವರಿಗೂ) ನಡುವಿನವರ
೮೦–೮೯	ನ್ಯೂನಬುದ್ಧಿಯವರು
೯೦–೧೦೯	ಸಾಮಾನ್ಯ ಬುದ್ಧಿಯವರು
೧೧೦–೧೧೯	ಬುದ್ಧಿವಂತರು
೧೨೦–೧೨೯	ವಿಶೇಷ ಬುದ್ಧಿವಂತರು
೧೩೦ರ ಮೇಲೆ	ಪ್ರತಿಭಾ ಸಂಪನ್ನರು

ಇನ್ನು ಬುದ್ಧಿಯ ತರಗತಿಯನ್ನು ಗೊತ್ತುಹಚ್ಚುವ ರೀತಿಯನ್ನು ವಿವ ಸುವೆವು. ಇದರಲ್ಲಿ ಬೇರೆ ಬೇರೆ ತರದ ಜ್ಞಾನವನ್ನು ಪರೀಕ್ಷಿಸುವ ಹಲವು ಪ್ರಶ್ನೆ ಗಳನ್ನು ಕೇಳುವದು, ಬಂದ ಉತ್ತರಗಳಿಗೆ ಗುಣಗಳನ್ನು ಕೊಡುವದು, ಗುಣಗಳ ಒಟ್ಟು ಸಂಖ್ಯೆಯಿಂದ ತರಗತಿಯನ್ನು ಗೊತ್ತುಪಡಿಸುವದು. ಬಿನೆಟನು ತಯಾರಿಸಿ ಈ ಪರೀಕ್ಷಾ ಪ್ರಶ್ನೆಗಳು ಬೇರೆ ಬೇರೆ ವಯಸ್ಸಿನ ಹುಡುಗರಿಗೆ ಬೇರೆ ಬೇರೆಯಾಗಿ ರುವವು. ಉದಾಹರಣಾರ್ಥವಾಗಿ ಲನೆಯ ವಯಸ್ಸಿನ ಪ್ರಶ್ನೆಗಳು ೮ ವರ್ಷದ ವಯಸ್ಸಿನ ಸಾಮಾನ್ಯ ಬುದ್ಧಿಯ ಹುಡುಗರು ಉತ್ತರ ಹೇಳಬಹುದಾದವಿರುವವು ಆದರೆ ೭ ವರ್ಷದ ವಯಸ್ಸಿನ ಒಬ್ಬ ಹುಡುಗನು ಇವುಗಳಿಗೆ ಸರಿಯಾದ ಉತ್ತರ ಗಳನ್ನು ಕೊಟ್ಟರೆ ಇವನ ಬುದ್ಧಿಯು ೧ ವರ್ಷದಿಂದ ಮುಂದುವರಿದಿರುವದೆಂದು ಎಣಿಸಲ್ಪಡುವದು. ಎಂದರೆ ಈತನ ಕಾಲಮಾನದ ವಯಸ್ಸು ೭, ಬೌದ್ಧಿಕ ವಯಸ್ಸು ೮ ಎಂದು ಹೇಳುವರು. ಕಾಲಮಾನದ ಬುದ್ಧಿಯ ತರಗತಿಯನ್ನು (Intelligence Quotient) ಮುಂದಿನ ಸಮೀಕರಣದಿಂದ ತೆಗೆಯತಕ್ಕದ್ದು. ಬೌದ್ಧಿಕ ವಯ ಸ್ಸನ್ನು ಕಾಲಮಾನದ ವಯಸ್ಸಿನಿಂದ ಭಾಗಿಸಿ ಬಂದ ಲಬ್ಧವನ್ನು ಒಂದು ನೂರರಿಂದ ಗುಣಿಸಬೇಕು.

$$\text{ಬುದ್ಧಿಯ ತರಗತಿ} = \frac{\text{ಬೌದ್ಧಿಕ ವಯಸ್ಸು}}{\text{ಕಾಲಮಾನದ ವಯಸ್ಸು}} \times ೧೦೦$$

ಮೇಲೆ ಹೇಳಿದ ಹುಡುಗನ ವಿಷಯದಲ್ಲಿ ಇದು $\frac{೮}{೭}$ × ೧೦೦ = ೧೧೪·೩ ಬರು ವದು. ಇನ್ನು ೯ ವರುಷ ವಯಸ್ಸಾದ ಒಬ್ಬ ಹುಡುಗನು ೯ನೆಯ ವಯಸ್ಸಿನ ಪ್ರಶ್ನೆ ಗಳ ಉತ್ತರಗಳನ್ನು ಸರಿಯಾಗಿ ಹೇಳಲಾರನಾದರೆ ಹಾಗು ೮ನೆಯ ವಯಸ್ಸಿನ ಪ್ರಶ್ನೆ

ಗಳ ಉತ್ತರವನ್ನು ಮಾತ್ರ ಹೇಳಬಲ್ಲನಾದರೆ ಅವನು ಬುದ್ಧಿಯಲ್ಲಿ ೧ ವರ್ಷ ಹಿಂದುಳಿದಿರುವವನೆನಿಸುವನು. ಇಂಥ ಹುಡುಗನ ಬುದ್ಧಿಯ ತರಗತಿಯು (Intelligence Quotient) $\frac{೬}{೭}$ × ೧೦೦ = ೮೬ ಬರುವದು.

ಇನ್ನು ಬಿನೆಟನ ಬೇರೆ ಬೇರೆ ವಯಸ್ಸಿನ ಪ್ರಶ್ನೆಗಳ ಕೆಲವು ಮಾದರಿಗಳನ್ನು ನೋಡೋಣ. ಇದಕ್ಕೂ ಮೊದಲು ಒಂದು ಮಾತನ್ನು ಲಕ್ಷದಲ್ಲಿಡುವಂತಿದೆ. ೧೯೦೫ರಲ್ಲಿ ಮೊದಲು ಬಿನೆಟನು ಈ ಪ್ರಶ್ನೆಗಳನ್ನು ಪ್ರಸಿದ್ಧಪಡಿಸಿದಾಗ ವಯೋಮಾನುರೂಪವಾಗಿ ಅಂದರೆ ಇಂತಿಷ್ಟು ವಯಸ್ಸಿನ ಹುಡುಗನು ಹೇಳಬಹುದಾದವು, ಎಂದು ಇವುಗಳಲ್ಲಿ ಆತನು ವರ್ಗೀಕರಣ ಮಾಡಿದ್ದಿಲ್ಲ. ಆಯಾ ಪ್ರಶ್ನೆಗಳ ಸ್ವರೂಪಕ್ಕೆ ತಕ್ಕಂತೆ ಅವುಗಳನ್ನು ವರ್ಗೀಕರಿಸಿದ್ದನು; ಅಂದರೆ ಸುಲಭವಾದವು, ಸ್ವಲ್ಪಗಡಚಾದವು ಅವಕ್ಕೂ ಬಿಗಿಯಾದವು, ಈ ಕ್ರಮದಿಂದ ಅವುಗಳನ್ನು ರಚಿಸಿದ್ದನು. ಇವುಗಳಲ್ಲಿ ಸುಮಾರು ೫ ವರ್ಷ ವಯಸ್ಸಿನ ಸಾಮಾನ್ಯ ಬುದ್ಧಿಯ ಹುಡುಗನು ಯಾವ ಪ್ರಶ್ನದವರೆಗೆ ಸಂಯಾಗಿ ಪ್ರಯತ್ನಿಸಬಹುದು; ೬, ೭, ೮ ಮುಂತಾದ ವಯಸ್ಸಿನವನು ಎಲ್ಲೆಲ್ಲಿಯ ವರೆಗೆ ಪ್ರಯತ್ನಿಸಬಹುದು ಎಂಬದನ್ನು ಸೂಚಿಸಿದ್ದನು. ಹೀಗೆ ಈತನ ಪ್ರಶ್ನೆಗಳು ೧೪ ವರ್ಷದ ವಯಸ್ಸಿನ ಹುಡುಗರ ವರೆಗೆ ಕೇಳಬಹುದಾದವುಗಳಿದ್ದವು. ಅದಕ್ಕೂ ಹೆಚ್ಚಿನ ವಯಸ್ಸಿನವರೂ ಇವೇ ಪ್ರಶ್ನೆಗಳನ್ನು ಬಿಡಿಸಬೇಕಾಗುತ್ತಿತ್ತು. ಈ ಮೂಲಕ ಪ್ರತಿಯೊಬ್ಬ ಹುಡುಗನು ಬುದ್ಧಿಯಲ್ಲಿ ಮುಂದುವರಿದಿರುವನೋ ಹಿಂದುಳಿದಿರುವನೋ ಎಂಬದು ಗೊತ್ತಾಗುವಂತಿತ್ತು. ೧೯೦೮ರಲ್ಲಿ ಬಿನೆಟನು ಪ್ರಸಿದ್ಧಪಡಿಸಿದ ಪರೀಕ್ಷೆಯ ಪ್ರಶ್ನೆಗಳನ್ನು ಆತನು ವಯೋಮಾನಕ್ಕೆ ತಕ್ಕಂತೆ ವಿಭಜಿಸಿದ್ದನು. ಈ ಮೇರೆಗೆ ಬೌದ್ಧಿಕ ವಯಸ್ಸಿನ ಕಲ್ಪನೆಯು ರೂಢಿಯಲ್ಲಿ ಬಂದಿತು. ಈ ಕಲ್ಪನೆಗೆ ಜರ್ಮನಿಯ ಪ್ರೊ. ಸ್ಟರ್ನ್ ಎಂಬಾತನು ಸುಧಾರಿಸಿದ ರೂಪವನ್ನು ಕೊಟ್ಟನು. ಬುದ್ಧಿಯ ತರಗತಿಯನ್ನು ಪ್ರತಿಯೊಬ್ಬ ವ್ಯಕ್ತಿಯ ವಿಷಯದಲ್ಲಿ ಹ್ಯಾಗೆ ಕಂಡು ಹಿಡಿಯಬೇಕೆಂಬದನ್ನು ಈತನು ನಿಶ್ಚಯಪಡಿಸಿದನು.

ಇನ್ನು ಬಿನೆಟನ ಕೆಲವು ಪರೀಕ್ಷಾ ಪ್ರಶ್ನಸಮುದಾಯಗಳನ್ನು ನಿರೀಕ್ಷಿಸೋಣ.

ಆರನೆಯ ವರ್ಷದವರ ಪ್ರಶ್ನೆಗಳು.

(೧) ಎಡಬಲಗಳನ್ನು ತಿಳಿದುಕೊಳ್ಳುವದು. (೩ರಲ್ಲಿ ೩)

ನಿನ್ನ ಬಲಗಣ್ಣನ್ನು ತೋರಿಸು.

ನಿನ್ನ ಎಡಗಿವಿಯನ್ನು ತೋರಿಸು.

ನಿನ್ನ ಬಲಗೈಯನ್ನು ತೋರಿಸು.

(೨) ಚಿತ್ರದೊಳಗಿನ ಕೊರತೆಗಳನ್ನು ಹೇಳುವದು. (೪ರಲ್ಲಿ ೩)

ಈ ಮೋರಿಯಲ್ಲಿ ಏನಾದರೂ ತಪ್ಪು ಇದೆ, ಅದರ ಎಲ್ಲ ಭಾಗಗಳೂ ಇಲ್ಲ. ಸ್ವಲ್ಪ ಭಾಗವು ಕಡಿಮೆ ಅದೆ, ಲಕ್ಷಗೊಟ್ಟು ನೋಡಿ, ಮೋರೆಯ ಯಾವ ಭಾಗವನ್ನು ಇದರಲ್ಲಿ ತೆಗೆದಿಲ್ಲ ತೋರಿಸು.

(೩) ಹದಿಮೂರು ಬಿಲ್ಲಿಗಳನ್ನು ಎಣಿಸುವದು.

(೨ ಸಾರಿಯಲ್ಲಿ ೧ ಸಾರೆ ತಪ್ಪದೆ ಎಣಿಸುವದು)

ಬಿಲ್ಲಿಗಳನ್ನು ಅಡ್ಡ ಸಾಲಿನಲ್ಲಿ ಇಡಬೇಕು.

ಈ ಬಿಲ್ಲಿಗಳನ್ನು ನೋಡು. ಇವನ್ನು ಎಣಿಸಿ ಇವು ಎಷ್ಟು ಇವೆ ಹೇಳು. ನಿನ್ನ ಬೆರಳಿನಿಂದ ಹೀಗೆ ಎಣಿಸು.

ಎಣಿಸುವದು ಮತ್ತು ತೋರಿಸುವದು ಕೂಡಿದರೆ ಮಾತ್ರ ಈ ಪರೀಕ್ಷೆಯಲ್ಲಿ ಪಾಸಾದನೆಂದು ತಿಳಿಯಬೇಕು.

(೪) ಗ್ರಹಿಸುವದು, ೨ನೇ ತರಗತಿ— (೩ರಲ್ಲಿ ೨)

(ಅ) ನೀನು ಸಾಲೆಗೆ ಬರಲಿಕ್ಕೆ ಹೋಟಾಗ ಮಳೆಯು ಆಗಲಿಕ್ಕೆ ಹತ್ತಿದರೆ ನೀನು ಏನು ಮಾಡುವಿ ?

(ಬ) ನೀನು ಇರುವ ಮನೆಗೆ ಬೆಂಕಿ ಹತ್ತಿದರೆ ನೀನು ಏನು ಮಾಡುವಿ ?

(ಕ) ನೀನು ಬೇರೆ ಊರಿಗೆ ಹೊರಟಾಗ ನಿನಗೆ (ಮೋಟಾರ) ಗಾಡಿಯು ತಪ್ಪಿದರೆ ನೀನು ಏನು ಮಾಡುವಿ ?

(೫) ನಾಲ್ಕು ನಾಣ್ಯಗಳ ಹೆಸರು ಹೇಳುವದು (೪ರಲ್ಲಿ ೩)

ಇದು ಏನು ?

ಸರಿಯಾಗಿ ಹೇಳಿದೆ, ಆದರೆ ಈ ನಾಣ್ಯದ ಹೆಸರು ಏನು ?

(೬) ೧೬ರಿಂದ ೧೮ ಅಕ್ಷರಗಳುಳ್ಳ ವಾಕ್ಯವನ್ನು ಮತ್ತೆ ಹೇಳುವದು. (೩ ರಲ್ಲಿ ಪೂರ್ಣ ಸರಿಯಾದ ೧, ಇಲ್ಲವೆ ಒಂದೊಂದು ತಪ್ಪು ಇದ್ದ ೨)

(ಅ) ಇಲ್ಲಿ ಮೌಜು ನೋಡು, ಈ ಪಂಜರದಲ್ಲಿ ಇಲಿ ಸಿಕ್ಕದೆ.

(ಬ) ರಾಮನು ಸೂಟಿಯನ್ನು ಪ್ರವಾಸ ಮಾಡಿ, ಹಾಡಿ ಕಳೆದನು.

(ಕ) ನಾವು ದೂರ ಅಡ್ಡಾಡಲಿಕ್ಕೆ ಹೋಗೋಣ, ನನ್ನ ಕೋಲು ತಾ.

ಹೆಚ್ಚಿನ ಪ್ರಶ್ನೆ—ಮುಂಜಾನೆ, ಮಧ್ಯಾಹ್ನ.

ಈಗ ಮುಂಜಾನೆಯೋ ಮಧ್ಯಾಹ್ನವೋ ? (ಮುಂಜಾನೆಯಿದ್ದಾಗ)

ಇದು ಮಧ್ಯಾಹ್ನವೋ ಮುಂಜಾನೆಯೋ ? (ಮಧ್ಯಾಹ್ನವಿದ್ದಾಗ)

ಇವುಗಳನ್ನು ಓದಿ ನೋಡಲು ಒಂದು ಪ್ರಶ್ನವು ಹೊರಡುವದು. ಅದು ಯಾವ ದೆಂದರೆ:—ಬಿನೆಟನು ಸಾಮಾನ್ಯ ಬುದ್ಧಿಯೆಂದು (General Intelligence) ಎಣಿಸಿದ ಬುದ್ಧಿಯ ವಿಶಿಷ್ಟ ಸ್ವರೂಪವು ಏನಿರಬಹುದು? ಬಗೆಬಗೆಯ ಪ್ರಶ್ನಗಳನ್ನು ಅವನು ಯಾವ ಉದ್ದೇಶದಿಂದ ಆರಿಸಿರಬಹುದು? ಬಿನೆಟನ ಕಾಲದಲ್ಲಿ ಹಿಂದಿನ ಮಾನಸ ಶಾಸ್ತ್ರಜ್ಞರು ಮಾಡಿದ ಮನಸಿನ ವ್ಯಾಖ್ಯೆಯು—ಅಂದರೆ ಮನಸು ಕೆಲವು ಪ್ರತ್ಯೇಕ ವಾದ ಶಕ್ತಿಗಳ ಕಾರ್ಯರೂಪವಾಗಿ ನಮಗೆ ಗೋಚರವಾಗುವದೆಂಬ ಕಲ್ಪನೆಯು— ಲಯಹೊಂದಿತ್ತು. ಸ್ಮರಣ, ಕಲ್ಪನೆ, ವಿಚಾರ ಮುಂತಾದ ಪರಸ್ಪರ ಭಿನ್ನವಾದ ಶಕ್ತಿ ಗಳು ಮನಸ್ಸಿನ ಬೇರೆ ಬೇರೆ ಭಾಗಗಳಾಗಿ ಕಾರ್ಯ ಮಾಡುತ್ತವೆಂಬ ಕಲ್ಪನೆಯು ತಪ್ಪಾ ದದ್ದೆಂದು ನಿಶ್ಚಿತವಾಗಿತ್ತು. ಪ್ರಯೋಗ ಪದ್ಧತಿಯ ಮೂಲಕ ಮನಸ್ಸಿನ ಕಾರ್ಯಗ ಳನ್ನು ಶಾಸ್ತ್ರಜ್ಞರು ಹೆಚ್ಚು ಹೆಚ್ಚು ಅಭ್ಯಾಸ ಮಾಡಿದಂತೆ ಮನಸ್ಸೆಂಬದರ ಕಾರ್ಯಗ ಳೆಲ್ಲ ಕೂಡಿ ಒಂದಾಗಿ ನಡೆಯುತ್ತವೆಂದು ಅವರ ದೃಢ ನಂಬಿಗೆಯು ಆಯಿತು. ಈ ತತ್ವದ ಮೇರೆಗೆ ಹೆಚ್ಚಿನ ಬುದ್ಧಿಯೆಂದ ಕೂಡಲೆ ಮೇಲಾದ ಸ್ಮರಣ, ಮೇಲ್ತರದ ಕಲ್ಪನೆ ಹಾಗು ಮೇಲ್ತರದ ವಿಚಾರ ಎಂದು ಧ್ವನಿತವಾಗುತ್ತಿತ್ತು. ಒಬ್ಬನ ಸ್ಮರಣ ಶಕ್ತಿಯು ಮಂದವಿರುವದು. ಆದರೂ ಆತನು ವಿಚಾರಗಳನ್ನು ಸಮರ್ಪಕವಾಗಿ ಮಾಡಬಲ್ಲನು. ಇದು ವಾಸ್ತವಿಕವಲ್ಲವೆಂದೂ ಮಾನಸ ಶಾಸ್ತ್ರಜ್ಞರು ಮಾಡಿದ ಪ್ರಯೋಗಗಳಿಂದ ಕಟ್ಟಿದ ಸಿದ್ಧಾಂತಗಳಿಗೆ ಈ ಮಾತು ಸರಿ ಹೊಂದುವದಿಲ್ಲವೆಂದೂ ಗೊತ್ತಾಗಿತ್ತು. ಹೀಗಿರಲು ಬಿನೆಟನು ಬೇರೆ ಬೇರೆ ತರದ ಪ್ರಶ್ನಸಮೂಹಗಳನ್ನು ಯಾಕೆ ರಚಿಸಿರಬಹುದು? ಇವುಗಳಲ್ಲಿ ಕೆಲವು ಸ್ಮರಣಬಲದಿಂದಲೂ ಕೆಲವು ಗ್ರಹಣ ಶಕ್ತಿಯ ಬಲದಿಂದಲೂ ಕೆಲವು ಕಲ್ಪನಾಸಾಮರ್ಥ್ಯದಿಂದಲೂ ಹೇಳುವಂಥವಿರುವವು. ಇವರ ಕಾರಣವೇನಿರಬಹುದು? ಇದರ ಕಾರಣವೇನೆಂದರೆ, ಸಾಮಾನ್ಯ ಬುದ್ಧಿಗೂ (General Intelligence) ಮೇಲೆ ಹೇಳಿದ ಶಕ್ತಿಗಳಲ್ಲಿ ಪ್ರತಿಯೊಂದಕ್ಕೂ ನಿಕಟ ಸಂಬಂಧವಿದ್ದರೂ ವ್ಯವಹಾರದಲ್ಲಿ ಹೆಚ್ಚುಕಡಿಮೆಗಳು ಗೋಚರವಾಗುವವು. ರೂಢಿ, ಆಸಕ್ತಿ ಇಲ್ಲನೆ ಪರಿಸ್ಥಿತಿ ಇವುಗಳ ಮೂಲಕ ಕೆಲವರಲ್ಲಿ ಇತರರಿಗಿಂತ ಈ ಶಕ್ತಿ ಗಳು ಹೆಚ್ಚಾಗಿ ವ್ಯಕ್ತವಾಗಿರುತ್ತವೆ.

ಈ ಮೇರೆಗೆ ಸಾಮಾನ್ಯ ಬುದ್ಧಿಯೆಂದರೇನೆಂಬದನ್ನು ಕುರಿತು ಚರ್ಚಿಸುತ್ತ ಕಾಲ ಕಳೆಯದೆ, ಬಿನೆಟನು ಅನೇಕ ತರದ ಪ್ರಶ್ನಗಳನ್ನು ರಚಿಸಿ ಅವುಗಳನ್ನು ಬೇರೆ ಬೇರೆ ವಯಸ್ಸಿನ ಹುಡುಗರಿಗೆ ಕೇಳಿ ನೋಡಿ, ಆಯಾ ವಯಸ್ಸಿನವರಿಗೆ ತಕ್ಕವುಗಳೆಂಬವನ್ನು ಪ್ರತ್ಯೇಕ ಪಡಿಸಿ ಈ ಪ್ರಶ್ನಗಳನ್ನು ವರ್ಗೀಕರಿಸಿದನು. ಆಯಾ ವಯಸ್ಸಿನ ಪ್ರಶ್ನಗ ಳಲ್ಲಿ ೧೦೦ರಲ್ಲಿ ೫೦ ಹುಡುಗರು ಯಾವ ಎಲ್ಲ ಪ್ರಶ್ನಗಳಿಗೆ ಸರಿಯಾದ ಉತ್ತರಗಳನ್ನು ಕೊಟ್ಟಿರುವರೋ ಅವುಗಳನ್ನು ಆ ವಯಸ್ಸಿನ ಪ್ರಶ್ನಗಳೆಂದು ನಿಶ್ಚಯಿಸಿದನು. ಉದಾ

ಹರಣಾರ್ಥವಾಗಿ ೬ನೆಯ ವರ್ಷ ವಯಸ್ಸಿನ ಪ್ರಶ್ನೆಗಳೆಂದರೆ ೭ ಮುಗಿದು ೮ ಆರಂಭವಾಗುವದರೊಳಗಿನ ವಯಸ್ಸಿನ ೧೦೦ ಹುಡುಗರಲ್ಲಿ ೫೨ ಹುಡುಗರು ಯಾವ ಪ್ರಶ್ನೆಗಳನ್ನೆಲ್ಲ ಸರಿಯಾಗಿ ಬಿಡಿಸಿರುವರೋ ಅವು.

ಆದರೆ ಈ ಸಾಮಾನ್ಯ ಬುದ್ಧಿಯೆಂದರೇನೆಂಬದನ್ನು ನಾವು ಸ್ಪಷ್ಟವಾಗಿ ತಿಳಿದು ಕೊಳ್ಳುವದು ವಿಹಿತವಾದದ್ದು. ಬಿನೆಟನು ಇದರ ವ್ಯಾಖ್ಯೆಯನ್ನು ಹೇಳುತ್ತ ಕೂಡುವ ಗೋಜಿಗೆ ಹೋಗಲಿಲ್ಲ. ಬಿನೆಟನ ತರುವಾಯ ಇಂಗ್ಲಂಡದಲ್ಲಿ ಈ ಪ್ರಶ್ನೆಯ ಬಗ್ಗೆ ವಿದ್ವಾಂಸರಲ್ಲಿ ಒಳ್ಳೇವಾದವು ಪ್ರಾರಂಭವಾಯಿತು. ಜರ್ಮನ್ ದೇಶದ ಹೆಸರಾದ ಮಾನಸ ಶಾಸ್ತ್ರಜ್ಞನಾದ ಸ್ಟರ್ನನೆಂಬಾತನು ಇದರ ವ್ಯಾಖ್ಯೆಯನ್ನು ಮುಂದೆ ಬರೆದಂತೆ ಮಾಡಿರುವನು. "ಬುದ್ಧಿಯೆಂದರೆ ಒಬ್ಬ ವ್ಯಕ್ತಿಯು ಹೊಸ ಬೇಡಿಕೆಗಳಿಗೆ ತಕ್ಕಂತೆ ತನ್ನ ವಿಚಾರಗಳನ್ನು ಪ್ರಯತ್ನಪೂರ್ವಕವಾಗಿ ಹೊಂದಿಕೆಗೊಳಿಸುವ ಸಾಮಾನ್ಯ ಸಾಮರ್ಥ್ಯವು" ಇದು ಎಲ್ಲ ವ್ಯಾಖ್ಯೆಗಳಲ್ಲಿ ಮೇಲಾದದ್ದೆಂದು ಎಣಿಸಲ್ಪಟ್ಟಿದೆ. ಸರ್ವತೋಮುಖವಾದ ಮಾನಸಿಕ ಸಾಮರ್ಥ್ಯವೇ ಸಾಮಾನ್ಯ ಬುದ್ಧಿಯೆಂದು ಪ್ರೊ. ಸಿರಿಲ್‌ಬರ್ಟ ನೆಂಬಾತನು ಹೇಳಿರುವನು. ಆದರೆ ಪ್ರೊ. ಸ್ಪಿಯರಮನ್ ಎಂಬಾತನು ಸಾಮಾನ್ಯ ಬುದ್ಧಿಯಲ್ಲಿ ಎರಡು ಅಂಶಗಳು ಇರುತ್ತವೆಂದು ಹೇಳಿ ಬೇರೊಂದು ವ್ಯಾಖ್ಯೆಯನ್ನು ಕಟ್ಟಿರುವನು. ಅವನ ಪ್ರಕಾರ "ನಮ್ಮ ಬೌದ್ಧಿಕ ಚಟುವಟಿಕೆಗಳೆಲ್ಲ ಎರಡು ಸಂಗತಿಗಳನ್ನು ಅವಲಂಬಿಸಿರುವವು. ಇವುಗಳಲ್ಲಿ ನಮ್ಮಲ್ಲಿರುವ ಮಾನಸಿಕ ಸಾಮರ್ಥ್ಯದ ಸಾಮಾನ್ಯ ನಿಧಿಯು ಒಂದನೆಯದು; ಒಂದು ಬಗೆಯ ಪ್ರತ್ಯೇಕವಾದ ಕೆಲಸವನ್ನು ಮಾಡಲಿಕ್ಕೆ ಅವಶ್ಯವಾದ ನಮ್ಮಲ್ಲಿರುವ ವಿಶಿಷ್ಟ ಸಾಮರ್ಥ್ಯವು ಎರಡನೆಯದು. ಉದಾಹರಣಾರ್ಥವಾಗಿ ಪದಾರ್ಥವಿಜ್ಞಾನ ಶಾಸ್ತ್ರದಲ್ಲಿ ಒಬ್ಬನಿಗಿರುವ ಪ್ರಗತಿಯು ಎರಡು ಸಂಗತಿಗಳನ್ನು ಅವಲಂಬಿಸಿರುವದು. ಮೊದಲನೆಯದು ಆತನ ಮಾನಸಿಕ ಬೆಳವಣಿಗೆಯ ಸಾಮಾನ್ಯ ಸ್ಥಿತಿಯು, ಎರಡನೆಯದು ಆ ವಿಷಯವನ್ನು ಕಲಿಯಲು ಆತನು ಆ ವರೆಗೆ ಮಾಡಿರುವ ಅಭ್ಯಾಸವು. ಇನ್ನೊಂದು ಉದಾಹರಣದಿಂದ ಇದು ಸ್ಪಷ್ಟವಾಗಬಹುದು. ಈ ಉದಾಹರಣವು ಮಾನಸಿಕ ಕಾರ್ಯಕ್ಕೆ ಸಂಬಂಧಿಸಿಲ್ಲ; ಶಾರೀರಿಕ ಕೆಲಸಕ್ಕೆ ಸಂಬಂಧಿಸಿದೆ. ಒಬ್ಬನು ಕ್ರಿಕೆಟ್ ಎಂಬ ಚೆಂಡಾಟದಲ್ಲಿ ಪಟುವಾಗಿರುವನೆಂದು ಕಲ್ಪಿಸುವ. ಆತನ ಚೆಂಡಾಟದ ಪಟುತ್ವವು ಎರಡು ಸಂಗತಿಗಳನ್ನು ಅವಲಂಬಿಸುವದು. ಮೊದಲನೆಯದು, ಆತನ ಸಾಮಾನ್ಯ ಶಾರೀರಿಕ ಬೆಳವಣಿಗೆ; ಎರಡನೆಯದು ಆ ಆಟದಲ್ಲಿ ಆತನಿಗೆ ದೊರೆದ ಶಿಕ್ಷಣ ಹಾಗು ರೂಢಿ. ಶಾಸ್ತ್ರೀಕ ಚರ್ಚೆಗಾಗಿ ನಾವು ಈ ವ್ಯಾಖ್ಯೆಗಳನ್ನು ವಿಚಾರಿಸುತ್ತ ಕೂಡುವದಕ್ಕಿಂತ ವ್ಯವಹಾರದಲ್ಲಿ ಸಿರಿಲ್ ಬರ್ಟನ ವ್ಯಾಖ್ಯೆಯನ್ನು ಅಂದರೆ ಮನಸಿನ ಸರ್ವತೋಮುಖವಾದ ಸಾಮರ್ಥ್ಯವೇ ಬುದ್ಧಿಯೆಂದು ಒಪ್ಪಿಕೊಳ್ಳುವದು ಮೇಲು.

ಬಿನೆಟನ ಪರೀಕ್ಷಾ ಪ್ರಶ್ನಗಳನ್ನು ಕುರಿತು ವಿಚಾರಿಸುವಾಗ ಇನ್ನೊಂದು ಮಹತ್ವದ ಅಂಶವು ಹೊರಡುವದು. ಬುದ್ಧಿಯು ವರ್ಷಾನುವರ್ಷ ಹ್ಯಾಗೆ ಬೆಳೆಯುತ್ತ ಹೋಗುವದು? ಬುದ್ಧಿಯು ಬಾಲ್ಯದಲ್ಲಿ ಬಹು ತೀವ್ರವಾಗಿ ಬೆಳೆಯುತ್ತದೆಂದು ಪ್ರಯೋಗಮಾಡಿ ನೋಡಿದವರೆಲ್ಲ ಒಪ್ಪಿಕೊಳ್ಳುತ್ತಾರೆ. ಸುಮಾರು ೧೬ ವರ್ಷದ ವಯಸ್ಸಿಗೆ ಅದರ ಬೆಳವಣಿಗೆಯು ನಿಂತುಹೋಗುವದೆಂದು ಇವರೆಲ್ಲರೂ ಹೇಳುವರು. ಕೆಲವರಂತೂ ಇದು ೧೪ ವರುಷ ವಯಸ್ಸಾದ ಬಳಿಕ ಬೆಳೆಯುವದಿಲ್ಲವೆಂದು ಪ್ರತಿಪಾದಿಸುವರು. ೧೪ ವರ್ಷ ವಯಸ್ಸಾದ ಬಳಿಕ ಅದರ ಬೆಳವಣಿಗೆಯು ತೀರ ಕಡಿಮೆಯೆಂದು ನಾನು ಮಾಡಿದ ಪ್ರಯೋಗಗಳಿಂದ ಮನಗಂಡಿರುವೆನು. ಆದರೂ ನಾನು ಕೈಕೊಂಡ ಬುದ್ಧಿಪರೀಕ್ಷೆಯ ಕೆಲಸವು ಪೂರ್ಣವಾಗುವ ವರೆಗೆ ಈ ಮಾತು ಪ್ರಮಾಣವೆಂದು ಹೇಳಲಾರೆನು. ಶಾರೀರಿಕ ಬೆಳವಣಿಗೆಯಂತೆಯೇ ಬುದ್ಧಿವಿಕಾಸವೂ ಬಹುಶಃ ೧೪ ಇಲ್ಲವೆ ೧೬ ವರ್ಷಗಳ ವರೆಗೆ ಭರದಿಂದ ಸಾಗುವದು. ಆ ಬಳಿಕ ಕೆಲವರಲ್ಲಿ (ಇವರ ಸಂಖ್ಯೆಯು ಬಹಳ ಸಣ್ಣದಿರುವದು) ೨೦ ಇಲ್ಲವೆ ೨೫ ವರ್ಷಗಳ ವರೆಗೆ ಇದು ಬಹು ಸಾವಕಾಶವಾಗಿ ಸ್ವಲ್ಪ ಮಟ್ಟಿಗೆ ವಿಕಾಸಹೊಂದುತ್ತಿರಬಹುದು. ಈ ಸಂಗತಿಯು ಇನ್ನೂ ಅನುಮಾನದ ಅವಸ್ಥೆಯಲ್ಲಿರುವದೆಂದು ನಾನು ಒಪ್ಪಿಕೊಳ್ಳುವೆನು. ಅಂತೂ ಬುದ್ಧಿಬೆಳವಣಿಗೆಯನ್ನು ಕಂಸಾಕಾರವಾಗಿ ಕೆಳಗೆ ಕಾಣಿಸಿದಂತೆ ತೋರಿಸಬಹುದು.



ಅಬ ಗೆರೆಯು ವಯಸ್ಸನ್ನು ತೋರಿಸುವದು. ಅಕ ಗೆರೆಯು ಬುದ್ಧಿಯ ಬೆಳವಣಿಗೆಯನ್ನು ತೋರಿಸುವದು. × ಈ ಗುರುತು ೧೬ ವರ್ಷ ವಯಸ್ಸಿನ ವರೆಗೆ ಬುದ್ಧಿಯು ಬೆಳೆಯುತ್ತ ಹೋಗುವ ಕ್ರಮವನ್ನು ತೋರಿಸುವದು.

೧೬ ವರ್ಷಕ್ಕಿಂತ ಹೆಚ್ಚು ವಯಸ್ಸಾದವನ ಬುದ್ಧಿಯ ತರಗತಿಯನ್ನು (Intelligence Quotient) ಅಂದರೆ ಎಷ್ಟು ಪ್ರಶ್ನಗಳಿಗೆ ಉತ್ತರ ಕೊಡುವನೆಂಬದನ್ನು ನಿಶ್ಚಯಿಸಬೇಕಾದರೆ ಬಿನೆಟನ ಪರೀಕ್ಷಾ ಪ್ರಶ್ನಗಳ ಮೂಲಕ ಆತನ ಮಾನಸಿಕ ವಯಸ್ಸನ್ನು ಗೊತ್ತುಹಚ್ಚಿ ೧೬ರಿಂದ (೧೬ ಮೀರಿದವರ ಕಾಲಮಾನದ ವಯಸ್ಸನ್ನು ೧೬ ಎಂದೇ ಯಾವಾಗಲೂ ಹಿಡಿಯತಕ್ಕದ್ದು) ಭಾಗಿಸಬೇಕು.

ವ್ಯವಹಾರದಲ್ಲಿ ಈ ಬುದ್ಧಿ ಪರೀಕ್ಷೆಯಿಂದ ನಮಗೆ ಉಪಯೋಗವೇನು ? ಎಂದು ನನ್ನ ಸ್ನೇಹಿತರಲ್ಲಿ ಅನೇಕರು ನನಗೆ ಪ್ರಶ್ನೆಮಾಡಿರುವರು. ಅವರು ಅನ್ನುವದೇನೆಂದರೆ 'ನೀವು ಹೇಳುವದರಲ್ಲಿ ಹೊಸದೇನಿರುವದು ? ವರ್ಗದಲ್ಲಿ ಹುಡುಗನ ಅಭ್ಯಾಸದ ಪ್ರಗತಿಯನ್ನು ನೋಡಲು ಇವನು ಚುರುಕಬುದ್ಧಿಯವನು, ಇವನು ಮಂದಬುದ್ಧಿಯವನು ಎಂಬದು ನಮಗೆ ಗೊತ್ತಾಗುವದಷ್ಟೇ. ಅಭ್ಯಾಸದ ಪ್ರಗತಿಯಮಾನದಿಂದ ಹುಡುಗರ ಬುದ್ಧಿಶಕ್ತಿಯನ್ನು ನಾವು ಪ್ರತಿ ದಿವಸ ವರ್ಗದ ಕೆಲಸಗಳಲ್ಲಿ ಗೊತ್ತುಪಡಿಸುವೆವಷ್ಟೇ.' ಶಾಲೆಯಲ್ಲಿ ನಾವು ಮಾಡುವ ಬುದ್ಧಿಗಣನೆಯಿಂದ ಆಗದ ಕೆಲಸವನ್ನು ಈ ಬುದ್ಧಿಪರೀಕ್ಷೆಯು ಎರಡು ಪ್ರಕಾರದಿಂದ ಸಾಧ್ಯಮಾಡಿಕೊಳ್ಳುವದೆಂದು ನನ್ನ ಉತ್ತರವು. ಮೊದಲು, ಕಡಿಮೆಬುದ್ಧಿಯುಳ್ಳ ಒಬ್ಬ ಹುಡುಗನು ಲಕ್ಷಗೊಟ್ಟು ಶ್ರಮಬಟ್ಟು ಅಭ್ಯಾಸಮಾಡುವದರಿಂದ ಹೆಚ್ಚು ಬುದ್ಧಿಯುಳ್ಳ ಹುಡುಗನಿಗಿಂತ ಮೇಲ್ಪಟ್ಟ ನಂಬರು ಪಡೆಯಬಹುದು. ಇದು ನಮ್ಮ ಲಕ್ಷಕ್ಕೆ ಬರುವದಿಲ್ಲ. ಎರಡನೆಯ ಮಹತ್ವದ ಮಾತೆಂದರೆ ನಾವು ಶಾಲೆಯ ಕೆಲಸಗಳಲ್ಲಿ ಹುಡುಗರ ವಯಸ್ಸನ್ನು ಲಕ್ಷ್ಯದಲ್ಲಿ ತರುವದಿಲ್ಲ. ಈ ಮೂಲಕ ಕೆಳಗಿನ ಇಯತ್ತೆಯಲ್ಲಿ ಅಭ್ಯಾಸಮಾಡುತ್ತಿರುವ ಹೆಚ್ಚಿನ ವಯಸ್ಸಿನ ಹುಡುಗನ ಬುದ್ಧಿಯು ನಮಗೆ ಚುರುಕಾಗಿ ತೋರುವದು. ಹಾಗು ಇದಕ್ಕೆ ಪ್ರತಿಯಾಗಿ ಮೇಲಿನ ಇಯತ್ತೆಯಲ್ಲಿರುವ ಕಡಿಮೆ ವಯಸ್ಸಿನ ಹುಡುಗನ ಬುದ್ಧಿಯು ನಮ್ಮ ಮನಸ್ಸಿನಲ್ಲಿ ಸಾಕಷ್ಟು ತುಂಬುವದಿಲ್ಲ. ಅಂದರೆ ಅದನ್ನು ನಾವು ಸರಿಯಾಗಿ ಗಣನೆಮಾಡಲಾರೆವು. ಈ ಕಾರಣಗಳ ಮೂಲಕ ಶಾಲೆಯಲ್ಲಿ ಸರಾಸರಿಯಾಗಿ ನಾವು ಮಾಡುವ ಬುದ್ಧಿಪರೀಕ್ಷೆಯು ಬಿನೆಟಿನ ಬುದ್ಧಿಪರೀಕ್ಷೆಗೆ ಎಂದೂ ಸರಿಬಾರದು. ಮೇಲಾಗಿ ಶಾಲೆಯ ಕೆಲಸಗಳ ಬಗ್ಗೆ ನಾವು ಸಾಮಾನ್ಯವಾಗಿ ಮಾಡುವ ವರ್ಗೀಕರಣವು ನಮ್ಮಲ್ಲಿ ಪರಿಪೂರ್ಣವಾದದ್ದಿರುವದಿಲ್ಲ. ಆದ್ದರಿಂದ ನಿಶ್ಚಿತವಾದ ಮಧ್ಯಮ ಅಥವಾ ಸಾಮಾನ್ಯ ಬುದ್ಧಿವಿಕಾಸಕ್ಕೆ ಸರಿನೋಡಿ ಪ್ರತಿಯೊಬ್ಬ ಹುಡುಗನು ಇದಕ್ಕೂ ಮೇಲು ಇಲ್ಲವೆ ಕೀಳು ಎಂಬದನ್ನು ಅಳೆಯಲಿಕ್ಕೆ ನಮಗೆ ಬರುವಂತಿಲ್ಲ. ಇದಲ್ಲದೆ ನಾವು ಮಾಡುತ್ತಿರುವ ಬುದ್ಧಿಪರೀಕ್ಷೆಯಿಂದ ಗೊತ್ತುಪಡಿಸಿದ ನಿರ್ಣಯಗಳು ಕೊನೆಯವರೆಗೆ ನಿಶ್ಚಿತವಾದವುಗಳೂ ಸಶಾಸ್ತ್ರವಾದವುಗಳೂ ಇರಲಾರವು. ಇದನ್ನು ಒಂದು ದೃಷ್ಟಾಂತದಿಂದ ಸ್ಪಷ್ಟಮಾಡಬಹುದು. ಒಬ್ಬ ಹುಡುಗನಿಗೆ ಜ್ವರ ಬಂದಿವೆ ಎಂದು ತಿಳಿಯಿರಿ. ಆತನ ಮುಖಲಕ್ಷಣದಿಂದಲೂ ನಾಡಿಯಿಂದಲೂ ನಾವು ಆತನಿಗೆ ಉರಿಬಂದಿವೆ ಎಂದೂ, ಇಂದು ನಿನ್ನೆಗಿಂತ ತುಸು ಹೆಚ್ಚು ಇಲ್ಲವೆ ಕಡಿಮೆ ಉರಿ ಇರುವದೆಂದೂ ಹೇಳುವದುಂಟು. ಆದರೆ ನಿನ್ನೆಗಿಂತ ಇಂದು ಶರೀರದ ಉಷ್ಣತಾಮಾನವು ಎಷ್ಟು ಅಂಶ ಹೆಚ್ಚು ಅಥವಾ ಕಡಿಮೆ ಇರುವದೆಂಬದು ನಮಗೆ ಉಷ್ಣತಾಮಾಪಕ ಯಂತ್ರದ ಹೊರತು ನಿಶ್ಚಿತವಾಗಿ ತಿಳಿಯಲಾರದು. ಹಾಗೆಯೇ ಒಬ್ಬ ಹುಡುಗನು

ಮತ್ತೊಬ್ಬನಿಗಿಂತ ಬುದ್ಧಿವಂತನಾಗಿ ನಮಗೆ ತೋರಬಹುದು. ಈ ಮಾತನ್ನು ನಾವು ಸುಮಾರಾಗಿ ಹೇಳಬಹುದು. ಆದರೆ ಎರಡನೆಯವನು ಮೊದಲನೆಯವನಿಗಿಂತ ಎಷ್ಟು ಹೆಚ್ಚು ಬುದ್ಧಿವಂತನಿರುವನು? ಇಬ್ಬರೂ ಅಷ್ಟೇ ವಯಸ್ಸಿನವರಿದ್ದಾಗ ಇವರೀರ್ವರ ಬುದ್ಧಿಬಲದಲ್ಲಿ ಎಷ್ಟು ಹೆಚ್ಚುಕಡಿಮೆಯಿದ್ದಿರಬಹುದು, ಎಂಬದನ್ನು ನಾವು ಹೇಳಲಾರೆವು. ಆದರೆ ಬಿನೆಟನು ಸಿದ್ಧಪಡಿಸಿದ ಬುದ್ಧಿಪರೀಕ್ಷೆಯು ಪರಿಮಾಣದಿಂದ ಅಳೆದು ನಾವು ಈ ಪ್ರಶ್ನೆಗೆ ಸರಿಯಾದ ಹಾಗು ವಿಶ್ವಸನೀಯವಾದ ಉತ್ತರಗಳನ್ನು ಕೊಡಬಹುದಾಗಿದೆ.

ಇನ್ನು ಬಿನೆಟನ ಪ್ರಶ್ನಗಳ ಸಹಾಯದಿಂದ ನಮ್ಮಲ್ಲಿಯ ಹುಡುಗರ ಬುದ್ಧಿತರಗತಿಯನ್ನು ಗೊತ್ತುಹಚ್ಚುವ ಕೆಲಸದಲ್ಲಿ ನನಗೆ ಬಂದ ಅನುಭವಗಳನ್ನು ಕೇಳಲಿಕ್ಕೆ ವಾಚಕರು ಕುತೂಹಲವುಳ್ಳವರಾಗಿರಬಹುದು. ಆದರೆ ನಾನು ಪರೀಕ್ಷೆಗಳ ಮೂಲಕ ಕಲೆಹಾಕಿದ ಮಾಹಿತಿಯನ್ನು ಸಂಖ್ಯಾರೂಪಕ್ಕೆ ತಂದು ಸಿದ್ಧಾಂತಗಳನ್ನು ಕಟ್ಟಲು ನನಗೆ ಕಾಲಾನುಕೂಲವಾಗಿಲ್ಲ. ಆದರೂ ನನಗೆ ತೋರಿದ ಒಂದೆರಡು ಸಂಗತಿಗಳನ್ನು ನಿಮ್ಮೆದುರಿಗೆ ಇಡಬಹುದು. ಇವುಗಳಲ್ಲಿ ಮೊದಲನೆಯದು ಯಾವದೆಂದರೆ, ನಮ್ಮ ಹುಡುಗರು ಒಟ್ಟಿನ ಮೇಲೆ ಗಣಿತಕ್ಕೆ ಸಂಬಂಧಿಸಿದ ವಿಚಾರಗಳಲ್ಲಿ ಪಾಶ್ಚಾತ್ಯ ಹುಡುಗರಿಗಿಂತ ಹಿಂದುಳಿದಿಲ್ಲವೆಂದು ಧಾರಾಳವಾಗಿ ಹೇಳಬಹುದು. ನಾವು ಗಣಿತದ ಆರಂಭದ ಕೃತಿಗಳನ್ನು ಕಲಿಸುವ ಪದ್ಧತಿಗಳು, ಮಗ್ಗಿ ಕೋಷ್ಟಕಗಳನ್ನು ಹೇಳಿಕೊಡುವ ಕ್ರಮಗಳು, ನಮ್ಮ ಸುತ್ತಲಿನ ಸ್ಥಿತಿ, ಇವುಗಳ ಮೂಲಕ ಈ ಬಗೆಯ ಪ್ರಶ್ನಗಳನ್ನು ಪಾಶ್ಚಾತ್ಯ ದೇಶಗಳ ಹುಡುಗರಿಗಿಂತ ಸುಲಭವಾಗಿ ಬಿಡಿಸುವರು. ಆದ್ದರಿಂದ ನಾವು ಈ ನಮ್ಮ ಪದ್ಧತಿಗಳನ್ನು ಅನುಸರಿಸತಕ್ಕದ್ದು. ಹಾಗು ಸಾಧ್ಯವಿದ್ದಲ್ಲಿ ಈ ಕ್ರಮದಲ್ಲಿಯೇ ಸುಧಾರಣೆಗಳನ್ನು ಮಾಡತಕ್ಕದ್ದು. ಅಂದರೆ ನಮ್ಮ ಮಗ್ಗಿ ಕಲಿಸುವ ಪದ್ಧತಿ, ಪುರೋಚಿ ಅನಿಸುವ ಪದ್ಧತಿ, ಇವೇ ಮೇಲಾದವೆಂದು ನನಗೆ ತೋರುತ್ತದೆ. ಇವುಗಳಲ್ಲಿ ಸುಧಾರಣೆಯು ಅವಶ್ಯವೆನಿಸಿದರೆ ಗಟ್ಟಿಮಾಡಿಸುವಾಗ ಅರ್ಥ ತಿಳಿದುಕೊಂಡು ಗಟ್ಟಿ ಮಾಡಿಸುವ ರೂಢಿಯಿಡಬಹುದು. ಅಂದರೆ ರೂಢಿಯು ನಿಯಮಗಳನ್ನು ನಾವು ಅನುಸರಿಸಿದಂತಾಗುವದು. ಗಟ್ಟಿಮಾಡಿಸುವದು ಬಹಳ ಮಹತ್ವವಾದದ್ದು. ಇತ್ತಲಾಗಿ ಗಣಿತ ಶಿಕ್ಷಣದಲ್ಲಿ ಅಮೇರಿಕೆಯ ಶಿಕ್ಷಣ ಶಾಸ್ತ್ರಜ್ಞರು ಇದಕ್ಕೆ ಒಳ್ಳೇ ಮಹತ್ವವನ್ನು ಕೊಡುತ್ತಿರುವರು. ಆದರೆ ತೀವ್ರವಾದ ವಿಚಾರ, ಸಾಹಚರ್ಯ ಸಂಬಂಧವುಳ್ಳ ಕಲ್ಪನೆಗಳು ಇವುಗಳಲ್ಲಿ ನಮ್ಮ ಹುಡುಗರು ಪಾಶ್ಚಾತ್ಯ ಹುಡುಗರಿಗಿಂತ ಹಿಂದೆ ಇರುವರು. ಉದಾಹರಣಾರ್ಥವಾಗಿ ಸಂಬಂಧವುಳ್ಳ ಕಲ್ಪನೆಗಳ ೧೦ನೆಯ ವರ್ಷದ ಪರೀಕ್ಷೆಯ ಪ್ರಶ್ನಗಳನ್ನು ಕುರಿತು ವಿಚಾರಿಸೋಣ. ಇವುಗಳಲ್ಲೊಂದು ಪ್ರಶ್ನವು ಮೂರು ಮಿನಿಟುಗಳಲ್ಲಿ ಬೇಕಾದ ೬೦ ಶಬ್ದಗಳನ್ನು ಹೇಳುವದಿರುವದು. ಈ ಕೆಲಸದಲ್ಲಿ ನಮ್ಮ ಹುಡುಗರು ಬಹಳ ಹಿಂದೆಬೀಳುವರು. ಬಿನೆಟನು ಇವುಗಳನ್ನು ೧೨ನೆಯ ವರ್ಷದ

ಪ್ರಶ್ನಮಾಲಿಕೆಯಲ್ಲಿ ಸೇರಿಸಿಗುವನು. ಟೆರಮನ್ನನು ೧೦ನೆಯ ವರ್ಷದ ಮಾಲಿಕೆಯಲ್ಲಿ ಹಾಗು ಬರ್ಟನು ೧೧ನೆಯ ವರ್ಷದ ಪ್ರಶ್ನಗಳಲ್ಲಿ ಹಾಕಿರುವನು. ನಮ್ಮಲ್ಲಿಯ ೧೦ನೆಯ ವರ್ಷದ ಹುಡುಗರು ಸಾಮಾನ್ಯವಾಗಿ ೩೫ ಶಬ್ದಗಳನ್ನು ಹೇಳಬಹುದು. ನನ್ನ ಅನುಭವದ ಮೇರೆಗೆ ಇವರು ೩೭ ಶಬ್ದಗಳನ್ನು ಹೇಳುವರು ಅಂದರೆ ಬಿನೆಟನ ಅನುಭವದ ಮೇರೆಗೆ ಪಾಶ್ಚಾತ್ಯ ಹುಡುಗರಲ್ಲಿ ೬೦ ಶಬ್ದಗಳನ್ನು ಹೇಳುವದು ಸಾಧಾರಣ ಬುದ್ಧಿಯ ಹುಡುಗರ ಪರಿಮಾಣವಾಗಿದೆ. ಆದರೆ ನಮ್ಮಲ್ಲಿಯ ಹುಡುಗರ ಉತ್ತರಗಳ ಮೇಲಿಂದ ಸುಮಾರು ೩೫ ಶಬ್ದಗಳು ಈ ವರ್ಷದ ಸಾಧಾರಣ ಪರಿಮಾಣವೆಂದು ಎಣಿಸಬೇಕಾಗುವದು. ನಾನು ಬ್ರಿಟನದಲ್ಲಿಯೂ ಇಲ್ಲಿಯೂ ಹುಡುಗರ ಕೆಲಸವನ್ನು ಲಕ್ಷಪೂರ್ವಕವಾಗಿ ನೋಡಿರುವೆನು. ಬ್ರಿಟನ್ನದ ಹುಡುಗರು ತಮ್ಮ ಕೆಲಸದಲ್ಲಿ ನಮ್ಮ ಹುಡುಗರಿಗಿಂತ ಹೆಚ್ಚು ಚುರುಕಾಗಿರುವರು. ಇದಕ್ಕೆ ಅವರಿಗೆ ದೊರೆಯುವ ಶಿಕ್ಷಣಕ್ಕಿಂತ ಅವರ ಪರಿಸ್ಥಿತಿಯೇ ಕಾರಣವೆಂದು ನನಗೆ ತೋರುತ್ತದೆ.

ಪಾಶ್ಚಾತ್ಯ ದೇಶಗಳ ಜನರ ಜೀವನವೇ ನಮ್ಮಲ್ಲಿಯವರಿಗಿಂತ ಚಟುವಟಿಕೆಯುಳ್ಳದ್ದಾಗಿರುವದು. ಹುಟ್ಟಿದಂದಿನಿಂದ ಆ ಪರಿಸ್ಥಿಯಲ್ಲಿರುವ ಹುಡುಗರಲ್ಲಿ ಈ ಗುಣವು ಸುಲಭವಾಗಿ ಸೇರಿಕೊಳ್ಳುವದರಲ್ಲಿ ಸೋಜಿಗವಿಲ್ಲ. ಪರಿಸ್ಥಿತಿಯನ್ನು ಬದಲಿಸುವದು ನಮ್ಮ ಕೈಯಲ್ಲಿಲ್ಲ. ಆದಾಗ್ಯೂ ನಮ್ಮ ಸಾಲೆಗಳಲ್ಲಿ ಹುಡುಗರನ್ನು ಚಟುವಟಿಕೆಯುಳ್ಳವರನ್ನಾಗಿ ಮಾಡಲು ನಾವು ಶಿಕ್ಷಣವನ್ನು ಕೊಡಬಹುದು. ಪ್ರತಿಯೊಂದು ಕೆಲಸದಲ್ಲಿ ಎರಡು ಗುಣಗಳು ವಿಶೇಷ ಮಹತ್ವವುಳ್ಳವಾಗಿವೆ. ಅವು ಯಾವವೆಂದರೆ ತೀವ್ರತೆ ಹಾಗು ಸರಿಯಾಗಿ ವಿಚಾರಮಾಡುವದು. ಈ ಮಾತನ್ನು ಲಕ್ಷದಲ್ಲಿಟ್ಟು ಶಿಕ್ಷಣಶಾಸ್ತ್ರಜ್ಞರು ಗಣಿತದ ಆರಂಭದ ಕೃತಿಗಳನ್ನು ಅಂದರೆ ಬೇರೀಜು, ವಜಾಬಾಕಿ, ಗುಣಾಕಾರ, ಭಾಗಾಕಾರ ಇವುಗಳನ್ನು ಮಾಡಿಸುವದರಲ್ಲಿ ಈ ಗುಣಗಳ ಕಡೆಗೆ ಪೂರ್ಣ ಲಕ್ಷಗೊಡುವರು. ಈ ಶಾಸ್ತ್ರಜ್ಞರು ಈ ಬಗ್ಗೆ ರಚಿಸಿದ ಲೆಕ್ಕದ ಪಟಗಳನ್ನು ನಾವು ಉಪಯೋಗಿಸಿದರೆ ನಮ್ಮ ಹುಡುಗರಲ್ಲಿಯೂ ಈ ಗುಣಗಳು ನೆಲೆಗೊಳ್ಳುವದರಲ್ಲಿ ಸಂದೇಹವಿಲ್ಲ. ಇದಲ್ಲದೆ ಈ ಎರಡು ಗುಣಗಳು ನಮ್ಮ ಹುಡುಗರಲ್ಲಿ ನೆಲೆಗೊಳ್ಳಲಿಕ್ಕೆ ನಾವು ಇತರ ಉಪಾಯಗಳನ್ನು ಕಂಡುಹಿಡಿಯಬಹುದು. ನಾನು ಇತ್ತಲಾಗಿ ಒಂದು ಉಪಾಯಮಾಡಿ ನೋಡಿರುವೆನು. ಇದರಿಂದ ಹುಡುಗರಲ್ಲಿ ಚಟುವಟಿಕೆಯು ತಲೆದೋರಿದೆ. ಲೆಕ್ಕವನ್ನು ಹೇಳಿದ ಬಳಿಕ ಅದನ್ನು ಮಾಡಿ ಮುಗಿಸಿದ ಕೂಡಲೆ ಹುಡುಗರು ತಮ್ಮ ಪುಸ್ತಕಗಳನ್ನು ನನ್ನ ಕಡೆಗೆ ತರುವರು. ನಾನು ಅವುಗಳನ್ನು ಅವರು ತಂದುಕೊಟ್ಟ ಕ್ರಮದಿಂದ ಇಡುವೆನು. ಆ ಬಳಿಕ ಅವರಿಗೆ ಗುಣಗಳನ್ನು ಕೊಡುವೆನು. ಮೊದಲು ಕೊಟ್ಟ ಹುಡುಗನ ಉತ್ತರವು ಸರಿಯಿದ್ದರೆ ಅವನಿಗೆ ೧೦ ಗುಣಗಳು, ಎರಡನೆಯವನಿಗೆ ೯, ಮೂರನೆಯವನಿಗೆ ೮ ಹೀಗೆ ಗುಣಗಳನ್ನು ಕೊಡುವೆನು. ಮೊದಲಿನ ಇಬ್ಬರಿಗೆ ೧೦, ಮುಂದಿನ ಇಬ್ಬರಿಗೆ ೯ ಹೀಗೆ ಕೊಟ್ಟರೂ ಅಡ್ಡಿಯಿಲ್ಲ. ಈ

ಪದ್ಧತಿಯು ಮೂಲಕ ಹುಡುಗರು ಆದಷ್ಟು ತೀವ್ರ ಲೆಕ್ಕಮಾಡಲಿಕ್ಕೆ ಹವಣಿಸುವರೆಂದು ಕಂಡುಬಂದಿರುವದು. ನಾವು ಈ ಬಗೆಯ ಬೇಕಾದ ಒಂದು ಉಪಾಯವನ್ನು ಮಾಡಿ ನಮ್ಮ ಹುಡುಗರ ವಿಚಾರ, ಕೆಲಸ ಇವುಗಳಲ್ಲಿ ತೀವ್ರತೆಯು ಉಂಟಾಗುವಂತೆ ಮಾಡತಕ್ಕದ್ದು. ಇದರಿಂದ ಅವರ ಮುಂದಿನ ಆಯುಷ್ಯದಲ್ಲಿ ಅವರಿಗೆ ಬಹಳ ಒಳಿತಾಗುವದು.

ಈ ವರೆಗೆ ನಾನು ವ್ಯಕ್ತಿವಿಷಯಕ ಪರೀಕ್ಷಾಕ್ರಮವನ್ನು ವರ್ಣಿಸಿದ್ದಾಯಿತು. ಇದನ್ನು ರಚಿಸಿದಾತನು ಬಿನೆಟನೆಂಬ ಫ್ರೆಂಚ ವಿದ್ವಾಂಸನು. ಇದರಲ್ಲಿ ಪ್ರತಿಯೊಬ್ಬ ಹುಡುಗನಿಗೆ ಪ್ರತ್ಯೇಕವಾಗಿ ಪ್ರಶ್ನಗಳನ್ನು ಕೇಳಬೇಕಾಗುವದು. ಇದಕ್ಕೆ ವೇಳೆಯು ಬಹಳ ಬೇಕಾಗುವದು. ೪ ಇಲ್ಲವೆ ೫ ವರ್ಷ ವಯಸ್ಸಿನ ಹುಡುಗರು, ಅವರಿಗಾಗಿ ರಚಿಸಿದ ಎಲ್ಲ ಪ್ರಶ್ನಗಳಿಗೆ ಉತ್ತರ ಕೊಡಲಿಕ್ಕೆ ೩೦ ಇಲ್ಲವೆ ೬೦ ಮಿನ್ನುಟು ಹತ್ತುವವು. ದೊಡ್ಡ ಹುಡುಗರಿಗಂತೂ ಈ ಕೆಲಸಕ್ಕೆ ಸುಮಾರು ೨ ತಾಸು ಹತ್ತುವವು. ಮಾನಸಶಾಸ್ತ್ರಜ್ಞಾನದೃಷ್ಟಿಯಿಂದ ಈ ವೈಯಕ್ತಿಕ ಪರೀಕ್ಷೆಯು ಮೇಲಾದದ್ದು. ಯಾಕಂದರೆ ಪರೀಕ್ಷಕನು ಪ್ರತ್ಯಕ್ಷವಾಗಿ ಹುಡುಗರ ಮಾನಸಿಕ ಕಾರ್ಯಕ್ರಮವನ್ನು ನಿರೀಕ್ಷಿಸಲಿಕ್ಕೆ ಇದರಲ್ಲಿ ಅನುಕೂಲವಿರುವದು. ಮೇಲಾಗಿ ಈ ಪದ್ಧತಿಯು ಪರೀಕ್ಷೆಯಿಂದ ಈ ಕಾರ್ಯದಲ್ಲಿ ತೊಡಗಿರುವವರು ಯಾವದಾದರೂ ಹೊಸ ಶೋಧವನ್ನು ಮಾಡಲು ಸಾಧ್ಯವಿರುವದು.

ಆದರೆ ಕೆಲವು ಪ್ರಸಂಗಗಳಲ್ಲಿ ತೀವ್ರವಾಗಿ ಹಲವು ಜನರ ಪರೀಕ್ಷೆಯನ್ನು ಮಾಡಬೇಕಾಗುವದು. ಇಂಥ ಒಂದು ಐತಿಹಾಸಿಕ ಪ್ರಸಂಗವು ಮಹಾಯುದ್ಧದ ಕಾಲದಲ್ಲಿ ಒದಗಿತು. ಯುದ್ಧಕ್ಕಾಗಿ ಅಮೇರಿಕೆಯಲ್ಲಿ ಸೈನ್ಯಭರತಿ ಮಾಡುವದಿತ್ತು. ಇದಕ್ಕಾಗಿ ಮುಂದೆ ಬಂದವರಲ್ಲಿ ಯಾವ ಜನರು ಆಫೀಸರರಾಗಲಿಕ್ಕೆ ತಕ್ಕವರಿರುವರು, ಯಾವ ಜನರು ಹೆಚ್ಚಿನ ಸ್ಥಳಗಳಲ್ಲಿ ಕೆಲಸಮಾಡಲು ಯೋಗ್ಯತೆಯುಳ್ಳವರಿಲ್ಲವೆಂಬದನ್ನು ಕಂಡುಹಿಡಿಯಬೇಕಾಯಿತು. ಆ ಕಾಲಕ್ಕೆ ಅಮೇರಿಕೆಯ ಸೈನಿಕ ಪರೀಕ್ಷಾಕ್ರಮವು ಯೋಜಿಸಲ್ಪಟ್ಟಿತು. ಈ ಪರೀಕ್ಷಾಕ್ರಮದಲ್ಲಿ ಹಲವು ಹುಡುಗರನ್ನು ಇಲ್ಲವೆ ದೊಡ್ಡವರನ್ನು ಒಮ್ಮೊಮ್ಮೆ ನೂರಿನ್ನೂರು ಜನರನ್ನು ಒಬ್ಬನೇ ಪರೀಕ್ಷಕನು ಒಬ್ಬಿಬ್ಬ ಅರಿಮಣಿಗಳ ಸಹಾಯದಿಂದ ಒಂದೇ ಸಾರೆ ಪರೀಕ್ಷಿಸಬಹುದಾಗಿದೆ. ಶಾಲೆಯ ಇತರ ಪರೀಕ್ಷೆಗಳಲ್ಲಿಯಂತೆ ಪ್ರಶ್ನಕಾಗದಗಳನ್ನು ಎಲ್ಲರಿಗೂ ಏಕಕಾಲಕ್ಕೆ ಕೊಟ್ಟು ಒಂದು ತಾಸಿನಲ್ಲಿ ಉತ್ತರದ ಕಾಗದಗಳನ್ನು ಇಸಗೊಂಡು ಸಿದ್ಧವಿರುವ ಉತ್ತರಗಳ ಪಟದ ಸಹಾಯದಿಂದ ತೀರ ಸ್ವಲ್ಪ ಕಾಲದಲ್ಲಿ ಇವುಗಳನ್ನು ತಪಾಸಮಾಡಬಹುದಾಗಿದೆ. ಪ್ರಶ್ನೆಗಳು ಸಾಮಾನ್ಯವಾದ ಮೇಲುಬುದ್ಧಿಯ ಜನರು ಸುಲಭವಾಗಿ ಉತ್ತರ ಕೊಡಬಹುದಾದಂಥವಿರುವವು; ಅನೇಕ ವಿಷಯಗಳಿಗೆ ಸಂಬಂಧಿಸಿದಂಥವಿರುವವು; ಉತ್ತರಗಳಲ್ಲಿ ಎರಡು ಸಂಗತಿಗಳಿಗೆ ವಿಶೇಷ ಮಹತ್ವವಿರುವದು. ಒಂದು ತೀವ್ರತೆ ಮತ್ತೊಂದು ಸರಿಯಾಗಿರುವದು. ಇವು ಮನಸಿನ ಗುಣಗಳಲ್ಲಿ ಒಳ್ಳೇ ಮಹತ್ವವಾದವು,

ಈ ಮಾನಸಿಕ ಪರೀಕ್ಷೆಯಲ್ಲಿ ಹೊಸತರದ ಪರೀಕ್ಷೆಗಳ ಯೋಜನೆಗೆ ಅವಕಾ
ವಿರುವದು. ಅಂದರೆ ನಾವು ಮೇಲೆ ವಿವರಿಸಿದ ಪರೀಕ್ಷೆಯು ಮನಸ್ಸಿನ ಒಂದು ಬಗೆಯ
ತರಗತಿಯನ್ನು ಕುರಿತು ನಿರ್ಣಯ ಹೇಳುವದು. ಹಿಂದಿನ ಕಾಲದ ಮಾನಸಶಾಸ್ತ್ರಜ್ಞರ
ಮನಸ್ಸಿನ ಕಾರ್ಯಗಳನ್ನು ಮೂರು ಮುಖ್ಯ ಅಂಶಗಳಾಗಿ ವಿಭಜಿಸಿರುವರು. ಅವರ
ಹೇಳುವದೇನಂದರೆ, ಮನಸು ಮೂರು ಬಗೆಯ ಕೆಲಸಗಳನ್ನು ಮಾಡುವದು (೧
ಅದು ಜ್ಞಾನಮಾಡಿಕೊಳ್ಳುವದು (೨) ಸುಖದುಃಖಾದಿ ಮನೋಭಾವನೆಗಳನ್ನು ಅನ
ಭವಿಸುವದು (೩) ಇಚ್ಛೆಮಾಡುವದು ಅಂದರೆ ಕಾರ್ಯದಲ್ಲಿ ಪ್ರವೃತ್ತವಾಗುವದು
ಬಿನೆಟನ ಪ್ರಶ್ನೆಗಳು ಜ್ಞಾನಪ್ರಾಧಾನ್ಯವಾಗಿ ಮಾನಸಿಕ ಕಾರ್ಯಶಕ್ತಿಯನ್ನು ಪರೀಕ್ಷಿ
ಸುವವು. ಆದರೆ ಅದರ ಮನೋಭಾವಗಳಶಕ್ತಿ, ಕಾರ್ಯಪ್ರವೃತ್ತಿಯಶಕ್ತಿ ಇವುಗಳ
ತರಗತಿಯು ಗೊತ್ತಾಗುವದಿಲ್ಲ. ಸಾಮಾನ್ಯನೀತಿನಲ್ಲಿ ಹೇಳಬೇಕಾದರೆ ಇವುಗಳಿಂ
ಬುದ್ಧಿಯನ್ನು ಪರೀಕ್ಷಿಸಲಿಕ್ಕೆ ಬಂದಂತೆ ಅದರ ಮಿಕ್ಕೆರಡು ಕಾರ್ಯಗಳನ್ನು ಅಂದ
ಸ್ವಭಾವಶೀಲಗಳನ್ನು ಪರೀಕ್ಷಿಸಲಿಕ್ಕಾಗುವದಿಲ್ಲ. ಇವುಗಳನ್ನು ಪರೀಕ್ಷಿಸುವದು
ಸುಲಭವೂ ಅಲ್ಲ. ಮನೋಭಾವಗಳ ಒಂದು ವಿಶಿಷ್ಟ ಲಕ್ಷಣವೇನೆಂದರೆ ಅವುಗಳ ಕಡೆಗೆ
ವ್ಯಕ್ತಿಯ ಲಕ್ಷ್ಯವು ಹೋದಕೂಡಲೆ ಅವು ಮನಸಿನಿಂದ ಇಲ್ಲವಾಗುವವು. ಆದಾಗ್ಯೂ
ಮನೋಭಾವಗಳು ನಮ್ಮ ನಿತ್ಯದ ವ್ಯವಹಾರಗಳಲ್ಲಿ ಒಳ್ಳೇ ಮಹತ್ವವುಳ್ಳವಾಗಿರುವವು.
ಉದಾಹರಣಾರ್ಥವಾಗಿ ನಾನಾಗಲಿ ನೀವಾಗಲಿ ನಮ್ಮ ವಿದ್ಯಾರ್ಥಿಗಳ ಉತ್ತರದ
ಕಾಗದಗಳಿಗೆ ಗುಣಗಳನ್ನು ಕೊಡುವಾಗ ಅವರ ಬಗ್ಗೆ ನಮ್ಮಲ್ಲಿ ಮೂಡಿರುವ ಒಳ್ಳೆಯ
ಇಲ್ಲವೆ ಕೆಡಕು ಭಾವನೆಗಳ ಮೂಲಕ ಬರೆದದ್ದರ ಕಡೆಗೆ ಮಾತ್ರ ಲಕ್ಷ್ಯಗೊಟ್ಟು
ಗುಣಗಳನ್ನು ಕೊಡುವದಾಗುವದಿಲ್ಲ. ಇದು ತೀರ ಸಣ್ಣ ಗಾವಠಿಶಾಲೆಯ ಶಿಕ್ಷಕನಿಂದ
ಅತಿ ದೊಡ್ಡ ವಿಶ್ವವಿದ್ಯಾಲಯದ ಪ್ರೊಫೇಸರರ ವರೆಗೆ ಪ್ರತಿಯೊಬ್ಬರಿಗೆ ಬಂದ
ಅನುಭವದ ಮಾತು. ಇದರಂತೆ ಚುನಾವಣೆಗಳಲ್ಲಿ ನಾವು ಮತಕೊಡುವ ಉಮೇದ
ವಾರರ ಯೋಗ್ಯತೆಯನ್ನು ಮಾತ್ರ ಲಕ್ಷಕ್ಕೆ ತಾರದೆ ನಮ್ಮ ಸ್ನೇಹಭಾವವನ್ನು ಅದರಲ್ಲಿ
ತೊಡಗಿಸಿಬಿಡುವವು. ಇದರಂತೆಯೇ ಸಾಮಾನ್ಯವಾಗಿ ದುಃಸಾಧ್ಯವೆನಿಸುವ ಎಷ್ಟೋ
ಕೆಲಸಗಳನ್ನು ಕ್ರೋಧ, ದ್ವೇಷ, ಪ್ರೀತಿ ಮುಂತಾದ ಪ್ರಬಲ ಮನೋಭಾವಗಳ
ಮೂಲಕ ಜನರು ಸಹಜವಾಗಿ ಮಾಡಿಬಿಡುವದನ್ನು ನಾವು ವ್ಯವಹಾರದಲ್ಲಿ ಮೇಲಿಂದ
ಮೇಲೆ ನೋಡುತ್ತೇವೆ. ಆದ್ದರಿಂದ ಇವುಗಳಿಗೆ ಬಾಳುವೆಯಲ್ಲಿ ಮೀರಿದ ಮಹತ್ವ
ವಿರುವದು. ಆದರೂ ಬಿನೆಟನು ರಚಿಸಿದ ಪರೀಕ್ಷಾಪ್ರಶ್ನೆಗಳ ಮೂಲಕ ಬುದ್ಧಿಯ
ತರಗತಿಯನ್ನು ನಿಶ್ಚಯಿಸುವದು ಸುಲಭಸಾಧ್ಯವಾದಂತೆ ಮನಸಿನ ಮನೋಭಾವಗಳ
ಹಾಗು ಇಚ್ಛಾಶಕ್ತಿಯ ತರಗತಿಯನ್ನು ನಿಶ್ಚಯಿಸುವದು ಇನ್ನೂ ಆಗಿಲ್ಲ. ಈ
ದುಸ್ತರವಾದ ಕಾರ್ಯದಲ್ಲಿ ವಿದ್ವಾಂಸರು ತೊಡಗಿರುವರೆಂಬದು ಸೂಚಿತ್ತವು.

೨ನೇ ಇಯತ್ತೆಯ ಭೂಗೋಲ

ಲೇಖಕರು:- ವಿ. ಎಸ್. ಎಸ್. ಉಲ್ಲಾಳ ಬಿ. ಎ. ಬಿ. ಟಿ. ಎ. ಇ. ಧಾರವಾಡ

೧. **ದಿಕ್ಕುಗಳ ಜ್ಞಾನ ಮಾಡಿಕೊಡುವದು:**-"ನಿನ್ನ ಬಲಗೈಯಾವದು, ಡಗೈಯಾವದು, ಬಲಗಡೆಗೆ ಕೈಮಾಡು, ಎಡಕಡೆಗೆ ಕೈಮಾಡು, ಮುಂದುಗಡೆಗೆ ೈಮಾಡು, ಹಿಂದುಗಡೆಗೆ ಕೈಮಾಡು, ಬಲಗಡೆಗೆ ನೋಡು, ಎಡಗಡೆಗೆ ನೋಡು" ೊದಲಾದ ಪ್ರಶ್ನೆಗಳಿಂದ ಆರಂಭ ಮಾಡುವದು. ಅನಂತರ ಆ ಹುಡುಗನು ನಿನ್ನ ಾವಕಡೆಗೆ ಇದ್ದಾನೆ? ಈ ಹುಡುಗನ ಯಾವ ಕಡೆಗೆ ನೀನು ಇದ್ದೀ? ಮೇಜು ನಿನ್ನ ಾವ ಕಡೆಗೆ ಇದೆ? ನನಗೆ (ಶಿಕ್ಷಕನಿಗೆ) ನೀನು ಯಾವ ಕಡೆಗೆ ಆಗುತ್ತೀ? ಚಾವ ಯು ಶಾಲೆಯು ಯಾವ ಕಡೆಗೆ, ನಿನ್ನ ಮನೆಯು, ಊರೊಳಗಿನ ಗುಡಿಯು ಶಾಲೆಯು ಾವ ಕಡೆಗೆ ಇವೆ? ಮುಂತಾದ ಪ್ರಶ್ನೆಗಳಿಂದ ಬಲ, ಎಡ, ಹಿಂದೆ, ಮುಂದೆ ಈ ಕಡೆ ಳ ಜ್ಞಾನವನ್ನು ವೃಢಪಡಿಸುವದು.

ಮುಂದೆ "ಸೂರ್ಯನು ಬೆಳಿಗ್ಗೆ ಯಾವ ಕಡೆಗೆ ಮೂಡುತ್ತಾನೆ? ಕೈಮಾಡಿ ೋರಿಸು-ಇದು ಪೂರ್ವದಿಕ್ಕು. ಸೂರ್ಯನು ಸಂಜೆಗೆ ಮುಳುಗುವ ದಿಕ್ಕಿಗೆ ಕೈ ಾಡು. ಇದು ಪಶ್ಚಿಮದಿಕ್ಕು. ಪೂರ್ವಕ್ಕೆ ಮೋರೆಮಾಡಿ ನಿಲ್ಲು. ಬಲಗಡೆಗೆ ಕೈಮಾಡು ದು ದಕ್ಷಿಣದಿಕ್ಕು. ಎಡಗಡೆಗೆ ಕೈಮಾಡು. ಇದು ಉತ್ತರ ದಿಕ್ಕು."; ಆಮೇಲೆ "ನಿನ್ನ ತ್ತರಕ್ಕೆ ಯಾವ ಹುಡುಗನಿದ್ದಾನೆ? ನೀನು ಆ ಹುಡುಗನ ಯಾವ ದಿಕ್ಕಿಗೆ ಇದ್ದೀ, ಲೆಯ ಬಾಗಿಲು ಯಾವ ದಿಕ್ಕಿಗೆ ಇದೆ? ಮೇಜು ನೀನು ನಿಂತಲ್ಲಿಂದ ಯಾವ ದಿಕ್ಕಿಗೆ ದೆ?" ಈ ಬಗೆಯಿಂದ ಪ್ರಶ್ನೆಗಳನ್ನು ಮಾಡಿ ಅಥವಾ ಹೇಳಿ ಕಲಿಸಬೇಕು. ತರ ಯ ಹುಡುಗನನ್ನು ಯಾವದಾದರೊಂದು ಸ್ಥಳದಲ್ಲಿ ನಿಲ್ಲಿಸಿ, ಅಲ್ಲಿಂದ ಅವನನ್ನು ಶ್ಚಿಗೆ ಪೂರ್ವಕ್ಕೆ, ದಕ್ಷಿಣಕ್ಕೆ, ಉತ್ತರಕ್ಕೆ ವಗೈರೆ ಹೋಗಲಿಕ್ಕೆ ಹಚ್ಚಬೇಕು. ಆ ೇಲೆ ಊರೊಳಗಿನ ಮುಖ್ಯ ಇಮಾರತುಗಳು ಶಾಲೆಯ ಯಾವ ಯಾವ ದಿಕ್ಕಿಗೆ ಇವೆ ಬಿತ್ಯಾದಿ ಪ್ರಶ್ನೆಗಳಿಂದ ದಿಕ್ಕುಗಳ ಜ್ಞಾನವನ್ನು ಬಲಪಡಿಸುವದು. ಇದರಂತೆಯೇ ುಂದೆ ಉಪದಿಕ್ಕುಗಳನ್ನೂ ಕಲಿಸುವದು.

೨. **ನಕಾಶದ ಜ್ಞಾನ ಮಾಡಿಸುವದು:**-(ಅ) ಮೊದಲು ನಕಾಶಕ್ಕೂ ತ್ರಕ್ಕೂ ಇರುವ ಅಂತರವನ್ನು ಕಲಿಸುವದು ಹ್ಯಾಗಂದರೆ-

ಪಾಟಿಯ ಮೇಲೆ ಹಿಡಿಸುವ ದೌತಿ, ಪೆನ್ಸಿಲು, ಪುಸ್ತಕ ಮುಂತಾದ ವಸ್ತುಗಳನ್ನು ಕೊಂಡು **ಪಾಟಿಯ ಮೇಲೆ ಅವನ್ನು ನೆಟ್ಟಗೆ ನಿಲ್ಲಿಸಿ ಮೇಲಿನಿಂದ ನೋಡಿ ಕೆ ಕಾಣುವ ಅವುಗಳ ಬಾಹ್ಯರೇಷೆಗಳನ್ನು, ಅವು ಪಾಟಿಗೆ ಹತ್ತಿದ್ದಲ್ಲಿ,**

ಪೆನ್ಸಿಲಿನಿಂದ ಎಳೆಯಿಸಬೇಕು ನಂತರ ವಸ್ತುಗಳ ತಳರೇಷೆಗೂ ತುದಿಯ ಭಾ ರೇಷೆಗೂ ಪ್ರಮಾಣದಲ್ಲಿ ಅಂತರವಿದ್ದರೆ (ಉದಾ: ದೌತಿ, ಪೆನ್ಸಿಲುಗಳಲ್ಲಿ) ಆ ಬ ರೇಷೆಯ ನಡುವೆ ಸಣ್ಣ ಆಕೃತಿಗಳನ್ನು ತೆಗೆಯಿಸಬೇಕು. ಉದಾ:

ಇವು ದೌತಿ, ಪೆನ್ಸಿಲು, ಪುಸ್ತಕಗಳ ನಕಾಶಗಳು. ಆಮೇಲೆ ಇವೇ ವಸ್ತುಗ



ವರ್ತುಳದೌತಿ ಚೌಕದೌತಿ ಪೆನ್ಸಿಲು ಪುಸ್ತಕ

ನೆಟ್ಟಗೆ ಕಣ್ಣಿನ ಎದುರಿಗೆ ಹಿಡಿದು ಅವುಗಳ ಹಿಂದುಗಡೆಯಲ್ಲಿ ಪಾಟಿಯ ಅದಕ್ಕೆ ಹತ್ತುವಂತೆ ಹಿಡಿದು ಅವು ಪಾಟಿಗೆ ಹತ್ತಿದ್ದಲ್ಲಿ ಗೆರೆ ಎಳೆಯಿಸಿದರೆ ಆ ಬಾಹ್ಯರೇಷೆಗಳೇ ಚಿತ್ರಗಳಾಗುವವೆಂದು ಹೇಳಿ ತಿಳಿಸಿಕೊಡಬೇಕು. ಉದಾ:

ಇವು ದೌತಿ, ಪೆನ್ಸಿಲು, ಪುಸ್ತಕಗಳ ಚಿತ್ರಗಳು, ಇಲ್ಲಿ ಕೆಲವು ದೊಡ್ಡ ವಸ್ತು



ದೌತಿ ಪೆನ್ಸಿಲು ಪುಸ್ತಕ

ನಕಾಶ ಚಿತ್ರಗಳಲ್ಲಿರುವ ಅಂತರವನ್ನು ಶಿಕ್ಷಕನು ಕರಿ ಹಲಗೆಯ ಮೇಲೆ ಆಕೃತಿಗಳ ತೆಗೆದು ತೋರಿಸಬಹುದು. ಉದಾ:



ಲಿಂಬೆಯಹೋಳಿನ ನಕಾಶ ಲಿಂಬೆಯಹೋಳಿನ ಚಿತ್ರ



ಶಾಲೆಯನಕಾಶ



ಶಾಲೆಯ ಚಿತ್ರ



ಮೇಜಿನ ನಕಾಶ



ಮೇಜಿನ ಚಿತ್ರ

(ಬ) **ಸ್ಕೇಲಿನ ಮಾಹಿತಿ ಮಾಡಿಕೊಡುವದು:—** ಪಾಟಿಯ ಮೇಲೆ
ಡಿಸಲಾರದ ಮೇಜು, ಪೆಟ್ಟಿಗೆ ಇವುಗಳ ನಕಾಶಗಳನ್ನು ಪಾಟಿಯಮೇಲೆ ತೆಗೆಯಿಸು
ದು ಹೇಗಂದರೆ:— ಆ ವಸ್ತುಗಳ ಉದ್ದಗಲಗಳನ್ನು ಮೊಳಹಾಕಿ ಅಳೆಯಿಸಿ, ಒಂದು
ಳಕ್ಕೆ ಒಂದು ಇಂಚಿನ ಅಳತೆ ಹಿಡಿದು ಅವಕ್ಕೆ ಸರಿಯಾದ ಕಾಟಕೋನ ಚೌಕಾನಾ
ೃತಿಗಳನ್ನು ಪಾಟಿಯಮೇಲೆ ತೆಗೆಯಿಸಬೇಕು. ಆ ಮೇಲೆ ಶಾಲೆಯ ಕೋಣೆಯ
ಕಾಶ ತೆಗೆಯಿಸಬೇಕು. ಮೊದಲು ಕೋಣೆಯ ಉದ್ದಗಲಗಳನ್ನು ಅಳೆಯಿಸಿ, ಪಾಟಿಯ
ೀಲೆ ನಕಾಶ ತೆಗೆಯಲಿಕ್ಕೆ ಅನುಕೂಲವಾಗುವಂತೆ ಇಂತಿಷ್ಟು ಮೊಳಗಳಿಗೆ ಒಂದು
ಂಚಿನಂತೆ ಸ್ಕೇಲು ಹಿಡಿದು ಕೋಣೆಯ ಬಾಹ್ಯರೇಷೆಯನ್ನು ತೆಗೆಯಿಸಬೇಕು. ಆ
ೀಲೆ ಕಿಟಕಿ, ಬಾಗಿಲುಗಳ ಮಾಪು ತೆಗೆಯಿಸಿ ಅವು ಇಕ್ಕಡೆಗಳ ಗೋಡೆಗಳಿಂದ ಎಷ್ಟು
ಂತರವಲ್ಲಿವೆ ಎಂಬದನ್ನು ಅಳೆಯಿಸಿ ನೋಡಿ ಕೋಣೆಯ ಬಾಹ್ಯರೇಷೆಗೆ ಹಿಡಿದ
ೇಲಿನ ಮೇಲೆಯೇ ಅವನ್ನೂ ಸರಿಯಾಗಿ ನಕಾಶೆಯಲ್ಲಿ ತೋರಿಸಬೇಕು. ಇದೇ ಮೇರೆಗೆ
ೇಜು, ಕುರ್ಚಿ, ಕರಿಹಲಿಗೆ, ಪೆಟ್ಟಿಗೆ ಮುಂತಾದವುಗಳನ್ನೂ ನಕಾಶದಲ್ಲಿ ತೋರಿಸ
ೇಕು. ಉದಾ:



ಇದನ್ನು ತೆಗೆಯಿಸಿದ ಮೇಲೆ ಶಾಲೆಯೊಳಗಿನ ವಸ್ತುಗಳ ಎತ್ತರದಲ್ಲಿ ಕಾಣುವ ಅಂತರವನ್ನು ಪ್ರಶ್ನೆಗಳ ಮೂಲಕ ಹೊರಡಿಸುವದು. ಉದಾ: ಕುರ್ಚಿಗಿಂತ ಪೆಟ್ಟಿಗೆ ಎತ್ತರವದೆ, ಹಾಗೇ ಪೆಟ್ಟಿಗೆಗಿಂತ ಮೇಜು, ಮೇಜಿಗಿಂತ ನೆಲದಮೇಲಿಟ್ಟ ಕರೇಹಲಗೆ, ಕರೇಹಲಗೆಗಿಂತ ಕಿಟಕಿಗಳು, ಕಿಟಕಿಗಳಿಗಿಂತ ಬಾಗಿಲು ಕ್ರಮವಾಗಿ ಹೆಚ್ಚೆಚ್ಚು ಎತ್ತರವವೆ ಎಂಬದನ್ನು ಹುಡುಗರು ಮನಗಾಣಬೇಕು. **ನಕಾಶದಲ್ಲಿ ಇವೆಲ್ಲವೂ ಒಂದೇ ಎತ್ತರದವೆಂಬಂತೆ ತೋರುತ್ತಿದ್ದರೂ ಅವುಗಳ ಎತ್ತರದಲ್ಲಿರುವ ಅಂತರವನ್ನು ಹುಡುಗರು ಪ್ರತ್ಯಕ್ಷ ವಸ್ತುಗಳ ಜ್ಞಾನದ ಮೇಲಿನಿಂದ ತಿಳಕೊಳ್ಳಬೇಕು.**

(ಕ) ನಕಾಶದ ಮೇಲೆ ದಿಕ್ಕುಗಳ ಜ್ಞಾನ ಮಾಡಿಸುವದು:– ಹುಡುಗರು ತೆಗೆದ ಶಾಲೆಯ ನಕಾಶದಲ್ಲಿ ದಿಕ್ಕುಗಳನ್ನು ಪ್ರಶ್ನೆಮಾಡಿ ಹೊರಡಿಸಿ ಬಾಣಗಳ ಆಕೃತಿಗಳಿಂದ ಗುರ್ತಿಸುವದು. ಮೇಲಿನ ಆಕೃತಿ ನೋಡಿರಿ.

ಆ ಮೇಲೆ ನಕಾಶ ತೆಗೆದಿದ್ದ ಯಾವದಾದರೊಂದು ಪಾಟಿಯನ್ನು ನಕಾಶದ ಉತ್ತರ ದಿಕ್ಕು ಮೇಲಕ್ಕೆ ಆಗುವಂತೆ ಗೋಡೆಯಮೇಲೆ ತೂಗಹಾಕಿ, ನಕಾಶದಲ್ಲಿ ಉತ್ತರದಿಕ್ಕು ಮೇಲ್ಗಡೆಗೆ, ಪೂರ್ವವು ಬಲಗಡೆಗೆ, ಪಶ್ಚಿಮವು ಎಡಗಡೆಗೆ ಮತ್ತು ದಕ್ಷಿಣವು ಕೆಳಗಡೆಗೆ ಆಗುತ್ತವೆಂಬದನ್ನು ಪ್ರಶ್ನೆಗಳ ಮೂಲಕ ಹೊರಡಿಸಬೇಕು. ತರುವಾಯ ನಕಾಶದಲ್ಲಿ ಹುಡುಗನಿಂದ ಬೇಕಾದಲ್ಲಿ ಬೆರಳಿಡಿಸಿ ಅಲ್ಲಿಂದ ಅದನ್ನು ಅವನು ಮಾಸ್ತರನು ಹೇಳಿದ ದಿಕ್ಕಿಗೆ ಸರಿಸುವಂತೆ ಮಾಡಬೇಕು. ಮತ್ತು ನಕಾಶದಲ್ಲಿ ಶಾಲೆಯ ಬಾಗಿಲು ಯಾವ ದಿಕ್ಕಿಗಿದೆ, ಕಿಟಕಿಗಳು ಯಾವ ಯಾವ ದಿಕ್ಕಿಗಿವೆ, ಮೇಜು ಬಾಗಿಲಿನ ಯಾವ ದಿಕ್ಕಿಗಿದೆ, ಕರೆಹಲಗೆಯು ಕುರ್ಚಿಯು ಯಾವ ದಿಕ್ಕಿಗಿದೆ ಎಂಬಿತ್ಯಾದಿ ಪ್ರಶ್ನೆಗಳಿಂದ ನಕಾಶದ ಮೇಲೆ ದಿಕ್ಕುಗಳ ಮಾಹಿತಿಯನ್ನು ಪಕ್ಕಾಮಾಡಿಕೊಡಬೇಕು.

೩. ಹಳ್ಳಿಯ ನಕಾಶವನ್ನು ತಯಾರಿಸುವದು:— ಮೊದಲು ಹುಡುಗ ನ್ನು ಶಕ್ಯವಿದ್ದರೆ ಊರ ಸಮೀಪವಿರುವ ಒಂದು ದಿಬ್ಬದಮೇಲೆ ಅಥವಾ ಎತ್ತರವಿದ್ದ ಮನೆಯ ಮಾಳಿಗೆಯ ಮೇಲೆ ಕರದೊಯ್ದು ಅಲ್ಲಿಂದ ಹಳ್ಳಿಯ ವಿಸ್ತಾರವನ್ನೂ ಉದ್ದಗ ಗಳ ಪ್ರಮಾಣಗಳನ್ನೂ, ಏರು, ತಗ್ಗು, ಹೊಳೆ, ಹಳ್ಳ ಮುಂತಾದವಿದ್ದರೆ ಅವು ಮತ್ತು ಚಾವಡಿ, ಶಾಲೆ, ಗುಡಿ ಮುಂತಾದ ಕಟ್ಟಡಗಳು ಇರುವ ಸ್ಥಳಗಳನ್ನೂ ದಿಕ್ಕುಗಳನ್ನೂ ಪ್ರಶ್ನೆಮಾಡಿ ಹೊರಡಿಸಬೇಕು. ಅನಂತರ ಮಾಸ್ತರನು ಊರ ನಕಾಶವನ್ನು ದೊಡ್ಡ ಕಾಗದದ ಮೇಲೆ ಸ್ಕೇಲಿಗೆ ಸರಿಯಾಗಿ ತಯಾರಿಸಿ ತಕ್ಕ ಸ್ಕೇಲಿಗೆ ಅದನ್ನು ಹುಡುಗರ ಕಡೆಯಿಂದ ಪಾಟಿಯ ಮೇಲೆ ತೆಗೆಯಿಸಬೇಕು. ಮತ್ತು ಅದರೊಳಗೆ ಊರ ಮುಖ್ಯ ಓಣಿಗಳನ್ನೂ, ಶಾಲೆ, ಗುಡಿ, ಚಾವಡಿ ಮುಂತಾದ ಮುಖ್ಯ ಕಟ್ಟಡಗಳನ್ನೂ ಗುರ್ತಿಸ ಬೇಕು.

೪. ಹಳ್ಳಿಯ ಭೂಗೋಲ ಕಲಿಸುವದು:— ಊರಲ್ಲಿ ಮಳೆಯು ಎಷ್ಟಾಗುತ್ತದೆ? ಗೋದಿ, ಜೋಳ, ಬತ್ತ ಇವಕ್ಕೆ ಸಾಲುವಷ್ಟು ಎಂಬ ಕಲ್ಪನೆಯಾದರೆ ಸಾಕು. ಮಳೆಯು ಯಾವಾಗ ಆಗುವದು? ಊರ ಹವೆಯು ಎಂಥದು? ಬೇಸಿಗೆ, ಚಳಿಗಾಲ ಮಳೆಗಾಲಗಳಲ್ಲಿ ಹವೆಯಲ್ಲಿ ಉಂಟಾಗುವ ಹೆಚ್ಚು ಕಡಿಮೆಗಳನ್ನು ಹುಡುಗರ ಅನುಭವಗಳ ಸಹಾಯದಿಂದ ಹೇಳಲಿಕ್ಕೆ ಬಂದರೆ ಸಾಕು. ಭೂಮಿಯು ಎಂಥದಿರುವದು? ಕರೆ, ಮಸಾರಿ, ಮಿಶ್ರ ಎಂಬದನ್ನು ಹೇಳಲಿಕ್ಕೆ ಬಂದರೆ ಸಾಕು. ಭೂಮಿಯಲ್ಲಿ ಏನೇನು ಬೆಳೆಯುವದು? ಬಹಳವಾಗಿ ಬೆಳೆಯುವ ಪೈರುಗಳನ್ನು ಮಾತ್ರ ಹೇಳಿಸಿಗೊಂಡರೆ ಸಾಕು. ಈ ಬೆಳೆಗಳು ಯಾವ ಯಾವ ಕಾಲದಲ್ಲಿ ಬೆಳೆಯುತ್ತವೆ? ಪ್ರತಿಯೊಂದರ ಬಿತ್ತುವ ಹಂಗಾಮು, ಸುಗ್ಗಿಯ ಹಂಗಾಮು ಇವುಗಳನ್ನು ಹೊರಡಿಸಿಕೊಳ್ಳಬಹುದು. ಭೂಮಿಯನ್ನು ಸಾಗುಮಾಡುವವರು ಯಾರು? ಅವರು ಊರೊಳಗೆ ಸುಮಾರು ಎಷ್ಟು ಜನರಿರುವರು? ಅವರ ಮನೆಗಳು ಎಷ್ಟಿರುವವು? ಊರ ಜನಸಂಖ್ಯೆ ಎಷ್ಟು? ಊರಲ್ಲಿ ಬೇರೆ ಬೇರೆ ಯಾವ ಯಾವ ಉದ್ಯೋಗ ಮಾಡುವ ಜನರಿದ್ದಾರೆ? ಮತ್ತು ಅವರು ಎಷ್ಟೆಷ್ಟು ಮಂದಿ? ಊರ ಜನರೊಳಗೆ ಯಾವ ಯಾವ ಧರ್ಮದವರಿದ್ದಾರೆ, ಯಾವ ಧರ್ಮದವರು ಬಹಳ ಮಂದಿ ಇದ್ದಾರೆ? ಊರ ಸರಕಾರವು ಹೇಗೆ ನಡೆಯು ತ್ತದೆ? ಮತ್ತು ಯಾರಿಂದ ನಡೆಯಿಸಲ್ಪಡುತ್ತದೆ? ಮುಂತಾದ ಪ್ರಶ್ನೆಗಳ ಮೂಲಕ ಮಾಹಿತಿಯನ್ನು ಹೊರಡಿಸಬೇಕು. ಹಾಗು ಇವರ ಕೆಲಸಗಳು ನಡೆಯುವಾಗ ಹುಡು ಗರಿಗೆ ಪ್ರತ್ಯಕ್ಷ ತೋರಿಸಿ ಹೇಳಬೇಕು,

೫. ತಾಲೂಕಿನ ಭೂಗೋಲ ಕಲಿಸುವದು:— ತಾಲೂಕಿನೊಳಗೆ ಹುಡುಗರ ತಿಳುವಳಿಕೆಯೊಳಗಿನ ಯಾವಯಾವರೂ ಪ್ರಸಿದ್ಧ ಐತಿಹಾಸಿಕ-ಯಾತ್ರೆಯ, ವ್ಯಾಪಾರದ ಅಥವಾ ಒಂದು ವಿಶಿಷ್ಟ ಪದಾರ್ಥವು ಬಹಳ ದೊರೆಯುವ ಹಳ್ಳಿಗಳು

ಅಥವಾ ಶಹರಗಳು ಇದ್ದರೆ ಅವುಗಳನ್ನು ಹುಡುಗರಿಗೆ ನೆನಪುಮಾಡಿಕೊಟ್ಟು ಅವ ಹೋಗಬೇಕಾದರೆ ಅವರು ತಮ್ಮಲ್ಲಿಂದ ಯಾವದಿಕ್ಕಿಗೆ ಹೋಗಬೇಕಾಗುವದೆಂಬದನ್ನ ಪ್ರಶ್ನೆಮಾಡಿ ಹೊರಡಿಸಿ ಅಥವಾ ಹೇಳಿ, ಆನಂತರ ತಾಲೂಕಿನ ನಕಾಶವನ್ನು ಮುಂ ಇಟ್ಟು ಆ ಸ್ಥಳಗಳನ್ನು ಅದರೊಳಗೆ ಕಂಡು ಹಿಡಿಯಲಿಕ್ಕೆ ಅವರನ್ನೇ ಹಚ್ಚಬೇಕು. ಮೇಲೆ ತಾಲೂಕಿನ ಆಕಾರವು ಸರಾಸರಿ ವರ್ತುಳವೋ, ಚೌಕೋನವೋ, ತ್ರಿಕೋನವೆ ಅದರ ಉದ್ದ ಹೆಚ್ಚೋ, ಅಗಲ ಹೆಚ್ಚೋ. ಉದ್ದವು ಯಾವದಿಕ್ಕಿನಿಂದ ಯಾವ ದಿಕ್ಕಿ ಹಾಯಿದದೆ, ಅಗಲವು ಯಾವ ದಿಕ್ಕಿನಿಂದ ಯಾವ ದಿಕ್ಕಿಗೆ ಹಬ್ಬಿದೆ, ಅದರ ಮೇರೆಗಳ ಯಾವವು ಎಂಬವನ್ನೆಲ್ಲಾ ಪ್ರಶ್ನೆಮಾಡಿ ಹೊರಡಿಸಬೇಕು. ಇದಾದಮೇಲೆ ಗುಡ್ಡ, ನ ಹಳ್ಳಗಳ ಗುರುತುಗಳನ್ನು ನಕಾಶದಲ್ಲಿ ಯಾವರೀತಿಯಿಂದ ಹಾಕಿರುತ್ತಾರೆಂಬದನ್ನ ತಿಳಿಸಿ ಹೇಳಿ, ತಾಲೂಕಿನೊಳಗೆ ಗುಡ್ಡ, ನದಿ, ಹಳ್ಳಗಳು ಅವೆಯೋ ಹೇಗೆ ? ಇದ್ದ ಎಲ್ಲೆಲ್ಲಿ ಅವೆ? ಅವುಗಳ ಹೆಸರೇನು ? ಅವು ಯಾವ ದಿಕ್ಕಿನಿಂದ ಯಾವ ದಿಕ್ಕಿಗೆ ಹಾಯ್ ದಿವೆ? ಎಂಬದನ್ನೆಲ್ಲಾ ಹುಡುಗರು ತಾವೇ ಕಂಡುಹಿಡಿಯುವಂತೆ ಮಾಡಬೇಕು.

ಇಷ್ಟಾದಮೇಲೆ ತಾಲೂಕಿನ ಮಳೆ ಬೆಳೆಗಳ ಸ್ಥಿತಿಯನ್ನೂ, ವ್ಯಾಪಾರೋದ್ಯೋ ಗಗಳ ಸ್ಥಿತಿಯನ್ನೂ, ಜನರು ಧರ್ಮಗಳನ್ನೂ, ಸಾಂಪತ್ತಿಕ ಸ್ಥಿತಿಯನ್ನೂ, ರಾ ದಾಡಳಿತವನ್ನೂ ಆದಷ್ಟು ಮಟ್ಟಿಗೆ ಹುಡುಗರ ಕಡೆಯಿಂದ ಪ್ರಶ್ನೆಯುಮೂಲಕ ಹೊ ಡಿಸಬೇಕು. ಅಥವಾ ಶಿಕ್ಷಕನು ಹೇಳಬೇಕು. ಉದಾ:- ಗುಡ್ಡವಿದ್ದಲ್ಲಿ ಮಳೆ ಹೆಚ್ಚಾಗ ತ್ತದೆ. ಅಂದಮೇಲೆ ತಾಲೂಕಿನ ಯಾವ ಭಾಗಕ್ಕೆ ಮಳೆ ಹೆಚ್ಚಾಗುತ್ತದೆ ? ತಾಲೂ ನಲ್ಲಿ ಭೂಮಿಯು ಯಾವದಿಕ್ಕಿನಿಂದ ಯಾವ ದಿಕ್ಕಿಗೆ ಇಳುಕಲಾಗಿದೆ? ಇಲ್ಲಿ ವನಸ್ಪತಿಗಳ ಖನಿಜಗಳು ಯಾವ ಯಾವವು ದೊರೆಯುತ್ತವೆ? ಇವುಗಳ ಮೇಲಿಂದ ಇಲ್ಲಿ ಕೈಗಾ ಕೆಯ ಕೆಲಸಗಳು ಯಾವವು ಇರಬಹುದು ? ಇಲ್ಲದಿದ್ದರೆ ಯಾಕೆ ಇಲ್ಲ ? ಇತ್ಯಾ ಪ್ರಶ್ನೆಗಳಿಂದ ಭೌಗೋಲಿಕ ಮಾಹಿತಿಯನ್ನು ಹೊರಡಿಸಬೇಕು.

ಇದಾದಮೇಲೆ ಹುಡುಗರ ಕಡೆಯಿಂದ ಸ್ಥೂಲಮಾನದಿಂದ ತಾಲೂಕಿನ ನಕಾ ವನ್ನು ಪಾಟಿಗಳಮೇಲೆ ಅಥವಾ ಕಾಗದಗಳಮೇಲೆ ತೆಗೆಯಿಸಿ ಅದರೊಳಗೆ ಪ್ರಾಕೃತಿ ಸ್ವರೂಪದ ಮಾಹಿತಿಯನ್ನೂ, ಮಳೆ ಬೆಳೆಗಳ ಮಾಹಿತಿಯನ್ನೂ, ಮುಖ್ಯ ಪಟ್ಟಣ ಮತ್ತು ಹಳ್ಳಿಗಳ ಹೆಸರುಗಳನ್ನೂ ತುಂಬಿಸಬೇಕು.

ತಾಲೂಕಿನ ಭೂಗೋಲವನ್ನು ಕಲಿಸಲಿಕ್ಕೆ ಹೇಳಿದ ಕ್ರಮವನ್ನೇ ಮೇಲಿನ ಇಯ- ತ್ತೆಗಳಲ್ಲಿಯ ಭೂಗೋಲ ಶಿಕ್ಷಣಕ್ಕೆ ಉಪಯೋಗಿಸಬಹುದು.

ಹಿಂದುಸ್ಥಾನದಲ್ಲಿ ಕುರುಡುತನವನ್ನು ತಪ್ಪಿಸಲಿಕ್ಕೆ ಶಿಕ್ಷಕರು ಮಾಡಬಹುದಾದ ಉಪಾಯಗಳು

ಇಂಡಿಯನ್ ರೆಡ್‌ಕ್ರಾಸ ಸಂಘದವರು ಪ್ರಸಿದ್ಧಪಡಿಸಿದ " ಹಿಂದುಸ್ಥಾನದಲ್ಲಿ ಕುರುಡತನದ ಪ್ರತಿಬಂಧ " ಎಂಬ ಲೇಖದ ಆಧಾರದಿಂದ ಬರೆದದ್ದು

ಹಿಂದುಸ್ಥಾನದಲ್ಲಿ ಸುಮಾರು ೧೦ಲಕ್ಷ ಜನ ಕುರುಡರು ಇರುವರೆಂದು ಗೊತ್ತಾಗಿದೆ. ಇದರ ಮುಮ್ಮಡಿ ಜನರು ಅಂದರೆ ೩೦ಲಕ್ಷ ಜನರು ಕಣ್ಣಿನ ಬೇನೆಗಳ ಮೂಲಕ ಒಕ್ಕಣ್ಣರು ಇಲ್ಲವೆ ಮಂದದೃಷ್ಟಿಯವರು ಆಗಿರುವರು. ಕೆಲವರಿಗೆ ಒಂದು ಕಣ್ಣು ಮಾತ್ರ ಕಾಣಿಸುವದು. ಇವರ ಮತ್ತೊಂದು ಕಣ್ಣು ಕುರುಡಾಗಿರುವದು. ಕೆಲವರ ಎರಡೂ ಕಣ್ಣುಗಳು ಕಣ್ಣಬೇನೆಗಳ ಮೂಲಕ ಮಂದವಾಗಿರುವವು. ಇವರಿಗೆಲ್ಲ ಸರಿಯಾಗಿ ಕಣ್ಣು ಕಾಣುವದಿಲ್ಲ.

ತಕ್ಕ ಉಪಾಯಗಳನ್ನು ಕೈಕೊಳ್ಳುವದರಿಂದ ಇವರಲ್ಲಿ ಅನೇಕರು ಕಣ್ಣಿನ ಬೇನೆಗಳನ್ನು ವಾಸಿಮಾಡಿಕೊಳ್ಳಬಹುದಾಗಿದೆ. ಉದಾಹರಣಾರ್ಥವಾಗಿ ಕಣ್ಣಿನಲ್ಲಿ ಮೋತೀಬಿಂದು ಎಂಬ ಒಂದು ಪರೆಯು ಉಂಟಾಗಿ (ವಿಶೇಷವಾಗಿ ಮುದುಕರಿಗೆ) ಕಣ್ಣುಕಾಣದಂತಾಗುವವು. ಇವರು ಕಣ್ಣಿನ ವೈದ್ಯರಲ್ಲಿ ಔಷಧೋಪಾಯಗಳನ್ನು ಮಾಡಿಸಿಕೊಂಡರೆ ಆ ಪರೆಯು ಕರಗಿ ಹೋಗಬಹುದು. ಇಲ್ಲವೆ ಶಸ್ತ್ರಪ್ರಯೋಗದಿಂದ ಆ ಪರೆಯನ್ನು ತೆಗೆದು ಬಿಡಬಹುದು. ಆದರೆ ಕಣ್ಣುಬೇನೆಗಳ ಯೋಗ್ಯ ಚಿಕಿತ್ಸೆಯನ್ನು ಅರಿಯದ ನಾಡಾಡಿ ವೈದ್ಯರಿಂದ ಇವರು ಪರೆ ತೆಗೆಸಿಕೊಳ್ಳುವ ಪ್ರಯತ್ನ ಮಾಡುವಮೂಲಕ ಪೂರ್ಣ ಅಂಧರಾಗುವದುಂಟು. ಯಾವದೇ ಕಾರಣದಿಂದ ಕಣ್ಣು ಮಂದವಾಗಹತ್ತಿವೆ, ಎಂದು ಕಂಡ ಕೂಡಲೆ ಯೋಗ್ಯ ಡಾಕ್ಟರರಿಂದ ಚಿಕಿತ್ಸೆ ಮಾಡಿಸಿಕೊಳ್ಳುವದು ಮೇಲಾದದ್ದು.

ಎಲ್ಲರೂ ಮುಖ್ಯವಾಗಿ ನೆನಪಿನಲ್ಲಿಡತಕ್ಕ ಮಾತು ಯಾವದೆಂದರೆ, ನಮ್ಮ ದೇಶದಲ್ಲಿ ಸುಮಾರು ೪೦ಲಕ್ಷ ಜನರು ಕಣ್ಣು ಕಳಕೊಂಡದ್ದು ಅವರ ಅಜಾಗ್ರತೆಯ ಫಲವು. ಯಾಕೆಂದರೆ ತುಸು ಎಚ್ಚರಿಕೆಯಿಂದ ಇದ್ದರೆ, ಕಣ್ಣು ಕಳಕೊಳ್ಳುವ ಕಾರಣಗಳನ್ನು ತಪ್ಪಿಸುವದು ಪ್ರತಿಯೊಬ್ಬನ ಕೈಯಲ್ಲಿರುವದು. ಸಣ್ಣ ಹುಡುಗರಂತೂ ತಮ್ಮ ಕಣ್ಣುಗಳನ್ನು ಜಾಗ್ರತೆಯಿಂದ ನೋಡಿಕೊಳ್ಳದ ಮೂಲಕ ಕುರುಡರು ಅಥವಾ ಚೆನ್ನಾಗಿ ಕಣ್ಣು ಕಾಣದವರು ಆಗುವದುಂಟು.

ಸದ್ಯದ ಸಣ್ಣ ಹುಡುಗರಲ್ಲಿ ಮಂದದೃಷ್ಟಿಯು ಅದರಲ್ಲಿಯೂ ವಿಶೇಷವಾಗಿ ಸಮೀಪದೃಷ್ಟಿಯು (short sight) ಸಾಮಾನ್ಯವಾಗಿ ತಲೆದೋರುವದುಂಟು. ಇಂಥ ದೃಷ್ಟಿಯವರಿಗೆ ೨೦ ಫೂಟು ಇಲ್ಲವೆ ಹೆಚ್ಚು ಅಂತರದ ಮೇಲೆ ಇರುವ ಎಲ್ಲ ಪದಾರ್ಥಗಳು ಅಸ್ಪಷ್ಟವಾಗಿ ಕಾಣುವದುಂಟು. ಆದರೆ ಅವೇ ಪದಾರ್ಥಗಳು ಕಣ್ಣಿಗೆ ಹೆಚ್ಚುಹೆಚ್ಚು ಸಮೀಪಕ್ಕೆ ಬಂದಂತೆ ಹೆಚ್ಚು ಹೆಚ್ಚು ಸ್ಪಷ್ಟವಾಗಿ ಕಣ್ಣಿಗೆ ಶ್ರಮವೇನೂ ಇಲ್ಲದೆ ಕಾಣಿಸುವವು. ಈ ಮೂಲಕ ಓದುವಾಗ ಪುಸ್ತಕವನ್ನಾಗಲಿ, ಸೂಕ್ಷ್ಮವಾದ ಕೆಲಸವನ್ನು ಮಾಡುವಾಗ ಪದಾರ್ಥಗಳನ್ನಾಗಲಿ ಇವರು ಕಣ್ಣಿಗೆ ತೀರ ಸಮೀಪದಲ್ಲಿ ಒಯ್ಯುವರು. ಬಹುತರ ಈ ಕಣ್ಣ ರೋಗವು ಶೈಶವಾವಸ್ಥೆಯಲ್ಲಿ ಆರಂಭವಾಗುವದು; ಹಾಗು ಚಿಕ್ಕಮಕ್ಕಳು ಬೆಳೆದಂತೆ ಬಲಿಯುತ್ತ ನಡೆಯುವದು. ಹುಡುಗನು ೫ ಇಲ್ಲವೆ ೬ ವರುಷದವನಾದಕೂಡಲೆ ಓದಲಾರಂಭಿಸುವನು ಇಲ್ಲವೆ ಜಿನುಗಾದ ಕೆಲಸವನ್ನು ಕ್ರಮದಿಂದ ನೋಡುತ್ತ ಮಾಡಹತ್ತುವನು. ಈ ಸಮಯದಲ್ಲಿ ಅವನ ಕಣ್ಣಿಗೆ ಆಯಾಸವಾಗುವದುಂಟು. ಈ ಶ್ರಮದ ಮೂಲಕ ಕಣ್ಣು ಕೆಡುವವು ಹಾಗು ಸಮೀಪ ದೃಷ್ಟಿಯೆಂಬ ರೋಗವು ಅದರಲ್ಲಿ ಮೂಡುವದು. ಆ ಸಮಯದಲ್ಲಿ ಹುಡುಗನ ಕಣ್ಣಿಗೆ ಆಯಾಸವಾಗದಂತೆ ನೋಡಿಕೊಂಡರೆ ಈ ರೋಗವು ಉಂಟಾಗಲಾರದು. ಇದಕ್ಕಾಗಿ ಮುಂದೆ ಕಾಣಿಸಿದ ನಿಯಮಗಳ ಕಡೆಗೆ ಲಕ್ಷ್ಯಕೊಡತಕ್ಕದ್ದು. ಓದು ಹತ್ತುವ ಕಾಲದಲ್ಲಿಯೂ ಜಿನುಗಾದ ಕೆಲಸವನ್ನು ಮಾಡಲಾರಂಭಿಸುವ ಸಮಯದಲ್ಲಿಯೂ ಇವುಗಳನ್ನು ಮರೆಯಲಾಗದು.

೧. ಹುಡುಗರು ಉಪಯೋಗಿಸುವ ಪುಸ್ತಕಗಳಲ್ಲಿರುವ ಅಕ್ಷರಗಳು ದೊಡ್ಡವಿರಬೇಕು. ಹುಡುಗರು ಸಣ್ಣಸಣ್ಣವರಿದ್ದಂತೆ ಈ ಅಕ್ಷರಗಳು ದೊಡ್ಡವಿರುವದು ಮಹತ್ವವಾದದ್ದು.

೨. ಪುಸ್ತಕವನ್ನಾಗಲಿ ಪದಾರ್ಥವನ್ನಾಗಲಿ ಕಣ್ಣಿನಿಂದ ೧೩ ಇಂಚಿಗಿಂತ ಸಮೀಪದಲ್ಲಿ ಹಿಡಿಯಬಾರದು.

೩. ಈ ಕೆಲಸಗಳನ್ನು ಮಾಡುವಾಗ ಬೆಳಕು ತಲೆಯ ಹಿಂಭಾಗದಿಂದ ಬಂದು ಭುಜದ ಮೇಲ್ಬದಿಯಿಂದ ಬರತಕ್ಕದ್ದು.

೪. ತಲೆಯು ನೀಟಾಗಿರಬೇಕು. ಹುಡುಗರು ಬಾಗಿ ಕುಳಿತಿರಬಾರದು. ಮಲಗಿ ಓದಬಾರದು.

೫. ಯಾವಾಗಲೂ ಹುಡುಗರು ಸಾಕಷ್ಟು ಬೆಳಕಿನಲ್ಲಿ ಓದತಕ್ಕದ್ದು. ದೀಪದ ಬೆಳಕಿಗಿಂತ ಹಗಲ ಬೆಳಕು ಮೇಲಾದದ್ದು. ಸಣ್ಣ ಹುಡುಗರು ರಾತ್ರಿಹೊತ್ತಿನಲ್ಲಿ ಓದ

ರುವದು ಒಳಿತು. ಬಿಳಿದಾದ ಬೆಳಕಿಗಿಂತ ಹಳದೀ ಛಾಯೆಯುಳ್ಳ ಸೌಮ್ಯವಾದ ಬೆಳಕು ಓದಲಿಕ್ಕೆ ಹಿತವಾದದ್ದು.

೬. ೬ವರ್ಷ ವಯಸ್ಸಿನ ಹುಡುಗರು ಒಂದೇ ಸಾರೆ ಅರ್ಧ ತಾಸಿಗಿಂತ ಹೆಚ್ಚು ವೇಳೆಯ ವರೆಗೆ ಓದುತ್ತಿರಬಾರದು. ಒಂದು ದಿನದಲ್ಲಿ ಅವರು, ಒಟ್ಟು ೨ ಅಥವಾ ೩ ತಾಸಿಗಿಂತ ಹೆಚ್ಚು ವೇಳೆ ಓದಬಾರದು.

೭. ಹೊಟ್ಟೆಯಲ್ಲಿ ಏನೂ ಆಹಾರವಿಲ್ಲದಾಗ ಉದಾಹರಣಾರ್ಥವಾಗಿ ಮಧ್ಯಾಹ್ನದ ಊಟಕ್ಕೆ ಮೊದಲು ಹುಡುಗರನ್ನು ಓದಗೊಡಬಾರದು.

ಸಮೀಪದೃಷ್ಟಿಯುಳ್ಳ ತಾಯ್ತಂದೆಗಳ ಮಕ್ಕಳು ಕಣ್ಣುಗಳ ಬಗ್ಗೆ ವಿಶೇಷ ಎಚ್ಚರದಿಂದ ಇರತಕ್ಕದ್ದು.

ಹುಡುಗನು ಓದುವಾಗ ಇಲ್ಲವೆ ಏನಾದರೂ ಕೆಲಸಮಾಡುವಾಗ ಪದಾರ್ಥವನ್ನಾಗಲಿ ಪುಸ್ತಕವನ್ನಾಗಲಿ ಕಣ್ಣಿನಿಂದ ೧೩ ಇಂಚಿಗಿಂತ ಸಮೀಪದಲ್ಲಿ ಹಿಡಿದರೆ ಇಲ್ಲವೆ ಸ್ವಲ್ಪ ದೂರದಲ್ಲಿರುವ ಪದಾರ್ಥವನ್ನು ನೋಡುವಾಗ ಕಣ್ಣುಗಳನ್ನು ಅವಚಿದಂತೆ ಮಾಡಿದರೆ ಅಥವಾ ೨೦ ಫೂಟು ಅಂತರದಲ್ಲಿರುವ ಕರಿಹಲಗೆಯ ಮೇಲೆ ಬರೆದದ್ದು ಅವನಿಗೆ ಚೆನ್ನಾಗಿ ಕಾಣದಾದರೆ ಅವನಿಗೆ ಸಮೀಪದೃಷ್ಟಿಯ ಬೇನೆಯು ಇರುವದೆಂದು ಸಂಶಯಗೊಂಡು ಆತನನ್ನು ಔಷಧೋಪಚಾರದ ಬಗ್ಗೆ ಯೋಗ್ಯತೆಯುಳ್ಳ ಡಾಕ್ಟರರ ಕಡೆಗೆ ಕಳಿಸತಕ್ಕದ್ದು.

ಸಮೀಪ ದೃಷ್ಟಿಯ ರೋಗವು ಒಮ್ಮೆ ಬಂದರೆ ಅದು ವಾಸಿಯಾಗಲಾರದು. ಆದರೆ ಡಾಕ್ಟರರಿಂದ ಪರೀಕ್ಷಿಸಿ ನಿಯಮಿಸಿದ ಕನ್ನಡಕ (ಚಾಳೀಸು) ಗಳನ್ನು ಉಪಯೋಗಿಸುವದರಿಂದ ಅದು ಬೆಳೆಯುವದು ಕಟ್ಟಾಗುವದು. ಇಂಥವರು ಯೋಗ್ಯ ಆಹಾರ, ಬೇಕಾದಷ್ಟು ಶುದ್ಧ ಹವೆ, ಹೊರಗಿನ ಹವೆಯಲ್ಲಿ ವ್ಯಾಯಾಮ ಮಾಡುವದು ಮುಂತಾದ ಉಪಾಯಗಳಿಂದ ಆರೋಗ್ಯಸ್ಥಿತಿಯನ್ನು ಸುಧಾರಿಸಿಕೊಳ್ಳತಕ್ಕದ್ದು. ಇಷ್ಟೆಲ್ಲ ಮಾಡಿದರೂ ರೋಗವು ಬಲಿಯುತ್ತ ಹೋಗುವಂತೆ ಕಂಡುಬಂದರೆ ಈ ಸ್ಥಿತಿಯು ದೂರಾಗುವವರೆಗೆ ಓದುವದು, ಚಿನುಗಾದ ಕೆಲಸ ಮಾಡುವದು ಮೊದಲಾದವುಗಳನ್ನು ನಿಲ್ಲಿಸಿ ಬಿಡಬೇಕು.

ಕುರುಡರಾಗದಿರುವದು ಎಲ್ಲರಿಗೂ ಸಾಧ್ಯವಿರುವದು. ಮುಂದೆ ಕಾಣಿಸಿದ ಸಂಗತಿಗಳ ಕಡೆಗೆ ಲಕ್ಷ್ಯ ಕೊಟ್ಟರೆ ಹಾಗು ಇತರರು ಆ ಬಗ್ಗೆ ಎಚ್ಚರದಿಂದರಬೇಕೆಂದು ಅವರಿಗೆ ಉಪದೇಶಿಸಿದರೆ ಅದನ್ನು ಪ್ರತಿಬಂಧಿಸುವದು ಸುಲಭವು.

(೧) ನಿಮ್ಮ ಕೈಗಳನ್ನೂ ಮೋರೆಯನ್ನೂ ಸ್ವಚ್ಛವಾಗಿಟ್ಟುಕೊಳ್ಳಿರಿ. ದಿನಾಲು ಕನಿಷ್ಠ ಕಡಿಮೆಯೆಂದರೆ ಎರಡು ಸಾರೆಯಾದರೂ ಇವುಗಳನ್ನು ಸ್ವಚ್ಛವಾದ ನೀರಿನಿಂದ ತೊಳೆದುಕೊಳ್ಳಿರಿ. ಆಗ ಸಬಕಾರದ ಉಪಯೋಗ ಮಾಡಿರಿ.

(೨) ಕಣ್ಣುಗಳನ್ನು ಧೂಳಿಯಿಂದ ಹಾಗು ನೊಣಗಳಿಂದ ಕಾಯಿರಿ.

(೩) ಬೇರೆಯವರು ಉಪಯೋಗಿಸಿದ ಸ್ನಾನದ ನೀರನ್ನು ಇಲ್ಲವೆ ಪಂಜೆ ಅಥವಾ ಟಾವೆಲ್ಲನ್ನು ನೀವು ಉಪಯೋಗಿಸಬೇಡಿರಿ. ಇತರರು ಉಪಯೋಗಿಸಿದ ಕಾಡಿಗೆ ಕಡ್ಡಿಯನ್ನೂ ಉಪಯೋಗಿಸಬಾರದು.

(೪) ದಿನಾಲು ಊಟದಲ್ಲಿ ೫ ತೊಲೆ ತುಪ್ಪವನ್ನಾಗಲಿ ಆಗ ಕಾಸಿದ (ಅತಿಶಯ ಕಾಸಿದ್ದಲ್ಲ) ಸಾಕಷ್ಟು ಹಾಲನ್ನಾಗಲಿ, ಚಪ್ಪರಬದನೆ ಇಲ್ಲವೆ ಹಸರು ತಪ್ಪಲ ಪಲ್ಲೆಯನ್ನಾಗಲಿ ತಿನ್ನಿರಿ.

(೫) ನಿಮ್ಮ ಕಣ್ಣುಗಳು ಕೆಂಪಗೆ ಆದರೆ, ಇಲ್ಲವೆ ಅವುಗಳಿಂದ ಏನಾದರೂ ಸೋರುವಂತೆ ತೋರಿದರೆ ಯೋಗ್ಯತೆಯುಳ್ಳ ಡಾಕ್ಟರರ ಕಡೆಗೆ ಹೋಗಿ ಅವುಗಳನ್ನು ತೋರಿಸಿ ಅವರು ಹೇಳಿದಂತೆ ಮಾಡಿರಿ. ನಾಡು ವೈದ್ಯರ ಕಡೆಗೆ ಹೋಗಬೇಡಿರಿ. ಕಣ್ಬೇನೆ ಬರುವಂತೆ ಎನಿಸಿದರೆ ಡಾಕ್ಟರರ ಕಡೆಗೆ ಹೋಗುವದಕ್ಕಿಂತ ಮೊದಲು ಪ್ರಥಮ ಚಿಕಿತ್ಸೆಯೆಂದು ಶುದ್ಧವಾದ ಹರಳೆಣ್ಣೆ (ಔಡಲದ ಎಣ್ಣೆ)ಯ ನಾಲ್ಕು ಹನಿಗಳನ್ನು ಕಣ್ಣೊಳಗೆ ಹಾಕಿರಿ. ಇಲ್ಲವೆ ಸ್ವಚ್ಛ ನೀರಿನಿಂದ ಅವನ್ನು ತೊಳೆಯಿರಿ. ಅಥವಾ ಬೋರಿಕ್ ದ್ರಾವಕದಿಂದ ತೊಳೆದುಕೊಳ್ಳಿರಿ. (೨ ಚಹದ ಚಮಚೆಯಷ್ಟು ಬೋರಿಕ್ ಅಸಿಡ್ ಪುಡಿಯನ್ನು ಒಂದು ಪಾಯಿಂಟದಷ್ಟು ಕುದಿಯುವ ನೀರಿನಲ್ಲಿ ಹಾಕಿ, ನೀರನ್ನು ಆರಗೊಟ್ಟರೆ ಈ ದ್ರಾವಕವು ತಯಾರಾಗುವದು.)

(೬) ದೃಷ್ಟಿಯು ಮಂದವಾಗುತ್ತಿರುವಂತೆ ಅನಿಸಿದ ಕೂಡಲೆ ಯೋಗ್ಯತೆ ಪಡೆದ ಕಣ್ಣಿನ ಡಾಕ್ಟರರ ಕಡೆಗೆ ಹೋಗಿ ಔಷಧೋಪಚಾರ ಮಾಡಿಸಿಕೊಳ್ಳಿರಿ.

(೭) ಮೇಹ ವಿಕಾರವುಳ್ಳವರು ಪೂರ್ಣ ಗುಣ ಹೊಂದುವವರೆಗೆ ಡಾಕ್ಟರರಿಂದ ಔಷಧೋಪಚಾರ ಮಾಡಿಸಿಕೊಳ್ಳತಕ್ಕದ್ದು.

(೮) ಯೋಗ್ಯತೆಯುಳ್ಳ ಡಾಕ್ಟರರು ಸಮ್ಮತಿಕೊಡುವವರೆಗೆ ಇವರು ಮದುವೆಯ ವಿಚಾರ ಮಾಡಬಾರದು.

(೯) ಕೂಸು ಹುಟ್ಟಿದ ಕೂಡಲೆ ಸೂಲಗಿತ್ತಿಯು (Nurse ನರ್ಸ) ಅದರ ಕಣ್ಣುಗಳಲ್ಲಿ, ನೂರರಲ್ಲಿ ಒಂದು ಭಾಗ ಸಿಲ್ವರ್ ನೈಟ್ರೇಟವು ಕರಗಿರುವ ದ್ರಾವಕದ ನಾಲ್ಕು ಹನಿಗಳನ್ನು ಹಾಕುವಂತೆ ನೋಡಿಕೊಳ್ಳಿರಿ.

(೧೦) ಮೈಲೀ ಬೇನೆಯು ಪ್ರತಿಬಂಧಕಕ್ಕಾಗಿ ಪ್ರತಿ ಏಳು ವರ್ಷಗಳಿಗೊಮ್ಮೆ ಹಾಗು ನೀವಿರುವ ಊರಲ್ಲಿ ಮೈಲೀ ಬೇನೆಯು ಇರುವಾಗ ಮೈಲೀ ಚುಚ್ಚಿಸಿಕೊಳ್ಳಿರಿ.

(೧೧) ಕೋಲು, ಕಲ್ಲು ಮೊದಲಾದವುಗಳನ್ನು ಉಪಯೋಗಿಸುವ ಅಪಾಯಕಾರಕವಾದ ಆಟಗಳನ್ನು ಆಡಬೇಡಿರಿ. ಪಟಾಕ್ಷಿ ಹಾರಿಸುವದು, ಮದ್ದಿನ ನೆರೆಯಲ್ಲಿರುವದು ಇವು ಗಂಡಾಂತರವುಳ್ಳವು.

(೧೨) ಕಣ್ಣಿಗೆ ಬೆಳಕಿನಿಂದ ತೊಂದರೆಯಾಗದಂತೆ ಹಾಗು ಕಣ್ಣಲ್ಲಿ ಧೂಳಿಯು ಸೇರದಂತೆ ಬಣ್ಣದ ಚಾಳಿಸುಗಳನ್ನು (Goggles) ಉಪಯೋಗಿಸಿರಿ. ಗಂಡಾಂತರವುಳ್ಳ ಉದ್ಯೋಗಗಳನ್ನು ಮಾಡಬೇಕಾದರೂ ಇವುಗಳನ್ನು ಉಪಯೋಗಿಸತಕ್ಕದ್ದು.

(೧೩) ಬಾಣಂತಿಯಾಗುವವಳು ಹೆರುವದಕ್ಕಿಂತ ಮೊದಲು ಲೇಡೀ ಡಾಕ್ಟರರನ್ನು ಕಂಡು ಅವರಿಂದ ಸಲಹೆಗಳನ್ನು ಪಡೆಯತಕ್ಕದ್ದು.

(೧೪) ಓದುವಾಗ ಸಾಕಷ್ಟು ಬೆಳಕು ಹಿಂಬದಿಯಿಂದ ಭುಜದ ಮೇಲಿಂದ ಬರುವಂತೆ ಎಚ್ಚರ ಪಡೆಯಿರಿ.

(೧೫) ನೀವು ಓದುವ ಪುಸ್ತಕಗಳ, ಅಕ್ಷರಗಳಾಗಲಿ, ಕರಿಹಲಗೆಯ ಮೇಲೆ ಬರೆದದ್ದಾಗಲಿ ಮಸಕು ಮಸಕಾಗಿ ಕಾಣಹತ್ತಿದರೆ ಯೊಗ್ಯತೆಯುಳ್ಳ ಡಾಕ್ಟರರಿಂದ ನಿಮ್ಮ ಕಣ್ಣುಗಳನ್ನು ಪರೀಕ್ಷಿಸಿಗೊಳ್ಳಿರಿ.

ಪುಸ್ತಕ ಪರಿಚಯ

(೧) **ಎದೆಯನ್ನು ಹೇಗೆ ಬೆಳೆಯಿಸಬಹುದು.** ಅರ್ಧ ಡೇಮಿ ಆಕಾರದ ೩೬ ಪುಟಗಳು. ಬೆಲೆ ೪ ಆಣೆ. ಅದು "ಆರೋಗ್ಯ ಮತ್ತು ಬಲ" ಮಾಲೆಯ ಮೊದಲನೆಯ ಪುಸ್ತಕವು. ಜನರ ಆರೋಗ್ಯ ಮತ್ತು ಶರೀರ ಸಾಮರ್ಥ್ಯವನ್ನು ಬೆಳಿಸುವ ಸಂಬಂಧದ ವಿಷಯಗಳನ್ನು ವಿವೇಚಿಸಿ ಚಿಕ್ಕ ಪುಸ್ತಕಗಳ ರೂಪದಿಂದ ಪ್ರಕಟಿಸುವದೇ ಈ ಮಾಲೆಯ ಉದ್ದೇಶವು. ಈ ಪುಸ್ತಕದಲ್ಲಿ ಬಟ್ಟೆಗಳು, ಕುಳಿತುಕೊಳ್ಳುವ ರೀತಿ, ನಡೆವ ಮತ್ತು ನಿಲ್ಲುವ ಪದ್ಧತಿ, ಮತ್ತು ಕೆಲವು ವ್ಯಾಯಾಮಗಳು ಈ ವಿಚಾರಗಳನ್ನು ಹೇಳಿದ್ದು ಆ ವಿಷಯಗಳಿಗೆ ಸಂಬಂಧಿಸಿರುವ ಆರು ಉಪಯುಕ್ತ ಚಿತ್ರಗಳಿರುವದರಿಂದ ವಿಷಯ ವಿವರಣೆಯು ಸುಗಮವಾಗಿದೆ. ಪ್ರಕಾಶಕರಿಗೆ ಪ್ರೋತ್ಸಾಹ ದೊರೆತು ಅವರು ಇನ್ನೂ ಇಂಥ ಹಲವು ಪುಸ್ತಕಗಳನ್ನು ಪ್ರಕಟಿಸುವರೆಂದು ಆಶಿಸುವೆವು.

N. K.

೨. ದ್ರೋಣಾಚಾರ್ಯ

ಡೆಮ್ಮೀ ಆಕಾರದ ೪೪ ಪುಟಗಳು. ಬೆಲೆ ೩ ಆಣೆ. ಬ್ರಾಹ್ಮಣರಾಗಿ ಕ್ಷಾತ್ರ ವೃತ್ತಿಯ ಆಚಾರ್ಯರೆನಿಸಿಕೊಂಡ ದ್ರೋಣರ ಚರಿತ್ರೆಯೇ ಗ್ರಂಥದ ಮುಖ್ಯ ವಿಷಯವು. ಆಚಾರ್ಯರಿಗೆ ಭೀಷ್ಮ, ದ್ರುಪದ, ಅರ್ಜುನ, ಕೌರವರು ಮುಂತಾದವರೊಡನೆ ಉಂಟಾದ ಸಂಬಂಧಗಳಿಗನುಸರಿಸಿದ ಅನೇಕ ಉಪವಿಷಯಗಳೂ ಇದರಲ್ಲಿ ಸಮಾವೇಶವಾಗಿವೆ. ಕೊನೆಗೆ ಆಚಾರ್ಯರಲ್ಲಿದ್ದ ಮಹತ್ವದ ಗುಣಗಳ ಪ್ರತಿಪಾದನೆಯೂ ಸೇರಿದೆ. ಒಟ್ಟಿಗೆ ಈ ಚಿಕ್ಕ ಪುಸ್ತಕವು ಕನ್ನಡಿಗರ ಪ್ರೋತ್ಸಾಹಕ್ಕೆ ತಕ್ಕದ್ದಾಗಿರುವದು.

N. K.

೧೯೩೩ನೆಯ ಇಸವಿಯ ಎಪ್ರಿಲ ತಿಂಗಳಿನಲ್ಲಾದ ಸರ್ಟಿಫಿಕೇಟಿನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳ ಹೆಸರುಗಳು

ಟ್ರೇನಿಂಗ ಸ್ಕೂಲ, ಧಾರವಾಡ

ಧಾರವಾಡ ಡಿ. ಸ್ಕೂ. ಬೋರ್ಡ

ನಂ.	ಹೆಸರು	ಪಡೆದ ಗುಣಗಳು
೧.	ತಿ. ಗೋ. ಕಣವಿ	೫೨
೨.	ಗ. ಬ. ಪಟ್ಟಣದ	೫೮

ಬೆಳಗಾವ ಡಿ. ಸ್ಕೂ. ಬೋರ್ಡ

೩.	ನಾ. ರಾ. ಬಾದಾವಿ	೫೩
೪.	ಶಂ. ಮು. ಬಡಿಗೇರ	೬೧
೫.	ಗೋ. ಬ. ಕುಲಕರ್ಣಿ	೫೨
೬.	ಬ. ಚ. ಕುಂಕೂರ	೫೮
೭.	ಬಾ. ಶಾ. ಮೈಸಾಳೆ	೬೬
೮.	ಅ. ಬ. ಬಿಜ್ಜೂರ	೫೭

ವಿಜಾಪೂರ ಡಿ. ಸ್ಕೂ. ಬೋರ್ಡ

೯.	ರಾ. ಮು. ವಸ್ತ್ರದ	೬೦
೧೦.	ಯ. ತಿ. ವಡ್ಡರ	೫೨

ಹುಬ್ಬಳ್ಳಿ ಮ್ಯುನಸಿಪಾಲಿಟಿ

೧೧.	ಈ. ದುಂ. ಢೋರ	೫೮
೧೨.	ಚ. ಭ. ಭರಮಗವಡರ	೬೧

ಗದಗ ಮ್ಯುನಸಿಪಾಲಿಟಿ

೧೩.	ಗಂ. ಶಿ. ಗಿರಿಮಠ	೪೮

ವಿಜಾಪೂರ ಮ್ಯುನಸಿಪಾಲಿಟಿ

೧೪.	ಚ. ಮ. ಕೋರಿ	೭೫
೧೫.	ಶಾ. ದ. ಹೂಗಾರ	೫೪

೧೬. ಇ. ನ. ಬಾಗೇವಾಡಿ ೫೩
೧೭. ಬಾ. ಲಿಂ. ಮಳಲಿ ೫೭

ಬಾಗಲಕೋಟೆ ಮುನಸಿಪಾಲಿಟಿ

೧೮. ಚ. ಭೀ. ಸಮಗಾರ ೪೯

ಸೊಲ್ಲಾಪೂರ ಮುನಸಿಪಾಲಿಟಿ

೧೯. ಕೃ ರಾ. ನಿಂಬರಿಗಿ ೬೦

ಸೆಟಲಮೆಂಟ ಸ್ಕೂಲ

೨೦. ಬ. ಚ. ಚಿಂಚಲಿ ೬೩

ಅಥಣಿ ಎಡೆಡ್ ಸ್ಕೂಲ

೨೧. ನಾ. ವಾ. ಜಿಂಬಿಗಿ ೬೭

ಮಿಶನ್ ಸಂಸ್ಥೆ

೨೨. ಭಾ. ಅ. ಜೊಗುಳ ೫೪
೨೩. ಅ. ಭೀ. ಬೋವೇರ ೫೯
೨೪. ಗು. ಜೋ. ಕರಿ ೪೯

ಮಿರಜ ಸ್ಟೇಟ

೨೫. ಮಾ. ವೀ. ಲೋಹಾರ ೫೬

ಕೆ. ಎಸ್. ವಕೀಲ

೨೭— —೧೯೩೩ ಎ. ಇ. ಸಾ|| ದ. ಭಾಗ

ಹೆ. ಮ. ಟ್ರೇ. ಕಾ. ಧಾರವಾಡ

ನಂ. ಹೆಸರು ಪಡೆದ ಗುಣಗಳು

ಧಾರವಾಡ ಡಿ. ಸ್ಕೂ. ಬೋರ್ಡ

೧. ಪಾರ್ವತೆವ್ವಾ ಪೂಜಾರ ೫೮
೨. ಗೋಪೆವ್ವಾ ಕರಿಕೊಳಿ ೫೭

ಬೆಳಗಾವ ಡಿ. ಸ್ಕೂ. ಬೋರ್ಡ

೩. ಲಕ್ಷ್ಮೀಬಾಯಿ ರಾಯಣ್ಣವರ ೫೭
೪. ದುಂಡವ್ವಾ ಹಿರೇಮಠ ೫೬
೫. ಶಿವವ್ವಾ ಜಾಲೀಕಟ್ಟಿ ೫೫

ವಿಜಾಪೂರ ಡಿ. ಸ್ಕೂ. ಬೋರ್ಡ

೬. ಹನಮಂತವ್ವಾ ಚಿಕ್ಕಾಡಿ ೫೯
೭. ಬಸವಂತವ್ವಾ ಪುದೂರ ೩೩

ಮ್ಯುನಸಿಪಾಲಿಟಿ ಹುಬ್ಬಳ್ಳಿ

೮. ವೀರವ್ವ ಪಾಟೀಲ ೬೫
೯. ಕಮಲವ್ವ ಶಿಗ್ಗಾವಿ ೫೭
೧೦. ವೀರವ್ವ ಬ್ಯಾಲಾಳ ೫೭

೧೧. ಗುರುಶಿದ್ದವ್ವ ಅಂಗಡಿ ೫೩
೧೨. ಗುರವ್ವ ಮಾನವಿ ೫೩

ಬಾಸೆಲ್ ಮಿ. ಸಂಸ್ಥೆ ಧಾರವಾಡ

೧೩. ಶಾಂತಾ ಮೋಟೆಬೆನ್ನೂರ ೫೩
೧೪. ಕಾಂತಾ ಹಳ್ಳಿ ೫೧
೧೫. ಪ್ರಭಾವತಿ ಬಸೂತಕರ ೪೭
೧೬. ಕಾಂತಾ ಲದ್ವಾ ೪೭

ಕ್ರಿಮನಲ್ ಟ್ರಾಯಬ್ಸ ಸೆಟಲ ಮೆಂಟ ಹುಬ್ಬಳ್ಳಿ

೧೭. ರೂಥ ಅಬ್ರೆಸ್ ೫೭

ರಾಮದುರ್ಗ ಸಂಸ್ಥಾನ

೧೮. ಭಾಗೀರಥಿ ಬಾರಿಗಿದಾದ ೬೫

ಧಾರವಾಡ ಕೆ. ಎಸ್. ವಕೀಲ

೨—೬—೧೯೩೩ ಎ. ಇ. ದ. ಭಾಗ

ಬರೆದುಬಂದ ಪತ್ರ

ಗುರ್ಲಹೊಸೂರ ಸುಪ್ರಸಿದ್ಧ ನಿವಾಸಿಗಳಾದ ಶ್ರೀಯುತ ಮೋರೋ, ಹರಿಪಂತ ಖರೆ L. C. E. ಲೆಕ್ಚರರ ಎಂಜಿನಿಯರಿಂಗ ಕಾಲೇಜ ಪುಣೆ ಇವರು, ಗುರ್ಲಹೊಸೂರಿನ ಬಡ ವಿದ್ಯಾರ್ಥಿಗಳಿಗೆ ಪಾಟಿ-ಪುಸ್ತಕ, ಕಾಗದ, ಪೆನಸಿಲ ಮುಂತಾದ ಶಿಕ್ಷಣ ಸಾಹಿತ್ಯಗಳನ್ನು ಉಚಿತವಾಗಿ ಕೊಡುವ ಕ್ರಮವನ್ನು ಸನ್ ೧೯೨೪ ಇಸವಿಯಿಂದ ಆರಂಭಿಸಿದರು. ೧೯೩೨ರ ವರೆಗೆ ಈ ಇನಾಮುಗಳ ಬೆಲೆಯು ೬ ರೂಪಾಯಿಯದಾಗಿತ್ತು. ೧೯೩೨-೧೯೩೩ ಈ ಎರಡು ವರ್ಷ ಅವರು ೧೨ ರೂ. ಬೆಲೆಬಾಳುವ ಇನಾಮುಗಳನ್ನು ಗಂಡುಮಕ್ಕಳಿಗೂ, ಹೆಣ್ಣು ಹುಡುಗೆಯರಿಗೂ ದೊರೆಯುವ ವ್ಯವಸ್ಥೆಯನ್ನು ಮಾಡಿದರು. ಮುಂದಿನ ವರ್ಷದಿಂದ ಹುಡುಗರ ಸಾಲೆಗೆ ೧೩॥ ರೂಪಾಯಿಗಳ ಇನಾಮೂ ಹೆಣ್ಣುಮಕ್ಕಳ ಸಾಲೆಗೆ ೪॥ ರೂಪಾಯಿಗಳ ಇನಾಮೂ ಸಿಗುವದೆಂದು ಅವರು ಆಶ್ವಾಸನವನ್ನಿತ್ತು, ಅದರಂತೆ ಶರಾಪುಸ್ತಕದಲ್ಲಿ ಬರೆದಿರುವರು. ಈ ಮಹನೀಯರ ಈ ಉಪಕ್ರಮವು ಸ್ತುತ್ಯವೂ ಅನುಕರಣೀಯವೂ ಆಗಿದೆ. ಎಂಬದರಲ್ಲಿ ಸಂದೇಹವಿಲ್ಲ.

ಶಾಳಾ ಕಬ್ಬೂರ ಜಿ. ಬೆಳಗಾವ—ಇಲ್ಲಿಯ ಬಲಭೀಮ ಕೊ. ಆ. ಕ್ರೆ. ಸೊಸಾಯಿಟಿಯವರು ಈ ಸಾಲೆಗೆ ಹೋದವರ್ಷ ೧೦ರೂ. ಗಳನ್ನೂ ೪ರೂ. ಬೆಲೆಯ ಘಂಟೆಯನ್ನೂ ಕೊಟ್ಟಿರುವರು; ಹಾಗು ಪರೀಕ್ಷಾಕಾಲಕ್ಕೆ ಹುಡುಗರು ಕೂಡಲಿಕ್ಕೆ ೬ರೂ. ಬೆಲೆ ಬೀಳುವ ತಟ್ಟುಗಳನ್ನೂ ಕೊಟ್ಟರು. ಈ ವರ್ಷ ಮತ್ತೆ ಹೆಚ್ಚಿನ ತಟ್ಟುಗಳ ಸಲುವಾಗಿ ೧೦ ರೂ. ಗಳನ್ನು ಮಂಜೂರ ಮಾಡಿದ್ದಾರೆ. ಹೀಗೆಯೆ ಮುಂದಿನ ವರ್ಷಕ್ಕೂ ೧೦ರೂ. ಗಳನ್ನು ಶಾಲೆಯ ಸಲುವಾಗಿ ಕೊಡುವವರಿದ್ದಾರೆ. ಇದು ಬಲಭೀಮ ಸೊಸಾಯಿಟಿಯವರಿಗೆ ಭೂಷಣಾಸ್ಪದವಾಗಿದೆ.

ಈ ಸಂಗತಿಯನ್ನು ಮಿ। ತವನಪ್ಪ ಖೆಮಲಾಪೂರ ಅ। ಮಾ। ಕಬ್ಬೂರ ಇವರು ತಿಳಿಸಿದ್ದಾರೆ.

ಮುಲ್ಕೀಪರೀಕ್ಷೆಯ ವಿದ್ಯಾರ್ಥಿಗಳ ಸಲುವಾಗಿ

ಹೊಸಮಾದರಿಯ

ಅಂಗಣಿತ-ಸಂಗ್ರಹ

ಟ ಸಂಖ್ಯೆ ೨೫೦] **ಸಂಗ್ರಹಕಾರ:- ಚಿ. ಶ್ರೀ. ಕುಲಕರ್ಣಿ** [ಬೆಲೆ ೦-೧೨-೦

ವ್ಹ. ಫಾ. ಪರೀಕ್ಷೆಯಲ್ಲಿ, ಇತ್ತಿತ್ತಲಾಗಿ ಹೊಸ ಮಾದರಿಯ ಲೆಕ್ಕಗಳು ಬೀಳು ಸ್ತುದರಿಂದ ವಿದ್ಯಾರ್ಥಿಗಳು ಗೊಂದಲದಲ್ಲಿ ತೊಡಗಿ ಹಾನಿಯನ್ನು ಹೊಂದುತ್ತಿರು ರು. ಆದಕಾರಣ ಅವರ ಗೊಂದಲವು ದೂರಾಗುವದಕ್ಕಾಗಿ ಅಂಥ ಮಾದರಿಯ ಣಿತಗಳನ್ನು ಸಂಗ್ರಹಿಸಿ, ಬಿಡಿಸಿ ತೋರಿಸಿದೆ. ಇದು ತೀರ ಹೊಸ ಮಾದರಿಯದಿದ್ದು ಕ್ಷಕರ ಸಹಾಯವಿಲ್ಲದೆ ವಿದ್ಯಾರ್ಥಿಗಳಿಗೆ ಉಪಯೋಗವಾಗುವಂತಿದೆ. ಮತ್ತು ಕ್ಷಕರಿಗೂ ಮಾರ್ಗದರ್ಶಕವಾಗುವದರಲ್ಲಿ ಸಂದೇಹವಿಲ್ಲ.

ಈ ಪುಸ್ತಕದಲ್ಲಿ ಲ. ಸಾ ಭಾ; ದ್ಯ ಭಾ. ಗಳನ್ನು ಒಳಗೊಂಡು ವ್ಹ. ಫಾ. ೀಕ್ಷೆಗೆ ಸಂಬಂಧಿಸಿರುವ ಬಹುತರ ಎಲ್ಲ ಗಣಿತಗಳನ್ನು ಪರೀಕ್ಷೆಯ ದೃಷ್ಟಿಯಿಂದ ಶ್ರೀ ಪ್ರಯತ್ನದಿಂದ ಸಂಗ್ರಹಮಾಡಿ ಕೆಲವು ಲೆಕ್ಕಗಳನ್ನು ಅತ್ಯುತ್ತಮ ರೀತಿಯಿಂದ ಡಿಸಿ ತೋರಿಸಿ, ಅಭ್ಯಾಸಕ್ಕೋಸ್ಕರ ಉದಾಹರಣೆಗಳನ್ನು ಕೊಟ್ಟಿರುತ್ತದೆ. ಒಟ್ಟಿನಲ್ಲಿ ಸುಮಾರು ೬೦೦ಕ್ಕಿಂತ ಹೆಚ್ಚು ಲೆಕ್ಕಗಳು ಅವೆ.

ವ್ಯಾಪಾರಸ್ಥರಿಗೆ ಮತ್ತು ಏಜಂಟರಿಗೆ ಭರಪೂರ ಕಮಿಶನ್ ಸಿಕ್ಕೀತು.

ಸಿಗುವ ಸ್ಥಳ: – **ಶ್ರೀ ಚಿದಂಬರ ಶ್ರೀಪಾದ ಕುಲಕರ್ಣಿ,**
ಮು. ಪೋ. ಹಿರೇಬಾಗೇವಾಡಿ
ತಾಲೂಕ ಬೆಳಗಾಂವ

ಮಿ. ವ್ಹಿ. ಎನ್. ಮುಗದಾಳಕೃತ

" ೧ ಹಿಂದುಸ್ತಾನದ ಭೂಗೋಲ "

ಹೊಸ ಆವೃತ್ತಿ, ಆಕೃತಿ, ಚಿತ್ರ, ನಕಾಶಸಹಿತ ಪೂರ್ಣ ತಿದ್ದಿದೆ.

ಬೆಲೆ ೮ ಆಣೆ

" ೨ ಏಶಿಯಖಂಡದ ಭೂಗೋಲ "

ಚಿತ್ರ ನಕಾಶಗಳಿಂದ ಕೂಡಿದೆ. ಇಂಗ್ಲಿಷ ಶಾಲೆಗಳಲ್ಲಿ ಸಹ ಉಪಯೋಗಿಸಲು ಮಂಜೂರಾಗಿದೆ.

ಬೆಲೆ ೮ ಆಣೆ

ಏ. ಆರ್. ಶಿವನಾಗಪ್ಪ ಬುಕ್ಕಸೇಲರ ಹುಬ್ಬಳ್ಳಿ.

ಎಲ್ಲ ಮುಖ್ಯ ಬುಕ್‌ಸೇಲರರಲ್ಲಿ ಸಿಗುವದು.

Reg. No. B. 2567

ಸರಕಾರದಿಂದ ಮಂಜೂರಾದ

ಆರೋಗ್ಯ ಶಾಸ್ತ್ರದ ಹೊಸ ಟೆಕ್ಸ್ಟ ಪುಸ್ತಕವು
ಶರೀರ ಸಂಗೋಪನ ಶಾಸ್ತ್ರ.

ಬೆಲೆ ೧೦ ಆಣೆ ಕಮಿಶನ್ ೧೦೦ಕ್ಕೆ ೨೦.

ಲೇಖಕ:—ದ. ಬಾ. ಬರ್ವೆ, ಬಿ. ಏಜಿ. ರಿಸರ್ಚ ವರ್ಕರ, ಶೇತಕೀ ಕಾಲೇಜ, ಪುಣೆ.

ಈ ಪುಸ್ತಕದಲ್ಲಿ ಕನ್ನಡ ೫, ೬, ೭, ಹಾಗು ವ್ಹ. ಫಾಯನಲ್ ಪರೀಕ್ಷೆಗೆ ಬೇ ಗುವ ಎಲ್ಲ ವಿಷಯವು ಬಂದಿರುವದು. ಇದರ ಮರಾಠೀ ಆವೃತ್ತಿಯು ಮಧ್ಯಭಾ ಬಹುತರ ಎಲ್ಲ ಸಾಲೆಗಳಲ್ಲಿ ಟೆಕ್ಸ್ಟ, ಎಂದು ಉಪಯೋಗವಾಗುತ್ತಿರುವದು. ಸರಕಾ ಟ್ರೇನಿಂಗ ಕಾಲೇಜುಗಳು ಹಾಗು ಪ್ರ್ಯಾಕ್ಟಿಸಿಂಗಸ್ಕೂಲುಗಳಲ್ಲಿಯೂ ಇದೇ ಟೆಕ್ ಎಂದು ಉಪಯೋಗವಾಗುತ್ತಿರುವದು.

ಈ ಪುಸ್ತಕವನ್ನು ತಜ್ಞರು ತುಂಬಾ ಹೊಗಳಿದ್ದಾರೆ. ಬೆಲೆಯಲ್ಲಿ ಇಷ್ಟು ಅಗ್ಗವ ಪುಸ್ತಕವು ಬೇರೊಂದಿಲ್ಲ. ಪುಸ್ತಕದಲ್ಲಿ ೨೨೫ ಪುಟಗಳೂ, ೫೫ ಆಕೃತಿಗಳೂ (ಲಾಯಿ ಬ್ಲಾಕ್ಸ) ೨ ಬಣ್ಣದ ಆಕೃತಿಗಳೂ ಒಂದು ನಕಾಶವೂ ಇರುವವು.

ಪುಸ್ತಕಗಳು ಸಿಕ್ಕುವ ಸ್ಥಳಗಳು:—

ಸ್ಟೂಡಂಟ್ಸ ಓನ್ ಬುಕ್‌ಡಿಪೋ, ಧಾರವಾಡ, ತ ನಾ. ಗೋಡಬೋಲೆ,ಪುಣೆ ಹಾಗು ಬೆಳಗಾಂವ, ಹುಬ್ಬಳ್ಳಿ, ಕಾರವಾರ, ವಿಜಾಪುರ ಇಲ್ಲಿಯ ಎಲ್ಲ ಬುಕ್‌ಸೇಲರುಗಳ

ಮಿ. ಸುರಜಭಾನ ಭವಾನಿಪ್ರಸಾದ ಆಲೂರ (ಪಾಂಡೆ) ಇವರು ಧಾರವಾಡ ಸರಕಾರಿ ಹಾಯಸ್ಕೂಲಿನಲ್ಲಿ ಶಿಕ್ಷಕರಾ ಗಿದ್ದರಷ್ಟೇ. ಇವರ ಚರಿತ್ರವನ್ನು ತಾ ೧–೧೨–೧೯೩೩ರ ಒಳಗಾಗಿ ಕನ್ನಡ ದಲ್ಲಿ ಬರೆದು ಕಳಿಸಿದವರಲ್ಲಿ ಮೂವರಿಗೆ ರೂ. ೧೦; ರೂ. ೬; ರೂ. ೪ ಹೀಗೆ ಮೂರು ಇನಾಮುಗಳು, ೧.೧.೩೪ಕ್ಕೆ ಕೊಡಲ್ಪಡುವವು. ಇನಾಮುಗಳನ್ನು ನಿರ್ಣಯಿಸುವ ಪೂರ್ಣ ಅಧಿಕಾರವು ಕೆಳಗೆ ಸಹಿ ಮಾಡಿದವರಿಗೆ ಇರುವದು.

ಚಂ. ಸು. ಪಾಂಡೆ, ರಿಟಾಯರ್ಡ ಪೋಸ್ಟಮಾಸ್ತರ, ಶಿವಮೊಗ್ಗಾ.

ಸ್ಯಾಂಪಲ್] [ಪುಕ್

ಉತ್ತಮ ಮಸೀ ಚೀಟುಗಳು

ನೀಲೀಕಪ್ಪು, ಕೆಂಪು, ಜಾಂಬಳಿ ಮಸಿಯ ಚೀ ಗಳು ಈ ಕಂಪನಿಯು ಬಹಳ ಜನರಿಂದ ಶಿಫಾರಸ ಪಡೆದು ಮೆಡಲ್ಲುಗಳನ್ನು ಸಂಪಾದಿಸಿರುತ್ತದೆ.

ದರಗಳು

೧೦೦	ಚೀಟುಗಳಿಗೆ	೦—೭—(
೫೦೦	,,	೧—೧೪-(
೧೦೦೦	,,	೩—೦—(
೧೦೦೦೦	,, ೨೭—೮—೦ (ರೇಲ್ವೆ ಫ್ರೀ	

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರಮಾಡಿ

ಕರ್ನಾಟಕ ಇಂಕ ಕಂಪನಿ,
ಬಾಗಲಕೋ

Reg. No. B. 2567

ಕನ್ನಡ ಪ್ರಾಥಮಿಕ ಶಿಕ್ಷಣ

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶ...)

Kannada Prathamik Shikshana

— AUGUST 1933 —

ಸಂಪಾದಕ — ವೆಂಕಟೇಶ ನರಸಿಂಗರಾವ ಮಗದಾ...

ಸಂಪುಟ ೭೦] ಆಗಸ್ಟ ೧೯೩೩ [ವರ್ಷ

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ	
೧.	ಕೈ ಬರೆಹ	
೨.	ಶಿಕ್ಷಣ ಸಂಸ್ಥೆಗಳಲ್ಲಿ ವಾಚನ ಕಲಿಸುವ ಪದ್ಧತಿಗಳು	
೩.	ಕನ್ನಡ ಭಾಷೆ	
೪.	ಸ್ಕಾಟರ್ಲ್ಯಾಲಿ	
೫.	ಕವಿತೆ	
೬.	ಇತಿಹಾಸ ಶಿಕ್ಷಣ	
೭.	ಪರೀಕ್ಷೆಯ ಪ್ರಶ್ನಗಳು	೨೬
೮.	ಕವಿತೆ	೨೮
೯.	ಪ್ರಕಟನೆ	೨೮

Printed by K. R. Bhise at the Karnatak Printing Works, Dharwar & Published by V. N. Magdal B. A. Head Master, Training School, Dharwar, at his Office

ನಂ ೬೫ ಶ್ರೀ ಶ್ರೀ ... ಮುಕ್ಕಾಂ — ...
Post — KATKOL
Dist. — Belgaum

ಬಣ್ಣದ ಹಾಗು ಸಾದಾ ನಕಾಶ-ಚಿತ್ರಗಳಿಂದೊಡಗೂಡಿದ

ಹಾಗು

ಪ್ರದೇಶ ಪದ್ಧತಿಯಿಂದ ಬರೆಯಲ್ಪಟ್ಟ

ಛನೆಯ ಇಯತ್ತೆಯ

ಸಚಿತ್ರ-ಭೂವರ್ಣನೆ

ಅಂದ ಮುದ್ರಣ! ಸುಂದರ ಚಿತ್ರ!! ಗ್ಲೇಜಕಾಗದ!!! ಚಿತ್ರ-ನಕಾಶ—೬೫

(ಬೆಲೆ:— ೭ ಆಣೆ)

ಮುನ್ನುಡಿ ಲೇಖಕರು:— ಎನ್. ರಾಮಚಂದ್ರನ್

ಬಿ. ಎ. ಬೀ.ಟಿ. ಆ. ಆಫೀಸರ ಡಿ ಎಸ್. ಬಿ. ಬೆಳಗಾವ.

ಈ ಭೂಗೋಲವು "ಗೊತ್ತಿದ್ದ ಸಂಗತಿಯಿಂದ ಗೊತ್ತಿಲ್ಲದ ಸಂಗತಿಗೆ ಸಾಗು" ಎಂಬ ಶಿಕ್ಷಣದ ತತ್ವಕ್ಕನುಸರಿಸಿ ಬರೆಯಲ್ಪಟ್ಟಿರುವದರಿಂದ ಶಿಕ್ಷಕರಿಗೆ ಭೂಗೋ ಶಿಕ್ಷಣವನ್ನು ಸಾಗಿಸಲು ಯೋಗ್ಯ ಮಾರ್ಗದರ್ಶಕವಾಗಿರುವದಲ್ಲದೆ ಪ್ರಸಂಗಕ್ಕೆ ತಕ್ಕ ಚಿತ್ರ-ನಕಾಶಗಳಿದ್ದು ವ್ಯವಹಾರಕ್ಕೆ ಉಪಯುಕ್ತವಾದ ವಿಷಯವು ಮನೋರಂಜಕ ವಾಗಿರುವದರಿಂದ ಬೇಸರಪಡೆಯದೆ ವಿಷಯ ಜ್ಞಾನಮಾಡಿಕೊಳ್ಳಲು ವಿದ್ಯಾರ್ಥಿಗಳಿ ಸುಲಭಸಾಧನವಾಗಿರುವದು. ಆದುದರಿಂದ ಭೂಗೋಲ-ವಿಷಯದಲ್ಲಿ ತಜ್ಞರಾದ ಪ್ರೊ ಎಸ್. ಜೀ. ಪುರಾಣಿಕ ಎಂ. ಏ., ಹಂಸರಾಜ ಪ್ರಾಗಜಿ ಠಾಕರ್ಸಿ ಕಾಲೇಜ, ನಾಸಿ ಮತ್ತು ಶ್ರೀ. ಡಿ. ಎಸ್. ಪರಮಾಜ ಎಂ. ಏ., ಎಲ್. ಎಲ್. ಬಿ., ವಕೀಲ, ಬೆಳಗಾ ಮೊದಲಾದ ಪದವೀಧರರು ಸದ್ಯದ ಭೂಗೋಲ-ಶಿಕ್ಷಣಕ್ಕೆ ಕನ್ನಡದಲ್ಲಿ ಯೋ ಸಾಧನ ಲಭಿಸಿತೆಂದು ಶಿಫಾರಸುಮಾಡಿರುವರು. ಕಾರಣ ಶಿಕ್ಷಕ-ಶಿಕ್ಷಿಕೆಯರು ಪುಸ್ತಕದ ಒಂದು ಪ್ರತಿಯನ್ನಾದರೂ ತೆಗೆದುಕೊಂಡು ಮನವರಿಕೆಮಾಡಿಕೊಳ್ಳಬೇಕಾ ಅಪೇಕ್ಷೆ.

ಟೀಪು:— ಮಾದರಿಯ ಪ್ರತಿ ಬೇಕಾದವರು ಕೆಳಗಣ ವಿಳಾಸಕ್ಕೆ ಎಂ ಆಣೆಗಳ ಪೋಸ್ಟ ಸ್ಟ್ಯಾಂಪ ಕಳುಹಿಸಿದಲ್ಲಿ ವ್ಹಿ. ಪಿ. ವೆಚ್ಚವಿಲ್ಲದೆ ಪುಸ್ತಕ ಕೈಸೇರುವದು.

ವಿಳಾಸ:—

ಶ್ರೀಬಲಭೀಮ ಸ್ಟೋರ್ಸ, ಕಾಗವಾಡ.

ಜಿ. ಬೆಳಗಾಂವ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:—ವೆಂಕಟೇಶ ನರಸಿಂಗರಾವ ಮುಗದಾಳ, ಬಿ. ಎ.,

ಸಂಪುಟ ೭೦ ||| ಅಗಸ್ಟ ೧೯೩೩ ||| ವರ್ಷ ೫; ಸಂ. ೫

ಕೈ ಬರೆಹ

ಲೇಖಕರು:—ಮಿ. ಆರ್. ಕೆ. ನಾಯಕ ಬಿ. ಎ., ಅ. ಆಫೀಸರ, ಡಿ. ಸ್ಕೂ. ಬೋ. ಧಾರವಾಡ.

ಕೈ ಬರೆಹವು ಒಂದು ಕಲೆಯು. ಇದು ಎಲ್ಲ ತರಗತಿಯ ಬುದ್ಧಿಯ ಹುಡುಗರಿಗೂ ಬಹುಶಃ ಒಂದೇ ಪ್ರಮಾಣದಿಂದ ಸಾಧಿಸಬಹುದು. ಯೋಗ್ಯದಿಶೆಯಲ್ಲಿ ರೂಢಿಮಾಡುವದರಿಂದ ಎಲ್ಲರೂ ಉತ್ತಮರಾದ ಬರೆಹಗಾರರಾಗುವರೆಂಬದಕ್ಕೆ ಸಂಶಯವಿಲ್ಲ. ನಮ್ಮ ಪ್ರಾಥಮಿಕ ಶಾಲೆಗಳಲ್ಲಿ ಬಹುತರ ಎಲ್ಲ ವಿಷಯಗಳನ್ನು ಕಲಿಸುವದರಲ್ಲಿ ಬಹಳ ಸುಧಾರಣೆಯಾಗಿರುವದು. ಆದರೆ ಕೈಬರಹದಲ್ಲಿ ಮಾತ್ರ ಸ್ವಲ್ಪವೂ ಸುಧಾರಣೆಯಾದಂತೆ ತೋರುವದಿಲ್ಲ. ಸುಮಾರು ೫೦ ವರ್ಷಗಳ ಹಿಂದೆ ಬರೆಹವು ಯಾವ ಕ್ರಮದಿಂದ ಕಲಿಸಲ್ಪಡುತ್ತಿತ್ತೋ ಬಹುಶಃ ಅದೇ ಅನಿಶ್ಚಿತವೂ ಗುರಿಯಿಲ್ಲದ್ದೂ ಆದ ಕ್ರಮದಿಂದಲೇ ಈಗಲೂ ಕಲಿಸಲ್ಪಡುತ್ತದೆ ಎನ್ನಲು ಅಡ್ಡಿ ತೋರುವದಿಲ್ಲ. ಈ ವಿಷಯದಲ್ಲಿ ಏನಾದರೂ ಹೆಚ್ಚು ಕಡಿಮೆಯಾಗಿದ್ದರೆ ಅದು ವಿರುದ್ಧ ದಿಶೆಯಲ್ಲಿ ಆಗಿರುವದು. ಹಿಂದಿನ ಕಾಲದಲ್ಲಿ ಬರೆಹಕ್ಕೆ ಬಹಳ ಮಹತ್ವವಿತ್ತು. ಅಚ್ಚಿನ ಯಂತ್ರದ ಶೋಧವಾದಂದಿನಿಂದ ಜನರ ಆಸ್ಥೆಯು ಈ ವಿಷಯದಲ್ಲಿ ಬರಬರುತ್ತ ಕಡಿಮೆಯಾಗಹತ್ತಿದೆ. ಆದರೆ ಬರೆಹದ ಮಹತ್ವವು ಬಹಳವಾಗಿರುವದರಿಂದಲೂ ಅದನ್ನು ಸ್ವಲ್ಪ ಪ್ರಯತ್ನದಿಂದ ಚೆನ್ನಾಗಿ ಸಾಧಿಸಬಹುದಾದದರಿಂದಲೂ ಕೆಲವು ಸೂಚನೆಗಳನ್ನು ಇದರಡಿಯಲ್ಲಿ ಮಾಡುವೆವು.

ಕೈಬರೆಹದ ಧ್ಯೇಯವು:—ಅಂದವಾದ ಸಣ್ಣ ಅಕ್ಷರಗಳನ್ನು ತೀವ್ರವಾಗಿ ಬರೆಯಲಿಕ್ಕೆ ಬರಬೇಕೆಂಬದೇ ಕೈಬರೆಹದ ಶಿಕ್ಷಣದ ಧ್ಯೇಯವು.

ವಿವರಣೆ:- ನಮ್ಮ ವಿಚಾರಗಳನ್ನು ಬೇರೆಯವರಿಗೆ ಸುಲಭವಾಗಿ ತಿಳಿಸುವದು ಬರೆಹದ ಉದ್ದೇಶವಾಗಿರುವದರಿಂದ ಅಕ್ಷರಗಳು ಸುವಾಚ್ಯವಾಗಿರಬೇಕು. ನಮ್ಮ ಕೆಲಸವನ್ನು ತೀವ್ರವಾಗಿ ಮಾಡಲಿಕ್ಕೆ ಬಂದರೆ ಒಳ್ಳೆಯದಾದದರಿಂದ ನಾವು ತೀವ್ರವಾಗಿ ಬರೆಯಲಿಕ್ಕೆ ಕಲಿಯಬೇಕೆಂಬದಾದರೂ ಅವಶ್ಯವು. ನಮ್ಮ ಕೊನೆಯ ಧ್ಯೇಯವು ಪ್ರಪಂಚವು; ಶಾಲೆಯಲ್ಲ. ಆದದರಿಂದ ಪ್ರಪಂಚದಲ್ಲಿ ಬಳಕೆಯಲ್ಲಿರುವ ಸಣ್ಣ ಅಕ್ಷರಗಳನ್ನು ಬರೆಯಲಿಕ್ಕೆ ಕಲಿಯುವದೂ ಅವಶ್ಯವು. ಈ ಉದ್ದೇಶಗಳು ನೆರವೇರಬೇಕಾದರೆ ಕೆಳಗೆ ಹೇಳಿದ ಮೂರು ಸಂಗತಿಗಳನ್ನು ಸಾಧ್ಯಮಾಡುವದರ ಕಡೆಗೆ ನಾವು ಲಕ್ಷವನ್ನು ಪೂರೈಸತಕ್ಕದ್ದು.

೧. ವ್ಯವಹಾರದಲ್ಲಿ ಬಳಕೆಯಲ್ಲಿರುವ ಸಣ್ಣ ಅಕ್ಷರಗಳು. (ಕಾಪೀ ಬ ಹದ ದೊಡ್ಡ ಅಕ್ಷರಗಳಲ್ಲ.)

೨. ಅಂದವಾದ ಅಕ್ಷರಗಳು ಹಾಗು ಗೊತ್ತು ಮಾಡಲ್ಪಟ್ಟ ಮಾದರಿಯ ಅಕ್ಷರಗಳು.

೩. ಇಂತಹ ಅಕ್ಷರಗಳನ್ನು ತೀವ್ರವಾಗಿ ಬರೆಯುವದು.

ಮೇಲೆ ಹೇಳಿದ ಸಂಗತಿಗಳನ್ನು ಹೇಗೆ ಸಾಧಿಸಬಹುದೆಂಬದನ್ನು ವಿಚಾರಿಸುವ.

ರೂಢಿ:– ಕೊಟ್ಟ ಮಾದರಿಯಂತೆ ಅಕ್ಷರ ಬರೆಯುವದು ಕೇವಲ ರೂಢಿಯಿಂದಾಗುವದು. ವಿಶಿಷ್ಟ ಆಕಾರವು ಹೊರಡಬೇಕಾಗಿದ್ದರೆ ಸುಲಭವೂ ತೀವ್ರವೂ ಆದ ಕ್ರಮದಿಂದ, ಹಲವು ಸಾರೆ, ಬರೆಯಬೇಕಾಗುವದು. ಕೆಲವು ಅಕ್ಷರಗಳನ್ನು ಮಾತ್ರ ಬರೆಯುವ ರೂಢಿ ಮಾಡುವದರಿಂದ ಎಲ್ಲ ಅಕ್ಷರಗಳನ್ನು ಬರೆಯಲಿಕ್ಕೆ ಬರುವದೆಂಬದು ಅಂಶತಃ ನಿಜವಿರುವದಾದರೂ ಪೂರ್ಣ ನಿಜವಲ್ಲ. ಬೇರೆ ಬೇರೆ ಅಕ್ಷರಾವಯವಗಳ ಆಕಾರವು ಬೇರೆ ಬೇರೆಯಾಗಿರುವದು. ಕೆಲ ಕೆಲವು ಅಕ್ಷರಗಳಲ್ಲಿ ಒಂದೇ ಆಕಾರದ ಅವಯವಗಳಿದ್ದರೂ ವಿಶಿಷ್ಟತೆಗಳು ಇದ್ದೇ ಇರುವದರಿಂದ ಎಲ್ಲ ಅಕ್ಷರಗಳನ್ನು ಬರೆಯುವ ರೂಢಿ ಮಾಡಿಸಬೇಕಾಗುವದು.

ಸ್ಥೂಲ ಸ್ನಾಯುಗಳೂ ಸೂಕ್ಷ್ಮ ಸ್ನಾಯುಗಳೂ :– ಹಸ್ತ ಶಿಕ್ಷಣ ಕ್ರಮದಲ್ಲಿ ಸ್ಥೂಲ ಸ್ನಾಯುಗಳ ಶಿಕ್ಷಣವಾದ ಬಳಿಕ ಸೂಕ್ಷ್ಮ ಸ್ನಾಯುಗಳ ಶಿಕ್ಷಣವಾಗತಕ್ಕದ್ದೆಂದು ಶಿಕ್ಷಣ ಶಾಸ್ತ್ರಜ್ಞರು ಗೊತ್ತು ಪಡಿಸಿರುವರು. ಸ್ಥೂಲಸ್ನಾಯುಗಳಿಗೆ ಶಿಕ್ಷಣವು ತಕ್ಕಮಟ್ಟಿಗೆ ದೊರೆತ ಬಳಿಕ ಹೆಚ್ಚು ಸೂಕ್ಷ್ಮವಾದ ಸ್ನಾಯುಗಳಿಗೆ ಶಿಕ್ಷಣವು ದೊರೆಯುವಂತೆಯೂ ಬಳಿಕ ಇನ್ನೂ ಹೆಚ್ಚು ಸೂಕ್ಷ್ಮವಾದ ಸ್ನಾಯುಗಳಿಗೆ ಶಿಕ್ಷಣ ದೊರೆಯುವಂತೆಯೂ ನೋಡಿಕೊಳ್ಳಬೇಕು. ಅಂದರೆ ಆರಂಭದಲ್ಲಿ ಹುಡುಗರ ಭುಜದ ಸ್ನಾಯುಗಳ ಉಪಯೋಗವಾಗುವಂತೆಯೂ

ಮೇಲೆ ತೋಳಿನ ಸ್ನಾಯುಗಳ ಉಪಯೋಗವಾಗುವಂತೆಯೂ ಬಳಿಕ ಮುಂಗೈ ಸ್ನಾಯುಗಳ ಉಪಯೋಗವಾಗುವಂತೆಯೂ ಕೊನೆಗೆ ಬೆರಳಿನ ಸ್ನಾಯುಗಳ ಉಪಯೋಗವಾಗುವಂತೆಯೂ ನೋಡಿಕೊಳ್ಳಬೇಕು. ಭುಜದ ಸ್ನಾಯುಗಳನ್ನು ಉಪಯೋಗಿಸುವಾಗ ತೋಳಿನ ಸ್ನಾಯುಗಳೂ ಉಳಿದ ಸ್ನಾಯುಗಳೂ ಉಪಯೋಗಿಸಲ್ಪಡುವದಿಲ್ಲವೆಂದಲ್ಲ; ಭುಜದ ಸ್ನಾಯುಗಳು ಮುಖ್ಯವಾಗಿ ಉಪಯೋಗಿಸಲ್ಪಡುವವೆಂಬರ್ಥವು. ಹುಡುಗರ ಭುಜದ ಸ್ನಾಯುಗಳ ಉಪಯೋಗವಾಗಬೇಕಾದರೆ ಅಕ್ಷರಗಳು ೮ ರಿಂದ ೧೨ ಇಂಚಿನಷ್ಟು ಎತ್ತರವಾದವುಗಳಿರಬೇಕಾಗುವದು. ತೋಳಿನ ಸ್ನಾಯುಗಳ ಉಪಯೋಗವಾಗಲಿಕ್ಕೆ ಅಕ್ಷರಗಳು ಕನಿಷ್ಠ ಪಕ್ಷಕ್ಕೆ ರಿಂದ ೩ ಇಂಚಿನಷ್ಟು ಎತ್ತರವಾದವುಗಳಿರಬೇಕಾಗುವದು. ವ್ಯವಹಾರದಲ್ಲಿ ಳಿಕೆಯಲ್ಲಿರುವ ಸಣ್ಣ ಅಕ್ಷರಗಳನ್ನು ಬರೆಯುವಾಗ ಮುಂಗೈ ಸ್ನಾಯುಗಳ ಉಪಯೋಗವು ಮುಖ್ಯವಾಗಿ ಆಗುವದೆಂದು ಹೇಳಬಹುದು. ಬೆರಳಿನ ಸ್ನಾಯುಗಳು ಸೂಕ್ಷ್ಮವಾದ ಕೆತ್ತಿಗೆಯ ಕೆಲಸಗಳಲ್ಲಿ ಮಾತ್ರ ಉಪಯೋಗವಾಗುವವು. ಾಡಿಕೆಯ ಬರೆಹದಲ್ಲಿ ತೋಳಿನ ಹಾಗು ಮುಂಗೈಯ ಸ್ನಾಯುಗಳ ಉಪಯೋಗವು ಹೆಚ್ಚಾಗಿ ಆಗುವಂತೆ ಮಾಡುವದು ಹಿತಕರವು.

ಈ ತತ್ವದ ಮೇರೆಗೆ ವಿಚಾರ ಮಾಡಲು ಹುಡುಗರಿಗೆ ಆರಂಭದಲ್ಲಿಯೇ ಾಟಿ ಪೆನ್ಸಿಲುಗಳನ್ನು ಕೊಟ್ಟು ಬರೆಯಲಿಕ್ಕೆ ಹಚ್ಚುವದು ಎಷ್ಟು ದೊಡ್ಡ ತಪ್ಪಾಗುವದೆಂದು ಕಂಡು ಬರುವದು. ಹುಡುಗರು ಹಳ್ಳಿಯ ಸಾಲೆಗಳಲ್ಲಿ ಉಪಯೋಗಿಸುವ ಪೆನ್ಸಿಲುಗಳು ಒಮ್ಮೊಮ್ಮೆ ಅರ್ಧ ಇಂಚಿಗಿಂತಲೂ ಸಣ್ಣವಿರುವವು! ಾಟಿಯ ಮೇಲೆ ಪೇನ್ಸಿಲಿನಿಂದ ಬರೆಯುವದು ಘರ್ಷಣದ ಮೂಲಕ ಗಡಚಾಗುವದು. “ಸುಲಭದಿಂದ ಕಠಿಣಕ್ಕೆ ಸಾಗು” ಎಂಬ ಶಿಕ್ಷಣತತ್ವಕ್ಕೆ ಇದು ತೀರ ವಿರುದ್ಧವು. ಆರಂಭದಲ್ಲಿ ಹುಡುಗರಿಗೆ ಅಂತರಿಕ್ಷದಲ್ಲಿ ಬರೆಯುವ ರೂಢಿ ಮಾಡಿಸುವದು ಒಳ್ಳೆಯದು. ಆನಂತರ ಉಸುಬಿನ ಮೇಲೆಯೂ ಬಳಿಕ ಕರೇ ಹಲಗೆಯ ಮೇಲೆಯೂ (ಖಡುವಿನ ಸೆಂಟಿಯಿಂದ) ಬರೆಯಿಸುವದು ಒಳ್ಳೆಯದು. ಈ ಪ್ರಕಾರ ಮಾಡುವದು ಶಕ್ಯವಾಗದಿದ್ದರೆ ಕಾಗದದ ಮೇಲೆ ಸೀಸಪೆನ್ಸಿಲಿನಿಂದ ಬರೆಯಿಸಿದರೆ ಹೆಚ್ಚಿನ ದೋಷವಾಗಲಿಕ್ಕಿಲ್ಲ. ಆರಂಭದಲ್ಲಂತೂ ಪಾಟಿ ಪೆನ್ಸಿಲುಗಳಿಂದ ಸರ್ವಥಾ ಬರೆಯಿಸಕೂಡದು. ಪಾಟಿಪೆನ್ಸಿಲುಗಳನ್ನು ಕೊಟ್ಟು ಬೇಕಾದಷ್ಟು ಬೇಕಾದಂತೆ ಬರೆಯೆಂದು ಹೇಳುವದು ಪಾಲಕರಿಗೂ ಶಿಕ್ಷಕರಿಗೂ ಹಗುರಾಗುವದಾದರೂ ಜವಾಬದಾರಿಯನ್ನು ವಹಿಸಿ ಕೆಲಸ ಮಾಡಿದಂತಾಗಲಿಕ್ಕಿಲ್ಲ.

ಶೀಘ್ರತೆ:—ಬರೆಹದಲ್ಲಿ ಎರಡನೆಯ ಮಹತ್ವವಾದ ಸಂಗತಿಯು ಶೀಘ್ರತೆಯು. ಅಕ್ಷರಗಳನ್ನು ಅಂದವಾಗಿಯೂ ತೀವ್ರವಾಗಿಯೂ ಬರೆಯಲಿಕ್ಕೆ ಕಲಿ

ಯುವದು ಒಳ್ಳೆಯದು. ಬರೆಯಲಿಕ್ಕೆ ವೇಳೆಯು ಹೆಚ್ಚಾಗಿ ಹಿಡಿಯುವಂತಹ ಕ್ರಮವನ್ನು ಬಿಟ್ಟು ಬಿಡಬೇಕು. ಉದಾ:—ಳ, ಹ, ರಾ, ಮುಂತಾದ ಅಕ್ಷರಗಳನ್ನು ಕೆಳಗಿನ ಆಕೃತಿಯಲ್ಲಿ ಮೊದಲು ಬರೆದಂತೆ ಬರೆಯುವದುಂಟು. ಇದು ತಪ್ಪು. ಯಾಕೆಂದರೆ ಈ ಪ್ರಕಾರ ಬರೆಯಲಿಕ್ಕೆ ವೇಳೆಯು ಹೆಚ್ಚು ಬೇಕಾಗುವದು. ಹಾಗು ತೀವ್ರವಾಗಿ ಬರೆಯುವಾಗ ಇವುಗಳ ಆಕಾರಗಳು ವಿಕಾರಹೊಂದುವವು. ಈ ಅಕ್ಷರಗಳನ್ನು ೨ನೆಯ ಸಾಲಿನಲ್ಲಿ ಕೆಳಗೆ ತೋರಿಸಿದಂತೆ ಬರೆಯಬೇಕು:—

ಶೀಘ್ರತೆಯು ಬರೆಹದಲ್ಲಿ ಸಾಧಿಸತಕ್ಕ ಸಂಗತಿಗಳಲ್ಲಿ ಬಹಳ ಮಹತ್ವದ್ದಾಗಿರುವದಾದರೂ ಶೀಘ್ರತೆಯಿಂದ ಅಕ್ಷರಗಳ ರೂಪವು ಕೆಡದಂತೆ ಲಕ್ಷ್ಯ ಕೊಡಬೇಕು.

ಕಾಪಿ ಬರೆಹ.— ಹುಡುಗರು ಉಸುಬಿನ ಮೇಲೆಯೂ ಕರೇ ಹಲಗೆಯ ಮೇಲೆಯೂ, ಸೀಸಪೇನ್ಸಿಲಿನಿಂದ ಕಾಗದದ ಮೇಲೆಯೂ ಬರೆಯುವದನ್ನು ಸಾಕಷ್ಟು ರೂಢಿ ಮಾಡಿದ ಬಳಿಕ ಅವರು ಲೆಕ್ಕಣಿಕೆಯಿಂದ ಬರೆಯುವದನ್ನು ಆರಂಭಿಸಬೇಕು. ೩ನೆಯ ಇಯತ್ತೆಯಿಂದ ಈ ಪ್ರಕಾರ ಬರೆಯಿಸುವದು ನಮ್ಮ ಸಾಲೆಗಳಲ್ಲಿ ಬಳಕೆಯಲ್ಲಿರುವದು. ಇದು ಸರಿಯಾದದ್ದೇ ಎನ್ನಲಿಕ್ಕೆ ಅಡ್ಡಿ ತೋರುವದಿಲ್ಲ. ಕಾಪೀ ಬರೆಯುವದು ಹುಡುಗರಿಗೆ ಕಷ್ಟದಾಯಕವಾದ ಕೆಲಸವು. ಆದದರಿಂದ ಕೆಳಗೆ ಹೇಳಿದ ಸಂಗತಿಗಳ ಕಡೆಗೆ ಲಕ್ಷ್ಯ ಪೂರೈಸಬೇಕು:—

೧. ಲೆಕ್ಕಣಿಕೆಯು ಕೆಲವು ದಿಕ್ಕಿನಲ್ಲಿ ಹೆಚ್ಚು ಘರ್ಷಣವನ್ನೂ ಕೆಲವು ದಿಕ್ಕಿನಲ್ಲಿ ಕಡಿಮೆ ಘರ್ಷಣವನ್ನೂ ಉಂಟು ಮಾಡುವದರಿಂದ ಅಕ್ಷರಗಳ ಆಕಾ

ರವು ಖಡುವಿನಿಂದ ಅಥವಾ ಸೀಸಪೆನ್ಸಿಲಿನಿಂದ ಬರೆದಂತೆ ಸರಿಯಾಗಿ ಬರುವದಿಲ್ಲ. ಆದದರಿಂದ ಲೆಕ್ಕಣಿಕೆಯನ್ನು ಕಾಗದದ ಮೇಲೆ ಒತ್ತಿ ಬರೆಯಕೂಡದು.

೨. ಹುಡುಗರು ಕೈಗೆ ಇಲ್ಲವೆ ಕಾಗದಕ್ಕೆ ಮಸಿ ಹಚ್ಚಿಕೊಳ್ಳುವರು; ಹಾಗು ತಮ್ಮ ಅರಿವೆಗಳನ್ನು ಸಹ ಹೊಲಸು ಮಾಡಿಕೊಳ್ಳುವರು. ದೌತಿಗಳಲ್ಲಿ ಮಸಿಯನ್ನು ಪೂರ್ಣ ತುಂಬದೆ ಅರ್ಧ ಇಂಚಿನಷ್ಟು ಮಾತ್ರ ಹಾಕಿರಬೇಕು. ಹಾಗು ಉರುಳಿದರೂ ಚೆಲ್ಲದಂತಹ ಕಾಜಿನ ದೌತಿಗಳನ್ನು ಉಪಯೋಗಿಸುವದು ಒಳ್ಳೆಯದು.

೩. ಲೆಕ್ಕಣಿಕೆಗಳನ್ನು ಹುಡುಗರು ಆರಂಭದಲ್ಲಿ ಬಿಗಿಯಾಗಿಯೂ ಡೊಂಕಾಗಿಯೂ ಹಿಡಿಯುವದುಂಟು. ನಮ್ಮ ಕೈಯನ್ನು ಸಹಜವಾಗಿ ಕೆಳಗೆ ಇಳಿಬಿಟ್ಟಾಗ ಬೆರಳುಗಳು ಯಾವ ಸ್ಥಿತಿಯಲ್ಲಿರುವವೋ ಬಹುಶ ಅದೇ ಸ್ಥಿತಿಯಲ್ಲಿ ಲೆಕ್ಕಣಿಕೆಯನ್ನು ಹಿಡಿದಿರುವಾಗಲೂ ಅವು ಇರಬೇಕು. ಇದರಿಂದ ಲೆಕ್ಕಣಿಕೆಯನ್ನು ಯೋಗ್ಯ ರೀತಿಯಿಂದ ಹಿಡಿಯುವ ಕ್ರಮವು ಯಾವದೆಂಬದು ಗೊತ್ತಾಗಬಹುದು. ಇದಲ್ಲದೆ ಲೆಕ್ಕಣಿಕೆಯನ್ನು ಬೆರಳುಗಳಿಂದ ಬಿಗಿಯಾಗಿ ಹಿಡಿಯಬಾರದೆಂಬದನ್ನು ಆಕಾಲದಲ್ಲಿ ಗಮನಿಸಬೇಕು.

೪. ಬರೆಯುವ ಪುಸ್ತಕಗಳನ್ನು ತೊಡೆಯ ಮೇಲಿಟ್ಟುಕೊಂಡು ಹುಡುಗರು ತಮ್ಮ ಅಕ್ಷರಗಳನ್ನು ಕೆಡಿಸಿಕೊಳ್ಳುವರಲ್ಲದೆ ಶರೀರಕ್ಕೆ ಅಪಾಯವನ್ನುಂಟು ಮಾಡಿಕೊಳ್ಳುವರು. ಶ್ರೀಯುತ ಆರ್. ಎಸ್. ಕುಲಕರ್ಣಿಯವರು ಮಾಡಿದಂತಹ ಡೆಸ್ಕುಗಳನ್ನು ಉಪಯೋಗಿಸುವದರಿಂದ ಈ ಅಪಾಯಗಳುಂಟಾಗಲಿಕ್ಕಿಲ್ಲ.

ಇನ್ನು ಬರೆಹದ ಅಕ್ಷರಗಳ ಪ್ರಮಾಣ ಮೊದಲಾದ ವಿಷಯಗಳಲ್ಲಿ ಕೆಲವು ಸೂಚನೆಗಳನ್ನು ಮಾಡುವೆವು: —

೧ ಬೇರೆ ಬೇರೆ ಇಯತ್ತೆಯವರು ಸಾಮಾನ್ಯವಾಗಿ ಬರೆಯತಕ್ಕ ಕಾಪಿಯ ಅಕ್ಷರಗಳ ಎತ್ತರಗಳು ಕೆಳಗಿನಂತೆ ಇರಬೇಕು: —

೨ನೇ	ಇಯತ್ತೆ	೧"
೩ನೇ	,,	೩/೪"
೪ನೇ	,,	೧/೨"
೫ನೇ	,,	೧/೪"

ಕೆಲವು ಹುಡುಗರು ಮಧ್ಯದಲ್ಲಿಯೇ ಸಾಲೆ ಬಿಟ್ಟು ಹೋಗುವದರಿಂದಲೂ ನಮ್ಮ ಕೊನೆಯ ಧ್ಯೇಯವು ವ್ಯವಹಾರದಲ್ಲಿ ಬಳಕೆಯಲ್ಲಿರುವ ಸಣ್ಣ ಅಕ್ಷರಗ

ಳಿರುವದರಿಂದಲೂ ಕಾಪಿ ಬರೆಹದಲ್ಲಿ ಸುಮಾರು ೩/೮" ಎತ್ತರವಾದ ಸಣ್ಣ ಅಕ್ಷರ ಗಳನ್ನು ಸಹ ಬರೆಯಿಸಬೇಕು.

೨ ಗೆರೆಗಳ ನಡುವೆ ಬರೆಯಿಸುವದು ಆರಂಭದಲ್ಲಿ ಅವಶ್ಯವು. ಬಳ ಬರುತ್ತ ಒಂದೇ ಗೆರೆಯ ಮೇಲೆ ಇಲ್ಲವೆ ಗೆರೆಯಿಲ್ಲದೆ ಬರೆಯುವದನ್ನು ರೂಢಿ ಮಾಡಿಸಬೇಕು.

೩ ಅಕ್ಷರಗಳಂತೆ ಅಂಕೆಗಳನ್ನಾದರೂ ಬರೆಯಿಸುವದು ಅವಶ್ಯವು.

೪ "ದರಬಂದಗಿ" ಮುಂತಾದ ಅರ್ಥವಾಗದ ಮಾತುಗಳನ್ನು ಬರೆಯಿಸುವ ಬದಲು ಅರ್ಥವುಳ್ಳ ಬೇರೆ ಬೇರೆ ಮಾತುಗಳನ್ನು ಬರೆಯಿಸುವದರಿಂದ ಅನಾಯಾಸವಾಗಿ ಹುಡುಗರಿಗೆ ಹೆಚ್ಚಿನ ಲಾಭ ಮಾಡಿಕೊಟ್ಟಂತಾಗುವದಲ್ಲದೆ ಬೇರೆ ಬೇರೆ ಅಕ್ಷರಗಳನ್ನು ಬರೆಯುವ ರೂಢಿ ಮಾಡಿಸಿದಂತಾಗುವದು.

೫ ಶೀಘ್ರತೆಯು ಮಹತ್ವದ ಆಕಾಂಕ್ಷೆಯಾಗಿರುವದರಿಂದ ಹುಡುಗರು ಹೆಚ್ಚು ಹೆಚ್ಚು ಶೀಘ್ರ ಬರೆಯುವದನ್ನು ರೂಢಿ ಮಾಡಬೇಕು. ಆದರೆ ಅಕ್ಷರಗಳ ಆಕಾರವು ಕೆಡದಂತೆ ನೋಡಿಕೊಳ್ಳಬೇಕು.

ಕೆಳಗಿನ ಇಯತ್ತೆಗಳ ಬರೆಹ:—ಸಾಲೆಗಳಿಂದ ಪಾಟಿಗಳನ್ನು ಹೊರಹಾಕುವದು ಕೆಲವು ವರ್ಷಗಳ ವರೆಗಾದರೂ ಆಗದ ಮಾತು. ಸದ್ಯಕ್ಕೆ ಅವುಗಳನ್ನು ಉಪಯೋಗಿಸಿದ ಹೊರತು ಗತ್ಯಂತರವಿಲ್ಲ. ಅವುಗಳನ್ನು ಕೆಳಗಿನ ಇಯತ್ತೆಗಳಲ್ಲಿ ಉಪಯೋಗಿಸುವದಾದರೆ ೧" (ಬಿನ್ ಇ. ಗೆ), ೩/೪" (೧ನೇ ಇ. ಗೆ), ೩/೮" (೨ ಹಾಗೂ ೩ನೇ ಇ. ಗೆ.) ಗೆರೆಗಳನ್ನು ಹಾಕಿಕೊಟ್ಟು ಹುಡುಗರು ಗೆರೆ ತುಂಬ ಬರೆಯುವಂತೆಯೂ ಮಿದುವಾದ ಪೆನ್ಸಿಲುಗಳನ್ನು ಉಪಯೋಗಿಸುವಂತೆಯೂ ಶಿಕ್ಷಕರು ಲಕ್ಷ್ಯ ಪೂರೈಸಬೇಕು. ೨" ಗಿಂತ ಸಣ್ಣ ಪೆನ್ಸಿಲುಗಳನ್ನು ಸಾಲೆಗಳಲ್ಲಿ ತರಗೊಡಬಾರದು.

ಕನ್ನಡ ಲಿಪಿ:—ಜಗತ್ತಿನ ಲಿಪಿಗಳಲ್ಲಿ ಕನ್ನಡ ಲಿಪಿಯಷ್ಟು ಸುಂದರವಾದ ಲಿಪಿಯು ಯಾವದೂ ಇಲ್ಲವೆಂದು ಹಿಂದೆ ವ್ಹರ್ನಾಕ್ಯುಲರ ಟೆಕ್ಸ್ಟ ಬುಕ್ ಕಮಿಟಿಯ ಅಧ್ಯಕ್ಷರಾಗಿದ್ದ ಹಾಗು ಮುಂಬಯಿ ಇಲಾಖೆಯ ಡಿರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನರಾಗಿದ್ದ ಜೇ. ಜೀ. ಕಾವ್ಹರ್ನ್‌ಟನ್ ಸಾಹೇಬರು ಹೇಳಿದ್ದಾರೆ. ಇದರ ಮೂಲ ಸ್ವರೂಪವು ಬದಲಾಗದಂತೆ ನೋಡಿಕೊಳ್ಳುವದು ಮುಖ್ಯವಾಗಿ ಶಿಕ್ಷಕರ ಹಾಗು ಅಚ್ಚಿನ ಮನೆಯವರ ಕರ್ತವ್ಯವು. ಈಗ ಪ್ರಚಾರದಲ್ಲಿರುವ ಕಾಪೀ ಬುಕ್ಕುಗಳಲ್ಲಿ ಕೆಲವುಗಳ ಅಕ್ಷರಗಳು ಮಾದರಿಯಾಗಿಟ್ಟುಕೊಳ್ಳಲಿಕ್ಕೆ ಯೋಗ್ಯವಾದವುಗಳಿರುವದಿಲ್ಲ. ಹಿಂದೆ ಧಾರವಾಡ ಟ್ರೇನಿಂಗ್ ಕಾಲೇಜದ ಪ್ರಿನ್ಸಿಪಾಲರಾಗಿದ್ದ ಶ್ರೀಯುತ ಆರ್ ಎಸ್ ಕುಲಕರ್ಣಿಯವರು ಅಕ್ಷರಗಳ ಆಕಾ

ರಗಳ ಸಂಬಂಧದಿಂದ ವಿಶೇಷ ಪರಿಶ್ರಮಮಾಡಿ ಅಕ್ಷರ ಪಟಗಳನ್ನೂ ಕಾಪೀ ಬುಕ್ಕುಗಳನ್ನೂ ರಚಿಸಿರುವರು. ಇವು ಅನುಕರಣಕ್ಕೆ ಯೋಗ್ಯವಾಗಿರುವದರಿಂದ ಸಾಲೆಗಳಲ್ಲಿ ಅವುಗಳನ್ನು ಮಾದರಿಗಾಗಿ ಇಟ್ಟುಕೊಳ್ಳಬಹುದು.

ಸಾಲೆಗಳಲ್ಲಿ ಕೆಲವು ಅಕ್ಷರಗಳನ್ನು ಬರೆಯುವದರಲ್ಲಿ ಕಂಡುಬರುವ ದೋಷಗಳನ್ನು ಕೆಳಗೆ ಕೊಡುವೆವು.

೧. ಅನುಸ್ವಾರದ ಚಿಹ್ನವು ಉಳಿದ ಅಕ್ಷರಗಳಷ್ಟೇ ಇರತಕ್ಕದ್ದು, ಸಣ್ಣದಿರಕೂಡದು.

೨. ಅಕ್ಷರಗಳು ಮೇಲೆ ತೋರಿಸಿದಂತೆ ವಿಸ್ತೃತವಾಗಿರದೆ ಶಕ್ಯವಿದ್ದಷ್ಟು ಸಂಕ್ಷಿಪ್ತವಾಗಿರಬೇಕು. ಉದಾ: ಮೊ, ಯೊ ಇತ್ಯಾದಿ.



೩. ಸರ್ವಸಾಮಾನ್ಯವಾಗಿ ಗೊತ್ತು ಮಾಡಲ್ಪಟ್ಟ ಆಕಾರವನ್ನೇ ಅನು ಸರಿಸಬೇಕು. ಯೋಗ್ಯವೂ (ಮೇಲಿನವು), ಅಯೋಗ್ಯವೂ (ಕೆಳಗಿನವು) ಅದ ಕೆಲವು ಅಕ್ಷರಗಳನ್ನು ಕೆಳಗೆ ಕೊಟ್ಟದೆ.



ರೊಡ್ಡರ ಬರೆಹ :—ನಮ್ಮ ಎರಡೂ ಕೈಗಳು ಸರಿಯಾಗಿರುವವೆಂದ ನಮಗೆ ತೋರಿದರೂ ನಿಜವಾಗಿ ಒಂದು ಕೈಯು ಇನ್ನೊಂದಕ್ಕಿಂತ ಗಾತ್ರ ಲ್ಲಿಯೂ ಉದ್ದಳತೆಯಲ್ಲಿಯೂ ಶಕ್ತಿಯಲ್ಲಿಯೂ ಸ್ವಲ್ಪ ದೊಡ್ಡದಿರುವದು. ಬಹ ತರವಾಗಿ ನಮ್ಮ ಬಲಗೈಯು ಎಡಗೈಗಿಂತ ದೊಡ್ಡದಿರುವದು. ಕೆಲಕೆಲ ವ್ಯಕ್ತಿಗಳ ಎಡಗೈಯು ಬಲಗೈಗಿಂತ ದೊಡ್ಡದಿರುವದು. ಇಂಥವರಿಗೆ ಎಡಗೈಯ ವರು (ಅಥವಾ ರೊಡ್ಡರು) ಎನ್ನುವರು. ಇವರಿಗೆ ಎಡಗೈಯಿಂದ ಕೆಲ ಮಾಡುವ ಸಾಮರ್ಥ್ಯವು ಬಲಗೈಗಿಂತ ಹೆಚ್ಚಾಗಿರುವದು. ಇವರು ಸ್ವಾಭಾವಿ ವಾಗಿ ಎಡಗೈಯಿಂದಲೇ ಬರೆಯಲಿಕ್ಕೆ ಯತ್ನಿಸುವರು. ಆದರೆ ಇದು ಸಮಾ ದಲ್ಲಿ ಚಂದಕಾಣುವದಿಲ್ಲವೆಂದು ಪಾಲಕರು ಅವರಿಗೆ ಬಲಗೈಯಿಂದಲೇ ಬರೆಯ ಲಿಕ್ಕೆ ಒತ್ತಾಯಪಡಿಸುವದುಂಟು. ಶಿಕ್ಷಕರು ಸಹ ಕೆಲವರು ಇದೇ ಪ್ರಕಾ ಮಾಡುವದುಂಟು. ಆದರೆ ಇದು ತಪ್ಪು. ಈಗಿನ ಕಾಲದಲ್ಲಿ ಯಾವದೊಂದ

ವಿಷಯದಲ್ಲಿ ವಿಶಿಷ್ಟ ಪ್ರಾವೀಣ್ಯವನ್ನು ಪಡೆದ ಹೊರತು ಜೀವನಕಲಹದಲ್ಲಿ ಜಯ ಸಂಪಾದಿಸುವದು ಅರಿದಾಗಿದೆ. ವಿಶಿಷ್ಟ ಕೈಯಲ್ಲಿ ಆದಷ್ಟು ಹೆಚ್ಚು ಪ್ರಾವೀಣ್ಯವನ್ನು ಪಡೆದು ಮೇಲಾಟಕ್ಕೆ ಅವಶ್ಯವಿರುವ ಸಾಮರ್ಥ್ಯವನ್ನು ಪಡೆಯುವದು ಅವಶ್ಯವು. ಇಂತಹ ಸ್ಥಿತಿಯಲ್ಲಿ ರೊಡ್ಡರ ದುರ್ಬಲವಾದ ಬಲಗೈಯನ್ನು ಬೆಳಿಸಲಿಕ್ಕೆ ಪ್ರಯತ್ನಿಸುವದು ಜಾಣತನವಾಗಲಾರದು. ಪೂರ್ಣ ಬೆಳವಣಿಗೆಯನ್ನು ಹೊಂದಬಹುದಾದ ಎಡಗೈಯನ್ನು ಬೆಳಿಸುವ ಪ್ರಯತ್ನವಿಡುವದು ಸರಿಯಾದದ್ದು. ಆದ್ದರಿಂದ ಎಡಗೈಯವರಿಗೆ ಎಡಗೈಯಿಂದಲೇ ಬರೆಯಹೇಳುವದು ಶಿಕ್ಷಕನ ಕರ್ತವ್ಯವು. ಇದಲ್ಲದೆ ಎಡಗೈಯವರಿಗೆ ಬಲಗೈಯಿಂದ ಬರೆಯಲಿಕ್ಕೆ ಹಚ್ಚುವದರಿಂದ ಉಗ್ಗುವದು ಮುಂತಾದ ಅನಿಷ್ಟ ಪರಿಣಾಮಗಳಾಗುವವೆಂದು ಬಲ್ಲವರ ಅಭಿಪ್ರಾಯವಿದೆ.

ಶಿಕ್ಷಣ ಸಂಸ್ಥೆಗಳಲ್ಲಿ ವಾಚನ ಕಲಿಸುವ ಪದ್ಧತಿಗಳು.

(ಕಳೆದ ಶಿಕ್ಷಣ ಯೋಜನೆಯಲ್ಲಿ ಪಂ। ಪೂಜಾರರು ಮಾಡಿದ ಉಪನ್ಯಾಸ)

ಮನುಷ್ಯನು ತಾನು ಜ್ಞಾನವನ್ನು ಪಡೆಯಬೇಕು; ಪರರಿಗೆ ಜ್ಞಾನವನ್ನೀಯಬೇಕು; ಈ ಕರ್ತವ್ಯವನ್ನು ಜರುಗಿಸುವುದಕ್ಕೆ ವಾಚನವು ಇಲ್ಲವೆ ಓದು ಆವಶ್ಯಕವು. ಮನುಷ್ಯನು ಓದಿ ಜ್ಞಾನವಂತನಾಗುವನು, ಓದಿ ಪರರಿಗೆ ಜ್ಞಾನವನ್ನೀಯುವನು. ಈ ಮೇರೆಗೆ ಜ್ಞಾನ ಸಂಗ್ರಹಕ್ಕೂ ಜ್ಞಾನ ದಾನಕ್ಕೂ ವಾಚನವು ಮುಖ್ಯಸಾಧನವು. ಆದದರಿಂದ ಸಾಲೆಗಳಲ್ಲಿ ವಾಚನವು ಮುಖ್ಯ ವಿಷಯವೆಂದೆಣಿಸಲ್ಪಡುವುದಲ್ಲದೆ ಅದನ್ನು ಕಲಿಸುವುದರಲ್ಲಿ ಹೆಚ್ಚಿನ ಗಮನವು ಕೊಡಲ್ಪಡುತ್ತಿದೆ. ಅದನ್ನು ಕಲಿಸುವ ಪದ್ಧತಿಯಲ್ಲಿ ಅಭಿಜ್ಞರಿಂದ ಕಾಲಕಾಲಕ್ಕೆ ಉಂಟಾದ ಮಾರ್ಪಾಡುಗಳನ್ನು ಗಮನಿಸಿ ನಮ್ಮ ಕೆಲಸವು ಸುಪರಿಣಾಮಕರವಾಗುವಂತೆ ಮಾಡಿಕೊಳ್ಳುವದು ನಮ್ಮ ಕರ್ತವ್ಯವೆಂದು ಶಿಕ್ಷಕರಾದ ನಾವೆಲ್ಲರು ಒಪ್ಪಬೇಕಾದುದೇ ಸರಿ.

(ನೆರೆದ ಶಿಕ್ಷಕವೃಂದವನ್ನು ಸಂಬೋಧಿಸಿ) ತಮ್ಮಲ್ಲಿ ಹಲವರು ತಮ್ಮ ಬಹುಕಾಲದ ವ್ಯವಸಾಯದ ಅನುಭವದಿಂದ ವಾಚನ ಪಾಠಗಳನ್ನು ಪರಿಣಾಮಕರವಾಗುವಂತೆ ಕಲಿಸುವ ಪದ್ಧತಿಯನ್ನು ನೆಲೆಗೊಳಿಸಿಕೊಂಡವರಿರಬಹುದು; ಹಲವರು ತಕ್ಕ ಪದ್ಧತಿಯನ್ನು ಗೊತ್ತುಮಾಡಿಕೊಳ್ಳುವುದರಲ್ಲಿ ತೊಡಗಿದವರಿರಬಹುದು; ಹೊಸಬರಾದ ಕೆಲವರು ತಕ್ಕಪದ್ಧತಿ ಯಾವುದೆಂಬದನ್ನು ಇನ್ನೂ ಅರಿಯದವರಿರಬಹುದು. ಈಗ ನಾನು ಇಲ್ಲಿಯ ಶಿಕ್ಷಣ ಸಂಸ್ಥೆಗಳಲ್ಲಿ ನಡೆಯುತ್ತಿರುವ ಪದ್ಧತಿಗಳನ್ನು ತಮ್ಮ ಮುಂದೆ ಇರಿಸು

ವೆನು. ಇದರಿಂದ ಮೊದಲಿನ ವರ್ಗದ ಶಿಕ್ಷಕರು ತಮ್ಮಲ್ಲಿ ನೆಲೆಗೊಂಡ ಪದ್ಧತಿಗೂ ಪದ್ಧತಿಗಳಿಗೂ ತುಲನೆಮಾಡಿಕೊಂಡು ತಕ್ಕ ಮಾರ್ಪಾಡುಗಳನ್ನು ಮಾಡಿಕೊಳ್ಳು ದರಿಂದ, ನಡುವಿನ ವರ್ಗದವರು ಇಲ್ಲಿ ಹೇಳುವ ಪದ್ಧತಿಗಳನ್ನು ಅನುಸರಿಸಿ ಅನುಭ ದಿಂದ ಸರಿದೋರಿದಲ್ಲಿ ಇವನ್ನೇ ಮುಂದೆಯೂ ಅನುಸರಣಮಾಡಿ, ಮೂರನೆಯ ವರ್ಗ ವರು ಶಿಕ್ಷಣ ಸಂಸ್ಥೆಗಳಲ್ಲಿ ಅನುಸರಿಸುವ ಪದ್ಧತಿಗಳು ಪ್ರಯೋಗದಿಂದ ಸುಪರಿಣಾಮಕ ಗಳೆಂದು ಮನಗಂಡಿರುವುವೆಂದು ತಾವೂ ನಿರ್ಭಯದಿಂದ ಇವನ್ನು ಅನುಸರಣಮಾ ಹೀಗೆ ಎಲ್ಲರೂ ಪ್ರಯೋಜನವನ್ನು ಹೊಂದಬಹುದೆಂಬ ಆಶೆಯುಂಟು.

ಟ್ರೇನಿಂಗ್ ಸ್ಕೂಲಿನಲ್ಲಿ ಅನುಸರಿಸುವ ಪದ್ಧತಿಯ ಮೆಟ್ಟುಗಳು.

೧. ಆರಂಭ. (ಉಪೋದ್ಘಾತ)

೨. ಶಿಕ್ಷಕನ (ಅರ್ಥಬೋಧಕ) ವಾಚನ.

೩. ವಿದ್ಯಾರ್ಥಿಗಳ ಮೌನ ವಾಚನೆ.

೪. ಪಾಠದ ಸಾರಾಂಶವನ್ನು ಕೇಳಿಕೊಳ್ಳುವುದು.

೫. ಅರ್ಥವಿವರಣೆ.

೬. ಶಿಕ್ಷಕನ ಮಾದರಿ ವಾಚನ.

೭. ವಿದ್ಯಾರ್ಥಿಗಳ ವಾಚನ.

೮. ಮುಗಿಸುವುದು; (ಪಾಠದೊಳಗಿನ ಕಠಿಣ ಶಬ್ದಗಳನ್ನು ಉಪಯೋಗಿಸಿ ವಾಕ್ಯಗಳನ್ನು ರಚಿಸುವುದು, ವ್ಯಾಕರಣ ವಿಚಾರ ಮು

ಈ ಮೆಟ್ಟುಗಳ ಸಂಕ್ಷಿಪ್ತ ವಿವರಣೆ.

(೧) **ಆರಂಭ (ಉಪೋದ್ಘಾತ)** — ಪಾಠಕ್ಕೆ ವಿದ್ಯಾರ್ಥಿಗಳನ್ನು ಅಭಿ ಮುಖ ಮಾಡಿಕೊಳ್ಳುವುದಕ್ಕೆ ಉಪಯುಕ್ತವಾದ ಚಿಕ್ಕ ಉಪೋದ್ಘಾತವು. ವಾಚನ ಪಾಠಗಳಲ್ಲಿ ಕೆಲವು ಪಾಠಗಳು ಸುಲಭವಾಗಿರುವವು; ಕೆಲವು ಕಠಿಣವಾಗಿರುವವು ಪಾಠವು ಸುಲಭವಾದುದಿದ್ದರೆ ಪಾಠಕ್ಕೆ ಸಂಬಂಧಿಸಿದ ಕೆಲವು ಮಾತುಗಳನ್ನು ಕೇಳಿ ಕೊಂಡು ಪಾಠವನ್ನು ಆರಂಭಿಸಬೇಕು. ಹಿಂದೆ ಬಂದ ಪಾಠಕ್ಕೆ ಸಂಬಂಧಿಸಿದ ಪಾಠ ವಿದ್ದರೆ ಆ ಪಾಠದ ಸಂಬಂಧವನ್ನು ಜೋಡಿಸುವಂತೆ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕು. ಕಠಿಣವಾದುದಿದ್ದರೆ ಪಾಠದ ಸಾರಾಂಶವು ವಿದ್ಯಾರ್ಥಿಗಳಿಗೆ ತಿಳಿಯುವಂತೆ ಪಾಠದ ಮುಖ್ಯ ಮುಖ್ಯ ವಿಷಯುಗಳನ್ನು ಕುರಿತು ವಿದ್ಯಾರ್ಥಿಗಳೊಡನೆ ಮಾತಾಡಿ ಪಾಠವನ್ನು ಆರಂಭಿಸಬೇಕು. ಎಲ್ಲ ಪಾಠಗಳಿಗೆ ಒಂದೇ ತರದ ಉಪೋದ್ಘಾತವಾಗದಂತೆಯೂ ಅದು ಬಹಳ ಬೆಳೆಯದಂತೆಯೂ ಎಚ್ಚರಗೊಳ್ಳಬೇಕು.

(೨) **ಶಿಕ್ಷಕನ (ಅರ್ಥಬೋಧಕ) ವಾಚನ**—ಶಿಕ್ಷಕನು ಇಡಿ ಪಾಠ ವನ್ನು ವಿದ್ಯಾರ್ಥಿಗಳೆದುರಿಗೆ ಓದುವದು, ಪಾಠದ ವಿಷಯವು ವಿದ್ಯಾರ್ಥಿಗಳ ಲಕ್ಷ

ದಲ್ಲಿ ಬರುವಂತೆ ಮಾಡುವದು ಇದರ ಉದ್ದೇಶ್ಯವು. ಈ ಉದ್ದೇಶ್ಯವು ಈಡೇರಬೇಕಾದರೆ ಶಿಕ್ಷಕನ ವಾಚನವು ಮಾದರಿಯಾಗಿರಬೇಕು. ವಿದ್ಯಾರ್ಥಿಗಳು ಅರ್ಥಗ್ರಹಣ ಮಾಡುವುದಕ್ಕೆ ಅನುಕೂಲವಾಗುವಂತೆ ಶಿಕ್ಷಕನ ವಾಚನವು ಆ ಆ ತರಗತಿಗನುಸರಿಸಿ ತಕ್ಕಷ್ಟು ಸಾವಕಾಶವಾಗಿರಬೇಕು.

(೩) ವಿದ್ಯಾರ್ಥಿಗಳ ಮೌನ ವಾಚನ— ವಿದ್ಯಾರ್ಥಿಗಳು ವಿಷಯವನ್ನು ತಿಳಿದುಕೊಳ್ಳುತ್ತ ಇಡಿ ಪಾಠವನ್ನು ಮನಸ್ಸಿನಲ್ಲಿ ಓದಿಕೊಳ್ಳುವುದು. ವಿದ್ಯಾರ್ಥಿಗಳು ಪಾಠದಲ್ಲಿ ಬಂದಿರುವ ವಿಷಯವನ್ನು ಸ್ವಪ್ರಯತ್ನದಿಂದ ಗ್ರಹಿಸುವುದೇ ಇದರ ಉದ್ದೇಶ್ಯವು. ಅವಧಾನವು ಏಕಾಗ್ರವಾಗುವುದಕ್ಕಾಗಿ ಈ ವಾಚನವು ಏನೂ ಸದ್ದಾಗದಂತೆ ಸಾಗಬೇಕು. ಬಾಯಿಂದ ಓದುವುದಲ್ಲ, ಕಣ್ಣಿಂದ ಓದುವುದು ಎಂದು ಶಿಕ್ಷಕನು ವಿದ್ಯಾರ್ಥಿಗಳನ್ನು ಎಚ್ಚರಿಸಬೇಕು. ವಿದ್ಯಾರ್ಥಿಯು ತಾನೇ ಕಲಿಯಬೇಕೆಂಬ ಶಿಕ್ಷಣದ ಮುಖ್ಯ ತತ್ತ್ವವನ್ನನುಸರಿಸಿ ಇದರಲ್ಲಿ ಶಿಕ್ಷಕನು ವಿದ್ಯಾರ್ಥಿಗೆ ಹೆಚ್ಚಾಗಿ ನೆರವಾಗಬಾರದು.

ಮೌನ ವಾಚನವು ನಡೆದಾಗ ವಿದ್ಯಾರ್ಥಿಗಳಿಗೆ ನಡುನಡುವಿನ ಒಂದೊಂದು ಶಬ್ದದ ಅರ್ಥವು ತಿಳಿಯದಿರಬಹುದು. ಆಗ ಅವರ ಮುಂದಿನ ವಾಚನವು ತಡೆದು ನಿಲ್ಲುವದು; ಆಗ ಆ ಶಬ್ದದ ಅರ್ಥವನ್ನು ಶಿಕ್ಷಕನು ಒಬ್ಬೊಬ್ಬನಿಗೇ ತಿಳಿಸಿಕೊಡಬೇಕು. ವಿದ್ಯಾರ್ಥಿಗಳು ತಮಗೆ ತಿಳಿಯದಿರುವ ಅಂಶವನ್ನು ಕೇಳಿಕೊಳ್ಳುವುದಕ್ಕಾಗಿ ಕೈಯೆತ್ತಬೇಕು. ಆಗ ಶಿಕ್ಷಕನು ಆ ವಿದ್ಯಾರ್ಥಿಯ ಬಳಿಗೆ ಹೋಗಿ ಬೇರೆ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಸಣ್ಣ ದನಿಯಿಂದ ಅವನಿಗೆ ಅದರ ಅರ್ಥವನ್ನು ತಿಳಿಸಿ ಹೇಳಬೇಕು. ಪಾಠದೊಳಗೆ ಕೆಲವು ಶಬ್ದಗಳು ಬಹು ಜನ ವಿದ್ಯಾರ್ಥಿಗಳಿಗೆ ತಿಳಿಯದಂತಹವಿರಬಹುದು. ಅವುಗಳ ಅರ್ಥವನ್ನು ಶಿಕ್ಷಕನು ಮೊದಲೇ ಕರಿಯ ಹಲಗೆಯ ಮೇಲೆ ಬರೆದಿಡಬಹುದು. ಇದು ವಿದ್ಯಾರ್ಥಿಗೆ ಕೋಶ (ಡಿಕ್ಸನರಿ) ದಂತೆ ಸಹಾಯಕವಾಗುವುದು. ಕರಿಯ ಹಲಗೆಯ ಮೇಲೆ ಬರೆದ ಪ್ರತಿ ಶಬ್ದದಿಂದ ಇಲ್ಲವೆ ಸಂಕ್ಷಿಪ್ತ ವಿವರಣೆಯಿಂದ ವಿದ್ಯಾರ್ಥಿಗೆ ಅದರ ಸರಿಯಾದ ಜ್ಞಾನವಾಯಿತೆಂದು ಮಾತ್ರ ಶಿಕ್ಷಕನು ತಿಳಿಯಬಾರದು.

(೪) ಪಾಠದ ಸಾರಾಂಶವನ್ನು ಕೇಳಿಕೊಳ್ಳುವುದು — ಪಾಠದ ಮುಖ್ಯ ಮುಖ್ಯ ವಿಷಯಗಳನ್ನು ಕುರಿತು ಕ್ರಮದಿಂದ ಕೆಲವು ಪ್ರಶ್ನೆಗಳನ್ನು ಕೇಳಿ ಹುಡುಗರ ಮನಸ್ಸಿನಲ್ಲಿ ಇಡಿ ಪಾಠದ ವಿಷಯವು ಬಿಂಬಿಸಿದೆಯೋ ಇಲ್ಲವೋ ಎಂಬವನ್ನು ನೋಡುವುದು. ಮೌನವಾಚನದಿಂದ ಹುಡುಗರು ಪಾಠವನ್ನು ತಿಳಿದುಕೊಂಡರೋ ಇಲ್ಲವೋ ಎಂಬದನ್ನು ಪರೀಕ್ಷಿಸುವುದೇ ಇದರ ಉದ್ದೇಶ್ಯವು.

(೫) ಅರ್ಥವಿವರಣೆ — ಹುಡುಗರು ಸರಿಯಾಗಿ ತಿಳಿದುಕೊಂಡಿರಲಾರದೆಂದೆನಿಸುವ ಶಬ್ದಗಳು, ವಾಕ್ಯಗಳು ಇವುಗಳನ್ನು ಶಿಕ್ಷಕನು ವಿವರಿಸಿ ಹೇಳುವದು,

ಪಾಠದ ಎಲ್ಲ ಭಾಗಗಳನ್ನು—ವಿಶೇಷವಾಗಿ ಕಠಿಣ ಭಾಗಗಳನ್ನು—ಸರಿಯಾಗಿ ತಿಳಿಯು ವುದೇ ಇದರ ಉದ್ದೇಶ್ಯವು. ಕಠಿಣ ಶಬ್ದಗಳಿಗೆ ಪ್ರತಿ ಶಬ್ದಗಳನ್ನು ಮಾತ್ರ ಹೇಳಿ ಅರ್ಥವಿವರಣೆಯಾದಂತಾಗಲಿಲ್ಲವೆಂಬುದನ್ನು ಶಿಕ್ಷಕನು ಮರೆಯಬಾರದು. ನಾಗ ಪಂಚಮಿ ಎಂದರೆ ಹಿಂದು ಜನರ ಒಂದು ಹಬ್ಬ, ಶ್ರಾವಣಮಾಸದ ಪಂಚಮಿಯ ದಿನ ಮಾಡುವ ಹಬ್ಬ ಮೊದಲಾಗಿ ಹೇಳಿದರೆ ಅದರ ಅರ್ಥವು ಸರಿಯಾಗಿ ತಿಳಿಯಲಾರದ ಆ ದಿವಸ ಯಾವ ಯಾವ ಸಮಾರಂಭಗಳನ್ನು ಮಾಡುವರೆಂಬವನ್ನು ವಿದ್ಯಾರ್ಥಿ ನೆನಪಿಗೆ ತಂದು ಕೊಡಬೇಕು. ಕಠಿಣ ವಾಕ್ಯಗಳ ಅರ್ಥವನ್ನು ಹಲವು ವಾಕ್ಯಗಳಿಂ ವಿವರಿಸಿ ಹೇಳಬೇಕು.

(೬) **ಶಿಕ್ಷಕನ ಮಾದರಿ ವಾಚನ**— ಮಾದರಿ ವಾಚನವೆಂದರೇನೆಂ ದನ್ನು ಶಿಕ್ಷಕರಾದ ನೀವೆಲ್ಲರೂ ಬಲ್ಲಿರಿ. ಶಿಕ್ಷಕನು ಇಡಿ ಪಾಠವನ್ನು ವಿದ್ಯಾರ್ಥಿ ಇದಿರಿಗೆ ಮಾದರಿಯಾಗುವಂತೆ ಓದುವುದು. ಇದರಿಂದ ಇಡಿ ಪಾಠದ ವಿಷಯ ವಿದ್ಯಾರ್ಥಿಗಳ ಲಕ್ಷದಲ್ಲಿ ಬರುವುದಂತೂ ಸರಿಯೆ; ಆದರೆ ಹುಡುಗರಿಗೆ ಸರಿಯಾ ವಾಚನವನ್ನು ತೋರಿಸುವುದೇ ಇದರ ಮುಖ್ಯೋದ್ದೇಶ್ಯವಾಗಿರುವುದು. ಉಚ್ಚಾರಣೆ ಸ್ಪಷ್ಟತೆ, ಭಾವಗಳನ್ನು ಪ್ರಕಟಿಸುವುದಕ್ಕೆ ಬೇಕಾಗುವ ಆಘಾತ, ಧ್ವನಿಭೇದ, ಏ ಇಳುವು, ವಿರಾಮ ಮೊದಲಾದವುಗಳನ್ನು ಅನುಕರಿಸುವುದಕ್ಕೆ ಈ ವಾಚನವು ವಿದ್ಯಾ ರ್ಥಿಗೆ ಪೂರ್ಣ ಸಹಾಯಕವಾಗಬೇಕು.

(೭) **ವಿದ್ಯಾರ್ಥಿಗಳ ವಾಚನ**—ಸ್ವಲ್ಪ ಸ್ವಲ್ಪ ಭಾಗವನ್ನು ಒಬ್ಬೊ ವಿದ್ಯಾರ್ಥಿಯಿಂದ ಓದಿಸುತ್ತ ಇಡಿ ಪಾಠವನ್ನು ಮುಗಿಸುವುದು. ಪರರಿಗೆ ಸಹಜವಾ ತಿಳಿಯುವಂತೆ ಓದುವುದನ್ನು—ಎಂದರೆ ಓದುವ ಕಲೆಯನ್ನು—ಕಲಿಸುವುದೇ ಇದರ ಉದ್ದೇ ಶ್ಯವು. ಒಂದು ಪಾಠದಲ್ಲಿ ಭಾವಗರ್ಭಿತವಾದ—ಎಂದರೆ ಓದುವುದಕ್ಕೆ ಕಠಿಣವಾದ ವಾಕ್ಯಗಳು ಕೆಲವು ಮಾತ್ರ ಇರುವುವು. ಅಂತಹ ವಾಕ್ಯಗಳನ್ನು ಎಲ್ಲರಿಂದ-ಇಲ್ಲ ಹಲವರಿಂದ ಓದಿಸಬೇಕು.

(೮) **ಮುಗಿಸುವುದು (ಉಪಸಂಹಾರ)** — ಪಾಠದ ಮುಖ್ಯ ಭಾಗಗ ಸಾರಾಂಶವನ್ನು ವಿದ್ಯಾರ್ಥಿಗಳು ತಮ್ಮ ಭಾಷೆಯಲ್ಲಿ—ಶುದ್ಧವಾಗಿ ಸರಳವಾಗಿ ಹೇ ವುದು. ತನಗೆ ತಿಳಿದುದನ್ನು ಪರರಿಗೆ ತಿಳಿಯುವಂತೆ ಹೇಳಲು ಬರಬೇಕೆಂಬು ಇದರ ಉದ್ದೇಶ್ಯವು. ಇದಾದ ಬಳಿಕ ಪಾಠದಲ್ಲಿ ಬಂದ ಕಠಿಣ ಶಬ್ದ, ಶಬ್ದ ಸಮ ದಾಯ ಇವುಗಳ ಅರ್ಥವು ಸರಿಯಾಗಿ ತಿಳಿದಿದೆಯೋ ಇಲ್ಲವೋ ಎಂಬುದನ್ನು ನೋ ವುದಕ್ಕಾಗಿ ಅವುಗಳನ್ನು ಹಾಕಿ ವಾಕ್ಯಗಳನ್ನು ರಚಿಸುವುದಕ್ಕೆ ಹೇಳಬೇಕು. ಅನೇ ಇಯತ್ತೆಯಿಂದ ಪಾಠಕ್ಕೆ ಸಂಬಂಧಿಸಿ ವ್ಯಾಕರಣ ವಿಚಾರಗಳನ್ನು ಕೇಳಿಕೊಳ್ಳಬೇಕ

ಹೊಸ ಪದ್ಧತಿಯೂ ಈಗಿನ ಕ್ರಮಿಕ ಪುಸ್ತಕಗಳ ಪಾಠಗಳೂ.

ಈಗಿನ ಕ್ರಮಿಕ ಪುಸ್ತಕಗಳ ಪಾಠಗಳು ಮೇಲೆ ಹೇಳಿದ ಮೆಟ್ಟುಗಳಂತೆ ಕಲಿಸಿ ರೆ ಒಂದು ಘಂಟೆಯಲ್ಲಿ (೪೦-೪೫ ಮಿ.) ಮುಗಿಯುವುದಿಲ್ಲ; ಎರಡು ಘಂಟೆಗಳು ಡಿಯುವವು. ಒಂದು ದಿನ ಮೊದಲಿನ ಐದು ಮೆಟ್ಟುಗಳನ್ನು, ಎರಡನೆಯ ದಿನ ಳಿದ ಮೆಟ್ಟುಗಳನ್ನು ಕಲಿಸಬೇಕು.

ಹೀಗೆ ೨ ಭಾಗಗಳನ್ನು ಮಾಡಿದರೆ ಮೊದಲಿನ ಪಾಠವು ವಿಷಯವನ್ನು ಕಲಿಸು ಂಥದೂ, ಎರಡನೆಯ ಪಾಠವು ವಾಚನವನ್ನು ಕಲಿಸುವಂಥದೂ ಆಗುವವು. ಹುಡು ಂಗೆ ವಾಚನಕಲೆಯು ಸಾಧಿಸುತ್ತ ಹೋದಂತೆ ೨ನೆಯ ಪಾಠಕ್ಕೆ ಕಡಿಮೆ ವೇಳೆಯನ್ನು ೂಡುತ್ತ ಹೋಗಬಹುದು.

ಕೆಳಗಿನ ತರಗತಿಗಳಿಗೆ ವಾಚನಪಾಠಗಳನ್ನು ಕಲಿಸುವುದರಲ್ಲಿ ವಾಚನವೇ ಪ್ರಧಾನ ಾಗಿರುವುದು; ಏಕೆಂದರೆ ಆಗ ಅವರಿಗೆ ಇನ್ನೂ ಚೆನ್ನಾಗಿ ಓದುವುದಕ್ಕೆ ಬರುತ್ತಿರುವು ಲ್ಲ. ಆರಂಭದ ತರಗತಿಗಳಲ್ಲಂತೂ ವಿದ್ಯಾರ್ಥಿಗಳ ವಾಚನವು ತೀರ ಅತೃಪ್ತಿಕರವಾ ಿರುವದು. ಅವರ ಕಣ್ಣುಗಳು ಇಡಿ ಶಬ್ದ, ಶಬ್ದಸಮುದಾಯ ಇವನ್ನು ಒಮ್ಮೆಲೆ ್ರಹಿಸುವಷ್ಟು ರೂಢಿಯುಳ್ಳವಾಗಿರುವುದಿಲ್ಲ. ಚಿಕ್ಕ ಬಾಲಕರು ಮೊದಮೊದಲು ಂದೊಂದೇ ಅಕ್ಷರವನ್ನು ಗುರುತಿಸುತ್ತ ಶಬ್ದವನ್ನು ಕೂಡಿಸಿಕೊಂಡು ಬಳಿಕ ಆ ಶಬ್ದ ನ್ನೋದುವರು. ೨ನೆಯ ಇಯತ್ತೆಗೆ ಬರುವ ಹೊತ್ತಿಗೆ ಬಾಲಕರು ಶಬ್ದ, ಶಬ್ದ ಮುದಾಯ ಇವನ್ನು ಕಣ್ಣಿನಿಂದ ಒಮ್ಮೆಲೆ ಗ್ರಹಿಸುವ ಪೂರ್ಣ ರೂಢಿಯುಳ್ಳವರಾಗ ಬೇಕು. ೩ನೆಯ ಇಯತ್ತೆಯಲ್ಲಿ ವಾಚನಕಲೆಯು ಅವರಲ್ಲಿ ಉಂಟಾಗಬೇಕು. ಆದುದ ಿಂದ ಮೊದಲಿನ ಮೂರು ಇಯತ್ತೆಗಳಲ್ಲಿ ವಾಚನಕ್ಕೇ ಪ್ರಾಧಾನ್ಯವನ್ನು ಕೊಡಬೇಕಾ ುವುದು; ಎಂದರೆ ವಾಚನ ಕಲಿಸುವ ಪಾಠಕ್ಕೆ ಹೆಚ್ಚು ವೇಳೆಯನ್ನು ಕೊಡಬೇಕಾಗು ದು. ೪ನೆಯ ಇಯತ್ತೆಗೆ ಬರುವ ಹೊತ್ತಿಗೆ ಆಘಾತ ವಿರಾಮ ಇವುಗಳನ್ನನುಸರಿ ುವುದು, ಧ್ವನಿಯ ಏರು ಇಳುವು ಮೊದಲಾದ ವಾಚನ ಗುಣಗಳು ಅವರಲ್ಲಿ ಬಂದಿರ ಬೇಕು. ಎಂದರೆ ವಾಚನ ಕಲೆಯು ಅವರಿಗೆ ಸಾಧಿಸಿರಬೇಕು. ಹೀಗಾಗಿದ್ದರೆ ೪ನೆಯ ಯತ್ತೆಯಿಂದ ಮುಂದಿನ ತರಗತಿಗಳಲ್ಲಿ ವಿಷಯಕ್ಕೆ ಪ್ರಾಧಾನ್ಯವನ್ನು ಕೊಡಬೇಕು. ಂದರೆ ವಿಷಯದ ಪಾಠಕ್ಕೆ ಹೆಚ್ಚಿಗೆ ವೇಳೆಯನ್ನು ಕೊಡಬೇಕು.

ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜಿನಲ್ಲಿಯ ಪದ್ಧತಿ.

ಸಾಮಾನ್ಯವಾಗಿ ಮೇಲೆ ಹೇಳಿದ ಪದ್ಧತಿಯೇ ಅಲ್ಲಿಯೂ ನಡೆದಿರುವದು. ಕೆಲವು ಚ್ಚುಕಡಿಮೆಗಳುಂಟು; ಮೇಲೆ ಹೇಳಿದ ಟ್ರೇ. ಸ್ಕೂ. ನ ಪದ್ಧತಿಯಲ್ಲಿಯ ೨ನೆಯ ಟ್ಟು (ಆರಂಭದ ಶಿಕ್ಷಿಕೆಯ ವಾಚನ) ಅಲ್ಲಿ ಇಲ್ಲ. ೪ನೆಯ ಮೆಟ್ಟಿನಲ್ಲಿ ಮುಖ

ಭಾಗಗಳನ್ನು ಕುರಿತಂಥ ಪ್ರಶ್ನೆಗಳನ್ನಷ್ಟೇ ಅಲ್ಲದೆ ಇಡಿ ಪಾಠವನ್ನು ಕುರಿತು ಪ್ರ ಗಳನ್ನು ಕ್ರಮವಾಗಿ ಕೇಳುವರು. ಒನೆಯ ಮೆಟ್ಟಿ (ಶಿಕ್ಷಕನ ಮಾದರಿ ವಾಚನ ತನೆಯ ಇಯತ್ತೆ ಮುಗಿಯುವವರೆಗಷ್ಟೇ. ಅಷ್ಟು ಹೊತ್ತಿಗೆ ವಿದ್ಯಾರ್ಥಿನಿಯರು ತಾವು ಗಿಯೇ ಸರಿಯಾಗಿ ಓದುವ ಶಕ್ತಿಯುಳ್ಳವರಾಗುವರೆಂದು ಅಲ್ಲಿ ಮನಗಂಡಿರುವರು.

ಈ ಎರಡೂ ಪದ್ಧತಿಗಳನ್ನು ನೋಡಿದರೆ ತನೆಯ ಇಯತ್ತೆಯ ಆರಂಭದ ವರೆ ಮೌನವಾಚನವನ್ನೂ ವಿದ್ಯಾರ್ಥಿಗಳು ಚೆನ್ನಾಗಿ ಓದುವ ರೂಢಿಯುಳ್ಳವರಾಗಿದ್ದ ಳನೆಯ ಇಯತ್ತೆಯಿಂದ ಶಿಕ್ಷಕನ ಮಾದರಿ ವಾಚನವನ್ನೂ ಬಿಡಬಹುದೆಂದು ತೋರುವದು

ಹಿಂದಿನ ಕಾಲದ ಪದ್ಧತಿಗಳು.

ಮೊದಲು ವಾಚನ ಕಲಿಸುವ ಪದ್ಧತಿಯು ಎಲ್ಲ ಕಡೆಗೂ ಈ ತರದ್ದಿರಲಿಲ್ಲ ಸ್ವಲ್ಪ ಹೆಚ್ಚು ಕಡಿಮೆಯಾದ ಬೇರೆ ಬೇರೆ ಪದ್ಧತಿಗಳು ಇದ್ದವು. ಅವು:—

(೧) ಮೆಟ್ಟಿಗಳು:—(ಅ) ಉಪೋದ್ಘಾತ. (ಬ) ಒಂದೊಂದು ಖಂಡವನ್ನು ಇಲ್ಲವೆ ಸ್ವಲ್ಪ ಸ್ವಲ್ಪ ಭಾಗವನ್ನು ವಿದ್ಯಾರ್ಥಿಗಳಿಗೆ ಓದಹೇಳುವದು. ಕ. ಕಠಿಣ ಶಬ್ದಗಳ ಅರ್ಥವನ್ನು ಕೇಳಿಕೊಳ್ಳುವದು. ಪ್ರತಿ ಶಬ್ದವನ್ನು ಹೇಳಿದರೂ ಅರ್ಥವ ತಿಳಿಯಿತೆಂದು ಸಾಗುವದೂ ಕೆಲವು ಕಡೆ ನಡೆಯುತ್ತಿತ್ತು. ಡ. ಅರ್ಥವಿವರಣೆ. (ಕೇ ವೆಡೆಯಲ್ಲಿ). ಇ. ಹುಡುಗರಿಂದ ಪೂರ್ಣ ಪಾಠವನ್ನು ಓದಿಸುವುದು.

(೨) ಮೊದಲು ಹುಡುಗರಿಂದ ಓದಿಸದೆ ಶಿಕ್ಷಕನೇ ಓದುತ್ತ ಕಠಿಣವೆಂದು ತೋರಿದಲ್ಲಿ ಶಬ್ದಾರ್ಥಗಳನ್ನು ಹೇಳುತ್ತ ವಾಕ್ಯಾರ್ಥವನ್ನು ವಿವರಿಸುತ್ತ ಪಾಠವನ್ನು ಮುಗಿಸಿ ಬಳಿಕ ವಿದ್ಯಾರ್ಥಿಗಳಿಂದ ಪೂರ್ಣ ಪಾಠವನ್ನು ಓದಿಸಿಕೊಳ್ಳುವದು.

(೩) (ಅ) ಮನೆಯಲ್ಲಿ ಓದಿಕೊಂಡು ಬರುವಂತೆ ವಿದ್ಯಾರ್ಥಿಗಳಿಗೆ ಹೇಳುವುದು ಬ. ಆರಂಭದಲ್ಲಿ ಪರೀಕ್ಷಣ ಪ್ರಶ್ನೆಗಳು ಕ. ತಿಳಿಯದುದನ್ನು ವಿವರಿಸಿ ಹೇಳುವುದು ಡ. ಇಡಿ ಪಾಠವನ್ನು ಹುಡುಗರಿಂದ ಓದಿಸುವುದು.

ಈ ಮೊದಲು ಟ್ರೇನಿಂಗ್ ಸಂಸ್ಥೆಗಳಲ್ಲಿಯೂ ಅಷ್ಟೊಂದು ನಿಷ್ಕೃಷ್ಟವಾದ ಪದ್ಧ ತಿಯು ನಡೆಯುತ್ತಿರಲಿಲ್ಲ. ಮೆ॥ ವಕೀಲ ಸಾಹೇಬರು ದಕ್ಷಿಣಭಾಗದ ಎಜ್ಯುಕೇಶನಲ್ ಇನ್ಸಪೆಕ್ಟರರಾಗಿ ಬಂದ ಬಳಿಕ ಅವರು ಈಗ ಟ್ರೇನಿಂಗ್ ಸ್ಕೂಲಿನಲ್ಲಿ ನಡೆದಿರುವ ಪದ್ಧತಿ ಯನ್ನು ಸಪ್ರಯೋಗವಾಗಿ ತೋರಿಸಿ ಅದರ ಸುಪರಿಣಾಮವನ್ನು ತೋರಿಸಿಕೊಟ್ಟರು. ಅಂದಿನಿಂದ ಈ ಪದ್ಧತಿಯನ್ನು ಟ್ರೇನಿಂಗ್ ಸಂಸ್ಥೆಗಳು ಅನುಸರಿಸುತ್ತ ಬಂದಿವೆ.

ಹೊಸ ಪದ್ಧತಿಯೊಳಗಿನ ವೈಶಿಷ್ಟ್ಯ.

ಈ ಹೊಸ ಪದ್ಧತಿಯಲ್ಲಿ ವಿದ್ಯಾರ್ಥಿಗಳ ಮೌನವಾಚನವು ಬಹಳ ಮಹತ್ವದ ಮೆಟ್ಟಾಗಿದೆ. ಮೌನವಾಚನವು ಸ್ವಯಂ ಶಿಕ್ಷಣ ತತ್ತ್ವವನ್ನು—ಎಂದರೆ "ವಿದ್ಯಾರ್ಥಿಯು

ನೇ ಕಲಿಯಲಿ, ವಿದ್ಯಾರ್ಥಿಯು ಕಲಿಯುತ್ತಿರುವಾಗ ಶಿಕ್ಷಕನು ನೆರವಾಗಲಿ" ಎಂಬ ತ್ತ್ವವನ್ನು ಅನುಸರಿಸುವುದಕ್ಕೆ ಸಹಾಯಕವಾಗಿರುವುದು. ಈ ಪದ್ಧತಿಯು ವೈಯ ಕ ಶಿಕ್ಷಣಕ್ಕೂ-ಕೆಲವುಟ್ಟಿಗೆ ಅವಕಾಶವನ್ನು ಕೊಡುವುದು. ಒಬ್ಬೊಬ್ಬ ಶಿಕ್ಷಕನಿಗೆ ೦-೪೦ ಜನ ವಿದ್ಯಾರ್ಥಿಗಳ ಒಂದು ವರ್ಗವನ್ನು ಇಲ್ಲವೆ ಹಲವು ವರ್ಗಗಳನ್ನು ಕಲಿಸ ೇಕಾದ ಸಂದರ್ಭವಿದ್ದ ಈ ಕಾಲದಲ್ಲಿ ವೈಯಕ್ತಿಕ ಶಿಕ್ಷಣವು ಸಾಧ್ಯವಿಲ್ಲ. ಆದರೂ ಾಧ್ಯವಿದ್ದ ಸಣ್ಣ ಪ್ರಸಂಗಗಳನ್ನಾದರೂ ಶಿಕ್ಷಕನು ಉಪಯೋಗಿಸಿಕೊಳ್ಳುವುದು ೋಗ್ಯವು. ಮೌನವಾಚನವು ನಡೆದಾಗ ತಿಳಿಯದಿರುವ ಅಂಶಗಳನ್ನು ಒಬ್ಬೊಬ್ಬರಿಗೇ ೇರೆ ಬೇರೆಯಾಗಿ ಆತನಿಗೆ ಬೇಕಾಗಿರುವದನ್ನೇ ಹೇಳುವುದಿರುವುದರಿಂದ ವ್ಯಕ್ತಿ ಶಿಕ್ಷ ಕ್ಕೆ ಅವಕಾಶವುಂಟು. ಇದು ವಿದ್ಯಾರ್ಥಿಯಲ್ಲಿ ತಾನೇ ಕಲಿಯುವೆನೆಂಬ ನಂಬಿಗೆಯು ್ಪಂಟು ಮಾಡುವುದು.

ಮನೆಯಲ್ಲಿ ಓದಿಕೊಂಡು ಬರಹೇಳುವ ಹಳೆಯ ಪದ್ಧತಿಯಲ್ಲಿ ಮೌನವಾಚನದ ಲವು ಲಾಭಗಳಾಗುವವು. ಆದರೆ ವಿದ್ಯಾರ್ಥಿಗಳು ಮನೆಯಲ್ಲಿ ಸರಿಯಾಗಿಯೇ ಓದಿ ೊಳ್ಳುವರೆಂದು ನಂಬಲಾಗುವುದಿಲ್ಲ. ಅವರು ಮನೆಯಲ್ಲಿ ಏಕಾಗ್ರತೆಯಿಂದ ಮನಸ್ಸಿ ಲ್ಲಿ ಓದಿಕೊಂಡರೆ ಆಗಬಹುದು. ಆದರೆ ಹಲವು ಜನ ವಿದ್ಯಾರ್ಥಿಗಳು ಮೇಲಿನ ತರ ತಿಗಳಲ್ಲಿ ಬಂದಾಗ ಕೂಡ ಮನಸ್ಸಿನಲ್ಲಿ ಓದಿಕೊಳ್ಳುವ ರೂಢಿಯುಳ್ಳವರಿರುವುದಿಲ್ಲ. ಯುಷ್ಯದಲ್ಲೆಲ್ಲ ಆವಶ್ಯಕವಾದ ಮೌನವಾಚನದ ರೂಢಿಯಾಗದಿರುವುದಕ್ಕೆ ಶಿಕ್ಷಕರು ತ್ತರವಾದಿಗಳೆಂಬುದನ್ನು ಮರೆಯಬಾರದು. ಪರರಿಗಾಗಿ ಓದುವುದು ಮಾತ್ರ ಯಿಂದ ನಡೆಯಬೇಕು. ತನಗಾಗಿ ಓದುವುದು ನಿಶ್ಶಬ್ದವಾಗಿಯೇ ಇರಬೇಕು. ಮನೆಯಲ್ಲಿ ಓದಿಕೊಂಡು ಬರಹೇಳಿದಾಗ ಉಂಟಾಗುವ ದೋಷಗಳಲ್ಲಿ ವಿದ್ಯಾರ್ಥಿಗಳು ್ವನಿ ತೆಗೆದು ಓದುವುದು ಮುಖ್ಯವಾದುದು. ಉಚ್ಚಾರಣೆಯ ದೋಷ ಮುಂತಾದುವೂ ಾಗುವುದುಂಟು. ಆದದರಿಂದ ಮನೆಯಲ್ಲಿ ಓದಿಕೊಂಡು ಬರಹೇಳುವಾಗ ವಿದ್ಯಾರ್ಥಿ ೇಗೆ ಅವಧಾನದೊಡನೆ ಮನಸ್ಸಿನಲ್ಲಿ ಓದಿಕೊಳ್ಳುವ ರೂಢಿಯುಂಟಾಗಿರುವುದನ್ನು ಶಿಕ್ಷ ರು ಮನಗಂಡಿರಬೇಕು.

ಕನ್ನಡಭಾಷೆ

ಲೇಖಕರು:— ಬಿ. ಆರ್. ಅಯ್ಯಂಗಾರ, ಆಳವಾರ ಬಿ. ಎ., ಬೆಂಗಳೂರು

೧. ಒಳಭೇದಗಳು:—ಪಂಚದ್ರಾವಿಡ ಭಾಷೆಗಳಲ್ಲಿ ಕನ್ನಡವು ಒಂದು. ಇದ ಲ್ಲಿ ಹಳಗನ್ನಡ, ಹೊಸಗನ್ನಡ ಎಂಬ ಎರಡು ವಿಭಾಗಗಳು ಉಂಟು. ಪುರಾತನ ಜೈನ,

ವೀರಶೈವ ಮತ್ತು ಬ್ರಾಹ್ಮಣ ಕವಿಗಳು ತಮ್ಮ ಗ್ರಂಥಗಳನ್ನೆಲ್ಲಾ ಸಾಮಾನ್ಯವಾ ಹಳಗನ್ನಡದಲ್ಲಿಯೇ ಬರೆದಿದಾರೆ. ಈಗಿನವರು ಕೆಲವು ಪದ್ಯ ಕಾವ್ಯಗಳನ್ನು ವಿಶೇ ವಾಗಿ ಗದ್ಯ ಕಾವ್ಯಗಳನ್ನು ಹೊಸ ಕನ್ನಡದಲ್ಲಿ ಬರೆದಿದ್ದಾರೆ. ಇದಲ್ಲದೆ ಮಾತನಾಡು ಭಾಷೆಯು ಹೊಸಗನ್ನಡವೆ. ಎಂದರೆ ಹಳೆಗನ್ನಡವು ಗ್ರಂಥಸ್ಥವಾಗಿಯೇ ಇದೆ; ಹೊಸ ನ್ನಡವು ಗ್ರಂಥಸ್ಥವಾಗಿಯೂ ಇದೆ ಮತ್ತು ದಿನವಹಿ ವ್ಯವಹಾರದಲ್ಲಿಯೂ ಇದೆ. ಹೊಸ ನ್ನಡದಲ್ಲಿ ಮುಖ್ಯವಾಗಿ ಮೈಸೂರು ಕನ್ನಡ, ಮಂಗಳೂರು ಕನ್ನಡ ಮತ್ತು ಧಾರವಾಡ ಕನ್ನಡ ಎಂಬ ಮೂರು ವಿಭಾಗಗಳನ್ನು ಮಾಡಬಹುದು. ಇತರ ಪ್ರಾಂತಗಳ ಕನ್ನ ಇದ್ದರೂ ಅದು ಅಷ್ಟು ಪ್ರಾಮುಖ್ಯವನ್ನು ಹೊಂದಿಲ್ಲ. ಈ ಮೂರು ಜಾತಿ ಕನ್ನಡ ಆಯಾ ಪ್ರಾಂತಗಳಿಗೆ ಸಂಬಂಧಪಟ್ಟ ಲಕ್ಷಣ ವಿಶೇಷಗಳುಳ್ಳವಾಗಿ ಅಲ್ಲಲ್ಲಿಯೇ ಪ್ರಚಾ ದಲ್ಲಿರುವ ಭಾಷೆಯಾಗಿದೆ. ಇದಲ್ಲದೆ ನಮ್ಮ ದೇಶದ ಗ್ರಾಮಗಳಲ್ಲಿ ಆಡುವ ಭಾಷೆಯು ಗ್ರಾಮ್ಯ ಭಾಷೆ. ಇದಕ್ಕಿಂತಲೂ ವಿಪರೀತ ಗ್ರಾಮ್ಯತಮವಾದ ಕೃತಕ ಭಾಷೆಯು ಹಾಸ್ಯಾಸ್ಪದವಾದ ಮತ್ತು ಹಾಸ್ಯರಸ, ಶೋಕರಸಭರಿತವಾದ ಗದ್ಯಪದ್ಯಾತ್ಮಕವಾ ಎಂದರೆ ಚಂಪು ನಾಟಕ ರೂಪವಾದ ನವನವೀನವಾದ ಗ್ರಂಥವು ಇರುವುದಲ್ಲದೆ ನಾಟ ರಂಗದಲ್ಲೂ ಮೆರೆಯುತ್ತದೆ.

೨. **ಕನ್ನಡ ಭಾಷೆಗೆ ಇತರ ಭಾಷೆಗಳ ಸಾಂಕರ್ಯ:—** ನಮ್ಮ ಜೀ ವದ ಸಾಮಾನ್ಯವಾದ ಪ್ರತಿನಿತ್ಯದ ವ್ಯವಹಾರದಲ್ಲಿ ನಮ್ಮ ಅಭಿಪ್ರಾಯಗಳನ್ನು ಇತ ರಿಗೆ ತಿಳಿಸಲು ಉಪಯೋಗಿಸುವ ಪದಗಳೆಲ್ಲವು ಕೂಡ ಅಚ್ಚಗನ್ನಡ ದೇಶ್ಯಪದಗಳ ಅಲ್ಲ. ಅನೇಕ ಕಾಲದಿಂದ ಅಭ್ಯಾಸದಲ್ಲಿ ಬಂದಿರುವುದರಿಂದ ನಿತ್ಯಗಟ್ಟಳೆಯ ಸರ್ವ ಸಾಮಾ ನ್ಯವಾದ ಮಾತಿನಲ್ಲಿಯೂ ಅನೇಕ ಸಂಸ್ಕೃತ ಪದಗಳನ್ನು ಉಪಯೋಗಿಸುತ್ತೇವೆ ಮೈಸೂರು ಸೀಮೆಯಲ್ಲಿ ಹೈದರ್ ಮತ್ತು ಟಿಪ್ಪು ಇವರ ಕಾಲದ ರಾಜ್ಯಭಾರದಲ್ಲ ಅನೇಕ ಉರುದು ಮತ್ತು ಹಿಂದುಸ್ಥಾನಿ ಪದಗಳು ಸರಕಾರದ ಇಲಾಖೆಗಳಲ್ಲಿ ಉಪ ಯೋಗಿಸುವ ಕನ್ನಡ ಭಾಷೆಯಲ್ಲಿ ಸೇರಿಕೊಂಡವು. ಇದಲ್ಲದೆ ಮೈಸೂರು ಸೀಮೆಯ ೫೦ ವರ್ಷ ಇಂಗ್ಲಿಷಿನವರ ಆಡಳಿತದಲ್ಲಿದ್ದಕಾರಣ ಅನೇಕ ಇಂಗ್ಲೀಷ ಪದಗಳು ಕನ್ನ ಭಾಷೆಯಲ್ಲಿ ಸೇರಿಹೋಗಿವೆ. ಮೈಸೂರು ಸೀಮೆಯ ಸುತ್ತಮುತ್ತಲು ತೆಲಗು ಮತ್ತು ಅರವು ಸೀಮೆಗಳು ಮೇರೆಯಾಗಿರುವುದರಿಂದಲೂ ಕನ್ನಡವು ಪಂಚದ್ರಾವಿಡ ಭಾಷೆಯಲ್ ಒಂದಾಗಿರುವುದರಿಂದಲೂ ತೆಲಗು ಮತ್ತು ಅರವು ಪದಗಳು ಕನ್ನಡ ಭಾಷೆಯಲ್ ಸೇರಿವೆ. ಇನ್ನು ಸೈನ್ಯದಲ್ಲಿ ಅನೇಕ ಮರಾಠಿಯವರಿರುವುದರಿಂದ ಮರಾಠಿ ಪದಗಳು ಸೇರಿವೆ. ಪರಭಾಷೆಗಳಿಂದ ಅನೇಕ ವಿಷಯಗಳನ್ನು ಕನ್ನಡಕ್ಕೆ ಪರಿವರ್ತನೆ ಮಾಡಿ ವುದರಿಂದ ಬಂಗಾಳಿ ಮೊದಲಾದ ಇತರ ಭಾಷೆಗಳ ಪದಗಳೂ ಸೇರಿವೆ. ಗ್ರಾಮಗಳ ಅನೇಕ ಗ್ರಾಮ್ಯಪದಗಳನ್ನು ಉಪಯೋಗಿಸಿ ಮಾತನಾಡುತ್ತಾರೆ. ಇದಲ್ಲದೆ ಗ್ರಂಥಗ

ಯೂ ಸಾಮಾನ್ಯವಾಗಿ ನಮ್ಮ ಆಡುವ ಮಾತಿನಲ್ಲಿಯದ ತದ್ಭವ ಪದಗಳು ವಿಶೇಷ ನಾಗಿವೆ.

ಆದಕಾರಣ ಕನ್ನಡ ಭಾಷೆಯು ತತ್ಸಮ, ಸಮಸಂಸ್ಕೃತ, ತದ್ಭವ, ದೇಶ್ಯ ಅನ್ಯ ದೇಶ್ಯ ಎಂದರೆ ಇಂಗ್ಲಿಷ, ಅರವು, ತೆಲಗು, ಉರುದು, ಹಿಂದುಸ್ಥಾನಿ, ಮರಾಠಿ, ಬಂಗಾಳಿ ಮುಂತಾದುವು ಮತ್ತು ಗ್ರಾಮ್ಯತಮ ಪದಗಳನ್ನು ಒಳಕೊಂಡಿದೆ.

೩. ಕನ್ನಡಭಾಷೆಗೂ ಸಂಸ್ಕೃತ ಭಾಷೆಗೂ ಇರುವ ಸಂಬಂಧ:— ಜಂಬೂದೇಶದಲ್ಲಿ ಸಂಸ್ಕೃತ ಭಾಷೆಯನ್ನು ಆದಿ ಭಾಷೆಯೆಂದೂ ಅನೇಕ ಇತರ ಭಾಷೆಗಳಿಗೆ ಮೂಲಾಧಾರವಾದ ಭಾಷೆಯೆಂದೂ ಹೇಳಬಹುದು. ಪೂರ್ವದಿಂದಲೂ ಶ್ರುತಿ ಸ್ಮೃತಿ, ಇತಿಹಾಸ, ಪುರಾಣ, ಶಾಸ್ತ್ರ, ಕಲೆ ಮುಂತಾದ ವಿದ್ಯೆಯ ಎಲ್ಲಾ ಶಾಖೆಗಳೂ ಸಂಸ್ಕೃತ ಭಾಷೆಯಲ್ಲಿಯೇ ಇದ್ದವು. ಇದಲ್ಲದೆ ಈ ಭಾಷೆಯಲ್ಲಿಯೇ ಸಹಜವಾಗಿ ಮಾತನಾಡುತ್ತಿದ್ದರು. ಆರ್ಯರು ದಕ್ಷಿಣದೇಶಕ್ಕೆಬಂದಾಗ ದ್ರಾವಿಡರು ಅವರ ಸಂಗಡ ಬೆರೆತು ಅನೇಕ ವಿಷಯಗಳನ್ನು ಅವರಿಂದ ಕಲಿತರು. ವಿಷಯಗಳನ್ನು ಸೂಚಿಸುವ ಪದಗಳು ತಮ್ಮ ಭಾಷೆಯಲ್ಲಿಲ್ಲದಕಾರಣ ಅನೇಕ ಸಂಸ್ಕೃತ ಪದಗಳನ್ನು ಅವರ ಭಾಷೆಗೆ ಸೇರಿಸಿಕೊಂಡರು. ಎರಡು ಪಂಗಡದವರಿಗೂ ಬಳಿಕೆಯು ಹೆಚ್ಚಾದಕಾರಣ ಕನ್ನಡಿಗರಿಗೆ ಸಂಸ್ಕೃತ ಭಾಷೆಯ ಅನೇಕ ಪದಗಳು ಅಸ್ಥಿಗತವಾಗಿ ಹೋದುವು. ಕನ್ನಡದಲ್ಲಿ ಗದ್ಯ ಪದ್ಯ ಗ್ರಂಥವನ್ನು ಬರೆವಾಗಲೂ ಮಾತನಾಡುವಾಗಲೂ ಸಂಸ್ಕೃತಪದ ಪ್ರಯೋಗವು ವಿಶೇಷವಾಗಿ ಕೊನೆಗೆ ಸಂಸ್ಕೃತ ಪದಗಳಿಗೂ ಕನ್ನಡ ಪದಗಳಿಗೂ ವ್ಯತ್ಯಾಸವೇ ತಿಳಿಯದಂತಾಯಿತು.

ಈ ಕಾರಣದಿಂದಲೇ ನಾವು ಈಗ ಸಾಮಾನ್ಯವಾಗಿ ಮಾತನಾಡುವಾಗ ಅನೇಕ ಸಂಸ್ಕೃತ ಪದಗಳನ್ನು ರೂಢಿಯಾಗಿ ಉಪಯೋಗಿಸುತ್ತೇವೆ. ಇದಲ್ಲದೆ ಋಷಿ, ಶಿಶು ಮುಂತಾದ ಸಂಸ್ಕೃತ ಪದಗಳನ್ನು ಕನ್ನಡ ಭಾಷೆಯಲ್ಲಿ ಬರೆದು ತೋರಿಸುವುದಕ್ಕಾಗಿ ಕೆಲವು ಅಕ್ಷರಗಳನ್ನು ಕನ್ನಡ ವರ್ಣಮಾಲೆಗೆ ಸೇರಿಸಿದ್ದೇವೆ. ಅನೇಕ ಸಂಸ್ಕೃತ ಪದಗಳು ಕನ್ನಡ ಭಾಷೆಗೆ ಸೇರಿವೆ. ಅರಿಸಮಾಸವು ಕನ್ನಡ ಗ್ರಂಥಗಳಲ್ಲಿ ರೂಢಿಯಲ್ಲಿದೆ. ಸಂಸ್ಕೃತ ಸತಿಸಪ್ತಮಿ ಮತ್ತು ಕರ್ಮಣಿ ಪ್ರಯೋಗವೂ ಕನ್ನಡ ಭಾಷೆಯಲ್ಲಿದೆ. ಕೆಲವು ಸಂಸ್ಕೃತ ಛಂದಸ್ಸು, ಅಲಂಕಾರ, ಅಭಿಪ್ರಾಯ, ಭಾವ, ಮರ್ಯಾದೆ ಮುಂತಾದುವು ಕನ್ನಡ ಗ್ರಂಥಗಳಲ್ಲಿ ಹುದುಗಿಕೊಂಡಿವೆ. ಮುಂದೆಯೂ ವಿಜ್ಞಾನ ಶಾಸ್ತ್ರ ಮೊದಲಾದ ವಿವಿಧ ಶಾಸ್ತ್ರಗಳ, ಆಕಾಶ ವಿಮಾನದ ಸಂಚಾರ ಮೊದಲಾದ ವಿವಿಧ ಕಲೆಗಳ ವಿಷಯವಾಗಿ ಕನ್ನಡ ಭಾಷೆಯಲ್ಲಿ ಗ್ರಂಥಗಳನ್ನು ಬರೆಯಬೇಕಾದರೆ ಅನೇಕ ಸಂಕೇತ ಪದಗಳನ್ನು ಸಂಸ್ಕೃತ ಭಾಷೆಯಿಂದ ತೆಗೆದುಕೊಳ್ಳಬೇಕು.

ಇದರಿಂದ ಕನ್ನಡಕ್ಕೂ ಸಂಸ್ಕೃತಕ್ಕೂ ಇರುವ ನಿಕಟ ಸಂಬಂಧವು ಗೊತ್ತಾಯಿತು. ಹೀಗಿರುವಲ್ಲಿ ಈಗ ಕನ್ನಡ ಭಾಷೆಯಿಂದ ಸಂಸ್ಕೃತ ಭಾಗವನ್ನು ತ್ಯಜಿಸುವುದಾಗಲಿ ಮುಂದೆ ಅದರ ಸಹಾಯವನ್ನು ಕೋರದಿರುವುದಾಗಲಿ ಸಾಧ್ಯವೆ?

ಮಾತಾಡುವ ಕನ್ನಡ ಭಾಷೆ:— ಗ್ರಾಮಾಂತರಗಳಲ್ಲಿ ಆಡುವ ಭಾಷೆಯಲ್ಲಿ ಇತರ ಭಾಷೆಗಳ ಸಾಂಕರ್ಯ ಕಡಿಮೆ. ಗ್ರಾಮಸ್ಥರಿಗೆ ನಿತ್ಯಗಟ್ಲೆ ವ್ಯವಹಾರದಲ್ಲಿ ತಿಳಿ ಬೇಕಾದ ಅಭಿಪ್ರಾಯಗಳಿಗೆ ತಮ್ಮ ಭಾಷೆಯಲ್ಲಿಯೇ ಪದಗಳು ದೊರಕುತ್ತವೆ. ಇಂಗ್ಲಿ ಭಾಷೆಯನ್ನು ಕಲಿತ ನಗರವಾಸಿಗಳಾದರೊ ಅರ್ಧ ಕನ್ನಡ ಪದಗಳು ಅರ್ಧ ಇಂಗ್ಲಿ ಪದಗಳನ್ನು ಕಲೆಸಿ ಮಾತನಾಡುತ್ತಾರೆ. ಇಂಗ್ಲಿಷ ಪದಗಳಿಗೆ ಸರಿಯಾದ ಕನ್ನಡ ಪ ಗಳು ಕೂಡಲೇ ಸ್ಫೂರ್ತಿಗೆ ಬಾರದಿರುವುದು ಒಂದು ಕಾರಣ, ಮತ್ತು ಇಂಗ್ಲಿಷ ಪ ಗಳನ್ನೇ ಕಲೆಸಿ ಮಾತನಾಡಿದರೆ ಗೌರವ ಹೆಚ್ಚು ಎಂಬ ಭಾವನೆಯು ಮತ್ತೊಂ ಕಾರಣ. ಅಂತು ಇಂತು ಅವರ ಭಾಷೆಯು ಕನ್ನಡವೂ ಅಲ್ಲ, ಇಂಗ್ಲಿಷೂ ಅಲ್ಲ. ಇಂಗ್ಲಿ ಭಾಷೆಯನ್ನು ಕಲಿಯದ ನಗರವಾಸಿಗಳು ಕನ್ನಡ ಮಾತನ್ನೇ ಆಡಿದರೂ ರೂಢಿಯಲ್ಲಿರು ಇತರ ಭಾಷೆಯ ಪದಗಳನ್ನು ಸೇರಿಸಿಕೊಳ್ಳುತ್ತಾರೆ.

ಮಂಗಳೂರು ಮತ್ತು ಧಾರವಾಡದ ಕಡೆಯವರು ಕೆಲವು ಇಂಗ್ಲಿಷ ಪದಗಳನ ಮಾತನಾಡುವಾಗ ವಿಕಾರವಾಗಿ ಉಚ್ಚರಿಸುವದಲ್ಲದೆ ಅದೇ ರೀತಿಯಾಗಿ ಗ್ರಂಥಗ ಲ್ಲಿಯೂ ಬರೆಯುತ್ತಾರೆ.

ಉದಾಹರಣಾರ್ಥವಾಗಿ:— ಬೆಂಚು (Bench) ಓಗಸ್ಟ (August ಚೋಕು (Chalk), ಹಾಯರ್ (Higher), ಗ್ರೇಂಟು (Grant), ಗ್ರೇ (Graph), ಪ್ಲೇನ್ (Plan), ಅಕ್ಟೋಬರ (October), ಫರ್ಲಾಂ (Furlong), ಜಾನೇವಾರಿ (January), ಸಾವ್ಹರೀನು (Sovereign ಡಾಯರೆಕ್ಟರ್ಸ (Directors), ಡ್ವಿವಿಡಂಡ (Dividend) ಮುಂತಾದುವ ಮಗ್ಗುಲಲ್ಲಿ ಇಂಗ್ಲಿಷ್ ಪದಗಳಿಲ್ಲದೆ ಕನ್ನಡದಲ್ಲಿ ಬರೆದಿರುವ ಇಂಗ್ಲಿಷ ಪದಗಳನ್ನ ಓದಿದರೆ ಇವು ಆವ ಇಂಗ್ಲಿಷ ಪದಗಳೆಂದು ಅನುಮಾನಕ್ಕೆ ಆಸ್ಪದವಾಗುತ್ತದೆ.

೩. ಗ್ರಂಥಸ್ಥವಾದ ಕನ್ನಡ ಭಾಷೆ:— ಬರೀ ಅಚ್ಚಗನ್ನಡದಲ್ಲಿಯ ಯಾವ ಗ್ರಂಥವೂ ಬರೆದಿಲ್ಲ. ದೇಶ್ಯ ಮತ್ತು ತದ್ಭವ ಶಬ್ದಗಳಿಂದೊಳಕೊಂಡಿರುವ ಗ್ರಂ ಗಳು ಕೇವಲ ವಿರಳ. ದೇಶ್ಯ, ತದ್ಭವ, ತತ್ಸಮ ಶಬ್ದಗಳಿಂದೊಳಕೊಂಡಿರುವ ಗ್ರಂ ಗಳು ಅನೇಕವಾಗಿವೆ. ಇವೆಲ್ಲಾ ಹಳಗನ್ನಡ ಗ್ರಂಥಗಳು. ಕೆಲವು ಪದ್ಯಕಾವ್ಯಗಳ ಅನೇಕ ಗದ್ಯಕಾವ್ಯಗಳೂ ಹೊಸಗನ್ನಡದಲ್ಲಿ ಬರೆಯಲ್ಪಟ್ಟವೆ. ಸರಕಾರದ ಇಲಾಖೆಗ ವ್ಯವಹಾರ ವಿಷಯಗಳು ಕೇವಲ ಮಿಶ್ರ ಭಾಷೆಯಲ್ಲಿ ಬರೆಯಲ್ಪಟ್ಟವೆ.

೬. ಕನ್ನಡ ಭಾಷೆಯ ಸಾಹಿತ್ಯಾಭಿವೃದ್ಧಿ:—ಇದನ್ನು ಗದ್ಯಪದ್ಯಾತ್ಮಕ
ಗ್ರಂಥಗಳಿಂದ ವೃದ್ಧಿಗೊಳಿಸಬೇಕು. ನಮ್ಮ ದೇಶದ ವಿಷಯ, ಅಭಿಪ್ರಾಯಗಳನ್ನು
ಟ್ಟುಕೊಂಡು ಗದ್ಯ ಗ್ರಂಥಗಳನ್ನೂ ಬರೆಯಬಹುದು. ಅಥವಾ ಪರದೇಶದ ವಿಷಯಾ
ಪ್ರಾಯಗಳನ್ನಿಟ್ಟುಕೊಂಡು ಪರಿವರ್ತನೆಯ ಮೂಲಕ ಗದ್ಯ ಗ್ರಂಥಗಳನ್ನು ಬರೆಯ
ಹುದು. ಆದರೆ ಪರದೇಶದ ಹೊಸ ವಿಷಯ. ಆಚಾರ, ಸಂಪ್ರದಾಯ ಮುಂತಾದುವು
ಗಳನ್ನು ವಿವರವಾಗಿ ತಿಳಿಸಿ ಗ್ರಂಥವನ್ನು ಬರೆಯಬೇಕು. ಶಾಸ್ತ್ರ ಮತ್ತು ಕಲೆಯ ವಿಷ
ಯವಾದ ಪರದೇಶದ ಗ್ರಂಥಗಳನ್ನು ನಮ್ಮ ಭಾಷೆಗೆ ಪರಿವರ್ತನೆ ಮಾಡಬೇಕು.

ಹೊಸದಾಗಿ ಬರೆದ ಪದ್ಯ ಅಥವಾ ಹಾಡಿನಲ್ಲಿ ಪ್ರಾಸ ಅಥವಾ ರಾಗವು ಇಲ್ಲದಿ
ದ್ದರೆ ಅದು ಬಾಲಕ ಬಾಲಕಿಯರಿಗೆ ರುಚಿಸುವುದೂ ಇಲ್ಲ. ಅವನ್ನು ಜ್ಞಾಪಕದಲ್ಲಿ
ಡುವುದಕ್ಕೆ ಆಸಕ್ತಿಯೂ ಉಂಟಾಗುವುದಿಲ್ಲ. ಹಿಂದಣ ರೀತಿಯೇ ಅನೇಕ ವರ್ಷಗಳಿಂ
ದ ಅಭ್ಯಾಸಕ್ಕೆ ಬಂದಿರುವುದರಿಂದಲೂ ಈಗಲೂ ಅಭ್ಯಾಸದಲ್ಲಿರುವುದರಿಂದಲೂ ಈ
ಹೊಸ ರೀತಿಯಲ್ಲಿ ಉತ್ಸಾಹ ಉಂಟಾಗುವುದು ಕಷ್ಟ. ಇದಲ್ಲದೆ ಸುಲಭ ಶೈಲಿಯಲ್ಲಿ
ಬರೆಯಲಾಗುತ್ತೆಂದು ಪದ್ಯದ ಗಾಂಭೀರ್ಯವನ್ನು ತಪ್ಪಿಸುವುದು ನ್ಯಾಯವಲ್ಲ. ಪದ್ಯಕ್ಕೆ
ಪ್ರಾಸವೇ ಅಲಂಕಾರ, ಹಾಡಿಗೆ ರಾಗವೇ ಅಲಂಕಾರ. ಇವು ಇಲ್ಲದಿದ್ದರೆ ಆಸಕ್ತಿಯಿಂದ
ಅವುಗಳನ್ನು ಉಚ್ಚರಿಸುವುದಕ್ಕಾಗಲಿ ಜ್ಞಾಪಕದಲ್ಲಿಡುವುದಕ್ಕಾಗಲಿ ಬಾಲಕ ಬಾಲಕಿಯ
ರಿಗೆ ಉಲ್ಲಾಸ ಕಡಿಮೆ. ಪದ್ಯಗಳು ಸ್ವಲ್ಪ ಮಾತುಗಳಲ್ಲಿ ವಿಪುಲ ಅಭಿಪ್ರಾಯವನ್ನು
ಇಟ್ಟುಕೊಂಡಿವೆ. ಉಚ್ಚಧ್ಯೇಯವುಳ್ಳ ಪದ್ಯರೂಪದಲ್ಲಿರುವ ವಿಪುಲವಾದವಿಷಯಗಳನ್ನು
ಗದ್ಯಕ್ಕೆ ಪರಿವರ್ತನೆಮಾಡಬೇಕು. ಇದಲ್ಲದೆ ಈಗಿನ ಪದ್ಯಗಳಲ್ಲಿ ಸೂಚಿಸಿರುವ
ಅಭಿಪ್ರಾಯ ಮತ್ತು ಭಾವಗಳು ಪರದೇಶೀಯವುಗಳಾದುದರಿಂದ ಕನ್ನಡ ಮಾತ್ರ ತಿಳಿ
ದವರಿಗೂ ಮತ್ತು ಬಾಲಕ ಬಾಲಿಕೆಯರಿಗೂ ಅವು ತಿಳಿಯದಕಾರಣ ರುಚಿಸುವುದಿಲ್ಲ.
ಮೂಲವನ್ನು ತಿಳಿದವರಿಗೆ ಅವುಗಳಲ್ಲಿ ಆದರವಿಲ್ಲ. ಜೈಮಿನಿಯೋಪಾದಿಯಲ್ಲಿ ಆಚಂ
ದ್ರಾರ್ಕವಾಗಿ ನಿಲ್ಲುವಂತೆಯೂ ಅಭಿಪ್ರಾಯಭಾವಗಳು ರಸವತ್ತಾಗಿ ಹೃದಯವನ್ನು
ಮುಟ್ಟುವಂತೆಯೂ ಬರೆದರೆ ಅವು ಆದರಕ್ಕೆ ಪಾತ್ರವಾಗುತ್ತವೆ.

ಗ್ರಂಥಗಳಲ್ಲಾಗಲಿ ದಿನವಹಿ ವ್ಯವಹಾರದಲ್ಲಾಗಲಿ ಅತ್ಯಂತ ವಿರಳವಾಗಿರುವ
ನೀಚ ಪಾತ್ರಗಳ ಬಾಯಲ್ಲಿ ಬರತಕ್ಕ ಅತ್ಯಂತ ಗ್ರಾಮ್ಯ ಭಾಷೆಯಲ್ಲಿಯೇ ಆದ್ಯಂತವಾಗಿ
ನಾಟಕಗಳನ್ನು ಬರೆವುದರಿಂದ ಭಾಷೆಗೆ ಕಳೆ ಕಟ್ಟುತ್ತದೆಯೆ ? ಅಥವಾ ಇದರಿಂದ ಇಂಥ
ಭಾಷೆಯು ನಿತ್ಯಗಟ್ಲೆ ವ್ಯವಹಾರದಲ್ಲಿ ಸಾಮಾನ್ಯವಾಗಿ ಉಪಯೋಗಕ್ಕೆ ಬರುತ್ತದೆಯೆ ?
ಇಂದರೆ ಭಾಷೆಗೆ ಗೌರವವುಂಟೆ ? ಹಾಸ್ಯರಸಪ್ರಧಾನವಾದ ಸಂದರ್ಭದಲ್ಲಿ ಇಂಥ
ಭಾಷೆಗೆ ಮಿತವಾಗಿ ಅವಕಾಶ ಕೊಡುವುದು ಮೇಲ್ಮೆಯಲ್ಲವೆ ?

ಸ್ಕೌಟ ರ್‍ಯಾಲಿ

ಈ ವರುಷದ ಅಕ್ಟೋಬರ ತಿಂಗಳ ಕೊನೆಯ ವಾರದಲ್ಲಿ ಇಲ್ಲವೆ ನವ್ಹೆಂಬರ ತಿಂಗಳ ಮೊದಲನೆಯ ವಾರದಲ್ಲಿ ಕರ್ನಾಟಕದ ಯಾವತ್ತೂ ಸ್ಕೌಟರ ರ್‍ಯಾಲಿಯು ಜರುಗುವ ಬಗ್ಗೆ ವ್ಯವಸ್ಥೆಯಾಗುತ್ತಿರುವದು. ಈ ಸುಸಮಯದಲ್ಲಿ ನಮ್ಮ ಇಲಾಖೆಯ ಗವ್ಹರ್ನರರಾದ ನೇಕನಾಮದಾರ ಸರ ಫ್ರೆಡರಿಕ್ ಸಾಯಿಕ್ಸ ಸಾಹೇಬರು ಈ ಊರಿಗೆ ಬರುವವರಿದ್ದಾರೆಂಬ ಸಂತೋಷಕರವಾದ ವಾರ್ತೆಯಿರುವದು. ಈ ಸ್ಕೌಟ ಸಮ್ಮೇಲನವು ಮೂರು ದಿನಗಳ ವರೆಗೆ ನಡೆಯಬೇಕೆಂದೂ ಕೊನೆಯ ದಿನದ ಇನಾಮಿನ ಸಮಾರಂಭವು ನೇಕನಾಮದಾರ ಸಾಹೇಬರವರ ಹಸ್ತದಿಂದ ಜರುಗಬೇಕೆಂದೂ ಬಹು ಜನರ ಆಕಾಂಕ್ಷೆಯು. ಈ ಸುಯೋಗವು ಒದಗಲೆಂದೂ ಸಮಾರಂಭವು ವಿಜೃಂಭಣೆಯಿಂದ ಸಾಗಲೆಂದೂ ಕರ್ನಾಟಕದ ಜನರೆಲ್ಲ ಹಾರೈಸುವದು ಸ್ವಾಭಾವಿಕವಷ್ಟೇ.

ಈ ಸಮ್ಮೇಲನವು ಪೂರ್ಣ ಯಶಸ್ವಿಯಾಗಬೇಕಾದರೆ ಎಲ್ಲ ಪ್ರಾಥಮಿಕ ಶಾಲೆಗಳಲ್ಲಿರುವ ಸ್ಕೌಟ ಪಥಕಗಳು ಸಜ್ಜಾಗಿ ರ್‍ಯಾಲಿಗೆ ಬಂದು ತಾವು ಸ್ಕೌಟ ಸಂಘಕ್ಕೆ ಸೇರಿದ್ದರಿಂದ ತಮಗಾಗುತ್ತಿರುವ ಲಾಭಗಳನ್ನು ಜನತೆಯ ನಿದರ್ಶನಕ್ಕೆ ತಂದು ಕೊಡಬೇಕು. ಇದಕ್ಕಾಗಿ ಈಗಿನಿಂದಲೇ ಸ್ಕೌಟಮಾಸ್ತರರಾದ ಪ್ರಾಥಮಿಕ ಶಿಕ್ಷಕರು ತಮ್ಮತಮ್ಮ ಟ್ರೂಪ, ಪೆಟ್ರೋಲುಗಳಿಗೆ ಯೋಗ್ಯವಾದ ಶಿಕ್ಷಣವನ್ನು ಕೊಡತಕ್ಕದ್ದು. ಈ ಕೆಲಸದಲ್ಲಿ ಪ್ರಾಥಮಿಕ ಶಿಕ್ಷಕರು ಹಿಂದುಳಿಯಲಾರರೆಂದು ನಮ್ಮ ನಂಬಿಗೆ.

ನಮ್ಮ ಶಾಲೆಗಳೊಳಗೆ ಹುಡುಗರಿಗೆ ದೊರೆಯುವ ಶಿಕ್ಷಣವು ಪರಿಪೂರ್ಣವಾದದ್ದಲ್ಲೆಂದೂ, ಇಲ್ಲಿ ವ್ಯವಹಾರದಲ್ಲಿ ಹುಡುಗನು ಕುಶಲನಾಗಲು ಅವಶ್ಯವಿರುವ ಅನೇಕ ಗುಣಗಳು ಅವನಲ್ಲಿ ನೆಲೆಗೊಳ್ಳಲು ಅನುಕೂಲ್ಯವಿರುವದಿಲ್ಲೆಂದೂ, ನೈತಿಕ ಶಿಕ್ಷಣವು ಸಮಾಧಾನಕರವಾಗಿ ದೊರೆಯಲು ಆಸ್ಪದವಿರುವದಿಲ್ಲೆಂದೂ, ಸಮಾಜಹಿತವೂ ದೇಶಹಿತವೂ ಶಿಕ್ಷಣದ ಧ್ಯೇಯವಾಗಿರಬೇಕೆಂದೂ ಶಾಲೆಗಳ ಬಗ್ಗೆ ಜನಾಪವಾದವು ಮೇಲಿಂದ ಮೇಲೆ ಕೇಳಬರುತ್ತಿದೆ. ಸ್ಕೌಟ ಶಿಕ್ಷಣವೆಂದರೆ ಈ ಕೊರತೆಯನ್ನು ಪೂರ್ಣವಾಗಿ ಹೋಗಲಾಡಿಸುವ ಶಿಕ್ಷಣವು. ಈ ಮಾತನ್ನು ಸಮ್ಮೇಲನದ ಶುಭ ಸಮಯದಲ್ಲಿ ನೆರೆದ ಸಾವಿರಾರು ಜನರಿಗೆ ತೋರಿಸಿ ಕೊಟ್ಟು, ನಮ್ಮ ಶಾಲೆಗಳ ಮೇಲೆ ಜನರು ಹೊರಿಸುವ ಅಪವಾದಕ್ಕೆ ಶಿಕ್ಷಕರು ಸರ್ವಥಾ ಕಾರಣರಲ್ಲೆಂದು ಸಿದ್ಧಪಡಿಸಿ ಶಿಕ್ಷಕರು ತಮ್ಮ ಗೌರವವನ್ನು ಕಾಯ್ದುಕೊಳ್ಳುವರೆಂದು ನಾವು ನೆರೆನಂಬಿದ್ದೇವೆ.

ಈ ಸಮ್ಮೇಲನಕ್ಕೆ ಕರ್ನಾಟಕದ ಬಹುತರ ಪ್ರಾಥಮಿಕ ಶಾಲೆಗಳಿಂದ ಸ್ಕೌಟು ಶಿಕ್ಷಣ ಪಡೆಯುತ್ತಿರುವ ಹುಡುಗರು ಬರುವರೆಂದೂ ನಾವು ಕೋರುತ್ತೇವೆ. ಸಮ್ಮೇಲನದಲ್ಲಿ ಅವರಿಗೆ ಯಶಸ್ಸು ದೊರೆಯಲೆಂದು ನಾವು ಆಶಿಸುತ್ತೇವೆ.

ಈ ಬಗ್ಗೆ ವಿಶೇಷ ಮಾಹಿತಿಯನ್ನು ಸ್ಕೌಟ ಸಂಘಗಳ ಪರವಾಗಿ ಒಂದು ಕಮೀಟಿಯವರು ಪ್ರಕಟಪಡಿಸುವರು.

ಬೇಸಿಗೆಯ ಸೂಟಿಯ ಶಿಕ್ಷಣದ ಯೋಜನೆ

ಮಿ. ಚೆ. ಸಿ. ನವಾಥಿ ಮಾಸ್ತರ ಕುಪ್ಪೇಲೂರು ಕೃತ.

॥ ಭಾ. ಷ. ॥ ಕರೆಯೆ ಪೂರ್ವದಿ ಸಭೆಯನದರೊಳು ।
ಬೆರೆದು ನಾಲ್ಕು ಜಿಲ್ಹೆಯೊಳಗಿನ ।
ಪರಮ ಅಡ್‌ಮಿನಿಸ್ಟ್ರೇಟಿವ್ಹರರೂ ಸುಪರವಾಯಸ್‌ಜರರೂ ॥
ಜರುಗಿಸಿರಿ ನೀವ್ ಶಿಕ್ಷಣದ ಸಭೆ ।
ಭರದಿ ಬೇಸಿಗೆ ಸೂಟಿಯೊಳಗೆನೆ ।
ಗುರುವೆನಿಪ ಮುಗೆಡಾಲರಾವಗು ಕಾರ್ಯದರ್ಶಿಗಳು ॥ ೧ ॥

ಬಿಸಿಲುಗಾಲದ ಸೂಟಿಯಲಿ ಸೊಗ- ।
ಯಿಸುವ ಶಿಕ್ಷಕಿ ಶಿಕ್ಷಕರ ಸಭೆ- ।
ಯಿಸವಿ ಹತ್ತೊಂಬತ್ತುನೂರ್ ಮೂವತ್ತುನೂರರೊಳು ॥
ಎಸೆವ ಮೇ ತಿಂಗಳಿನ ಮೊದಲಿನ ।
ಮಿಸುಪವಾರದಿ ಬೇಗದಿಂ ಬುಧ- ।
ರೊಸೆದರ್ಕೆ ಧಾರ್‌ವಾಡ ಟ್ರೇನಿಂಗ್ ಸ್ಕೂಲಿನಲಿ ಮುದದಿ ॥ ೨ ॥

ಬಾಲಕರ ಬೈಸ್‌ಕಲ್ಲಿನೊಳಗಿಹ ।
ಗಾಲಿಮೂರರ ಪೋಲು ಗುರುಮಗ- ।
ಡಾಲ ಮೇಣ್ ಗುರುನಾಯ್ಕ ಮಿಸ್ ಲ್ಯಾಕ್‌ಸ್ಟನ್ನ ದೊರೆಸಾನಿ ॥
ಬಾಲಕರು ತ್ರೈಮೂರ್ತಿಯಿವರೀ- ।
ಗಾಲಿ ಮೂರಾಗಲ್ಕೆ ನಡೆಯಿತು ।
ಲೀಲೆಯಿಂಪಲಿ ಶಿಕ್ಷಣದ ಸಭೆಯೆನಿಪ ಬೈಸ್‌ಕಲ್ಲು ॥ ೩ ॥

ಬಾಲಕರು ಮೇಣ್ ಬಾಲಕೀಯರು ।
ಲೀಲೆಯಿಂ ಆಟಗಳ ಮೇಣ್ ಡ್ರಿಲ್ ।
ಮೇಲೆನಿಸೆ ತೋರಲ್ಕೆ ಮನಕಾನಂದ ತಾನಾಯ್ತು ॥

ಶಾಲೆಯೊಳು ಪಾಠಗಳ ನೊದಲು ನಿ- ।
ರಾಲಸದಲೀ ಆಟ ಡ್ರಿಲ್‌ಗಳ ।
ಕಾಲನಿಯಮದಿ ಮಾಡಿಸಲು ಮಾದರಿಯನೆನಿಸಿದವು ॥ ೪ ।

ಸರಸತಿಯು ವಾಸನಿಸ ಧಾರ್‌ವಾಡ್ ।
ಸುರಸ ಪ್ರಾಕ್ಟೀಸಿಂಗಸ್ಕೂಲ್ ಮೇಣ್ ।
ವರ ಫಿಮೇಲ್ ಟ್ರೇನಿಂಗ ಕಾಲೇಜಗಳಲಿರುತಿರುವಾ
ಉರುತರದ ಶಿಕ್ಷಕರು ಶಿಕ್ಷಕಿ ।
ಯರುಗಳನಿಬರು ಪಾಠಕಲಿಸಲು ।
ಪರಮ ತೋಷವದಾಯ್ತು ಪೆಸರುಸುರುವೆನು ನಾನವರಾ ॥ ೫ ॥

ತರತರದ ಶಿಕ್ಷಣದ ಕೆಲಸಕೆ ।
ನೆರವಿಯನು ಕೊಡುತಿರ್ದವ್ರೈ ಉಪ- ।
ಕರಣಗಳು, ಬಹು ಶ್ರಮದಿ ಮಾಡಿಹ ಸರ್ವಶಿಕ್ಷಕರಾ ॥
ಉರುತರದಲುಪಕೃತಿಗೆ ಪ್ರೇಕ್ಷಕ- ।
ರಿರದಲಾಶೀರ್ವಾದ ಮಾಡುತ- ।
ಲೊರೆಯುವುದು ಶಿಕ್ಷಣದ ಕೆಲಸದಿ ವರಸುಧಾರಣೆಯಂ ॥ ೬ ॥

ಸುಗುಣರಹ ಮಾಧ್ಯಮಿಕ ಶಿಕ್ಷಕ ।
ರಗಣಿತ ಪ್ರಾಥಮಿಕ ಶಿಕ್ಷಕರ್ ।
ನಗುತಲಾರ್ ದಿನ ಕಳೆದರಾರ್ ಜಾವಗಳ ತೆರದಲ್ಲಿ ॥
ಬಗೆಬಗೆಯ ಚರ್ಚೆಗಳ ಮಾಡುತ- ।
ಲುಗುವ ಸಂಶಯಗಳನು ನೀಗುತ ।
ಬಗೆಯ ಹರಿಸಿದರಂತ್ಯದಲಿ ಸುವಿಚಾರ ವಿನಿಮಯದಿ ॥ ೭ ॥

ಕಡೆಯದಿನ ಮಧ್ಯಾಹ್ನ ಕಾಲದಿ ।
ಸುಡುವ ಚಹ ಅವಲಕ್ಕಿ ಬಾಳೆಯ ।
ಕಡು ರುಚಿಯ ಪಣ್‌ಗಳನು ನೀಡುತ ಮಾಡಿ ಸತ್ಕಾರಂ ॥
ಪಡೆದರೈ ಖ್ಯಾತಿಯನು ದೇವನೆ ।
ಸಡಗರದೊಳಾರೋಗ್ಯ ಸುಖದೊಳ- ।
ಗಿಡುವುದೈ ಮುಗಡಾಲ ನಾಯ್ಕ ಮಿಸ್ ಲ್ಯಾಕ್ಸಟನ್ನರರಂ ॥೮॥

ಧಾರವಾಡದಿ ರಾಜಿಸುವ ಹಾ- ।
ವೇರಿ ಪೇಟೆಯ ಮಠದಿ ಶೋಭಿಪು- ।
ದಾರ ಮಹಿಮರ ಶ್ರೀ ಮಹಾಮೃತ್ಯುಂಜಯ ಸ್ವಾಮಿಗಾ ॥
ಚಾರುತರ ಬೋರ್ಡಿಂಗಿನಲಿ ಬಿಡ- ।
ದಾರುದಿನ ದೂಟವನು ಹಾಕಿದು- ।
ದಾರ ಮುಟ್ಟಿ ಶಿವಪ್ಪ ಪ್ರಮುಖರ ಪ್ರೇಮದುಪಕೃತಿಗೆ ॥ ೯ ॥

ಓರಿಗೆಯ ಶಿಕ್ಷಕರು ತಮ್ಮೊಳು ।
ಮೂರು ಹತ್ತೊಂಬತ್ತು ರೂಪಾಯ್ ।
ಸೇರಿಸುತ ವರ್ಗಣಿಯ ಕೊಂಡರು ದೊಡ್ಡ ಕೊಳಗವನು ॥
ಮೂರು ಮಣವಿರುವಂಥದದನಂ ।
ಸಾರು ಮಾಡಲ್ಕೆಂದು ಗುರುಪಾ- ।
ದಾರವಿಂದದಲರ್ಪಿಸಿದರೈ ಭಕುತಿ ಗಾಣಿಕೆಯ ॥ ೧೦ ॥

ಕಡೆಯ ದಿನದಲಿ ಬಂದು ಶಿಕ್ಷಕ ।
ಗಡಣದಜ್ಞಾನೆಂಬ ಮೊಸರನು ।
ಕಡೆದು ಸುಜ್ಞಾನೆಂಬ ನವನೀತವನು ಮೆಲ್ಲಿಸಿದಾ ॥
ಕಡು ದಯದ ಜೋಶೀಯರಾಯರ ।
ಅಡಿಗೆ, ಮೇಣ್ ಸವಿನುಡಿಯ ಪೇಳ್ದ ।
ಸಡಗರದ ಮಹಿಷಿಯರಿಂಗರ್ಪಿತವೈ ಕೃತಜ್ಞತೆಯು ॥ ೧೧ ॥

ಅರಿಯದಿದ್ದರು ಕನ್ನಡವ ತಾವ್ ।
ಹುರುಪಿನಿಂ ತಪ್ಪದಲೆ ಬರುತಲಿ ।
ಭರಿತ ಸಭೆಯಲಿ ಭಗಣ ಮಧ್ಯದ ಚಂದ್ರನಂದದಲಿ ॥
ಮೆರೆಯುತಲಿ ಸಭೆಕಾರ್ಯ ನಡೆಸಿದ ।
ವರ ವಕೀಲ್ ಸಾಹೇಬರಿಗೆ ನಾವ್ ।
ನಿರುತ ಋಣಿಯಾಗುತ್ತ ತೋರ್ಪುದು ವರ ಕೃತಜ್ಞತೆಯ ॥ ೧೨ ॥

ಇತಿಹಾಸ ಶಿಕ್ಷಣ

ಲೇಖಕರು:—ಶ್ರೀ. ವ್ಹಿ. ಆರ್. ಕೆಸರೀಕರ ಬಿ. ಎ., ಅಡ್. ಆಫೀಸರ ಡಿ. ಸ್ಕೂ. ಬೋರ್ಡ, ಕಾರವಾ

ಇತಿಹಾಸದಲ್ಲಿ ಹಿಂದಿನ ಕಾಲದ ಅನುಭವವು ತುಂಬಿರುವದು. ಈ ಅನುಭವವೆಂದರೆ, ಮನುಷ್ಯರು ಆರಂಭಿಸಿದ ಕಾರ್ಯಗಳೂ ಅವುಗಳಿಂದುಂಟಾದ ಪರಿಣಾಮವೂ ಇರುವದು. ಅದರಲ್ಲಿ ಇಡೀ ಮನುಷ್ಯ ಸ್ವಭಾವದ ಚಿತ್ರವಿಚಿತ್ರ ಕಾರ್ಯಗಳು ಉದಾಹೃತವಾಗಿರುವವು. ಇದರ ಜ್ಞಾನವು ಹುಡುಗರಿಗೆ ಆದರೆ, ಅದು ಅವರ ಮುಂದಿನ ಆಯುಷ್ಯಕ್ರಮದಲ್ಲಿ ಮಾರ್ಗದರ್ಶಕವಾಗಿ, ಜನ್ಮಸಾಫಲ್ಯವನ್ನು ಮಾಡಿಕೊಳ್ಳಲಿಕ್ಕೆ ಸಹಾಯಕವಾಗುವದು.

ಆದರೆ, ಈ ಅನುಭವವು ಪ್ರಾಥಮಿಕ ಶಿಕ್ಷಣದ ಹುಡುಗರಿಗೆ, ಅವರ ವಯಸ್ಸಿನ ಮಾನದಿಂದ, ತೀರ ಅಪರಿಚಿತವಿರುವದು. ಅವರು ಇನ್ನೂ ಸಣ್ಣವರು ಇರುವದರಿಂದ ಈ ಪಕ್ವ ಸ್ಥಿತಿಯನ್ನು ಹೊಂದಿದ ಅನುಭವವನ್ನು ಅವರ ಮುಂದೆ ಇಟ್ಟರೆ, ಅದು ಅವರ ಅನುಭವಕ್ಕೆ ಹೊಂದುವದಿಲ್ಲಾದ್ದರಿಂದ, ಅದರಲ್ಲಿರುವ ಸಂಗತಿಗಳು ಅವರಿಗೆ ಮೆಚ್ಚಲಾರವು. ಆದರೆ ನಿರಸವಾಗಿ ಕಾಣುವ ಈ ಅನುಭವದ ಸಂಗತಿಗಳನ್ನು, ಹುಡುಗರು ಮೆಚ್ಚುವ ಹಾಗೆ, ಅವರ ಮುಂದೆ ಇಡುವದರಲ್ಲಿಯೇ, ಶಿಕ್ಷಕರ ನೈಪುಣ್ಯವು ಕಂಡು ಬರುವದು. ಆದದರಿಂದ ಯಾವ ಯುಕ್ತಿಗಳಿಂದ, ಈ ಇತಿಹಾಸ ಶಿಕ್ಷಣವು ಮನೋರಂಜಕವಾಗುವದು, ಎಂಬದನ್ನು ನಾವು ನೋಡೋಣ.

೧. ತೀರ ಸಣ್ಣ ಹುಡುಗರಿಗೆ ಆದಷ್ಟು ಸುಲಭವಾದ ಇತಿಹಾಸದ ಸಂಗತಿಗಳನ್ನು ಹೇಳಬೇಕು. ಅವನ್ನು ಹಾವಭಾವ ಮಿಶ್ರಿತ ಹೇಳುವದು ಚೆಲ್ಲೋದು. ಈ ಸಂಗತಿಗಳು, ಅವರ ಅನುಭವಕ್ಕೆ ಹೋಲಬೇಕು, ಇಲ್ಲವೆ ತಾವು ಹೊಂದಿದ ಅನುಭವದ ಸಹಾಯದಿಂದ ತಿಳುಕೊಳ್ಳುವಂಥವಿರಬೇಕು.

೨. ಇತಿಹಾಸದ ಸಂಗತಿಗಳು ತೀರ ಅಪರಿಚಿತವಿದ್ದರೆ, ಅವಕ್ಕೆ ಹುಡುಗರ ಅನುಭವದ ಬಣ್ಣ ಕೊಡಬೇಕು, ಅಂದರೆ, ಅದನ್ನು ಹುಡುಗರ ಅನುಭವದ ಸ್ವರೂಪವುಳ್ಳದ್ದನ್ನಾಗಿ ಮಾಡಬೇಕು. ಉದಾಹರಣಾರ್ಥವಾಗಿ, ಯುದ್ಧಗಳನ್ನು ಹುಡುಗರಲ್ಲಿ ಪರಸ್ಪರ ನಡೆಯುವ ಜಗಳಗಳಿಗೂ, ಕೋಟೆಗಳನ್ನು ಮನೆಯ ಸುತ್ತಲೂ ಕಟ್ಟಿದ ಗೋಡೆಗಳಿಗೂ, ರಾಜ್ಯಗಳನ್ನು ವಸ್ತುಗಳಿಗೂ ಹೋಲಿಸಬೇಕು.

೩. ಮಿಶ್ರ ಸಂಗತಿಗಳನ್ನು ಸಣ್ಣ ಹುಡುಗರಿಗೆ ಹೇಳಬಾರದು. ಯಾಕಂದರೆ ಅವುಗಳಿಂದ ಹುಟ್ಟಿದ ಪರಿಣಾಮವು, ಹುಡುಗರ ಮನಸ್ಸಿಗೆ ಖಾತ್ರಿಯನ್ನು ಉಂಟು

ಮಾಡುವದಿಲ್ಲ. ಹೆಚ್ಚು ವಿಕಾಸ ಹೊಂದಿದ ಮನಸ್ಸು ಮಾತ್ರ ಮಿಶ್ರ ಪರಿಣಾಮವನ್ನು ತಿಳಿದುಕೊಳ್ಳುವದು. ಆದದರಿಂದ ಇತಿಹಾಸದೊಳಗಿನ ಮಿಶ್ರ ಸಂಗತಿಗಳು ಸಣ್ಣ ಹುಡುಗರಿಗೆ ತಿಳಿಯುವದಿಲ್ಲ. ಮತ್ತೆ ಅವುಗಳಿಂದ ಅವರ ಮನಸ್ಸಿಗೆ ಬೇಸರ ಹುಟ್ಟುತ್ತದೆ.

೪. ಯಾವದೊಂದು ವ್ಯಕ್ತಿಗೆ ಸಂಬಂಧವಾದ ಇತಿಹಾಸದ ಸಂಗತಿಗಳು ಆದಷ್ಟು ಮಟ್ಟಿಗೆ ಕಾಲಾನುಕ್ರಮದಿಂದ ಇರಬೇಕು. ಯಾಕಂದರೆ, ಹುಡುಗರ ಆಯುಷ್ಯದ ಸಂಗತಿಗಳು ಕಾಲಾನುಕ್ರಮದಿಂದಲೇ ಇರುತ್ತವೆ. ಆ ಮೂಲಕ ಮನುಷ್ಯ ಸ್ವಭಾವದ ವಿಕಾಸದ ಕ್ರಮವು ಅವರಿಗೆ ಗೊತ್ತಾಗುತ್ತದೆ.

೫. ಯಾವದೊಂದು ವ್ಯಕ್ತಿ ಇತಿಹಾಸದ ಸಂಗತಿಗಳು, ಅದರ ಗುಣಗಳಿಗೆ ಸಂಬಂಧವಾದ ದ್ಯೋತಕವಾಗಿರುವದರಿಂದ, ಇಂಥ ಕೆಲವು ಸಂಗತಿಗಳನ್ನು ಹೇಳಿ, ಆ ಗುಣಗಳನ್ನು ಸ್ಪಷ್ಟೀಕರಿಸಬೇಕು. ಹೊರ್ತು, ಗುಣಗಳನ್ನು ಮೊದಲು ಹೇಳಿ ಅದನ್ನು ಸ್ಪಷ್ಟೀಕರಿಸುವ ಸಂಗತಿಗಳನ್ನು ಬಳಿಕ ಹೇಳಬಾರದು. ಒಬ್ಬ ವ್ಯಕ್ತಿಯು ಬೇರೆ ಬೇರೆ ಸಂಗತಿಗಳನ್ನು ವರ್ಗೀಕರಿಸಿ, ಅದರ ಸ್ವಭಾವವನ್ನು ನಿರ್ಣಯಿಸಬೇಕು.

೬. ಯುದ್ಧದ ವಿಶೇಷ ವರ್ಣನೆಯನ್ನು ಸಣ್ಣ ಹುಡುಗರಿಗೆ ಹೇಳಬಾರದು. ಅದನ್ನು ತಿಳುಕೊಳ್ಳುವ ಮನಸ್ಸಿನ ವಿಕಾಸವು ಇನ್ನೂ ಅವರಿಗೆ ಆಗಿರುವದಿಲ್ಲ. ಒಡೆದು ಕಾಣುವಂಥ ಕೆಲವು ಸಂಗತಿಗಳನ್ನೂ, ಅದರ ಒಂದೆರಡು ಕಾರಣಗಳನ್ನೂ ಅದರಿಂದ ಸ್ಪಷ್ಟವಾಗಿ ಕಾಣುವ ಪರಿಣಾಮವನ್ನೂ ಅವರ ಮುಂದೆ ಇಡಬೇಕು.

೭. ಇತಿಹಾಸದ ಸಂಗತಿಗಳನ್ನು ಒಂದಕ್ಕೊಂದು ಸಂಬಂಧಪಟ್ಟವನ್ನೇ ಹೇಳಬೇಕು. ಬಿಚ್ಚಿದ ಸಂಗತಿಗಳನ್ನು ಹೇಳಬಾರದು. ಬಿಚ್ಚಿದ ಸಂಗತಿಗಳಿಂದ, ಶಿಕ್ಷಣದ ಐಕ್ಯಭಾವವು ಹೋಗುತ್ತದೆ.

೮. ಇತಿಹಾಸ ಶಿಕ್ಷಣದಲ್ಲಿ ಇಸವಿಯನ್ನು ಹೇಳುವಾಗ, ಆ ಇಸವಿಯು ತೋರಿಸುವ ಹಿಂದಿನ ಕಾಲದ ಕಲ್ಪನೆಯನ್ನು ಹುಡುಗರಿಗೆ ಕೊಡಬೇಕು. ಆ ಕಲ್ಪನೆಯು ಸಣ್ಣ ಹುಡುಗರಿಗೆ ಇರುವದಿಲ್ಲ. ಈ ಇಸವಿಗಳು ಬಹು ತುಸು ಇರಬೇಕು.

೯. ಇತಿಹಾಸದಿಂದ ಹೊರಡುವ ನೈತಿಕ ಗುಣಗಳನ್ನೂ, ವ್ಯವಹಾರ ಜ್ಞಾನವನ್ನೂ, ಆಗಿಂದಾಗ್ಗೆ ಹುಡುಗರಿಗೆ ಸ್ಪಷ್ಟೀಕರಿಸಿ ಹೇಳಬೇಕು. ಆ ಮೂಲಕ ಅವು ಹುಡುಗರ ಮನಸ್ಸಿನ ಭಾಗವಾಗಿ ನಿಲ್ಲುವವು.

ಪರೀಕ್ಷೆಯ ಪ್ರಶ್ನೆಗಳು

ಮುಂಬಯಿ ಇಲಾಖೆಯ ಶಾಲಾಖಾತೆಯವರು ಮಾಧ್ಯಮಿಕ ಶಿಕ್ಷಕರ ಸರಟಿಫಿಕೇಟಗಾಗಿ ಒಂದು ಪರೀಕ್ಷೆಯನ್ನು ಪ್ರತಿವರ್ಷ ತೆಗೆದುಕೊಳ್ಳುವರು. ಶಿಕ್ಷಕರಾಗಿರುವವರಿಗೆ ಯಾವ ಬಗೆಯ ಸಂಗತಿಗಳ ಮಾಹಿತಿಯು ಇರುವದು ಅವಶ್ಯವೆಂದು ಈ ಪರೀಕ್ಷೆಯಲ್ಲಿ ಕೊಡುವ ಪ್ರಶ್ನಗಳಿಂದ ತಿಳಿಯುವದು. ಇದೇ ವರುಷ ಜುಲೈ ತಿಂಗಳಲ್ಲಾದ ಪರೀಕ್ಷೆಯ ಪ್ರಶ್ನಗಳನ್ನು ನಮ್ಮ ವಾಚಕರ ಮಾಹಿತಿಗಾಗಿ ಮೆ॥ ಎ. ಇ. ದ. ಭಾ. ಇವರ ಅಪ್ಪಣೆಯ ಮೇರೆಗೆ ಇಲ್ಲಿ ಕೊಟ್ಟಿರುವೆವು. ಪರೀಕ್ಷೆಯಲ್ಲಿ ಮೂರು ಮೂರು ತಾಸಿನ ೨ ಕಾಗದಗಳಿರುವವು. ಪ್ರತಿಯೊಂದು ಕಾಗದದಲ್ಲಿ ೨ ಭಾಗಗಳಿದ್ದು, ಪ್ರತಿಯೊಂದು ಭಾಗದಲ್ಲಿಯ ಮೂರು ಪ್ರಶ್ನಗಳಿಗೆ ಉಮೇದವಾರರು ಉತ್ತರ ಬರೆಯಬೇಕೆಂಬ ನಿರ್ಬಂಧವಿರುವದು.

ಶಿಕ್ಷಣದ ಇತಿಹಾಸ ಹಾಗು ಮೂಲತತ್ವಗಳು—ಕಾಗದ ೧.

ಭಾಗ ೧.

೧. ಪೆಸ್ಟೂಲಾಜಿಯ ಶಿಕ್ಷಣ ವಿಷಯಕ ಕಲ್ಪನೆಗಳನ್ನು ಸಂಕ್ಷೇಪದಲ್ಲಿ ವಿವರಿಸಿರಿ.

೨. ಚಿಕ್ಕಮಕ್ಕಳ ಶಿಕ್ಷಣದ ಬಗ್ಗೆ ಫ್ರೂಬಲನು ಪ್ರತಿಪಾದಿಸಿದ ಪದ್ಧತಿಯನು ವಿವೇಚಿಸಿರಿ.

೩. ಹರಬಾರ್ಟನು ಪ್ರತಿಪಾದಿಸಿದ ಮುಖ್ಯವಾದ ಶಿಕ್ಷಣ ತತ್ವಗಳನ್ನು ಏಕೀಕರಿಸಿ ಸಂಕ್ಷೇಪದಲ್ಲಿ ಬರೆಯಿರಿ.

೪. ಮಾಂಟಿಸೋರೀ ಪದ್ಧತಿಯ ಸಾಲೆಗೂ ನಮ್ಮಲ್ಲಿರುವ ಸಾಮಾನ್ಯ ಸಾಲೆಗೂ ಯಾವ ಹೆಚ್ಚುಕಡಿಮೆಗಳಿರುವವು ?

ಭಾಗ ೨.

೫. ಶಿಕ್ಷಣದ ಉದ್ದೇಶಗಳು ಯಾವವಿರಬೇಕು ? ನೀವು ಕೆಲಸ ಮಾಡುತ್ತಿರುವ ಶಾಲೆಯಲ್ಲಿ ಈ ಉದ್ದೇಶಗಳು ಎಷ್ಟರಮಟ್ಟಿಗೆ ಸಿದ್ಧಿ ಹೊಂದುತ್ತಿರುವವೆಂಬದನ್ನು ವಿವರಿಸಿರಿ.

೬. ವರ್ಗದ ಹುಡುಗರು ಪಾಠದ ಕಡೆಗೆ ಲಕ್ಷ್ಯವುಳ್ಳವರಾಗಿರುವರೆಂಬದನ್ನು ಶಿಕ್ಷಕನು ಯಾವ ಲಕ್ಷಣಗಳಿಂದ ತಿಳಿದುಕೊಳ್ಳಬೇಕು ? ವರ್ಗದ ಲಕ್ಷ್ಯವು ಹೊಯ್ದಾಡದಂತೆ ಇರಲಿಕ್ಕೆ ಯಾವ ಉಪಾಯುಗಳನ್ನು ಮಾಡಬಹುದು ?

೭. ಕೆಳಗೆ ಕಾಣಿಸಿದವುಗಳಲ್ಲಿ ಬೇಕಾದ ಮೂರರ ಬಗ್ಗೆ ಟಿಪ್ಪಣಿ ಬರೆಯಿರಿ.

(೧) ಮನೋಭಾವಗಳು. (೨) ನಿರ್ಬಂಧವಿಲ್ಲದ ಶಿಸ್ತು. (೩) ಡಾಲ್ಟನ್ ಪ್ಲಾನ (೪) ಕೆಲಸ ಮಾಡಿ ಕಲಿಯುವದು.

೮. ಬುದ್ಧಿಪರೀಕ್ಷೆಯೆಂದರೇನು ? ಇದರಿಂದ ಶಿಕ್ಷಕರಿಗೆ ಯಾವ ಉಪಯೋಗವಾಗುವದೆಂಬದನ್ನು ಸಂಕ್ಷೇಪದಲ್ಲಿ ವಿವರಿಸಿರಿ.

೯. ಸೌಂದರ್ಯದ ಭಾವನೆಯ ಬಗ್ಗೆ ಶಿಕ್ಷಣ ಕೊಡುವದನ್ನು ಕುರಿತು ನಿಮ್ಮ ವಿಚಾರಪೂರ್ಣವಾದ ಅಭಿಪ್ರಾಯಗಳನ್ನು ಸ್ವಲ್ಪದರಲ್ಲಿ ಬರೆಯಿರಿ.

೧೦. ಕಲಿಯಲಿಕ್ಕೆ ಬಂದ ಹುಡುಗರಲ್ಲಿ ಶಾಲೆ ಬಿಡುವ ಸಮಯಕ್ಕೆ ವೈಯಕ್ತಿಕ ಹಾಗು ಸಾಮಾಜಿಕ ಏಳಿಗೆಗೆ ಸಹಾಯಕವಾದ ಕೆಲವು ಚಟಗಳು ನೆಲೆಗೊಳ್ಳದಿದ್ದರೆ ಶಾಲೆಯ ಉದ್ದೇಶ್ಯವು ಕೊನೆಗಾಣಲಿಲ್ಲವೆಂದು ಪ್ರತಿಯೊಬ್ಬ ಶಿಕ್ಷಕನು ಅರಿತಿರಬೇಕು. ಈ ಮಾತಿನ ಬಗ್ಗೆ ಪೂರ್ಣವಾಗಿ ವಿವೇಚಿಸಿರಿ.

ಕಲಿಸುವ ಪದ್ಧತಿಗಳು, ಶಾಲೆಯ ವ್ಯವಸ್ಥೆ ಹಾಗೂ ಆರೋಗ್ಯ-ಕಾಗದ ೨

ಭಾಗ ೧.

ಕೆಳಗೆ ಕಾಣಿಸಿದ ವಿಷಯಗಳಲ್ಲಿ ಬೇಕಾದ ಒಂದು ವಿಷಯವನ್ನು ಕುರಿತು ಒಂದು ಅಥವಾ ಅವಶ್ಯ ಕಂಡಲ್ಲಿ ಹೆಚ್ಚು, ಪಾಠಗಳನ್ನು ಕೊಡುವ ಬಗ್ಗೆ ಪಾಠದ ಟಿಪ್ಪಣಿ ಬರೆಯಿರಿ:—

(೧) ಏಶಿಯದ ಮಾನ್ಸೂನ ನಾಡುಗಳು. (೨) ಅಕಬರ ಅಥವಾ ಶಿವಾಜಿಯ ಚರಿತ್ರ. (೩) ಸೊನ್ನೆ. (೪) ಬೀಜಗಳ ಪ್ರಸರಣ (೫) ನಿಮ್ಮ ಪ್ರೀತಿಯ ಒಂದು ಕವಿತೆಯ ಬಗ್ಗೆ ರಸಾಸ್ವಾದದ ಪಾಠ (ಮೂಲ ಕಾಗದದಲ್ಲಿ ಒಂದು ಕವಿತೆಯನ್ನೇ ಕೊಟ್ಟಿರುವರು.) (೬) ಅಂಕಗಣಿತದ ಲೆಕ್ಕಗಳಲ್ಲಿಯ "ಶತಮಾನ"

(೨) ಪ್ರಕೃತಿ ವಿಮರ್ಶೆಯ ಶಿಕ್ಷಣದಲ್ಲಿ (I) ಪ್ರವಾಸಗಳು (ii) ಪಠ್ಯಪುಸ್ತಕಗಳು (iii) ಶಾಲೆಯ ತೋಟ ಇವುಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ಹೇಳಿರಿ.

(೩) ಇತಿಹಾಸದ ಅಭ್ಯಾಸದಲ್ಲಿ ಹುಡುಗರಿಗೆ ಮನಸಾಗಬೇಕಾದರೆ, ಯಾವ ಉಪಾಯಗಳನ್ನು ಮಾಡುವಿರಿ ?

(೪) ಬಹುತರವಾಗಿ ಹುಡುಗರಿಗೆ ಗಣಿತ ವಿಷಯವು ಸೇರುವದಿಲ್ಲ. ಯಾಕೆ ? ಇಂಥವರಿಗೆ ಗಣಿತವು ಪ್ರೀತಿಯ ವಿಷಯವಾಗಲಿಕ್ಕೆ ನೀವು ಏನು ಮಾಡುವಿರಿ ?

(ಮುಂದೆ ಸಾಗುವದು.)

ಸಣ್ಣ ಹುಡುಗರಿಗೆ ಕಲಿಸಬಹುದಾದ ಸುಲಭ ಕವಿತೆ

ಗಿಣಿ

ಹಸುರಿನ ಬಣ್ಣದ ಕೆಂಪಿನ ಮೂತಿಯ ಹಾರುವ ಹಕ್ಕಿಯು ನೋಡಮ್ಮಾ।
ವನದಲಿ ಹಾರುತ ಫಲಗಳ ತಿನ್ನುತ ಚೆಂದದಿ ಇರುವುದು ನೋಡಮ್ಮಾ ॥
ರಂಗನ ಮನೆಯಲಿ ಅಂದವ ಬೀರುತ ಸೆರೆಯಾಗಿರುವುದು ಏಕಮ್ಮಾ।
"ಗಿಣಿ ಗಿಣಿ" ಎನ್ನುತ ಚಣ್ಣನೆ ನಗೆಯುತ ಕುಣಿಯುವ ಬಾಲರ ನೋಡಮ್ಮಾ॥
ಗೂಡಲಿ ಬೆಳೆಯುವ ರಾಮನ ಕೂಗುವ ಮುದ್ದಿನ ಗಿಣಿಯನು ಈಯಮ್ಮಾ।
ಮನವನು ಮೋಹಿಪ ಕಂಪಿನ ಹಕ್ಕಿಯ ಸೆರೆಯಾಗಿಡುವುದು ಬೇಡಪ್ಪಾ।
ನೀನೇ ಎನ್ನಯ ಮೋಹದ ಗಿಣಿಯು ಬೇರೆಯ ಗಿಣಿಗಳು ಏಕಪ್ಪಾ ॥

ಪ್ರ ಕ ಟ ನೆ

ಉರ್ದು ಪುಸ್ತಕಗಳು (ಕಳೆದ ತಿಂಗಳಿಂದ ಮುಂದೆ ಸಾಗಿದ್ದು)

P= ಪ್ರಾಯಿಜ ಬುಕ್ಸ L= ಲಾಯಬ್ರರಿ ಬುಕ್ಸ T= ಟೆಕ್ಸ್ಟ ಬುಕ್ಸ
ಗ್ರಂ। ಕ॥ = ಗ್ರಂಥಕರ್ತ, ಪ್ರ॥ ರು= ಪ್ರಕಾಶಕರು.

ನಂ. ೧೫ ಉರ್ದುಕೆ ತಿಸರಿ ಕಿತಾಬ (೨೫ನೆ ಆ) ೧೯೩೧, T ೦-೪-೧೦; ಚೌಥಿ ಕಿತಾಬ ೦-೧೨-೯ ಗ್ರಂ। ಕ॥ ಮುನಸಿರಾಮ ಅಗ್ರವಾಲಾ ಪ್ರ॥ ಮ್ಯಾಕ್ಮಿಲನ್ ಅ್ಯ. ಕಂ॥ P. L.

ನಂ. ೧೭ರಿಂದ ೨೦ ಗ್ರಂ. ಕ. ಮಾಜೋರ ಎ, ಡಬ್ಲ್ಯು ಡಾನೆ ಎಮ್. ಎ. (ಆಕ್ಸಫರ್ಡ) ಎಫ್. ಆರ್. ಜಿ. ಎಸ್. ಪ್ರ॥ ಉತ್ತರ ಚಂದಕಾಪೂರ ಲಾಹೋರ, ಅಮ್ವಲ (೨ನೇ ಆ. ೧೯೩೨) ೦-೧೦-೬ ಸದರ ದುಮಮ್ ೦-೧೨-೫ ಸುಮಮ್ ೦-೯-೪ ಚಹರಮ್ ೦-೯-೯ ಪ್ರಾ. ಶಾ. ಮಾ. ಶಾ. ಟ್ರೇ. ಸು॥ ಗಳಿಗೆ L

ನಂ. ೨೧ರಿಂದ ೨೫ ಗ್ರಂ. ಕ॥ ಚೌಥ ರಫಾತುದ್ದೀನ B. A. P. E. S. ಇನ॥ ಡಿ. ಸ್ಕೂಲ್ಸ ಮುಲ್ತಾನ ಪ್ರ॥ ಉತ್ತರ ಚಂದಕಾಪೂರ. ೧ ಉರ್ದು ಇನ್ ಶಾ. ಪಾರ್ಡಿಝು ಫಾರ್ ಎ. ವ್ಹಿ. ಸ್ಕೂಲ್ಸ V ೧ನೆ ಆ, ೧೯೨೬ ೦-೫-೦ ಸದರ VI ನೇ ಇ. ಗಾಗಿ

(೧ನೆ ಆ. ೧೯೨೯) ೯-೫-೬ ಸದರ VII ನೇ ಇ. ಗಾಗಿ (೧ನೇ ಆ. ೧೯೨೯) ಬೆಲೆ ೯-೮-೦ ಸದರ VIII ನೇ. ಇ. ಗಾಗಿ (೧ನೇ ಆ. ೧೯೨೯) ಬೆಲೆ ೦-೮-೦ ಸದರ ಮ್ಯಾಟ್ರಿಕ್ಯುಲೇಶನಕ್ಕಾಗಿ (೧ನೇ ಆ. ೧೯೨೬) ಬೆಲೆ ೦-೮-೦ P. L.

೨೬. ಹೋವರ್ ನರ್ಸಿಂಗ ಆಫ್ ಉರ್ದು ೦-೧೪-೦ ೧ನೆಆ ಗ್ರಂ। ಕ॥ ಟ್ರಾನ್ಸ ಲೇಟೆಡ್ ಬಾ. ಡಾ. E. N. ಪಂಜಾಬ ಪ್ರ॥ ಸ್ವ್ಯಾ. ಜೋಹನ್, P. L.

ನಂ. ೨೭ರಿಂದ ೩೧ ಗ್ರಂ। ಕ॥ ಮೌಲ್ವಿ ಮ। ಇಸ್ಮಾಯಿಲ್ ಪ್ರ॥ ಮ್ಯಾನೇಜರ ನ್ಯೂವೆಲ್ ಕಿಶೋರ ಪ್ರೆಸ್ ಲಖನೌ. ಉರ್ದುಕಾಕಾಯದಾ ಆ್ಯಂಡ ರೀಡರ್ಸ್ ೧ನೇ ಇ. ಗಾಗಿ ಬೆಲೆ ೦-೦-೬ ಸದರ ೨ನೇ ಇ. ಗಾಗಿ ಬೆಲೆ ೦-೧-೦ ಸದರ ೩ನೇ ಇ. ಗಾಗಿ ೦-೨-೦ ಸದರ ೪ನೇ ಇ. ಗಾಗಿ ೦-೨-೯ ಸದರ ೫ನೇ ಇ. ಗಾಗಿ ೦-೩-೬ P. L.

ನಂ. ೩೨ ಅಲ್‌ಫಿರೋಜ, ಬೆಲೆ ೩-೦-೦ (೩೩) ಅಲ್‌ಮಾಮೂನ ಬೆ. ೧-೮-೦ (೩೪) ಸಫರನಾಮಾ -ಎ- ರೂಮ್ ವಶಾಮ್ ೨-೦-೦ ಇವುಗಳ ಗ್ರ. ಕ- ಸ್ಯಾಮುಲ್ ಅಲಮ್ ಮೌಲಾನಾ ಶಿಬ್ಲಿನೋಮಾನಿ ಪ್ರ॥ ಕ್ರಮವಾಗಿ ಅಕ್ಬರ ಬುಕ್ ಏಜನ್ಸಿ ದಿಲ್ಲಿ, ಕೌಮಿ ಪ್ರೆಸ್ ದಿಲ್ಲಿ (ಕಡೆಯವೆರಡಕ್ಕೂ) P. L. (ಉರ್ದು ಮಾ. ಶಾ. ಗೆ ಟ್ರೇ. ಸಂ॥ಗೆ) (೩೫) ಶೀರತ್ -ಎ- ನಾಮಾ ಗ್ರಂ. ಕ- ಶ್ಯಾಮುಸುಲ್ ಅಲಮ್ ಶಿಬ್ಲಿ ನೌಮಾನಿ ಪ್ರ॥ ಅಕ್ಬರ ಬುಕ್ ಎಜನ್ಸಿ ದಿಲ್ಲಿ ಬೆಲೆ ೧-೮-೦ P. L. ಉರ್ದು ಮಾ. ಶಾ. ಟ್ರೇ. ಸ॥ಗೆ

ನಂ. ೩೬ರಿಂದ ೪೦ ಗ್ರಂ. ಕ- ಶಾಮುಸುಲ್ ಅಲಮ್ ಶಿಬ್ಲ ನೌಮಾನಿ ಪ್ರ॥ರು ಫೇಜಆಮ್ ಪ್ರೆಸ್ ಅಲೀಗಡ (೧) ಶೇರ ಉಲ್ ಅಜಮ್ ಭಾಗ ೧ ಬೆಲೆ ೩-೦-೦ ಸದರ ಭಾಗ ೨ ಬೆಲೆ ೨-೮-೦ ಸದರ ಭಾಗ ೩ ಬೆಲೆ ೨-೮-೦ ಸದರ ಭಾಗ ೪ ೩-೦-೦ ಸದರ ಭಾಗ ೫ ಬೆಲೆ ೨-೦-೦ P. L. (ಮಾ. ಶಾ. ಮತ್ತು ಟ್ರೇ. ಸ.)

ನಂ. ೪೧ರಿಂದ ೪೩ ಗ್ರ. ಕ. ಶ್ಯಾಮುಸುಲ್ ಅಲಮ್. ಪ್ರ॥ ರು ಮಾಸ್ರಿಫ್ ಪ್ರೆಸ್ ಅಜಂಗರ (೧) ನೌಜಾನಾ -ಎ- ಅನಿಸ್ -ಓ- ಡಬೀರ ಬೆಲೆ ೧-೪-೦ (೨) ಕುಲಾಪುತ್ -ಎ- ಶಿಬ್ಲಿ ಬೆಲೆ ೧-೦-೦ (೩) ಮುಕಾಲತ್ -ಎ- ಶಿಬ್ಲಿ ಬೆಲೆ ೧-೦-೦ P. L.

ನಂ.	ಪುಸ್ತಕಗಳ ಹೆಸರು.	ಗ್ರಂಥಕರ್ತರು.	ಪ್ರಕಾಶಕರು.	ಬೆಲೆ.	ಯಾತಕ್ಕೋಸ್ಕರ ಮಂಜೂರ ಮಾಡಿದೆ
೪೪	ಮೂಕರ್ಾ-ಎ-ಚಾಳಬಾಸ್ತ ಓ ಶಾರಾರ್	ಮಿರ್ಝಾ ಮಹಮ್ಮದಶಫಿ ಶಿರಾಝಿ	ಮಾತ್ಬಾ. ಎ. ಮುನಸಿ ಸಾವೆಲ್ ಕಿಶೋರ ಲಖನೌ	೩-೦-೦	P. L.
೪೫	ಉರ್ದು-ಎ-ಮೌಲಾ	ಘಾಲಿಬ್	ಮ. ಅಬ್ದುಲ್ ಅಹಾದ. ಪ್ರೊ. ಪ್ರೆ. ಮಾತ್ಬಾ-ಎ- ಮುಜತಾಬಾಯಿ ದಿಲ್ಲಿ	೩- ೮-೦	ಸದರ
೪೬	ಆಡ್-ಎ-ಹಿಂದಿ	ಸದರ	ಮಾತ್ಬಾ. ಎ. ಮುಫೀದ-ಎ-ಆಮ್. ಆಗ್ರಾ	೦-೧೩-೦	ಸದರ
೪೭	ನಿಗಾರಿಸ್ತಾನ-ಎ-ಫಾರಿಸ್	ಶಾಮ್ಸುಲ್ ಅಲ ಮ್ ಮೌಲಾನಾ ಮೌಲ್ವಿ ಮಹಮ್ಮದ ಹುಸೇನ 'ಅಝಾದ'	ಆಗಾಎಮ್‌ಡಿ, ತಾಹಿರ್ ಮ್ಯಾನೇಜಿಂಗ ಪ್ರೊಪ್ರಾಯಟರ ಆಗಾ ಬುಕ್‌ಡಿಪೋ ಲಾಹೋರ	೩-೦-೦	ಸದರ
೪೮	ಸುಖನ್‌ದಾನ್-ಎ-ಫಾರಿಸ್	ಸದರ	ಸದರ	೩-೦-೦	ಸದರ
೪೯	ನಾರಸಿ-ಎ-ಅನಿಸ್ ಭಾಗ ೧	ಮೀರಬಾಬರಅಲಿ ಅನೀಸ	ನಿಝಾಮಪ್ರೆಸ್ ಬೆದಾಯೂನ್	೧೭-೦-೦	P ಮತ್ತು L ಉರ್ದು ಸೆಕೆಂಡರಿ ಸ್ಕೂ. ಆ್ಯಂಡ ಟ್ರೇನಿಂಗ ಇನ್‌ಸ್ಟಿ. ಶನ್

೫೦	ಡೀನ್ –ಓ– ದಾನಿಶ್	ಮೌಲ್ವಿ ಮಹಮ್ಮದಅಲಿ	ಮಟಾತ್ಬಾ –ಎ– ರೋಝು ಬಾಬರ ಅಮೃತಸರ	೪–೦–೦	ಸದರ
೫೧	ಮುಕದ್ದಮತ್–ಎ– ಶೇರ್ –ಓ– ಶೈರಿ	ಎಚ್, ಅಲ್ತಾಫ್ ಹುಸೇನಹಲಿ	ಅನ್ ನಾಝೀರ ಪ್ರೆಸ್ ಲಖನೌ	೧–೮–೦	ಸದರ
೫೨	ದಿವಾನ –ಎ– ಹಾಲಿ	ಸದರ	ಸದರ	೧–೮–೦	ಸದರ
೫೩	ರುಝಾ –ಎ– ಸಾದೀಕಾ	ಮೌಲಾನಾ ನಾಝೀರ ಅಹಮ್ಮದ ಸಾಹೇಬ	ದಿಲ್ಲಿ ಪ್ರಿಂಟಿಂಗ ವರ್ಕ್ಸ್ ದಿಲ್ಲಿ	೧–೪–೦	ಸದರ
೫೪	ತಹರೀಬ –ಎ– ಅಖ್ಲಾಕ, ಭಾಗ ೨	ಸರಸೈಯುದ ಅಹಮ್ಮದಖಾನ	ಮಲಿಕ್ ತಾಜುದ್ದೀನ ಕಾಕಾಜಿ ಕಾಶ್ಮೀರ ಬಝಾರ ಲಾಹೋರ	೫–೦–೮	ಸದರ
೫೫	ಮಖಮಲ್ ಮಜಿಮು ಅ –ಎ– ಲೆಕ್ಚರ ವ ಸ್ಪೀಚಿಸ್	ಸದರ	ಸದರ	೩–೦–೦	ಸದರ
೫೬	ಹಮಾರಿ ಶೈರಿ	ಸೈಯುದ ಮಹಮ್ಮದಹಸನ ರಿಝ್ವಿ	ಅಂಜುಮನ್ –ಎ ತಾರಾಕ್ಕಿ –ಎ– ಉರ್ದು ಔರಂಗಬಾದ ಡೆಕ್ಕನ್	೨–೮–೦	ಸದರ
೫೭	ಉರ್ದು –ಎ– ಕದೀಮ	ಸೈಯುದ ಶಾಮುಸುಲ್ ಸಾ. ಖಾದ್ರಿ	ತಾಜಪ್ರೆಸ್ ಹೈದ್ರಾಬಾದ ಡೆಕ್ಕನ್	೨–೦–೦	ಸದರ

ನಂ.	ಪುಸ್ತಕಗಳ ಹೆಸರು.	ಗ್ರಂಥಕರ್ತರು.	ಪ್ರಕಾಶಕರು.	ಬೆಲೆ.	ಯಾತಕ್ಕೋಸ್ಕರ ಮಂಜೂರ ಮಾಡಿದೆ.
೧೮	ಸಂಜಬವೆನ್ ಉರ್ದು	ಮಹಮೂದ ಶೆರಾನಿ	ಸಿಲ್‌ಸಿಲಾ-ಎ- ಇಸೀಟ್ ಅಂಜುಮನ್ ತಾರಾಕ್ಕಿ -ಎ- ಉರ್ದು ಇಸ್ಲಾಮಿಯಾ ಕಾಲೇಜ ಲಾಹೋರ	೨—೮—೦	ಸದರ
೧೯	ಮುಕೀತ್ -ಎ- ಶರಾರ್-ಎ- ಜಾಬತ್ -ಎ- ಶರಾರ್	ಮೌಲಾನಾ ಅಬ್ದುಲ್ ಅಲಿಮ್ ಶರಾರ್	ಕೌಮಿಪ್ರೆಸ್ ದಿಲ್ಲಿ	೧—೮—೦	ಸದರ
೨೦	ಮಸ್ನವಿ -ಎ- ಕಾಬ್ -ಎ- ಖಯಾಲ	ಖಾಜಾಸೈಯದ ಮಹಮ್ಮದ ಮೀರ 'ಆಸಾರ'	ಅಂಜುಮನ್ ತಾರಾಕ್ಕಿ -ಎ- ಉರ್ದು ಔರಂಗಾಬಾದ (ಡೆಕ್ಕನ್)	೧—೮—೦	ಸದರ
೨೧	ಹಿಕಾಯತ್ —ಎ— ಫತಿಸಾಸತ್	ಸೈಯದ ಸಜ್ಜನಹೈದರ	ಮುಸ್ಲೀಮ ಯುನಿವ್ಹರ್ಸಿಟಿ ಪ್ರೆಸ್ ಅಲೀಗಡ	೧—೪—೦	ಸದರ
೨೨	ಕುಲಾಯತ —ಎ— ವಲಿ	ಅಲಿ ಅಹ್ಸಾನ	ಅಂಜುಮನ್ ತಾರಾಕ್ಕಿ -ಎ- ಉರ್ದು ಔರಂಗಾಬಾದ ಡೆಕ್ಕನ್	೫—೮—೦	ಸದರ
೨೩	ಸಿಪಾರಾ —ಎ— ದಿಲ್	ಖಾಜಾಹಸನ ನಿಝಾಮಿ	ಮುಲ್ಲಾಮಹಮ್ಮದ ವಹಾದ ದುರ್ವೇಶ್ ಪ್ರೆಸ ದಿಲ್ಲಿ	೧—೮—೦	ಸದರ

೯—೩—೩೩

ಸೆಕ್ರೆಟರಿ ಉರ್ದು ಬುಕ್ ಕಮಿಟಿ
ಪೂನಾ

ಮುಲ್ಕೀಪರೀಕ್ಷೆಯ ವಿದ್ಯಾರ್ಥಿಗಳ ಸಲುವಾಗಿ

ಹೊಸಮಾದರಿಯ

ಅಂಕಗಣಿತ-ಸಂಗ್ರಹ

ಪುಟ ಸಂಖ್ಯೆ ೨೫೦] ಸಂಗ್ರಹಕಾರ:– **ಚಿ. ಶ್ರೀ. ಕುಲಕರ್ಣಿ** [**ಬೆಲೆ ೦-೧೨-೦**

ಮ್ಹ ಫಾ. ಪರೀಕ್ಷೆಯಲ್ಲಿ, ಇತ್ತಿತ್ತಲಾಗಿ ಹೊಸ ಮಾದರಿಯ ಲೆಕ್ಕಗಳು ಬೀಳುತ್ತಿದ್ದುದರಿಂದ ವಿದ್ಯಾರ್ಥಿಗಳು ಗೊಂದಲದಲ್ಲಿ ತೊಡಗಿ ಹಾನಿಯನ್ನು ಹೊಂದುತ್ತಿರುವರು. ಆದಕಾರಣ ಅವರ ಗೊಂದಲವು ದೂರಾಗುವದಕ್ಕಾಗಿ ಅಂಥ ಮಾದರಿಯ ಗಣಿತಗಳನ್ನು ಸಂಗ್ರಹಿಸಿ, ಬಿಡಿಸಿ ತೋರಿಸಿದೆ. ಇದು ತೀರ ಹೊಸ ಮಾದರಿಯದಿದ್ದು ಶಿಕ್ಷಕರ **ಸಹಾಯವಿಲ್ಲದೆ** ವಿದ್ಯಾರ್ಥಿಗಳಿಗೆ ಉಪಯೋಗವಾಗುವಂತಿದೆ. ಮತ್ತು ಶಿಕ್ಷಕರಿಗೂ ಮಾರ್ಗದರ್ಶಕವಾಗುವದರಲ್ಲಿ ಸಂದೇಹವಿಲ್ಲ.

ಈ ಪುಸ್ತಕದಲ್ಲಿ ಲ. ಸಾ. ಭಾ; ದೃ. ಭಾ. ಗಳನ್ನು ಒಳಗೊಂಡು ಮ್ಹ. ಫಾ. ಪರೀಕ್ಷೆಗೆ **ಸಂಬಂಧಿಸಿರುವ** ಬಹುತರ ಎಲ್ಲ ಗಣಿತಗಳನ್ನು ಪರೀಕ್ಷೆಯ ದೃಷ್ಟಿಯಿಂದ ಒಳ್ಳೇ ಪ್ರಯತ್ನದಿಂದ ಸಂಗ್ರಹಮಾಡಿ ಕೆಲವು ಲೆಕ್ಕಗಳನ್ನು ಅತ್ಯುತ್ತಮ ರೀತಿಯಿಂದ ಬಿಡಿಸಿ ತೋರಿಸಿ, ಅಭ್ಯಾಸಕ್ಕೋಸ್ಕರ ಉದಾಹರಣೆಗಳನ್ನು ಕೊಟ್ಟಿರುತ್ತದೆ. ಒಟ್ಟಿನಲ್ಲಿ ಸುಮಾರು ೬೦೦ಕ್ಕಿಂತ ಹೆಚ್ಚು ಲೆಕ್ಕಗಳು ಅವೆ.

ವ್ಯಾಪಾರಸ್ಥರಿಗೆ ಮತ್ತು ಏಜಂಟರಿಗೆ ಭರಪೂರ ಕಮಿಶನ್ ಸಿಕ್ಕೀತು.

ಸಿಗುವ ಸ್ಥಳ: – **ಶ್ರೀ ಚಿದಂಬರ ಶ್ರೀಪಾದ ಕುಲಕರ್ಣಿ,**

ಮು. ಪೋ. ಹಿರೇಬಾಗೇವಾಡಿ

ತಾಲೂಕ ಬೆಳಗಾಂವ

ಶ್ರೀ ಮೋಡಕಕೃತ

ಮಹಾರಾಷ್ಟ್ರ-ಇಂಗ್ಲಿಷರ ಆಳಿಕೆ

ಅಥವಾ

೬ನೆಯ ಇಯತ್ತೆಯ ಇತಿಹಾಸ

ಬೆಲೆ ೧೦ ಆಣೆ.

ಈ ಮೊದಲು ಶ್ರೀ. ಮೋಡಕ ಇವರು ೫ನೆ ಇಯತ್ತೆಯ ಇತಿಹಾಸವನ್ನು ಬರೆದದ್ದು ಅದು ಸರಕಾರದಿಂದ ಮಂಜೂರಾಗಿದೆ. ಆ ಪುಸ್ತಕದ ರೀತಿಯನ್ನು ಅನುಸರಿಸಿಯೇ ಅವರು ಈ ೬ನೆಯ ಇಯತ್ತೆಯ ಇತಿಹಾಸವನ್ನಾದರೂ ಬರೆದಿರುವರು. ಪ್ರತಿಗಳು ಎಲ್ಲ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯುವವು. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಯೋಗ್ಯ ಕಮಿಶನ್ನು ಕೊಡಲ್ಪಡುವದು.

ವಿಳಾಸ—

ವ್ಯವಸ್ಥಾಪಕ, ವಿದ್ಯಾವಿಲಾಸ ಬುಕ್‌ಡಿಪೋ, ಗದಗ.

Reg. No. B. 2567

ಜಾಹೀರಾತು

ಸರಕಾರದಿಂದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಟೆಕ್ಸ್ಟ ಬುಕ್ಕಾಗಿ ಮಂಜೂರಾದ

ಗಣಿತ ಶಿಕ್ಷಕ

ಲೇಖಕ:—ಹಿರೇಮಠ ಮ್ಯು. ಕನ್ನಡ ಶಾಲಾ ಮಾಸ್ತರ ವಿಜಾಪುರ.

ಈ ಪುಸ್ತಕದಲ್ಲಿ ಕನ್ನಡ ೫, ೬, ೭, ಹಾಗು ವ್ಹ. ಫಾಯಿನಲ್ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಉಪಯೋಗವಾಗುವಂತೆ ಪ್ರತಿಯೊಂದು ಪ್ರಕರಣದಲ್ಲಿ ವ್ಯವಹಾರಿಕ ಲೆಖ್ಖಗಳನ್ನೂ, ವಾರಲೋನ, ಕ್ಯಾಶ ಸರ್ಟಿಫಿಕೇಟು ಮುಂತಾದ ಪ್ರಚಲಿತ ಠೇವುಗಳ ಲೆಖ್ಖಗಳನ್ನೂ ಹಾಕಿದೆ. ಮೊದಲು ಮಾದರಿಗಾಗಿ ಒಂದು ಲೆಖ್ಖವನ್ನು ಬಿಡಿಸಿ ತೋರಿಸಿ, ತರುವಾಯ ಪ್ರತಿಯೊಂದು ಅದೇ ಮಾದರಿಯ ಹಲವು ಲೆಖ್ಖಗಳನ್ನು ರೂಢಿಗಾಗಿ ಸೇರಿಸಿದೆ. ಲೆಖ್ಖವು ಮನವಟ್ಟಾಗುವಂತೆ ಈ ಪುಸ್ತಕದಲ್ಲಿ ವಿದ್ಯಾರ್ಥಿಗಳಿಗೆ ಉಪಯೋಗವಾಗುವಷ್ಟೇ ವಿಷಯಗಳನ್ನು ಕೊಟ್ಟಿದ್ದರಿಂದ ಬೆಲೆಯಾದರೂ ಕಡಿಮೆಯಾಗಿ ಪ್ರತಿಯೊಬ್ಬರು ಸಂಗ್ರಹಿಸಲು ತಕ್ಕದ್ದಾಗಿದೆ. ಬೆಲೆ ೧೪ ಆಣೆ.

ಪುಸ್ತಕಗಳು ದೊರೆಯುವ ಸ್ಥಳ:—

ಬಸಪ್ರಭಯ್ಯ ದೊಡ್ಡಯ್ಯ ಹಿರೇಮಠ,
ಮ್ಯು. ಕನ್ನಡ ಶಾಲಾ ಮಾಸ್ತರ ವಿಜಾಪೂರ.

ಮತ್ತು ಎಲ್ಲ ಮುಖ್ಯ ಬುಕ್ಕಶೇಲರರಲ್ಲಿ ಶಿಗುವವು.

ಮಿ. ಸುರಜಭಾನ ಭವಾನಿಪ್ರಸಾದ ಆಲೂರ (ಪಾಂಡೆ) ಇವರು ಧಾರವಾಡ ಸರಕಾರಿ ಹಾಯಸ್ಕೂಲಿನಲ್ಲಿ ಶಿಕ್ಷಕರಾಗಿದ್ದರಷ್ಟೇ. ಇವರ ಚರಿತ್ರವನ್ನು ತಾ ೧–೧೨–೧೯೩೩ರ ಒಳಗಾಗಿ ಕನ್ನಡದಲ್ಲಿ ಬರೆದು ಕಳಿಸಿದವರಲ್ಲಿ ಮೂವರಿಗೆ ರೂ. ೧೦; ರೂ. ೬; ರೂ. ೪ ಹೀಗೆ ಮೂರು ಇನಾಮುಗಳು, ೧-೧-೩೪ಕ್ಕೆ ಕೊಡಲ್ಪಡುವವು. ಇನಾಮುಗಳನ್ನು ನಿರ್ಣಯಿಸುವ ಪೂರ್ಣ ಅಧಿಕಾರವು ಕೆಳಗೆ ಸಹಿ ಮಾಡಿದವರಿಗೆ ಇರುವದು.

ಚಂ. ಸು. ಪಾಂಡೆ, ರಿಟಾಯರ್ಡ ಪೋಸ್ಟಮಾಸ್ತರ, ಶಿವಮೊಗ್ಗಾ.

ಸ್ಯಾಂಪಲ್] [ಪುಕ್ಕಟೆ

ಉತ್ತಮ ಮಸೀ ಚೀಟುಗಳು

ನೀಲೀಕಪ್ಪು, ಕೆಂಪು, ಜಾಂಬಳಿ ಮಸಿಯ ಚೀಟಗಳು ಈ ಕಂಪನಿಯು ಬಹಳ ಜನರಿಂದ ಶಿಫಾರಸ ಪಡೆದು ಮೆಡಲ್ಲುಗಳನ್ನು ಸಂಪಾದಿಸಿರುತ್ತದೆ.

ದರಗಳು

೧೦೦	ಚೀಟುಗಳಿಗೆ	೦—೭—
೫೦೦	,,	೧—೧೪
೧೦೦೦	,,	೩—೦—
೧೦೦೦೦	,,	೨೭—೮—೦ (ರೇಲ್ವೆ ಫ್ರೀ

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರಮಾಡಿರಿ

ಕರ್ನಾಟಕ ಇಂಕ ಕಂಪನಿ,
ಬಾಗಲಕೋಟೆ

Reg. No. B. 2567

ಕನ್ನಡ

ಪ್ರಾಥಮಿಕ ಶಿಕ್ಷಣ

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

Kannada Prathamik Shikshana

— SEPTEMBER 1933 —

ಸಂಪಾದಕ— ವೆಂಕಟೇಶ ನರಸಿಂಗರಾವ ಮುಗದಾಳ ಬಿ. ಎ.,

ಸಂಪುಟ ೭೦] ಸಪ್ಟೆಂಬರ ೧೯೩೩ [ವರ್ಷ ೫ ಸಂ ೬

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ	ಪುಟ
೧.	ಶಿಕ್ಷಣದ ಉದ್ದೇಶ	೧
೨.	ಚಿಕ್ಕಮಕ್ಕಳಿಗೆ ಕಥೆ ಕಲಿಸುವ ಬಗ್ಗೆ ...	೩
೩.	ಭೂಗೋಲದ ಟಿಪ್ಪಣಿಗಳು	೧೫
೪.	ಭಾರತೀಯ ಆರ್ಕಿಮಿಡಿಸ	೧೬
೫.	ಕವಿತೆ	೧೭
೬.	ಶಿಕ್ಷಣಕ್ಕೆ ಸಹಾಯ	೧೮
೭.	ಪರೀಕ್ಷೆಯ ಪ್ರಶ್ನಗಳು	೧೯
೮.	ಮಾನಸಶಾಸ್ತ್ರ	೨೦
೯.	ಮುಲ್ಕೀಪರೀಕ್ಷೆ, ಪರಿಣಾಮ (೧೯೩೩) ...	೨೬
೧೦.	ಧಾರವಾಡ ಗಂ. ಮಕ್ಕಳ ಟ್ರೇನಿಂಗಸ್ಕೂಲಿನ ವಾರ್ಷಿಕ ಪರೀಕ್ಷೆಯಲ್ಲಿ (೧೯೩೩) ಇನಾಮು ಪಡೆದವರು	೨೮
೧೧.	ಪ್ರಕಟನೆ	೩೯

Printed by K. R. Bhise at the Karnatak Printing Works, Dharwar
& Published by V. N. Magdal, B. A.,
Head Master, Training School, Dharwar, at his Office.

ಬಣ್ಣದ ಹಾಗು ಸಾದಾ ನಕಾಶ-ಚಿತ್ರಗಳಿಂದೊಡಗೂಡಿದ

ಹಾಗು

ಪ್ರದೇಶ ಪದ್ಧತಿಯಿಂದ ಬರೆಯಲ್ಪಟ್ಟ

ಆನೆಯ ಇಯತ್ತೆಯ

ಸಚಿತ್ರ-ಭೂವರ್ಣನೆ

ಅಂದ ಮುದ್ರಣ! ಸುಂದರ ಚಿತ್ರ!! ಗ್ಲೇಜಕಾಗದ!!! ಚಿತ್ರ-ನಕಾಶ—೬೫

(ಬೆಲೆ:— ೭ ಆಣೆ)

ಮುನ್ನುಡಿ ಲೇಖಕರು:— ಎಸ್. ರಾಮಚಂದ್ರ,

ಬಿ. ಎ. ಬೀ.ಟಿ. ಆ. ಆಫೀಸರ ಡಿ ಎಸ್. ಬಿ. ಬೆಳಗಾವ.

ಈ ಭೂಗೋಲವು “ಗೊತ್ತಿದ್ದ ಸಂಗತಿಯಿಂದ ಗೊತ್ತಿಲ್ಲದ ಸಂಗತಿಗೆ ಸಾಗು ಎಂಬ ಶಿಕ್ಷಣದ ತತ್ವಕ್ಕನುಸರಿಸಿ ಬರೆಯಲ್ಪಟ್ಟಿರುವದರಿಂದ ಶಿಕ್ಷಕರಿಗೆ ಭೂಗೋ ಶಿಕ್ಷಣವನ್ನು ಸಾಗಿಸಲು ಯೋಗ್ಯ ಮಾರ್ಗದರ್ಶಕವಾಗಿರುವದಲ್ಲದೆ ಪ್ರಸಂಗಕ್ಕೆ ತ ಚಿತ್ರ-ನಕಾಶಗಳಿದ್ದು ವ್ಯವಹಾರಕ್ಕೆ ಉಪಯುಕ್ತವಾದ ವಿಷಯವು ಮನೋರಂಜ ವಾಗಿರುವದರಿಂದ ಬೇಸರಪಡೆಯದೆ ವಿಷಯ ಜ್ಞಾನಮಾಡಿಕೊಳ್ಳಲು ವಿದ್ಯಾರ್ಥಿಗ ಸುಲಭಸಾಧನವಾಗಿರುವದು. ಆದುದರಿಂದ ಭೂಗೋಲ-ವಿಷಯದಲ್ಲಿ ತಜ್ಞರಾದ ಪ್ರ ಎಸ್. ಜೀ. ಪುರಾಣಿಕ ಎಂ. ಎ., ಹಂಸರಾಜ ಪ್ರಾಗಜಿ ಠಾಕರ್ಸಿ ಕಾಲೇಜ, ನಾ ಮತ್ತು ಶ್ರೀ. ಡಿ. ಎಸ್. ಪರಮಾಜ ಎಂ. ಎ., ಎಲ್. ಎಲ್. ಬಿ., ವಕೀಲ, ಬೆಳಗಾ ಮೊದಲಾದ ಪದವೀಧರರು ಸದ್ಯದ ಭೂಗೋಲ-ಶಿಕ್ಷಣಕ್ಕೆ ಕನ್ನಡದಲ್ಲಿ ಯೋ ಸಾಧನ ಲಭಿಸಿತೆಂದು ಶಿಫಾರಸುಮಾಡಿರುವರು. ಕಾರಣ ಶಿಕ್ಷಕ-ಶಿಕ್ಷಿಕೆಯರು ಪುಸ್ತಕದ ಒಂದು ಪ್ರತಿಯನ್ನಾದರೂ ತೆಗೆದುಕೊಂಡು ಮನನಮಾಡಿಕೊಳ್ಳಬೇಕ ಅಪೇಕ್ಷೆ.

ಟೀಪು:— ಮಾದರಿಯ ಪ್ರತಿ ಬೇಕಾದವರು ಕೆಳಗಣ ವಿಳಾಸಕ್ಕೆ ಎಂ ಆಣೆಗಳ ಪೋಸ್ಟ ಸ್ಟ್ಯಾಂಪ ಕಳುಹಿಸಿದಲ್ಲಿ ವ್ಹಿ. ಪಿ. ವೆಚ್ಚವಿಲ್ಲದೆ ಪುಸ್ತಕ ಕೈಸೇರುವದು.

ವಿಳಾಸ:—

ಶ್ರೀಬಲಭೀಮ ಸ್ಟೋರ್ಸ್, ಕಾಗವಾಡ.

ಜಿ. ಬೆಳಗಾಂ

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:— ವೆಂಕಟೇಶ ನರಸಿಂಗರಾವ ಮುಗದಾಳ, ಬಿ. ಎ.,

ಸಂಪುಟ ೭೦ ||| ಸಪ್ಟಂಬರ ೧೯೩೩ ||| ವರ್ಷ ೬ ಸಂ. ೬

ಶಿಕ್ಷಣದ ಉದ್ದೇಶ

ಕಳೆದ ತಿಂಗಳಲ್ಲಿ ನೇಕನಾಮದಾರ ಮುಂಬಯಿ ಗವ್ಹರ್ನರ ಸಾಹೇಬರು ಮುಂಬಯಿ ವಿಶ್ವವಿದ್ಯಾಲಯದ ಹೊಸ ಪದವೀಧರರಿಗೆ ಮಾಡಿದ ಉಪದೇಶಪರವಾದ ಭಾಷಣದಲ್ಲಿ ಶಿಕ್ಷಣದ ಉದ್ದೇಶಗಳನ್ನು ಕುರಿತು ಒಂದೆರಡು ಮಾತುಗಳನ್ನು ಆಡಿರುವರು. ಸದ್ಯಕ್ಕೆ ಹಿಂದುಸ್ಥಾನದ ರಾಜ್ಯಪದ್ಧತಿಯಲ್ಲಿ ಹೊಸ ಸುಧಾರಣೆಯಾಗುವ ಮಾತುಕಥೆಗಳು ನಡೆದಿವೆ. ರಾಜ್ಯಪದ್ಧತಿಯ ಕಡೆಗೆ ಎಲ್ಲರ ಲಕ್ಷ್ಯವು ಹೋಗಿದೆ. ಶಾಸನಕ್ರಮವು ನಿಶ್ಚಿತವಾದರೆ ನಮ್ಮ ಕೊರತೆಗಳೆಲ್ಲ ನೀಗುವವೆಂದು ಜನತೆಯ ಆಶೆ. ಈ ಬಗ್ಗೆ ನೇಕನಾಮದಾರ ಸಾಹೇಬರು ಹೇಳಿದ ಮಾತು ವಿಚಾರಾರ್ಹವಾಗಿದೆ. ಅವರು ಅಂದದ್ದು— “ಶಾಸನಕ್ರಮವನ್ನು (Constitution) ನಿಶ್ಚಯಿಸಿ ಬಿಡುವದು ಅಷ್ಟೇನು ಮಹತ್ವದ ಕಾರ್ಯವಲ್ಲ. ಅದನ್ನು ಅಮಲಿನಲ್ಲಿ ತರಲಿಕ್ಕೆ ತಕ್ಕ ಯೋಗ್ಯತೆಯುಳ್ಳ ಜನರು ಬೇಕಾಗುವರು; ಇಷ್ಟೇ ಅಲ್ಲ, ಅದನ್ನು ಸರಿಯಾದ ಮಾರ್ಗದಲ್ಲಿ ನಡಿಸಲಿಕ್ಕೆ ತಕ್ಕ ಮಾನಸಿಕ ಪ್ರವೃತ್ತಿಯು ಅವಶ್ಯವಾದದ್ದು. ಈ ಬಗೆಯ ಮಾನಸಿಕ ಪ್ರವೃತ್ತಿಯುಳ್ಳ ಜನರನ್ನು ಸಿದ್ಧಪಡಿಸಲಿಕ್ಕೆ ನಮ್ಮ ಕಾಲೇಜುಗಳೂ ಸಾಲೆಗಳೂ ತಕ್ಕ ಸಾಧನಗಳಾಗಿರತಕ್ಕದ್ದು. ಸದ್ಯದಂಥ ಕಾಲದಲ್ಲಿ, ಶಿಕ್ಷಣವೆಂದರೆ ನಾಲ್ಕು ವಿಷಯಗಳ ಅಭ್ಯಾಸಮಾತ್ರವಲ್ಲವೆಂಬದನ್ನು ಎಲ್ಲರೂ ಲಕ್ಷದಲ್ಲಿಡತಕ್ಕದ್ದು. ಅದರ ಮುಖ್ಯ ಉದ್ದೇಶವು ಪ್ರಾಚೀನ ಕಾಲದ ತತ್ವಜ್ಞಾನಿಯಾದ ಅರಿಸ್ಟಾಟಲನೂ ಈಚೆಗೆ ಆಗಿ ಹೋದ ಪ್ರತಿಭಾ ಪುರುಷನಾದ ಕಾರ್ಡಿನಲ್ ನ್ಯೂಮನ್ ಎಂಬಾತನೂ ಸಾರಿರುವದೇ ಇರತಕ್ಕದ್ದು. ಇವರು ಹೇಳಿದ್ದೇನೆಂದರೆ, “ಶಿಕ್ಷಣದ ಉದ್ದೇಶವು

ಮೇಲಾದ ನಾಗರಿಕರನ್ನು ಸಿದ್ಧಮಾಡುವದಿರುತ್ತದೆ. ಹರೆಯದ ಗಂಡುಸರೂ ಹೆಂಗುಸರೂ ತಮ್ಮ ದೇಶದ ಸೇವೆ ಮಾಡಲು ತಕ್ಕವರಾಗುವಂತೆ ಮಾಡುವದಿರುತ್ತದೆ. ಅವರ ಜೀವನದಲ್ಲಿ ಒದಗುವ ಹೊಸ ಹೊಸ ಪ್ರಸಂಗಗಳ ಉಪಯೋಗವನ್ನು ಉತ್ತಮವಾಗಿ ಮಾಡಿಕೊಳ್ಳುವ ಶಕ್ತಿಯೂ ಇಚ್ಛೆಯೂ ಅವರಲ್ಲಿ ಪ್ರಬಲವಾಗಿರಬೇಕಾಗುತ್ತದೆ."

ಈ ಉದ್ದೇಶವು ವ್ಯವಹಾರೋಪಯುಕ್ತವೂ ಸಾಧ್ಯವೂ ಆಗಬೇಕಾದರೆ ಪ್ರಾಥಮಿಕ ಮಾಧ್ಯಮಿಕ ಹಾಗು ಉಚ್ಚ ಶಿಕ್ಷಣದಲ್ಲಿ ತೊಡಗಿದ ಎಲ್ಲ ಶಿಕ್ಷಕರು ತಮ್ಮ ದಿನದ ಶಿಕ್ಷಣದ ಕೆಲಸದಲ್ಲಿ ಇದನ್ನು ಮರೆಯಲಾಗದು. ವಸ್ತುಸ್ಥಿತಿಯು ಮಾತ್ರ ಇದಕ್ಕೆ ವಿಪರೀತವಾಗಿರುವದು. ಇದು ಶೋಚನೀಯವಾದದ್ದು. ಬಾಲಕರ ವರ್ಗದಿಂದ ಕಾಲೇಜದ ಎಲ್ಲಕ್ಕೂ ಹೆಚ್ಚಿನ ತರಗತಿಯ ವರೆಗೆ ಶಿಕ್ಷಣದ ಉದ್ದೇಶವು ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವದೇ ಆಗಿರುವದು. ಇದರಿಂದ ಆಗಿರುವ ಹಾಗು ಆಗುತ್ತಿರುವ ಹಾನಿಯು ಅಗಣಿತವಾದದ್ದಿರುವದು. ಇತ್ತಲಾಗಿ ಶಿಕ್ಷಣ ಶಾಸ್ತ್ರಜ್ಞರೂ ಶಿಕ್ಷಕರೂ ಈ ಹಾನಿಯನ್ನು ಕಡಿಮೆ ಮಾಡುವದು ಅತ್ಯಾವಶ್ಯಕವೆಂದು ಸಾರುತ್ತಿರುವರು. ಇದು ಆಶಾಜನಕವಾದ ಲಕ್ಷಣವು. ಇದು ಅಮಲಿನಲ್ಲಿ ಬರಬೇಕಾದರೆ ಪರೀಕ್ಷಕರು ಶಿಕ್ಷಕರಿಗೆ ಮನಃಪೂರ್ವಕವಾಗಿ ನೆರವಾಗಬೇಕಾಗುತ್ತದೆ. ಪುಸ್ತಕ ವಿದ್ಯೆಯನ್ನು ಪರೀಕ್ಷಿಸುವದರ ಬದಲು ಹುಡುಗನ ಮಾನಸಿಕ ಪ್ರಗತಿಯನ್ನು ಪರೀಕ್ಷಿಸಬೇಕಾಗುತ್ತದೆ. ಹೆಚ್ಚು ಗುಣಗಳನ್ನು ಪಡೆಯುವವನಿಗಿಂತ ಹೆಚ್ಚು ಆಸ್ಥೆಯನ್ನು ತೋರಿಸುವ ವಿದ್ಯಾರ್ಥಿಯ ಮಹತ್ವವನ್ನು ಹೊಗಳಬೇಕಾಗುತ್ತದೆ. ಸಾಲೆಯಲ್ಲಿ ಕಲಿತಿರುವ ಪುಸ್ತಕದಲ್ಲಿ ವಿವರಿಸಿರುವ ವಿಷಯಗಳಿಗಿಂತ ಓರಿಗೆಯವರ ಕೂಡ ನಡತೆ, ವರ್ಗದ ಸಾಮಾನ್ಯ ಹಿತವನ್ನು ಸಾಧಿಸಿಕೊಳ್ಳಲಿಕ್ಕೆ ಮಾಡಿದ ಕೆಲಸ, ಊರ ಸಾರ್ವಜನಿಕ ಕೆಲಸಗಳಲ್ಲಿ ನೆರವಾಗಲು ಹುರುಪು ಇವುಗಳನ್ನು ಪರೀಕ್ಷಿಸಿ ಹುಡುಗನು ಪಡೆದ ಶಿಕ್ಷಣವನ್ನು ಅಳತೆಗಟ್ಟತಕ್ಕದ್ದು.

ಪ್ರಾಥಮಿಕ ಸಾಲೆಗಳಲ್ಲಿ "ಸ್ಕೌಟಿಂಗ"ವನ್ನು ಆರಂಭಿಸುವದರಿಂದ ಮೇಲಿನ ಉದ್ದೇಶವು ಬಹು ತೀವ್ರವಾಗಿ ನೆರವೇರುವದೆಂದು ನಮ್ಮ ಅಭಿಪ್ರಾಯವಿರುವದು. ಆದರೆ ಸ್ಕೌಟಿಂಗವೆಂದರೆ, ಒಂದು ಬಗೆಯ ಚಣ್ಣ ಪೈರಣುಗಳನ್ನು ಹಾಕಿಕೊಂಡು ಕೆಲವು ಆಟಗಳನ್ನಾಡುವದಷ್ಟೇ ಅಲ್ಲ. ಯಾರಾದರೂ ಅಧಿಕಾರಸ್ಥರು ಇಲ್ಲವೆ ಮಹತ್ವದ ಜನರು ಬಂದರೆ ಈ ಉಡುಪಿನಲ್ಲಿ ನಿಂತು ಅವರಿಗೆ ಸಲಾಮು ಕೊಡುವದಷ್ಟೇ ಅಲ್ಲ; ಪ್ರತಿಯೊಬ್ಬ ಸ್ಕೌಟನು ತನ್ನ ದೇವರು,

ತನ್ನ ಅರಸು, ಹಾಗು ತನ್ನ ದೇಶ ಇವುಗಳ ಬಗ್ಗೆ ತಾನು ಪಾಲಿಸುವೆನೆಂದು ಸಾರಿದ ಅಭಿವಚನದ ಅರ್ಥವನ್ನು ತಿಳಿದುಕೊಂಡು ಸ್ಕೌಟ ವ್ರತವನ್ನು ಬಿಡದೆ ಆಚರಿಸಬೇಕು. ಈ ತನ್ನ ವಚನವನ್ನು ಪಾಲಿಸಲಿಕ್ಕೆ ಅವಶ್ಯವಾದ ಶಾರೀರಿಕ ಮಾನಸಿಕ ಹಾಗು ನೈತಿಕ ಶಕ್ತಿಗಳನ್ನು ಬಲಪಡಿಸಿಕೊಳ್ಳುವದು; ಪರಹಿತಕ್ಕಾಗಿ ಪ್ರತ್ಯಾಶೆಯಿಲ್ಲದೆ ದುಡಿಯುವ ಪ್ರವೃತ್ತಿಯನ್ನು ತಂದುಕೊಳ್ಳುವದು; ಈ ದುಡಿಮೆಯು ಪೂರ್ಣ ಪರಿಣಾಮಕಾರಿಯಾಗಲಿಕ್ಕೆ ಅವಶ್ಯವಾದ ಜ್ಞಾನವನ್ನೂ ಕೆಲಸಗಳಲ್ಲಿ ಕುಶಲತೆಯನ್ನೂ ಸಂಪಾದಿಸುವದು; ಅಂದರೆ ಸ್ಕೌಟಿಂಗದಲ್ಲಿ ಹೇಳಿದ ಬೇರೆ ಬೇರೆ ಪರೀಕ್ಷೆಗಳನ್ನು (tests) ಪಾಸಾಗಲಿಕ್ಕೆ ಕ್ರಮವಾಗಿ ಪ್ರಯತ್ನಪಡುವದು.

ಸ್ಕೌಟಿಂಗಕ್ಕೆ ಪಾಲಕರ ಸಹಾನುಭೂತಿಯು ಸಾಕಷ್ಟು ದೊರೆಯುವದಿಲ್ಲೆಂದು ಶಿಕ್ಷಕರು ಗುಣಗುಟ್ಟುವದುಂಟು. ತಮ್ಮ ಕೆಲಸವು ಸರಿಯಾಗಿ ಸಾಗದಾದರೆ ಪರರನ್ನು ದೂಷಿಸುವ ಮಾನವಪ್ರವೃತ್ತಿಯ ಇದೊಂದು ಉದಾಹರಣವು. ವ್ಯವಹಾರದಲ್ಲಿ ಅತ್ಯುಪಯುಕ್ತವೆನಿಸಿ, ಎಂಥ ಅಶಿಕ್ಷಿತನಿಗೂ ಒಡೆದು ಕಾಣುವಂಥ ಪರಿಣಾಮಗಳುಳ್ಳ ಕುಶಲತೆಗಳೇ ಸ್ಕೌಟ ಶಿಕ್ಷಣದ ಮುಖ್ಯ ಅಂಶಗಳಾಗಿವೆ. ಅಂದಮೇಲೆ ಇವುಗಳ ಬಗ್ಗೆ ಪಾಲಕರ ಸಹಾನುಭೂತಿಯಿಲ್ಲೆಂಬದು ಸರಿಯಾಗಲಾರದು. ಇದನ್ನು ಯೋಗ್ಯವಾಗಿ ಸಾಗಿಸದಿರುವದೇ ಜನರಲ್ಲಿ ಈ ಬಗ್ಗೆ ಇರುವ ಔದಾಸೀನ್ಯದ ಕಾರಣವೆಂದು ಧಾರಾಳವಾಗಿ ಹೇಳಬಹುದು. ಇದನ್ನು ನೀಗಿಸಲಿಕ್ಕೆ ಪ್ರಾಥಮಿಕ ಶಿಕ್ಷಕರು ತಕ್ಕ ಉಪಾಯಗಳನ್ನು ಮಾಡತಕ್ಕದ್ದು.

ಚಿಕ್ಕ ಮಕ್ಕಳಿಗೆ ಕಥೆ ಕಲಿಸುವ ಬಗ್ಗೆ

ಪ್ರಾಥಮಿಕ ಸಾಲೆಗಳ ಕೆಳಗಿನ ಇಯತ್ತೆಗಳಲ್ಲಿ ಕಥೆಗಳನ್ನು ಕಲಿಸುವದಿರುವದಷ್ಟೇ. ಇವುಗಳನ್ನು ಕಲಿಸುವ ಉದ್ದೇಶಗಳ ಬಗ್ಗೆ ಶಿಕ್ಷಕರಲ್ಲಿ ನಿಶ್ಚಿತವಾದ ಕಲ್ಪನೆಗಳು ಇರುವದಿಲ್ಲ. ಈ ಮೂಲಕ ಈ ವಿಷಯಕ್ಕೆ ಕೊಟ್ಟ ಹೊತ್ತು ವ್ಯರ್ಥವಾಗಿ ಹೋಗುವದುಂಟು.

ನಮ್ಮ ಸಾಲೆಗಳಲ್ಲಿ ಮೊದಲಿನ ಎರಡು ಇಯತ್ತೆಗಳ ವರೆಗಿನ ಹುಡುಗರಿಗೆ ಬಹುತರ ನಾಲ್ಕಾರಕ್ಕಿಂತ ಹೆಚ್ಚು ಕಥೆಗಳು ಬರುವದಿಲ್ಲ. ಇವುಗಳನ್ನು ಪಾಠ

ಮಾಡಿದಂತೆ ಒಂದೆರಡು ಮಿನಿಟುಗಳಲ್ಲಿ ಅವರು ಹೇಳಿ ಬಿಡುವದುಂಟು. ಕಥೆ ಹೇಳಿದ ಬಳಿಕ ಅದರಿಂದ ನಿಮಗೆ ಏನು ತಿಳಿಯಿತೆಂದು ಶಿಕ್ಷಕನು ಮರೆಯದೆ ಕೇಳುವದುಂಟು. ಹುಡುಗರು ಪಾಠಮಾಡಿದ ಒಂದು ನೀತಿಯ ವಾಕ್ಯವನ್ನು ಉತ್ತರವೆಂದು ಹೇಳುವದೂ ಉಂಟು.

ಚಿಕ್ಕ ಮಕ್ಕಳಿಗೆ ಕಥೆಗಳು ಬಹಳ ಸೇರುತ್ತವೆ. ಇಂಥ ಕಥೆಗಳನ್ನು ಹೇಳಿ ಅವರನ್ನು ಸಮಾಧಾನಗೊಳಿಸುವದಲ್ಲದೆ, ಶಿಕ್ಷಣದಲ್ಲಿ ಇವುಗಳ ಉಪಯೋಗ ವನ್ನು ಪೂರ್ಣವಾಗಿ ಮಾಡಿಕೊಳ್ಳಲಿಕ್ಕೆ ಪ್ರಯತ್ನ ಪಡುವದು ಶಿಕ್ಷಕರ ಕರ್ತ ವ್ಯವು.

ಕಥೆ ಕಲಿಸುವ ಉದ್ದೇಶಗಳು ಯಾವವು? ಸಾಮಾನ್ಯವಾಗಿ ಶಿಕ್ಷಕರು ಎಣಿಸಿಕೊಂಡ ಇಲ್ಲವೆ ಹೇಳುವ ಉದ್ದೇಶಗಳು ಹಲವಿರುವವು. ಅವು ಯಾವ ವೆಂದರೆ:—ಕಥೆಗಳಿಂದ (೧) ನೀತಿಯು ಬರುವದು. (೨) ಭಾಷಾಜ್ಞಾನವಾಗು ವದು. (೩) ಹುಡುಗರಿಗೆ ಮಾತಾಡುವ ರೂಢಿಯಾಗುವದು. (೪) ಮನರಂಜನ ವೆನಿಸುವದು. (೫) ವ್ಯವಹಾರಜ್ಞಾನವಾಗುವದು. (೬) ಸುಲಭವಾಗಿ ಹಲವು ವಿಷಯಗಳ ಜ್ಞಾನವಾಗುವದು. ಇವೆಲ್ಲ ಉದ್ದೇಶಗಳು ಕಥೆಯ ಪಾಠಗಳಿಂದ ಕೈಗೂಡುವದುಂಟು. ಆದರೆ ಇವೆಲ್ಲವನ್ನೂ ಲಕ್ಷ್ಯದಲ್ಲಿಟ್ಟು ಕಥೆಗಳನ್ನು ಹೇಳು ವದು ಅಸಾಧ್ಯವು; ಆದ್ದರಿಂದ ಇವುಗಳಲ್ಲಿ ಯಾವದಾದರೊಂದು ಉದ್ದೇಶವು ಶಿಕ್ಷಕರ ಮನಸಿನಲ್ಲಿ ಪ್ರಮುಖವಾಗಿ ಉಳಿಯುವದು. ಅದನ್ನು ಅನುಸರಿಸಿ ಕಥೆ ಯನ್ನು ಹೇಳುವದುಂಟು. ಬಹುತರವಾಗಿ ಮೊದಲನೆಯ ಉದ್ದೇಶವು ಶಿಕ್ಷಕರ ಮನದಲ್ಲಿ ಉಳಿಯುವದು. ಆದ್ದರಿಂದ ಕಥೆ ಹೇಳಿ, ಹೇಳಿಸಿಕೊಂಡು, ನೀತಿಯ ಮಾತನ್ನು ಹೊರಡಿಸಿ ಇಲ್ಲವೆ ಅನ್ನಿಸಿ ಕಥೆಗಳ ಕಾರ್ಯವು ಪೂರ್ಣವಾಯಿತೆಂದು ಶಿಕ್ಷಕರು ಸಮಾಧಾನ ಹೊಂದುವದುಂಟು.

ಆದರೆ ಚಿಕ್ಕಮಕ್ಕಳಿಗೆ ಕಥೆಗಳನ್ನು ಹೇಳುವದರಲ್ಲಿ ನುರಿತವರ ಅಭಿಪ್ರಾಯ ಗಳು ಈ ವಿಷಯದ ಬಗ್ಗೆ ಭಿನ್ನವಾಗಿರುವವು. ಸಾಲೆಯಲ್ಲಿ ಇವುಗಳನ್ನು ಹೇಳುವ ಮುಖ್ಯ ಉದ್ದೇಶವೇನು? ಇವುಗಳಿಂದ ಶಿಕ್ಷಣಕ್ಕೆ ಯಾವ ಸಹಾಯವಾಗುವದು? ಸಣ್ಣ ಹುಡುಗರಿಗೆ ಎಂಥ ಕಥೆಗಳು ಸೇರುತ್ತವೆ? ಕಥೆಗಳನ್ನು ಹೇಳುವ ಶಿಕ್ಷಕನು ಎಂಥ ಕಥೆಗಳನ್ನು ಆರಿಸಿಕೊಳ್ಳಬೇಕು? ಅವುಗಳನ್ನು ಹೇಳುವಾಗ ಯಾವ ಮಾತುಗಳನ್ನು ಮನಸಿನಲ್ಲಿಡಬೇಕು! ಇವೇ ಮೊದಲಾದ ಮಹತ್ವದ ಪ್ರಶ್ನೆಗಳಿಗೆ ರೂಢವಿರುವ ಕಲ್ಪನೆಗಳಿಗೆ ಭಿನ್ನವಾಗಿ ತೋರಿದರೂ ವಿಚಾರಾಂತ್ಯದಲ್ಲಿ ಸಮರ್ಪಕ ವೆನಿಸುವ ಉತ್ತರಗಳನ್ನು ಇವರು ಕೊಟ್ಟಿರುವರು. ಇವುಗಳನ್ನು ಪ್ರತಿಯೊಬ್ಬ ಶಿಕ್ಷಕನು ಅಭ್ಯಾಸಿಸುವದು ಅವಶ್ಯವು.

ಹುಡುಗರು ಸಾಲೆಯಲ್ಲಿ ಕಲಿಯುವ ಇತಿಹಾಸ, ವನಸ್ಪತಿಶಾಸ್ತ್ರ, ಆರೋಗ್ಯ ಶಾಸ್ತ್ರ, ಭೂಗೋಲ ಮೊದಲಾದ ವಿಷಯಗಳ ಮೂಲತತ್ವಗಳನ್ನು ಕಥಾರೂಪ ವಾಗಿ ವಿವರಿಸುವ ಪ್ರಯತ್ನಗಳು ಹೆಚ್ಚಾಗಿ, ಇವುಗಳನ್ನೊಳಕೊಂಡ ಪುಸ್ತಕಗಳು ಶಾಲೆಗಳಲ್ಲಿ ವಿಶೇಷವಾಗಿ ಉಪಯೋಗದಲ್ಲಿ ಬರುತ್ತಿರುವದನ್ನು ಕಂಡು, ಮಿಸ್. ಸಾರಾ ಬ್ರಾಯಂಟ ಎಂಬ ವಿದುಷಿಯರು ಕಥೆಗಳನ್ನು ಕಲಿಸುವ ಬಗ್ಗೆ ಒಂದು ಪ್ರತ್ಯೇಕವಾದ ಪುಸ್ತಕವನ್ನು ಬರೆದು ತಮ್ಮ ಅನುಭವಗಳನ್ನೂ ಅಭಿಪ್ರಾಯಗ ಳನ್ನೂ ಪ್ರಕಟಿಸಿರುವರು. ಇವರು ಅನ್ನುವದೇನೆಂದರೆ, ಕಥೆಯೆಂದರೇನು ! ಕಥೆಯು, ಶಾಸ್ತ್ರಗಳನ್ನು ಕಲಿಸಲಿಕ್ಕೆ ಉಪಯೋಗಿಸಬಹುದಾದ ಪಠ್ಯಪುಸ್ತಕದೊ ಳಗಿನ ಒಂದು ಪ್ರಕರಣವಲ್ಲ; ಭೂಗೋಲಾಭ್ಯಾಸದ ಪುರವಣಿಯಲ್ಲ; ಮಕ್ಕಳಿ ಗಾಗಿ ಬರೆದ ಇತಿಹಾಸದ ಪ್ರಸ್ತಾವನೆಯಲ್ಲ. ರಸಭರಿತವಾದ ಕಾವ್ಯದಂತೆ ಇಲ್ಲವೆ ಮನೋಹರವಾದ ಚಿತ್ರದಂತೆ ಅಥವಾ ಮನಸ್ಸನ್ನು ಕರಗಿಸುವ ಸರಸವಾದ ನಾಟ ಕದಂತೆ ಕಥೆಯು ಒಂದು ಸಣ್ಣ ಲಲಿತಬಂಧವು. ಮೇಲೆ ಹೇಳಿದ ಲಲಿತ ಪ್ರಬಂಧ ಗಳ ಉದ್ದೇಶವೂ ಕಥೆಯ ಮುಖ್ಯ ಉದ್ದೇಶವೂ ಒಂದೇ ಆಗಿರುವದು. ಕಾವ್ಯ ದಿಂದಾಗಲಿ ನಾಟಕದಿಂದಾಗಲಿ ಆನುಷಂಗಿಕವಾದ ಹಲವು ಉದ್ದೇಶಗಳನ್ನು ಸಾಧಿಸಬಹುದು. ಉದಾಹರಣಾರ್ಥವಾಗಿ ಬಾಲವಿವಾಹದಿಂದೊದಗುವ ಹಲವು ಅನರ್ಥಗಳನ್ನು ಇಲ್ಲವೆ ಸೆರೆಗುಡಕತನದಿಂದ ಸಂಸಾರವು ಮೂಲೆಗುಂಪಾಗುವ ದನ್ನು ನಾಟಕರೂಪದಿಂದ ಉದಾಹರಿಸಬಹುದು. ಆದರೆ ಈ ಉದ್ದೇಶಗಳನ್ನು ಮಾತ್ರ ಪ್ರಮುಖವಾಗಿಟ್ಟುಕೊಂಡು ಬರೆದ ನಾಟಕವು ಲಲಿತ ಪ್ರಬಂಧವೆನಿಸ ಲಾರದು. ಬಾಲವಿವಾಹದ ಪ್ರಶ್ನೆಯಾಗಲಿ ಸೆರೆಗುಡಕತನದ ಅನರ್ಥವಾಗಲಿ ಸಮಾಜದ ದೃಷ್ಟಿಗೆ ಮರೆಯಾದ ಕೂಡಲೆ ಈ ನಾಟಕಗಳು ಮೂಲೆಗೆ ಬೀಳುವವು. ಇವುಗಳನ್ನು ಓದುವ ಇಚ್ಛೆಯು ಅಡಗಿಪೋಗುವದು; ಈ ನಾಟಕಗಳನ್ನು ಆಡು ವವರೂ ನೋಡುವವರೂ ಅಪಹಾಸ್ಯಕ್ಕೆ ಗುರಿಯಾಗುವರು. ಇವುಗಳಿಂದ ಯಾರಿಗೂ ಆನಂದವಾಗದು. ಹಾಗೆಯೇ ಕಥಾರೂಪವಾಗಿ ಕೆಲವು ಸಂಗತಿಗ ಳನ್ನು ಹೇಳಿ ಭೃಂಗ ಪತಂಗಗಳ ಬಗ್ಗೆ ನಾವು ಚಿಕ್ಕಮಕ್ಕಳಿಗೆ ಜ್ಞಾನಮಾಡಿಕೊಡ ಬಹುದು. ಆದರೆ ಕಥೆಯ ಪ್ರಮುಖ ಉದ್ದೇಶವನ್ನು ನಾವು ಮರೆತಂತಾಗು ವದು; ಸುಂದರವಾದ ಮೂರ್ತಿಯನ್ನು ಒಡೆದು ಶರೀರ ಶಾಸ್ತ್ರದ ಜ್ಞಾನವನ್ನು ಮಾಡಿಕೊಳ್ಳಲಿಕ್ಕೆ ಯತ್ನಿಸುವ ಮೂಢರಂತೆ ನಮ್ಮ ಗತಿಯಾಗುವದು.

ನಿಜವಾಗಿ, ಜೀವನದಲ್ಲಿ ಕಥೆಯ ಕಾರ್ಯವೆಂದರೆ ಆನಂದವನ್ನು ಉಂಟು ಮಾಡುವದು. ಸುಂದರವಾದ ಒಂದು ಚಿತ್ರವಾಗಲಿ, ಮುದ್ದಾದ ಮೂರ್ತಿಯಾಗಲಿ ನಮ್ಮನ್ನು ಮುಗ್ಧಗೊಳಿಸಿ ಆನಂದಪರವಶರನ್ನಾಗಿ ಮಾಡುವಂತೆ ಕಥೆಯೂ

ನಮ್ಮನ್ನು ಆನಂದದಲ್ಲಿ ತೇಲಾಡಿಸಬೇಕು. ಈ ಆನಂದದ ಮೂಲಕ ಜೀವನದ ಸ್ವಾರಸ್ಯದಲ್ಲಿ ಹೊಸ ಬೆಳಕು ಮೂಡಿ ನಮಗೆ ಹೊಸ ಹುರುಪು ಹುಟ್ಟಬೇಕು. ಹೀಗೆ ಆತ್ಮವನ್ನು ಹುರುಪುಗೊಳಿಸುವದೇ ಸಾಲೆಗಳಲ್ಲಿ ಚಿಕ್ಕ ಮಕ್ಕಳಿಗೆ ಕಥೆಗಳನ್ನು ಕಲಿಸುವ ಮುಖ್ಯವಾದ ಉದ್ದೇಶವಿರಬೇಕೆನ್ನುವದರಲ್ಲಿ ಸಂದೇಹವಿಲ್ಲ.

ಕಥೆಗಳನ್ನು ಕಲಿಸುವದರಲ್ಲಿ ಕಡಿಮೆ ಪ್ರತಿಯ ಬೇರೆ ಯಾವ ಉದ್ದೇಶಗಳೂ ಇಲ್ಲವೆಂತಲ್ಲ. ಆದರೆ ಪ್ರಮುಖವೂ ಮೂಲವೂ ಆದ ಮೇಲ್ಕಾಣಿಸಿದ ಉದ್ದೇಶವನ್ನು ಲಕ್ಷ್ಯದಲ್ಲಿಡದಿದ್ದರೆ ಇದರಿಂದ ಒದಗಬಹುದಾದ ಲಾಭಗಳಿಗೆ ಚಿಕ್ಕಮಕ್ಕಳು ಎರವಾಗುವರು. ಚಿಕ್ಕಮಕ್ಕಳ ಆತ್ಮವು ಆನಂದದಲ್ಲಿ ಲೋಲಾಡಿ, ಹೊಸ ಹುರುಪುಗೊಂಡು ಬೆಳೆಯಹತ್ತುವದು ಕಟ್ಟಾಗುವದು; ಇದರಿಂದ ಶಿಕ್ಷಕರು ತಿಳಿಯಬೇಕಾದ ಮುಖ್ಯ ಮಾತೆಂದರೆ, ಕಥೆಯ ಮೂಲಕಾರ್ಯವು ಜ್ಞಾನ ಮಾಡಿಕೊಡುವದಲ್ಲ; ಆನಂದವನ್ನೊದಗಿಸುವದು. ಸಂಗೀತದಂತೆ, ಸಾಹಿತ್ಯದಂತೆ ಕೇಳುವವನ ಮನಸ್ಸಿಗೆ ಸಂತೋಷವನ್ನುಂಟುಮಾಡುವದೇ ದಿನದ ಶಿಕ್ಷಣದಲ್ಲಿಯೂ ಇದರ ಉದ್ದೇಶವಿರತಕ್ಕದ್ದು. ಕಥೆ ಕೇಳುವದರಿಂದ ಇಂಥ ಆನಂದವನ್ನು ಅನುಭವಿಸುತ್ತಿರುವ ಹುಡುಗರಿಗೆ ಹೊಸ ಜ್ಞಾನವು ಆಗುತ್ತಿರಬಹುದು. ಇಲ್ಲವೆ ಆಗುತ್ತಿರಲಿಕ್ಕಿಲ್ಲ. ಆದರೆ ಈ ಆನಂದದ ಮೂಲಕ ಅವರ ಆತ್ಮದಲ್ಲಿ ಹೊಸ ಶಕ್ತಿಯು ಸಂಚರಿಸಹತ್ತಿರುವದರಲ್ಲಿಯೂ ಅವರ ಕಲ್ಪನಾಶಕ್ತಿಗೆ ಕವಲೊಡೆಯುತ್ತಿರುವದರಲ್ಲಿಯೂ ಸಂಶಯವಿಲ್ಲ; ಹಾಗು ಅವರ ಪುಟ್ಟ ಹೃದಯಗಳಿಂದ ಮೇಲಕ್ಕೆ ಹಬ್ಬುತ್ತಿರುವ ಜೀವನ ಲತೆಯಲ್ಲಿ ಹೊಂಬಣ್ಣದ ಹೂಗೊಂಚಲುಗಳ ಮುಗುಳುಗಳು ಮೂಡುತ್ತಿರುವ ಬಗ್ಗೆ ಸಂದೇಹವಿಲ್ಲ. ಇವುಗಳಿಂದ ಅವರ ಮುಂದಿನ ಆಯುಷ್ಯವು ಮೇಲ್ತರದ್ದಾಗುವದು.

ಈ ಬಗೆಯ ಆನಂದವನ್ನು ಉಂಟುಮಾಡುವದರಿಂದ ಎರಡು ಲಾಭಗಳು ನಿಶ್ಚಯವಾಗಿ ಆಗುವವು. ಇವುಗಳಲ್ಲಿ ಒಂದಂತೂ ಶಿಕ್ಷಕರಿಗೆ ಒಳ್ಳೇ ಮಹತ್ವವಾದದ್ದು. ಸಾಲೆಯ ದಿನದ ಪರಿಸ್ಥಿತಿಯು ಹುಡುಗರನ್ನು ಬೇಸರಗೊಳಿಸುವಂಥದಿರುವದು; ಈ ಬೇಸರವನ್ನು ಕಳೆಯಲಿಕ್ಕೆ ಕಥೆಗಳು ಬಲವತ್ತರವಾದ ಸಾಧನಗಳು; ಇವುಗಳನ್ನು ಹೇಳುವದರಿಂದ ಹುಡುಗರ ಶಿಕ್ಷಣಕ್ಕೆ ಅನುಕೂಲವಾಗುವದು. ಕಥೆಗಳಿಂದ ಆಗುವ ಎರಡನೆಯ ಲಾಭವು ಇದಕ್ಕೂ ಮೇಲಾದದ್ದು, ಆದರೆ ಅಷ್ಟು ಒಡೆದು ಕಾಣುವದಲ್ಲ. ಅದು ಯಾವದೆಂದರೆ, ಕಥೆಗಳನ್ನು ಹೇಳಿ ಹುಡುಗರನ್ನು ಆನಂದಗೊಳಿಸಲಿಕ್ಕೆ ಶಕ್ತನಾದ ಶಿಕ್ಷಕನಿಗೂ ಹುಡುಗರಿಗೂ ಇರುವ ಅನ್ಯೋನ್ಯ ಸಂಬಂಧವು ಒಳ್ಳೇ ಸಲಿಗೆಯುಳ್ಳದ್ದಾಗುತ್ತದೆ. ಇಂಥ ಶಿಕ್ಷಕ

ನನ್ನು ಹುಡುಗರು ಪ್ರೀತಿಸಲಾರಂಭಿಸುವರು; ಈ ಶಿಕ್ಷಕನು ಯಾವ ಪಾಠವನ್ನು ಕಲಿಸಿದರೂ ಹುಡುಗರು ಲಕ್ಷ್ಯಗೊಟ್ಟು ಕೇಳಹತ್ತುವರು.

ಚಿಕ್ಕಮಕ್ಕಳಿಗೆ ಸೇರುವ ಕಥೆಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸಿ ನೋಡಲು ಇಂಥ ಕಥೆಗಳ ಕೆಲವು ಲಕ್ಷಣಗಳು ಸ್ಪಷ್ಟವಾಗುವವು. ಬಲ್ಲವರು ಇಂಥ ಮೂರು ಲಕ್ಷಣಗಳನ್ನು ಕಂಡುಹಿಡಿದಿರುವರು. (೧) ನಾವು ಹೇಳುವ ಕಥೆಯಲ್ಲಿ ಏನಾದ ರೊಂದು ಸಂಗತಿಯು ಯಾವಾಗಲೂ ನಡೆಯುತ್ತಿರಬೇಕು. ಕಥೆಗಾರನು ವರ್ಣನೆಗಳು ಪಾತ್ರಗಳ ವಿವರಣೆ ಮೊದಲಾದವುಗಳನ್ನು ಹೇಳುತ್ತ ನಿಲ್ಲಲು ಕಥೆಯಲ್ಲಿ ಅವಕಾಶವಿರಬಾರದು. ಸಂಗತಿಗಳು ಆದಷ್ಟು ತೀವ್ರವಾಗಿ ಒಂದರ ಹಿಂದೊಂದು ಆಗುತ್ತಿರಬೇಕು. (೨) ಕಥೆಯಲ್ಲಿ ಒಂದೊಂದು ಸಂಗತಿಯು ನಡೆದಂತೆ ಮಕ್ಕಳ ಕಲ್ಪನೆಯ ಚಿತ್ರಗಳು ಅವರ ಕಣ್ಣಿನಮುಂದೆ ಬರಬೇಕು. ಈ ಸಂಗತಿಗಳು ಅವರ ದಿನದ ಅನುಭವಗಳಿಗೆ ಸಂಬಧಿಸುವಂಥವೇ ಇರಬೇಕು; ಆದರೂ ಅವುಗಳಲ್ಲಿ ಏನಾದರೂ ವೈಚಿತ್ರ್ಯವು ಇರತಕ್ಕದ್ದು. (೩) ಕಥೆಗಳಲ್ಲಿ ಹೇಳಿದ್ದನ್ನೇ ಹೇಳಿದಂತೆ ತೋರುವ ಕೆಲವು ಭಾಗಗಳಿರಬೇಕು. ಒಟ್ಟಿನಮೇಲೆ, ಕಾರ್ಯಪರಂಪರೆ, ಪರಿಚಯದ ದಿನದ ಮಾತುಗಳಲ್ಲಿ ಸ್ವಲ್ಪ ವೈಚಿತ್ರ್ಯ ಹಾಗು ತಕ್ಕಮಟ್ಟಿಗೆ ಪುನರುಕ್ತಿ ಇವು ಸಣ್ಣ ಹುಡುಗರಿಗೆ ಹೇಳುವ ಕಥೆಗಳಲ್ಲಿ ಇರಲಿಕ್ಕೆಬೇಕು.

ಕೆಲವು ಸಾರೆ ಉದ್ದ ಕಥೆಗಳನ್ನು ಸ್ವಲ್ಪದರಲ್ಲಿ ಹೇಳಬೇಕಾಗುವದು. ಕೆಲವು ಸಾರೆ ಕಥೆಗಳೊಳಗಿನ ಭಾಗಗಳನ್ನು ನಮಗೆ ಬೇಕಾದಂತೆ ಹಿಂದುಮುಂದು ಮಾಡಿಕೊಳ್ಳಬೇಕಾಗುವದು. ಸ್ವಲ್ಪವಿಚಾರಮಾಡಿ ಇವನ್ನು ಸಾಧಿಸಿಕೊಳ್ಳಬಹುದು. ಕೆಲವು ಸಾರೆ ಮೂಲದೊಳಗಿನ ಭಾಷೆಯು ಕಠಿಣವಿದ್ದರೆ ಅದನ್ನು ಸುಲಭವೂ ಸರಳವೂ ಮಾಡಿಕೊಳ್ಳಬೇಕಾಗುವದು. ಇದು ಮಹತ್ವದ ಮಾತು. ಕಥೆ ಹೇಳುವವನು ಹುಡುಗರ ವಯಸ್ಸು, ಅವರ ಸಾಮಾಜಿಕ ಪರಿಸ್ಥಿತಿ ಮೊದಲಾದವುಗಳಿಗೆ ತಕ್ಕಂತೆ ಭಾಷೆಯನ್ನು ಬದಲಿಸಿಕೊಳ್ಳುವದು ಅವಶ್ಯವಾದದ್ದು. ಕೆಲವು ಶಬ್ದಗಳು, ದೃಷ್ಟಾಂತಗಳು, ಪ್ರಸಂಗಗಳು ಪಟ್ಟಣಗಳಲ್ಲಿರುವ ಹುಡುಗರಿಗೆ ಪರಿಚಿತವಿರುವವು. ಆದರೆ ಹಳ್ಳಿಯ ಹುಡುಗರಿಗೆ ಇವುಗಳ ಅರ್ಥವಾಗುವದಿಲ್ಲ. ಒಮ್ಮೊಮ್ಮೆ ನಾವು ಕವಿತೆಗಳಲ್ಲಿ ಓದಿದ ಕಥೆಗಳನ್ನು ಮಾತನಾಡುವ ಭಾಷೆಯಲ್ಲಿ ಹೇಳಬೇಕಾಗುವದು. ಈ ಕೆಲಸಕ್ಕೆ ಸ್ವಲ್ಪ ಅನುಭವವೂ ಶ್ರಮವೂ ಅಗತ್ಯವಾದವು.

ತಕ್ಕ ಕಥೆಗಳನ್ನು ಆರಿಸಿಕೊಳ್ಳುವದು, ನಮಗೆ ಬೇಕಾದ ಕ್ರಮದಲ್ಲಿ ಅವುಗಳೊಳಗಿನ ಸಂಗತಿಗಳನ್ನು ರಚಿಸಿಕೊಳ್ಳುವದು ಇದೆಲ್ಲ ಪೂರ್ವ ಸಿದ್ಧತೆಯಾಯಿತು. ಇದೆಲ್ಲಕ್ಕಿಂತ, ಕಥೆಯನ್ನು ಹೇಳುವ ಕೆಲಸವು ಮಹತ್ವವಾದದ್ದು. ಶಿಕ್ಷಕನ ಜಾಣ

ತನವು ಈ ಕೆಲಸದಲ್ಲಿ ಒರೆಗೆ ಹತ್ತುವದು. ತಕ್ಕಂತೆ ಕಥೆ ಹೇಳಿದಬಳಿಕ ಹುಡುಗ ರಲ್ಲಿ ಮೂಡಿದ ಆನಂದವನ್ನು ಕಂಡು ಆಗುವ ಸಮಾಧಾನವು ಶಿಕ್ಷಕರೆನಿಸಿಕೊಳ್ಳು ವವರಿಗೆಲ್ಲ ಸ್ಪೃಹಣೀಯವು; ನಮ್ಮಿಂದ ಈ ಕೆಲಸವು ನೆರವೇರುವ ಬಗೆ ಹೇಗೆ ಎಂದು ಅಂಜುವದರಿಂದ ಈ ಕೆಲಸವು ಸಮಾಧಾನಕರವಾಗಿ ಸಾಧಿಸಲಾರದು. ಮೈಚಳಿ ಬಿಟ್ಟು ಕಥೆ ಹೇಳುವದನ್ನು ಪ್ರತಿಯೊಬ್ಬ ಶಿಕ್ಷಕನು ರೂಢಿಮಾಡಿಕೊಳ್ಳ ತಕ್ಕದ್ದು.

ಕಥೆಯನ್ನು ಹ್ಯಾಗೆ ಹೇಳಬೇಕು ! ಈ ಪ್ರಶ್ನವು ಸಣ್ಣದು, ಆದರೆ ಇದ ಉತ್ತರವು ಉದ್ದವಾದದ್ದಿರುವದು. ಕಥೆಯೆಂದರೇನು ? ಈ ಪ್ರಶ್ನವನ್ನು ಸ ಯಾಗಿ ತಿಳಿದುಕೊಂಡವರಿಗೆ ಮೇಲಿನ ಪ್ರಶ್ನದ ಉತ್ತರವು ಸುಲಭವಾಗಿ ದೊರೆಯು ವದು. ಕಥೆಯು ಒಂದು ಲಲಿತ ಬಂಧವು. ಇದರ ಉದ್ದೇಶವು ಆನಂ ವನ್ನುಂಟುಮಾಡುವದು. ಕಥೆಯ ಭಾವವು ಹೇಳುವವನಿಗೆ ಪೂರ್ಣವಾಗಿ ಬಿಂಬಿಸ ಬೇಕು. ಅದರಿಂದ ಅವನಿಗೆ ಸಂತೋಷವೆನಿಸಿರಲಿಕ್ಕೆಬೇಕು. ಇಲ್ಲದಿದ್ದರೆ ತಾನ ಅನುಭವಿಸದಿರುವ ಆನಂದವನ್ನು ಪರರಲ್ಲಿ ಮೂಡಿಸುವದು ಯಾರಿಂದಲೂ ಆಗದು. ಆದ್ದರಿಂದ ಯಾವ ಕಥೆಯ ಸ್ವಾರಸ್ಯವು ನಿಮ್ಮ ಮನಸ್ಸನ್ನು ಲೀನಗೊಳಿಸಿಲ್ಲವೋ ಆ ಕಥೆಯನ್ನು ಹೇಳಲು ಪ್ರಯತ್ನಿಸಬೇಡಿರಿ; ಕಥೆಯ ಸ್ವಾರಸ್ಯವನ್ನು ಕಂಡು ಹಿಡಿದು ಅದನ್ನು ಅನುಭವಿಸಿ ಆನಂದಪಡಲು ಪ್ರಯತ್ನಿಸಿರಿ. ಅಂದರೆ ಮಾತ್ರ ಆ ಕಥೆಯನ್ನು ಚೆನ್ನಾಗಿ ಹೇಳಲಿಕ್ಕೆ ನಿಮಗೆ ಬರುವದು.

ಇಂಥ ಒಂದು ಕಥೆಯನ್ನು ಹೇಳಿ ನಿಮಗೆ ತೋರಿದ ಅದರಲ್ಲಿಯ ರಸವು ಭಾವವೂ ಇನ್ನೊಬ್ಬರಲ್ಲಿ ಮೂಡುವಂತೆ ಹ್ಯಾಗೆ ಮಾಡಬೇಕು ? ಎಂಬ ಪ್ರಶ್ನೆಯು ಹಾಗೇ ಉಳಿಯಿತು. ಈ ಬಗ್ಗೆ ಬಲ್ಲವರು ಕೆಲವು ಸುಲಭವಾಗಿ ತಿಳಿಯುವಂಥ ಸೂಚನೆಗಳನ್ನು ಮಾಡಿರುವರು.

೧. ಕಥೆಯು ನಿಮಗೆ ಸಂಪೂರ್ಣವಾಗಿ ಗೊತ್ತಿರಬೇಕು. ಇದನ್ನು ಹೇಳ ಬೇಕೇ ಎಂದು ಕೆಲವರು ಆಶ್ಚರ್ಯಪಡಬಹುದು. ಆದರೆ ಸಾಮಾನ್ಯವಾಗಿ ಕಥೆ ಹೇಳುತ್ತಿರುವ ಶಿಕ್ಷಕರು ಈ ಬಗ್ಗೆ ಮಾಡುವ ದೋಷಗಳನ್ನು ನೋಡಿದವರಿ ಇದು ಬಹಳ ಮಹತ್ವದ ಮಾತೆಂದು ಅನಿಸಿರುವದು. ಹೆಸರುಗಳನ್ನು ತಪ್ಪು ತಪ್ಪಾಗಿ ಹೇಳುವದು; ಮೊದಲು ಹೇಳತಕ್ಕದ್ದನ್ನು ನಡುವೆ ಪೋಣಿಸಲು ಪ್ರಯ ತ್ನಿಸುವದು; ಇಂಥದನ್ನು ಹೇಳತಕ್ಕಲ್ಲಿ ಮರೆತೆನೆಂದು ಕ್ಷಮೆಬೇಡುವದು; ಕೊನೆ ಯವರೆಗಿನ ಪ್ರತಿಯೊಂದು ಸಂಗತಿಯೂ ಪೂರ್ಣವಾಗಿ ಗೊತ್ತಿಲ್ಲದ ಮೂಲಕ ಆರಂಭದಲ್ಲಿ ಹೇಳಿದ ಮಾತನ್ನು ಇಲ್ಲವೆ ಸಂಗತಿಯನ್ನು ಮುಂದೆ ಬದಲಿಸುವದು

ಈ ಕೊರತೆಗಳು ಕಥೆಯ ಪಾಠಗಳನ್ನು ಹೇಳುವವರಲ್ಲಿ ಸಾಮಾನ್ಯವಾಗಿ ಕಾಣು ವವು. ಕಥೆಯು ಮೇಲಾದದ್ದಿದ್ದರೂ ಅದನ್ನು ಹೇಳುವವನು ಸುಂತವನಿದ್ದರೂ ಈ ದೋಷಗಳು ಸೇರಿದರೆ ಆ ಕಥೆಯ ಪರಿಣಾಮವು ಸರಿಯಾಗಿ ಆಗದು. ಆದ್ದ ರಿಂದ ಕಥೆಯು ಹೇಳುವವನಿಗೆ ಪೂರ್ಣವಾಗಿ ಗೊತ್ತಿರತಕ್ಕದ್ದು; ಅದರೊಳಗಿನ ಸಂಗತಿಗಳನ್ನು ಅವನು ಪ್ರತ್ಯಕ್ಷ ಅನುಭವಿಸಿದಷ್ಟು ಪರಿಚಿತವಾದವಾಗಬೇಕು; ಅವನ ಬಾಯಿಂದ ಇವು ತಾವಾಗಿ ಹೊರಡುತ್ತಿರಬೇಕು; ಇವುಗಳನ್ನು ಪ್ರಯತ್ನ ಪೂರ್ವಕವಾಗಿ ಹೇಳುವ ಪ್ರಸಂಗವೇ ಬರಬಾರದು. ಅಂದರೆ ನಾಟಕದೊಳಗಿನ ಕೆಲವು ಪಾತ್ರಗಳ ಬಾಯಿಂದ ಬರುವ ಪಾಠಮಾಡಿದ ಮಾತುಗಳಂತೆ ಭಾಷೆಯು ಹೊರಬೀಳಬೇಕೆಂದಲ್ಲ; ಪಾಠಮಾಡಿದ ಭಾಷೆಯಲ್ಲಿ ಜೀವವಿರುವದಿಲ್ಲ. ಕಥೆಯೊಳ ಗಿನ ಸಂಗತಿಗಳು ತನ್ಮಯವಾಗಿರುವ ಮೂಲಕ ಪ್ರಯತ್ನವಿಲ್ಲದೆ ಈ ಮಾತುಗಳು ಯಥೋಚಿತವಾಗಿ ಹೊರಡುತ್ತಿರಬೇಕು. ಹೀಗೆ ಮಾತುಗಳು ಹೊರಡಬೇಕಾದರೆ, ಕಥೆಯೊಳಗಿನ ಮುಖ್ಯ ಸಂಗತಿಗಳು, ಅವು ನಡೆಯುವ ಕ್ರಮ, ಒಂದೊಂದು ಸಂಗತಿಯು ಕೊನೆಯ ಕಥಾ ಸ್ವಾರಸ್ಯಕ್ಕೆ ಎಷ್ಟು ಸಹಕಾರಿಯಾಗಿದೆ ಎಂಬದನ್ನು ನಿರ್ಧರಿಸಿಕೊಳ್ಳುವದು ಮಹತ್ವವಾದವು. ಹೀಗೆ ನಿರ್ಧರಿಸಿಕೊಂಡು ಕಾಲ್ಪನಿಕ ಕ್ಲಾಸಿಗೆ ಅದನ್ನು ಮನದಲ್ಲಿಯೇ ಹೇಳಿನೋಡಬೇಕು. ಹೀಗೆ ರೂಢಿ ಮಾಡುವ ದರಿಂದ ಪ್ರತಿಯೊಬ್ಬನ ದೋಷಗಳು ಆತನಿಗೆ ಕಂಡು ಅವುಗಳನ್ನು ತಿದ್ದಿಕೊಳ್ಳಲು ಅನುವಾಗುವದು. ಹಲವು ಪ್ರಯತ್ನಗಳಾದಬಳಿಕ ಆತ್ಮ ವಿಶ್ವಾಸವು ದೃಢವಾಗು ವದು. ಈ ವಿಶ್ವಾಸದ ಮೂಲಕ ತಡೆಯಿಲ್ಲದೆ, ಪ್ರಯತ್ನವಿಲ್ಲದೆ ಕಥೆಯನ್ನು ಹೇಳುವದು ಸಾಧ್ಯವಾಗುವದು.

೨. ಹುಡುಗರು ಕಥೆ ಹೇಳುವವನ ಕಣ್ಣೆದುರಿಗೆ ಇರತಕ್ಕದ್ದು; ಹುಡು ಗರು ಅರ್ಧವರ್ತುಲಾಕಾರವಾಗಿ ಕುಳಿತಿರುವದು ಮೇಲಾದದ್ದು. ಕಥೆಯನ್ನು ಆರಂ ಭಿಸುವದಕ್ಕಿಂತ ಮೊದಲೇ ವರ್ಗದಲ್ಲಿ ಗದ್ದಲವಿಲ್ಲದಿದ್ದರೆ ಮೇಲು; ಆದರೂ ಸ್ವಲ್ಪ ಗುಣು ಗುಣು ಶಬ್ದವಾಗಲಿ ಗದ್ದಲವಾಗಲಿ ಇದ್ದ ಪಕ್ಷದಲ್ಲಿ ಹುಡುಗರ ಮೇಲೆ ಇದಕ್ಕಾಗಿ ಹರಿಹಾಯಬಾರದು. ಕಥೆಯನ್ನು ಹೇಳಲಾರಂಭಿಸಿದ ಕೂಡಲೆ, ಹುಡು ಗರು ಸುಮ್ಮನಾಗುವರು. ಈ ಸಮಯದಲ್ಲಿ ಶಿಕ್ಷಕನು ಅಸಮಾಧಾನಹೊಂದು ವದು ಇಲ್ಲವೆ ಹುಡುಗರನ್ನು ರೇಗಿಸುವದು ಇವೆರಡೂ ಅಪ್ರಾಸಂಗಿಕವು. ಒಮ್ಮೆ ಕಥೆಯನ್ನು ಹೇಳಲಾರಂಭಿಸಿದಬಳಿಕ ಮೂಲೆಯೊಳಗಿನ ಒಬ್ಬಿಬ್ಬ ಗುಜು ಗುಜು ಮಾಡುವ ಹುಡುಗರನ್ನು ಹೆಸರಿಟ್ಟು ಕರೆದು ಗದ್ದರಿಸಿ ಕಥೆಯ ಸರಸತೆಯನ್ನು ಕುಂದಿಸುವದು ಸರಿಯಲ್ಲ. ನೀವು ಒಂದು ಸರಸವಾದ ಕಥೆಯನ್ನು ಸ್ವಾರಸ್ಯ ವಾಗಿ ಹೇಳುತ್ತಿದ್ದರೆ ಎಲ್ಲ ಹುಡುಗರು ಅದನ್ನು ಲಕ್ಷ್ಯಗೊಟ್ಟು ಕೇಳುವರು.

ಒಬ್ಬಿಬ್ಬರು ಕಿಡಿಗೇಡಿಗಳು ಹೊರಟರೆ ಅವರಿಗಾಗಿ ಮಿಕ್ಕವರ ಆನಂದವನ್ನು ಕುಂದಿಸುವ ಅಧಿಕಾರವು ಶಿಕ್ಷಕನಿಗೆ ಬಾರದು.

೩. ಆರಂಭದಲ್ಲಿ ಆ ಕಥೆಯನ್ನು ಹೇಳಲಿಕ್ಕೆ ಬೇಕಾದ ಮನೋಭಾವವನ್ನು ಒದಗಿಸಿಕೊಂಡು ಸರಳವಾಗಿ, ಸಂಕ್ಷೇಪವಾಗಿ, ಸಕ್ರಮವಾಗಿ, ಮಾತಾಡುವ ಭಾಷೆಯಲ್ಲಿ, ಭಾವದೊಂದಿಗೆ, ಕಥಾ ಸ್ವಾರಸ್ಯವನ್ನು ಸವಿಯುತ್ತ ಕಥೆ ಹೇಳತಕ್ಕದ್ದು.

ಕಥೆ ಹೇಳುವವನು ಕಥೆಯನ್ನು ತಾನು ಹೇಳುತ್ತಿರುವೆನೆಂದು ಭಾವಿಸಲಾಗದು; ಅಂದರೆ ಕಥೆಯನ್ನು ತನ್ನ ಮಧ್ಯಸ್ಥಿಕೆಯಿಂದ ತಿಳಿಸುತ್ತಿರುವೆನೆಂಬ ಭಾವನೆಯು ಆತನಲ್ಲಿ ಮೂಡಬಾರದು. ಹುಡುಗರಿಗೆ ಕಥೆ ಹೇಳುತ್ತಿರುವೆನೆಂಬ ಅರಿವಿನಿಂದ ಮೆತ್ತಗಿನ ಧ್ವನಿಯನ್ನು ತೆಗೆಯಬಾರದು; ನಿಮ್ಮ ಮನಸ್ಸಿನಲ್ಲಿ ಕಥೆಯು ತುಂಬಿಹೋಗಲಿ; ನಿಮ್ಮನ್ನು ಮರೆತು ಬಿಡಿರಿ. ಅಂದರೆ ಸರಳವಾಗಿ ಕಥೆ ಹೇಳುವದು ಸುಲಭವಾಗುವದು.

ಸಂಕ್ಷೇಪವಾಗಿ ಕಥೆಹೇಳಿರಿ; ಅಂದರೆ ನಡುನಡುವೆ ನಿಮ್ಮ ಅಭಿಪ್ರಾಯಗಳು, ಟೀಕೆಗಳು ಇವುಗಳನ್ನು ಪೋಣಿಸಿ ತೀವ್ರವಾಗಿ ಹುಡುಗರ ಕಣ್ಣುಮುಂದೆ ಸಾಗಿದ ಕಥೆಯ ನೋಟಗಳಲ್ಲಿ ತೊಡಕುಗಳನ್ನು ಬರಗೊಡಬೇಡಿರಿ. ಕಥೆಯ ಸಂಗತಿಗಳ ಕ್ರಮದಲ್ಲಿ ಹೆಚ್ಚುಕಡಿಮೆಯಾಗಗೊಡಬೇಡಿರಿ. ನೀವು ಉಪಯೋಗಿಸುವ ಭಾಷೆಯು ಸುಲಭವೂ ತೀರ ಪರಿಚಿತವಾದದ್ದೂ ಇರಲಿ; ನಿಮ್ಮ ಭಾಷೆಯಮೂಲಕ ಕಥಾಭಾಗವು ತಿಳಿಯದಾದರೆ, ಅದನ್ನು ತಿಳಿಸಲಿಕ್ಕೆ ಅಲ್ಲಿ ವೇಳೆಯು ಇರುವದಿಲ್ಲ. ಹುಡುಗರ ಕಲ್ಪನೆಗಳು ಒಮ್ಮೆ ಅಸ್ಪಷ್ಟವೂ ತೊಡಕೊಳ್ಳವೂ ಆದರೆ ಕಥೆಯ ಸ್ವಾರಸ್ಯವು ಅವರ ಮನಸಿನಲ್ಲಿ ಬಿಂಬಿಸಲಾರದು.

ಕಥೆಯನ್ನು ಭಾವದೊಂದಿಗೆ ಹೇಳಿರಿ. ಅಂದರೆ ನಿಮ್ಮ ಧ್ವನಿ, ಮೈ-ಕೈ-ಮೋರೆಗಳ ಚಲನವಲನಗಳಿಂದ ನೀವು ಹೇಳುತ್ತಿರುವ ಕಥಾಭಾಗದ ಭಾಗವು ಕೇಳುವವರ ಮನಸಿನಲ್ಲಿ ಬಿಂಬಿಸುವಂತೆ ಕಥೆ ಹೇಳಿರಿ. ಈ ಸೂಚನೆಯು ಬಹಳ ಮಹತ್ವವಾದದ್ದು; ಕೆಲವರು ಇದರ ಅರ್ಥವನ್ನು ತಿಳಿದುಕೊಳ್ಳದೆ ಹಾವಭಾವವೆಂದರೆ ಪ್ರತಿಯೊಂದು ಶಬ್ದ ಬಂದಲ್ಲಿ ನಾಟಕದ ಸಾಮಾನ್ಯ ಪಾತ್ರಗಳಂತೆ ಆ ಶಬ್ದದ ಅರ್ಥವನ್ನು ಸೂಚಿಸುವ ಅಂಗಚೇಷ್ಟೆಗಳನ್ನು ಮಾಡಲು ಯತ್ನಿಸುವರು. ಉದಾಹರಣಾರ್ಥವಾಗಿ ಆಕಾಶವೆಂದಕೂಡಲೆ ಮೇಲಕ್ಕೆ ಕೈಯೆತ್ತಿ ಆಕಾಶವನ್ನು ತೋರಿಸುವದು; ಪುರುಷ ಎಂದು ಬಂದಕೂಡಲೆ ಕೈಯಿಂದ ತಮ್ಮನ್ನು ತೋರಿಸಲು ಪ್ರಯತ್ನಿಸುವದು ಹೀಗೆ ಮಾಡುವರು. ಈ ಶಬ್ದಗಳ ಅರ್ಥವನ್ನು ತಿಳಿಸುವ ಅಂಗಚೇಷ್ಟೆಗಳಿಂದ ಕಥೆಯ ಮುಖ್ಯಭಾವವು ಕೇಳುವವರಲ್ಲಿ ಬಿಂಬಿಸಲಾರದು. ಕಥೆಯಲ್ಲಿ ಬಂದ ಆನಂದ, ಕೋಪ, ಗರ್ವ ಮೊದಲಾದ ಭಾವಗಳು

ವ್ಯಕ್ತವಾಗಲು ಪ್ರಸಂಗಕ್ಕೆ ತಕ್ಕ ಹಾವಭಾವಗಳನ್ನು ಮಾತ್ರ ಮಾಡತಕ್ಕದ್ದು. ಕೆಲವರಿಗೆ ಈ ಹಾವಭಾವವು ಸಹಜವಾಗಿ ಬರುವದು; ಕೆಲವರಿಗೆ ಬರುವದಿಲ್ಲ. ಇವು ಬಾರದಿದ್ದವರು ಇವುಗಳನ್ನು ಪ್ರಯತ್ನದಿಂದ ನಟಿಸಲಿಕ್ಕೆ ಪ್ರಯತ್ನಿಸುವದರಲ್ಲಿ ಉಪಯೋಗವಿಲ್ಲ. ಹಾವಭಾವಗಳು ಸ್ವಾಭಾವಿಕವಾಗಿದ್ದಲ್ಲಿ ಅವುಗಳ ಪರಿಣಾಮವು ಉತ್ಕೃಷ್ಟವಾಗಿ ಆಗುವದು; ಪ್ರಯತ್ನಪೂರ್ವಕವಾಗಿ ಮಾಡಹೋದರೆ ನೋಡುವವರ ಮೇಲೆ ಅವುಗಳಿಂದ ಅಲ್ಲದ ಪರಿಣಾಮವಾಗುವದುಂಟು.

೫. ಕಥೆಗಳನ್ನು ಹೇಳುವಾಗ ಅದರೊಳಗಿನ ಸಂಗತಿಗಳು ನಿಮ್ಮ ಕಣ್ಣ ಮುಂದೆ ಕಟ್ಟಿದಂತಿರಬೇಕು. ಆ ಸಂಗತಿಗಳನ್ನು ನೀವು ನೋಡುತ್ತಿರುವಂತೆ ಭಾವಿಸಿರಿ. ನೀವು ಒಂದು ಕಿಡಿಕೆಯಲ್ಲಿ ನಿಂತು ಕೆಳಗೆ ನಡೆದ ಸಂಗತಿಗಳನ್ನು ನೋಡಿ ಕೋಣೆಯಲ್ಲಿ ಕುಳಿತಿರುವವರಿಗೆ ಬಣ್ಣಿಸಿ ಹೇಳುತ್ತಿರುವಿರೆಂದು ಭಾವಿಸಿರಿ. ಅಲ್ಲಿ ನಿಮಗೆ ಕಾಣುವ ಹುಡುಗನ ಆನಂದವನ್ನೂ ಭಿಕ್ಷುಕನ ನಿರಾಶೆಯನ್ನೂ ಹುಡಿಗೆಯ ಹೆಮ್ಮೆಯನ್ನೂ ಕಣ್ಮುಟ್ಟಿ ನೋಡಿ ಸಹಜವಾದ ಹಾವಭಾವದೊಂದಿಗೆ ಆ ನೋಟದ ಚಿತ್ರವನ್ನು ಕೋಣೆಯೊಳಗಿದ್ದ ನಿಮ್ಮ ಸ್ನೇಹಿತರ ಕಲ್ಪನಾಶಕ್ತಿಯಮುಂದೆ ಇಟ್ಟು ಅವರಿಗೂ ಅದು ಕಾಣುವಂತೆ ಮಾಡುವದೇ ನಿಮ್ಮ ಕೆಲಸವು. ಸಂಕ್ಷೇಪದಲ್ಲಿ ಹೇಳುವದಾದರೆ ನೀವು ಹೇಳುತ್ತಿರುವ ಕಥೆಯನ್ನು ನೀವು ನೋಡುತ್ತಿರಬೇಕು.

೬. ಕೊನೆಯ ಸೂಚನೆಯೆಂದರೆ, ಮನಸೊಪ್ಪಿ ಕಥೆ ಹೇಳಿರಿ. ಬೇಸರಿಕೆಯಿಂದ ಕಥೆ ಹೇಳುವದರಿಂದ ಏನೂ ಪರಿಣಾಮವಾಗುವದಿಲ್ಲ. ಮನಸು ಪ್ರಸನ್ನವಾಗಿರದಾಗ ಕಥೆಯು ಬಾಯಿಂದ ತಕ್ಕಂತೆ ಹೊರಡುವದಿಲ್ಲ. ಇಂಥ ಕಾಲದಲ್ಲಿ ಅದನ್ನು ಹೇಳಬೇಡಿರಿ. ಕಥೆಯು ನಿಮ್ಮ ಮನಸಿಗೆ ಬಾರದಿದ್ದರೂ ಕಥೆ ಹೇಳಲಿಕ್ಕೆ ಪ್ರಯತ್ನಿಸಬೇಡಿರಿ. ನಿಮಗೆ ಸೇರುವ ಕಥೆಗಳನ್ನು ಮಾತ್ರ ಹೇಳಿರಿ.

ಶಿಕ್ಷಣದಲ್ಲಿ ಕಥೆಗಳ ಉಪಯೋಗ:— ಹಿಂದೆ ವಿವರಿಸಿದ ಸಣ್ಣ ಮಕ್ಕಳಿಗೆ ಕಥೆ ಹೇಳುವ ಉದ್ದೇಶವನ್ನೂ ಅದನ್ನು ಹೇಳತಕ್ಕ ಕ್ರಮವನ್ನೂ ಅಭ್ಯಾಸಿಸಿದರೆ ಸಾಲೆಯ ಶಿಕ್ಷಣದಲ್ಲಿ ಅದರಿಂದ ಕೆಲವು ಉಪಯೋಗಗಳಾಗುವವೆಂಬದು ಸ್ಪಷ್ಟವಾಗುವದು. ಸಾಲೆಯ ದಿನದ ಕೆಲಸದಿಂದ ಹುಡುಗರಲ್ಲಿ ಬೇಸರವು ಸೇರುವದುಂಟು; ಈ ಬೇಸರವನ್ನು ದೂರಮಾಡಲಿಕ್ಕೆ ಕಥೆ ಹೇಳುವದು ಒಂದು ಉಪಾಯವು. ಇತಿಹಾಸ, ಪ್ರಕೃತಿ ವಿಮರ್ಶೆ ಮೊದಲಾದ ವಿಷಯಗಳನ್ನು ಸುಲಭವಾಗಿ ತಿಳಿಸಿಕೊಡಲಿಕ್ಕೆ ಕಥೆಗಳನ್ನು ಹೇಳುವದರಿಂದಲೂ ಒಳ್ಳೇ ಉಪಯೋಗವಾಗಬಹುದು.

ಇವಲ್ಲದೆ ಕಥೆಗಳಮೂಲಕ ಶಿಕ್ಷಣದ ಎಲ್ಲ ವಿಷಯಗಳಲ್ಲಿಯೂ ಉಪಯೋಗ ಬೀಳುವ ಕೆಲವು ಚಟಗಳು ಹುಡುಗರಲ್ಲಿ ನಲೆಗೊಳ್ಳುವದುಂಟು. ಇವು ಮೇಲೆ ಹೇಳಿದ ಆನುಷಂಗಿಕ ಉಪಯೋಗಗಳಿಗಿಂತ ಮಹತ್ವವಾದವೆಂದು ಎಲ್ಲರೂ ಒಪ್ಪಿಕೊಳ್ಳುವರು. ಸಾಮಾನ್ಯವಾಗಿ ನಮ್ಮ ಶಾಲೆಗಳಲ್ಲಿ ಹುಡುಗರಲ್ಲಿ ಕಂಡುಬರುವ ಮಹತ್ವದ ಒಂದು ಕೊರತೆಯೆಂದರೆ ತಮಗೆ ಗೊತ್ತಿರುವದನ್ನು ಇಲ್ಲವೆ ತಮ್ಮ ಮನಸಿನಲ್ಲಿರುವದನ್ನು ನಾಲ್ಕು ಸ್ಪಷ್ಟ ಮಾತುಗಳಿಂದ ಇಲ್ಲವೆ ವಾಕ್ಯಗಳಿಂದ ಹೇಳಲಿಕ್ಕೆ ಬಾರದಿರುವದು. ಈ ಕೊರತೆಯು ಕೆಳಗಿನ ಇಯತ್ತೆಗಳ ಹುಡುಗರಲ್ಲಿ ಇರುವದಷ್ಟೇ ಅಲ್ಲ; ೬ನೆಯ ಹಾಗು ೭ನೆಯ ಇಯತ್ತೆಗಳ ವಿದ್ಯಾರ್ಥಿಗಳಲ್ಲಿಯೂ ಒಡೆದುಕಾಣುವದು. ಈ ರೂಢಿಯನ್ನು ಆರಂಭದಿಂದ ಮಾಡಿಕೊಡದಿರುವದೇ ಇದಕ್ಕೆ ಮುಖ್ಯಕಾರಣವು. ಆದರೆ ಈ ರೂಢಿಯು ಅವರಲ್ಲಿ ಯಾಕೆ ನಲೆಗೊಂಡಿರುವದಿಲ್ಲೆಂಬದನ್ನು ಕುರಿತು ವಿಚಾರಿಸಿದರೆ, ತಪ್ಪಾದ ಪ್ರಶ್ನಪದ್ಧತಿಯೂ ಹುಡುಗರು ಉತ್ತರಗಳನ್ನು ನುಡಿಯಲಾರಂಭಿಸಿದಕೂಡಲೆ ಪೂರ್ಣ ಉತ್ತರವನ್ನು ಹೇಳಿಬಿಡುವ ಶಿಕ್ಷಕರಲ್ಲಿರುವ ಒಲವೂ ಇದಕ್ಕೆ ಮೂಲಕಾರಣಗಳೆಂದು ಗೊತ್ತಾಗಬಹುದು. ಆದರೆ ಹುಡುಗರಲ್ಲಿ ತಮ್ಮ ಅಭಿಪ್ರಾಯಗಳನ್ನು ಇಲ್ಲವೆ ಜ್ಞಾನವನ್ನು ಹೇಳುವ ಲವಲವಿಕೆಯು ಇಲ್ಲದಿರುವದೂ ಮತ್ತೊಂದು ಮಹತ್ವದ ಕಾರಣವು. ಯೋಗ್ಯವಾಗಿ ಕಥೆಗಳನ್ನು ಹೇಳಿ, ಅವುಗಳ ಬಗ್ಗೆ ಪ್ರಶ್ನೆಗಳನ್ನು ಮಾಡುವದರಿಂದ ಈ ದೋಷವು ನಿಶ್ಚಯವಾಗಿ ಕಡಿಮೆಯಾಗುವದೆಂದು ಅನುಭವದಿಂದ ಕಂಡುಬಂದಿದೆ. ತಮಗೆ ಗೊತ್ತಿರುವದನ್ನೆಲ್ಲ ಹೇಳಬೇಕೆಂಬ ಲವಲವಿಕೆಯು ಹುಡುಗರಲ್ಲಿ ಕಥೆಗಳ ಬಗ್ಗೆ ಮೂಡುವಷ್ಟು ಇತರ ಯಾವ ವಿಷಯಗಳ ಬಗ್ಗೆಯೂ ಅನಿಸದು. ಈ ಒಲವಿನ ಉಪಯೋಗ ಮಾಡಿಕೊಂಡರೆ, ಅವರಲ್ಲಿ ಕ್ರಮವಾಗಿಯೂ ಸ್ಪಷ್ಟವಾಗಿಯೂ ಪೂರ್ಣವಾಗಿಯೂ ಮಾತಾಡುವ ಚಟವು ತಾನಾಗಿ ನೆಲೆಗೊಳ್ಳುವದು. ಈ ಚಟವು ನೆಲೆಗೊಳ್ಳದಿರುವ ಮೂಲಕ ವಾಚನ, ನಿಬಂಧಲೇಖನ ಮೊದಲಾದ ವಿಷಯಗಳು ತೀರ ಅಸಮಾಧಾನಕರವಾಗಿ ಸಾಗುತ್ತವೆಂಬದು ಪ್ರತಿಯೊಬ್ಬ ಶಿಕ್ಷಕನಿಗೆ ಗೊತ್ತಿರುವ ಮಾತು.

ಹುಡುಗರಲ್ಲಿ ಸ್ವಾಭಾವಿಕವಾಗಿರುವ ನಿರ್ಮಾಣ ಪ್ರವೃತ್ತಿಯು (creative expression) ಅಂದರೆ ತಮ್ಮ ಮನಸಿನಲ್ಲಿ ಬಂದದ್ದನ್ನು ಆಡಿ, ಮಾಡಿ ಇಲ್ಲವೆ ಚಿತ್ರಿಸಿತೋರಿಸುವ ಶಕ್ತಿಯು ಕಥೆಯ ಪಾಠಗಳಲ್ಲಿ ಸಹಜವಾಗಿ ಹೊರಹೊಮ್ಮುವದು. ಇದಕ್ಕೆ ಶಿಕ್ಷಕರು ಮೂರು ಮಾರ್ಗಗಳಿಂದ ಸರವಾಗಬಹುದು. (೧) ಕಥೆಯನ್ನು ತಿರುಗಿ ಹೇಳಿಸಿಕೊಳ್ಳುವದು (೨) ಕಥೆಗೆ ಸಂಬಂಧಿಸುವ ಚಿತ್ರಗಳನ್ನು ತೆಗೆಯಿಸುವದು (೩) ಕಥೆಯನ್ನು ಆಡಿ ತೋರಿಸಲಿಕ್ಕೆ ಉತ್ತೇಜನ ಕೊಡುವದು.

ಇವುಗಳಲ್ಲಿ ನಮ್ಮ ಸಾಲೆಗಳಲ್ಲಿ ಮೊದಲನೆಯ ಮಾರ್ಗವನ್ನು ಮಾತ್ರ ಅನು ಸರಿಸುವದುಂಟು. ಅದನ್ನು ಸಹ ತೀರ ಅಸಮಾಧಾನಕರವಾಗಿ ಸಾಗಗೊಡುವ ದುಂಟು. ಕಥೆಯನ್ನು ಹೇಳುವ ಬದಲು ಹುಡುಗರು ಬಹುತರವಾಗಿ ಕಥೆಯ ಸಾರಾಂಶವನ್ನು ಅತ್ಯಲ್ಪ ವೇಳೆಯಲ್ಲಿ ಹೇಳಿ ಮುಗಿಸುವದುಂಟು. ಆದರೆ ಕಥೆ ಯನ್ನು ನಾವು ಹಿಂದೆ ಸೂಚಿಸಿದಂತೆ ಶಿಕ್ಷಕನು ಹೇಳಿದ್ದರೆ, ಪ್ರತಿಯೊಂದು ಸಂಗ ತಿಯೂ ಅವರ ಕಣ್ಣ ಮುಂದೆ ನಡೆದಂತೆ ಅವರಿಗೆ ಅನಿಸಿದ್ದರೆ, ಹೀಗೆ ಬಿಟ್ಟಬೇಸ ರಿಕೆಯಿಂದ ಹುಡುಗರು ಅವುಗಳನ್ನು ಹೇಳಲಾರರು.

ಇರಲಿ. ಈ ದೋಷಗಳು ನಮ್ಮ ಸಾಲೆಗಳಲ್ಲಿ ಸಾರ್ವತ್ರಿಕವಾಗಿರುವಂತೆ ತೋರಿದರೂ ವರ್ಗದಲ್ಲಿ ಒಬ್ಬಿಬ್ಬ ಹುಡುಗರು ಕಥೆಗಳನ್ನು ಉಪ್ಪುಕಾರ ಹಚ್ಚಿ, ಸ್ಥೆಯಿಂದ ಹೇಳುವದನ್ನು ಶಿಕ್ಷಕರು ಕೇಳಿರಬಹುದು. ಈ ವಿಷಯದಲ್ಲಿ ಹುಡು ಗರ ಉಚ್ಚಾರ, ಮಾತಾಡುವ ಕ್ರಮ ಇವುಗಳನ್ನು ಸುಧಾರಿಸಲಿಕ್ಕೆ ಇರುವಷ್ಟು ನುವು ಬೇರೆ ಯಾವ ವಿಷಯದಲ್ಲಿಯೂ ಇರುವದಿಲ್ಲ.

ಇಲ್ಲಿ ಇನ್ನೊಂದು ಸೂಚನೆಯನ್ನು ಮಾಡುವೆವು. ನೀವು ಹೇಳಿದ ಎಲ್ಲ ಥೆಗಳನ್ನು ಪ್ರತಿಯೊಬ್ಬ ಹುಡುಗನು ಚೆನ್ನಾಗಿ ಹೇಳಬೇಕೆಂದು ಅಪೇಕ್ಷಿಸಬೇ ರಿ. ಎಲ್ಲರ ಮನಸಿನ ಮೇಲೆ ಎಲ್ಲ ಕಥೆಗಳ ಪರಿಣಾಮವು ಅಷ್ಟೇ ಬಲವಾಗಿ ಗಲಾರದು. ಆದ್ದರಿಂದ ತಮಗೆ ಬೇಕಾದ ಕಥೆಯನ್ನು ಹೇಳಲಿಕ್ಕೆ ಮೇಲಿಂದ ಮೇಲೆ ಅವರಿಗೆ ಅನುವು ಕೊಡಿರಿ. ಯಾವ ಹುಡುಗನು ಒಂದು ಕಥೆಯನ್ನು ತರರಿಗಿಂತ ಮೇಲಾಗಿ ಹೇಳುವನೋ ಆ ಕಥೆಯನ್ನು ಹೊಸದಾಗಿ ಬಂದವರ ಮುಂದೆ ಹೇಳುವ ಹಕ್ಕು ಅವನದಾಗಿರಲಿ ಇದರ ಪರಿಣಾಮವು ಎಷ್ಟು ಫಲ ದಾಯಕವಾಗುವದೆಂಬದು ತೀವ್ರ ಸ್ಪಷ್ಟವಾಗುವದು.

ಇದರ ಪರಿಣಾಮವು ವಾಚನ ಪಾಠಗಳಲ್ಲಿ ಕಾಣಲಾರಂಭಿಸುವದು. ಶಿಕ್ಷಕ ೂಡನೆ ಹುಡುಗರು ಮನಸು ಬಿಚ್ಚಿ ಮಾತನಾಡುವರು; ಅವರ ಉಚ್ಚಾರವು ್ಪಷ್ಟವಾಗುವದು; ಧ್ವನಿಯು ಸ್ವಾಭಾವಿಕವಾದದ್ದಾಗುವದು; ವಾಚನ ಪಾಠ ಲ್ಲಿ ಅವರು ಮನಸು ಹಾಕುವರು; ಶಿಕ್ಷಕನ ಪ್ರಶ್ನಗಳಿಗೆ ತಡೆಯದೆ ಉತ್ತರ ೂಡುವರು; ಯಾಂತ್ರಿಕ ವಾಚನವು ಕಾಣದಾಗುವದು. ಒಟ್ಟಿನ ಮೇಲೆ ಡಿ ವಾಚನ ಪಾಠದ ಉದ್ದೇಶವು ಶ್ರಮವಿಲ್ಲದೆ ಕೈಗೂಡುವಂತೆ ಕಾಣಹತ್ತುವದು.

ಕಥೆಗೆ ಸಂಬಂಧಿಸುವ ಚಿತ್ರಗಳನ್ನು ತೆಗೆಯಿಸುವ ಬಗ್ಗೆ ನಮ್ಮ ಶಿಕ್ಷಕರು ್ರಯತ್ನ ಮಾಡಿದಂತೆ ತೋರುವದಿಲ್ಲ. ಚಿಕ್ಕಮಕ್ಕಳ ಚಿತ್ರ ಲೇಖನವು ಚಿತ್ರ ಲೆಯ ದೃಷ್ಟಿಯಿಂದ ಮೇಲಾದದ್ದಿರುವ ಸಂಭವವಿಲ್ಲ. ಆದರೆ ಚಿತ್ರಗಳನ್ನು

(ತಮ್ಮ ಮನಸಿಗೆ ತೋರಿದಂತೆ ಹಾಗು ತಮಗೆ ಸಾಧಿಸುವಂತೆ) ತೆಗೆಯುವ ಒಲ
ಅವರಲ್ಲಿ ಪ್ರಬಲವಿರುವದು. ಇವುಗಳಿಂದ ನಾವು ಹೇಳಿದ ಕಥೆಯ ಬಗ್ಗೆ ಅವ
ಕಲ್ಪನೆಗಳು ಎಂಥವಾಗಿರುವವೆಂಬದು ನಮಗೆ ಗೊತ್ತಾಗುವದು. ಆದ್ದರಿಂ
ಈ ಬಗ್ಗೆ ಅವರಿಗೆ ಉತ್ತೇಜನ ಕೊಡತಕ್ಕದ್ದು.

ಹಾಗೆಯೇ ಕಥೆಯನ್ನು ಅಡಿ ತೋರಿಸಲಿಕ್ಕೂ ನಾವು ಸಾಕಷ್ಟು ಹುರುಪ
ಗೊಟ್ಟಿಲ್ಲ. ಸಂಭಾಷಣಗಳನ್ನು ಕಲ್ಪಿಸಿ ನಾಟಕರೂಪದಿಂದ ಕಥೆಯನ್ನು ಆಡು
ವದು, ಚಿಕ್ಕಮಕ್ಕಳ ಶಕ್ತಿಗೆ ಮೀರಿರುವದೆಂದು ಕೆಲವರು ಆಕ್ಷೇಪಿಸಬಹುದು.
ಆದರೆ ಚಿಕ್ಕಮಕ್ಕಳಿಗೆ ಈ ಬಗ್ಗೆ ಸ್ವಾತಂತ್ರ್ಯವನ್ನು ಕೊಟ್ಟು ನೋಡಿದವರ ಅನು
ಭವವು ಭಿನ್ನವಾದದ್ದಿರುವದು. ಈ ಸಂದರ್ಭಗಳನ್ನು ಒದಗಿಸಿ ಕೊಟ್ಟ ಶಿಕ್ಷ
ಕರು ಅನ್ನುವದೇನೆಂದರೆ-ತಮ್ಮ ಹುಡುಗರು ವಾಚನ ಪಾಠಗಳನ್ನು ಓದಿ ತಿಳಿದು
ಕೊಳ್ಳುವದರಲ್ಲಿಯೂ ಭಾವಬೋಧಕವಾಗಿ ಓದುವದರಲ್ಲಿಯೂ ಲಕ್ಷ್ಯಶಕ್ತಿಯ
ಲ್ಲಿಯೂ ಇತರ ಹುಡುಗರಿಗಿಂತ ಮುಂದುವರಿದಿರುವರು.

ನಮ್ಮ ಸಾಲೆಗಳಲ್ಲಿ ವಾಡಿಕೆಯಾಗಿ ಹೇಳುವ ಕಥೆಗಳು ೧೦-೧೨ ಕ್ಕಿಂತ
ಹೆಚ್ಚಾಗಿಲ್ಲವೆಂದು ತೋರುತ್ತದೆ. ಇವುಗಳಲ್ಲಿ ಕೆಲವಂತೂ ಹುರುಳಿಲ್ಲದವಿರುತ್ತವೆ.
ಸಣ್ಣ ಮಕ್ಕಳಿಗೆ ಹೇಳುವ ಕಥೆಗಳಲ್ಲಿ ಯಾವ ಲಕ್ಷಣಗಳಿರುವವೆಂಬದನ್ನು ನಾವ
ಹಿಂದೆ ವಿವರಿಸಿರುವೆವು. ಈ ಲಕ್ಷಣಗಳನ್ನೊಳಗೊಂಡ ಹಾಗು ಅನುಭವದಿಂ
ಚಿಕ್ಕ ಮಕ್ಕಳಿಗೆ ಪ್ರಿಯವೆನಿಸಿದ ಕಥೆಗಳನ್ನು ಶಿಕ್ಷಕರು ಕಳಿಸಿಕೊಟ್ಟರೆ ಅವನ್ನು
ಪ್ರಾ. ಶಿಕ್ಷಣದಲ್ಲಿ ನಾವು ಪ್ರಕಟಿಸಲಿಚ್ಛಿಸುತ್ತೇವೆ.

——(೦)——

ಕನ್ನಡ ಲಿಪಿಯ ಸುಧಾರಣೆ ಎಂಬ ಚಿಕ್ಕ ಲೇಖವೊಂದು ನಮ್ಮಲ್ಲಿ ಬಂದಿದೆ.
ಅದನ್ನು ಬರೆದವರು ತಮ್ಮ ಹೆಸರು, ಊರು ಮೊದಲಾದವುಗಳನ್ನು ತಿಳಿಸಿಲ್ಲ. ಹೀಗೆ
ತಿಳಿಸದವರ ಲೇಖಗಳನ್ನು ಪ್ರಕಟಿಸುವ ರೂಢಿಯಿಲ್ಲ. ತಮ್ಮ ಹೆಸರು ಅಚ್ಚಿನಲ್ಲಿ
ಬರಬಾರದೆಂದು ಅಭಿಪ್ರಾಯಪಡುವವರು ಹಾಗೆ ಬರೆದು ತಿಳಿಸಿದಲ್ಲಿ, ಅದನ್ನು
ಮುದ್ರಿಸದಿರಬಹುದು. ಆದರೆ ಲೇಖಗಳು ಯಾರಿಂದ ಬಂದಿವೆ, ಮೂಲ ಲೇಖ
ಗಳೋ ಭಾಷಾಂತರಗಳೋ, ಅನುವಾದಗಳೋ ಎಂಬ ಬಗ್ಗೆ ಲೇಖಕರು ತಿಳಿಸ
ಬೇಕಲ್ಲದೆ ತಮ್ಮ ಹೆಸರು, ಪತ್ತೆ ಇವುಗಳನ್ನು ಕಳುಹಿಸತಕ್ಕದ್ದು.

ಹಾಗೆಯೇ ವಿಜಯ ಎಂಬ ಹೆಸರನ್ನಿಟ್ಟುಕೊಂಡು ಒಬ್ಬರು ಸದ್ಯಕ್ಕೆ
ತಾಲೂಕು ಸಾಲೆಗಳಲ್ಲಿ ನಡೆಯುವ ಸಮ್ಮೇಲನಗಳ ಬಗ್ಗೆ ಕೆಲವು ಆಕ್ಷೇಪಗಳನ್ನು
ಬರೆದು ಕಳಿಸಿರುವರು. ಮೇಲಿನ ಮಾತುಗಳು ಇವರಿಗೂ ಅನ್ವಯಿಸುವವು.

ಭೂಗೋಲದ ಟಿಪ್ಪಣಿಗಳು.

ಇಂದು ಆಸ್ಟ್ರೇಲಿಯು ಖಂಡದಲ್ಲಿ ೧೦ ಕೋಟಿಗಿಂತ ಹೆಚ್ಚು ಕುರಿಗಳಿರುವವು. ಈ ಭೂಮಂಡಲದಲ್ಲಿ ಆಸ್ಟ್ರೇಲಿಯವು ಎಲ್ಲಕ್ಕೂ ಹೆಚ್ಚು ಉಣ್ಣೆಯು ಹೊರಡುವ ಡಾಗಿರುವದು. ನ್ಯೂಝಿಲಂಡವೂ ಕುರಿಗಳ ಬಗ್ಗೆ ಹೆಸರಾಗಿದೆ. ಆದರೆ ಈ ಶದಲ್ಲಿ ಆಸ್ಟ್ರೇಲಿಯದಷ್ಟು ಕುರಿಗಳಿಲ್ಲ. ಕುರಿಗಳನ್ನು ಸಾಕಲಿಕ್ಕೆ ನ್ಯೂಝಿಲಂಡದಲ್ಲಿ ಸ್ಟ್ರೇಲಿಯಕ್ಕಿಂತ ಮೇಲಾದ ಹುಲ್ಲು ಭೂಮಿಗಳಿರುವವು; ಆಸ್ಟ್ರೇಲಿಯದಲ್ಲಿ ನೀರಿನ ರತೆಯು ಬಹಳ. ನ್ಯೂಝಿಲಂಡದಲ್ಲಿ ಈ ನ್ಯೂನತೆಯಿಲ್ಲ. ನ್ಯೂಝಿಲಂಡವು ಸ್ಟ್ರೇಲಿಯಕ್ಕಿಂತ ಸಣ್ಣ ದೇಶವು. ಆದ್ದರಿಂದ ಇಲ್ಲಿ ಜನಸಂಖ್ಯೆ ಕಡಿಮೆ. ಆದಾಗ್ಯೂ ನಸಂಖ್ಯೆಯು ಪ್ರಮಾಣದಿಂದ ನೋಡಲು ನ್ಯೂಝಿಲಂಡದಲ್ಲಿರುವಷ್ಟು ಕುರಿಗಳು ಮಂಡಲದ ಬೇರೆ ಯಾವ ದೇಶದಲ್ಲಿಯೂ ಇಲ್ಲ. ನ್ಯೂಝಿಲಂಡದ ಜನರು ಣ್ಣೆಗಾಗಿ ಕುರಿಗಳನ್ನು ಸಾಕುವದಿಲ್ಲ; ಅವುಗಳ ಮಾಂಸಕ್ಕಾಗಿ ಸಾಕುತ್ತಾರೆ. ರಿಗಳ ಮಾಂಸವನ್ನು ಹಡಗುಗಳ ತಂಪಾದ ಕೊಠಡಿಗಳಲ್ಲಿಟ್ಟು ಕೆಡದಂತೆ ಇವರು ಟಿಷ ನಡುಗಡ್ಡೆಗಳಿಗೆ ವ್ಯಾಪಾರಾರ್ಥವಾಗಿ ಕಳಿಸುವರು.

ಇಂದಿಗೆ ಸುಮಾರು ನೂರು ವರ್ಷಗಳ ಮೊದಲು ಆಸ್ಟ್ರೇಲಿಯದಲ್ಲಿ ಕುರಿ ಇರಲಿಲ್ಲ. ಈ ದೇಶದ ಅನೇಕ ಭಾಗಗಳಲ್ಲಿ ಹುಲ್ಲುಭೂಮಿಗಳಿರುವದನ್ನು ಒಬ್ಬ ಗ್ಲಿಷ ಗೃಹಸ್ಥನು ನೋಡಿ, ಇವುಗಳಲ್ಲಿ ಕುರಿಗಳನ್ನು ಸಾಕಿದರೆ ಈ ನಾಡಿನ ಜನರಿಗೆ ನ್ನಲಿಕ್ಕೆ ಬೇಕಾದಷ್ಟು ಮಾಂಸವೂ ತೊಡಲಿಕ್ಕೆ ಬೇಕಾದಷ್ಟು ಉಣ್ಣೆಯ ಅರಿವೆಯೂ ಗಬಹುದೆಂದು ಯೋಚಿಸಿದನು. ಕೂಡಲೆ ಆತನು ಆಫ್ರಿಕದಿಂದ ಕೆಲವು ಕುರಿ ಗಳನ್ನು ಕಳಿಸಲಿಕ್ಕೆ ಪತ್ರ ಬರೆದನು. ಅಲ್ಲಿಂದ ಮೂರು ಗಂಡು ಎರಡು ಹೆಣ್ಣು ರಿಗಳು ಬಂದವು. ಇವುಗಳ ಸಂತತಿಯು ತೀವ್ರವಾಗಿ ಬೆಳೆಯುತ್ತಹೋಯಿತು. ತ್ತುವರುಷಗಳಾಗುವದರಲ್ಲಿ ಅಲ್ಲಿ ಹುಟ್ಟಿದ ಕುರಿಗಳಿಂದ ಆಸ್ಟ್ರೇಲಿಯದ ಜನರಿಗೆ ಕಾಗುವಷ್ಟು ಮಾಂಸವೂ ಉಣ್ಣೆಯೂ ದೊರೆಯಹತ್ತಿದವು. ಇಷ್ಟೇ ಅಲ್ಲ, ಇವು ಗಳನ್ನು ಇವರು ಪರದೇಶಗಳಿಗೆ ಕಳಿಸಲಾರಂಭಿಸಿದರು. ಈ ಆಸ್ಟ್ರೇಲಿಯದಲ್ಲಿರುವ ರಿಗಳು ಇಡಿ ಭೂಮಂಡಲದಲ್ಲಿರುವ ಕುರಿಗಳಲ್ಲಿ ಆರರಲ್ಲಿ ಒಂದು ಪಾಲು ಆಗುತ್ತವೆ!

ಭಾರತೀಯ ಆರ್ಕಿಮಿಡಿಸ.

ಲೇಖಕರು:— ಶಿ. ಷ. ಪಾಟೀಲ, ಹೆ. ಮಾ. ಕೆ. ಶಾ. ಹುಣಸೀಕಟ್ಟಿ.

ಕ್ರಮಿಕ ೭ನೆಯ ಪುಸ್ತಕದ ೭೯ನೆಯ ಪಾಠದಲ್ಲಿ ಶಾಸ್ತ್ರೀಯ ವಿಷಯಕೋವಿ ನಾದ ಆರ್ಕಿಮಿಡಿಸನ ಚರಿತ್ರವು, ಬಹು ಜನರಿಗೆ ವಿದಿತವಿರುವ ವಿಷಯವಷ್ಟೇ ಕೇಳೂಸಕರ ಕೃತ ಛತ್ರಪತಿ ಶ್ರೀ ಶಿವಾಜಿ ಮಹಾರಾಜನ ಚರಿತ್ರದಲ್ಲಿ ಹಲ ಐತಿಹಾಸಿಕ ಆಧಾರಗಳ ಮೇಲಿಂದ ಬರೆದ, ಈ ಭಾರತೀಯ ಆರ್ಕಿಮಿಡಿಸ ವೃತ್ತಾಂತವು ಕೆಳಗಿನಂತಿರುವದು.

ರಾಜಾ ಶಹಾಜಿ ಭೋಸಲೆಯು ವಿಜಾಪುರ ಸರಕಾರದವರ ಕೂಡ ವಿಚಾ ವಿನಿಮಯ ಮಾಡಿ, ದೌಲತಾಬಾದ ಕಿಲ್ಲೆಯ ಮೇಲೆ ಹಲ್ಲೆಮಾಡುವದಕ್ಕಾಗಿ ಆ ಸರಕಾರದ ಸಹಾಯ ಬೇಡಿದನು. ಆಗ ವಿಜಾಪುರ ಸರಕಾರದವರು ಮುರಾರಪಂತನೆಂಬ ಮುತ್ಸದ್ದಿಯ ಕೂಡ ದಂಡುಕೊಟ್ಟು ಸಹಾಯಕ್ಕೆ ಕಳುಹಿದರು. ಇವರೀರ್ವರು ದಂಡಿನೊಡನೆ ಪಯಣಮಾಡುತ್ತಿರುವಾಗ, ಹಾದಿಯಲ್ಲಿ ಸೂರ್ಯಗ್ರಹಣವಾಯಿತು ಆಗ ಭೀಮಾ-ಇಂದ್ರಾಯಣೀ ನದಿಗಳ ಸಂಗಮದಲ್ಲಿರುವ ನಾಗರಗಾಂವ ಎಂಬ ಬೀಡುಬಿಟ್ಟರು. ಆ ಸಮಯದಲ್ಲಿ ಮುರಾರಪಂತನ ಮನಸ್ಸಿನಲ್ಲಿ ತಾನು ಹತ್ತಿ ಆನೆಯ ತೂಕದಷ್ಟು ರೂಪಾಯಿ ದಾನಮಾಡಬೇಕೆಂದು ಹುಟ್ಟಿತು; ಆದರೆ, ಆನೆಯ ತೂಕವನ್ನು ತೆಗೆಯುವ ಬಗೆಹೇಗೆ? ಎಂಬ ವಿಚಾರವು ಉತ್ಪನ್ನವಾಯಿತು. ರಾಜಾ ಶಹಾಜಿ ಭೋಸಲೆಯ ತನಕ ಈ ವಿಚಾರವು ಹೋಯಿತು. ಆಗ ರಾಜಾ ಶಹಾಜಿ ಭೋಸಲೆಯು ಆನೆಯ ತೂಕವನ್ನು ತೆಗೆಯುವ ಸುಲಭ ಯುಕ್ತಿಯನ್ನು ಹೇ ಕೊಟ್ಟನು. ಅದು ಕೆಳಗಿನಂತೆ.

“ನದಿಯೊಳಗಿನ ನಾವೆಯಲ್ಲಿ ಆನೆಯನ್ನು ಹತ್ತಿಸಿ, ಅದರ ಭಾರದಿಂದ ನಾವೆಯ ನೀರಲ್ಲಿ ಎಲ್ಲಿಯ ವರೆಗೆ ಮುಳಗುವದೋ ಅಲ್ಲಿ ಒಂದು ಗುರುತುಮಾಡಬೇಕು; ಆಮೇಲೆ ಆನೆಯನ್ನು ಇಳಿಸಿ, ಆ ಗುರುತಿನ ವರೆಗೆ ನೀರು ಬರುವತನಕ ಅದರಲ್ಲಿ ಕಲ್ಲುತುಂ ಬೇಕು. ಆ ಎಲ್ಲ ಕಲ್ಲುಗಳ ತೂಕವೇ ಆನೆಯ ತೂಕವಾಗುವದು.”

ಇಂತು ಸುಲಭ ಹಾಗೂ ಯಾರಿಗೂ ಸೂಚಿಸದಿದ್ದ ಯುಕ್ತಿಯನ್ನು ಹೇಳಿ ಕೊಟ್ಟದ್ದಕ್ಕಾಗಿ ಮುರಾರಪಂತ ಮುತ್ಸದ್ದಿಯು ಶಹಾಜಿರಾಜಾ ಭೋಸಲೆಯನ್ನು ಬಹಳವಾಗಿ ಗೌರವಿಸಿದನು. ಮತ್ತು ಆ ಯುಕ್ತಿಯಂತೆ ಮುರಾರಪಂತನು ಆನೆಯ ತೂಕದಷ್ಟು ರೂಪಾಯಿ ಉತ್ಪನ್ನವಾಗುವ ಹಳ್ಳಿಗಳನ್ನು ದಾನಮಾಡಿದನು.

ಕವಿತೆ

ಲೇಖಕ:— ಶ್ರೀ. ಚ. ಸಿ. ನವಾತಿ ಮಾ. ಕುಪ್ಪೇಲೂರು

ಎರಡು ಪ್ರಶ್ನೆಗಳಿಗೆ ಒಂದೇ ಉತ್ತರ

ಭಾ। ಷ॥

ಪತಿಯು ಗತಿಸಲು ವ್ಯಥಿಸುವವಳಾರ್? ।
ಪತಿ ಗತಿಸದಿರೆ ವ್ಯಥಿಸುವವಳಾರ್? ।
ಚತುರ ಪಂಡಿತರೊಂದೆಯುತ್ತರ ಪ್ರಶ್ನದ್ವಯುಗಳಿಗೆ ॥
ಅತಿತ್ವರದೆ ಪೇಳುವುದು ಎನೆ ಪಂ ।
ಡಿತನು ಪೇಳಿದನೊಬ್ಬನೆಲೆ ಭೂ ।
ಪತಿಯೆ ನಿನ್ನಯು ಪ್ರಶ್ನೆಗುತ್ತರ "**ವಿಧವೆ**" ಕೇಳೆಂದಾ ॥ ೧ ॥

ಉರುಗಧಾರಿಯು ಪೆಸರದೇಂ? ಮೇ ।
ಉುರುಗ ವೈರಿಯು ಪೆಸರದೇನೈ? ।
ವರಬುಧೋತ್ತುಮರೆಲ್ಲ ಪೇಳಿರಿ ಪ್ರಶ್ನದ್ವಂದ್ವಕ್ಕೆ ॥
ಭರದಲೊಂದೇ ಯುತ್ತರವ ನೆನ ।
ಲಿರದೆ ಪೇಳಿದನೊಬ್ಬನೆಲೆ ಭೂ ।
ವರನೆ ನಿನ್ನಯು ಪ್ರಶ್ನೆಗುತ್ತರ ಕೇಳ್ "**ವಿನಾಯಕ**"ನು ॥ ೨ ॥

ಈ ಎರಡು ಪದ್ಯಗಳಲ್ಲಿ ಒಂದನೇ ಪದ್ಯದೊಳಗೆ ಕೇಳಿದ ಎರಡು ಪ್ರಶ್ನೆಗಳಲ್ಲಿ ೧ನೇ ಪ್ರಶ್ನೆಗೆ ವಿಗತಃ ಧವಃ=ಯಸ್ಯಾಃ ವಿಧವೆ ಅಂದರೆ ನಿಯೋಗವಾದ ಪತಿಯುಳ್ಳವಳೆಂದೂ ೨ನೇ ಪ್ರಶ್ನೆಗೆ ವಿಶೇಷತಃ ಧವಃ ಯಸ್ಯಾಃ ವಿಧವೆ, ಅಂದರೆ ಜಾರಸ್ತ್ರೀಯೆಂದೂ ಅರ್ಥವನ್ನಿಟ್ಟುಕೊಳ್ಳತಕ್ಕದ್ದು. ಪತಿಪ್ರೇಮಿಯಾದ ಸ್ತ್ರೀಯಳು ಗಂಡನು ಸಾಯುವದರಿಂದಲೂ ಜಾರಿಣಿಯು ಗಂಡನು ಇರುವದರಿಂದಲೂ ದುಃಖಿಸುವದು ಲೋಕರೂಢಿಯಾಗಿದೆ.

ಎರಡನೆದು ಪದ್ಯದಲ್ಲಿ ೧ನೇ ಪ್ರಶ್ನೆಗೆ ಸರ್ಪವನ್ನು ಹೊಟ್ಟೆಗೆ ಸುತ್ತಿಕೊಂಡಿರುವಂಥಾ "ವಿನಾಯಕ" ಗಣಪತಿಯೆಂತಲೂ ೨ನೇ ಪ್ರಶ್ನೆಗೆ ಸರ್ಪಗಳನ್ನು ನಾಶಮಾಡುವಂಥಾ ಗರುಡನೆಂತಲೂ ತಿಳುಕೊಳ್ಳತಕ್ಕದ್ದು. ಇಲ್ಲಿ ವಿನಾಯಕ ಶಬ್ದವನ್ನು "ವಿ, ನಾಯಕ"ನೆಂದು ಅನ್ವಯಿಸಲು ವಿ=ಪಕ್ಷಿಗಳ ನಾಯಕ=ಒಡೆಯ, ಪಕ್ಷಿಗಳಿಗೆ ಒಡೆಯನು ಗರುಡನು ಎಂದಾಗುವದು.

ಕೇಡು ಮಾಡುವರಾರು? ನಮಗೀ ।
ರೂಢಿಯೊಳು ಒಕ್ಕಲಿಗರೆಲ್ಲರು ।
ಹೂಡಿ ಬಂಡಿಯು ಜೋಳವನು ತಂದೆಲ್ಲಿ ಹಾಕುವರು? ॥

ಭಾರತೀಯ ಆರ್ಕಿಮಿಡಿಸ.

ಲೇಖಕರು:— ಶಿ. ಫ. ಪಾಟೀಲ, ಹೆ. ಮಾ. ಕ. ಶಾ. ಹುಣಸೀಕಟ್ಟಿ.

ಕ್ರಮಿಕ ೭ನೆಯ ಪುಸ್ತಕದ ೭೯ನೆಯ ಪಾಠದಲ್ಲಿ ಶಾಸ್ತ್ರೀಯ ವಿಷಯಕೋವಿದನಾದ ಆರ್ಕಿಮಿಡಿಸನ ಚರಿತ್ರವು, ಬಹು ಜನರಿಗೆ ವಿದಿತವಿರುವ ವಿಷಯವಷ್ಟೇ. ಕೇಳೂಸಕರ ಕೃತ ಛತ್ರಪತಿ ಶ್ರೀ ಶಿವಾಜಿ ಮಹಾರಾಜನ ಚರಿತ್ರದಲ್ಲಿ ಹಲವು ಐತಿಹಾಸಿಕ ಆಧಾರಗಳ ಮೇಲಿಂದ ಬರೆದ, ಈ ಭಾರತೀಯ ಆರ್ಕಿಮಿಡಿಸನ ವೃತ್ತಾಂತವು ಕೆಳಗಿನಂತಿರುವದು.

ರಾಜಾ ಶಹಾಜಿ ಭೋಸಲೆಯು ವಿಜಾಪುರ ಸರಕಾರದವರ ಕೂಡ ವಿಚಾರವಿನಿಮಯ ಮಾಡಿ, ದೌಲತಾಬಾದ ಕಿಲ್ಲೆಯ ಮೇಲೆ ಹಲ್ಲೆಮಾಡುವವಕ್ಕಾಗಿ ಆ ಸರಕಾರದ ಸಹಾಯ ಬೇಡಿದನು. ಆಗ ವಿಜಾಪುರ ಸರಕಾರದವರು ಮುರಾರಪಂತನೆಂಬ ಮುತ್ಸದ್ದಿಯ ಕೂಡ ದಂಡುಕೊಟ್ಟು ಸಹಾಯಕ್ಕೆ ಕಳುಹಿದರು. ಇವರೀರ್ವರು ದಂಡಿನೊಡನೆ ಪಯಣಮಾಡುತ್ತಿರುವಾಗ, ಹಾದಿಯಲ್ಲಿ ಸೂರ್ಯಗ್ರಹಣವಾಯಿತು. ಆಗ ಭೀಮಾ-ಇಂದ್ರಾಯಣೀ ನದಿಗಳ ಸಂಗಮದಲ್ಲಿರುವ ನಾಗರಗಾಂವ ಎಂಬಲ್ಲಿ ಬೀಡುಬಿಟ್ಟರು. ಆ ಸಮಯದಲ್ಲಿ ಮುರಾರಪಂತನ ಮನಸ್ಸಿನಲ್ಲಿ ತಾನು ಹತ್ತಿದ ಆನೆಯ ತೂಕದಷ್ಟು ರೂಪಾಯಿ ದಾನಮಾಡಬೇಕೆಂದು ಹುಟ್ಟಿತು; ಆದರೆ, ಆನೆಯ ತೂಕವನ್ನು ತೆಗೆಯುವ ಬಗೆಹೇಗೆ? ಎಂಬ ವಿಚಾರವು ಉತ್ಪನ್ನವಾಯಿತು. ರಾಜಾ ಶಹಾಜಿ ಭೋಸಲೆಯ ತನಕ ಈ ವಿಚಾರವು ಹೋಯಿತು. ಆಗ ರಾಜಾ ಶಹಾಜಿ ಭೋಸಲೆಯು ಆನೆಯ ತೂಕವನ್ನು ತೆಗೆಯುವ ಸುಲಭ ಯುಕ್ತಿಯನ್ನು ಹೇಳಿಕೊಟ್ಟನು. ಅದು ಕೆಳಗಿನಂತೆ.

“ನದಿಯೊಳಗಿನ ನಾವೆಯಲ್ಲಿ ಆನೆಯನ್ನು ಹತ್ತಿಸಿ, ಅದರ ಭಾರದಿಂದ ನಾವೆಯು ನೀರಲ್ಲಿ ಎಲ್ಲಿಯ ವರೆಗೆ ಮುಳಗುವದೋ ಅಲ್ಲಿ ಒಂದು ಗುರುತುಮಾಡಬೇಕು; ಆಮೇಲೆ ಆನೆಯನ್ನು ಇಳಿಸಿ, ಆ ಗುರುತಿನ ವರೆಗೆ ನೀರು ಬರುವತನಕ ಅದರಲ್ಲಿ ಕಲ್ಲುತುಂಬಬೇಕು. ಆ ಎಲ್ಲ ಕಲ್ಲುಗಳ ತೂಕವೇ ಆನೆಯ ತೂಕವಾಗುವದು.”

ಇಂತು ಸುಲಭ ಹಾಗೂ ಯಾರಿಗೂ ಸೂಚಿಸದಿದ್ದ ಯುಕ್ತಿಯನ್ನು ಹೇಳಿಕೊಟ್ಟದ್ದಕ್ಕಾಗಿ ಮುರಾರಪಂತ ಮುತ್ಸದ್ದಿಯು ಶಹಾಜಿರಾಜಾ ಭೋಸಲೆಯನ್ನು ಬಹಳವಾಗಿ ಗೌರವಿಸಿದನು. ಮತ್ತು ಆ ಯುಕ್ತಿಯಂತೆ ಮುರಾರಪಂತನು ಆನೆಯ ತೂಕದಷ್ಟು ರೂಪಾಯಿ ಉತ್ಪನ್ನವಾಗುವ ಹಳ್ಳಿಗಳನ್ನು ದಾನಮಾಡಿದನು.

ಕವಿತೆ

ಲೇಖಕ:— ಶ್ರೀ. ಚ. ಸಿ. ಸವಾತಿ ಮಾ. ಕುಪ್ಪೇಲೂರು

ಎರಡು ಪ್ರಶ್ನೆಗಳಿಗೆ ಒಂದೇ ಉತ್ತರ

ಭಾ। ಷ॥

ಪತಿಯು ಗತಿಸಲು ವ್ಯಥಿಸುವವಳಾರ್ ? ।
ಪತಿ ಗತಿಸದಿರೆ ವ್ಯಥಿಸುವವಳಾರ್ ? ।
ಚತುರ ಪಂಡಿತರೊಂದೆಯುತ್ತರ ಪ್ರಶ್ನದ್ವಯಗಳಿಗೆ ॥
ಅತಿತ್ವರದೆ ಪೇಳುವುದು ಎನೆ ಪಂ ।
ಡಿತನು ಪೇಳಿದನೊಬ್ಬನೆಲೆ ಭೂ ।
ಪತಿಯೆ ನಿನ್ನಯ ಪ್ರಶ್ನೆಗುತ್ತರ "**ವಿಧವೆ**" ಕೇಳೆಂದಾ ॥ ೧ ॥

ಉರುಗಧಾರಿಯ ಪೆಸರದೇಂ? ಮೇ ।
ಉರುಗ ವೈರಿಯ ಪೆಸರದೇನೈ ? ।
ವರಬುಧೋತ್ತಮರೆಲ್ಲ ಪೇಳಿರಿ ಪ್ರಶ್ನದ್ವಂದ್ವಕ್ಕೆ ॥
ಭರದಲೊಂದೇ ಯುತ್ತರವ ನೆನ ।
ಲಿರದೆ ಪೇಳಿದನೊಬ್ಬನೆಲೆ ಭೂ ।
ವರನೆ ನಿನ್ನಯ ಪ್ರಶ್ನೆಗುತ್ತರ ಕೇಳ್ "**ವಿನಾಯಕ**"ನು ॥ ೨ ॥

ಈ ಎರಡು ಪದ್ಯಗಳಲ್ಲಿ ಒಂದನೇ ಪದ್ಯದೊಳಗೆ ಕೇಳಿದ ಎರಡು ಪ್ರಶ್ನೆಗಳಲ್ಲಿ ೧ನೇ ಪ್ರಶ್ನೆಗೆ ವಿಗತಃ ಧವಃ=ಯಸ್ಯಾಃ ವಿಧವೆ ಅಂದರೆ ವಿಯೋಗವಾದ ಪತಿಯುಳ್ಳವಳೆಂದೂ ೨ನೇ ಪ್ರಶ್ನೆಗೆ ವಿಶೇಷತಃ ಧವಃ ಯಸ್ಯಾಃ ವಿಧವೆ, ಅಂದರೆ ಜಾರಸ್ತ್ರೀಯೆಂದೂ ಅರ್ಥವನ್ನಿಟ್ಟುಕೊಳ್ಳತಕ್ಕದ್ದು. ಪತಿಪ್ರೇಮಿಯಾದ ಸ್ತ್ರೀಯುಳು ಗಂಡನು ಸಾಯುವದರಿಂದಲೂ ಜಾರಿಣಿಯು ಗಂಡನು ಇರುವದರಿಂದಲೂ ದುಃಖಿಸುವದು ಲೋಕರೂಢಿಯಾಗಿದೆ.

ಎರಡನೆದು ಪದ್ಯದಲ್ಲಿ ೧ನೇ ಪ್ರಶ್ನೆಗೆ ಸರ್ಪವನ್ನು ಹೊಟ್ಟೆಗೆ ಸುತ್ತಿಕೊಂಡಿರುವಂಥಾ "ವಿನಾಯಕ" ಗಣಪತಿಯೆಂತಲೂ ೨ನೇ ಪ್ರಶ್ನೆಗೆ ಸರ್ಪಗಳನ್ನು ನಾಶಮಾಡುವಂಥಾ ಗರುಡನೆಂತಲೂ ತಿಳುಕೊಳ್ಳತಕ್ಕದ್ದು. ಇಲ್ಲಿ ವಿನಾಯಕ ಶಬ್ದವನ್ನು "ವಿ, ನಾಯಕ"ನೆಂದು ಅನ್ವಯಿಸಲು ವಿ=ಪಕ್ಷಿಗಳ ನಾಯಕ=ಒಡೆಯ, ಪಕ್ಷಿಗಳಿಗೆ ಒಡೆಯನು ಗರುಡನು ಎಂದಾಗುವದು.

ಕೇಡು ಮಾಡುವರಾರು? ನಮಗೀ ।
ರೂಢಿಯೊಳು ಒಕ್ಕಲಿಗರೆಲ್ಲರು ।
ಹೂಡಿ ಬಂಡಿಯ ಜೋಳವನು ತಂದೆಲ್ಲಿ ಹಾಕುವರು? ॥

ಮಾಡಿದೀ ಪ್ರಶ್ನೆಗಳಿಗೆ ತಡ ।
ಮಾಡದಲೆ ಬುಧನೊಬ್ಬನಾಗಲೆ ।
ರೂಢಿಗೀಶನೆ, "ಹಗೆಯು" ಎನ್ನಲು ಮೆಚ್ಚಿದನು ಅವಗೆ ॥ ೩ ॥

ಮಗನು ಹಸಿದಿಹನ್ನೆಯು ಆಡಿನ ।
ಸೊಗಸು ಹಾಲನು ಕೊಡುವಿರೇನ್ನೈ? ।
ನಿಂಗೆ ದಣಿದು ಬಂದಿಹೆವು ಮಲಗಲು ಸಿಗುವದೇ ಸ್ಥಳವೂ ॥
ತೆಗೆಯುರ್ಕ್ಕೆ ನೀವ್ ಕದವನೆನ್ನಲು ।
ತೆಗೆಯದಲೆ ಪೇಳಿದರು ಮನುಜನೆ ।
ಸಿಗುವದಿಲ್ಲೆಚ್ಚ ಇರುತಿಹವು "**ಚಿಕ್ಕಾಡು**" ಮನೆಯೊಳಗೆ ॥ ೪ ॥

೩ನೇ ಪದ್ಯದಲ್ಲಿ ೧ನೇ ಪ್ರಶ್ನೆಗೆ ಹಗೆ=ವೈರಿಯೆಂತಲೂ ೨ನೇ ಪ್ರಶ್ನೆಗೆ 'ಜೋಳ ವನ್ನು ಹಾಕುವ ಹಗೆಯೆಂತಲೂ ಅರ್ಥವು.

೪ನೇ ಪದ್ಯದಲ್ಲಿ ೧ನೇ ಪ್ರಶ್ನೆಗೆ 'ಚಿಕ್ಕ+ಆಡು' ಎಂತಲೂ ೨ನೇ ಪ್ರಶ್ನೆಗೆ 'ನಿದ್ರೆ ಬಾರದಂತೆ ಪೀಡಿಸುವ ಚಿಕ್ಕಾಡುಗಳೆಂತಲೂ ತಿಳುಕೊಳ್ಳತಕ್ಕದ್ದು, ಚಿಕ್ಕ+ಆಡುಗಳೆಂಬ ದರಿಂದ ಅವು ಇನ್ನು ಹಿಂಡುವದಿಲ್ಲವಾದ್ದರಿಂದ ಆಡಿನ ಹಾಲು ದೊರೆಯುವದಿಲ್ಲೆಂಬದೂ ಚಿಕ್ಕಾಡುಗಳು ನಿದ್ರೆಯನ್ನು ಕೆಡಿಸುವವಾದ್ದರಿಂದ ಅಂಥ ಸ್ಥಳವು ನಿದ್ರೆಗೆ ಅಯೋಗ್ಯ ವೆಂಬದೂ ಸ್ಪಷ್ಟವದೆ.

ಶಿಕ್ಷಣಕ್ಕೆ ಸಹಾಯ.

೧. ಬೆಲ್ಲದಬಾಗೇವಾಡಿ (ಜಿ. ಬೆಳಗಾವ)—ಇಲ್ಲಿಯ ಧನಿಕ ಸದ್ಗೃಹಸ್ಥರಾದ **ಶ್ರೀ.ಗಿರಿಮಲ್ಲಪ್ಪಾ ಅಣ್ಣಾ ಕತ್ತಿ** ಇವರು ಇಲ್ಲಿ ಕೇ. ನಾ. ದೇಶಪಾಂಡೆ ಇವರು ಹೆ. ಮಾ. ರ. ರಾಗಿ ಬಂದಾಗಿನಿಂದ ಇಲ್ಲಿಯ ಪ್ರಾಥಮಿಕ ಶಾಲೆಯ ಸಮಾಧಾನಕರ ಸ್ಥಿತಿಯನ್ನು ಕಂಡು, ಬಾಲಕರ ವರ್ಗದ ಉಪಯೋಗಕ್ಕಾಗಿ 'ಸಚಿತ್ರ ವರ್ಣಮಾಲೆಯ ಪಟ' ಒಂದನ್ನು ತರಿಸಿಕೊಟ್ಟಿರುವರು. ಇದು ಅವರಿಗೆ ಭೂಷಣವು. ಧನಿಕರಿಂದ ಇಂಥ ಕಾರ್ಯಗಳು ನೆರವೇರಿದರೆ, ನಮ್ಮ ಶಿಕ್ಷಣ ಕಾರ್ಯಕ್ಕೆ ಒಳ್ಳೆಯ ಅನುಕೂಲ ವಾಗುವದು.

೨. ಖಾನಾಪೂರ-ಗಂಗಾಪೂರ (ಜಿ. ಧಾರವಾಡ)—ಇಲ್ಲಿಯ ಒಕ್ಕಲತನದ ಸೊಸಾಯಿಟಿಯವರು ೧೯೩೦ನೇ ಇಸವಿಯಿಂದ ಶಾಲೆಯ ಬಡ ಹುಡುಗರಿಗೆ ಪುಸ್ತಕ, ಪಾಟಿ, ಪೆನ್ಸಿಲು, ಕಾಗದ ಮೊದಲಾದವುಗಳ ಸಲುವಾಗಿ ಪ್ರತಿವರುಷ ೨೦,೨೫ ರೂ. ಗಳನ್ನು ಧರ್ಮಾರ್ಥ ಕೊಡುತ್ತಾ ಬಂದಿರುವರು.

೧೯೩೨-೩೩ರಲ್ಲಿ ಪುಸ್ತಕ, ಪಾಟಿಗಳಿಗೆ ಕೊಡುವ ಹಣವಲ್ಲದೆ ಬಡಹುಡುಗರ ಫೀ ಬಗ್ಗೆ ೧೫ ರೂ. ಗಳ ಸಹಾಯ ಮಾಡಿದರು.

ಈ ವರುಷ (೧೯೩೩-೩೪) ಬಡ ಹುಡುಗರ ಶಾಲೆಯ ಸಾಮಾನುಗಳಿಗೆ ಹನ್ನೆರಡು ರೂ. ಗಳನ್ನು ಕೊಟ್ಟಿರುವದಲ್ಲದೆ ಶಾಲೆಯ ಉತ್ಕರ್ಷಕ್ಕೆ ಅವಶ್ಯವಾದ ತೋಟದ ಬೇಲಿ ಹಚ್ಚಿಸಿ ಬಾಗಿಲು ಕದ ಮಾಡಿಸಿ ಕೊಡಲಿಕ್ಕೆ ನಾಲ್ಕು ರೂ. ಗಳ ವರೆಗೆ ಖರ್ಚು ಬಂದರೂ ಕೊಡುವೆವೆಂದು ಚೇರಮನ್ನರು ವಾಗ್ದಾನ ಮಾಡಿರುವರು.

ಇನ್ನು ಮುಂದೆ ವರುಷವರುಷವೂ ಶಾಲೆಯ ಬಡಹುಡುಗರ ಉಪಯೋಗದ ಸಲುವಾಗಿ ೨೫ರೂ. ಗಳಂತೆ ಸೊಸಾಯಟಿಯಿಂದಲೂ ಕಡಿಮೆ ಬಿದ್ದಷ್ಟು ಊರವಂತಿಗೆಯ ಹಣದಿಂದಲೂ ಕೊಡುತ್ತ ಹೋಗುವೆವೆಂದು ಸೊಸಾಯಟಿಯ ಮ್ಯಾನೇಜಿಂಗ ಬೋರ್ಡಿನವರು ಅಭಯವನ್ನಿತ್ತಿರುವರು. ಸ್ತುತ್ಯ ಸಹಾಯವು !

ಪರೀಕ್ಷೆಯ ಪ್ರಶ್ನೆಗಳು

(ಕಳೆದ ಸಂಚಿಕೆಯಿಂದ ಮುಂದುವರಿದುದು.)

೫. "ವಿಷಯವನ್ನು ಎಷ್ಟು ಕಲಿಸಬೇಕು, ಹ್ಯಾಗೆ ಕಲಿಸಬೇಕು ಎಂಬದನ್ನು ನಿಶ್ಚಯಿಸುವಾಗ ಹುಡುಗರ ವಯಸ್ಸಿನ ಕಡೆಗೆ ವಿಶೇಷವಾಗಿ ಲಕ್ಷ್ಯಕೊಡಬೇಕಾಗುತ್ತದೆ" ಭೂಗೋಲ ಕಲಿಸುವಾಗ ಈ ಮಾತು ನಿಜವಿರುತ್ತದೆಂಬದನ್ನು ಹ್ಯಾಗೆ ಸಿದ್ಧ ಮಾಡುವಿರಿ? ವಿವರಿಸಿರಿ.

ಭಾಗ ೨

೬. ಮೂದರಿಯ ವರ್ಗದ ಕೋಣೆಯನ್ನು ವರ್ಣಿಸಿರಿ.

೭. ಮೂರನೆಯ ಇಯತ್ತೆಗೆ ತಕ್ಕ ಒಂದು ವೇಳಾ ಪತ್ರಿಕೆಯನ್ನು ತಯಾರಿಸಿರಿ. ಕಾರಣಗಳನ್ನು ವಿವರಿಸಿರಿ.

೮. ಶಾಲೆಯ ಕೆಲಸದಲ್ಲಿ ಕೆಳಗೆ ಕಾಣಿಸಿದವು ಹ್ಯಾಗೆ ಹಾಗು ಎಷ್ಟರ ಮಟ್ಟಿಗೆ ಉಪಯೋಗವಾಗುವವು ? (ಅ) ಗ್ರಾಮೋಫೋನ (ಬ) ಮ್ಯಾಜಿಕ್ ಲಾಂಟರ್ನ (ಕ) ಸಚಿತ್ರ ಮಾಸಿಕಗಳು. (ಡ) ಶಾಲೆಯ ತೋಟ.

೯. ಶಾಲೆಯ ವ್ಯವಸ್ಥೆಯನ್ನು ಕಾಯ್ದುಕೊಳ್ಳುವದರಲ್ಲಿ ಶಿಕ್ಷೆ ಹಾಗು ಇನಾಮುಗಳನ್ನು ಹ್ಯಾಗೆ ಉಪಯೋಗಿಸುವಿರಿ ?

೧೦. ನೀವು ಹೆಡ್ ಮಾಸ್ತರರೆಂದು ತಿಳಿದು ಕೆಳಗಿನ ಸಂಗತಿಗಳ ಬಗ್ಗೆ ಏನು ಮಾಡುವಿರೆಂಬದನ್ನು ಹೇಳಿರಿ.

(ಅ) ವರ್ಗದಲ್ಲಿ ಬಹುತರವಾಗಿ ಅಲಕ್ಷ್ಯದಿಂದಿರುವ ಹುಡುಗರು.

(ಬ) ಮನೆಯಲ್ಲಿ ಮಾಡಲಿಕ್ಕೆ ಕೊಟ್ಟ ಕೆಲಸವನ್ನು ಮಾಡದಿರುವವರು.

(ಕ) ಶಿಕ್ಷಕರ ಕೂಡ ಒರಟುತನದಿಂದ ನಡೆಯುವವರು,

(ಡ) ಸಾಲೆ ತಪ್ಪಿಸುವವರು.

೧೧. ಮಾಧ್ಯಮಿಕ ಸಾಲೆಗಳ ಕೆಳಗಿನ ಇಯತ್ತೆಗಳ ಹುಡುಗರ ಬಗ್ಗೆ ಶಾರೀರಿಕ ಶಿಕ್ಷಣದ ಒಂದು ವ್ಯವಸ್ಥೆಯನ್ನು ವಿವರಿಸಿರಿ.

ಮಾನಸ ಶಾಸ್ತ್ರವು.

'ಮನಸಿನ ಶಾಸ್ತ್ರವು ಮಾನಸಶಾಸ್ತ್ರವು'

ಈ ವ್ಯಾಖ್ಯೆಯಲ್ಲಿ ಉಪಯೋಗಿಸಿದ ಶಾಸ್ತ್ರ ಹಾಗು ಮನಸ್ಸು ಎಂಬ ಎರಡು ಶಬ್ದಗಳ ನಿಜವಾದ ಕಲ್ಪನೆಯು ನಮಗೆ ಉಂಟಾದ ಹೊರತು ಯಾವ ಬಗೆಯ ಯಥಾರ್ಥಜ್ಞಾನವಾಗಲಾರದು. ಆದ್ದರಿಂದ ಶಾಸ್ತ್ರವೆಂದರೇನು ? ಎಂಬದನ್ನು ಕುರಿತು ತುಸು ವಿಚಾರಿಸುವ—

ನಾವು ಪ್ರತ್ಯಕ್ಷ ನಿರೀಕ್ಷಣದಿಂದ ಇಲ್ಲವೆ ಸಾಧ್ಯವಿದ್ದ ಮಟ್ಟಿಗೆ ಪ್ರಯೋಗಗಳನ್ನು ಮಾಡಿ ಕೆಲವು ಪದಾರ್ಥಗಳ ಗುಣ-ಧರ್ಮಗಳನ್ನು ಕಂಡುಹಿಡಿಯುತ್ತೇವೆ. ಮಾನವ ಶರೀರದ ಕೆಲವು ವ್ಯಾಪಾರಗಳನ್ನು ನಿರೀಕ್ಷಿಸಿ, ಶರೀರದಲ್ಲಿ ರಕ್ತಾಶಯವು ಎಡೆಬಿಡದೆ ಹಾರುತ್ತದೆಂತಲೂ ಫುಪ್ಫುಸಗಳಲ್ಲಿ ಶ್ವಾಸೋಚ್ಛ್ವಾಸದಿಂದ ಹವೆಯು ತುಂಬುತ್ತ ಹೊರಬೀಳುವದೆಂದೂ ತಿಳಿದುಕೊಳ್ಳುತ್ತೇವೆ. ಇದರಂತೆ ನಿರೀಕ್ಷಣದಿಂದ ವನಸ್ಪತಿಗಳಲ್ಲಿ ಕೆಲವು ಗಿಡಗಳು, ಕೆಲವು ಬಳ್ಳಿಗಳು, ಬೇರೆ ಕೆಲವು ಸೊಪ್ಪುಗಳು ಇರುತ್ತವೆಂದೂ ಅವುಗಳಲ್ಲಿ ಕೆಲವು ಒಂದು ವರ್ಷ, ಕೆಲವು ಎರಡು ವರ್ಷ, ಬೇರೆ ಕೆಲವು ಅನೇಕ ವರ್ಷಗಳ ವರೆಗೆ ಬಾಳುತ್ತವೆಂದೂ ತಿಳಿದುಕೊಳ್ಳುತ್ತೇವೆ. ಕೆಲವು ಪದಾರ್ಥಗಳು ಶಕೆಯಿಂದ ವಿಸ್ತಾರ, ಪೃಥಃಕರಣ, ಏಕೀಕರಣ ಹೊಂದುವದನ್ನು ಪ್ರಯೋಗಗಳಿಂದ ಕಂಡುಹಿಡಿಯುತ್ತೇವೆ. ಈ ಬಗೆಯಿಂದ ಮಾಡಿಕೊಂಡ ಜ್ಞಾನವು ಸಾಮಾನ್ಯಜ್ಞಾನವು. ಅನೇಕ ವಸ್ತುಗಳನ್ನು ನಿರೀಕ್ಷಿಸುವದರಿಂದ ಇಲ್ಲವೆ ಅನೇಕ ವಸ್ತುಗಳ ಮೇಲೆ ಪ್ರಯೋಗಗಳನ್ನು ಮಾಡುವದರಿಂದ ನಮ್ಮ ಸಾಮಾನ್ಯಜ್ಞಾನದ ಸಂಚಯವು ಹೆಚ್ಚಾಗುತ್ತ ಹೋಗುವದೇನೋ ನಿಜ. ಆದರೆ ಅದು ವಿಸ್ಖಲಿತವಾಗಿ ಉಳಿಯುವದು. ಆದರೆ ಆ ತರದ ಜ್ಞಾನಸಂಚಯದಿಂದ ಪದಾರ್ಥಗಳ ಗುಣ-ಧರ್ಮಗಳಲ್ಲಿ ಕಂಡು ಬರುವ ಕೆಲವು

ನಿಯಮಗಳನ್ನು ಗೊತ್ತುಪಡಿಸಿ ಅವುಗಳ ಸಹಾಯದಿಂದ ಕೆಲವು ಅಬಾಧಿತವಾದ ಸಿದ್ಧಾಂತಗಳನ್ನು ಸ್ಥಾಪಿಸಿಕೊಂಡು ಒಂದೊಂದು ಬಗೆಯ ಸಾಮಾನ್ಯಜ್ಞಾನವು ಸುವ್ಯವಸ್ಥಿತವಾಗುವಂತೆ ವರ್ಗೀಕರಣ ಮಾಡಿಕೊಳ್ಳಲು ಆ ಜ್ಞಾನಸಂಚಯಕ್ಕೆ ಶಾಸ್ತ್ರೀಯ ಸ್ವರೂಪವು ಬರುವದು. ಅಂದರೆ ಸುವ್ಯವಸ್ಥಿತವಾದ ಜ್ಞಾನಸಂಚಯಕ್ಕೆ ಶಾಸ್ತ್ರವೆಂಬ ಹೆಸರು. ಶಾರೀರಶಾಸ್ತ್ರ, ರಸಾಯನಶಾಸ್ತ್ರ, ವನಸ್ಪತಿಶಾಸ್ತ್ರ, ಮೊದಲಾದವುಗಳಲ್ಲಿ ಶಾಸ್ತ್ರವೆಂಬ ಶಬ್ದವನ್ನು ಮೇಲೆ ಹೇಳಿದ ಅರ್ಥದಲ್ಲಿಯೇ ಉಪಯೋಗಿಸಿರುವರು.

ಮನಸ್ಸು ಎಂದರೇನೆಂಬ ಪ್ರಶ್ನೆಗೆ ಉತ್ತರ ಕೊಡುವದು ಸುಲಭಸಾಧ್ಯವಲ್ಲ. ಶಾಸ್ತ್ರಜ್ಞರು ಜಗತ್ತಿನಲ್ಲಿರುವ ವಸ್ತುಗಳಲ್ಲಿ ಮೂರ್ತ ವಸ್ತುಗಳು ಹಾಗು ಅಮೂರ್ತ ವಸ್ತುಗಳು ಎಂಬ ಎರಡು ವರ್ಗಗಳನ್ನು ಮಾಡಿರುವರು. ಕೆಲವು ಮೂರ್ತವಸ್ತುಗಳಿಗೆ ಪದಾರ್ಥ ಇಲ್ಲವೆ ದ್ರವ್ಯ ಎಂಬ ಸಂಜ್ಞೆಯನ್ನು ಕೊಟ್ಟಿರುವರು, ಪದಾರ್ಥಗಳಿಗೆ ಉದ್ದ, ಅಗಲ, ಪಿಂಡಗಳು ಇದ್ದು ಅವು ಕೆಲವೊಂದು ಸ್ಥಳವನ್ನು ವ್ಯಾಪಿಸಿಕೊಂಡು ಅಲ್ಲಿ ತಾವಿರುವವರೆಗೆ ಬೇರೆ ಪದಾರ್ಥಗಳನ್ನು ಬರಗೊಡುವದಿಲ್ಲ. ಕಲ್ಲು, ಕಟ್ಟಿಗೆ, ತಾಮ್ರ, ನೀರು, ಹವೆ, ಮುಂತಾದವು ಪದಾರ್ಥಗಳು. ಇವುಗಳ ಜ್ಞಾನವು ನಮಗಿರುವ ಪಂಚೇಂದ್ರಿಯಗಳ ಮುಖಾಂತರ ಆಗುವದುಂಟು. ಉಷ್ಣತೆ, ಪ್ರಕಾಶ ಮೊದಲಾದ ಸೃಷ್ಟಿಶಕ್ತಿಗಳೂ ಸುಖ-ದುಃಖಾದಿ ವಿಕಾರಗಳೂ ಅಮೂರ್ತ ವಸ್ತುಗಳಾಗಿರುವವು. ಇವುಗಳಲ್ಲಿ ಉಷ್ಣತೆ, ಪ್ರಕಾಶ ಮೊದಲಾದವುಗಳು ನಮ್ಮ ಪಂಚೇಂದ್ರಿಯಗಳಲ್ಲಿ ಒಂದು ಇಲ್ಲವೆ ಹಲವು ಇಂದ್ರಿಯಗಳಿಗೆ ಗೋಚರವಾಗಿ ಒಂದೊಂದು ಬಗೆಯ ಜ್ಞಾನ ಮಾಡಿಕೊಡುವವು. ಈ ರೀತಿಯಿಂದ ಜ್ಞಾನವಾಗದಿದ್ದ ವಸ್ತುಗಳು ಅತೀಂದ್ರಿಯ ವಸ್ತುಗಳು. ಅತೀಂದ್ರಿಯ ವಸ್ತುಗಳ ಜ್ಞಾನಮಾಡಿಕೊಡುವ ಆರನೆಯದೊಂದು ಇಂದ್ರಿಯವು ನಮಗಿರುತ್ತದೆಂದು ಹಿಂದು ತತ್ವಜ್ಞಾನಿಗಳು ಭಾವಿಸಿರುವರು. ಇವರ ಮತದಂತೆ ಸಜೀವವಾದ ಮಾನವ ಶರೀರದಲ್ಲಿ 'ಜೀವಾತ್ಮಾ' ಎಂಬದು ವ್ಯಾಪಿಸಿ ಆ ಆತ್ಮವು ಅವಿನಾಶಿಯಾಗಿದ್ದು ಸುಖದುಃಖರಹಿತವಾಗಿ ಬುದ್ಧಿ, ವಿಕಾರ, ಇಚ್ಛೆ ಮೊದಲಾದವುಗಳ ಅಧಿಷ್ಠಾನವಾಗಿರುವದು. ಆತ್ಮದ ಸಂಯೋಗವು ಮನಸ್ಸಿನ ಸಂಗಡ ಆಗಲು ನಮಗೆ ಸುಖದುಃಖಾದಿಗಳ ಆಗುವವು. ‡ ಶರೀರವು ಸುಖ ದುಃಖಾದಿಗಳ ಸ್ಥಾನವು. ಈ ತತ್ವವನ್ನು ನಂಬುವವರು ಮನುಷ್ಯಪ್ರಾಣಿಗಳಿಗೆ ಪೂರ್ವಜನ್ಮದ ಸಂಸ್ಕಾರಗಳೂ ಪುನರ್ಜನ್ಮವೂ ಅವಶ್ಯವಾಗಿ ಇರುತ್ತವೆಂದು ನಂಬಲೇಬೇಕಾಗುವದು.

‡ यद्भोगायतनं तदेव शरीरम्, आत्मा सुखदुःखादिरहितः, य एनं वेत्ति हंतारम् यश्चैनं मन्यतेहतं । उभौ तौ न विजानीतो नायं हंति न हन्यते ॥

ಭಿನ್ನ ಭಿನ್ನ ಜನಾಂಗಗಳ ಕಲ್ಪನೆಯು ಆತ್ಮದ ಸಂಬಂಧದಿಂದ ಭಿನ್ನಭಿನ್ನವಾಗಿ ರುವದು. ಕೆಲವೊಂದು ಧರ್ಮತತ್ವಗಳನ್ನು ಅನುಸರಿಸುವವರು ಆತ್ಮವು ಅವಿನಾಶಿ ಯೆಂದು ನಂಬಿದರೂ ಪುನರ್ಜನ್ಮವನ್ನು ನಂಬುವದಿಲ್ಲ. ಪೂರ್ವಕಾಲದ ಗ್ರೀಕರು ಮನುಷ್ಯನು ಮರಣಹೊಂದಿದಕೂಡಲೆ ಆತ್ಮವು ಮೃತಶರೀರವನ್ನು ಬಿಟ್ಟು ಅಗಲಿ ಹೋದರೂ ಕಾಲಕಾಲಕ್ಕೆ ಪುನಃ ಬಂದು ಅದರಲ್ಲಿ ಪ್ರವೇಶಿಸುವದೆಂದೂ ಹಾಗೆ ಮಾಡಿ ದಾಗ ಮನುಷ್ಯನು ಸಜೀವನಾಗಿದ್ದಾಗ ಮಾಡಿದ ಪಾಪಪುಣ್ಯಗಳ ಫಲಗಳನ್ನು ಅದು ಅನುಭವಿಸುತ್ತದೆಂದೂ ನಂಬಿದ್ದರು. ಬೇರೆ ಕೆಲವರು ಆತ್ಮವು ನಿರಾಕಾರವಾದ ವಸ್ತುವೆಂದು ಗ್ರಹಿಸಿದರೂ ಅದಕ್ಕೆ ಶರೀರದ ಮುಖಾಂತರ ಉಂಟಾದ ಸಂಸ್ಕಾರಗಳು ಶರೀರದಿಂದ ಹೊರಬಿದ್ದ ಕೂಡಲೆ ಉಳಿಯಲಾರವೆಂದು ನಂಬಿರುವರು. ಈ ತರದ ಅನೇಕ ಕಲ್ಪನೆಗಳ ಮೂಲಕ ಆತ್ಮಾ, ಅಹಂಕಾರ, ಮನಸ್ಸು, ಮಹಾಭೂತ ಮುಂತಾದವುಗಳಿಗೆ ನಿಶ್ಚಿತವಾದ ಅರ್ಥವು ಬಂದಿರುವದಿಲ್ಲ.

ಪಾಶ್ಚಾತ್ಯ ಶಾಸ್ತ್ರಜ್ಞರು ಎಲ್ಲ ಬಗೆಯ ಜ್ಞಾನದ ಅಧಿಷ್ಠಾನವಾದ ಮಿದುಳು ಅವಯುವ ವಿಶೇಷವೆಂದು ಭಾವಿಸುವರು. ಈ ಮಿದುಳಿನಲ್ಲಿ ಕೆಲವು ಭಾಗಗಳಿದ್ದು ಒಂದೊಂದು ಭಾಗದ ಕಾರ್ಯವು ಒಂದೊಂದು ವಿಧವಾಗಿರುವದು. ಮಿದುಳಿನ ಕೆಲವು ವ್ಯಾಪಾರಗಳ ಮೂಲಕ ನಮಗೆ ಕೆಲವೊಂದು ಬಗೆಯ ಜ್ಞಾನವಾಗುವದು. ಸುಖ ದುಃಖಾದಿಮನೋವ್ಯಾಪಾರಗಳು ನಮ್ಮಲ್ಲಿ ಉದ್ಭವಿಸುವವು. ಹಾಗು ಕೆಲವೊಂದು ಪ್ರೇರಣೆಯಿಂದ ಯಾವದೊಂದು ಬಗೆಯ ಕೆಲಸಮಾಡುವ ಇಚ್ಛೆಯು ನಮ್ಮಲ್ಲಿ ಹುಟ್ಟು ವದು. ಇದರಿಂದ ನಮ್ಮ ಮಿದುಳಿನಲ್ಲಿ ಒಂದು ತರದ ಅದ್ಭುತ ಶಕ್ತಿಯಿದ್ದು ಆ ಶಕ್ತಿಯ ಮುಖಾಂತರ ಮಿದುಳಿನ ಒಂದೊದು ಭಾಗದಲ್ಲಿ ಒಂದೊಂದು ಬಗೆಯ ಕಾರ್ಯಗಳು ಜರುಗುತ್ತಿರುಪವು. ಈ ಎಲ್ಲ ಬಗೆಯ ಕಾರ್ಯಗಳ ಕ್ಷೇತ್ರಕ್ಕೆ ಇಲ್ಲವೆ ಕಾರ್ಯಗಳ ಸಮುದಾಯಕ್ಕೆ (ಮನಸ್ಸು) ಎಂಬ ಸಂಜ್ಞೆಯನ್ನು ಪಾಶ್ಚಾತ್ಯ ಶಾಸ್ತ್ರಜ್ಞರು ಕೊಟ್ಟಿರುವರು. ಅಂದರೆ ಬುದ್ಧಿ, ವಿಕಾರ, ಇಚ್ಛೆಗಳೆಂಬ ವ್ಯಾಪಾರಗಳ ಸಮು ದಾಯಕ್ಕೆ (ಮನೋವ್ಯಾಪಾರಗಳಿಗೆ) ಮನಸ್ಸು ಎಂಬ ಸಂಜ್ಞೆಯು.

* * *

ಮಿದುಳೂ ಜ್ಞಾನತಂತುಗಳೂ

ಎಲ್ಲ ಬಗೆಯ ಮನೋವ್ಯಾಪಾರಗಳ ಹಾಗು ಶರೀರದ ಸ್ವಾಸ್ಥ್ಯಕ್ಕೆ ಅವಶ್ಯವಾದ ಶಾರೀರಿಕ ವ್ಯಾಪಾರಗಳ ಅಧಿಷ್ಠಾನವು ಮಿದುಳಾಗಿರುವದೆಂದು ಮಾನವ ಶರೀರಶಾಸ್ತ್ರದ ಸಿದ್ಧಾಂತವಿರುವದರಿಂದ ಆ ಅವಯವದ ವಿಷಯವಾಗಿ ವಿಚಾರಿಸುವ—

ಈ ಮಹತ್ವವುಳ್ಳ ಅವಯುವವು ಅನೇಕ ಎಲುವುಗಳ ಸಂವಿಧಾನದಿಂದ ಉಂಟಾದ ತಲೆಬುರಡೆ ಎಂಬ ಭದ್ರವಾದ ಪೆಟ್ಟಿಗೆಯಲ್ಲಿ ಇರಿಸಲ್ಪಟ್ಟಿರುವದರಿಂದ ಇದು ಮನುಷ್ಯ ಪ್ರಾಣಿಗೆ ಆತ್ಯವಶ್ಯವಾದದ್ದೂ ಅತಿ ಮಹತ್ವವುಳ್ಳದ್ದೂ ಕೋಮಲವಾದದ್ದೂ ಎಂಬದು ವ್ಯಕ್ತವಾಗುದು.

ಇತರ ಪ್ರಾಣಿಗಳ ಮಿದುಳಿಗಿಂತ ಮನುಷ್ಯಪ್ರಾಣಿಯ ಮಿದುಳು (ವಿಶೇಷವಾಗಿ ಸುಧಾರಣೆಹೊಂದಿದ ಮನುಷ್ಯನ ಮಿದುಳು) ಆಕಾರಮಾನದಿಂದಲೂ ಭಾರದಿಂದಲೂ ಹೆಚ್ಚಾಗಿರುವದರಿಂದ ಮನುಷ್ಯಪ್ರಾಣಿಗೆ ಒಂದು ಬಗೆಯ ಶ್ರೇಷ್ಠತ್ವ ವುಂಟಾಗಲಿಕ್ಕೆ ಕಾರಣವಾಗಿರುವದು. ಸುಧಾರಣೆಯ ಕ್ರಮದಲ್ಲಿ ಇನ್ನೂ ಮೊದಲನೆಯ ಮೆಟ್ಟಿನಲ್ಲಿದ್ದ ನಿಗ್ರೋ, ಎಸ್ಕಿಮೊ, ಭಿಲ್ಲ ಮೊದಲಾದ ಕಾಡು ಜನರ ಮಿದುಳು ಮಂಗನ ಮಿದುಳಿಗಿಂತ ಎಷ್ಟೋಪಾಲು ದೊಡ್ಡದಿರುವದು. ಆದರೆ ಸುಸಂಸ್ಕೃತರಾದ ಆರ್ಯಜನರ ಮಿದುಳು ಆ ಕಾಡುಜನರ ಮಿದುಳಿಗಿಂತ ದೊಡ್ಡದಿರುವದೆಂಬ ಸಂಗತಿಯು ಪ್ರಯೋಗ ಸಿದ್ಧವಾಗಿರುವದು. ಉತ್ಕ್ರಾಂತಿತತ್ವದಂತೆ ಮನುಷ್ಯಪ್ರಾಣಿಯು ಹೆಚ್ಚು ಸುಧಾರಣೆ ಹೊಂದಿದಂತೆ ಆತನ ಮಿದುಳಿನ ರಚನೆಯು ಹೆಚ್ಚು ಹೆಚ್ಚು ಗಡಚಾದದ್ದೂ ಹೆಚ್ಚು ಹೆಚ್ಚು ಭಾರವುಳ್ಳದ್ದೂ ಆಗಲೇಬೇಕು. ಆನುವಂಶಿಕತೆಯ ತತ್ವದಂತೆ ಮಿದುಳಿನ ಸುಧಾರಣೆಯು ತಂದೆಯಿಂದ ಮಗನಿಗೆ ಬರುವದೆಂದು ಅನೇಕ ಶಾಸ್ತ್ರಜ್ಞರ ಮತವುಂಟು.

ಮಿದುಳಿನ ಭಾಗಗಳನ್ನು ಸ್ಥೂಲಮಾನದಿಂದ ನಿರೀಕ್ಷಿಸಿದರೆ ಇದರಲ್ಲಿ ತಲೆಬುರುಡೆಯನ್ನು ಬಹುಮಟ್ಟಿಗೆ ವ್ಯಾಪಿಸಿಕೊಂಡ ದೊಡ್ಡ ಭಾಗವು ದೊಡ್ಡ ಮಿದುಳು ಅಥವಾ ಉತ್ತಮಮಸ್ತಿಷ್ಕವು ಇಭಾಗವಾಗಿದ್ದು ತುಸು ಬೂದಿಬಣ್ಣವುಳ್ಳ ಕುಟ್ಟಿದ ಕಣಕದಂಥ ಪದಾರ್ಥಗಳಿಂದುಂಟಾದ ಕೋಶಗಳ ರಚನೆಯಾಗಿದೆ. ಈ ರಚನೆಯಲ್ಲಿ ಅನೇಕ ಮಡಿಕೆಗಳು ಕಂಡುಬರುವವು. ಇದರಿಂದ ಜ್ಞಾನತಂತುಗಳು ಹನ್ನೊಂದು ಜೊತೆಯಾಗಿ ಹೊರಟು ಬಾಹ್ಯ ಸೃಷ್ಟಿಯ ಜ್ಞಾನವನ್ನು ಮಾಡಿಕೊಡುವ ಪಂಚೇಂದ್ರಿಯಗಳಲ್ಲಿ ಶಾಖೋಪಶಾಖೆಗಳಾಗಿ ಪರಿಣಮಿಸಿ ಹಬ್ಬಿಕೊಂಡಿರುವವು. ಮಾನಸಶಾಸ್ತ್ರ ದೃಷ್ಟಿಯಿಂದ ಈ ಭಾಗವೇ ಅತಿ ಮಹತ್ವವುಳ್ಳದ್ದು. ಮನುಷ್ಯನಿಗೆ ಉಂಟಾಗುವ ಜ್ಞಾನ, ಸುಖದುಃಖಾದಿಗಳು, ಕ್ರಿಯಾ, ಪ್ರವೃತ್ತಿ ಮೊದಲಾದವುಗಳಿಗೆ ದೊಡ್ಡ ಮಿದುಳು ಕಾರಣೀಭೂತವಾಗಿರುವದು. ಆದರೆ ಶರೀರದ ವ್ಯಾಪಾರಗಳಿಗೆ ಇದರ ಅವಶ್ಯಕತೆಯಿಲ್ಲ. ಈ ಮಿದುಳಿಗೆ ಧಕ್ಕೆ ಹತ್ತಿದರೆ ಇಲ್ಲವೆ ಇದನ್ನು ಸಮಗ್ರವಾಗಿ ತೆಗೆದುಬಿಟ್ಟರೆ ಮನುಷ್ಯನು (ಮನೋವ್ಯಾಪಾರಗಳು ಕಟ್ಟಾಗಿ) ಹುಚ್ಚನಾಗುವನು. ಆದರೂ ಬದುಕಿರುವನು.

ಈ ಮಿದುಳಿನ ಹಿಂಭಾಗಕ್ಕೆ ಸಣ್ಣ ಮಿದುಳು ಅಥವಾ ಕನಿಷ್ಠ ಮಸ್ತಿಷ್ಕವೆಂಬ ಭಾಗವು ಇರುವದು. ಇದನ್ನು ಸೀಳಿನೋಡಿದರೆ ಮಧ್ಯಭಾಗದಲ್ಲಿ ಬಿಳೀ ಬಣ್ಣದ ಪದಾ

ಭಿನ್ನ ಭಿನ್ನ ಜನಾಂಗಗಳ ಕಲ್ಪನೆಯು ಆತ್ಮದ ಸಂಬಂಧದಿಂದ ಭಿನ್ನಭಿನ್ನವಾಗಿರುವದು. ಕೆಲವೊಂದು ಧರ್ಮತತ್ವಗಳನ್ನು ಅನುಸರಿಸುವವರು ಆತ್ಮವು ಅವಿನಾಶಿಯೆಂದು ನಂಬಿದರೂ ಪುನರ್ಜನ್ಮವನ್ನು ನಂಬುವದಿಲ್ಲ. ಪೂರ್ವಕಾಲದ ಗ್ರೀಕರು ಮನುಷ್ಯನು ಮರಣಹೊಂದಿದಕೂಡಲೆ ಆತ್ಮವು ಮೃತಶರೀರವನ್ನು ಬಿಟ್ಟು ಆಗಲಿ ಹೋದರೂ ಕಾಲಕಾಲಕ್ಕೆ ಪುನಃ ಬಂದು ಅದರಲ್ಲಿ ಪ್ರವೇಶಿಸುವದೆಂದೂ ಹಾಗೆ ಮಾಡಿದಾಗ ಮನುಷ್ಯನು ಸಜೀವನಾಗಿದ್ದಾಗ ಮಾಡಿದ ಪಾಪಪುಣ್ಯಗಳ ಫಲಗಳನ್ನು ಅದು ಅನುಭವಿಸುತ್ತದೆಂದೂ ನಂಬಿದ್ದರು. ಬೇರೆ ಕೆಲವರು ಆತ್ಮವು ನಿರಾಕಾರವಾದ ವಸ್ತುವೆಂದು ಗ್ರಹಿಸಿದರೂ ಅದಕ್ಕೆ ಶರೀರದ ಮುಖಾಂತರ ಉಂಟಾದ ಸಂಸ್ಕಾರಗಳು ಶರೀರದಿಂದ ಹೊರಬಿದ್ದ ಕೂಡಲೆ ಉಳಿಯಲಾರವೆಂದು ನಂಬಿರುವರು. ಈ ತರದ ಅನೇಕ ಕಲ್ಪನೆಗಳ ಮೂಲಕ ಆತ್ಮಾ, ಅಹಂಕಾರ, ಮನಸ್ಸು, ಮಹಾಭೂತ ಮುಂತಾದವುಗಳಿಗೆ ನಿಶ್ಚಿತವಾದ ಅರ್ಥವು ಬಂದಿರುವದಿಲ್ಲ.

ಪಾಶ್ಚಾತ್ಯ ಶಾಸ್ತ್ರಜ್ಞರು ಎಲ್ಲ ಬಗೆಯ ಜ್ಞಾನದ ಅಧಿಷ್ಠಾನವಾದ ಮಿದುಳು ಅವಯವ ವಿಶೇಷವೆಂದು ಭಾವಿಸುವರು. ಈ ಮಿದುಳಿನಲ್ಲಿ ಕೆಲವು ಭಾಗಗಳಿದ್ದು ಒಂದೊಂದು ಭಾಗದ ಕಾರ್ಯವು ಒಂದೊಂದು ವಿಧವಾಗಿರುವದು. ಮಿದುಳಿನ ಕೆಲವು ವ್ಯಾಪಾರಗಳ ಮೂಲಕ ನಮಗೆ ಕೆಲವೊಂದು ಬಗೆಯ ಜ್ಞಾನವಾಗುವದು. ಸುಖದುಃಖಾದಿಮನೋವ್ಯಾಪಾರಗಳು ನಮ್ಮಲ್ಲಿ ಉತ್ಪನ್ನವಾಗುವವು. ಹಾಗು ಕೆಲವೊಂದು ಪ್ರೇರಣೆಯಿಂದ ಯಾವದೊಂದು ಬಗೆಯ ಕೆಲಸಮಾಡುವ ಇಚ್ಛೆಯು ನಮ್ಮಲ್ಲಿ ಹುಟ್ಟುವದು. ಇದರಿಂದ ನಮ್ಮ ಮಿದುಳಿನಲ್ಲಿ ಒಂದು ತರದ ಅದ್ಭುತ ಶಕ್ತಿಯಿದ್ದು ಆ ಶಕ್ತಿಯ ಮುಖಾಂತರ ಮಿದುಳಿನ ಒಂದೊದು ಭಾಗದಲ್ಲಿ ಒಂದೊಂದು ಬಗೆಯ ಕಾರ್ಯಗಳು ಜರುಗುತ್ತಿರುವವು. ಈ ಎಲ್ಲ ಬಗೆಯ ಕಾರ್ಯಗಳ ಕ್ಷೇತ್ರಕ್ಕೆ ಇಲ್ಲವೆ ಕಾರ್ಯಗಳ ಸಮುದಾಯಕ್ಕೆ (ಮನಸ್ಸು) ಎಂಬ ಸಂಜ್ಞೆಯನ್ನು ಪಾಶ್ಚಾತ್ಯ ಶಾಸ್ತ್ರಜ್ಞರು ಕೊಟ್ಟಿರುವರು. ಅಂದರೆ ಬುದ್ಧಿ, ವಿಕಾರ, ಇಚ್ಛೆಗಳೆಂಬ ವ್ಯಾಪಾರಗಳ ಸಮುದಾಯಕ್ಕೆ (ಮನೋವ್ಯಾಪಾರಗಳಿಗೆ) ಮನಸ್ಸು ಎಂಬ ಸಂಜ್ಞೆಯು.

* * *

ಮಿದುಳೂ ಜ್ಞಾನತಂತುಗಳೂ

ಎಲ್ಲ ಬಗೆಯ ಮನೋವ್ಯಾಪಾರಗಳ ಹಾಗು ಶರೀರದ ಸ್ವಾಸ್ಥ್ಯಕ್ಕೆ ಅವಶ್ಯವಾದ ಶಾರೀರಿಕ ವ್ಯಾಪಾರಗಳ ಅಧಿಷ್ಠಾನವು ಮಿದುಳಾಗಿರುವದೆಂದು ಮಾನವ ಶರೀರಶಾಸ್ತ್ರದ ಸಿದ್ಧಾಂತವಿರುವದರಿಂದ ಆ ಅವಯವದ ವಿಷಯವಾಗಿ ವಿಚಾರಿಸುವ—

ಈ ಮಹತ್ವವುಳ್ಳ ಅವಯುವವು ಅನೇಕ ಎಲುವುಗಳ ಸಂವಿಧಾನದಿಂದ ಉಂಟಾದ ತಲೆಬುರಡೆ ಎಂಬ ಭದ್ರವಾದ ಪೆಟ್ಟಿಗೆಯಲ್ಲಿ ಇರಿಸಲ್ಪಟ್ಟಿರುವದರಿಂದ ಇದು ಮನುಷ್ಯ ಪ್ರಾಣಿಗೆ ಅತ್ಯವಶ್ಯವಾದದ್ದೂ ಅತಿ ಮಹತ್ವವುಳ್ಳದ್ದೂ ಕೋಮಲವಾದದ್ದೂ ಎಂಬದು ವ್ಯಕ್ತವಾಗುದು.

ಇತರ ಪ್ರಾಣಿಗಳ ಮಿದುಳಿಗಿಂತ ಮನುಷ್ಯಪ್ರಾಣಿಯ ಮಿದುಳು (ವಿಶೇಷವಾಗಿ ಸುಧಾರಣೆಹೊಂದಿದ ಮನುಷ್ಯನ ಮಿದುಳು) ಆಕಾರಮಾನದಿಂದಲೂ ಭಾರದಿಂದಲೂ ಹೆಚ್ಚಾಗಿರುವದರಿಂದ ಮನುಷ್ಯಪ್ರಾಣಿಗೆ ಒಂದು ಬಗೆಯ ಶ್ರೇಷ್ಠತ್ವವುಂಟಾಗಲಿಕ್ಕೆ ಕಾರಣವಾಗಿರುವದು. ಸುಧಾರಣೆಯ ಕ್ರಮದಲ್ಲಿ ಇನ್ನೂ ಮೊದಲನೆಯ ಮೆಟ್ಟಿನಲ್ಲಿದ್ದ ನಿಗ್ರೋ, ಎಸ್ಕಿಮೊ, ಭಿಲ್ಲ ಮೊದಲಾದ ಕಾಡು ಜನರ ಮಿದುಳು ಮಂಗನ ಮಿದುಳಿಗಿಂತ ಎಷ್ಟೋಪಾಲು ದೊಡ್ಡದಿರುವದು. ಆದರೆ ಸುಸಂಸ್ಕೃತರಾದ ಆರ್ಯಜನರ ಮಿದುಳು ಆ ಕಾಡುಜನರ ಮಿದುಳಿಗಿಂತ ದೊಡ್ಡದಿರುವದೆಂಬ ಸಂಗತಿಯು ಪ್ರಯೋಗ ಸಿದ್ಧವಾಗಿರುವದು. ಉತ್ಕ್ರಾಂತಿತತ್ವದಂತೆ ಮನುಷ್ಯಪ್ರಾಣಿಯು ಹೆಚ್ಚು ಸುಧಾರಣೆ ಹೊಂದಿದಂತೆ ಆತನ ಮಿದುಳಿನ ರಚನೆಯು ಹೆಚ್ಚು ಹೆಚ್ಚು ಗಡಚಾದದ್ದೂ ಹೆಚ್ಚು ಹೆಚ್ಚು ಭಾರವುಳ್ಳದ್ದೂ ಆಗಲೇಬೇಕು. ಆನುವಂಶಿಕತೆಯ ತತ್ವದಂತೆ ಮಿದುಳಿನ ಸುಧಾರಣೆಯು ತಂದೆಯಿಂದ ಮಗನಿಗೆ ಬರುವದೆಂದು ಅನೇಕ ಶಾಸ್ತ್ರಜ್ಞರ ಮತವುಂಟು.

ಮಿದುಳಿನ ಭಾಗಗಳನ್ನು ಸ್ಥೂಲಮಾನದಿಂದ ನಿರೀಕ್ಷಿಸಿದರೆ ಇದರಲ್ಲಿ ತಲೆಬುರುಡೆಯನ್ನು ಬಹುಮಟ್ಟಿಗೆ ವ್ಯಾಪಿಸಿಕೊಂಡ ದೊಡ್ಡ ಭಾಗವು ದೊಡ್ಡ ಮಿದುಳು ಅಥವಾ ಉತ್ತಮಮಸ್ತಿಷ್ಕವು ಇಭ್ಭಾಗವಾಗಿದ್ದು ತುಸು ಬೂದಿಬಣ್ಣವುಳ್ಳ ಕುಟ್ಟಿದ ಕಣಕದಂಥ ಪದಾರ್ಥಗಳಿಂದುಂಟಾದ ಕೋಶಗಳ ರಚನೆಯಾಗಿದೆ. ಈ ರಚನೆಯಲ್ಲಿ ಅನೇಕ ಮಡಿಕೆಗಳು ಕಂಡುಬರುವವು. ಇದರಿಂದ ಜ್ಞಾನತಂತುಗಳು ಹನ್ನೊಂದು ಜೊತೆಯಾಗಿ ಹೊರಟು ಬಾಹ್ಯ ಸೃಷ್ಟಿಯ ಜ್ಞಾನವನ್ನು ಮಾಡಿಕೊಡುವ ಪಂಚೇಂದ್ರಿಯಗಳಲ್ಲಿ ಶಾಖೋಪಶಾಖೆಗಳಾಗಿ ಪರಿಣಮಿಸಿ ಹಬ್ಬಿಕೊಂಡಿರುವವು. ಮಾನಸಶಾಸ್ತ್ರ ದೃಷ್ಟಿಯಿಂದ ಈ ಭಾಗವೇ ಅತಿ ಮಹತ್ವವುಳ್ಳದ್ದು. ಮನುಷ್ಯನಿಗೆ ಉಂಟಾಗುವ ಜ್ಞಾನ, ಸುಖದುಃಖಾದಿಗಳು, ಕ್ರಿಯಾ, ಪ್ರವೃತ್ತಿ ಮೊದಲಾದವುಗಳಿಗೆ ದೊಡ್ಡ ಮಿದುಳು ಕಾರಣೀಭೂತವಾಗಿರುವದು. ಆದರೆ ಶರೀರದ ವ್ಯಾಪಾರಗಳಿಗೆ ಇದರ ಅವಶ್ಯಕತೆಯಿಲ್ಲ. ಈ ಮಿದುಳಿಗೆ ಧಕ್ಕೆ ಹತ್ತಿದರೆ ಇಲ್ಲವೆ ಇದನ್ನು ಸಮಗ್ರವಾಗಿ ತೆಗೆದುಬಿಟ್ಟರೆ ಮನುಷ್ಯನು (ಮನೋವ್ಯಾಪಾರಗಳು ಕಟ್ಟಾಗಿ) ಹುಚ್ಚನಾಗುವನು. ಆದರೂ ಬದುಕಿರುವನು.

ಈ ಮಿದುಳಿನ ಹಿಂಭಾಗಕ್ಕೆ ಸಣ್ಣ ಮಿದುಳು ಅಥವಾ ಕನಿಷ್ಠ ಮಸ್ತಿಷ್ಕವೆಂಬ ಭಾಗವು ಇರುವದು. ಇದನ್ನು ಸೀಳಿನೋಡಿದರೆ ಮಧ್ಯಭಾಗದಲ್ಲಿ ಬಿಳೀ ಬಣ್ಣದ ಪದಾ

ರ್ಥದಿಂದುಂಟಾದ ಗಿಡದ ಟೊಂಗೆಯಂಥ ರಚನೆಯಿರುವದು. ಇದರ ಕರ್ತವ್ಯವು ಇಂಥದೇ ಎಂಬದು ಇನ್ನೂ ನಿಶ್ಚಿತವಾಗಿಲ್ಲ. ಇದು ದೊಡ್ಡಮಿದುಳಿನ ಸೇವಕನೆಂದು ಹೇಳುವದುಂಟು. ಅನೇಕಸಾರೆ ಮಾಡಿ ಮಾಡಿ ಯಾಂತ್ರಿಕವ್ಯಾಪಾರಗಳಾಗಿರುವ ನುಡಿಯೋಣ, ನಡೆಯೋಣ, ನೀಟಾಗಿನಿಲ್ಲೋಣ ಮೊದಲಾದ ವ್ಯಾಪಾರಗಳನ್ನು ದೊಡ್ಡ ಮಿದುಳು ಈ ಮಿದುಳಿಗೆ ಒಪ್ಪಿಸಿಬಿಟ್ಟಿರುವದು. ಈ ಮಿದುಳಿಗೆ ಧಕ್ಕೆ ತಗಲಿದರೆ ಮನುಷ್ಯನು ಕ್ರಿಯಾಶೂನ್ಯನಾಗುವನು; ನೀಟಾಗಿ ನಿಲ್ಲಲಾರನು; ದಿಕ್ಕುಗಳ ಜ್ಞಾನವು ಆತನಿಗೆ ಇಲ್ಲದಂತಾಗುವದು; ಗಿಮಿಗಿಮಿ ತಿರುಗಹತ್ತುವನು; ವಿಚಾರಶಕ್ತಿಯು ಕುಂದುವದು. ಆದರೂ ಬದುಕಿರುವನು.

ಈ ಎರಡೂ ಭಾಗದ ಕೆಳಬದಿಗೆ ಇರುವ ಒಂದು ಸೇತುವೆಯ ಮಧ್ಯಭಾಗದಲ್ಲಿ 'ಮಣಿಸಿರ' ಎಂಬದೊಂದು ಹಲಸಿನ ಬೀಜದಾಕಾರದ ಭಾಗವಿರುವದು. ಇದರಿಂದ ಹೊರಟ ತಂತುಗಳು ಶರೀರದ ಅನೇಕ ಮಹತ್ವವುಳ್ಳ ಅವಯವಗಳಲ್ಲಿ ಸೇರಿ ಶರೀರದ ಸ್ವಾಸ್ಥ್ಯಕ್ಕೆ ಅತ್ಯವಶ್ಯವಾದ ಶ್ವಾಸೋಚ್ಛ್ವಾಸ, ರಕ್ತಾಭಿಸರಣ, ಪಚನಕ್ರಿಯೆ ಮೊದಲಾದ ಅನೈಚ್ಛಿಕ ವ್ಯಾಪಾರಗಳನ್ನು ಎಡೆಬಿಡದೆ ನಡಿಸುವಂತೆ ಆಯಾ ಅವಯವಗಳಿಗೆ ಪ್ರೇರಣೆಯನ್ನುಂಟುಮಾಡುತ್ತಿರುವದು. ಈ ವ್ಯಾಪಾರಗಳಿಗೆ ದೊಡ್ಡ ಮಿದುಳಿನ ಸಂಬಂಧವು ಎಷ್ಟುಮಾತ್ರವೂ ಇರುವದಿಲ್ಲ. ಈ ಭಾಗಕ್ಕೆ ಧಕ್ಕೆ ತಗಲಿದ ಕೂಡಲೆ ಮನುಷ್ಯನು ಸಾಯುವನು.

ಮಿದುಳಿನ ಭಾರವು:— ಸಾಮಾನ್ಯವಾಗಿ ಬೆಳವಣಿಗೆ ತೀರಿದ ಮನುಷ್ಯನ ಮಿದುಳಿನ ಭಾರವು ೪೫ ಔಂಸ ಇರುವದು. ಹೆಂಗಸರ ಮಿದುಳಿನ ಭಾರವು ಗಂಡಸರ ಮಿದುಳಿನ ಭಾರಕ್ಕಿಂತ ಕಡಿಮೆ ಇರುವದು. ವಿಲಕ್ಷಣ ಬುದ್ಧಿಮತ್ತೆಯುಳ್ಳ ಕೆಲವರ ಮಿದುಳಿನ ಭಾರವು ೬೦ ಔಂಸ ಸಹ ಇರುವದು. ಆದರೆ ಬುದ್ಧಿಮತ್ತೆಯು ಕೇವಲ ಮಿದುಳಿನ ಭಾರವನ್ನೇ ಅವಲಂಬಿಸಿರದೆ ದೊಡ್ಡ ಮಿದುಳಿನಲ್ಲಿ ಉಂಟಾಗಿರುವ ಮಡಿಕೆಗಳನ್ನು ಬಹುಮಟ್ಟಿಗೆ ಅವಲಂಬಿಸಿರುವದು. ಹುಚ್ಚನ ಮಿದುಳು ಆಕಾರಮಾನದಿಂದ ಕಡಿಮೆಯಾಗದಿದ್ದರೂ ಅದರ ಭಾರವು ೧೫ರಿಂದ ೨೦ ಔಂಸದ ವರೆಗೆ ಮಾತ್ರ ಇರುವದು.

ದೊಡ್ಡ ಮಿದುಳಿನ ವ್ಯಾಪಾರಗಳು:— ವಸ್ತುಜನ್ಯಸಂಸ್ಕಾರ, ಸ್ಮರಣ, ಭಾವನೆ, ಅನುಮಾನ, ವಿಚಾರ, ನಿರ್ಣಯ ಮೊದಲಾದ ಮನೋವ್ಯಾಪಾರಗಳ ಕ್ಷೇತ್ರವು ದೊಡ್ಡ ಮಿದುಳಿನ ಮುಂಭಾಗದಲ್ಲಿ ಅಂದರೆ ಹಣೆಯ ಕಡೆಗಿರುವ ಭಾಗದಲ್ಲಿ ಇರುವದೆಂದು ಪ್ರಯೋಗಗಳಿಂದ ಸಿದ್ಧವಾಗಿರುವದು. ಈ ಭಾಗದ ಹಿಂದುಗಡೆ ಸುಖ, ದುಃಖ, ಕ್ರೋಧ, ಲೋಭ, ಈರ್ಷೆ ಮೊದಲಾದ ಮನೋವ್ಯಾಪಾರಗಳ ಕ್ಷೇತ್ರವಿರುವದು. ಅದರ ಹಿಂದುಗಡೆಗೆ ಕ್ರಿಯಾಪ್ರವೃತ್ತಿಕ ಇಚ್ಛೆಯ ಕ್ಷೇತ್ರವಿರುವದು.

ಉಳಿದ ಭಾಗಗಳಲ್ಲಿ ನಡೆಯತಕ್ಕ ವ್ಯಾಪಾರಗಳು ಮನೋವ್ಯಾಪಾರಗಳಲ್ಲ. ಕೆಲವೊಂದು ಉತ್ತೇಜಕದಿಂದಾಗುವ ಪ್ರತಿಕ್ರಿಯೆಗಳು (ಎವೆಬಡಿಯೋಣ ಮುಂತಾದ ಕಾರ್ಯಗಳು) ಮಣಿಸಿದ ಇಲ್ಲವೆ ಬೆನ್ನಹುರಿಯುಗುಂಟ ಇಳಿದಿರುವ ಮಿದುಳಿನ ಬಳ್ಳಿ ಅಥವಾ ಕಸೇರುಕಾರಜ್ಜುಗಳಲ್ಲಿ ಅಡಕವಾಗಿರುವ ನರಗಳಿಗೆ ಸಂಬಂಧಿಸಲ್ಪಟ್ಟಿರುವದರಿಂದ ಒಂದು ಬಗೆಯ ಅನೈಚ್ಛಿಕ ವ್ಯಾಪಾರಗಳಾಗಿರುವವು. ಐಚ್ಛಿಕ ವ್ಯಾಪಾರಗಳಿಗೆ ಆಧಾರಭೂತವಾಗಿ ಯಾವದೊಂದು ಕಲ್ಪನೆಯು ಇಲ್ಲವೆ ಸಂಸ್ಕಾರವಿದ್ದು ಅವರ ಮುಖಾಂತರ ಒಂದುಬಗೆಯ ಪ್ರೇರಣೆಯುಂಟಾಗುವದು. ಅನೈಚ್ಛಿಕ ವ್ಯಾಪಾರಗಳಿಗೆ ಇಂಥ ಪ್ರೇರಣೆಯ ಅವಶ್ಯಕತೆಯಿಲ್ಲ,

ಮಿದುಳಿನಿಂದ ಹೊರಟ ಒಂದು ವಿಧವಾದ ಬಳ್ಳಿಯು ಬೆನ್ನೆಲವುಗಳ ಮಣಿಯ ಮಧ್ಯದಲ್ಲಿ ಇರುವ ಪ್ರದೇಶವನ್ನು ಸೇರಿ ಪೃಷ್ಠಫಲಕದವರೆಗೆ ಇಳಿಯುತ್ತ ಹೋಗಿರುವದು. ಇದರಲ್ಲಿ ದೊಡ್ಡ ಮಿದುಳಿಗೆ ಸಂಬಂಧಿಸಿದ ಭಾಗವು ಇರುವದು. ಇದರಿಂದ ಮೂವತ್ತೊಂದು ಜೊತೆಯಾದ ನರಗಳ ಬಳ್ಳಿಗಳು ಟಿಸಿಲಿನಂತೆ ಒಡೆದು ಶರೀರದ ಎಲ್ಲ ಭಾಗಗಳನ್ನು ವಿಶೇಷವಾಗಿ ತ್ವಗಿಂದ್ರಿಯದನ್ನು ವ್ಯಾಪಿಸಿರುವವು. ಈ ತರದಿಂದುಂಟಾದ ನರಗಳ ಜಾಲದಲ್ಲಿ ಸೂಕ್ಷ್ಮದರ್ಶಕ ಯಂತ್ರದಲ್ಲಿ ಕಾಣುವಷ್ಟು ಸೂಕ್ಷ್ಮವಾದ ತಂತುವಿನಾಕಾರದ ನರಗಳಿರುವವು. ಇವುಗಳಲ್ಲಿ ಕೆಲವುಗಳಿಗೆ ಟಿಕಳಿಗಳಿರುವವು. ಅವುಗಳ ಜೊತೆಯಲ್ಲಿದ್ದ ಬೇರೆ ಕೆಲವು ನರಗಳಿಗೆ ಈ ತರದ ಟಿಕಳಿಗಳಿರುವದಿಲ್ಲ. ಟಿಕಳಿಯುಳ್ಳ ನರಗಳು ಬಾಹ್ಯಸೃಷ್ಟಿಯಿಂದ ತಮಗುಂಟಾದ ಅನುಭವವನ್ನು ಒಟ್ಟುಗೂಡಿಸಿ ಉಪಶಾಖೆಯಿಂದ ಶಾಖೆಗೆ, ಶಾಖೆಯಿಂದ ಮಿದುಳುಬಳ್ಳಿಗೆ, ಅಲ್ಲಿಂದ ದೊಡ್ಡ ಮಿದುಳಿಗೆ ಕಳಿಸುವವು. ಈ ಅನುಭವವು ದೊಡ್ಡ ಮಿದುಳಿಗೆ ಮುಟ್ಟಲು ದೊಡ್ಡ ಮಿದುಳು ವಿಚಾರಮಾಡಿ ತಕ್ಕ ನಿರ್ಣಯವನ್ನು ಅಮಲಿನಲ್ಲಿ ತರುವದಕ್ಕಾಗಿ ಕ್ರಿಯಾಪ್ರವೃತ್ತವಾದ ಅವಯವಗಳಿಗೆ ಕಳಿಸುವದು. ಈ ಕಾರ್ಯವು ಟಿಕಳಿಯಿಲ್ಲದ ನರಗಳ ಮುಖಾಂತರ ಆಗುವದು. ಇದರಿಂದ ಮಿದುಳುಬಳ್ಳಿಯು ಮಧ್ಯವರ್ತಿಯಾಗಿರುವ ಒಂದು ನರಗಳ ರಚನೆಯೆಂದೂ ಟಿಕಳಿಯಿದ್ದ ನರಗಳು ಅಂತರ್ವಾಹಿಗಳೆಂದೂ ಟಿಕಳಿಯಿಲ್ಲದ ನರಗಳು ಬಹಿರ್ವಾಹಿಗಳೆಂದೂ ಗೊತ್ತಾಗುವದು.

ಮೇಲೆ ಹೇಳಿದ ನರಮಂಡಲದ ಹೊರತು ಬೆನ್ನಹುರಿಯ ಎರಡೂ ಮಗ್ಗಲಿಗೆ ಅನೇಕ ಗಂಟುಗಳುಳ್ಳ ನರಗಳ ಜಾಲವಿರುವದು. ಇವುಗಳಿಗೆ ಸಹಾನುಭೂತಿವಿಶಿಷ್ಟ ನರಮಂಡಲವೆಂಬ ಹೆಸರು. ಇವುಗಳ ಮುಖ್ಯ ವ್ಯಾಪಾರವು ಶರೀರದೊಳಗಿನ ಅನೈಚ್ಛಿಕ ವ್ಯಾಪಾರಗಳು ಮಿತಿಮೀರಿ ನಡೆಯದಂತೆ ವ್ಯವಸ್ಥೆಮಾಡುವದು. ಇವುಗಳ ವ್ಯಾಪಾರವು ಇಷ್ಟೇ ಎಂದು ಇನ್ನೂ ನಿಶ್ಚಿತವಾಗಿಲ್ಲ.

(ಮುಂದೆ ಸಾಗುವದು.)

ಮುಲ್ಕೀಪರೀಕ್ಷೆಯ ಪರಿಣಾಮವು

ಮಾರ್ಚ ೧೯೩೩ರಲ್ಲಾದ ಮುಲ್ಕಿಪರೀಕ್ಷೆಗೆ ಅಗ್ರಿಕಲ್ಚರ ತೆಗೆದುಕೊಂಡು ಪಾಸಾದವರ ಯಾದಿಯನ್ನು ಸಾಲೆಗಳ ಹೆಸರು ಸಹಿತ ಮುಂದೆ ಕೊಟ್ಟಿದೆ. ಸಾಲೆಗಳ ಮುಂದೆ ಆಯಾ ಸಾಲೆಯಿಂದ ಕುಳಿತವರ ಸಂಖ್ಯೆ ತೋರಿಸಿದೆ.

ಧಾರವಾಡ ಜಿಲ್ಹೆ

ಹುಲಕೋಟಿ ಶಾಲೆ ೯

೧ ಗು. ಅ. ಕಡದಳ್ಳಿ
೨ ಭೀ. ದ್ಯಾ. ಖಾನಾಪೂರ
೩ ಶಿ. ಶಂ. ಗುರನಗೌಡರ
೪ ಚ. ಸಿ. ಗುಗ್ಗರಿ

ಕಾರವಾರ ಜಿಲ್ಹೆ

ತೇರಗಾಂವ ಶಾಲೆ ೪

೧ ಭೀ. ಪ. ದೊಡಜೈನ
೨ ಚಿ. ನೀ. ಹುಣಸವಾಡಕರ
೩ ಗೋ. ರಾ. ಮಾನಗೆ

ಧಾರವಾಡ ಜಿಲ್ಹೆ

ತಿರಲಾಪೂರ ಶಾಲೆ ೭

೧ ಹ. ಲಿಂ. ಅಡ್ನೂರ
೨ ಶಂ. ಮು. ಕುಲಕರ್ಣಿ

ಮೊಟೆಬೆನ್ನೂರ ಶಾಲೆ ೫

೧ ತು. ಅಂ. ನವಲೆ
೨ ಫ. ಪ. ಮುಲ್ಲೂರ
೩ ವೀ. ಸಂ. ಕಿತ್ತೂರ

ಹಾಂಸಭಾವಿ ಶಾಲೆ ೨

೧ ಲಂ. ದಾ. ತಳವಾರ

ಕಾರವಾರ ಜಿಲ್ಹೆ

ಚಂಡಿಯೆ ಶಾಲೆ ೪

೧ ಶೇ. ಅ. ಶೇಖ
೨ ಗೋ. ದಾ. ಬಂಡಿ

ಬೆಳಗಾಂವ ಜಿಲ್ಹೆ

ಕೊಂಗನೂಳಿ

೧ ವಾ. ವಿ. ಸಪ್ರೆ
೨ ಶ್ರೀ. ರು. ಉಪಾಧ್ಯೆ
೩ ವಾ. ಕ. ಚೌಗುಲೆ
೪ ಭೀ. ದೌ. ಜಾಧವ

ನಂದಗಡ ಶಾಲೆ ೭

೧ ನಾ. ಸೂ. ಗೌಡ
೨ ನಾ. ಭಿ. ಗೌಡ
೩ ಮ. ಬಾ. ಬಗಾರ್ಂವಕರ
೪ ನಾ. ಗು. ಹಾಲ್ಗಿ

ಇಂಡಸ್ಟ್ರಿಯಲ್ ಸ್ಕೂಲ ಸಾಂಗ್ಲಿ. ೬

೧ ಆ. ಕೃ. ವಾರೆ
೨ ದ. ಅ. ಘಾಟಗೆ

ಕೊಣ್ಣೂರ ಶಾಲೆ ೯

೧ ಅ. ಬಂ. ಉಗಾರೆ
೨ ರಾ. ಯ. ಹಟ್ಟಿ

೩ ರಾ. ಕೇ. ಕುಲಕರ್ಣಿ
೪ ಕಾ. ಫ. ಮಠಪತಿ
೫ ರಾ. ಅ. ಅಕ್ಕತಂಗೇರಹಾಳ
೬ ಹೆ. ಸ. ಪೀರಜಾದೆ
೭ ಅ. ನೇ. ಪಾಟೀಲ
೮ ವಿ. ಬಾ. ಕುಲಕರ್ಣಿ

ಹುದ್ಲಿ ಶಾಲೆ ೬

೧ ಬ. ಅ. ಪಾಟೀಲ
೨ ರಾ. ಗೋ ದೇಶಪಾಂಡೆ
೩ ಅ. ಖಾ. ಮುಕಾನದಾರ
೪ ವಿ. ಶ್ರೀ. ದೇಶಪಾಂಡೆ
೫ ರಂ. ಗೋ. ದೇಶಪಾಂಡೆ
೬ ಭಾ. ಹ. ಕುಲಕರ್ಣಿ

ಪಾರಿಶವಾಡ ಶಾಲೆ ೧೧

೧ ಗೋ. ಗೋ. ಗಲಗಲಿ
೨ ಕ. ಬ. ನಾಂದೇನವರ
೩ ಬಾ. ಅ. ಪಾಟೀಲ
೪ ವೀ. ಭೀ. ಗುರ್ಲಹೊಸೂರ

ಮುಗುಟಖಾನ-ಹುಬ್ಬಳ್ಳಿ ಶಾಲೆ ೧೦

೧ ನಾ. ಸಾ. ಕೋಲಕಾರ
೨ ಬಾ. ವೀ. ಹಲಸಿಗಿ
೩ ಬ. ಅ. ಬಾಗೇವಾಡಿ
೪ ಮು. ಗಂ. ಕಮ್ಮಾರ
೫ ಅ. ಪಾ. ಬೋರಣ್ಣವರ
೬ ಬ. ಗಂ. ನರಸಣ್ಣವರ

ನೇಸರಗಿ ೧೪

೧ ವೀ. ಬ. ಕಟ್ಟೀಮನಿ
೨ ಮು. ಚ. ಪಾಟೀಲ
೩ ಮ. ವೀ. ಕರಡಿ
೪ ಸು. ಕೃ. ಕುಮಠೆ
೫ ಬ. ಬ. ಜೋಶಿ
೬ ಲಿಂ. ಗಂ. ಮೇಣಸಿಕಾಯಿ
೭ ಬ. ಫ. ಪಾಟೀಲ
೮ ಬ. ರು. ಮುಲಣ್ಣವರ
೯ ಸಂ. ದೊ. ಹಿರೇಮಠ
೧೦ ಬ. ಶಿ. ಪಾಟೀಲ
೧೧ ಫ. ಬಾ. ಕಾಗಿ

ಕಾಗವಾಡ ಶಾಲೆ ೫

೧ ದ. ಬಾ. ಥೋರ
೨ ಜೋ. ಚ. ಪಾಟೀಲ

ಚಚಡಿ ಶಾಲೆ ೬

೧ ದೇ. ದುಂ. ಬಡಿಗೇರ

ಮುನೋಳಿ ಶಾಲೆ ೧

೧ ಮು. ಸಂ. ಶೀಲವಂತ

ಕಿತ್ತೂರ ಶಾಲೆ ೮

೧ ಕ. ಸ. ಪಾಟೀಲ
೨ ವೀ. ಬ. ಪಾಟೀಲ
೩ ಈ. ಬ. ದೊಡ್ಡಮನಿ

ಕುಲಿಗೋಡ ಶಾಲೆ ೪

೧ ಗೋ. ಹ. ಚನ್ನಾಲ

ಬೆಳಗಾವ ಜಿಲ್ಹೆ

ಒಟ್ಟು ಕುಳಿತವರು	ಪಾಸು ಆದವರು
೯೧	೫೩

ವಿಜಾಪೂರ ಜಿಲ್ಹೆ

ಭಾತಗುರ್ಕಿ ಶಾಲೆ ೧೧

೧ ರಾ. ಸಿ. ಮಾನೆ

೨ ಭೀ. ನಿ. ಹಾವಿನಾಳ
೩ ವಿ. ಕೇ. ಪಾಟೀಲ
೪ ತು. ಶಿ. ಮೋರೆ
೫ ಧೋಂ. ಲ. ಭಿಡೆ
೬ ಚಿ. ಮ. ಹೊಲೀರ
೭ ಸಿ. ಸಾ. ಮೇಡೆದಾರ
೮ ಮ. ಮ. ಬಾಗವಾನ

ಅಲಮೇಲ ಶಾಲೆ ೯

೧ ಸಿ. ಧ. ಕೋರವಾರ
೨ ಮಾ. ಶಂ. ನಾರಾಯಣಕರ
೩ ಚ. ಗು. ಪುಷ್ಪತಿಮಠ
೪ ರಾ. ಚ. ರಾಥೋಡೆ
೫ ಶ. ಯೋ. ಮಠ
೬ ವೀ. ಕೃ. ಭಾವೀಮನಿ
೭ ಕೀ. ಚ. ಅಳೇಗಾವಿ
೮ ರಾ. ಮ. ಮಾಡ್ಯಾಲ

ಕಲಾದಗಿ ಶಾಲೆ ೫

೧ ಪ್ರ. ನಾ. ಕುಲಕರ್ಣಿ
೨ ಗೋ. ವಿ. ದೇಶಪಾಂಡೆ
೩ ಚ. ಸಿ. ವಿರಕ್ತಮಠ

ನೀಲಗುಂದ ಶಾಲೆ ೩

೧ ಬೀ. ತು. ದಂಡಿಗಿದಾಸ
೨ ಹ. ಹ. ಡೊಂಬರ
೩ ದ್ಯಾ. ಚ. ದೊಡ್ಡನಿಂಗಪ್ಪನವರ

ಧಾರವಾಡ ಟ್ರೇನಿಂಗ ಸ್ಕೂಲ

ಸರಟಿಫಿಕೇಟ ಪರೀಕ್ಷೆ ೧೯೩೩, ಇನಾಮು ಪಡೆದವರು

೧.	ಚಾಟಫಿಲ್ಡ ಪ್ರಾಯಿಜ	ರೂ. ೧೬	ಪರೀಕ್ಷೆಯಲ್ಲಿ ೧ನೇ ನಂಬರು ಮಿ. ಕೋರಿ
೨.	ಜಾಯಿಲ್ಸ ಪ್ರಾಯಿಜ	ರೂ. ೧೬-೮-೦	ಶಿಕ್ಷಣದಲ್ಲಿ ೧ನೇ ನಂಬರು ಮಿ. ಕೋರಿ
೩.	ಮಾಂಟೀಥ ಪ್ರಾಯಿಜ	ರೂ. ೧೩	ಪರೀಕ್ಷೆಯಲ್ಲಿ ೨ನೇ ನಂಬರು ಮಿ. ಜಂಬಿಗಿ
೪.	ಸದರ	ರೂ. ೧೫	ಗಣಿತ, ಶಾ. ವಿಷಯುಗಳಲ್ಲಿ ೧ನೇ ನಂಬರು ಮಿ. ಕೋರಿ
೫.	ಜನರಲ್ ಪ್ರಾಯಿಜ	ರೂ. ೧೨	ಶಿಕ್ಷಣದಲ್ಲಿ ೨ನೇ ನಂಬರು ಮಿ. ಮಹಿಂಸಾಳೆ
೬.	ಸದರ	ರೂ. ೧೨	ಕನ್ನಡದಲ್ಲಿ ೧ನೇ ನಂಬರು ಮಿ. ಕೋರಿ
೭.	ಸದರ	ರೂ. ೧೨	ಪ್ರ. ವಿಮರ್ಶೆ ಹಾಗು ಕೈಕೆಲಸದಲ್ಲಿ ೧ನೇ ನಂಬರು ಮಿ. ನಿಂಬರಗಿ

V. N. Magdal,
ಹೆ. ಮಾ. ಟ್ರೇ. ಸ್ಕೂ.

—o—

ಪ್ರಕಟಣೆ.

ಕೆಳಗೆ ಬರೆದ ಪುಸ್ತಕಗಳು ಮುಂಬೈ ಇಲಾಖೆಯೊಳಗಿನ ಉರ್ದು ಶಾಲೆಗಳಿಗಾಗಿ ಪುಣೆಯ ಉರ್ದು ಬುಕ್ ಕಮೀಟಿಯವರಿಂದ ಕೆಳಗೆ ವಿವರಿಸಿದಂತೆ ಮಂಜೂರ ಮಾಡಲ್ಪಟ್ಟವೆ.

T = ಟೆಕ್ಸ್ಟ ಬುಕ್ಕು L = ಲಾಯಬ್ರರಿ ಬುಕ್ಕು P = ಪ್ರಾಯಿಝು ಗ್ರಂ। = ಗ್ರಂಥಕರ್ತರು ಪ್ರ = ಪ್ರಕಾಶಕರು. (ಮಂ. ಮಂಜೂರ)

ಕೆಳಗಿನ ಪುಸ್ತಕಗಳ ಗ್ರಂ। ಕ ಮೌಲ್ವಿ ಫೆರೋಜುದ್ದೀನ ಆ್ಯಂಡ ಸನ್ಸ ಪ್ರ॥ ಮೌಲ್ವಿ ಫೆರೋಜುದ್ದೀನ ಆ್ಯಂಡ ಸನ್ಸ ಲಾಹೋರ.

(೧) ಝುನಾನಾ ಉರ್ದು ಕೋರ್ಸ ಭಾಗ ೧ (೧೯೩೨) ಬೆಲೆ ೦-೪-T ಉರ್ದು ಪ್ರಾಯ್ಮರಿ ಮತ್ತು ಗರ್ಲ್ಸ ಸಾಲೆಗಳಿಗೆ (೨) ಸದರ ಭಾಗ ೨ T ಉರ್ದು ನೇ ಇ. ಬೆಲೆ ೦-೭-೦ (೩) ಸದರ ಭಾಗ ೩ ಬೆಲೆ ೦-೮-೦ T ಉರ್ದು ನೆಯ ಇ. (೪) ಸದರ ಭಾಗ ೪. ಬೆಲೆ ೦-೯-೦ T ಉರ್ದು ೪ನೆಯ ಇ.) ಸದರ ಭಾಗ ೫ ಬೆಲೆ ೦-೧೦-೦ T ಉರ್ದು ೫ನೇ ಇ. (೬) ಸದರ ಭಾಗ , ಬೆಲೆ ೦-೧೨-೦ T ಉರ್ದು ೬ನೆಯ ಇ. (೭) ಸದರ ಹಾಫ್ಟೂನ್. ಬೆಲೆ -೧೨-೦ P. L ಉರ್ದು ಪ್ರಾಯ್ಮರಿ ಮತ್ತು ಗರ್ಲ್ಸ ಶಾಲೆಗಳಿಗೆ ಹಾಗು T ಣ್ಣು ಮಕ್ಕಳ ಟ್ರೇ. ಸಂ. ಯ ಜೂನಿಯರ ಕ್ಲಾಸ (೧ನೇ ವರ್ಷ) (೮) ಸದರ ಸ್ಟೂವನ್ ಬೆಲೆ ೦-೧೩-೦ ಮಂ. ೭ನೇದರಂತೆ.

ಕೆಳಗಿನ ಪುಸ್ತಕಗಳ ಗ್ರಂ। ಕ—ಕ್ವಾರಿ ಕ್ವಾಮುದ್ದೀನ ಡಾ. ಹೆ. ಮಾ. ರಂಬೀರ H. S. ಜಮ್ಮು ಪ್ರ॥ ರು ಥ್ಯಾಕರ ಆನಂದ ಆ್ಯಂಡ ಸನ್ಸ ಇನ್ ಯಿಡ ಮೋರಿಗೇಟ ಲಾಹೋರ.

(೯) ಹ್ಯಾಂಡಬುಕ್ ಆಫ ಡ್ರಾಯಿಂಗ ಭಾಗ ೧ ಬೆಲೆ ೦-೪-೦ P ಮತ್ತು L ಪ್ರಿ. ಶಾ. ಹಾಗು ಟ್ರೇ. ಸಂ। ಗಳಿಗೆ (೧೦) ಸದರ ಭಾಗ ೨ ಬೆಲೆ ೦-೪-೦ ಮಂ. ಮೇಲಿನಂತೆ (೧೧) ಸದರ ಭಾಗ ೩ ಬೆಲೆ ೦-೮-೦ ಮಂ. ಮೇಲಿನಂತೆ.

ಕೆಳಗಿನ ಪು॥ಗಳ ಗ್ರಂ. ಕ। ಲಾಲಾ ದೌಲತ್ತ ರಾಮುಸನ್ ಪ್ರೊ॥ ಡಿ. ಎ. ವ್ಹಿ. ಕಾಲೇಜ ರಾವಲಪಿಂಡಿ ಪ್ರ॥ ರು ಥ್ಯಾಕರ ಆನಂದ ಆ್ಯಂಡ ಸನ್ಸ ಲಾಹೋರ.

(೧೨) ಸಾಯನ್ಸಕೆ ಕಿರಿಶಮೆ ಭಾಗ ೧ ಬೆಲೆ ೦-೧೧-೦ P ಹಾಗು L ಲ್ಲಾ ಉರ್ದು ಶಿಕ್ಷಣ ಸಂಸ್ಥೆಗಳಿಗೆ (೧೩) ಸದರ ಭಾಗ ೨. ಬೆಲೆ ೦-೧೦-೦ ಮಂ. ಸದರ (೧೪) ಸದರ ಭಾಗ ೩ ಬೆಲೆ ೦-೧೫-೦ ಮಂ. ಸದರ (೧೫) ಗುಲ

ದಸ್ತೂ ಎ ಮುಹಾವರಾತೆ ಉರ್ದು. ಗ್ರಂ| ಕ. ಮಲಿಕ ಅಬ್ದುರ್ರಹಿಮಾನ ಸಾ|| ಎಮ್. ಎ ಪ್ರೊ. ಕಾಲೇಜ ಮಾಲೇರಾ ಕೋಟಲಾ. ಪ್ರ|| ಥ್ಯಾಕರ ಆನಂದ ಆ್ಯಂಡ ಸನ್ಸ ಲಾಹೋರ ಬೆಲೆ ೦-೫-೦ P ಮತ್ತು L ಉರ್ದು ಪ್ರಾ. (೧೬) ಅಹಸನುಲ ಖಯಾಲ. ಗ್ರಂ ಕ. ಮಹಮ್ಮದ ಬಶಿರುದ್ದೀನ ಅನಸಾರಿ. ಪ್ರ|| ಗ್ರಂ. ಕ. ಬೆಲೆ ೦-೮-೦ P ಮತ್ತು L ಉರ್ದು ಟ್ರೇ. ಸಂ| ಹಾಗು ಉ. ಎಲ್ಲ ಶಾಲೆಗಳಿಗೆ ೧ನೇ ಆ. ೧೩೫೧ ಹಿಜರಿ.

ಕೆಳಗಿನ ಪುಸ್ತಕಗಳ ಗ್ರಂ. ಕ. ಮಹಮ್ಮದ ಬಶಿರುದ್ದೀನ ಅನಸಾರಿ ಪ್ರ||ರ ಅಂಜುಮನ್ ಎ ಹಿಮಾಯತ ಎ ಇಸ್ಲಾಮ, ಲಾಹೋರ.

೧೭. ದಿನಯಾತಕಾ ಪಹಿಲಾ ರಿಸಾಲಾ ೨೫ನೇ ಆ. ೧೯೩೨ ಬೆಲೆ ೦-೧-೬ P ಮತ್ತು L ಉರ್ದು ಪ್ರಾ. ಶಾ. ಗಳ ಮುಸಲ್ಮಾನ ವಿದ್ಯಾರ್ಥಿಗಳಿಗೆ.

೧೮. ಸದರ ಭಾಗ ೨. ೨೦ನೇ ಆ. ೧೯೩೨ ಬೆಲೆ ೦-೨-೬ ಮಂ| ಸದರ

೧೯. ಸದರ ಭಾಗ ೩. ೨೪ನೇ ಆ. ೧೯೩೨ ಬೆಲೆ ೦-೩-೦ ಮಂ. ಸದ

೨೦. ತುಲಾ ಎ ಇಸ್ಲಾಮ ಭಾಗ ೧. ೨ನೇ ಆ. ೧೯೩೦ ಬೆಲೆ ೦-೧-೬ ಮಂ. P ಮತ್ತು L ಉರ್ದು ಪ್ರಾ. ಶಾ.ಗಳಿಗೆ.

೨೧. ಸದರ ಭಾಗ ೨. ೧ನೇ ಆ. ೧೯೩೦ ಬೆಲೆ ೦-೧-೫ ಮಂ ಸದರ.

೨೨. ಸದರ ಭಾಗ ೩. ಸದರ ಬೆಲೆ ೦-೧-೫ ಮಂಜೂರ ಸದರ

೨೩. ಸದರ ಭಾಗ ೪. ೧ನೇ ಆ. ೧೯೨೯ ಬೆಲೆ ೦-೧-೧೦ ಮಂಜೂರ ಸದರ

೨೪. ಅಖಲಾಖೆ ಮುಹಮ್ಮದಿ ಭಾಗ ೧ಕ್ಕೆ ಬೆಲೆ ೦-೨-೧ ಭಾಗ ೨ನೇದಕ್ಕೆ ೦-೨-೧೦ ಮಂಜೂರ ಸದರ.

೨೫. ಅಲ ಅಮೀನ ೨ನೇ ಆ. ೧೯೩೧ ಬೆಲೆ ೦-೪-೪ ಮಂಜೂರ ಸದರ.

ಕೆಳಗಿನ ಪುಸ್ತಕಗಳ ಗ್ರಂ. ಕ. ಕಾರಿ ಅಬ್ಬಾಸ ಹುಸೇನ ಮತ್ತು ಕಾರಿ ಸರ್ಫ ರಾಜ. ಪ್ರ||ರು ಲಾಲಾ ಸುಲ್ತಾನ ಚಂದ ಆ್ಯಂಡ ಬ್ರದರ್ಸ ಚಾಂದಿ ಚೌಕ ದಿ

೨೬. ಜದೀದ ಇಬತಿ ದಾ ಈ ಕಾಯುದಾ ೧ನೇ ಆ. ೧೯೨೯ ಬೆಲೆ ೦-೧-೬ T ಉರ್ದು ಇಸ್ಫಂಬ ಕ್ಲಾಸಕ್ಕೆ.

೨೭. ಉರ್ದುಕಿ ದುಸರಿ ಕಿತಾಬ ೧ನೇ ಆ. ೧೯೩೧ ಬೆಲೆ ೦-೮-೦ ಸಪ್ಲಿ ಮೆಂಟರಿ ರೀಡರ ೨ನೇ ಇ.ಗೆ.

೨೮. ಉರ್ದುಕಿ ತಿಸರಿ ಕಿತಾಬ ಸದರ ಬೆಲೆ ೦-೯-೦ ಸದರ ೩ನೇ ಇ.ಗೆ.

೨೯. ಉರ್ದುಕಿ ಚೌಥಿ ಕಿತಾಬ ಸದರ ಬೆಲೆ ೦-೮-೬ ಸದರ ೪ನೇ ಇ.ಗೆ

ಕೆಳಗಿನ ಪುಸ್ತಕಗಳ ಗ್ರಂ. ಕ.ರು ಮಿರ್ಝಾ ಮುಹಮ್ಮದ ಸೈಯದ ಸಾ|| ಮತ್ತು ಶೇಖ ಮುಹಮ್ಮದ ಇಕ್ರಾಮ ಸಾ|| ಪ್ರ||ರು ಪಂಜಾಬ ಪ್ರಿಂಟಿಂಗ ವರ್ಕ್ಸ ಬುಕ್‌ಡಿಪೊ ಅನಾರ್ಕಲಿ ಲಾಹೋರ.

೩೦. ಮುಖುರ್ಮುನೆ ಆದಬ ಭಾಗ ೧ ಬೆಲೆ ೦–೧೨–೦ P. L. ಉರ್ದು ಎಲ್ಲಾ ಶಾಲೆಗಳಿಗೆ. T ಮಾ. ಶಾ.ಯ ೪ನೆ ಇ.ಗೆ ಮತ್ತು ಟ್ರೇ. ಸಂ. ೧ನೇ ವರ್ಷಕ್ಕೆ.

೩೧. ಸದರ ಭಾಗ ೨. ಬೆಲೆ ೦–೧೧–೨ T ಮಾ. ಶಾ.ಯ ೫ನೇ ಇ. ಹಾಗು ವರ್ಷಕ್ಕೆ ಉರ್ದು ಟ್ರೇ. ಸಂಸ್ಥೆಗೆ.

೩೨. ಸದರ ಭಾಗ ೩. ಬೆಲೆ ೦–೯–೧೦ T ಸದರ ಮತ್ತು ಮಾ. ಶಾ. ಇ.ಗೆ.

೩೩. ಸದರ ಭಾಗ ೪. ಬೆಲೆ ೦–೧೨–೦ ಮಂಜೂರ ಸದರ.

ಕೆಳಗಿನ ಪುಸ್ತಕಗಳ ಗ್ರಂ। ಕ. ಅಬ್ದುಲ್ ಹಮೀದ ನೋಮಾನಿ ಪ್ರ॥ರು ಕ.

೩೪. ತಾಜೆ ಅಫರೀನಿಶ ೧ನೇ ಆ. ಬೆಲೆ ೦–೧೦–೦ P. ಮತ್ತು L. ಎಲ್ಲಾ ರ್ದು ಸಂಸ್ಥೆಗಳಿಗೆ.

೩೫–೩೬. ಪ್ಯಾರೆ ಬಚ್ಚೋಕಾ ಪ್ಯಾರಾ ಕಾಯದಾ ಭಾ. ೧ ಹಾಗು ಭಾಗ ೨ ಆ. ೧೯೩೨ ಬೆಲೆ ೦–೧–೬ ಮತ್ತು ೦–೧–೦ T ಉರ್ದು ಇನ್‌ಫಂಟ ಕ್ಲಾಸ.

೩೭. ಮುಫೀದುಲ್ ಅಕವಾಲ ಗ್ರಂ. ಕ. ಕಾರಿ ಮಹಮ್ಮದ ಹುಶೇನಸಾ॥ ರು ಗ್ರಂ, ಕ. ಅಕ್ಟೋಬರ ೧೯೩೯ ಬೆಲೆ ೦–೩–೬ P. ಮತ್ತು L. ಉರ್ದು ಶಾಲೆಗಳಿಗೆ.

ಕೆಳಗಿನ ಪುಸ್ತಕಗಳ ಗ್ರಂ। ಕ. ಸಿಬ್ಲಿ-ಎ-ನೌಮಾನಿ ಪ್ರ.ರು ದಾರುಲ್ ಮುಸಾನ್ನಿಫ್ ಅಜಂಗರ. ಮಂಜೂರ P. ಮತ್ತು L. ಮಾಧ್ಯಮಿಕ ಶಾಲೆಗಳಿಗೂ ಟ್ರೇ. ಸಂ. ಗೂ ಬೆಲೆ ೬–೦–೦.

೩೮ ರಿಂದ ೪೧. ಸೀರತೆ ಸಬವೀ ಭಾಗ ೧, ಭಾಗ ೨, ಭಾಗ ೩, ಭಾಗ ೪.

೪೨–೪೩. ಖುಲಫಾಏ ರಾಶೇದೀನ ೧ನೇ ಆ. ಗ್ರಂ. ಕ. ಮುಯಿಸುದ್ದೀನ ನಾದ್ವಿ ರು ದರೂಲ್ ಮುಸನ್ನೀಫೀಸ್ ಅಜಂಗರ ಬೆಲೆ ೩–೮–೦ P. L. ಉರ್ದು ಮಾ. ಟ್ರೇ. ಸಂ.ಗೆ. ಮತ್ತು ಮುಹಾಜಿರೀನ ಭಾಗ ೧ ಬೆಲೆ ೪–೦–೦. ಮಂ. ಸದರ.

೪೪–೪೫. ತಬಕಾ ತುಲ ಉಮುಮ ಭಾಗ ೧; ನಟ್ಯೆ ಭಾಗ ೧. ಗ್ರಂ. ಕ. ಜಿ ಅಹಮ್ಮದ ಮಿಯಾನ ಆಖ್ತರ ಬೆಲೆ ೧–೮–೦. ಮತ್ತು ೧ ರೂ. ಮಂ. ಸದರ.

೪೬–೪೭. ತಾರೀಖೆ ಫಿಕಹೆ ಇಸ್ಲಾಮ, ತಸೌವ್ವುಫೆ ಇಸ್ಲಾಮ ಬೆಲೆ ೪ ರು. ಷ್ಟ ರು. ೧–೮–೦ ಪ್ರ॥ರು ದಾರುಲ್ ಮುಸನ್ನೀಫೀಸ್ ಅಜಂಗರ ಗ್ರಂ. ಕ. ಬ್ದುಸ್ಸಲಾಮ್ ನಾದ್ವಿ, ಅಬ್ದುಲ್ ಮುಜೀದ P. L. ಉರ್ದು ಮಾ. ಶಾ.ಗೆ ಸಂ।ಗೆ.

೪೮–೪೯. ಅರಬೀ ಹಿಂದಕೀ ತಅಲ್ಲುಕಾತ, ಹಿಂದೀ ಶಾ ಎರೀ ೧ನೇ ಪ್ರ॥ರು ಹಿಂದುಸ್ತಾನಿ ಅಕಾಡೆಮಿ ಅಲ್ಲಾಹಾಬಾದ ಗ್ರಂ। ಕ. ಕ್ರಮವಾಗಿ ಸೈಯ ಸುಲೇಮಾನ ನಾದ್ವಿ, ಡಾ. ಅಜಸ್ ಕಾರ್ವಿ ಬೆಲೆ ೪ರು. ಮತ್ತು ೨ರು. P. ಉರ್ದು ಮಾ. ಶಾ.ಗೆ ಟ್ರೇ. ಸಂ.ಗೆ

೫೦–೫೧. ಸಬರಸ, ಇತಿ ಕಾ. ಪ್ರ॥ರು ಅಂಜುಮನ್-ಎ-ತಾರಾಕ್ಕಿ. ಔರಂಗಾಬಾದ ಗ್ರಂ।ರು ಕ್ರಮವಾಗಿ ಮೌಲಾನಾ ವಾಝಿ, ಮುಶ್ತಾಕ ಅಹಮ ಬೆಲೆ ೪ರು. ೧–೬–೦ P. L. ಉರ್ದು ಮಾ. ಶಾ.ಗೆ ಟ್ರೇ. ಸಂ.ಗೆ.

೫೨. ಆಬೆಬಕಾ—ಗ್ರಂ। ಕ. ಖಾಜಾ ಅಬ್ದುರ್ರೌಫ 'ಇಶ್ರಾತ, ಪ್ರ ಕುತುಬುದ್ದೀನ ಅಹಮ್ಮದ ನೌಮಿಪ್ರೆಸ್ ಲಖನೌ ಬೆಲೆ ೨ರು. P. L. ಉರ್ದು ಮಾ ಶಾ. ಟ್ರೇ. ಸಂ.ಗೆ.

೫೩–೫೪. ಝುಲಫೀ ಭಾ. ೧ ೪ನೇ ಆ. ಭಾ. ೨ ೩ನೇ ಆ. ಗ್ರಂ. ಮುಹಮ್ಮದ ಇನಾಯತುಲ್ಲಾ ಖಾನ. ಪ್ರ.ರು ದಾರುಲ್ ಇಶ್ಯಾಟ ಲಾಹೋರ ಬೆಲೆ ೧ (P. L. ಉರ್ದು ಮಾ. ಶಾ.ಗೆ ಟ್ರೇ. ಸಂ.ಗೆ

೫೫–೫೬. ದರಬಾರೆ ಅಕಬರೀ ; ನೈರಂಗೆ ಖೈಯಾಲ ಗ್ರಂ. ಕ. ಮುಹಮ ಹುಸೇನ ಆಝಾದ ಪ್ರ॥ರು, ಮುಫೀದ ಆಮ್ ಪ್ರೆಸ್ ಲಾಹೋರ ಕ್ರಮವಾಗಿ ಬೆಲೆ ೫ ಮತ್ತು ೭ ಆ. P. L. ಉರ್ದು ಮಾ. ಶಾ. ಟ್ರೇ. ಸಂ.ಗೆ.

೫೭. ಖಿಯಾಲಾತೆ ಅಝೀಝ ಗ್ರಂ। ಕ. ಆಝೀಮ್ ಮಿರ್ಝಾ ಪ್ರ ಝಮಾನಾ ಪ್ರೆಸ್ ಕಾನಪೂರ ಬೆಲೆ ೧ರೂ. P. L. ಮಾ. ಶಾ. ಟ್ರೇ. ಸಂ.ಗೆ.

೫೮ ರಿಂದ ೬೦. ಮಝಾ ಮೀನೆ ಫರಹತ್ ಭಾಗ ೧, ಭಾಗ ೨, ಭಾ ಬೆಲೆ ಮೊದಲಿನ ಎರಡಕ್ಕೆ ೨–೬–೦ ಕಡೆಯದಕ್ಕೆ ೨–೮–೦ ಗ್ರಂ. ಕ. ಮಿರ್ಝ ಫರಾತುಲ್ಲಾಬೇಗ ಪ್ರ॥ರು ಮೊದಲಿನವೆರಡಕ್ಕೆ ಪೇಶ್ವಾ ಪ್ರೆಸ್ ದಿಲ್ಲಿ ಕಡೆಯ ಅಝಮ್ ಸ್ಟೀಮ ಪ್ರೆಸ್ ಹೈದ್ರಾಬಾದ P. L. ಮಾ. ಶಾ. ಟ್ರೇ. ಸಂ.ಗೆ

೬೧. ಮಬಾದೀಯೆ ಫಲಸಫಾ ಗ್ರಂ. ಕ. ಮೀರಹುಸ್ನುದ್ದೀನ ಪ್ರ ಮುಕ್ತಾಬಾ-ಎ-ಇಬ್ರಾಹೀಮ ಹೈದ್ರಾಬಾದ. ಬೆಲೆ ೧ರೂ. P.L. ಮಾ. ಶಾ. ಟ್ರೇ.

೬೨. ಹಿಂದುಸ್ತಾನಕೆ ಮುಆಶರತಿ ಹಾಲತ ಗ್ರಂ। ಕ. ಅಬ್ದುಲ್ಲಾ ಯುಸು ಪ್ರ.ರು ಇಂಡಿಯನ್ ಪ್ರೆಸ್ ಅಲ್ಲಾಬಾದ ಬೆಲೆ ೧–೪–೦ P. L. ಮಾ. ಶಾ. ಟ್ರೇ.

೬೩. ತಾರೀಖೆ ಆರಬೀಯಾತೆ ಇರಾಣಿ ಗ್ರ. ಕ. ಸೈಯ್ಯದ ಸಜ್ಜದ ಹು ಪ್ರ. ರು ಅಂಜುಮನ್-ಎ-ತಾರಾಕ್ಕಿಯೆ ಉರ್ದು. ಬೆಲೆ ೪–೮–೦ P. L. ಮಾ. ಟ್ರೇ. ಸಂ. ಔರಂಗಾಬಾದ.

ಸೆಕ್ರೆಟರಿ ಉರ್ದು ಬುಕ್ ಕಮಿಟಿ ಪೂನಾ.

ಮಾರಾಟಕ್ಕೆ ಸಿದ್ಧವಾಗಿದೆ] [ಬೆಲೆ ೫ ಆಣೆ

ಕರ್ನಾಟಕದ ಕಥಾಮಯ ಇತಿಹಾಸ

(ಕನ್ನಡ ೪ನೆಯ ಇಯತ್ತೆಗಾಗಿ)

ಲೇಖಕ:— ಗೋ. ಅ. ಜೋಗಳೇಕರ, ಸ್ಕೂಲ್‌ಮಾಸ್ತರ ಗದಗ

ನಮ್ಮಿಂದ ರಚಿಸಲ್ಪಟ್ಟ "ಕರ್ನಾಟಕಾಚಾ ಗೋಷ್ಟೀರೂಪ ಇತಿಹಾಸ" ಎಂಬ ಮರಾಠಿ ಪುಸ್ತಕವು ಮುಂಬಯಿ ಸರಕಾರದಿಂದ ಪಠ್ಯಪುಸ್ತಕವೆಂದು ಮಂಜೂರಾಗಿದೆ. ಅದರ ಕನ್ನಡ ಭಾಷಾಂತರವು ಮಾರಾಟಕ್ಕೆ ಸಿದ್ಧವಾಗಿದೆ. ಇದರಲ್ಲಿ ಐತಿಹಾಸಿಕ ಕಾಲದಿಂದ ಈಗಿನವರೆಗಿನ ಕರ್ನಾಟಕದ ಇತಿಹಾಸವು ಚಿಕ್ಕಮಕ್ಕಳಿಗೆ ತಿಳಿಯಬಹುದಾದ ಸುಲಭ ಭಾಷೆಯಲ್ಲಿ ೩೨ ಕಥೆಗಳ ರೂಪದಿಂದ ಬರೆಯಲ್ಪಟ್ಟಿದೆ. ಬಾಲಕರಲ್ಲಿ ಸ್ಫೂರ್ತಿಯೂ, ಸ್ವಾಭಿಮಾನವೂ ಹುಟ್ಟುವಂತೆ ಇದರ ರಚನೆಯಿದೆ. ಎರಡು ನಕಾಶಗಳೂ, ಅಲ್ಲಲ್ಲಿ ಬೇಕಾಗುವ ಚಿತ್ರಗಳೂ ಸೇರಿಸಲ್ಪಟ್ಟಿವೆ. ಇಂಥ ಉಪಯುಕ್ತವಾದ ಪುಸ್ತಕಕ್ಕೆ ಸ್ಕೂಲ್‌ಬೋರ್ಡುಗಳೂ, ಶಿಕ್ಷಕರೂ ಉತ್ತೇಜನಕೊಟ್ಟು ಬಾಲಕರಿಗೆ ನಿಜವಾದ ಇತಿಹಾಸಜ್ಞಾನವನ್ನು ಮಾಡಿಕೊಡಬೇಕೆಂದು ಹಾರ್ಯಿಸುವೆವು.

ಪುಸ್ತಕಗಳು ಎಲ್ಲ ಬುಕ್‌ಡಿಪೋಗಳಲ್ಲಿಯೂ ಗ್ರಂಥಕರ್ತರಲ್ಲಿಯೂ ದೊರೆಯುವವು. ಶಿಕ್ಷಕರಿಗೂ ಪುಸ್ತಕವ್ಯಾಪಾರಿಗಳೂ ಯೋಗ್ಯ ಕಮಿಶನು ಕೊಡಲಾಗುವದು.

ಗೋ. ಅ. ಜೋಗಳೇಕರ,
ಸ್ಕೂಲ್‌ಮಾಸ್ತರ, ಗದಗ ಮ್ಯುನಿಸಿಪಾಲಿಟಿ, ಗದಗ.

ಶ್ರೀ ಮೋಡಕಕೃತ

ಮಹಾರಾಷ್ಟ್ರ-ಇಂಗ್ಲಿಷರ ಆಳಿಕೆ

ಅಥವಾ

೬ನೆಯ ಇಯತ್ತೆಯ ಇತಿಹಾಸ

ಬೆಲೆ ೧೦ ಆಣೆ.

ಈ ಮೊದಲು ಶ್ರೀ. ಮೋಡಕ ಇವರು ೫ನೆ ಇಯತ್ತೆಯ ಇತಿಹಾಸವನ್ನು ಬರೆದದ್ದು ಅದು ಸರಕಾರದಿಂದ ಮಂಜೂರಾಗಿದೆ. ಆ ಪುಸ್ತಕದ ರೀತಿಯನ್ನು ಅನುಸರಿಸಿಯೇ ಅವರು ಈ ೬ನೆಯ ಇಯತ್ತೆಯ ಇತಿಹಾಸವನ್ನಾದರೂ ಬರೆದಿರುವರು. ಪ್ರತಿಗಳು ಎಲ್ಲ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯುವವು. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಯೋಗ್ಯ ಕಮಿಶನ್ನು ಕೊಡಲ್ಪಡುವದು.

ವಿಳಾಸ—

ವ್ಯವಸ್ಥಾಪಕ, ವಿದ್ಯಾವಿಲಾಸ ಬುಕ್‌ಡಿಪೋ, ಗದಗ.

Reg. No. B. 2567

ಜಾಹೀರಾತು

ಸರಕಾರದಿಂದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಟೆಕ್ಸ್ಟ ಬುಕ್ಕಾಗಿ ಮಂಜೂರಾದ

ಗಣಿತ ಶಿಕ್ಷಕ

ಲೇಖಕ:—ಹಿರೇಮಠ ಮ್ಯು. ಕನ್ನಡ ಶಾಲಾ ಮಾಸ್ತರ ವಿಜಾಪುರ.

ಈ ಪುಸ್ತಕದಲ್ಲಿ ಕನ್ನಡ ೫, ೬, ೭, ಹಾಗು ವ್ಹ. ಫಾಯಿನಲ್ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಉಪಯೋಗವಾಗುವಂತೆ ಪ್ರತಿಯೊಂದು ಪ್ರಕರಣದಲ್ಲಿ ವ್ಯವಹಾರಿಕ ಲೆಕ್ಕಗಳನ್ನೂ, ವಾರ್ಲೋನ, ಕ್ಯಾಶ ಸರ್ಟಿಫಿಕೇಟು ಮುಂತಾದ ಪ್ರಚಲಿತ ಲೇವ್ವಗಳ ಲೆಕ್ಕಗಳನ್ನೂ ಹಾಕಿದೆ. ಮೊದಲು ಮಾದರಿಗಾಗಿ ಒಂದು ಲೆಕ್ಕವನ್ನು ಬಿಡಿಸಿ ತೋರಿಸಿ, ತರುವಾಯ ಪ್ರತಿಯೊಂದು ಅದೇ ಮಾದರಿಯ ಹಲವು ಲೆಕ್ಕಗಳನ್ನು ರೂಢಿಗಾಗಿ ಸೇರಿಸಿದೆ. ಲೆಕ್ಕವು ಮನವಟ್ಟಾಗುವಂತೆ ಈ ಪುಸ್ತಕದಲ್ಲಿ ವಿದ್ಯಾರ್ಥಿಗಳಿಗೆ ಉಪಯೋಗವಾಗುವಷ್ಟೇ ವಿಷಯಗಳನ್ನು ಕೊಟ್ಟಿದ್ದರಿಂದ ಬೆಲೆಯಾದರೂ ಕಡಿಮೆಯಾಗಿ ಪ್ರತಿಯೊಬ್ಬರು ಸಂಗ್ರಹಿಸಲು ತಕ್ಕದ್ದಾಗಿದೆ. ಬೆಲೆ ೧೪ ಆಣೆ.

ಪುಸ್ತಕಗಳು ದೊರೆಯುವ ಸ್ಥಳ:—

ಬಸಪ್ರಭಯ್ಯ ದುಂಡಯ್ಯ ಹಿರೇಮಠ,
ಮ್ಯು. ಕನ್ನಡ ಶಾಲಾ ಮಾಸ್ತರ ವಿಜಾಪೂರ.

ಮತ್ತು ಎಲ್ಲ ಮುಖ್ಯ ಬುಕ್ಕಶೇಲರರಲ್ಲಿ ಶಿಗುವವು.

ಮಿ. ಸುರಜಭಾನ ಭವಾನಿಪ್ರಸಾದ ಆಲೂರ (ಪಾಂಡೆ) ಇವರು ಧಾರವಾಡ ಸರಕಾರಿ ಹಾಯಸ್ಕೂಲಿನಲ್ಲಿ ಶಿಕ್ಷಕರಾಗಿದ್ದರಷ್ಟೇ. ಇವರ ಚರಿತ್ರವನ್ನು ತಾ. ೧–೧೨–೧೯೩೩ರ ಒಳಗಾಗಿ ಕನ್ನಡದಲ್ಲಿ ಬರೆದು ಕಳಿಸಿದವರಲ್ಲಿ ಮೂವರಿಗೆ ರೂ. ೧೦; ರೂ. ೬; ರೂ. ೪ ಹೀಗೆ ಮೂರು ಇನಾಮುಗಳು, ೧.೧.೩೪ಕ್ಕೆ ಕೊಡಲ್ಪಡುವವು. ಇನಾಮುಗಳನ್ನು ನಿರ್ಣಯಿಸುವ ಪೂರ್ಣ ಅಧಿಕಾರವು ಕೆಳಗೆ ಸಹಿ ಮಾಡಿದವರಿಗೆ ಇರುವದು.

ಚಂ. ಸು. ಪಾಂಡೆ, ರಿಟಾಯರ್ಡ
ಪ್ರೋಫೆಸರ, ಶಿವಮೊಗ್ಗಾ.

ಸ್ಯಾಂಪಲ್] [ಫುಕ್ಕಟೆ

ಉತ್ತಮ ಮಸೀ ಚೀಟುಗಳು

ನೀಲೀಕಪ್ಪು, ಕೆಂಪು, ಜಾಂಬಳ ಮಸಿಯ ಚೀಟುಗಳು ಈ ಕಂಪನಿಯು ಬಹಳ ಜನರಿಂದ ಶಿಫಾರಸ ಪಡೆದು ಮೆಡಲ್ಲುಗಳನ್ನು ಸಂಪಾದಿಸಿರುತ್ತದೆ.

ದರಗಳು

೧೦೦	ಚೀಟುಗಳಿಗೆ	೦—೨—೦
೫೦೦	,,	೧—೧೪—೦
೧೦೦೦	,,	೩—೦—೦
೧೦೦೦೦	,,	೨೭—೮—೦ (ರೇಲ್ವೆ ಫ್ರೀ)

ಕೆಜ್ಜಿನ ಮಾಹಿತಿ ಬಗ್ಗೆ ಪತ್ರವ್ಯವಹಾರಮಾಡಿರಿ

ಕರ್ನಾಟಕ ಇಂಕ ಕಂಪನಿ,
ಬಾಗಲಕೋಟೆ

Reg. No. B. 2567

ಕನ್ನಡ

ಪ್ರಾಥಮಿಕ ಶಿಕ್ಷಣ

(ಇದರಲ್ಲಿ ಕನ್ನಡ ಶಾಲಾಪತ್ರಿಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

Kannada Prathamik Shikshana

— OCTOBER 1933 —

ಸಂಪಾದಕ— ವೆಂಕಟೇಶ ನರಸಿಂಗರಾವ ಮುಗದಾಳ ಬಿ. ಎ.,

ಸಂಪುಟ ೭೦] ಅಕ್ಟೋಬರ ೧೯೩೩ [ವರ್ಷ ೫ ಸಂ. ೭

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ	ಪುಟ
೧.	ಶ್ರೀ. ಕೆ. ಎಸ್. ವಕೀಲ ಎಮ್. ಈಡಿ; ಎಫ್. ಆರ್. ಜಿ. ಎಸ್. ಐ. ಈ. ಎಸ್. ಎ. ಇ. ದ. ಭಾ.	೧
೨.	ಗುರುಕುಲಗಳ ಪರಂಪರೆ	೧೩
೩.	ಮಾನಸಶಾಸ್ತ್ರ	೧೫
೪.	ಬ್ರಿಟ್ಮೇ ಜನರು	೨೩
೫.	ಪ್ರಕಟನೆ	೩೧

Printed by K. R. Bhise at the Karnatak Printing Works, Dharwar
& Published by V. N. Magdal, B. A.,
Head Master, Training School, Dharwar, at his Office.

ಶ್ರೀಯುತ ಕೃಷ್ಣಲಾಲ ಎಸ್. ವಕೀಲ,

ಎಮ್.ಈಡಿ., ಎಫ್.ಆರ್.ಜಿ.ಎಸ್., ಐ.ಈ.ಎಸ್.,

ಎಜ್ಯುಕೇಷನಲ್ ಇನ್ಸ್‌ಪೆಕ್ಟರ್, ದ. ಭಾಗ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:--ವೆಂಕಟೇಶ ನರಸಿಂಗರಾವ ಮುಗದಾಳ, ಬಿ. ಎ.,

ಸಂಪುಟ ೨೦ ||| ಅಕ್ಟೋಬರ ೧೯೩೩ ||| ವರ್ಷ ೬ ಸಂ. ೭

ಶ್ರೀಯುತ ಕೃಷ್ಣಲಾಲ ಎಸ್. ವಕೀಲ,

ಎಮ್. ಈಡಿ; ಎಫ್. ಆರ್. ಜಿ. ಎಸ್. ಐ. ಈ. ಎಸ್.

ಎಜ್ಯುಕೇಶನ್ ಇನ್ಸಸ್ಪೆಕ್ಟರ, ದಕ್ಷಿಣಭಾಗ.

ಶ್ರೀಯುತ ಕೃಷ್ಣಲಾಲರು ಇಸವಿಸನ್ ೧೮೭೮ರಲ್ಲಿ ಸುರತದಲ್ಲಿ ಹುಟ್ಟಿದರು; ಹಾಗೂ ಅಲ್ಲಿಯ ೬ನೆಯ ನಂಬರಿನ ಗುಜರಾಥಿ ಮುನಸಿಪಲ್ ಸಾಲೆಯಲ್ಲಿ ಇವರ ಪ್ರಾಥಮಿಕ ಶಿಕ್ಷಣವು ಪೂರ್ಣವಾದ ಬಳಿಕ, ಅದೇ ಊರ ಗವ್ಹರ್ನಮೆಂಟ ಹಾಯಸ್ಕೂಲಿನಲ್ಲಿ ಇಂಗ್ಲಿಷ ಅಭ್ಯಾಸವನ್ನು ಮಾಡಿದರು. ೧೮೯೨-೧೮೯೫ರ ವರೆಗೆ ಅಲ್ಲಿ ಇವರಿಗೆ ಸರಕಾರದ ಶಿಷ್ಯವೃತ್ತಿಯು ದೊರೆಯುತ್ತಿತ್ತು. ೧೮೯೫ರಲ್ಲಿ ಇವರು ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಪಾಸಾಗಿ, ಮುಂದಿನ ಶಿಕ್ಷಣಕ್ಕಾಗಿ ಮುಂಬಯಿಯ ಎಲ್ಫಿನ್‌ಸ್ಟನ್ ಕಾಲೇಜವನ್ನು ಸೇರಿದರು. ಈ ಉಚ್ಚ ಶಿಕ್ಷಣಾಲಯದಲ್ಲಿಯೂ ಇವರಿಗೆ ಮಹಾರಾಜ ಗಾಯಕವಾಡರವರ ಶಿಷ್ಯವೃತ್ತಿಯು ದೊರೆತಿತು; ಇವರು ಮುಂಬಯಿಯಲ್ಲಿ ಗೋಕುಲದಾಸ ತೇಜಪಾಲರವರ ಫ್ರೀ ಬೋರ್ಡಿಂಗ ಸ್ಕೂಲಿನಲ್ಲಿ ಫ್ರೀ ಬೋರ್ಡರರಾಗಿ ಸೇರಿಸಿಕೊಳ್ಳಲ್ಪಟ್ಟು ಅಲ್ಲಿಯೇ ೧೮೯೬ ರಿಂದ ೧೮೯೯ರ ವರೆಗೆ ಇದ್ದರು. ೧೮೯೯ರಲ್ಲಿ ಇವರು ಬಿ. ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಈ ಪರೀಕ್ಷೆಗೆ ಇವರು ಇಂಗ್ಲಿಷ ಹಾಗೂ ಸಂಸ್ಕೃತ ಭಾಷೆಗಳನ್ನು ಐಚ್ಛಿಕ ವಿಷಯಗಳಾಗಿ ತೆಗೆದುಕೊಂಡಿದ್ದರು. ೧೯೦೦ರಲ್ಲಿ ಅಂದರೆ ಗ್ರ್ಯಾಜುಏಟರಾದಕೂಡಲೆ ಇವರಿಗೆ ಮುಂಬಯಿಯ ಗೋಕುಲದಾಸ ತೇಜಪಾಲ ಹಾಯಸ್ಕೂಲಿನಲ್ಲಿ ಶಿಕ್ಷಕರ ಕೆಲಸವು

ದೊರೆತಿತು. ೧೯೦೧ರಲ್ಲಿ ಇವರು ಮುಂಬಯಿಯ ಭರಡಾ ನ್ಯೂ ಹಾಯಸ್ಕೂಲಿನಲ್ಲಿ ಶಿಕ್ಷಕರಾಗಿ ಕೆಲಸಮಾಡಿದರು. ೧೯೦೨ರಲ್ಲಿ ಕೆಲವು ತಿಂಗಳವರೆಗೆ ಇವರು ಮುಂಬಯಿಯ ಪ್ರಸಿದ್ಧ ಶಾಸ್ತ್ರಜ್ಞರಾದ ಪ್ರೊಫೆಸರ ಟಿ. ಕೆ. ಗಜ್ಜರ ಇವರ ಸೆಕ್ರೆಟರಿ ಕೆಲಸವನ್ನು ಕೈಕೊಂಡರು. ಈ ಸಮಯದಲ್ಲಿ ಇವರಿಗೆ ಮುಂಬಯಿಯ ಹವೆಯು ತಡೆಯದಾಯಿತು. ಆದ್ದರಿಂದ ಜೂನ ೧೯೦೨ರಲ್ಲಿ ಇವರು ಮುಂಬಯಿ ಪಟ್ಟಣವನ್ನು ಬಿಡಬೇಕಾಯಿತು. ಆಗ ಸುರತದಲ್ಲಿರುವ ಯುನಿಯನ್ ಹಾಯಸ್ಕೂಲಿನಲ್ಲಿ ಇವರಿಗೆ ಶಿಕ್ಷಕರ ಕೆಲಸವು ಸಿಕ್ಕಿತು. ಜುಲೈ ೧೯೦೩ರಲ್ಲಿ ಸರಕಾರದ ಶಿಕ್ಷಣಖಾತೆಯಲ್ಲಿ ಇವರಿಗೆ ಮೊದಲು ನವಕರಿಯು ದೊರೆತಿತು. ಅಹಮ್ಮದಾಬಾದದ ಗವರ್ನಮೆಂಟ ಹಾಯಸ್ಕೂಲಿನಲ್ಲಿ ಇವರು ಶಿಕ್ಷಕರಾಗಿ ನಿಯಮಿಸಲ್ಪಟ್ಟರು. ಸಪ್ಟಂಬರದಲ್ಲಿ ಆಗ ಉತ್ತರಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರಾದ ಮೆ. ಲೋರಿ ಸಾಹೇಬರು ಆ ಸಾಲೆಯ ವಾರ್ಷಿಕ ತಪಾಸಣಿಗೆ ಬಂದಾಗ ಇವರನ್ನು ಕಂಡು, ಕೂಡಲೇ ತಮ್ಮ ಕಚೇರಿಯಲ್ಲಿ ಕಾರಕೂನರ ಒಂದು ಸ್ಥಳವನ್ನು ಇವರಿಗೆ ಕೊಟ್ಟರು. ಮೂರು ವರುಷಗಳವರೆಗೆ ಇವರು ಅವರ ಬಳಿಯಲ್ಲಿಯೇ ಕೆಲಸ ಮಾಡುತ್ತಿದ್ದರು. ೧೯೦೬ರಲ್ಲಿ ಲೋರಿ ಸಾಹೇಬರು ಇವರನ್ನು ಅಹಮ್ಮದಾಬಾದದ ಅಸಿಸ್ಟಂಟ ಡೆಪ್ಯುಟಿ ಎಜ್ಯುಕೇಶನಲ್ ಇನಸ್ಪೆಕ್ಟರರಾಗಿ ನಿಯಮಿಸಿದರು. ೧೯೦೭ರಲ್ಲಿ ಅಂದರೆ ಒಂದು ವರುಷದೊಳಗೆ ಅಹಮ್ಮದಾಬಾದದ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜಿಗೆ ಇವರ ಬದಲಿಯಾಯಿತು. ಅಲ್ಲಿ ಮೂರುವರೆ ವರ್ಷಗಳವರೆಗೆ ಪ್ರಾಥಮಿಕ ಶಿಕ್ಷಿಕೆಯರನ್ನು ಕಲಿಸುವ ಕೆಲಸದಲ್ಲಿ ಕುಶಲರನ್ನಾಗಿ ಮಾಡುವ ಕಾರ್ಯಭಾರವು ಇವರ ಮೇಲೆ ಬಿತ್ತು. ೧೯೧೧ರಲ್ಲಿ ಇವರು ಮತ್ತೆ ಅಸಿಸ್ಟಂಟ ಡೆಪ್ಯುಟಿ ಇನಸ್ಪೆಕ್ಟರರಾಗಿ ಪಂಚಮಹಾಲ್ಸ ಹಾಗೂ ರೇವಾಕಾಂಠಾದಲ್ಲಿ ಕೆಲಸ ಮಾಡಿದರು. ಹಾಗು ಆ ಅವಧಿಯಲ್ಲಿ ಆ ಪ್ರದೇಶಗಳ ಭೂಗೋಲವೊಂದನ್ನು ಬರೆದರು. ಆಗ ಇವರು ತಮ್ಮ ಕೆಲಸವನ್ನು ಮನಮುಟ್ಟಿ ಮಾಡಿದ್ದಲ್ಲದೆ ಪ್ರವಾಸದ ಸಮಯದಲ್ಲಿ ಅಲ್ಲಿರುವ ಭಿಲ್ಲ ಜನರ ಹಾಡುಗಳನ್ನು ಪ್ರಯಾಸದಿಂದ ಶೇಖರಿಸಿದರು. ಭಿಲ್ಲ ಜನರ ಜನಪದ ಸಾಹಿತ್ಯವನ್ನು ಈ ಮೇರೆಗೆ ಸಂಗ್ರಹಿಸಿದ ಮೊದಲಿನ ಮಾನವು ಇವರಿಗೆ ಸಂದಿತು. ೧೯೧೫ರಲ್ಲಿ ಇವುಗಳನ್ನು ಪ್ರಕಟಿಸಲಾಯಿತು. ಸ.ಮಾ. ಆಟೋ ರಾಥಫೀಲ್ಡ ಐ. ಸಿ. ಎಸ್. ಎಂಬ ಸಾಹೇಬರು ಜನಪದ ಸಾಹಿತ್ಯ ಪ್ರಿಯರಾಗಿದ್ದರು. ಇವರೂ ಜಿಲ್ಹೆಯ ಇತರ ಅಧಿಕಾರಿಗಳೂ ಈ ಕೆಲಸಕ್ಕಾಗಿ ವಕೀಲಸಾಹೇಬರನ್ನು ಅಭಿನಂದಿಸಿದರು. ೧೯೧೨ರಲ್ಲಿ ಇವರು ಸುರತ ಜಿಲ್ಲೆಯ ಅಸಿಸ್ಟಂಟ ಡೆಪ್ಯುಟಿಯವರಾದರು. ೧೯೧೪ರಲ್ಲಿ ಡಿರೆಕ್ಟರ

ಆಫ್ ಪಬ್ಲಿಕ ಇನ್ಸಟ್ರಕ್ಶನ್‌ರವರ ಆಫೀಸಿನ ಸುಪರಿಂಟೆಂಡೆಂಟರಾಗಿ ಇವರು ನಿಯಮಿಸಲ್ಪಟ್ಟರು. ೧೯೧೭ರಲ್ಲಿ ಇವರು ಅದೇ ಆಫೀಸಿನ ಹೆಡ್ ಅಸಿಸ್ಟಂಟರಾದರು. ೧೯೧೮ರಲ್ಲಿ ಸರಕಾರದವರು ಮುಂಬಯಿ ಇಲಾಖೆಯ ಟ್ರೇನಿಂಗ ಸ್ಕೂಲುಗಳ ಇನಸ್ಪೆಕ್ಟರರ ಜಾಗೆಯನ್ನು ಹೊಸದಾಗಿ ಆರಂಭಿಸಿದರು. ಹಾಗೂ ಆ ಜಾಗೆಯಲ್ಲಿ ವಕೀಲಸಾಹೇಬರನ್ನು ನಿಯಮಿಸಿದರು. ಆಗ ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜುಗಳಿಲ್ಲದ ಪ್ರತಿಯೊಂದು ಜಿಲ್ಹೆಯಲ್ಲಿ ಟ್ರೇನಿಂಗ ಸ್ಕೂಲುಗಳನ್ನು ಸ್ಥಾಪಿಸುವ ಕಾರ್ಯಭಾರವು ವಕೀಲಸಾಹೇಬರಮೇಲೆ ಬಿತ್ತು. ವಿವಿಧವೂ ವಿಲಕ್ಷಣವೂ ಆದ ಪರಿಸ್ಥಿತಿಗಳುಳ್ಳ ಮುಂಬಯಿ ಇಲಾಖೆಯ ಬೇರೆ ಬೇರೆ ಜಿಲ್ಲೆಗಳಲ್ಲಿ ಇವರು ೨೧ ಟ್ರೇನಿಂಗ ಸ್ಕೂಲುಗಳನ್ನು ತೀವ್ರವಾಗಿ ಸ್ಥಾಪಿಸಿದ್ದಲ್ಲದೆ ಆ ಸಂಸ್ಥೆಗಳಲ್ಲಿ ಶಿಕ್ಷಕರಿಗೆ ಕೊಡುವ ಶಿಕ್ಷಣವು ಮೇಲ್ತರದ್ದಾಗುವ ಏರ್ಪಾಡುಗಳನ್ನು ಮಾಡಿ ಯಶಸ್ವಿಯಾದರು. ವಿದ್ಯಾ ಖಾತೆಯವರು ಪ್ರಕಟಪಡಿಸಿದ “ಪ್ರಕೃತಿ ವಿಮರ್ಶೆ ಹಾಗು ಶಾಲೆಯ ತೋಟಗಳು” ಈಬಗ್ಗೆ “ದೇಶಭಾಷೆಯ ಶಾಲೆಗಳ ಶಿಕ್ಷಕರಿಗಾಗಿ ಸೂಚನಗಳು” ಎಂಬ ಶಿಕ್ಷಣ ವಿಷಯಕ ಗ್ರಂಥವನ್ನು ಆಗ ಇವರು ರಚಿಸಿದರು.

೧೯೨೨ರಲ್ಲಿ ಇವರು ಇಂಗ್ಲಂಡ ಹಾಗೂ ಯುರೋಪ ಖಂಡದ ಇತರ ಸುಧಾರಿಸಿದ ದೇಶಗಳ ಶಿಕ್ಷಣ ಪದ್ಧತಿಗಳನ್ನು ಅಭ್ಯಾಸಿಸುವ ಉದ್ದೇಶದಿಂದ ರಜೆಯನ್ನು ಪಡೆದು ಪಾಶ್ಚಾತ್ಯ ದೇಶಗಳ ಕಡೆಗೆ ಪ್ರಯಾಣವನ್ನು ಬೆಳೆಸಿದರು. ಅದೇ ವರುಷ ಇಂಗ್ಲಂಡದೊಳಗಿನ ಲೀಡ್ಸ ವಿಶ್ವ ವಿದ್ಯಾಪೀಠದಲ್ಲಿ ನಿಂತು ಅಭ್ಯಾಸಮಾಡಿ ಪರೀಕ್ಷೆ ಕೊಟ್ಟು ೧೯೨೩ರಲ್ಲಿ ಎಮ್. ಈಡಿ ಅಂದರೆ ಮಾಸ್ಟರ ಆಫ್ ಎಜ್ಯುಕೇಶನ್ ಎಂಬ ಡಿಗ್ರಿಯನ್ನು ಪಡೆದರು. ಹಾಗು ಆ ವರುಷ ಲಂಡನ್ ಪಟ್ಟಣದಲ್ಲಿ ನೆರೆದ ಇಂಪೀರಿಯಲ್ (ಸಾಮ್ರಾಜ್ಯದ) ಶಿಕ್ಷಣ ಸಂಮೇಲನದಲ್ಲಿ ಮುಂಬಯಿ ಸರಕಾರದಪರವಾಗಿ ಪ್ರತಿನಿಧಿಗಳಾದರು. ಹಿಂದುಸ್ಥಾನದ ಹಲವು ಪ್ರಾಂತಗಳಿಂದ ಹೋದ ಪ್ರತಿನಿಧಿಗಳಲ್ಲಿ ವಕೀಲ ಸಾಹೇಬರೊಬ್ಬರೇ ಏತದ್ದೇಶೀಯರಿದ್ದರೆಂಬದನ್ನು ಲಕ್ಷ್ಯದಲ್ಲಿಡುವಂತಿದೆ. ಆ ಸಂಮೇಲನದಲ್ಲಿ ಔದ್ಯೋಗಿಕ ಪ್ರವೃತ್ತಿಯ ಶಿಕ್ಷಣವನ್ನು ಸಾಲೆಗಳಲ್ಲಿ ಕೊಡಬಹುದೋ ಎಂಬ ಪ್ರಶ್ನವು ಹೊರಟಾಗ ಉಳಿದ ಎಲ್ಲ ಸಭಾಸದರು ವಿರುದ್ಧ ಅಭಿಪ್ರಾಯವನ್ನು ಕೊಟ್ಟರೂ ವಕೀಲಸಾಹೇಬರು, ಹುಡುಗರು ೧೧ ಇಲ್ಲವೆ ೧೨ ವರುಷದವರಾದಕೂಡಲೆ ಅವರ ಶಿಕ್ಷಣದಲ್ಲಿ ಔದ್ಯೋಗಿಕ ಪ್ರವೃತ್ತಿಯನ್ನು ಜಾಗ್ರಗೊಳಿಸುವ ಶಿಕ್ಷಣವನ್ನು ಕೊಡಲೇಬೇಕೆಂದು ಪ್ರತಿಪಾದಿಸಿದರು. ೧೯೨೩ಯ ಇಸವಿಯ ಅಗಸ್ಟತಿಂಗಳಲ್ಲಿ ಇವರು ಮರಳಿ ಹಿಂದುಸ್ಥಾನಕ್ಕೆ ಬಂದ

ಕೂಡಲೆ, ಮುಂಬಯಿ ಸರಕಾರದವರು ಇವರನ್ನು ಇಂಡಿಯನ್ (ವರಿಷ್ಠ) ಎಜ್ಯು
ಕೇಶನ ಸರ್ವಿಸದಲ್ಲಿ ಸೇರಿಸಿಕೊಂಡು ಉತ್ತರ ಭಾಗದ (ಗುಜರಾಥ) ಎಜ್ಯುಕೇ
ನಲ್ ಇನ್ಸಪೆಕ್ಟರರಾಗಿ ನಿಯಮಿಸಿದರು. ೧೯೨೪ರಲ್ಲಿ ಹಿಂದುಸ್ಥಾನದಲ್ಲಿ ಲೀ
ಕಮಿಶನ್ನವು ಕೂಡಿತ್ತು. ಅದರಮುಂದೆ ಸಾಕ್ಷಿಕೊಡಲಿಕ್ಕೆ ವಕೀಲ ಸಾಹೇ
ಬರು ಆರಿಸಲ್ಪಟ್ಟರು. ಅದೇ ವರುಷ ಮುಂಬಯಿ ವಿಶ್ವವಿದ್ಯಾಲಯದವರು
ಇವರನ್ನು ಮುಂಬಯಿ ವಿಶ್ವವಿದ್ಯಾಲಯದ ಫೆಲೋ ಎಂದು ಆರಿಸಿಕೊಂಡರು.
ವಿಶ್ವವಿದ್ಯಾಲಯದಲ್ಲಿ ಬೇರೆ ಬೇರೆ ಪರೀಕ್ಷೆಗಳ ಅಭ್ಯಾಸ ಪತ್ರಿಕೆಗಳನ್ನೂ
ಪರೀಕ್ಷಾ ಕ್ರಮಗಳನ್ನೂ ನಿರ್ಣಯಿಸಲಿಕ್ಕೆ ತಜ್ಞರ ಹಲವು ಕಮಿಟಿಗಳಿರು
ವವು. ಇವುಗಳಲ್ಲಿ ಶಿಕ್ಷಣ ಹಾಗೂ ಗುಜರಾಥಿ ಭಾಷೆಯ ಬೋರ್ಡ ಆಫ
ಸ್ಟಡೀಜ (ವಿಷಯನಿಯಾಮಕ ಸಮಿತಿ) ಎಂಬ ಸಮಿತಿಗಳಲ್ಲಿ ಇವರನ್ನು ತೆಗೆದು
ಕೊಳ್ಳಲಾಯಿತು. ಇದಲ್ಲದೆ ಸ್ಕೂಲ ಲೀವಿಂಗ ಪರೀಕ್ಷೆಯ ಬೋರ್ಡಿನಲ್ಲಿಯೂ
ಇವರನ್ನು ಮೆಂಬರರಾಗಿ ಮಾಡಿದರು. ಆ ಸಮಯದಲ್ಲಿ ಮ್ಯಾಟ್ರಿಕ್ಯುಲೇಶನ್
ಪರೀಕ್ಷೆಯ ಭೂಗೋಲವಿಷಯದ ಅಭ್ಯಾಸ ಕ್ರಮವನ್ನು ನಿರ್ಣಯಿಸಲು
ಒಂದು ವಿಶಿಷ್ಟ ತಜ್ಞರ ಕಮಿಟಿಯು ನೇಮಿಸಲ್ಪಟ್ಟಿತು. ಆ ಕಮಿಟಿಯ
ಚೇರಮನ್ನರಾಗಿ ಕೆಲಸಮಾಡುವ ಬಹುಮಾನವು ವಕೀಲಸಾಹೇಬರಿಗೆ ಕೊಡ
ಲ್ಪಟ್ಟಿತು. ಮುಂದೆ ಹಲವು ವರ್ಷಗಳವರೆಗೆ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯ
ಭೂಗೋಲ ವಿಷಯದ ಪ್ರಶ್ನ ಕಾಗದವನ್ನು ತೆಗೆಯುವ ಪರೀಕ್ಷಕರ ಮಂಡ
ಲದಲ್ಲಿ ಇವರು ಪ್ರಮುಖರೆಂದು ನಿಯಮಿತರಾದರು. ಶಿಕ್ಷಣಕಲೆ ಹಾಗು
ಶಾಸ್ತ್ರಗಳಲ್ಲಿ ಮಾಧ್ಯಮಿಕ ಶಿಕ್ಷಕರ ಯೋಗ್ಯತೆಯನ್ನು ನಿರ್ಣಯಿಸಿ ಅವರಿಗೆ
ಬಿ. ಟಿ. ಎಂಬ ಪದವಿಯನ್ನು ವಿಶ್ವ ವಿದ್ಯಾಲಯದವರು ಕೊಡುವರು. ಈ
ಪರೀಕ್ಷೆಗೆ ವಕೀಲ ಸಾಹೇಬರು ಪರೀಕ್ಷಕರಾಗಿ ನಿಯಮಿಸಲ್ಪಟ್ಟರು. ವಿಶ್ವ
ವಿದ್ಯಾಲಯದವರು ಕಾಲಕಾಲಕ್ಕೆ ತಮ್ಮ ಆಧೀನದಲ್ಲಿರುವ ಮಾಧ್ಯಮಿಕ
(ಹಾಯಸ್ಕೂಲ) ಶಾಲೆಗಳ ಇನ್ಸಪೆಕ್ಶನ್ ಮಾಡಲಿಕ್ಕಾಗಿ ಯುನಿವ್ಹರಸಿಟಿ
ಇನ್ಸಪೆಕ್ಶನ್ ಕಮಿಟಿಗಳನ್ನು ನಿಯಮಿಸುವದುಂಟು. ಮುಂಬಯಿಯಲ್ಲಿರುವ
ಮಾಧ್ಯಮಿಕ ಶಿಕ್ಷಕರ ಟ್ರೇನಿಂಗ ಕಾಲೇಜದ ಇನ್ಸಪೆಕ್ಶನ್ನದಬಗ್ಗೆಯೂ
ಇಂಥ ಕಮಿಟಿಗಳು ನಿಯಮಿತವಾಗುವವು. ಇವೆರಡೂಬಗೆಯ ಕಮಿಟಿಗಳಲ್ಲಿ
ವಕೀಲ ಸಾಹೇಬರು ಹಲವುಸಾರಿ ಕೆಲಸ ಮಾಡಿರುವರು. ಸರಕಾರದವರು
ಪ್ರಾಂತಿಕ ಸರ್ವಿಸ ಎಂಬ ಮೇಲ್ತರದ ಅಧಿಕಾರದ ನವಕರಿಗಳಿಗೆ ನಿಯಮಿ
ಸಲ್ಪಡುವವರನ್ನು ಆರಿಸಲಿಕ್ಕಾಗಿ ಪ್ರಾವಿನ್ಸಿಯಲ್ ಸಿಲೆಕ್ಶನ್ ಬೋರ್ಡ ಎಂಬ
ಸಮಿತಿಯನ್ನು ಏರ್ಪಡಿಸಿರುವದುಂಟು. ಈ ಕಮಿಟಿಯಲ್ಲಿ ಕೆಲಸ ಮಾಡುವ

ಬಹುಮಾನವೂ ವಕೀಲ ಸಾಹೇಬರಿಗೆ ಸಂದಿತು. ೧೯೨೭ರಲ್ಲಿ ಜೂನ-ಜುಲೈ ತಿಂಗಳುಗಳಲ್ಲಿ ಲಂಡನ ಪಟ್ಟಣದಲ್ಲಿ ಸಾಮ್ರಾಜ್ಯ ಶಿಕ್ಷಣ ವಿಷಯದ ಪ್ರಶ್ನೆಗಳನ್ನು ಚರ್ಚಿಸಲಿಕ್ಕಾಗಿ ಮೂರನೆಯ ಇಂಪೀರಿಯಲ್ ಎಜ್ಯುಕೇಶನಲ್ ಕಾನ್ಫರನ್ಸ ಎಂಬ ಸಂಮೇಲನವು ಕೂಡಿತ್ತು. ಈ ಸಂಧಿ ಸಾಧಿಸಿ ವಕೀಲ ಸಾಹೇಬರು ರಜೆಯನ್ನು ಪಡೆದುಕೊಂಡು ಸುಧಾರಿಸಿದ ರಾಷ್ಟ್ರಗಳ ಶಿಕ್ಷಣ ಯೋಜನೆಗಳನ್ನು ಮಾರ್ಮಿಕವಾಗಿ ಅಭ್ಯಾಸಿಸುವ ಉದ್ದೇಶದಿಂದ ಮೊದಲು ಇಂಗ್ಲಂಡಕ್ಕೆ ಹೋಗಿದ್ದರು. ಈ ಸಾರೆಯೂ ಮುಂಬಯಿ ಸರಕಾರದವರು ಆ ಸಭೆಯಲ್ಲಿ ತಮ್ಮ ಪ್ರತಿನಿಧಿಯಾಗಿ ಕೆಲಸಮಾಡುವಂತೆ ವಕೀಲ ಸಾಹೇಬರನ್ನು ಆರಿಸಿಕೊಟ್ಟರು. ಆ ಕಾಲಕ್ಕೆ ಲಂಡನ್ ಪಟ್ಟಣದ ಹೆಸರಾದ ವಿಶ್ವ ವಿದ್ಯಾಲಯದ ಶತಸಾಂವತ್ಸರಿಕ ಸಮಾರಂಭವು ನೆರವೇರಿತು. ಇದರಲ್ಲಿ ಮುಂಬಯಿಯ ವಿಶ್ವವಿದ್ಯಾಲಯದ ಪರವಾಗಿ ವಕೀಲಸಾಹೇಬರು ಆಮಂತ್ರಿತರಾಗಿದ್ದರು. ೧೯೨೭ನೆಯ ಇಸವಿಯ ಅಗಸ್ಟ ತಿಂಗಳಲ್ಲಿ ಸ್ವಿಝರಲಂಡದಲ್ಲಿಯ 'ಲೊಕಾರನೋ' ಎಂಬ ಪಟ್ಟಣದಲ್ಲಿ ನ್ಯೂ ಎಜ್ಯುಕೇಶನ್ ಫೆಲೋಶಿಪ್ ವರ್ಲ್ಡ ಕಾನ್ಫರನ್ಸ ಎಂಬ ಸಂಮೇಲನವು ಜರುಗಿತು. ಅಲ್ಲಿ ಭೂಮಂಡಲದ ಹಲವು ದೇಶಗಳಿಂದ ಶಿಕ್ಷಣಜ್ಞರು ಕಲೆತಿದ್ದರು. ಆ ಸಭೆಗೆ ವಕೀಲಸಾಹೇಬರು ಹೋಗಿ ಹೆಸರಾದ ಶಿಕ್ಷಣಜ್ಞರ ಪರಿಚಯವನ್ನು ಮಾಡಿಕೊಂಡರು. ಅಲ್ಲಿಂದ ಅವರು ಅಮೇರಿಕಾ ಖಂಡಕ್ಕೆ ಹೋದರು. ಅಲ್ಲಿ ಕೋಲಂಬಿಯಾದ ವಿಶ್ವವಿದ್ಯಾಲಯದ ಹೆಸರಾದ ಟ್ರೇನಿಂಗಕಾಲೇಜವನ್ನು ನೋಡಿ ಅಲ್ಲಿಯ ಶಿಕ್ಷಣ ವ್ಯವಸ್ಥೆಯನ್ನು ಅಭ್ಯಾಸಿಸಿದರು. ನ್ಯೂಯಾರ್ಕ ಪಟ್ಟಣದಲ್ಲಿಯ ಶಿಕ್ಷಣ ಸಂಸ್ಥೆಗಳನ್ನೂ, ಚಿಕಾಗೋ ವಿಶ್ವವಿದ್ಯಾಲಯದ ಶಿಕ್ಷಕ ಶಿಕ್ಷಣಾಲಯಗಳ ಕಾರ್ಯಕ್ರಮಗಳನ್ನೂ, ವಿಸ್ಕಾನಸಿನ ಹಾಗೂ ಸೌಥಕ್ಯಾಲಿಫೋರ್ನಿಯದ ಶಿಕ್ಷಣ ಸಂಸ್ಥೆಗಳನ್ನೂ ಬೂಕರ ಟಿ ವಾಶಿಂಗಟನ್‌ರೆಂಬ ಹೆಸರಾದ ಪುರುಷರು ಶಿಕ್ಷಣಪಡೆದ ಹಾಂಪಟನ್ ಇನ್‌ಸ್ಟಿಟ್ಯೂಟ ಹಾಗೂ ಅವರು ಸ್ಥಾಪಿಸಿದ ಟಸ್ಕೆಗಿ ಇನ್‌ಸ್ಟಿಟ್ಯೂಟ ಎಂಬ ಶಿಕ್ಷಣಸಂಸ್ಥೆಗಳನ್ನೂ ನೋಡಿದರು. ಡೆಟ್ರಾಯಿಯದಲ್ಲಿ ಹೆಸರಾದ ಫೋರ್ಡ್ಡ ಸಾಲೆಗೆ ಭೆಟ್ಟಿಕೊಟ್ಟರು. ಬಳಿಕ ಕಾನಡಾ ದೇಶಕ್ಕೆ ತೆರಳಿ ಅಲ್ಲಿಯ ಟೋರಂಟೋ ವಿಶ್ವವಿದ್ಯಾಲಯದ ಶತಸಾಂವತ್ಸರಿಕ ಸಮಾರಂಭದಲ್ಲಿ ಮುಂಬಯಿಯ ವಿಶ್ವವಿದ್ಯಾಲಯದ ಪರವಾಗಿ ಹಾಜರಿದ್ದರು. ಮುಂದೆ ಟೋರಂಟೋ ಹಾಗೂ ಅಂಟಾರಿಯೋ ಪ್ರಾಂತಗಳಲ್ಲಿ ಪ್ರವಾಸಮಾಡಿ ಅನೇಕ ಶಿಕ್ಷಣ ಸಂಸ್ಥೆಗಳನ್ನು ಅವಲೋಕನಮಾಡಿದರು. ಅಲ್ಲಿಯ ದೊಡ್ಡ ಪಟ್ಟಣಗಳಲ್ಲಿರುವ ವಿದ್ಯಾಲಯಗಳನ್ನು ಮಾತ್ರ ನೋಡಿ ಸಮಾಧಾನಪೊಂದದೆ ಹಳ್ಳಿಯ

ಶಾಲೆಗಳನ್ನು ಸಹ ನೋಡಿದರು. ಕಾನಡಾ ದೇಶದಿಂದ ಇವರು ಜಪಾನಕ್ಕೆ ಹೋಗಿ ಜಪಾನ ದೇಶದವರ ಶಿಕ್ಷಣಸಂಸ್ಥೆಗಳನ್ನೂ ಶಿಕ್ಷಣ ಯೋಜನೆಗಳನ್ನೂ ಲಕ್ಷ್ಯಪೂರ್ವಕವಾಗಿ ಅಭ್ಯಾಸಿಸಿದರು. ಆಬಳಿಕ ಶಾಂಘಾಯಿ, ಹಾಂಗಕಾಂಗ ಗಳನ್ನು ನೋಡಿಕೊಂಡು ಫಿಲಿಫಾಯಿನ ನಡುಗಡ್ಡೆಗಳಿಗೆ ಹೋದರು. ಈ ದ್ವೀಪ ಗಳಲ್ಲಿ ಹೊಸ ಶಿಕ್ಷಣದ ಕುರುಹುಗಳೂ ವ್ಯವಸ್ಥೆಯೂ ಮುಂದುವರಿಯುತ್ತಿದ್ದವು. ಅಲ್ಲಿಯ ಶಿಕ್ಷಣಯೋಜನೆಯನ್ನು ಇವರು ಚನ್ನಾಗಿ ಪರೀಶೀಲನಮಾಡಿ ಸಿಂಗಾ ಪುರ ಕೋಲಂಬೋ ಪಟ್ಟಣಗಳ ಮಾರ್ಗವಾಗಿ ೧೯೦೮ರಲ್ಲಿ ಹಿಂದುಸ್ಥಾನಕ್ಕೆ ತಿರುಗಿ ಬಂದು ಮೈಸೂರ ಪ್ರಾಂತದಲ್ಲಿಯ ಶಿಕ್ಷಣ ವ್ಯವಸ್ಥೆಯನ್ನು ನೋಡಿ ಕೊಂಡು ಗುಜರಾಥಕ್ಕೆ ತಲುಪಿದರು. ೧೯೨೮ರಲ್ಲಿ ಇವರನ್ನು ಲಂಡನ್ ರಾಯಲ್ ಜಾಗ್ರಫಿಕಲ್ ಸೋಸಾಯಿಟಿಯುವರು ತಮ್ಮ ಮಂಡಲದ ಫೆಲೋ ಎಂದು ಆರಿಸಿಕೊಂಡರು. ಈ ಮಂಡಲದ ಮೆಂಬರರೆಲ್ಲ ಎಫ್. ಆರ್. ಜಿ. ಎಸ್. ಎಂಬ ಬಹುಮಾನದ ಪದವಿಯನ್ನು ಪಡೆದಿರುವರು. ಆಗ ಇಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣಗಳ ಅಭ್ಯಾಸದಲ್ಲಿ ಹೆಚ್ಚುಕಡಿಮೆಗಳನ್ನು ಮಾಡಿ ಹೊಂದಿ ಕೆಯನ್ನು ಏರ್ಪಡಿಸಲಿಕ್ಕಾಗಿಯೂ ಔದ್ಯೋಗಿಕ ಪ್ರವೃತ್ತಿಯ ಶಿಕ್ಷಣವನ್ನು ಆರಂಭಿಸಲಿಕ್ಕಾಗಿಯೂ ಯೋಜನೆಗಳನ್ನು ಸರಕಾರಕ್ಕೆ ಶಿಫಾರಸು ಮಾಡಲಿ ಕ್ಕಾಗಿ ಒಂದು ಕಮಿಟಿಯು ನಿಯಮಿಸಲ್ಪಟ್ಟಿತು. ಇದರಲ್ಲಿ ವಕೀಲಸಾಹೇ ಬರು ಮೆಂಬರರಾಗಿ ನಿಯಮಿತರಾದರು. ೧೯೨೮ರಲ್ಲಿ ಮುಂಬಯಿ ಸರಕಾರ ದವರು ಇತಿಹಾಸ ಭೂಗೋಲ ವಿಷಯುಗಳ ಶಿಕ್ಷಣವನ್ನು ಏರ್ಪಡಿಸಲಿಕ್ಕಾಗಿ ಏರ್ಪಡಿಸಿದ ಕಮಿಟಿಯಲ್ಲಿಯೂ ವಕೀಲಸಾಹೇಬರ ಸಮಾವೇಶವಾಯಿತು. ಆ ವರುಷ ಸಾಯಮನ್ ಕಮಿಶನ್ನದಪರವಾಗಿ ಹಾರಟಾಗ ಕಮಿಟಿ ಎಂಬ ಸಮಿತಿಯು ಹಿಂದುಸ್ತಾನದ ಶಿಕ್ಷಣವಿಷಯಕ್ಕೆ ಸಂಬಂಧಿಸಿದ ಬಹುವಿಧವಾದ ಮಾಹಿತಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಕಮಿಶನ್‌ದವರಿಗೆ ರಿಪೋರ್ಟ ಮಾಡಲಿಕ್ಕಾಗಿ ನಿಯಮಿಸಲ್ಪಟ್ಟಿತ್ತು. ಈ ಸುಪ್ರಸಿದ್ಧವಾದ ಕಮಿಟಿಯುವರ ಮುಂದೆ ವಕೀಲಸಾಹೇಬರ ಸಾಕ್ಷಿಯಾಯಿತು.

೧೯೨೯ರಲ್ಲಿ ವಕೀಲಸಾಹೇಬರು ದಕ್ಷಿಣಭಾಗದ ಎಜ್ಯುಕೇಶನಲ್ ಇನ್ಸ ಪೆಕ್ಟರರಾಗಿ ಬಂದರು. ಈ ಪರಿಯ ಬಹುವಿಧದ ಶಿಕ್ಷಣಾನುಭವವುಳ್ಳ ಮಹಾ ನುಭಾವರು ನಮ್ಮ ಕನ್ನಡ ಜಿಲ್ಲೆಗಳ ಎಜ್ಯುಕೇಶನಲ್ ಇನ್ಸಪೆಕ್ಟರರಾದದ್ದು ನಮ್ಮೆಲ್ಲರ ಸುದೈವವೆನ್ನಲು ಸಂದೇಹವಿಲ್ಲ. ೧೯೩೦ರಲ್ಲಿ ಇವರು ಅಮೇರಿಕ ದಲ್ಲಿ ವಾಶಿಂಗಟನ್ ಎಂಬಲ್ಲಿರುವ ನ್ಯಾಷನಲ್ ಜಾಗ್ರಫಿಕಲ್ (ಭೂಗೋಲ

ವಿಷಯಕ) ಸೊಸಾಯಟಿಯ ಮೆಂಬರರಾಗಿಯೂ ೧೯೩೩ ರಲ್ಲಿ ರಾಯಲ್ ಸೊಸಾಯಿಟಿ ಆಫ ಟೀಚರ್ಸ ಎಂಬ ಸಂಸ್ಥೆಯ ಮೆಂಬರರಾಗಿಯೂ ಆರಿಸಲ್ಪಟ್ಟರು. ಸದ್ಯಕ್ಕೆ ಇವರು ಮೆಂಬರರಾಗಿ ಕೆಲಸಮಾಡುತ್ತಿರುವ ಕೆಲವು ಸಂಸ್ಥೆಗಳ ಹೆಸರುಗಳನ್ನು ಮುಂದೆ ಕೊಟ್ಟಿರುವೆವು. (೧) ಅಮೇರಿಕೆಯಲ್ಲಿರುವ ವಾಶಿಂಗಟನ್ನದ ನ್ಯಾಶನಲ್ ಎಜ್ಯುಕೇಶನಲ್ ಅಸೋಸಿಯೇಶನ್; (೨) ಶಿಕ್ಷಣವಿಷಯದ ಪ್ರಶ್ನಗಳ ಅಭ್ಯಾಸಕ್ಕಾಗಿ ಏರ್ಪಟ್ಟಿರುವ ಅಮೇರಿಕೆಯಲ್ಲಿರುವ ವಾಶಿಂಗಟನ್ನದ ನ್ಯಾಶನಲ್ ಸೋಸಾಯಿಟಿ (೩) ಇಂಗ್ಲಂಡದಲ್ಲಿರುವ ನ್ಯೂ ಎಜ್ಯುಕೇಶನ್ (ಹೊಸ ಶಿಕ್ಷಣದ) ಫೆಲೋಶಿಪ್ ಎಂಬ ಸಂಸ್ಥೆ (೪) ಇಂಗ್ಲಂಡದಲ್ಲಿರುವ ನರ್ಸರಿ ಸ್ಕೂಲ (ಶಿಶು ಶಾಲೆಗಳ) ಅಸೋಸಿಯೇಶನ್ (೫) ಹಿಂದುಸ್ಥಾನದ ಆಲ್ ಇಂಡಿಯಾ ಫೆಡರೇಶನ್ ಆಫ್ ಟೀಚರ್ಸ ಅಸೋಸಿಯೇಶನ್ಸ ಎಂಬ ಸಂಸ್ಥೆ. ಇಡೀ ಹಿಂದುಸ್ಥಾನಕ್ಕೆ ಸಂಬಂಧಿಸಿದ ಕೊನೆಯ ಸಂಸ್ಥೆಯಲ್ಲಿ ಇವರು ವ್ಹಾಯಿಸ ಪ್ರೆಸಿಡೆಂಟರ ಬಹುಮಾನದ ಒಂದು ಪದವಿಯನ್ನು ಪಡೆದಿರುವರು

ವಕೀಲಸಾಹೇಬರು ಇದೇ ತಿಂಗಳ ೧೨ನೆಯ ತಾರೀಖಿನ ಸಂಜೆಗೆ ಅಧಿಕಾರದಿಂದ ನಿವೃತ್ತರಾಗಿ ಪೆನ್‌ಶನ್ನ ತೆಗೆದುಕೊಳ್ಳುವರು.

ಶಾಸ್ತ್ರಜ್ಞರ ಜೀವನ ಚರಿತ್ರೆಯು ಶಾಸ್ತ್ರಾಭ್ಯಾಸದಲ್ಲಿ ತೊಡಗಿದವರನ್ನು ಹುರುಪುಗೊಳಿಸುವದಷ್ಟೇ. ಶಿಕ್ಷಕರಾಗಿಯೂ ಶಿಕ್ಷಕರ ಕೆಲಸವನ್ನು ನೋಡಿಕೊಳ್ಳುವವರಾಗಿಯೂ ಹೆಸರಾದವರ ಚರಿತ್ರೆಯು ಶಿಕ್ಷಕವೃಂದಕ್ಕೆ ಅನುಕರಣೀಯವು. ಅದರಲ್ಲಿಯೂ ಸಾಮಾನ್ಯ ಶಿಕ್ಷಕರಂತೆ ಸರಕಾರದ ನವಕರಿಯನ್ನು ಕೈಕೊಂಡು ಸರಕಾರದವರು ನಿಯಮಿಸಿದ ಕೆಲಸಗಳಲ್ಲಿ ಮನಸೊಪ್ಪಿ ದುಡಿದು ಆಯಾ ಪರಿಸ್ಥಿತಿಯಲ್ಲಿ ಬಂದ ಎಡರುತೊಡರುಗಳಿಗೆ ಎದೆಗೊಟ್ಟು ಅವುಗಳನ್ನು ಜಯಿಸಿ ಶಿಷ್ಯರಿಂದಲೂ ಸಹವ್ಯವಸಾಯಿಗಳಿಂದಲೂ ಜನರಿಂದಲೂ ಸರಕಾರದವರಿಂದಲೂ ಹೌದೆನಿಸಿಕೊಂಡು, ಅಧಿಕಾರರೂಢರಾದಂದಿನಿಂದ ಅದನ್ನೇ ಅನುಭೋಗಿಸುವದರಲ್ಲಿ ಸಂತುಷ್ಟರಾಗದೆ ಸ್ವಂತ ಸಂಸ್ಕೃತಿಗಾಗಿಯೂ, ದೇಶಹಿತಕ್ಕಾಗಿಯೂ ತಮ್ಮ ಉದ್ಯೋಗಕ್ಕೆ ಸಂಬಂಧಿಸಿದ ಹೆಚ್ಚಿನ ಜ್ಞಾನವನ್ನು ಸಂಪಾದಿಸಲಿಕ್ಕಾಗಿ ಪರದೇಶ ಪ್ರವಾಸಗಳನ್ನು ಕೈಕೊಂಡು, ತಮ್ಮ ಅನುಭವಗಳನ್ನೂ ಅಭಿಪ್ರಾಯಗಳನ್ನೂ ಜನರ ಮುಂದೆಯೂ ಅಧಿಕಾರಿಗಳ ಮುಂದೆಯೂ ಮುಚ್ಚುಮರೆಯಿಲ್ಲದೆ ಹೇಳಿ, ತಮ್ಮ ಕೈಲಾದಮಟ್ಟಿಗೆ ಶಿಕ್ಷಣ ಸುಧಾರಣೆಯನ್ನೂ ಶಿಕ್ಷಕರ ಅಭ್ಯುದಯವನ್ನೂ ಮುಂದುವರಿಸಲಿಕ್ಕೆ ಹೆಣಗಾಡಿ, ಶಿಕ್ಷಕವರ್ಗದಲ್ಲಿ ಸಣ್ಣವರು ದೊಡ್ಡವರು ಎಂಬ ಭೇದವನ್ನೆಣಿಸದೆ ಬಡವರು

ಬಲ್ಲಿದರೆಂಬ ತಾರತಮ್ಯವನ್ನು ಲಕ್ಷ್ಯಕ್ಕೆತಾರದೆ ಎಲ್ಲರೊಡನೆ ಮೀರಿದ ಸಹಾನುಭೂತಿಯಿಂದಲೂ ಅಸಾಮಾನ್ಯವಾದ ಸರಳತೆಯಿಂದಲೂ ಸಲಿಗೆಯಿಂದಲೂ ನಡೆಕೊಂಡು ಶಿಕ್ಷಕವೃಂದದ ಮನ್ನಣೆಗೂ ಮಮತೆಗೂ ಪಾತ್ರರಾದ ಶಿಕ್ಷಣಾಭಿಮಾನಿಗಳಾದ ಈ ಮಹನೀಯರ ಚರಿತ್ರವು ಶಿಕ್ಷಕರಿಗೆ, ಮುಖ್ಯವಾಗಿ ಕಾಲಾನುರೋಧದಿಂದ ಆತ್ಮೋನ್ನತಿ ಲೌಕಿಕಾಭ್ಯುದಯಗಳನ್ನು ಕಾಣದೆ ಎದೆಗುಂದುತ್ತಿರುವ ಪ್ರಾಥಮಿಕ ಶಿಕ್ಷಕರಿಗೆ ಬೋಧಪ್ರದವೂ ಮೇಲಾದ ಅವರ ಉದ್ಯೋಗದಲ್ಲಿ ಆಸಕ್ತಿಯನ್ನುಂಟುಮಾಡುವದೂ ಆಗಿರುವದೆಂದು ನಾವು ನೆರೆ ನಂಬಿದ್ದೇವೆ. ಅದಕ್ಕಾಗಿಯೇ ಇವರ ಸಂಕ್ಷಿಪ್ತ ಚರಿತ್ರೆಯನ್ನು ನಮ್ಮ ವಾಚಕರಿಗಾಗಿ ನಾವು ಕೊಟ್ಟದ್ದಲ್ಲದೆ, ಅದನ್ನು ಕುರಿತು ಸ್ವಲ್ಪ ವಿವರಿಸುತ್ತೇವೆ.

ಇ. ಸ. ೧೯೦೩ ರಲ್ಲಿ ವಕೀಲ ಸಾ॥ ರು ಸರಕಾರದ ನವಕರಿಯಲ್ಲಿ ಸೇರಿದಂದಿನಿಂದ ೧೯೧೮ರಲ್ಲಿ ಅವರು ಇಲಾಖೆಯ ಟ್ರೇನಿಂಗ ಸ್ಕೂಲುಗಳ ಇನ್ಸಪೆಕ್ಟರರಾಗಿ ನಿಯಾಮಿಸಲ್ಪಡುವ ವರೆಗೆ ಸಂದ ಅವಧಿಯು, ಮಹತ್ವದ ಅಧಿಕಾರ ಪದವಿಯು ಪ್ರಾಪ್ತವಾದ ಕೂಡಲೆ ಮಾಡತಕ್ಕ ಕಾರ್ಯಗಳ ಪೂರ್ವ ಸಿದ್ಧತೆಯ ಕಾಲವೆಂದು ನಾವು ಬಗೆಯಬಹುದಾಗಿದೆ. ನವಕರಿಯ ಆರಂಭದಲ್ಲಿಯೇ ಶಿಕ್ಷಣ ಖಾತೆಯ ವ್ಯವಸ್ಥೆಯ ಕಾರ್ಯದಲ್ಲಿ ಇವರಿಂದ ಒಳ್ಳೇ ಕೆಲಸವು ಸುಸೂತ್ರವಾಗಿ ಆಗಬಹುದೆಂದು ಮೆ॥ ಲೋರಿ ಸಾಹೇಬರಿಗೆ ಮನವರಿಕೆಯಾದ ಮೂಲಕವೇ ಇವರನ್ನು ಶಿಕ್ಷಕರಿಂದ ಆಫೀಸಿನ ಕಾರಕೂನರಾಗಿ ಅವರು ಬರಮಾಡಿಕೊಂಡರು. ಆದರೆ ಶಿಕ್ಷಣ ಕಲೆಯಲ್ಲಿ ಇವರಿಗಿದ್ದ ಕುಶಲತೆಯೂ ಪ್ರಾಥಮಿಕ ಶಿಕ್ಷಣವನ್ನು ಸುಧಾರಿಸುವ ಆಸ್ಥೆಯೂ ಇವರಲ್ಲಿ ಪ್ರಬಲವಾಗಿರುವದನ್ನು ಕಂಡು ಆ ಸಾಹೇಬರೇ ಇವರನ್ನು ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜದ ಅಧ್ಯಾಪಕರೆಂದು ಕಳಿಸಬೇಕಾಯಿತು. ಮುಂದೆ ಇವರ ಶಿಕ್ಷಣ ಕೌಶಲ್ಯದ ಲಾಭವು ಹಳ್ಳಿಯ ಸಾಲೆಗಳಿಗೆ ಲಭಿಸಲೆಂದು ಇವರನ್ನು ಅ॥ ಡೆ॥ ಎ॥ ಇ॥ ರ ಕೆಲಸ ಮಾಡಲಿಕ್ಕೆ ನಿಯಮಿಸಿದ್ದಾಯಿತು. ಅಲ್ಲಿ ಶಿಕ್ಷಕರನ್ನೂ ಜನತೆಯನ್ನೂ ಅಧಿಕಾರಿಗಳನ್ನೂ ಸುಲಭವಾಗಿ ಇವರು ತೂಗಿಸಿಕೊಂಡು ಹೋದದ್ದಲ್ಲದೆ, ಶಿಕ್ಷಣ ವ್ಯವಸ್ಥೆ, ಧೋರಣ, ಯೋಜನೆ ಮೊದಲಾದವುಗಳಲ್ಲಿ ಸಮರ್ಪಕವಾದ ಜ್ಞಾನವನ್ನು ಪ್ರಕಟಿಸಲು ಇವರನ್ನು ಡಿರೆಕ್ಟರ ಆಫ ಪಬ್ಲಿಕ ಇನ್ಸಟ್ರಕ್ಶನ್‌ರವರ ಕಚೇರಿಯಲ್ಲಿ ಅಧಿಕಾರದ ಸ್ಥಳಕ್ಕೆ ನಿಯಮಿಸಲಾಯಿತು. ಇಲ್ಲಿ ಇವರು ಶಾರೀರಕ ಶ್ರಮವನ್ನು ಲೆಕ್ಕಿಸದೆ ಅಸಾಧಾರಣವಾದ ದಕ್ಷತೆಯಿಂದ ತಮ್ಮ ಕಠಿಣವಾದ ಕೆಲಸವನ್ನು ನೋಡುತ್ತಿದ್ದರೆಂದು ನಮ್ಮ ಕೇಳಿಕೆಯಲ್ಲಿದೆ. ಆದ್ದರಿಂದಲೇ ಇಲಾಖೆಯ ಬೇರೆ ಬೇರೆ ಜಿಲ್ಹೆಗಳಲ್ಲಿ ಅತ್ಯಲ್ಪ ಅವಧಿಯಲ್ಲಿ ಟ್ರೇನಿಂಗ ಸ್ಕೂಲುಗಳನ್ನು ಸ್ಥಾಪಿಸುವ ದುಃಸಾಧ್ಯವಾದ

ಕೆಲಸವು ಇವರಿಂದಲೇ ನೀಗುವದೆಂದು ಸರಕಾರದವರು ಟ್ರೇನಿಂಗ ಸ್ಕೂಲುಗಳ ಇನ್ಸಪೆಕ್ಟರರ ಕೆಲಸವನ್ನು ಇವರಿಗೆ ಒಪ್ಪಿಸಿದರು. ಈ ಕೆಲಸಕ್ಕಾಗಿ ಇವರು ನಮ್ಮ ಭಾಗಕ್ಕೆ ಬಂದಂದಿನಿಂದ ಅಂದರೆ ೧೫ ವರುಷಗಳ ಹಿಂದೆ ನಮಗೆ ಇವರ ಪರಿಚಯವಾಯಿತು. ಮೇಲಧಿಕಾರಿಗಳಲ್ಲಿ ಇವರ ಬಗ್ಗೆ ಇದ್ದ ಪೂರ್ಣ ವಿಶ್ವಾಸವೂ ಅದಕ್ಕೆ ತಕ್ಕಂತೆ ಎಡೆಬಿಡದೆ ಪ್ರಯತ್ನ ಮಾಡಿ ನಿಯಮಿತ ಕಾರ್ಯಗಳನ್ನು ನೆರವೇರಿಸುವದರಲ್ಲಿ ಇವರಿಗಿದ್ದ ಆಸ್ಥೆಯೂ ತಮ್ಮ ಕೈಕೆಳಗಿನವರಲ್ಲಿ ಸಹಾನುಭೂತಿಯೂ, ಶಿಕ್ಷಕ ವೃಂದದ ಬಗ್ಗೆ ಆದರವೂ, ಭಿನ್ನ ಪ್ರಕೃತಿಗಳುಳ್ಳ ಜನರೊಡನೆ ಕೂಡಿ ನಡೆದು ಕೈಕೊಂಡ ಕೆಲಸವನ್ನು ಯಶಸ್ವಿಯಾಗಿ ಮಾಡಲಿಕ್ಕೆ ಅವಶ್ಯವಾದ ವ್ಯವಹಾರಚಾತುರ್ಯವೂ ಅಲ್ಪಾವಧಿಯಲ್ಲಿ ಎಲ್ಲರ ನಿದರ್ಶನಕ್ಕೆ ಬಂದವು. ಇಲಾಖೆಯಲ್ಲಿ ೨೧ ಟ್ರೇನಿಂಗ ಸ್ಕೂಲುಗಳನ್ನು ಸ್ಥಾಪಿಸಿ ಅವು ಯೋಗ್ಯ ದಿಶೆಯಲ್ಲಿ ಕೆಲಸ ಮಾಡುವಂತೆ ವ್ಯವಸ್ಥೆಗೊಳಿಸುವ ಕಾರ್ಯದಲ್ಲಿ ಇವರು ತಮಗಾದ ಶಾರೀರಿಕ ಮಾನಸಿಕ ಕಷ್ಟಗಳನ್ನು ಸ್ವಲ್ಪವೂ ಲಕ್ಷಿಸಲಿಲ್ಲ. ಮೂರು ವರ್ಷಗಳಲ್ಲಿ ಈ ಕಾರ್ಯವು ಸಿದ್ಧಿಯನ್ನೈದಿತು. ಆದರೆ ಅಷ್ಟರಲ್ಲಿ ಶಿಕ್ಷಕರ ಶಿಕ್ಷಣದ ಬಗ್ಗೆ ಸರಕಾರದವರ ಧೋರಣವು ಪೂರ್ಣವಾಗಿ ಬದಲಾದ ಮೂಲಕ ಈ ಸಂಸ್ಥೆಗಳನ್ನು ತೀವ್ರವಾಗಿ ನಿಲ್ಲಿಸಿಬಿಡಬೇಕಾಯಿತು. ಈ ಕಾಲದಲ್ಲಿ ವಕೀಲ ಸಾಹೇಬರಿಗಾದ ಮಾನಸಿಕ ವ್ಯಥೆಯ ಮೂಲಕ ಅವರ ಪ್ರಕೃತಿಯು ಕೆಟ್ಟಿತು; ಆಧಿವ್ಯಾಧಿಗಳಿಂದ ಅವರು ಸಣ್ಣಾದರು; ಮೂರು ವರ್ಷಗಳ ವರೆಗೆ ತಾವು ಅತಿ ಶ್ರಮದಿಂದ ಬಿತ್ತಿ ಬೆಳೆಸಿದ ಸಸಿಗಳನ್ನು ತಮ್ಮ ಕಣ್ಣೆದುರಿಗೆ ತಮ್ಮ ಕೈಯಿಂದಲೇ ಕಿತ್ತಿ ಚೆಲ್ಲುವ ಪ್ರಸಂಗವು ಬಂದದ್ದರಿಂದ ಅವರಿಗೆ ಬಹು ದುಃಖವೆನಿಸಿತು. ಇಂಗ್ಲಂಡ ಮೊದಲಾದ ಪಾಶ್ಚಾತ್ಯ ದೇಶಗಳಿಗೆ ಹೋಗಿ ಅಲ್ಲಿಯ ಶಿಕ್ಷಣಾಭಿಮಾನಿಗಳೊಡನೆ ವಿಚಾರ ವಿನಿಮಯದಿಂದಲೂ ಶಿಕ್ಷಣ ಸಂಸ್ಥೆಗಳ ಅಭ್ಯಾಸದಿಂದಲೂ ಯೋಗ್ಯತಾಸಂಪನ್ನರಾಗಿ, ನಮ್ಮ ದೇಶದ ಶಿಕ್ಷಣ ಪ್ರಸಂಚದಲ್ಲಿ ಆಗಬೇಕಾಗಿರುವ ಸುಧಾರಣೆಯ ಕಾರ್ಯಗಳಿಗೆ ಶಕ್ತ್ಯನುಸಾರವಾಗಿ ನೆರವಾಗಬೇಕೆಂದು ಆ ಸಮಯದಲ್ಲಿ ಅವರು ದೃಢನಿಶ್ಚಯ ಮಾಡಿದರು. ಆಗ ಈ ಕೆಲಸಕ್ಕೆ ಅವರಿಗೆ ವಿಶೇಷ ಅನುಕೂಲತೆಗಳು ಇರಲಿಲ್ಲ. ಆದರೂ ಅವರು ತಮ್ಮ ಸಂಕಲ್ಪವನ್ನು ತೀವ್ರದಲ್ಲಿಯೇ ಸಿದ್ಧಿಗೊಯ್ದರು. ವಿದೇಶಗಳಲ್ಲಿರುವಾಗ ತಮ್ಮ ವೇಳೆಯನ್ನು ಅವರು ಸ್ವಲ್ಪವೂ ವ್ಯರ್ಥ ಕಳೆಯಲಿಲ್ಲ. ಹೋದಹೋದಲ್ಲಿ ತಜ್ಞರ ಪರಿಚಯ ಮಾಡಿಕೊಂಡು ಅವರೊಡನೆ ವಿಚಾರವಿನಿಮಯ ಮಾಡಿದರು. ಅಲ್ಲಿಯ ಸಭೆ ಸಂಮೇಲನಗಳಲ್ಲಿ ತಮ್ಮ ಅನುಭವ ವಿಚಾರಗಳನ್ನು ಹೇಳಿ ವಿದ್ಯಾಭಿಮಾನಿಗಳ ಮನ್ನಣೆಗೆ ಪಾತ್ರರಾದರು. ಅಲ್ಲಿಂದ ಮರಳಿ ಬಂದೊಡನೆಯೆ ಅವರಿಗೆ ಗುಜರಾಥದ ಎಜ್ಯುಕೇಶನಲ್ ಇನ

ಪೆಕ್ಟರರ ಅಧಿಕಾರವು ದೊರೆತದ್ದರಲ್ಲಿ ಸೋಜಿಗವಿಲ್ಲ. ಈ ಸಮಯದಲ್ಲಿ ಗುಜರಾಥ ದಲ್ಲಿ ಅಸಹಕಾರದ ಚಳವಳಿಯೂ ಒಳ್ಳೇ ಪ್ರಬಲವಾಗಿದ್ದದರಿಂದ ಅಲ್ಲಿ ವಕೀಲ ರಂಥ ರಾಜಪ್ರಜರಿಗೆ ಕೂಡಿಯೇ ಬೇಕಾದಂಥ ಅಧಿಕಾರಿಗಳ ಅವಶ್ಯಕತೆಯು ಬಹಳವಾಗಿತ್ತು. ಆ ಕಾಲದಲ್ಲಿ ಇವರು ಎಷ್ಟೋ ಕಠಿಣ ಪ್ರಸಂಗಗಳನ್ನು ಜಾಣ್ಮೆ ಯಿಂದ ತೂಗಿಸಿಕೊಂಡು ಹೋದರು. ಮುಂದೆ ನಾಲ್ಕು ವರ್ಷಗಳಾದ ಬಳಿಕ ಅವರು ಮರಳಿ ಪಾಶ್ಚಾತ್ಯ ದೇಶಗಳಿಗೆ ಹೋದದ್ದಲ್ಲದೆ ಶಿಕ್ಷಣ ಸುಧಾರಣೆಯ ಬಗ್ಗೆ ಹೆಸರಾದ ಅಮೇರಿಕೆ. ಕಾನಡಾ, ಜಪಾನ, ಫಿಲಿಪೈನ್ಸ ಮೊದಲಾದ ದೇಶ ಗಳ ಪ್ರವಾಸವನ್ನು ಕೈಕೊಂಡು "ಹೊಸ ಶಿಕ್ಷಣ"ವನ್ನು ಪೂರ್ಣವಾಗಿ ನೋಡಿ ಕೊಂಡು ಬರಬೇಕೆಂಬ ಕುತೂಹಲವನ್ನು ಪೂರ್ಣ ಮಾಡಿಕೊಂಡರು. ಅಂದಿನಿಂದ ನಮ್ಮ ದೇಶದಲ್ಲಿ ಶಿಕ್ಷಣಜ್ಞರೆಂದು ಸರಕಾರದವರೂ ವಿಶ್ವವಿದ್ಯಾಲಯದವರೂ ಹಲವು ಮಹತ್ವದ ಕಾರ್ಯಕಲಾಪಗಳಲ್ಲಿ ಅವರನ್ನು ಬರಮಾಡಿಕೊಂಡದ್ದರ ಲ್ಲಿಯೂ ಆಶ್ಚರ್ಯವಾದದ್ದೇನೂ ಇಲ್ಲ. ವಿದೇಶಗಳ ಹಲವು ಸಭೆ ಸಮಿತಿಗಳು ಇವರನ್ನು ಮೆಂಬರರನ್ನಾಗಿ ಆರಿಸಿದ್ದು ಆಯಾ ದೇಶಗಳ ತಜ್ಞರಲ್ಲಿ ಇವರ ಬಗ್ಗೆ ಉಂಟಾದ ಮನ್ನಣೆಯ ಚಿಹ್ನಗಳೆನ್ನಲು ಸಂದೇಹವಿಲ್ಲ.

ನಾವು ಈ ಮೊದಲೇ ಹೇಳಿದಂತೆ ಶಿಕ್ಷಣದ ಬಗ್ಗೆ ಸರ್ವತೋಮುಖವಾದ ಜ್ಞಾನವನ್ನು ಸಂಪಾದಿಸಿಕೊಂಡು ಅನುಭವಸಂಪನ್ನರಾಗಿ ನವಕರಿಯ ಕೊನೆಯ ಭಾಗದಲ್ಲಿ ನಮ್ಮ ಕನ್ನಡ ಜಿಲ್ಹೆಗಳ ಪ್ರಾಥಮಿಕ ಮಾಧ್ಯಮಿಕ ಶಿಕ್ಷಣದ ಮುಖ್ಯ ಅಧಿಕಾರಿಗಳಾಗಿ ಇವರು ಬಂದದ್ದು ನಮ್ಮೆಲ್ಲರ ಸುದೈವವೆನ್ನಬಹುದು. ಈ ಅವ ಧಿಯು ಇಡಿ ಭೂಮಂಡಲದ ದೌರ್ಭಾಗ್ಯದ ಮೂಲಕ ಆಪತ್ಕಾಲವಾಗಿ ಪರಿಣಮಿ ಸಿರುವದು ನಿಜವು; ಶಿಕ್ಷಣ ಪ್ರಪಂಚದಲ್ಲಂತೂ ಈ ಅವಧಿಯಲ್ಲಿ ಹೊಸ ಯೋಜನ ಗಳನ್ನೂ ಸುಧಾರಣೆಗಳನ್ನೂ ಕೈಕೊಳ್ಳುವದು ಅರಿದಾಗಿರುವದು. ಎತ್ತ ನೋಡಿ ದರೂ ಅನಾಸ್ಥೆಯು ತೋರುತ್ತಿರುವದು. ಹೀಗಿದ್ದರೂ ಕಾಲಾಸುರೋಧದಿಂದ ಮರ್ಯಾದಿತವಾದ ತಮ್ಮ ಕಾರ್ಯಕ್ಷೇತ್ರದಲ್ಲಿ ವಕೀಲ ಸಾಹೇಬರು ಕೈಲಾದಷ್ಟು ಶ್ರಮಪಟ್ಟು ಶಿಕ್ಷಣದ ಬಗ್ಗೆ ಆಸ್ಥೆಯನ್ನೂ ಶಿಕ್ಷಕರ ಬಗ್ಗೆ ಮನ್ನಣೆಯನ್ನೂ ನಲೆಗೊಳಿಸಿರುವರು. ನಮ್ಮ ಭಾಗದ ಮಾಧ್ಯಮಿಕ ಶಾಲೆಗಳಲ್ಲಿ ಹೊಸ ಜೀವ ವನ್ನು ತುಂಬಿರುವರು. ಆ ಶಾಲೆಗಳ ವೇಳಾಪತ್ರಿಕೆಯಲ್ಲಿ ನಿತ್ಯದಲ್ಲಿ ಶಾರೀರಿಕ ಶಿಕ್ಷಣ, ವಾಙ್ಮಯಾಭ್ಯಾಸಕ್ಕೆ ಉತ್ತೇಜನ ದೊರೆಯುವಂತೆ ವಾಚನ ಯೋಜನ ಇವೇ ಮೊದಲಾದ ತಿದ್ದುಪಡೆಗಳನ್ನು ಆರಂಭಿಸಿರುವರು "ಹೊಸ ಶಿಕ್ಷಣದ" ವಾತಾವರಣದಲ್ಲಿ ಶಿಕ್ಷಕರೂ ಶಾಲೆಗಳೂ ಹೊಸ ಹುರುಪಿನಿಂದ ದುಡಿಯಬೇ ಕೆಂದು ಶಿಕ್ಷಕ ಸಂಘವೊಂದನ್ನು ದೃಢಪಡಿಸಿ ವಾರ್ಷಿಕ ಸಂಮೇಲನಗಳನ್ನು ನೆರೆ

ಯಿಸುತ್ತಿರುವರು. ಅನೇಕ ಶಿಕ್ಷಕರಿಗೆ ಮಾಧ್ಯಮಿಕ ಶಿಕ್ಷಕ ಶಿಕ್ಷಣಾಲಯಕ್ಕೆ ಹೋಗಿ ಯೋಗ್ಯತೆಯನ್ನು ಪಡೆದು ಬರಲಿಕ್ಕೆ ಅನುವು ಮಾಡಿಕೊಟ್ಟಿರುವರು. ತಮ್ಮ ಹೆಸರಿನ ಒಂದು ಶೀಲ್ಡವನ್ನಿಟ್ಟು ಆಟಗಳಲ್ಲಿ ಸ್ಪರ್ಧೆಯನ್ನು ಅನುಗೊಳಿಸಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಶಾರೀರಿಕ ಶಿಕ್ಷಣಕ್ಕೆ ಉತ್ತೇಜನವನ್ನು ಕೊಟ್ಟಿ ರುವರು.

ಇತ್ತ ಪ್ರಾಥಮಿಕ ಶಿಕ್ಷಣದ ಬಹುತರ ಸಂಸ್ಥೆಗಳು ಸ್ಥಾನಿಕ ಅಧಿಕಾರಿಗಳ ಪ್ರತ್ಯಕ್ಷ ಆಡಳಿತಕ್ಕೆ ಒಳಪಟ್ಟಿದ್ದರೂ ಪ್ರಾಥಮಿಕ ಶಿಕ್ಷಣವನ್ನೂ ಪ್ರಾಥಮಿಕ ಶಿಕ್ಷಕರನ್ನೂ ವಕೀಲ ಸಾಹೇಬರು ಮರೆಯಲಿಲ್ಲ ಅದರಲ್ಲಿ ಉಂಟಾಗುತ್ತಿರುವ ಕಠಿಣ ಪ್ರಶ್ನೆಗಳ ಬಗ್ಗೆ ಸ್ಥಾನಿಕ ಅಧಿಕಾರಿಗಳೊಡನೆ ಪ್ರಸಂಗ ಬಂದಾಗ ಚರ್ಚೆ ಮಾಡುತ್ತಿರುವರು. ಸುಪರವಾಯಿಝರರ ಸಭೆಗಳನ್ನು ಕೂಡಿಸಿ ಹೊಸ ಶಿಕ್ಷಣದ ಬೇಡಿಕೆಗಳನ್ನು ಶಿಕ್ಷಕರು ಪೂರೈಸಬೇಕಾದರೆ ತಪಾಸಣೆಯಲ್ಲಿ ಯಾವ ಬದಲಾವಣೆಗಳಾಗುವದು ಅವಶ್ಯವಿರುವದೆಂಬದನ್ನು ಅವರಿಗೆ ತೋರಿಸುತ್ತಿರುವರು. ತಮ್ಮ ಅನುಭವಗಳನ್ನೂ ಅಭಿಪ್ರಾಯಗಳನ್ನೂ ವಿಚಾರಗಳನ್ನೂ ಈ ನಮ್ಮ ಮಾಸಪತ್ರಿಕೆಯಲ್ಲಿ ಮೇಲಿಂದ ಮೇಲೆ ಪ್ರಕಟಿಸಿ ಪ್ರಾಥಮಿಕ ಶಾಲೆಗಳಲ್ಲಿ ರೂಢವಿರುವ ಶಿಕ್ಷಣ ಪದ್ಧತಿಗಳಲ್ಲಿ ಹೆಚ್ಚುಕಡಿಮೆಗಳಾಗಲು ನೆರವಾಗಿರುವರು. ಬೇಸಿಗೆಯ ಸೂಟಿಯ ಆರಂಭದಲ್ಲಿ ಪ್ರಾಥಮಿಕ ಶಿಕ್ಷಕರಿಗಾಗಿಯೇ "ಶಿಕ್ಷಣ ಯೋಜನೆ" ಯನ್ನು ಪೂರ್ಣ ಆರು ದಿನಗಳ ವರೆಗೆ ಏರ್ಪಡಿಸಿ, ಹೊಸ ಪದ್ಧತಿಗಳ ಬಗ್ಗೆ ಪಾಠಗಳನ್ನೂ ಚರ್ಚೆಗಳನ್ನೂ ಸಾಗಿಸಿ ಶಿಕ್ಷಣದ ಬಗ್ಗೆ ನಮ್ಮ ಶಿಕ್ಷಕರಲ್ಲಿ ಹೊಸ ಹುರುಪು ತುಂಬಿರುವರು. ಈ ಪ್ರಸಂಗಗಳಲ್ಲಿ ಅವರು ಕರ್ನಾಟಕ ಭಾಷಾನಭಿಜರಾದರೂ ಆರೂ ದಿನ ಸಭೆಯಲ್ಲಿ ತಪ್ಪದೆ ಹಾಜರಿದ್ದು ಪಾಠ ಕಲಿಸುವ ತಜ್ಞರಾದ ಶಿಕ್ಷಕರಿಗೂ ಚರ್ಚೆ ಮಾಡುವ ಅನುಭವಿಕ ಶಿಕ್ಷಕರಿಗೂ ಕೂಡಿಯೇ ಹುರುಪುಗೊಳಿಸುವದನ್ನು ನೋಡಿ ಅಭಿಮಾನವನ್ನು ತಾಳದ ಶಿಕ್ಷಕರು ಇರಲಿಕ್ಕಿಲ್ಲವೆಂದು ನಾವು ನಂಬಿದ್ದೇವೆ. ಶಿಕ್ಷಣದಲ್ಲಿ ಸುಧಾರಣೆಯಾಗಬೇಕಾದರೆ ಶಿಕ್ಷಕರಲ್ಲಿ ಸ್ವಾಭಿಮಾನವೂ, ಆತ್ಮೋನ್ನತಿಯ ಲವಲವಿಕೆಯೂ, ತಮ್ಮ ಉದ್ಯೋಗದ ಬಗ್ಗೆ ಉದಾತ್ತವಾದ ಭಾವನೆಯೂ ಇರುವದು ಅವಶ್ಯವೆಂದು ಅವರು ನರಿನಂಬಿರುವರು. ಇದಕ್ಕಾಗಿ ಅವರು ಸಣ್ಣ ದೊಡ್ಡ ಕೆಲಸಗಳಲ್ಲಿ ಸಹ ಸತತವಾಗಿ ಪ್ರಯತ್ನ ಪಡುತ್ತಿದ್ದಾರೆ. ಪ್ರಾಥಮಿಕ ಶಿಕ್ಷಣದ ಮಹತ್ವವು ಮಾಧ್ಯಮಿಕ ಇಲ್ಲವೆ ಉಚ್ಚ ಶಿಕ್ಷಣದ ಮಹತ್ವಕ್ಕಿಂತ ಹೆಚ್ಚಿನದೆಂದು ಅವರು ಅನೇಕ ಸಾರೆ ಸಾರಿ ಹೇಳಿರುವರು. ಸಾರ್ವಜನಿಕ ಸಭೆಗಳಲ್ಲಾಗಲಿ ಖಾಸಗಿ ಭೆಟ್ಟಿಯಲ್ಲಾಗಲಿ ಮಾಧ್ಯಮಿಕ ಹಾಗು ಪ್ರಾಥಮಿಕ ಶಿಕ್ಷಕರೊಡನೆ ವರ್ತಿಸುವದರಲ್ಲಿ ಇವರು ಭೇದಭಾವವನ್ನು

ತೋರಿಸಿಲ್ಲ. ಪ್ರಾಥಮಿಕ ಶಿಕ್ಷಕರು ಒಬ್ಬಿಬ್ಬರಾಗಲಿ ಹಲವರಾಗಲಿ ತಮಗೆ ಭೆಟ್ಟಿಯಾದಾಗ ಅವರಿಗೆ ಸಲಿಗೆಯಿಂದ ಸಲಹೆಗಳನ್ನು ಕೊಟ್ಟದ್ದಲ್ಲದೆ ಸದ್ಗೃಹಸ್ಥತನಕ್ಕೆ ಉಚಿತವಾದ ಸತ್ಕಾರವನ್ನೂ ಮಾಡಿದರೆಂದು ನಾವು ಕೇಳಬಲ್ಲೆವು. ಒಟ್ಟಿನ ಮೇಲೆ ವಕೀಲ ಸಾಹೇಬರಿಗೆ ಸಹಜವಾದ ಸೌಜನ್ಯವೃತ್ತಿಯೂ ಶಿಕ್ಷಣ ಶಿಕ್ಷಕರ ಬಗ್ಗೆ ಅವರಲ್ಲಿ ತುಂಬಿರುವ ಅಭಿಮಾನವೂ ಶಿಕ್ಷಕರಿಂದ ದೇಶೋದ್ಧಾರವಾಗಬೇಕೆಂಬ ಅವರ ಉತ್ಕಟವಾದ ಇಚ್ಛೆಯೂ ಇದು ಸಾಧ್ಯವಾಗಬೇಕಾದರೆ ತೀರ ಕಡಿಮೆ ಸಂಬಳವನ್ನು ಸ್ವೀಕರಿಸಿ ದುಡಿಯಲೊಪ್ಪಿದ ಸಣ್ಣ ಶಾಲಾಧ್ಯಾಪಕನಿಂದ ಅಧಿಕಾರಸಂಪನ್ನರಾಗಿ ಮಹತ್ವದ ಕಾರ್ಯಭಾರವನ್ನು ಜರುಗಿಸಬೇಕಾಗಿರುವ ಅಧಿಕಾರಸ್ಥರ ವರೆಗೆ ಎಲ್ಲರು ಸಹಕಾರಿತೆಯಿಂದಲೂ ಅಭಿಮಾನದಿಂದಲೂ ದೇಶ ಹಿತೈಕ ದೃಷ್ಟಿಯಿಂದಲೂ ಸತತ ಪ್ರಯತ್ನ ಮಾಡಬೇಕೆಂದು ಉದಾಹರಣೆಯಿಂದ ಸಿದ್ಧ ಮಾಡುವ ಅವರ ಆಚರಣೆಯೂ ಕರ್ನಾಟಕದ ಶಿಕ್ಷಕರ ಕಣ್ಣ ಮುಂದೆ ಚಿರ ಕಾಲದ ವರೆಗೆ ಕಟ್ಟಿರುವವೆಂದು ನಾವು ನಂಬಿದ್ದೇವೆ.

ಪೆನ್‌ಶನ್ ತೆಗೆದುಕೊಳ್ಳುವದೆಂದರೆ ವಿಶ್ರಾಂತಿ ಸುಖವನ್ನು ಅನುಭವಿಸುವದೆಂದು ಅನೇಕರು ಬಗೆಯುವದುಂಟು. ಆದರೆ ವಕೀಲ ಸಾಹೇಬರು ಈ ಅಭಿಪ್ರಾಯವನ್ನು ಸಮರ್ಥಿಸುವದಿಲ್ಲ. ಅಧಿಕಾರಸ್ಥರಿಗೆ ಅಪರಿಹಾರ್ಯವಾದ ನಿತ್ಯದ ಕಚೇರಿಯ ಕೆಲಸದಲ್ಲಿ ನೋಡಿ ನೋಡಿ ಬರೆದು ಬರೆದು ಸಹಿ ಮಾಡಿ ಮಾಡಿ ತಲೆ ಚಿಟ್ಟೆನಿಸುವ ಕೆಲಸಗಳಿಲ್ಲದಾಗುವ ಮೂಲಕ ಮಾನಸಿಕ ವಿಶ್ರಾಂತಿಯು ತಾನಾಗಿ ದೊರೆಯುವದಷ್ಟೇ. ಶಿಕ್ಷಣದಂಥ ಪವಿತ್ರ ಕಾರ್ಯದಲ್ಲಿ ದೇಹವನ್ನು ಸವಿಸಿದವರ ಕಾರ್ಯಕ್ಷೇತ್ರವು ಪೆನ್‌ಶನ್ ಪಡೆದ ಬಳಿಕ ವಿಸ್ತೃತವಾಗುವದೆಂದೂ ಅಧಿಕಾರರೂಢರಾದಾಗ ತಾವು ಮಾಡಿದ್ದಕ್ಕಿಂತ ಹೆಚ್ಚಿನ ಕೆಲಸವನ್ನು ಸ್ವತಂತ್ರವಾದ ವಾತಾವರಣದಲ್ಲಿ ಮಾಡಲನುವಾಗುವದೆಂದೂ ಅವರ ನಂಬಿಗೆ. ಆದ್ದರಿಂದ ಇನ್ನು ಮುಂದೆ ಶಿಕ್ಷಣಹಿತದ ದೃಷ್ಟಿಯಿಂದ ಹಿಂದಿಗಿಂತಲೂ ಹೆಚ್ಚಿನ ಕಾರ್ಯವು ಅವರಿಂದ ಆಗುವದೆಂದು ನಾವು ಆಶೆಯುಳ್ಳವರಾಗಬಹುದು. ಹಾಗು ಕರ್ನಾಟಕವನ್ನು ಬಿಟ್ಟು ಹೋದ ಬಳಿಕ ಇವರು ನಮ್ಮನ್ನು ಮರೆಯದೆ ಇರಲೆಂದೂ ಇವರು ಕೈಕೊಂಡ ಕಾರ್ಯವು ಪೂರ್ಣ ಯಶಸ್ವಿಯಾಗಲೆಂದೂ ಇದಕ್ಕಾಗಿ ಜಗದೀಶ್ವರನು ಇವರಿಗೆ ಆಯುರಾರೋಗ್ಯಗಳನ್ನೂ ಸುಖಮಯವಾದ ಬಾಳುವೆಯನ್ನೂ ದಯಪಾಲಿಸಲೆಂದೂ ನಾವು ಆತನನ್ನು ಬೇಡಿಕೊಳ್ಳುವೆವು.

ಗುರುಕುಲಗಳ ಪರಂಪರೆ

ಲೇಖಕ:— ಮೂಲೀಮನಿ, ವ್ಹಿ. ಬಸವಂತ ಅಸಿ|| ಮಾಸ್ತರ ಗಂದಿಗವಾಡ

ಇಪ್ಪತ್ತನೆಯ ಶತಮಾನವು ಸುಧಾರಣೆಯ ಚರಮಸೀಮೆಯು. ಶಿಕ್ಷಣವು ಕೂಡ ಸುಧಾರಣೆಯ ಶಿಖರವನ್ನಡರಿದ್ದು ಈ ಯುಗದಲ್ಲಿಯೇ. ಆದರೆ ನಮ್ಮಲ್ಲಿ ಮಾತ್ರ ನೂರರಲ್ಲಿ ಆರು ಜನರು ಓದು ಬರಹ ಬಲ್ಲವರಿರುವರು. ಜಪಾನದಲ್ಲಿ ನೂರರಲ್ಲಿ ತೊಂಬತ್ತಾರು ಜನರು ಶಿಕ್ಷಿತರಾಗಿರುವರೆಂಬುದು ಹೊಳೆಯದಿರದು. "ಒಲವು ದೃಷ್ಟಿಲಾಘವದ ಬೀಜಮಂತ್ರವು." ಬಾಲಕರ ಒಲವಿನಂತೆಯೇ ಅಲ್ಲಿ ಶಿಕ್ಷಣ ದೊರೆಯುತ್ತಿದೆ. ಇದೇ ಜಪಾನಿಗಳ ಬೆಳವಣಿಗೆಗೆ ಕಾರಣವು. ಈ ಪದ್ಧತಿಯು ನಮ್ಮಲ್ಲಿಲ್ಲ.

ಶಿಕ್ಷಣವು ಸಾಮಾಜಿಕ ಜೀವನದ ಮುಖ್ಯ ಹಾಗೂ ಮಹತ್ವಪೂರ್ಣವಾದ ಅಂಗವು! ಸಮಾಜದ ವಿಕಾಸ, ಹಾಗೂ ರಾಷ್ಟ್ರನಿರ್ಮಾಣವೇ ಶಿಕ್ಷಣದ ಮುಖ್ಯೋದ್ದೇಶವು! ಭೂದೇವಿಯಲ್ಲಿ ಅನಂತ ಉತ್ಪಾದನ ಶಕ್ತಿಯು ಅಡಕವಾಗಿರುತ್ತದೆ, ಅದರ ಸದುಪಯೋಗ ಮಾಡಿಕೊಂಡು, ಅಪರಿಮಿತ ಕಲ್ಪನಾಶಕ್ತಿಯನ್ನೂ, ವಿಚಾರ ಶಕ್ತಿಯನ್ನೂ, ವಿಕಸಿತಗೊಳಿಸಿ, ಸಮಾಜ ಹಾಗೂ ನಾಡ ಸೇವೆಗಾಗಿ ತಕ್ಕವರನ್ನು ಮಾಡುವದೇ ಶಿಕ್ಷಣದ ಮುಖ್ಯೋದ್ದೇಶವು. ಇಂಥ ಮಹತ್ವವಾದ ಶಿಕ್ಷಣದ ಕ್ರಮವು ಮಾತ್ರ ಮೇಲಾದದ್ದಿರಬೇಕೆಂದು ಬಿಚ್ಚಿ ಬರೆಯಬೇಕಾಗಿಲ್ಲ. ಈಗ ಬಳಿಕೆಯಲ್ಲಿದ್ದ "ರೀಡರು"ಗಳಿಂದೆ ನಮ್ಮ ಉತ್ಕರ್ಷವಾಗುವದಿಲ್ಲೆಂದೇ ಭಾರತೀಯ ಶಿಕ್ಷಣ ಶಾಸ್ತ್ರಜ್ಞರ ಹೇಳಿಕೆ ಈ ತರದ ಶಿಕ್ಷಣದಿಂದೆ ನಮ್ಮ ಆತ್ಮದ-ತನ್ಮೂಲಕ ಸಮಾಜ ಹಾಗೂ ರಾಷ್ಟ್ರಗಳ ಬೆಳವಣಿಗೆಯನ್ನು ಬಯಸುವದು, "ಹೆಳವನು ಮರದುದಿಯ ಫಲವನ್ನು ಬಯಸಿದಂತೆಯೇ" ಸರಿ.

ಪ್ರಾಚೀನ ಕಾಲದಲ್ಲಿ ಬಾಲಕರು ಉಪನಯನ ಸಂಸ್ಕಾರವನ್ನು ಹೊಂದಿ, ವಿದ್ಯಾರ್ಜನೆಗಾಗಿ ಗುರುಕುಲಗಳನ್ನು ಸೇರುತ್ತಿದ್ದರು. ಈಗಿನಂತೆ ಪಟ್ಟಣದ ಹೊಲಸು ಹವೆಯಲ್ಲಿಯ ಶಾಲೆ- ಕಾಲೇಜುಗಳಾಗ ಇದ್ದಿಲ್ಲ. ಅಡವಿಯೇ ಬ್ರಹ್ಮಚಾರಿಗಳ ಸಜೀವ ವಾಸಸ್ಥಾನ. ಗುರುವೇ ಅವರ ಸಹೃದಯ ಶಿಕ್ಷಕನು. ಆಶ್ರಮದ ಬ್ರಹ್ಮಚಾರಿಗಳ ತಿನಿಸು-ಉಣಿಸುಗಳಿಗಾಗಿ ರಾಜಾಶ್ರಯವೂ, ಇನ್ನುಳಿದ ಸಾಧಾರಣ ಜನಾಶ್ರಯವೂ, ಸಾಕಷ್ಟಿದ್ದವು. "ಭಿಕ್ಷಾಂದೇಹಿ" ಎಂದು ಬಾಗಿಲಬಳಿ ಬಂದುನಿಂತ ಬ್ರಹ್ಮಚಾರಿಗೆ ಬೇಕಾದದ್ದನ್ನೀಯಲು ಗೃಹಸ್ಥಾಶ್ರಮಿಗಳು ಹಿಂದು-ಮುಂದಾಗುತ್ತಿದ್ದಿಲ್ಲ. "ಸಮಾಜದ ಸಹಾಯದಿಂದಲೇ ನಾವು ಕಲಿತಿರುವೆವಾದುದರಿಂದ ಸಮಾಜಕ್ಕಾಗಿಯೇ ನಮ್ಮ ಜೀವನವು" ಎಂಬ ಮೇಲ್ತರದ ತಿಳಿವು ಇಲ್ಲದ ಬ್ರಹ್ಮಚಾರಿಗಳಾಗ ಇದ್ದಿಲ್ಲ. ಹಿಂದಿನ ಗುರುಕುಲಗಳ ನೆನಪು ಮಾಡಿಕೊಡುವ ಕೆಲವು ಗುರುಕುಲಗಳ ಮಾದರಿಯ ಶಾಲೆ-

ಕಾಲೇಜುಗಳು ಭಾರತದ ಕೆಲವೆಡೆಯಲ್ಲಿ ಸುಶೋಭಿಸುತ್ತಿರುವವು. ಆದರೆ ಪ್ರಾಚೀನ ವಿದ್ಯಾರ್ಥಿ-ಅಧ್ಯಾಪಕರಲ್ಲಿದ್ದ ಒಂದು ತರದ ಪ್ರೇಮಭಾವವು ಈಗಿನವರಲ್ಲಿಲ್ಲ. "ಫೀ ಕೊಡುವೆವು, ಕಲಿಯುವೆವು" ಎಂಬ ತಿಳಿವು ವಿದ್ಯಾರ್ಥಿಗಳಲ್ಲಿಯೂ, "ಸಂಬಳತಿನ್ನುವೆವು, ಕಲಿಸುವೆವು" ಎಂಬದು ಶಿಕ್ಷಕರಲ್ಲಿಯೂ ನೆಲೆಗೊಂಡು ಶಿಕ್ಷಣವು ಕೇವಲ ಕೊಡ-ತಗೊಳ್ಳುವ ವ್ಯವಹಾರದಂತೆ ಪರಿಣಮಿಸಿದೆ. ಆದುದರಿಂದ ಈ ತರದ ಶಿಕ್ಷಣಕ್ಕೆ ವ್ಯಾಪಾರಿಕ ಶಿಕ್ಷಣವೆಂದು ಹೇಳಬಹುದು. "ಹಣವೆಚ್ಚಮಾಡಿ ಕಲಿತಿರುವೆವಾದುದರಿಂದ ವೆಚ್ಚವಾದ ಹಣವನ್ನು ಗಳಿಸಿ ತಂದೆ-ತಾಯಿಗಳನ್ನು ಸಂತೋಷಪಡಿಸುವದೇ ನಮ್ಮ ಕರ್ತವ್ಯವು" ಎಂಬದು ಈಗಿನ ವಿದ್ಯಾರ್ಥಿಗಳ ತಿಳುವಳಿಕೆ. ನಿಜವಾಗಿ ಪಾಲಕರದಾದರೂ ಇದೇ ಆಮಿಷ. ಹೀಗಾಗಿ ಜೀವನವೆಲ್ಲ ವ್ಯಾಪಾರಿಕವಾಯಿತು, ಜನರು ಪಾರಮಾರ್ಥದಿಂದೆ ನೂರಾದರು !!! ಇದು ಸದ್ಯಃ ಪ್ರಚಲಿತವಿರುವ ಶಿಕ್ಷಣ ಪದ್ಧತಿಯ ಪರಿಣಾಮವು.

ಯಾವತರದ ಶಿಕ್ಷಣದಿಂದ ನಮ್ಮ ಮಕ್ಕಳ ಜೀವನ ಯಾತ್ರೆಯು ಸುಸೂತ್ರವಾಗಿ ಸಾಗುವದು ? ಈ ಪ್ರಶ್ನವೇ ಸದ್ಯಕ್ಕೆ ಭಾರತೀಯರ ಮುಂದಿದ್ದದ್ದು. ಯಾಕಂದರೆ ಬಿ. ಎ; ಎಮ್. ಎ. ಮೊದಲಾದ ವಿಶ್ವವಿದ್ಯಾಲಯುಗಳ ಡಿಗ್ರಿಗಳನ್ನೆಲ್ಲ ಆಗಮಾಡಿದವರು ನೌಕರಿಗಾಗಿ ಅಂಡಲೆಯುತ್ತಿರುವರು. ಹಾಗೂ ಕೊಟ್ಟಷ್ಟು ವೇತನದಲ್ಲಿ ಕಾಲ ಕಳೆಯಲು ಸಿದ್ಧರಾಗಿರುವರು. ಭಾರತೀಯ ವಿಶ್ವವಿದ್ಯಾಲಯುಗಳಲ್ಲಿ (Hand education) ಹಸ್ತಶಿಕ್ಷಣಕ್ಕೆ ಸಾಕಷ್ಟು ಸ್ಥಳದೊರೆತಿಲ್ಲ, ಜೀವನದ ಬಿಕ್ಕಟ್ಟಾದ ಪ್ರಶ್ನಗಳು ಬಿಡುವಂತಿಲ್ಲ. ಅಂತೆಯೇ ಶಿಕ್ಷಿತರೆಂದೆನ್ನಿಸಿಕೊಳ್ಳುವವರೆಲ್ಲ ನೌಕರಿಯ ದಾರಿಯನ್ನೇ ಕಾಯಬೇಕಾಗಿದೆ. ಜಪಾನದ ಜನಸಂಖ್ಯೆಯಾದರೋ ಆರುಕೋಟಿ. ಅಲ್ಲಿದ್ದ ೩೭ ಯುನಿವ್ಹರ್ಸಿಟಿಗಳಲ್ಲಿ ೨೮ (Hand education) ಕೈಗಾರಿಕೆ ಶಿಕ್ಷಣಕ್ಕಾಗಿ; ಉಳಿದ ಆರು ಪುಸ್ತಕೀಯ ಜ್ಞಾನಕ್ಕಾಗಿ. ಭಾರತದ ಜನಸಂಖ್ಯೆ ೩೫ ಕೋಟಿ, ೧೭ ಯುನಿವ್ಹರ್ಸಿಟಿಗಳಿವೆ. ಪುಸ್ತಕೀಡರುಗಳಿಗಾಗಿಯೇ ಪ್ರಾಮುಖ್ಯತೆಯಲ್ಲದೆ, ಕೈಗಾರಿಕೆಯ ಶಿಕ್ಷಣಕ್ಕಾಗಿ ತಕ್ಕಷ್ಟು ಅವಸರವಿಲ್ಲ. ಮೊನ್ನೆ ಮೊನ್ನೆ ಸ್ಥಾಪಿತವಾದ ಬೆಳಗಾಂವಿಯ ಆರ್ಟ್ಸ ಕಾಲೇಜಕ್ಕೆ ಹೊಂದಿ ಆಯುರ್ವೇದ ಶಿಕ್ಷಣ ಶಾಲೆಯನ್ನು ಹೊಂದಿಸಿದ್ದು ಸ್ತುತ್ಯವಾದದ್ದು.

ಇಂಗ್ಲಂಡ, ಫ್ರಾನ್ಸ ಯುನಾಯಿಟೆಡ್‌ಸ್ಟೇಟ್ಸ, ಜರ್ಮನಿ, ಜಪಾನಗಳಲ್ಲಿ ಬೈಲು ಸಾಲೆಗಳನ್ನು (open air Schools) ತೆರೆಯುವ ಕೆಲಸವು ಬಲು ಜೋರಿನಿಂದ ಸಾಗಿದೆ. ಬೈಲು-ಸಾಲೆಗಳಲ್ಲಿ ಓದಲಿಕ್ಕಾಗಿ ಹೋಗುವ ಬಾಲಕರಿಗಾಗಿ ವಾಹನಗಳು ಪುಕ್ಕಟೆಯಾಗಿ ದೊರೆಯುತ್ತವೆ. ಯುರೋಪ-ಅಮೇರಿಕೆಗಳ ಕೆಲವು ಶಿಕ್ಷಣ ವಿಷಯಕ ಮಹತ್ವದ ಠರಾವುಗಳನ್ನಿಲ್ಲಿ ಕೊಟ್ಟಿದೆ.

೧ ಸಾಲೆಯಲ್ಲಿ ಕುಳಿತು ಓದುವ ಅವಧಿಯು ತೀರಕಡಿಮೆ ಇರಬೇಕಲ್ಲದೆ ಓದುವ ಪುಸ್ತಕಗಳೂ ಕಡಿಮೆ ಇರಬೇಕು. ಬಾಲಕರ ಆಟ-ಪಾಟಗಳಿಗೂ, ಬೈಲು ಹವೆಯಲ್ಲಿ ತಿರುಗಾಡುವದಕ್ಕೂ ತಕ್ಕಷ್ಟು ಅವಧಿ ಇರಬೇಕು.

೨ ಪಟ್ಟಣಗಳಲ್ಲಿಯ ಸಾಲೆಗಳಿಗೆ ಹೊಂದಿ ವಿಸ್ತೃತವಾದ ಬನವೂ, ವಿಶಾಲ ವಾದ ಆಟದ ಬೈಲೂ ಇರಬೇಕು.

೩ ಪ್ರಾಥಮಿಕ ಸಾಲೆಗಳಲ್ಲಿ ಪ್ರಕೃತಿಯು ನೈಜ-ನೋಟದದ್ವಾರ ಶಿಕ್ಷಣವನ್ನು ಕೊಡಬೇಕು. ಅಡವಿಯಲ್ಲಿ, ಇಲ್ಲವೆ ಸಾಲೆಯು ತೋಟಗಳಲ್ಲಿ ಇಂಥ ಶಿಕ್ಷಾಪ್ರದ ಉದಾ ಹರಣೆಗಳು ಬೇಕಾದಷ್ಟು ದೊರೆಯುತ್ತಿವೆ.

ಇವೆಲ್ಲ ನಮ್ಮ ಪ್ರಾಚೀನತೆಯ ಹೆಗ್ಗುರುತುಗಳಲ್ಲವೇ ? ಶಾರೀರಿಕ, ಮಾನಸಿಕ, ನೈತಿಕ ಉನ್ನತಿಯೇ ಶಿಕ್ಷಣದ ನಿಜವಾದ ಅರ್ಥವು. ಹೀಗಾದರೇನೇ ಶಿಕ್ಷಣವು ಸರ್ವಾಂಗ ಸುಂದರವಾಗುವದು. ಇದಕ್ಕಾಗಿ ನಾವು ಬೇರೆ ಯೋಚಿಸಬೇಕಾಗಿಲ್ಲ. ಪ್ರಾಚೀನ ಆರ್ಯರೇ ನಮಗೆ ಮಾರ್ಗದರ್ಶಕರಾಗಿರುವರು. ಅವರ ಬಹುಭಾರವಾದ ಋಣವು ನಮ್ಮ ತಲೆಯಮೇಲಿದೆ. ಆದುದರಿಂದ ಅವರ ಗುರುಕುಲಗಳ ಮಾದರಿಯ ಶಿಕ್ಷಣಾಲಯ ಗಳು ತೆರೆಯಲ್ಪಟ್ಟು, (Hand education) ಕೈಗಾರಿಕೆಯ ಶಿಕ್ಷಣಕ್ಕೆಡೆಗೊಟ್ಟು ವಿದ್ಯಾರ್ಥಿ-ಅಧ್ಯಾಪಕರಲ್ಲಿ ನಿಕಟ ಸಂಬಂಧವುಂಟಾಗುವದು ಸದ್ಯಕ್ಕೆ ಮಹತ್ವವಾದದ್ದು.

ಮಾನಸಶಾಸ್ತ್ರ

ಮನೋವ್ಯಾಪಾರಗಳ ಮೂರು ಪ್ರಕಾರಗಳು

ಬುದ್ಧಿ, ವಿಕಾರ, ಇಚ್ಛೆ ಇವುಗಳಿಗೆ ಸಂಬಂಧಿಸಲ್ಪಟ್ಟ ಎಲ್ಲ ಬಗೆಯ ವ್ಯಾಪಾ ರಗಳು ಮನೋವ್ಯಾಪಾರಗಳು. ಒಂದೊಂದು ಬಗೆಯ ಮನೋವ್ಯಾಪಾರಕ್ಕೆ ಮಿದು ಳಿನಲ್ಲಿ ಒಂದೊಂದು ಕ್ಷೇತ್ರವಿರುವದೆಂದು ಗೊತ್ತಾಗಿದೆ. ಆದರೆ ಈ ವ್ಯಾಪಾರಗಳು ಒಂದರಿಂದೊಂದು ಪ್ರತ್ಯೇಕವಾಗಿರದೆ ಒಂದರಗೂಡೊಂದು ಸಂಕಲಿತವಾಗಿರುವವು. ಒಂದು ಬಗೆಯ ಮನೋವ್ಯಾಪಾರದಲ್ಲಿ ಮತ್ತೊಂದು ಬಗೆಯ ಮನೋವ್ಯಾಪಾರವು ಕಂಡುಬರುವದು. ನನ್ನ ಸ್ನೇಹಿತನು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದನೆಂದು ಕೇಳಿದ ಕೂಡಲೆ ನನಗೆ ಆನಂದವಾಗಿ ಅವನಿಗೆ ಪತ್ರ ಬರೆದು ಕಳುಹುವೆನು. ಈ ಪ್ರಸಂಗ ದಲ್ಲಿ ಬುದ್ಧಿ, ವಿಕಾರ, ಇಚ್ಛೆಗಳು ಒಮ್ಮೆಲೇ ನಡೆದು ಒಂದರಗೂಡೊಂದು ಮಿಶ್ರವಾಗು ವವು. ಈ ವ್ಯಾಪಾರಗಳ ತೀವ್ರತೆಯು ಹೆಚ್ಚು ಕಡಿಮೆ ಇದ್ದಂತೆ ಒಂದೊಂದು ಬಗೆಯು

ವ್ಯಾಪಾರಕ್ಕೆ ಪ್ರಾಧಾನ್ಯ ಉಂಟಾಗುವದು. ಬುದ್ಧಿಯ ವ್ಯಾಪಾರವು ಹೆಚ್ಚಾದಂತೆ ಮನೋವಿಕಾರದ ತೀವ್ರತೆಯು ಕಡಿಮೆಯಾಗುವದು ಸಹಜವು. ಒಂದು ವೇಳೆ ಅದೇ ಪ್ರಮಾಣದಿಂದ ಇಚ್ಛೆಯ ತೀವ್ರತೆಯು ಹೆಚ್ಚಾಗಬಹುದು.

ಮನೋವ್ಯಾಪಾರಗಳು ನಡೆಯಲಿಕ್ಕೆ ಅವಶ್ಯವಾದ ಮಿದುಳಿನ ಸ್ಥಿತಿಗೆ **ಚೈತನ್ಯ ಸ್ಥಿತಿ** ಎಂಬ ಹೆಸರು. ಮಾದಕ ಪದಾರ್ಥಗಳಿಂದ ಮಿದುಳಿಗೆ ಆ ಸ್ಥಿತಿಯು ಇಲ್ಲದಂತೆ ಮಾಡಬಹುದು. ' ಕ್ಲೋರೋಫಾರ್ಮ ' ಎಂಬ ಪದಾರ್ಥವನ್ನು ರೋಗಿಗೆ ಮೂಸಿ ನೋಡಿಸಿ ಆದ ಬೇಶುದ್ಧ ಸ್ಥಿತಿಯಲ್ಲಿ ಮಾಡಿದ ಶಸ್ತ್ರಕ್ರಿಯೆಯಿಂದ ಅವನಿಗೆ ಯಾವ ಬಗೆಯ ವೇದನೆಯುಂಟಾಗುವದಿಲ್ಲ. ಇದರಂತೆ ಕೆಲವೊಂದು ವಿಶೇಷ ಪ್ರಯತ್ನದಿಂದ ಚೈತನ್ಯ ಸ್ಥಿತಿಯ ಕ್ಷೇತ್ರವನ್ನು ಬೆಳಿಸಲಿಕ್ಕೆ ಬರುವದು. ಅಷ್ಟಾವಧಾನಿ, ಶತಾವಧಾನಿಗಳಲ್ಲಿ ಕಂಡುಬರುವ ಒಂದು ಬಗೆಯ ವಿಶೇಷ ಬುದ್ಧಿಕುಶಲತೆಯು ಅವರು ಮಾಡಿದ ಪ್ರಯತ್ನದ ಫಲವಾಗಿರುವದು. ಮನೋವ್ಯಾಪಾರದ ಅಭಿವೃದ್ಧಿಗೆ ತಕ್ಕ ಪ್ರಮಾಣದಿಂದ ಬೆಳೆದ ಮಿದುಳೂ ಅದರ ಯೋಗ್ಯವಾದ ವಿಕಾಸವೂ ಕಾರಣವಾಗಿರುವವು. ಮಿದುಳು ಬೆಳೆಯಲಿಕ್ಕೆ ತಕ್ಕ ಆಹಾರವಿಹಾರಗಳು ಅವಶ್ಯವು. ಆನುವಂಶಿಕತೆಯು ತಕ್ಕ ಸಹಾಯಕಾರಿಯಾಗಿರುವದು. ಮಿದುಳಿನ ವಿಕಾಸಕ್ಕೆ ವ್ಯಕ್ತಿಯ ಬಹಿರುಪಾಧಿಗಳು ಅಂದರೆ ಪರಿಸ್ಥಿತಿ, ಶಿಕ್ಷಣ ಹಾಗು ಸ್ವಂತ ಪ್ರಯತ್ನಗಳು ಕಾರಣೀಭೂತವಾಗಿರುತ್ತವೆ.

ಹುಟ್ಟಿದಂದಿನಿಂದ ೨೫ ವರ್ಷಗಳವರೆಗೆ ವಿದ್ಯಾರ್ಥಿಗಳ ಮನೋವಿಕಾಸವು ಹೇಗಾಗುತ್ತ ಹೋಗುವದೆಂಬದನ್ನು ಗೊತ್ತುಪಡಿಸುವದಕ್ಕಾಗಿ ಮಾನಸಶಾಸ್ತ್ರಜ್ಞರು ಆ ವಯೋಮಾನದಲ್ಲಿ ೧ರಿಂದ ೭, ೭ರಿಂದ ೧೪, ೧೪ರಿಂದ ೨೧ ಹೀಗೆ ಮೂರು ವಿಭಾಗಗಳನ್ನು ಮಾಡಿರುವರು. ಆಯಾ ವಯೋಮಾನದಲ್ಲಿ ಸ್ಫುಟವಾಗಿ ಕಾಣುವಂಥ ಮಾನಸಿಕ ವಿಕಾಸವು ಆದಂತೆ ಶಾರೀರಿಕ ಸ್ಥಿತ್ಯಂತರಗಳು ಉಂಟಾಗುವವು.

೧ನೆಯ ಭಾಗ ೧ರಿಂದ ೭ ರ ವರೆಗೆ:— ಈ ಕಾಲಾವಧಿಯಲ್ಲಿ ಮಗುವು ಕೇವಲ ಪರಾವಲಂಬಿಯಾಗಿದ್ದು, ಬಹಿರುಪಾಧಿಗೆ ಅಂದರೆ ಪರಿಸ್ಥಿತಿಗೆ ಗುಲಾಮನಂತೆ ಅಧೀನವಾಗಿರುವದು. ಸೃಷ್ಟಿಯೊಳಗಿನ ಎಲ್ಲ ವಸ್ತುಗಳು ಅಪರಿಚಿತವಾಗಿರುವದರಿಂದ ಎಲ್ಲ ವಸ್ತುಗಳ ಪರಿಚಯಮಾಡಿಕೊಳ್ಳುವದಕ್ಕಾಗಿ ಚಟುವಟಿಕೆಯುಳ್ಳದ್ದಾಗುವದು. ಅನುಕರಣದಿಂದ ಮಾತೃಭಾಷೆಯನ್ನು ಕಲಿಯುತ್ತ ಒಂದೊಂದು ವಸ್ತುವಿಗೆ ಸಂಬಂಧಿಸಿದ ಶಬ್ದವನ್ನು ಗ್ರಹಿಸಿ ಮನಸ್ಸಿನಲ್ಲಿ ಇಟ್ಟುಕೊಳ್ಳಲಿಕ್ಕೆ ಯತ್ನಿಸುವದು. ಆದರೂ ಮೂರು ವರ್ಷಗಳ ವರೆಗೆ ತನ್ನ ಮನಸ್ಸಿನಲ್ಲಿದ್ದದ್ದನ್ನು ಪರರಿಗೆ ತಿಳಿಸುವಷ್ಟು ಭಾಷೆಯ ಸಾಧನವು ಅದಕ್ಕೆ ಉಂಟಾಗಿರುವದಿಲ್ಲ. ಕಂಡಕಂಡ ವಸ್ತುಗಳನ್ನು ಸಮಗ್ರ

ವಾಗಿ ನೋಡಿ ಅದು ಏನು? ಹಾಗೆ ಯಾಕೆ ಇರುವದು, ಎಂಬ ಬಗ್ಗೆ ಆ ಮಗುವಿನಲ್ಲಿ ಒಂದುತರದ ಜಿಜ್ಞಾಸೆಯು ಹುಟ್ಟುತ್ತ ಹೋಗುವದು. ಕಲ್ಪನಾಶಕ್ತಿಯು ವಿಶೇಷ ಪ್ರಬಲವಾಗಿದ್ದರೂ ಸಿಟ್ಟು, ಭೀತಿ, ಅಹಂಕಾರ, ಮೊದಲಾದ ಭಾವನೆಗಳ ಅಮಲು ವಿಶೇಷವಾಗಿ ನಡೆಯುವದು. ಆದರೆ ಅವುಗಳ ಪರಿಣಾಮವು ಬಹಳ ಹೊತ್ತಿನ ವರೆಗೆ ನಿಲ್ಲಲಾರದು. ಇಚ್ಛಾಪೂರ್ವಕವಾಗಿ ಯಾವದೊಂದು ಕೆಲಸ ಮಾಡುವ ಶಕ್ತಿಯು ಮೂರು ವರ್ಷಗಳ ವರೆಗೆ ಕಂಡುಬಾರದಿದ್ದರೂ ಈ ಅವಧಿಯ ಕೊನೆಯ ಭಾಗಕ್ಕೆ ಪ್ರಯತ್ನಪೂರ್ವಕವಾಗಿ ಯಾವದೊಂದು ವಸ್ತುವನ್ನು ಲಕ್ಷ್ಯಪೂರ್ವಕವಾಗಿ ನಿರೀಕ್ಷಿಸುವ ಸಾಮರ್ಥ್ಯವು ಅದಕ್ಕೆ ಕ್ರಮೇಣ ಉಂಟಾಗುವದು. ಶಿಕ್ಷಣಶಾಸ್ತ್ರದಂತೆ ಈ ವಯೋಮಾನದಲ್ಲಿದ್ದ ವಿದಾರ್ಥಿಗಳಿಗೆ ಬಾಲಕರೆಂಬ ಸಂಜ್ಞೆಯನ್ನು ಕೊಟ್ಟಿರುವರು.

೨ನೇ ಭಾಗ— ೭ರಿಂದ ೧೪ ವರ್ಷಗಳವರೆಗೆ:— ಈ ವಯೋಮಾನದಲ್ಲಿ ವಿದ್ಯಾರ್ಥಿಗಳು ಪರಿಸ್ಥಿತಿಗೆ ಕೇವಲ ಅಧೀನರಾಗಿರದೆ ಪರಿಸ್ಥಿತಿಯ ಮೇಲೆ ತಮ್ಮ ಸ್ವಂತ ಅಮಲನ್ನು ಕೂಡ್ರಿಸಲಿಕ್ಕೆ ಪ್ರಯತ್ನಿಸುವರು. ಹೇಳಿದ್ದನ್ನು ಕೇಳಿ ಮನಸ್ಸಿನಲ್ಲಿಟ್ಟುಕೊಳ್ಳುತ್ತಿದ್ದರೂ ನಡುನಡುವೆ ಹಾಗೆ ಯಾಕೆ? ಹೀಗೆ ಯಾಕೆ? ಎಂದು ಪ್ರಶ್ನ ಮಾಡಹತ್ತುವರು. ಇಂದ್ರಿಯಗಳ ಮುಖಾಂತರ ದೊರಕಿಸಿಕೊಂಡ ಜ್ಞಾನವನ್ನು ಸ್ಮರಣದಲ್ಲಿ ಸಂಗ್ರಹಿಸಿಕೊಂಡು ಆ ಜ್ಞಾನದ ಸಹಾಯದಿಂದ ಸ್ಮರಣದಲ್ಲಿ ಕೂಡಿಟ್ಟ ಕಲ್ಪನೆಗಳನ್ನು ಒಂದರಗೂಡೊಂದು ಬೆರಿಸಿ ಹೊಸ ಹೊಸ ಕಲ್ಪನೆಗಳನ್ನು ಹುಟ್ಟಿಸಿಕೊಳ್ಳುವರು. ಈ ಕಾಲಕ್ಕೆ ಅವಶ್ಯವಾದ ವಿಚಾರಶಕ್ತಿಯು ಅವರಲ್ಲಿ ತಲೆದೋರಹತ್ತುವದು. ಸ್ಮರಣಶಕ್ತಿಯು ಮಿತಿಮಿಾರಿ ಬೆಳೆಯುವದು. ಹಾಗೂ ಆ ಕಾಲದಲ್ಲಿ ಪಾಠ ಮಾಡಿದ ವಿಷಯಗಳು ಎಂದೂ ಮರೆಯುವದಿಲ್ಲ. ವಿಚಾರಶಕ್ತಿಯು ಬೆಳೆದಂತೆ ಯಾವದೊಂದು ವಿಷಯದ ಬಗ್ಗೆ ಸಾರಾಸಾರ ವಿಚಾರಮಾಡಿ ಕಾರ್ಯಕಾರಣಭಾವಗಳನ್ನು ಸಮಾಲೋಚಿಸಿ ತಕ್ಕಮಟ್ಟಿಗೆ ಸರಿಯಾದ ನಿರ್ಣಯಗಳನ್ನು ಮಾಡಲು ಸಮರ್ಥರಾಗುವರು. ಅನುಭವವು ಹೆಚ್ಚಾದಂತೆ ನಾವು ಸಣ್ಣವರಿದ್ದಾಗ ಉಂಟಾದ ಭಾವನೆಗಳು ಸರಿಯಾದವುಗಳಲ್ಲವೆಂದು ಅವರಿಗೆ ಅನಿಸುತ್ತದೆ. ಹುಡುಗಾಟಿಕೆಯು ನೇರಪಂತಾಗುವದು. ಸಂಘ ಶಕ್ತಿಯು ಕಾಣಿಸಿಕೊಳ್ಳುವದು. ಮನೋವಿಕಾರಗಳು ಹೆಚ್ಚು ಗಡಚಾಗುತ್ತಹೋದರೂ ಬುದ್ಧಿಗೆ ಅಧೀನವಾಗಹತ್ತುವವು. ಇದರಿಂದ ಭೀತಿಯು ಕಡಿಮೆಯಾಗಿ ಪರರಬಗ್ಗೆ ಆದರ, ಪ್ರೀತಿ, ಭೂತದಯ, ಸ್ವಾಭಿಮಾನ, ಸತ್ಯಪ್ರೀತಿ ಮೊದಲಾದ ಉಚ್ಚ ಭಾವನೆಗಳು ದೃಷ್ಟ್ಯೋತ್ಪತ್ತಿಗೆ ಬರಹತ್ತುವವು. ಇಚ್ಛಾಶಕ್ತಿಯು ಮಿತಿಮಿಾರಿ ಬೆಳೆಯುವದು. ಅದರಿಂದ ತಮ್ಮ ಪ್ರತಿಷ್ಠೆಯನ್ನು ಮೆರೆಯಿಸುವ ಒಣ ಹೆಮ್ಮೆಯ ಅಂಶವು ಪ್ರತಿಯೊಂದು ಕೆಲಸದಲ್ಲಿ ಕಾಣಹತ್ತುವದು.

ಈ ವಯೋಮಾನವು ಪ್ರಾಥಮಿಕ ಶಿಕ್ಷಣಕ್ಕೆ ಬಹು ಅನುಕೂಲವಾದದ್ದು; ಆದ್ದರಿಂದ ಈ ಕಾಲಾವಧಿಯಲ್ಲಿ ಮಾತೃಭಾಷೆಯು ಮುಖಾಂತರ ಶಿಕ್ಷಣವು ದೊರಕತಕ್ಕದ್ದು.

೩ನೇ ಭಾಗ—೧೪ರಿಂದ ೨೧ ವರ್ಷಗಳ ವರೆಗೆ:— ಈ ವಯೋಮಾನದಲ್ಲಿ ವಿದ್ಯಾರ್ಥಿಗಳು ಪರಿಸ್ಥಿತಿಗೆ ಎಷ್ಟುಮಾತ್ರವೂ ಆಧೀನರಾಗಿರದೆ ತಮ್ಮ ಸ್ವಂತ ಪ್ರಯತ್ನದಿಂದ ಪ್ರತಿಕೂಲವಾದ ಪರಿಸ್ಥಿತಿಯನ್ನು ಸಹ ತಮಗೆ ಅನುಕೂಲವಾಗುವಂತೆ ಮಾಡಿಕೊಳ್ಳುವರು. ಎರಡನೆಯವರ ಕೈಯಲ್ಲಿ ಇರಲಾರದೆ ಸ್ವತಂತ್ರರಾಗಲಿಕ್ಕೆ ಇಚ್ಛಿಸುವರು. ಕಲಿಸಿದ್ದನ್ನೆಲ್ಲ ಗುರುವಿನ ಅಪ್ಪಣೆಯೆಂದು ಸ್ವೀಕರಿಸದೆ ಆ ತರದ ಜ್ಞಾನದಿಂದ ಏನು ಫಲ! ಎಂದು ಪೃಚ್ಛಾಪೃಚ್ಛ ಮಾಡತೊಡಗುವರು. ಹಿಂದೆ ತಾವು ದೊರಕಿಸಿದ ಜ್ಞಾನದ ಉಪಯೋಗವೇನು? ಅದನ್ನು ತಾವು ಯಾಕೆ ದೊರಕಿಸಿಕೊಂಡೆವು? ಎಂಬ ವಿಷಯವಾಗಿ ಸ್ವತಂತ್ರ ರೀತಿಯಿಂದ ತಮ್ಮ ಜ್ಞಾನಭಾಂಡಾರವನ್ನು ಪರೀಕ್ಷಿಸಿ ಅದನ್ನು ವರ್ಗೀಕರಿಸಿ ಸುವ್ಯವಸ್ಥಿತವಾಗಿ ಇಟ್ಟುಕೊಳ್ಳಲಿಕ್ಕೆ ಯತ್ನಿಸುವರು. ಈ ಸಂಧಿಗೆ ಸ್ಮರಣಶಕ್ತಿಯು ಬಲಹೀನವಾಗುವದು. ಆದುದರಿಂದ ಉಪಯೋಗಕ್ಕೆ ಬೀಳುವ ಸಂಗತಿಯನ್ನೇ ಆರಿಸಿ ಸ್ಮರಣದಲ್ಲಿ ಇಟ್ಟುಕೊಳ್ಳುವರು. ಸಾರಾಸಾರವಿಚಾರ, ಅನುಮಾನ, ನಿರ್ಣಯ ಮೊದಲಾದವುಗಳನ್ನು ತಮ್ಮ ಸ್ವಂತ ಬುದ್ಧಿಯ ಬಲದಿಂದ ಮಾಡಿಕೊಳ್ಳಹತ್ತುವರು. ಇದರಿಂದ ತಾವು ಈ ಜಗತ್ತಿನಲ್ಲಿ ಮಾಡತಕ್ಕ ಕರ್ತವ್ಯಗಳೇನು? ದೇವರು ಯಾವ ಉದ್ದೇಶದಿಂದ ತಮ್ಮನ್ನು ಹುಟ್ಟಿಸಿರುವನು? ಎಂಬ ಉದಾತ್ತ ಭಾವನೆಗಳು ಅವರ ಮನಸ್ಸಿನಲ್ಲಿ ಬರಹತ್ತುವಕಾರಣ ಕ್ರೋಧ, ದ್ರೋಹ, ಈರ್ಷ್ಯ, ಅಸೂಯಾ ಮೊದಲಾದ ಹೀನ ಭಾವನೆಗಳಿಗೆ ಅವರ ಮನಸ್ಸಿನಲ್ಲಿ ಆಸ್ಪದವು ದೊರಕದಂತಾಗುವದು. ಬುದ್ಧಿ ಇಚ್ಛೆಗಳು ಪ್ರಬಲವಾಗುವದರಿಂದ ವಿಕಾರವು ಕಡಿಮೆಯಾಗಿ ಸ್ಥಿರವಾದ ಸ್ವಭಾವವು ಉಂಟಾಗುವದು. ಗುರುಮುಖದಿಂದ ಶಿಕ್ಷಣ ಹೊಂದುವ ಕಾಲಾವಧಿಯು ೨೧ನೇ ವರ್ಷಕ್ಕೆ ಮುಗಿಯುವದು. ಮುಂದಿನ ಶಿಕ್ಷಣವು ಸ್ವಂತ ಪ್ರಯತ್ನದಿಂದಲೇ ಸಾಗುವದು.

ಮೇಲೆ ಹೇಳಿದ ವಯೋಮಾನದಲ್ಲಿ ಮಾನಸಿಕ ವಿಕಾಸವಾದಂತೆ ಶಾರೀರಿಕ ಬೆಳವಣಿಗೆಯಲ್ಲಿಯೂ ಮಹತ್ವವುಳ್ಳ ಅದಲುಬದಲುಗಳಾಗುವವು. ೧ರಿಂದ ೩ವರ್ಷಗಳವರೆಗೆ ಹುಡುಗರಿಗೆ ಹಲ್ಲುಬರುವವು. ೭ ವರ್ಷಗಳು ಮುಗಿಯುವಷ್ಟರೊಳಗೆ ಹಾಲಹಲ್ಲುಗಳು ಬೀಳಹತ್ತುವವು. ಈ ವಯೋಮಾನದಲ್ಲಿ ಬಾಲಕರು ತಾವು ಮುಂದೆ ಬೆಳೆಯಲಿಕ್ಕೆ ಬೇಕಾದ ಪದಾರ್ಥಗಳನ್ನು ಹುಟ್ಟಿಸಿಕೊಳ್ಳುವದರಲ್ಲಿ ತೊಡಗಿರುವದರಿಂದ ಅವರ ಶರೀರದ ಎತ್ತರವು ಅಷ್ಟು ಬೆಳೆಯುವದಿಲ್ಲ. ಮೋರೆಯು ಮೇಲೆ ಮೋಹಕಳೆ ಇರುವದು. ೭ನೇ ವಯೋಮಾನದಲ್ಲಿ ಹೊಸ ಹಲ್ಲುಗಳು ಬರುವವು. ಎತ್ತರವು

ಮಿತಿಮೀರಿ ಬೆಳೆಯುವದು. ಮೋರೆಯ ಮೇಲೆ ಹರಿಯದ ಕಳೆಯು ಕಾಣಹತ್ತುವದು. ಇನ್ನೇ ವಯೋಮಾನದಲ್ಲಿ ಶರೀರದ ಪರಮಾವಧಿ ಎತ್ತರವು ಬೆಳೆದು ಧಷ್ಟಪುಷ್ಟವಾಗುವದು. ಮೋರೆಯ ಮೇಲೆ ಪ್ರಾಯದ ಕಳೆಯು ಪೂರ್ಣ ಬರುವದು. ಧ್ವನಿಗೆಯು ಕಟ್ಟಾಗುವದು ! ಅಕ್ಕಲ ದವಡೆಯ ಹಲ್ಲು ಒಡೆಯುವದು.

ಸಂವೇದನ ಅಥವಾ ಇಂದ್ರಿಯಜನ್ಯ ಸಂಸ್ಕಾರ

ಬಾಹ್ಯ ಸೃಷ್ಟಿಯ ಜ್ಞಾನವನ್ನು ಮಿದುಳಿಗೆ ಮುಟ್ಟಿಸಲಿಕ್ಕೆ ಶರೀರದ ಎಲ್ಲಾ ಭಾಗಗಳಲ್ಲಿ ಕ್ರಿಯಾವಾಹಿನರಗಳೂ ಮಿದುಳಿನಿಂದ ಹೊರಟ ಅಪ್ಪಣೆಗಳನ್ನು ಆಯಾ ಅವಯವಗಳಿಗೆ ಒಯ್ಯುವ ಕ್ರಿಯಾವಾಹಿ ನರಗಳೂ ಶರೀರದ ಎಲ್ಲಾ ಭಾಗಗಳಲ್ಲಿ ಹರಡಿಕೊಂಡಿರುವವೆಂಬ ಸಂಗತಿಯು ಈ ಮೊದಲೇ ಗೊತ್ತಾಗಿದೆ. ಜ್ಞಾನವಾಹಿನರಗಳ ಮುಖಾಂತರ ಯಾವದೊಂದು ಬಗೆಯ ಅರಿವು ಮಿದುಳಿಗೆ ಉಂಟಾದಾಗ ಇಂದ್ರಿಯಜನ್ಯ ಜ್ಞಾನ ಇಲ್ಲವೆ ಸಂವೇದನ ಉಂಟಾಗುವದು. ಸಂವೇದನವು ಸಾಮಾನ್ಯವಾದದ್ದಾಗಲಿ ವಿಶೇಷವಾದದ್ದಾಗಲಿ ಇರುವದು.

ಯಾವತರದ ಸಂವೇದನಗಳುಂಟಾಗಲಿಕ್ಕೆ ಶರೀರದಲ್ಲಿ ವಿವಕ್ಷಿತವಾದ ಇಂದ್ರಿಯಗಳಿರುವದಿಲ್ಲವೊ ಅಂಥ ಶಾರೀರಿಕ ಸಂವೇದನಗಳು ಹಸಿವೆ, ನೀರಡಿಕೆ, ಉಸುರುಗಟ್ಟೋಣ, ರೋಮಾಂಚನ, ಮೂರ್ಚ್ಛೆ, ದಣುವು ಮುಂತಾದವು ಸಾಮಾನ್ಯ ಸಂವೇದನೆಗಳು. ಯಾಕಂದರೆ ಈ ತರದ ಸಂವೇದನಗಳು ಇಂಥದೊಂದು ಹುಟ್ಟಿತ್ತೆಂದು ಹೇಳಲಿಕ್ಕಾಗುವದಿಲ್ಲ. ಇವುಗಳ ಸಂಬಂಧವು ಇಡಿ ಶರೀರಕ್ಕೆ ಇರುವದರಿಂದ ಇವುಗಳಿಗೆ ಶಾರೀರಿಕ ಸಂವೇದನವೆಂಬ ಹೆಸರು ಒಪ್ಪುವದು. ಜಗತ್ತಿನ ಅನುಭವವಿಲ್ಲದ ಚಿಕ್ಕಮಕ್ಕಳಿಗೆ ಹಸಿವೆ, ಆನಂದ, ದುಃಖ ಮೊದಲಾದವು ಬಾಹ್ಯ ಪ್ರೇರಣೆ ಇಲ್ಲದೆ ಆಗುತ್ತಿರುವದರಿಂದ ಇವುಗಳಿಗೆ ಮನಸಿನ ಸಂಬಂಧವಿಲ್ಲವೆಂದು ನಂಬಬೇಕಾಗುವದು.

ಪಂಚೇಂದ್ರಿಯಗಳಾದ ತ್ವಕ್ಕು, ಜಿಹ್ವಾ, ನಾಸಿಕ, ಕರ್ಣ, ನೇತ್ರಗಳಿಂದುಂಟಾಗುವ ಸ್ಪರ್ಶನ, ರಸನ, ಆಘ್ರಾಣ, ಶ್ರವಣ, ಹಾಗು ಈಕ್ಷಣಗಳು ವಿಶಿಷ್ಟವಾದ ಸಂವೇದನಗಳು. ಒಂದೊಂದುಬಗೆಯ ಸಂವೇದನಕ್ಕೆ ಒಂದೊಂದು ಇಂದ್ರಿಯ ವಿಶೇಷವಿರುವದು. ಬಾಹ್ಯ ಪ್ರೇರಣೆಯ ಪರಿಣಾಮವು ಆಯಾ ಇಂದ್ರಿಯಗಳಲ್ಲಿ ಹರಡಿಕೊಂಡಿರುವ ಜ್ಞಾನವಾಹಿನರಗಳ ಅಗ್ರಭಾಗದಮೇಲೆ ಆಗಲು ಅವು ಕಂಪನ ಹೊಂದಹತ್ತುವವು. ಈ ಕಂಪನಗಳು ಮಿದುಳಿನ ಕೆಲವು ವಿವಕ್ಷಿತ ಕೋಶಗಳಿಗೆ ಹೋಗಿ ಮುಟ್ಟಲು ಆ ಕೋಶಗಳಲ್ಲಿ ಸ್ಥಿತ್ಯಂತರ ಉಂಟಾಗಿ ಆಯಾ ತರದ ಇಂದ್ರಿಯ ಜನ್ಯಜ್ಞಾನವು ಉಂಟಾಗುವದು. ಈ ತರದ ಸಂವೇದನಗಳ ಪ್ರತ್ಯಕ್ಷ ಸಂಬಂಧವು ಮನಸ್ಸಿಗೆ ಇರುವದು.

ಸಂವೇದನವಾದಕೂಡಲೆ ಮಿದುಳಿನ ಕೋಶಗಳ ಸ್ಥಿತ್ಯಂತರಗಳಮೂಲಕ ತಜ್ಜನಿತ ಬೋಧವು ಅದೇಕಾಲಕ್ಕೆ ಉಂಟಾಗುವದು. ಆದರೂ ಸಂವೇದನ ಹಾಗು ಬೋಧವು ಎರಡು ಭಿನ್ನತರದ ವ್ಯಾಪಾರಗಳಾಗಿರುವವು. ಸಂವೇದನವು ಕೇವಲ ಶಾರೀರಿಕ ವ್ಯಾಪಾರವಾಗಿರದೆ ಅತಿ ಸೂಕ್ಷ್ಮವಾದ ಮನೋವ್ಯಾಪಾರವಾಗಿರುವದು. ಆದರಿಂದ ನಾನಾತರದ ಅರಿವುಗಳು ಹೇಗೆ ಉಂಟಾಗುವವು ಎಂಬದು ಮಾನಸ ಶಾಸ್ತ್ರಜ್ಞರಿಗೆ ಇನ್ನೂ ಗೊತ್ತಾಗಿಲ್ಲ.

ಮಿದುಳು ಇಂದ್ರಿಯಜನ್ಯ ಜ್ಞಾನದ ಮೂಲಸ್ಥಾನವಾಗಿರುವದರಿಂದ ನಮ್ಮ ಶರೀರದ ಯಾವಭಾಗವಲ್ಲಿಯಾಗಲಿ ನೋವು ಉಂಟಾದಾಗ ಆ ನೋವು ಆ ಭಾಗಗಳಲ್ಲಿ ಉಂಟಾಗದೆ ಮಿದುಳಿನಲ್ಲಿ ಉಂಟಾಗುವದೆಂಬು ತಿಳಿಯುವದು. ಇದರಂತೆ ದೃಷ್ಟಿಜ್ಞಾನವು ಕಣ್ಣುಗಳಲ್ಲಿರದೆ ಮಿದುಳಿನಲ್ಲಿ ಉಂಟಾಗುವದೆಂದೂ ಇತರ ಇಂದ್ರಿಯ ಜ್ಞಾನಗಳು ಕೂಡ ಆಯಾ ಇಂದ್ರಿಯಗಳಲ್ಲಿ ಉಂಟಾಗದೆ ಮಿದುಳಿನಲ್ಲಿ ಉಂಟಾಗುವವೆಂದೂ ತಿಳಿಯುವದು.

ಮೇಲೆ ಹೇಳಿದ ಪಂಚೇಂದ್ರಿಯಗಳಿಂದ ಸ್ಪರ್ಶ, ರಸನ, ಗಂಧ, ಶಬ್ದ ಹಾಗು ರೂಪ, ಎಂಬ ಐದು ವಿಧವಾದ ಇಂದ್ರಿಯಜನ್ಯ ಜ್ಞಾನಗಳಾಗುವವು. ಇವುಗಳ ಹೊರ್ತು ನಮಗೆ ಸ್ನಾಯುಗಳ ಮುಖಾಂತರ ಸ್ನಾಯುಜನ್ಯ ಜ್ಞಾನವೆಂಬ ಒನೆಯದೊಂದು ಜ್ಞಾನವಾಗುವದುಂಟು. ಇದರ ಸಹಾಯದಿಂದ ಪದಾರ್ಥಗಳ ಭಾರವನ್ನು ತಿಳಿಯಲಿಕ್ಕೆ ಆಗುವದು.

ಪಂಚೇಂದ್ರಿಯಗಳು, ಅವುಗಳಿಂದ ಆಗತಕ್ಕ ಜ್ಞಾನಗಳು.

ಶಿಕ್ಷಣ ಶಾಸ್ತ್ರ ದೃಷ್ಟಿಯಿಂದ ತ್ವಗಿಂದ್ರಿಯ ಶ್ರವಣೇಂದ್ರಿಯ ಹಾಗು ನೇತ್ರೇಂದ್ರಿಯಗಳು ಅತಿ ಮಹತ್ವವುಳ್ಳವುಗಳಾಗಿರುವವು. ಯಾಕಂದರೆ ಬಾಹ್ಯ ಸೃಷ್ಟಿಯಲ್ಲಿರುವ ಅನೇಕ ವಿಧ ಪದಾರ್ಥಗಳ ಜ್ಞಾನವು ಈ ಇಂದ್ರಿಯಗಳ ಮುಖಾಂತರ ಆಗಿ ಅದು ಮನಸ್ಸಿನಲ್ಲಿ ದೃಢವಾಗಿ ನಿಲ್ಲುವದು. ಆದರೆ ರಸನೇಂದ್ರಿಯ ಹಾಗು ಘ್ರಾಣೇಂದ್ರಿಯಗಳ ಮುಖಾಂತರ ಆದ ಜ್ಞಾನವು ತಾತ್ಕಾಲಿಕವಿದ್ದು ಕೂಡಲೇ ಇಲ್ಲದಂತಾಗುವದರಿಂದ ಅವುಗಳಿಗೆ ಅಷ್ಟು ಮಹತ್ವವಿರುವದಿಲ್ಲ.

ಸ್ಪರ್ಶೇಂದ್ರಿಯ:—ನಮ್ಮ ಶರೀರದ ಹೊರಭಾಗವು ದಪ್ಪಾದ ಚರ್ಮದಿಂದಲೂ ಒಳಭಾಗವು ‘ ಆರ್ದ್ರ ತ್ವಚ ’ ಎಂಬ ಪರಿಯಂಥ ಸೂಕ್ಷ್ಮವಾದ ಚರ್ಮದಿಂದಲೂ ಆಚ್ಛಾದಿತವಾಗಿರುವದು. ಇಂಥ ಚರ್ಮದ ಒಳಬದಿಗೆ ತ್ವಗಿಂದ್ರಿಯ ಜ್ಞಾನವನ್ನು ಮಿದುಳಿಗೆ ಒಯ್ದು ಮುಟ್ಟಿಸುವ ಸರಮಂಡಲವು ಇರುವದು. ಹೊರಬದಿಗೆ ಇರುವ

ದಪ್ಪಾದ ಚರ್ಮದಲ್ಲಿ ಹೊರಪದರು, ಒಳಪದರು ಎಂಬ ಎರಡು ಪದರುಗಳಿದ್ದು ಅವುಗಳ ಮಧ್ಯದಲ್ಲಿ ಉಬ್ಬುಗಳಿರುವವು. ಈ ಉಬ್ಬುಗಳಲ್ಲಿ ಜ್ಞಾನವಾಹಿನರಗಳು ಸೇರಿ ಕೊಂಡಿರುವವು. ಹೊರಪದರು ಸೂಕ್ಷ್ಮವಾದ ಒಳಚರ್ಮವನ್ನು ಕಾಪಾಡುವದು. ಇದನ್ನು ಸುಲಿದುಬಿಟ್ಟು ಆ ಸುಲಿದ ಭಾಗದಿಂದ ನಾವು ಯಾವದೊಂದು ಪದಾರ್ಥ ವನ್ನು ಮುಟ್ಟಿ ಕೈಯಾಡಿಸಿದರೆ ನಮಗೆ ಸ್ಪರ್ಶಜ್ಞಾನಉಂಟಾಗದೆ ಸಹಿಸಲಾರದಷ್ಟು ನೋವು ಮಾತ್ರ ಉಂಟಾಗುವದು. ನಿಜವಾದ ಸ್ಪರ್ಶ ಜ್ಞಾನವನ್ನುಂಟುಮಾಡುವ ಬಾಹ್ಯವಸ್ತುವಿಗೂ ಒಳಪದರಿನ ಉಬ್ಬುಗಳಲ್ಲಿ ಹರಡಿಕೊಂಡಿರುವ ನರಗಳಿಗೂ ಮಧ್ಯ ದಲ್ಲಿ ಹೊರಪದರು ಇದ್ದದ್ದಾದರೆ ನಮಗೆ ಆ ವಸ್ತುವಿನ ಬಗ್ಗೆ ಯಥಾರ್ಥ ಜ್ಞಾನವಾಗು ವದು. ಸ್ಪರ್ಶಜ್ಞಾನವು ದೇಹದ ಎಲ್ಲ ಭಾಗಗಳಲ್ಲಿ ಒಂದೇಸವನೆ ಆಗುವದಿಲ್ಲ. ಅದು ನಾಲಿಗೆಯ ತುದಿಯಲ್ಲಿ ಅತಿ ಚುರುಕಾಗಿಯೂ ಬೆರಳುಗಳ ತುದಿಯಲ್ಲಿ ಅದಕ್ಕಿಂತ ಕಡಿಮೆಯಾಗಿಯೂ ತುಟಿಗಳ ಅಂಚುಗಳ ತುದಿಯಲ್ಲಿ ಅದಕ್ಕಿಂತ ಕಡಿಮೆಯಾಗಿಯೂ ಆಗುವದು. ಶೀತೋಷ್ಣತೆ ಸಂಬಂಧದಿಂದ ವಿಚಾರಿಸಿ ನೋಡಿದರೆ ದೇಹದ ಮೇಲಿರುವ ಚರ್ಮದ ಭಾಗಗಳಲ್ಲಿ ವ್ಯತ್ಯಾಸವು ಕಂಡುಬರುವದು. ಕಣ್ಣಿನ ರೆಪ್ಪೆಗಳು, ಮೊಳಕೈ ಕೀಲದ ಮೇಲೆ ಇರುವ ಚರ್ಮವು ಉಷ್ಣತೆಯನ್ನು ತಿಳಕೊಳ್ಳುವದರಲ್ಲಿ ಅತಿ ಚುರುಕಾ ಗಿರುವವು. ಆದರೆ ನಾಲಿಗೆ ಅಂಗೈ ಮುಂತಾದವುಗಳು ಮಂದವಾಗಿರುವವು.*

ಸ್ಪರ್ಶಜ್ಞಾನವಾಗುವ ಕ್ರಮ:— ಯಾವದೊಂದು ಪದಾರ್ಥವು ಚರ್ಮಕ್ಕೆ ತಗಲಿ ಆ ಭಾಗದಲ್ಲಿ ಭಾರಹಾಕಲು ಅಲ್ಲಿ ಕಂಪನಗಳುಂಟಾಗಹತ್ತುವವು. ಆ ಕಂಪನ ಗಳನ್ನು ಜ್ಞಾನವಾಹಿನರಗಳು ಮಿದುಳಿಗೆ ಒಯ್ಯಲು ಮಿದುಳು ಒಂದೊಂದು ಬಗೆಯ ಅನುಭವವನ್ನು ಮಾಡಿಕೊಂಡು ಆ ಜ್ಞಾನಕ್ಕೆ ಒಂದೊಂದು ಹೆಸರಿಡುವದು. ಈ ಕಾರ್ಯದಲ್ಲಿ ಸ್ನಾಯುಗಳ ಮೇಲೆ ಭಾರಬಿದ್ದು ಒಂದು ಪ್ರಕಾರದ ಸ್ನಾಯುಜನ್ಯಜ್ಞಾನ ವಾಗುವದು. ಇದರಿಂದ ಅನೇಕಸಾರೆ ಒಂದುಬಗೆಯ ಸಂಕಲಿತ ಜ್ಞಾನವಾಗುವದು. ಆದ್ದರಿಂದ ಸ್ಪರ್ಶಜ್ಞಾನದಲ್ಲಿ ಕೇವಲ ಸ್ಪರ್ಶಜ್ಞಾನ ಹಾಗು ಸಂಕಲಿತ ಸ್ಪರ್ಶಜ್ಞಾನ ಎಂಬ ಎರಡು ವಿಧವು. ಸಂಕಲಿತಜ್ಞಾನವನ್ನು ನಾಲ್ಕು ವಿಧವಾಗಿ ವಿಂಗಡಿಸಬಹುದು.

(೧) ಮಿದುವು-ಬಿರುಸು, (೨) ನುಣುಪು—ಹುಗಬರಕು (೩) ಹಗುರು—ಭಾರ (೪) ಶೀತೋಷ್ಣ.

---

* ನಾಲಿಗೆಯ ತುದಿಯಲ್ಲಿ ಇರುವ ಎರಡು ಉಬ್ಬುಗಳ ನಡುವಿನ ಅಂತರವು $\frac{೧}{೨೪}$" ಇರುವದು. ಬೆರಳಿನ ತುದಿಯಲ್ಲಿರುವ ಎರಡು ಉಬ್ಬುಗಳ ನಡುವಿನ ಅಂತರವು $\frac{೧}{೧೨}$" ಇರುವುದು. ತೊಡೆಯ ಮೇಲಿರುವ ಚರ್ಮದ ಮಧ್ಯದಲ್ಲಿರುವ ಉಬ್ಬುಗಳ ನಡುವಿನ ಅಂತರವು ೨$\frac{೧}{೨}$" ಇರುವದು.

ಕೇವಲ ಸ್ಪರ್ಶೇಂದ್ರಿಯಕ್ಕೆ ಸಂಬಂಧಪಟ್ಟ ಜ್ಞಾನಗಳು ಅಂದರೆ ಮುಟ್ಟೋಣ, ಚುಚ್ಚೋಣ, ಮುಳ್ಳು ಮುಳ್ಳಾಗಿ ಹತ್ತೋಣ. ಈ ಇಂದ್ರಿಯದ ಉಪಯೋಗವು ಉಳಿದ ಇಂದ್ರಿಯಗಳಿಗೆ ಸಹಾಯಕಾರಿಯಂತೆ ಆಗಿ ಪದಾರ್ಥಗಳ ಆಕಾರ, ಅಂತರ, ಪೃಷ್ಠಭಾಗ, ಮಿದುವು, ಕಠಿಣ ಮುಂತಾದ ಜ್ಞಾನವಾಗುವದು. ಶಿಕ್ಷಣ ದೃಷ್ಟಿಯಿಂದ ಈ ಇಂದ್ರಿಯದ ಉಪಯೋಗವು ಅತಿ ಹೆಚ್ಚಾಗಿರುವದು. ಕುರುಡರಲ್ಲಿ ಸ್ಪರ್ಶೇಂದ್ರಿಯವು ಮಿತಿಮೀರಿ ಹೆಚ್ಚಾಗಿ ಅವರು ಅನೇಕ ಬಗೆಯ ಕೈಕೆಲಸಗಳನ್ನು ಮಾಡಲು ಸಮರ್ಥರಾಗುವರು.

ನೇತ್ರೇಂದ್ರಿಯ:— ಶಿಕ್ಷಣಕಾರ್ಯದಲ್ಲಿ ಈ ಜ್ಞಾನೇಂದ್ರಿಯದ ಮಹತ್ವವು ಹೆಚ್ಚಾಗಿರುವದು. ಈ ಇಂದ್ರಿಯದ ಸಹಾಯದಿಂದ ಪ್ರಾಮುಖ್ಯವಾಗಿ ನಮಗೆ ಬೆಳಕು, ಕತ್ತಲೆ, ಬಣ್ಣ ಮೊದಲಾದವುಗಳ ಜ್ಞಾನವಾಗುವದು. ಉಳಿದ ಜ್ಞಾನೇಂದ್ರಿಯಗಳ ಸಹಾಯದಿಂದಲೂ ಸ್ನಾಯುಗಳ ಪ್ರಸರಣಾಕುಂಚನದಿಂದಲೂ ಒಂದು ಬಗೆಯ ಸಂಸ್ಕಾರದಿಂದ ಪದಾರ್ಥಗಳ ಗಾತ್ರ, ರೂಪ, ಅಂತರ ಮೊದಲಾದ ಜ್ಞಾನಗಳಾಗುವವು. ಬೆಳಕೆಂಬ ಬಾಹ್ಯ ಉತ್ತೇಜಕದಿಂದ ಪದಾರ್ಥಗಳ ಮೇಲೆ ಬಿದ್ದು ಪರಾವರ್ತವಾದ ಕಿರಣಗಳು ಕಣ್ಣಿನಲ್ಲಿ ಸೇರಿ ಕಣ್ಣಿನ ಹಿಂಬದಿಗಿರುವ 'ರೇಟಿನಾ' ಎಂಬ ಚಿತ್ರಪಟದಮೇಲೆ ಆಯಾ ವಸ್ತುಗಳ ಛಾಯಾ ಪ್ರತಿಮೆಯನ್ನುಂಟುಮಾಡುವವು. ಆ ಚಿತ್ರಪಟದ ಒಳಬದಿಗೆ ವ್ಯಾಪಿಸಿಕೊಂಡಿರುವ ಜ್ಞಾನವಾಹಿನರಗಳು ಆ ಪ್ರತಿಮೆಗಳನ್ನು ಗ್ರಹಿಸಿಕೊಂಡು ಒಂದು ಬಗೆಯ ಕಂಪನವನ್ನುಂಟುಮಾಡುವವು. ಆ ಕಂಪನವು ಮಿದುಳಿಗೆ ಮುಟ್ಟಲು ದೃಷ್ಟಿಜ್ಞಾನವಾಗುವದು. ಕೇವಲ ನೇತ್ರೇಂದ್ರಿಯದಿಂದ ಬೆಳಕು ಕತ್ತಲೆ ನಾನಾತರದ ಬಣ್ಣಗಳ ಜ್ಞಾನಮಾತ್ರ ಆಗುವದು. ಪದಾರ್ಥಗಳ ಅಂತರವನ್ನು ಕಣ್ಣಿನಿಂದ ಅಳೆಯುವ ಶಕ್ತಿಯು ಶಿಶುಗಳಿಗೆ ಇರುವದಿಲ್ಲವೆಂಬ ಸಂಗತಿಯು, ಕೂಸುಗಳು ಚಂದ್ರನನ್ನು ಹಿಡಿಯಲಿಕ್ಕೆ ಹೋಗುವದರಮೇಲಿಂದ ವ್ಯಕ್ತವಾಗುವದು. ಮುಂದೆ ಕ್ರಮೇಣ ಬಾಲಕರು, ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸರಿದುಹೋಗಿ ಅದರಿಂದುಂಟಾಗುವ ಸ್ನಾಯುಗಳ ಶ್ರಮ ಹಾಗು ತ್ವಗಿಂದ್ರಿಯದಿಂದಾಗುವ ಜ್ಞಾನಗಳಿಂದ ಪದಾರ್ಥಗಳ ಅಂತರವನ್ನು ಅವುಗಳ ದೃಶ್ಯಮಾನ ಆಕಾರಗಳಿಂದಲೂ ಸಮೀಪದಲ್ಲಿ ಇಲ್ಲವೆ ದೂರದಲ್ಲಿದ್ದ ವಸ್ತುಗಳನ್ನು ನೋಡುವಾಗ ಕಣ್ಣಿನ ನರಗಳಲ್ಲಾಗತಕ್ಕ ಸ್ಥಿತ್ಯಂತರಗಳಿಂದಲೂ ಅಂತರಜ್ಞಾನವನ್ನು ನೋಡಿಕೊಳ್ಳುವರು. ಆದರೂ ನೇತ್ರೇಂದ್ರಿಯದಿಂದಾದ ಈ ತರದ ಜ್ಞಾನವು ಅಷ್ಟು ನಿಶ್ಚಿತವಾದದ್ದಲ್ಲ. ಇದರಂತೆ ನೇತ್ರೇಂದ್ರಿಯದಿಂದುಂಟಾದ ಪದಾರ್ಥಗಳ ಘನ ಆಕಾರದ ಜ್ಞಾನವು ಅನೇಕ ಪ್ರಸಂಗಗಳಲ್ಲಿ ನಿಜವಾದದ್ದಿರದೆ ಒಂದು ಬಗೆಯ ಕಣ್ಣು ಮುಸಕಾಗಿರುವದು. ಪಡದೆಯಮೇಲೆ ತೆಗೆದ ಚಿತ್ರವನ್ನು ದೂರದಿಂದ ನೋಡಿದರೆ ಅವು ಮೈ ಕೈ ತುಂಬಿಕೊಂಡು ಗಾತ್ರವುಳ್ಳ ಚಿತ್ರದಂತೆ ಭಾಸ

ವಾಗುವವು. ಆದರೆ ಪಡದೆಯನ್ನು ಮುಟ್ಟದಕೂಡಲೆ ಅವುಗಳಿಗೆ ಗಾತ್ರವಿರದೆ ಅವು ಸಪಾಟಾಗಿರುವವೆಂಬದು ಗೊತ್ತಾಗುವದು. ಇದರಿಂದ ಮೇಲೆ ಹೇಳಿದ ಪ್ರಕಾಶ ಹಾಗು ಬಣ್ಣಗಳ ಸಂಬಂಧವಾದ ಜ್ಞಾನಗಳ ಹೊರತು ಉಳಿದ ಈ ಇಂದ್ರಿಯದ ಜ್ಞಾನಗಳು ಸ್ಪರ್ಶೇಂದ್ರಿಯದ ಸಹಾಯವಿರದಿದ್ದರೆ ವಿಶ್ವಸನೀಯವಾಗಲಾರವೆಂಬದು ಗೊತ್ತಾಗುವದು.

ಶ್ರೋತ್ರೇಂದ್ರಿಯ:— ನಮಗೆ ಶಬ್ದಜ್ಞಾನವನ್ನುಂಟುಮಾಡಲಿಕ್ಕೆ ಶ್ರವಣೇಂದ್ರಿಯವು ಇರುವದು. ಹವೆಯಲ್ಲುಂಟಾದ ಆಘಾತದಿಂದ ಹುಟ್ಟಿದ ತರಂಗಗಳು ಬಾಹ್ಯ ಕರ್ಣದಮೇಲೆ ಇರುವ ನಗಾರಿಯ ಮೇಲೆ ಬಂದು ಅಪ್ಪಳಿಸಲು ಅದು ಕಂಪನ ಹೊಂದಹತ್ತುವದು. ಆ ಕಂಪನಗಳು ಅದರ ಹಿಂದಿರುವ ಕೊಡತಿಯಂಥ ಎಲುವಿಗೆ ತಗಲಲು ಅದು ಆ ಕಂಪನಗಳನ್ನು ತನ್ನ ಹಿಂದೆ ಇರುವ ಅದಿಗಲ್ಲಿನಂಥ ಎಲುವಿನ ಮೇಲೆ ಅಪ್ಪಳಿಸುವದು. ಈ ಕ್ರಮದಿಂದ ತರಂಗಗಳು ಬಾಹ್ಯ ಕರ್ಣದಿಂದ ಮಧ್ಯ ಕರ್ಣಕ್ಕೂ ಅಲ್ಲಿಂದ ಅಂತರ್ಕರ್ಣಕ್ಕೂ ಹೋಗಿ ಅಲ್ಲಿರುವ ಪೊಳ್ಳಾದ ಎಲವುಗಳ ಸುತ್ತುಗಳಲ್ಲಿ ತುಂಬಿಕೊಂಡಿರುವ ಒಂದು ಬಗೆಯ ರಸದಲ್ಲಿ ಅದೇ ತರದ ಕಂಪನಗಳನ್ನುಂಟುಮಾಡುವವು. ಅಲ್ಲಿ ಜ್ಞಾನತಂತುಗಳು ಹರಡಿಕೊಂಡಿರುವದರಿಂದ ಆ ಕಂಪನಗಳು ಆ ತಂತುಗಳಿಗೆ ಮುಟ್ಟಲು ಅವುಗಳನ್ನು ಮಿದುಳಿಗೆ ಒಯ್ದು ಮುಟ್ಟಿಸುವವು. ಆಗ ಮಿದುಳಿನ ಕೋಶಗಳಲ್ಲಿ ಸ್ಥಿತ್ಯಂತರಗಳುಂಟಾಗಿ ಮಿದುಳು ಶಾಬ್ದಿಕ ಜ್ಞಾನವನ್ನು ಮಾಡಿಕೊಂಡು ಒಂದೊಂದು ಬಗೆಯ ಜ್ಞಾನವನ್ನು ಗ್ರಹಿಸುವದು. ಈ ಇಂದ್ರಿಯದಿಂದ ಆಗತಕ್ಕ ಶಬ್ದಜ್ಞಾನವು ಎರಡು ವಿಧವಾಗಿದೆ.

ಬ್ರಹ್ಮೀ ಜನರು

(ಒಂದು ಮರಾಠಿ ಪತ್ರಿಕೆಯಿಂದ ಸಂಗ್ರಹಿಸಿದ್ದು.)

ಬರಹಗಾರ:— ಶ್ರೀ. ಲಕ್ಷ್ಮಣ ವಿಶ್ವನಾಥ ಫಾಟಕ, ಅಣ್ಣಿಗೇರಿ.

ಹಿಂದುಸ್ಥಾನ ಹಾಗು ಬ್ರಹ್ಮದೇಶ ಇವು ಭೌಗೋಲಿಕ ದೃಷ್ಟಿಯಿಂದ ಭಿನ್ನವೆಂದು ಎಣಿಸಲ್ಪಡುತ್ತಿದ್ದರೂ ಸಾಂಸ್ಕೃತಿಕ ದೃಷ್ಟಿಯಿಂದ ಮಾತ್ರ ಬ್ರಹ್ಮದೇಶವು ಹಿಂದುಸ್ಥಾನದ ಒಂದು ಭಾಗವೆಂತಲೇ ತಿಳಿಯಲ್ಪಡುತ್ತದೆ. ಬ್ರಹ್ಮದೇಶದಲ್ಲಿ ಹಿಂದಿ, ಚಿನಿ, ಜಪಾನಿ, ಯುರೋಪಿಯನ್ ಮೊದಲಾದ ಪರದೇಶದ ಜನರ ಸಂಖ್ಯೆಯು

ಹೆಚ್ಚಾಗಿದ್ದರೂ ಮೊಂಗೊಲಿಯನ್ ರಕ್ತದ ಬ್ರಹ್ಮೀ ಜನರ ಮೇಲೆ ಹಿಂದೀ ಸಂಸ್ಕೃತಿಯ ಪರಿಣಾಮವೇ ವಿಶೇಷವಾಗಿ ಮೂಡಿದಂತೆ ಕಂಡುಬರುತ್ತದೆ. ತತ್ವಜ್ಞಾನಿಗಳೂ, ನಿಸರ್ಗಪ್ರಿಯರೂ, ಇತಿಹಾಸ ಭಕ್ತರೂ, ಪುರಾಣ-ವಸ್ತು-ಸಂಶೋಧಕರೂ, ಪ್ರವಾಸಪ್ರೇಮಿಗಳೂ, ಬೇಟೆಯ ಲಾಲಸೆಯುವರೂ ಆಗಿರುವ ಮಹಾಭಾಗರಿಗೆ ಬ್ರಹ್ಮದೇಶವು ಮನೋರಂಜಕವೂ, ಪ್ರೇಕ್ಷಣೀಯವೂ, ಹೃದಯಂಗಮವೂ ಎನಿಸುವದರಲ್ಲಿ ಯಾವ ಸಂದೇಹವೂ ಇಲ್ಲ. ಒಂದು ಕಾಲದಲ್ಲಿ ಸ್ವರ್ಗಲೋಕದಿಂದ ನಾಲ್ಕು ಬ್ರಹ್ಮಾಜನರು ಅಕಸ್ಮಿಕವಾಗಿ ಇಹಲೋಕದಲ್ಲಿಳಿದು, ಅಲ್ಲಿಯ ಅನ್ನ-ನೀರು ಗ್ರಹಣಮಾಡಿದ್ದರಿಂದ ಭ್ರಷ್ಟತ್ವವನ್ನು ಹೊಂದಿದರು. ಆಗ ಅವರ ಅಧಿಪತಿಯಾದ ಮಹೇಂದ್ರನು ಅವರಿಗೆ ತಿರುಗಿ ಸ್ವರ್ಗದಲ್ಲಿ ಪ್ರವೇಶಮಾಡಗೊಡದಿದ್ದುದರಿಂದ ಅವರು ಉಪಾಯಗಾಣದೆ ಇಹಲೋಕದಲ್ಲಿಯೇ ಸ್ಥಾಯಿಕರಾಗಿ ಉಳಿದರು. ಮುಂದೆ ಅವರಿಂದುತ್ಪನ್ನವಾದ ಸಂತತಿಗೆ 'ಬ್ರಹ್ಮೀಜನ'ರೆಂಬ ಅಭಿಧಾನವು ಪ್ರಾಪ್ತವಾಯಿತೆಂದು ಆ ಜನರಲ್ಲಿ ಒಂದು ಆಖ್ಯಾಯಿಕೆಯಿದೆ.

ಸಾಧಾರಣತಃ ಬ್ರಹ್ಮೀ ಜನರು ವಾಮನಮೂರ್ತಿಗಳೂ, ಅಗಲು ಬಾಯಿಯವರೂ, ಚಪ್ಪಟೆ ಮೂಗಿನವರೂ ಇರುತ್ತಾರೆ. ಅವರ ಮೋರೆಯಮೇಲೆ ನಿರ್ವಿಕಾರದ ಕಳೆಯಿರುವಮೂಲಕ ಅವರಲ್ಲಿಯ ಆಂತರಿಕ ಮನೋಭಾವನೆಗಳು ಯಾರಿಗೂ ಸಹಜವಾಗಿ ತಿಳಿಯುವದಿಲ್ಲ. ಬ್ರಹ್ಮೀಜನರು ಮುಖ್ಯತಃ ಸ್ವಭಾವದಿಂದ ಗರ್ವಿಷ್ಠರೂ ಆಲಸ್ಯವುಳ್ಳವರೂ, ತಲೆತಿರುಕರೂ ಇರುತ್ತಾರೆ. ಎಲುವು ನುಗ್ಗಾಗುವಂತೆ ದುಡಿದು, ದುಡ್ಡು ಹಾಗು ಕೀರ್ತಿಯನ್ನು ಸಂಪಾದಿಸಬೇಕೆಂಬ ಮಹತ್ವಾಕಾಂಕ್ಷೆಯು ಅವರಿಗೆ ಎಂದೂ ಸ್ಪರ್ಶಸಹ ಮಾಡುವದಿಲ್ಲ.

ಬ್ರಹ್ಮೀ ಜನರು ಬೌದ್ಧ ಧರ್ಮವನ್ನು ಪಾಲಿಸುತ್ತಾರೆ. ಹಿಂದೀ ಜನರಂತೆ ಅವರ ನಿತ್ಯದ ಚಲನ-ವಲನದಲ್ಲಿ ಧಾರ್ಮಿಕ ಕಲ್ಪನೆಗಳೇ ತುಂಬಿಹೋಗಿವೆ. ಪ್ರತಿಯೊಂದು ಗ್ರಾಮದಲ್ಲಿಯೂ ಬುದ್ಧನ ಮಂದಿರಗಳಿದ್ದು, ಅವುಗಳ ಸುತ್ತುಮುತ್ತಲು ಮುಖ್ಯತಃ "ಭಿಕ್ಷು" ಜನರ ವಸ್ತಿಯಿರುತ್ತದೆ. ಈ ಭಿಕ್ಷುಗಳು ನಮ್ಮಲ್ಲಿಯ ಭಟ್ಟ-ಆಚಾರ್ಯ-ಉಪಾಧ್ಯಾಯ-ಜಂಗಮ-ಮುಲ್ಲಾ ಇವರಂತೆ ಧಾರ್ಮಿಕ ಸಂಸ್ಕಾರ ಮಾಡಿ ಬಂದ ಉತ್ಪನ್ನದಮೇಲೆ ಕೇವಲ ತಮ್ಮ ಚರಿತಾರ್ಥವನ್ನಷ್ಟೇ ಸಾಗಿಸದೆ ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕ ಪ್ರಚಾರಮಾಡುವ ವಿಶಿಷ್ಟ ಕಾರ್ಯವನ್ನು ಕೈಕೊಂಡಿರುತ್ತಾರೆ. ಈ ಬಗೆಯ ಒತ್ತಾಯದ ಧಾರ್ಮಿಕ ಶಿಕ್ಷಣದ ಮೂಲಕ ಬ್ರಹ್ಮದೇಶದಲ್ಲಿ ನೂರಕ್ಕೆ ತೊಂಬತ್ತು ಜನರು ಸಾಕ್ಷರಸ್ಥರಾಗಿರುವರು. ಹಿಂದುಸ್ಥಾನದ ಜನರು ಬ್ರಹ್ಮೀ ಜನಾಂಗದವರಿಂದ ಸಾಕ್ಷರತೆಯ ಪಾಠ ತೆಗೆದುಕೊಳ್ಳುವಂತಿದೆ!

ಬ್ರಹ್ಮದೇಶದೊಳಗಿನ ಮನೆಗಳು ಹೆಚ್ಚಾಗಿ ಕಟ್ಟಿಗೆಯವಿದ್ದು, ಅವುಗಳ ಕಟ್ಟುವಿಕೆಯು ತೀರ ಸಾದಾ ಹಾಗು ಕಡಿವೆ ವೆಚ್ಚದ್ದಿರುವದು. ಇದಕ್ಕೆ ಧರಣೀಕಂಪದ ಭಯವೂ, ಮನೆಯ ದೆಸೆಯಿಂದ ಹೆಚ್ಚು ವೆಚ್ಚ ಮಾಡಬಾರದೆಂಬ ಅವರ ಧಾರ್ಮಿಕ ಕಲ್ಪನೆಯೂ ಇವೇ ಮುಖ್ಯ ಕಾರಣಗಳಾಗಿವೆ.

ಏಕತ್ರ ಇಲ್ಲವೆ ವಿಭಕ್ತ ಇಂಥ ಯಾವದೊಂದೇ ಬಗೆಯ ವಿಶಿಷ್ಟ ಕುಟುಂಬ ಪದ್ಧತಿಯ ಪರಂಪರೆಯು ಬ್ರಹ್ಮದೇಶದಲ್ಲಿದ್ದದ್ದು ಕಂಡು ಬರುವದಿಲ್ಲ. ಯಾಕಂದರೆ ಎರಡೂ ಪ್ರಕಾರಗಳು ಅಲ್ಲಿ ಬಳಕೆಯಲ್ಲಿವೆ. ಬ್ರಹ್ಮೀ ಪುರುಷರು ಆಲಸಿಗಳೂ ಸಡಿಲು ಕೈಯವರೂ ಇದ್ದರೂ ಆ ಮಾನದಿಂದ ಅಲ್ಲಿಯ ಸ್ತ್ರೀಯರು ಮಾತ್ರ ಕೆಲಸದ ಭಾರವನ್ನು ಹೊರಲಿಕ್ಕೆ ಗಟ್ಟಿಯಿರುವರು. ಮಗ್ಗದಮೇಲೆ ನೇಯುವದು, ಕಟ್ಟಿಗೆಯ ಪಾತ್ರೆಗಳನ್ನು ತಯಾರಿಸುವದು, ಹಸ್ತಿದಂತದ ಹಣಿಗೆಗಳನ್ನು ಮಾಡುವದು, ಚಿರೂಟಗಳನ್ನು ಹೊಸೆಯುವದು ಮೊದಲಾದ ಸಕಲ ಉದ್ಯೋಗಗಳನ್ನು ಹೆಂಗಸರೇ ಮಾಡುತ್ತಾರೆ; ಇಷ್ಟೇ ಅಲ್ಲ, ಕಿರಾಣಿ ಪದಾರ್ಥಗಳಿಂದಾರಂಭಿಸಿ ರೇಶಿಮೆ, ಸುವರ್ಣ, ಬೆಳ್ಳಿ ಮುಂತಾದ ಶ್ರೇಷ್ಠತರದ ಪದಾರ್ಥಗಳ ವರೆಗಿನ ಎಲ್ಲ ಒಡವೆಗಳನ್ನು ಕೊಳ್ಳುವ ಮಾರುವ ವ್ಯವಹಾರವನ್ನು ಬಹುಶಃ ಸ್ತ್ರೀಯರೇ ಮಾಡುತ್ತಾರೆ. ಇತ್ತೀಚಲಾಗಿ ಪುರುಷರು ಪ್ರತಿಯೊಂದು ಉದ್ಯೋಗದಲ್ಲಿ ಸೇರ್ಪಡೆಯಾಗಹತ್ತಿದ್ದರೂ ಇಂದಿಗೆ ಅಲ್ಲಿಯ ಪ್ರತಿಯೊಂದು ವ್ಯವಹಾರದಲ್ಲಿ ಸ್ತ್ರೀಯರ ವಿಲಕ್ಷಣ ವರ್ಚಸ್ಸವಿದ್ದದ್ದು ಕಂಡುಬರುತ್ತಿದೆ.

ಈ ಪ್ರಕಾರ ಬ್ರಹ್ಮೀ ಸ್ತ್ರೀಯರು ಉದ್ಯೋಗ-ವ್ಯವಹಾರಗಳಲ್ಲಿ ಮನದಣಿ ದುಡಿದು, ಧನಾರ್ಜನೆ ಮಾಡುತ್ತಿದ್ದರೂ ಗೃಹ ವ್ಯವಸ್ಥೆಯ ಕಡೆಗೆ ಸಹ ಅವರ ಸಂಪೂರ್ಣ ಲಕ್ಷ್ಯವಿರುತ್ತದೆ. ಒಲೆ ಹಾಗೂ ಮಗು ಇವುಗಳನ್ನು ಸಂಬಾಳಿಸಿ ಪತಿಸೇವೆಯಲ್ಲಿಯೂ ಅವರು ಸದಾ ತತ್ಪರರಿರುತ್ತಾರೆ. ಅದರಿಂದ ವ್ಯವಹಾರ ಕುಶಲತ್ವ ಹಾಗೂ ಸ್ವಾಭಿಮಾನ ಇವೆರಡೂ ಗುಣಗಳು ಅವರಲ್ಲಿ ಸಹಜವಾಗಿ ಉದ್ಭವಿಸುತ್ತವೆ. ಈ ವ್ಯಾವಹಾರಿಕ ದೃಷ್ಟಿಯುಮೂಲಕ ಅವರು ಒಣ ಪಾರಮಾರ್ಥದಲ್ಲಿ ಪ್ರವೇಶಿಸಿ, ಸ್ಥೈರ್ಯವಿಹೀನವಾದ ಧಾರ್ಮಿಕ ಮಾರ್ಗದ ಅವಲಂಬನವನ್ನು ಮಾಡುವದಿಲ್ಲ.

ಬ್ರಹ್ಮೀ ಸ್ತ್ರೀ-ಪುರುಷರ ಉಡಿಗೆ-ತೊಡಿಗೆಗಳು ಸಾಧಾರಣ ಒಂದೇಬಗೆಯವಿರುತ್ತವೆ. ಧೋತರ ಸೀರೆಗಳ ಬದಲು ಈ ಜನರು ಆರುವಾರ ಅರಿವೆಯ ಒಂದು ಲುಂಗಿಯನ್ನು ಮೈಗೆ ಸುತ್ತಿಕೊಳ್ಳುತ್ತಾರೆ. ಸ್ತ್ರೀಯರ ಲುಂಗಿಯು ವಿಧವಿಧದ ಬಣ್ಣದ ಶ್ರೇಷ್ಠತರದ ಬಟ್ಟೆಯದಿರುತ್ತದೆ. ಪುರುಷರು ಮೈಯಲ್ಲಿ ಕೋಟು ತೊಟ್ಟುಕೊಳ್ಳುತ್ತಾರೆ. ಸ್ತ್ರೀಯರು ಬರೇ ಜಾಕೀಟು ಮಾತ್ರ ಹಾಕಿಕೊಳ್ಳುವರು. ಅವರಿಗೆ ಕೇಶ

ಭಾರವು ವಿಪುಲವಿದ್ದು ಅದೊಂದು ಸೌಂದರ್ಯದ ಚಿಹ್ನವೆಂದು ತಿಳಿಯುತ್ತಾರೆ. ಕೂದಲುಗಳಿಗೆ ಎಣ್ಣೆ ಬಡಿದು, ಋಷಿಗಳ ಜಟಾಭಾರದಂತೆ ಅವುಗಳ ಗಂಟು ಕಟ್ಟಿ ಅವನ್ನು ತಲೆಯಮೇಲೆ ಇಟ್ಟುಕೊಳ್ಳುತ್ತಾರೆ. ಸ್ತ್ರೀ-ಪುರುಷರೀರ್ವರಿಗೂ ಶೃಂಗಾರಾಗುವ ಅತಿಶಯ ಆಸ್ಥೆಯಿರುತ್ತದೆ. ಕೇಶಪಾಶದಲ್ಲಿ ನಾನಾಪ್ರಕಾರದ ಬಣ್ಣದ ಪತ್ರ-ಪುಷ್ಪಗಳನ್ನು ಹಾಕಿಕೊಂಡು, ಉತ್ತಮವಾದ ಬಟ್ಟೆಯನ್ನುಟ್ಟು, ಶಕ್ಯವಾದಷ್ಟು ಸುಂದರತ್ವವನ್ನು ತಂದುಕೊಳ್ಳಲು ಬ್ರಹ್ಮೀತರುಣಿಯರು ಸ್ವತಃ ಯಾವಾಗಲೂ ಪ್ರಯತ್ನ ಮಾಡುತ್ತಿರುತ್ತಾರೆ.

ಬ್ರಹ್ಮದೇಶದಲ್ಲಿ ವಿವಾಹ ವಿಧಿಯು ಧಾರ್ಮಿಕ ಸಂಸ್ಕಾರವೆಂದು ತಿಳಿಯಲ್ಪಡುವದಿಲ್ಲ. ಅಲ್ಲಿ ವಿವಾಹದ ಉದ್ದೇಶವು ಸಾಮಾಜಿಕ ವಿರದೆ ಬಹುಮಟ್ಟಿಗೆ ವೈಯಕ್ತಿಕವೇ ಇರುತ್ತದೆ. ಲಗ್ನದಲ್ಲಿ ಯಾವತರದ ಸಮಾರಂಭವು ಆಗುವದಿಲ್ಲ. ಆದರೆ ಇತ್ತಿತ್ತಲಾಗಿ ಲಗ್ನವಿಚ್ಛೇದದ ತಂಟೆಗಳಲ್ಲಿ ವಿವಾಹವಾದಬಗ್ಗೆ ಪುರಾವೆಗಳು ಬೇಕಾಗಹತ್ತಿದಮೂಲಕ ಲಗ್ನಕ್ಕೆ ಸಮಾರಂಭ ಸ್ವರೂಪವು ತುಸುಮಟ್ಟಿಗೆ ಬರಹತ್ತಿದೆ. ಇಂಥ ಸಮಾರಂಭಗಳು ಶ್ರೀಮಂತ ಜನರಲ್ಲಿ ಹೆಚ್ಚು ಪ್ರಿಯವಾಗಹತ್ತಿವೆ.

ಬ್ರಹ್ಮದೇಶದ ಜನರಲ್ಲಿ ವಿವಾಹವು ಸ್ವಯಂ ನಿರ್ಣಯ ಪದ್ಧತಿಯಿಂದಲೇ ಆಗುತ್ತದೆ. ಬ್ರಹ್ಮೀ ಸಮಾಜದಲ್ಲಿ ಬಾಲ—ಬಾಲಿಕೆಯರು ಏಕತ್ರ ಇರುವ ಪ್ರಸಂಗಗಳು ಮೇಲಿಂದಮೇಲೆ ಬರುತ್ತಿರುವಮೂಲಕ ಸ್ವತಃದ ಮನಸ್ಸಿನಂತೆ ಗಂಡ—ಹೆಂಡಿರನ್ನು ಆರಿಸಿಕೊಳ್ಳಲಿಕ್ಕೆ ತರುಣ–ತರುಣಿಯರೀರ್ವರಿಗೂ ಸಂಪೂರ್ಣ ಅನುಕೂಲತೆಯಿರುತ್ತವೆ. ಯುವಕ ಯುವತಿಯರ ಪರಸ್ಪರ ಭೆಟ್ಟಿಯಾಗಿ ಪರಿಚಯ ಬೆಳೆಯಹತ್ತಿತೆಂದರೆ ಅವರಲ್ಲಿ ಪ್ರೇಮವುತ್ಪನ್ನವಾಗುತ್ತದೆ. ಆ ಮೇಲೆ ಯುವಕನು ಯುವತಿಯ ಭೆಟ್ಟಿಯುದೆಸೆಯಿಂದ ಅವಳ ಮನೆಗೆ ಹೋಗುವನು. ಅಲ್ಲಿ ಗೆಳೆಯರ ಪಾಲಕರ ಸಮ್ಮತಿಯಿಂದ ಲಗ್ನದ ನಿಶ್ಚಯವಾಗಿ ಹೋಗುವದು. ಇಂಥ ಸಮಯದಲ್ಲಿ ಪಾಲಕರು ಬಹುಶಃ ಅದಕ್ಕೆ ಅಡ್ಡ ಬರುವದಿಲ್ಲ. ಈ ಪ್ರಕಾರ ನಿಶ್ಚಯದ ಸಕ್ಕರೆಯ ಕಾರಣದ ಸಮಾರಂಭ ಜರುಗಿದಮೇಲೆ ಒಂದು ಸುಮುಹೂರ್ತದ ದಿವಸ ಊಟದ ಕಾರ್ಯವನ್ನು ನೆರವೇರಿಸುವರು. ಆಗ ವಧೂ—ವರರೀರ್ವರೂ ಕುಳಿತು ಒಂದೇ ತಾಟಿನಲ್ಲಿ ಉಂಡರೆಂದರೆ ಲಗ್ನ ಸಮಾರಂಭವು ಪರಿಸಮಾಪ್ತವಾಗಿ ಹೋಗುವದು.

ಬ್ರಹ್ಮೀ ಜನರಲ್ಲಿ ವಿವಾಹ ವಿಧಿಯು ಒಂದು ಬಗೆಯ ಕರಾರು ಎಂದು ತಿಳಿಯಲ್ಪಡುತ್ತದೆ. ಅದು ಮುಂದೆ ದಂಪತಿಗಳ ಮನಸ್ಸಿಗೆ ಬಾರದಿದ್ದಲ್ಲಿ ಅವರಿಗೆ ವಿವಾಹ ವಿಚ್ಛೇದವನ್ನು ಮಾಡಿಕೊಳ್ಳಲಿಕ್ಕೆ ಬರುತ್ತದೆ. ಹೀಗಿದ್ದರೂ ಪಾಶ್ಚಾತ್ಯ ಜನರಂತೆ

ಗಂಡ–ಹೆಂಡರ ನಡುವಿನ ಘಟಸ್ಫೋಟದ ಪ್ರಸಂಗಗಳು ಬ್ರಹ್ಮೀ ಜನರಲ್ಲಿ ಹೆಚ್ಚಾಗಿ ಬರುವದಿಲ್ಲ. ಸಬಲಕಾರಣಗಳಿದ್ದರೆ ಗ್ರಾಮದ ಪಾಟೀಲರಿಂದ ಅಥವಾ ನ್ಯಾಯಾಲಯದಿಂದ ವಿವಾಹ ವಿಚ್ಛೇದನಕ್ಕೆ ತತ್‌ಕ್ಷಣವೇ ಮಾನ್ಯತೆ ದೊರೆಯುತ್ತದೆ.

ಹೀಗೆ ಘಟಸ್ಫೋಟವಾದರೂ ಬ್ರಹ್ಮೀ ಸ್ತ್ರೀಯು ಎಂದೂ ಅನಾಥಳಾಗುವದಿಲ್ಲ. ತನ್ನ ಸಹೋದರರಂತೆ ತಂದೆಯ ಆಸ್ತಿಯಲ್ಲಿ ಅವಳಿಗೆ ಪಾಲುಸಿಗುವದಲ್ಲದೆ ಲಗ್ನದ ನಂತರ ಸಾಮೂಹಿಕವೆಂದು ತಿಳಿಯಲ್ಪಡುವ ಆಸ್ತಿಯಲ್ಲಿಯೂ ಘಟಸ್ಫೋಟವಾದ ಮೇಲೆ ಅವಳಿಗೆ ಪಾಲುದೊರೆಯುವದುಮೂಲಕ ಆರ್ಥಿಕದೃಷ್ಟಿಯಿಂದ ಯಾವ ಪ್ರಕಾರವಾಗಿಯೂ ಅವಳ ದುರ್ದಶೆಯಾಗುವದಿಲ್ಲ.

ಬ್ರಹ್ಮೀ ಜನರಲ್ಲಿ ಸ್ತ್ರೀ–ಪುರುಷರ ಸಾಮಾಜಿಕ ಸಂಬಂಧವು ಮುಚ್ಚುಮರೆಯುದಿರುವದಿಲ್ಲ. ಹೆಚ್ಚಿನ ಲಜ್ಜೆಯನ್ನು ತೋರಿಸಿ, ತಮ್ಮ ಅಂಜುಬುರುಕುತನದ ಪ್ರದರ್ಶನವನ್ನು ಅಲ್ಲಿಯ ಲಲನೆಯರು ಎಂದೂ ಮಾಡುವದಿಲ್ಲ. ಪುರುಷರಾದರೂ ಅವರನ್ನು ಸಮತೆಯಿಂದಲೂ ಆದರದಿಂದಲೂ ನಡೆಯಿಸಿಕೊಳ್ಳುವರು. ಆದರೆ ಅಪ್ಪಿತಪ್ಪಿ ಯಾವನೊಬ್ಬ ಪುರುಷನಿಂದ ಬ್ರಹ್ಮೀ ಸ್ತ್ರೀಯಬಗ್ಗೆ ಅಸಭ್ಯತನದ ವರ್ತನವುಂಟಾದದ್ದಾದರೆ ಅವರು ಅಲ್ಲಿಂದಲ್ಲಿಯೇ ಆ ಪುರುಷನ ಪೂರ್ಣ ಫಜೀತಿಯನ್ನು ಮಾಡದೆ ಎಂದೂ ಬಿಡುವದಿಲ್ಲ. ಇದರಮೇಲಿಂದ ಬ್ರಹ್ಮೀ ಸ್ತ್ರೀಯರಲ್ಲಿ ಉದ್ಧೃತ್ತತನವು ತುಂಬಿ ತುಳುಕುವದೆಂದು ಮಾತ್ರ ಯಾರೂ ತಿಳಿಯಕೂಡದು. ಅವರಲ್ಲಿ ಶಾಲೀನತೆ, ಸ್ವತಂತ್ರತೆ, ಆದರಯುಕ್ತವಾದ ನಡಾವಳಿ ಇವು ಕೇವಲ ಮೂರ್ತಿಮತ್ತವಾಗಿಯೇ ನೆಲೆಸಿರುವವು. ಸಾರಾಂತ ಬ್ರಹ್ಮೀ ಸ್ತ್ರೀಯರಲ್ಲಿ ಹಿಂದೂ ಹಾಗು ಯುರೋಪಿಯನ್ ಸ್ತ್ರೀಯರ ಗುಣಗಳ ಸರಿಯಾದ ಸಮುಚ್ಚಯವೇ ಕಂಡುಬರುವದು.

ಬ್ರಹ್ಮೀ ಜನರಿಗೆ ದ್ಯೂತವಾಡುವ ಮತ್ತು ನಾಟಕ ತಮಾಶೆಗಳನ್ನು ನೋಡುವ ವಿಲಕ್ಷಣವಾದ ಲೋಭವಿದೆ. ಅವರ ನಾಟಕಗಳಲ್ಲಿ ಐತಿಹಾಸಿಕ ಅರಸು–ಅರಸಿಯರ ಕಥೆಗಳೂ ಪೌರಾಣಿಕ ಸಂಗತಿಗಳೂ ತುಂಬಿರುತ್ತವೆ. ಇಂಥ ನಾಟಕಗಳಿಗೆ ನಾಟಕಾಲಯದ ಅವಶ್ಯಕತೆಯು ಅವರಿಗೆ ಬೇಕಾಗುವದಿಲ್ಲ. ಒಂದು ಎತ್ತರವಾದ ಸ್ಥಳವನ್ನು ತಯಾರಿಸಿ, ಅದನ್ನು ಪುಷ್ಪ ಪತಾಕೆಗಳಿಂದ ಶೃಂಗರಿಸಿ ಬಿಟ್ಟರೆ ಅವರ ಥಿಯಟರವು ಸಿದ್ಧವಾಗಿ ಹೋಗುತ್ತದೆ. ನಮ್ಮ ಕನ್ನಡನಾಡಿನೊಳಗಿನ ಬಯಲಾಟದಂತೆ ಅಲ್ಲಿಯ ನಾಟಕಗಳ ಸ್ವರೂಪವಿರುತ್ತದೆ. ನಾಟಕಗಳಲ್ಲಿ ವಿನೋದ–ತತ್ವಜ್ಞಾನಗಳ ಸಂಭಾಷಣಗಳು ಹೇರಳವಾಗಿದ್ದರೂ ನಮ್ಮಲ್ಲಿಯ ಭಾಗವತರ ಆಟದಂತೆ ಅಲ್ಲಿಯೂ ಕುಣಿತಕ್ಕೆ ಪ್ರಾಧಾನ್ಯವು ಕೊಡಲ್ಪಟ್ಟಿರುತ್ತದೆ. ಬ್ರಹ್ಮೀ ನಟರು ನಾಚು

ಮಾಡುವಾಗ ತಮ್ಮ ಸಕಲ ಶರೀರವನ್ನು ಬಣ್ಣದ ಬಟ್ಟೆಯಿಂದ ಚನ್ನಾಗಿ ಮುಚ್ಚಿ ಕೊಳ್ಳುವರು. ಕಾಲು ಹಾಗು ಕಾಲಿನ ಹಿಮ್ಮಡ ಇವುಗಳನ್ನು ತೆರೆದಿಡುವದು ಕೇವಲ ನೀತಿಬಾಹ್ಯವೆಂದು ಅವರು ತಿಳಿಯುವರು.

ಬ್ರಹ್ಮೀ ಜನರಲ್ಲಿ ಜಮೀನದಾರ, ಸರದಾರ, ದೊಡ್ಡ ವ್ಯಾಪಾರಸ್ಥ ಮೊದಲಾದ ಶ್ರೇಷ್ಠ ತರಗತಿಯ ಜನರು ಕಡಿಮೆ ಇರುವರು. ಅವರಲ್ಲಿ ಸಾಮಾನ್ಯ ಜನರಸಂಖ್ಯೆಯೇ ಹೆಚ್ಚು ಇರುವದು. ದುಡ್ಡು ಗಳಿಸಿ ಅದನ್ನು ಕೂಡಿಡುವ ಪ್ರವೃತ್ತಿಯು ಬ್ರಹ್ಮೀ ಮನುಷ್ಯರಲ್ಲಿರುವದಿಲ್ಲ. ಧರ್ಮಾದಾಯ ಮತ್ತು ಐಷ ಸುಖಲೋಲುಪ್ತಿಗಳಿಗೆ ಆರಾಮ ಇವುಗಳಲ್ಲಿಯೇ ಅವರು ತಮ್ಮ ಗಳಿಕೆಯನ್ನೆಲ್ಲ ವೆಚ್ಚಮಾಡಿ ಬಿಡುತ್ತಾರೆ. ಭೂಮಿಗೆ ಹೊಂದಿ ಭೂಮಿಯನ್ನೂ ದ್ರವ್ಯದಿಂದ ದ್ರವ್ಯವನ್ನೂ ಗಳಿಸುವ ಮೋಹವು ಅವರಿಗಿರುವ ದಿಲ್ಲ ಬ್ರಹ್ಮೀ ಜನರಲ್ಲಿ ಪೂರ್ವಕಾಲದಿಂದ ದಾನ-ಧರ್ಮ ಮಾಡುವ ವಿಲಕ್ಷಣ ಪ್ರವೃತ್ತಿ ಯಿದ್ದರೂ ಸದ್ಯದಲ್ಲಿ ಪಾಶ್ಚಾತ್ಯರ ಫ್ಯಾಶನ್ನಿನ ಅನುಕರಣಮಾಡುವದರಲ್ಲಿಯೂ ಸಿನೇಮಾ–ನಾಟಕಗಳನ್ನು ನೋಡುವದರಲ್ಲಿಯೂ, ದ್ಯೂತಮಾಡುವದರಲ್ಲಿಯೂ ಇದ್ದ ಬಿದ್ದ ದ್ರವ್ಯವನ್ನೆಲ್ಲ ವ್ಯಯಮಾಡಿ ಬಿಡುವ ಅನಿಷ್ಟ ಚಟವು ಅವರಿಗೆ ಅಂಟಿಕೊಂಡಿ ರುವಮೂಲಕ ಬ್ರಹ್ಮೀ ಸಮಾಜವು ದಿನದಿನಕ್ಕೆ ಹೆಚ್ಚೆಚ್ಚು ಸಾಲಗೊಯ್ಯುವಾಗುತ್ತ ನಡೆದಿದೆ. ಬ್ರಹ್ಮದೇಶಕ್ಕೆ ಇದು ಕೇವಲ ಲಾಂಛನಾಸ್ಪದವಾದ ಸಂಗತಿಯೇ ಸರಿ.

“ ಮನುಷ್ಯನ ವಿಚಾರಗಳೇ ಅವನ ನಿಜವಾದ ಸಂಪತ್ತು. ” ಎಂಬದೊಂದು ಬ್ರಹ್ಮೀಭಾಷೆಯಲ್ಲಿ ನಾಣ್ಣುಡಿಯಿದೆ. ಆದರೆ ಆ ಬಗೆಯ ವೈಚಾರಿಕ ಸಂಪತ್ತನ್ನು ದೊರಕಿಸುದಕ್ಕಾಗಿ ಅವರು ಗ್ರಂಥಾವಲೋಕನವನ್ನು ಮಾತ್ರ ಮಾಡುವದಿಲ್ಲ. ಮಿತ್ರರ ಪ್ರೇಮ, ಸ್ತ್ರೀಯರ ಮೋಹ, ಪಾಲಕರ ವಾತ್ಸಲ್ಯ ಇವುಗಳನ್ನು ಗೃಹರಾಜ್ಯದಲ್ಲಿ ಅನುಭವಿಸುತ್ತಿರುವಾಗ ಕವಿಯ ಕಾವ್ಯಕ್ಕೂ ಗ್ರಂಥಕರ್ತರ ತತ್ವಗಳಿಗೂ ಕೇಳು ವವರಾರು! ಯಾವನು ದುರ್ಬಲನಿರುವನೋ ಅಥವಾ ಯಾವನು ಸಾಂಸಾರಿಕ ಸುಖಕ್ಕೆ ಅಂತರಿಸಿ, ಜಗತ್ತಿನಿಂದ ಬೇರೆಯಾಗಲಿಕ್ಕೆ ಯತ್ನಿಸುತ್ತಿರುವನೋ ಅಂಥ ವ್ಯಕ್ತಿಯೇ ಗ್ರಂಥಗಳ ಪಾರಾಯಣ ಮಾಡಲರ್ಹನೆಂದು ಬ್ರಹ್ಮೀ ಜನಾಂಗದ ಕಲ್ಪನೆ ಯಿದೆ.

ಹಿಂದುಸ್ಥಾನದಂತೆ ಬ್ರಹ್ಮದೇಶದಲ್ಲಾದರೂ ಜ್ಯೋತಿಷ್ಯದ ಬಹಳ ಗಲಭೆಯಿದೆ. ಕರ್ಮತತ್ಪರರಾದ ಜನರಂತೂ ಜೋತಿಷ್ಯದ ವಿಚಾರದ ವಿನಹ ಮುಂದೆ ಹೆಜ್ಜೆಯನ್ನೇ ಇಡುವದಿಲ್ಲ. ಅದರಂತೆ ಧಾರ್ಮಿಕ ವೃತ್ತಿಯ ಮೂಢ ಕಲ್ಪನೆಗಳಾದರೂ ಅವರಲ್ಲಿ ಹೇರಳವಾಗಿ ತುಂಬಿವೆ. ಶ್ವಾನವು ಮನೆಯ ಮೇಲೆ ಹೊಲಸು ಪದಾರ್ಥವನ್ನು ಚಲ್ಲಿ ಹೋದರೆ ಅದರ ಮಾಲಕನು ಶ್ರೀಮಂತನಾಗುವನಂತೆ! ಗಾಳಿಯ ಯೋಗದಿಂದ

ಎಲೆಗಳು ಹಾರಿಹೋದಲ್ಲಿ ನೂತನ ಪರಿಣಿತ-ವಧೂವರರ ಸೌಖ್ಯವು ನಷ್ಟವಾಗಿ ಘಟಸ್ಫೋಟದ ಪ್ರಸಂಗವು ಅವರಮೇಲೆ ಬರುವದಂತೆ ! ಈ ಪ್ರಕಾರ ಬ್ರಹ್ಮೀ ಜನಾಂಗವು ಹಿಂದೀ ಜನತೆಯಂತೆಯೇ ಭಾವಿಕವೃತ್ತಿಯು ಅನೇಕ ಮೂಢ ಹಾಗು ಅನಿಷ್ಟ ಕಲ್ಪನೆಗಳಿಂದ ಬಿಗಿಯಲ್ಪಟ್ಟದೆ.

ಕರ್ನಾಟಕದ ೨೪ನೆಯ ಸ್ಕೌಟರ್ಸ ಟ್ರೇನಿಂಗ ಕ್ಯಾಂಪ, ಧಾರವಾಡ

ಇದು ತಾ. ೧೯-೮-೩೩ರಿಂದ ೧೦ ದಿವಸಗಳ ವರೆಗೆ ಇಲ್ಲಿಯ ಟ್ರೇ. ಸ್ಕೂಲಿನಲ್ಲಿ ನಡೆಯಿತು. ಇದರಲ್ಲಿ ಧಾರವಾಡ ಕ. ಟ್ರೇ. ಸ್ಕೂ. ನ ೩೫ ಜನ ವಿದ್ಯಾರ್ಥಿಗಳು, ಇಲ್ಲಿಯ ಪ್ರಾ. ಸ್ಕೂಲಿನ ಒಬ್ಬ ಮಾಸ್ತರರು, ಮತ್ತು ಆರು ಜನ ಹೊರಗಿನಿಂದ ಬಂದವರು ಹೀಗೆ ಒಟ್ಟು ೪೨ ಜನರಿದ್ದರು. ಸದರ್ನ ಡಿವ್ಹಿಜನಲ್ ಆರ್ಗನಾಯಿಝರ ರಾದ ಶ್ರೀ. ನೀಲಗಾರ ಇವರು ಈ ಹತ್ತು ದಿವಸಗಳ ವರೆಗೆ (೧) ಟೆಂಡರಫೂಟ (೨) ಸೆಕಂಡಕ್ಲಾಸ (೩) ಫಸ್ಟ್ರಕ್ಲಾಸ (೪) ಕಿಂಗ್ಸ ಸ್ಕೌಟ (೫) ರೋವರ್ಸ ಮುಂತಾದ ವಿಷಯಗಳನ್ನು ಪೂರ್ಣವಾಗಿ ತಿಳಿಸಿಕೊಟ್ಟಿದ್ದಲ್ಲದೆ, ಆಯಾ ತರಗತಿಗಳಿಗೆ ಸಂಬಂಧಿಸಿದ ಡ್ರಿಲ್ಲು, ಆಟ, ಪ್ರವಾಸ ಮುಂತಾದವುಗಳನ್ನು ಎಲ್ಲರ ಕಡೆಯಿಂದ ಮಾಡಿಸಿದರು.

ತಾ. ೨೭ನೆಯ ದಿವಸ ಸಂಜೆಯ ಐದು ಗಂಟೆಗೆ ನಮ್ಮೆಲ್ಲರಿಗೆ ದೀಕ್ಷಾವಿಧಿಯನ್ನು ಕೊಡುವದು ಗೊತ್ತಾಗಿತ್ತು. ನವಂಬರ ತಿಂಗಳಲ್ಲಿ ಕೂಡತಕ್ಕ "ಸ್ಕೌಟ ರ್‍ಯಾಲಿಗೆ" ಈ ಊರ ಎಲ್ಲ ಸ್ಕೌಟ ಮಾಸ್ತರರು, ತಮ್ಮ ತಮ್ಮ ಟ್ರುಪ್ಪುಗಳಿಗೆ, ಏನೇನು ಶಿಕ್ಷಣ ಕೊಟ್ಟಿರುವರು, ಅವರವರ ಉತ್ಸುಕತೆ ಎಷ್ಟೆಷ್ಟು ಅದೆ, ಎಂಬುದನ್ನು ನೋಡುವದರ ಸಲುವಾಗಿ ತಮ್ಮ ತಮ್ಮ ಟ್ರುಪ್ಪುಗಳನ್ನು ತಕ್ಕೊಂಡುಬರಬೇಕೆಂದು ಡಿ॥ ಸ್ಕೌಟ ಕಮೀಶನವರು ತಿಳಿಸಿದ ಪ್ರಕಾರ ಅದೇ ದಿವಸ ಎಲ್ಲ ಸ್ಕೌಟ ಮಾಸ್ತರರು ತಮ್ಮ ತಮ್ಮ ಟ್ರುಪ್ಪುಗಳನ್ನು ತಕ್ಕೊಂಡು ಬಂದಿದ್ದರು.

ಸರಿಯಾಗಿ ಐದು ಗಂಟೆಗೆ ಇಲ್ಲಿಯ ಟ್ರೇ. ಸ್ಕೂ. ನ ಭವ್ಯವಾದ ಪಟಾಂಗಣದಲ್ಲಿ ಜನರು ಕೂಡಹತ್ತಿದರು. ಮೆ॥ ಕಲೇಕ್ಟರ ಸಾ॥ ರವರು, ಮೆ॥ ಎ. ಎನ್. ಖಾನ ಸಾಹೇಬ, ಡಿ॥ ಜಜ್ಜ (ಡಿ॥ ಸ್ಕೌ. ಕಮೀಶನರ) ಮೆ॥ ಎಚ್. ರಾಮಸ್ವಾಮಿ, ಎ. ಇಂಜಿನೀಯರ (ಡಿ॥ ಸ್ಕೌ. ಅ॥ ಕಮೀಶನರ) ಮೆ॥ ವಕೀಲ ಸಾಹೇಬ, ಎಜ್ಯುಕೇಶನಲ್ ಇನಸ್ಪೇಕ್ಟರ, ಮೆ॥ ಮಾಮಲೇದಾರ ಸಾಹೇಬ, ಮೆ॥ ಹೆ॥ ಮಾ॥ ಟ್ರೇ. ಸ್ಕೂ. ನ ಮುಗದಾಳರಾಯರು, ಇನ್ನೂ ಅನೇಕ ಅಧಿಕಾರಸ್ಥರೂ, ಊರೊಳಗಿನ ಸದ್ಗೃಹಸ್ಥರೂ ಬಂದಿದ್ದರು. ಅನೇಕ ಜನ ಪ್ರೇಕ್ಷಕರೂ ಕೂಡಿದ್ದರು.

ಮೊದಲು ಇಲ್ಲಿಯ ಪ್ರ್ಯಾ. ಸ್ಕೂ. ನ ಮಾಸ್ತರರಾದ ಪಿ. ಕುಲಕರ್ಣಿ ಇವರು ಪಿಟೀಲು ಬಾರಿಸುತ್ತ, ಸಂಗೀತ ಡ್ರಿಲ್ಲು ತನ್ನ ಬಾಲಕರ ಕಡೆಯಿಂದ ಮಾಡಿಸಿ ತೋರಿಸಿದರು. ಚಿಕ್ಕಮಕ್ಕಳು ಮಾಡುವ ಸಂಗೀತ ಡ್ರಿಲ್ಲು ಬಹಳೇ ಮನೋಹರವಾಗಿತ್ತು. ಆ ಮೇಲೆ ಪ್ರ್ಯಾ. ಸ್ಕೂಲಿನ ಉಳಿದ ಮಾಸ್ತರರು, ಕರ್ನಾಟಕ ಹಾಯಸ್ಕೂಲ, ಗವ್ಹರ್ನಮೆಂಟ ಹಾಯಸ್ಕೂಲ, ಲಿಂಗಾಯತ ಹಾಯಸ್ಕೂಲ ಹೆಡ್ಡಕ್ವಾರ್ಟರ, ಮೊದಲಾದ ಇನ್ನೂ ಅನೇಕ ಶಾಲೆಗಳ ಮಾಸ್ತರರು ತಮ್ಮ ತಮ್ಮ ಟ್ರುಪ್ಪುಗಳಿಂದ ಮೊದಲಿಗಾಗಿ ತಯಾರಮಾಡಿದಂಥ ಡ್ರಿಲ್ಲು, ಆಟ, ಕವಾಯಿತ, ಸಿಗ್ನಲರಿಂದ ಮುಂತಾದವುಗಳನ್ನು ಮಾಡಿಸಿ ತೋರಿಸಿದರು. ಸ್ಕೌಟ ಕ್ಯಾಂಪಿನ ವಿದ್ಯಾರ್ಥಿಗಳಲ್ಲೊಬ್ಬರಾದ ಶಿರಹಟ್ಟಿಯ ಮಿ. ಅಷ್ಟೆ, ಇವರ ಲಾಠಿತಿರುವೋಣವು ನೋಡತಕ್ಕಂಥಾದ್ದಿತ್ತು. ಈ ಚಿಕ್ಕಮಕ್ಕಳ ಆಟಗಳನ್ನೂ ಮೇಲಿನ ಅಧಿಕಾರಸ್ಥರೆಲ್ಲರೂ ಒಳ್ಳೇ ನಗೆಮೊಗದಿಂದ ನೋಡುತ್ತ ಕುಳಿತಿದ್ದರು.

ಆ ಮೇಲೆ ೪೨ ಜನ ವಿದ್ಯಾರ್ಥಿಗಳ ಕಡೆಯಿಂದ ಸ್ಕೌಟನಿಯಮಗಳಂತೆ ನಡೆಯುತ್ತೇವೆಂದು ಶ್ರೀ. ನೀಲಗಾರ ಇವರು ಪ್ರಮಾಣಮಾಡಿಸಿಕೊಂಡ ನಂತರ ಮೆ॥ ಡಿ॥ ಸ್ಕೌ. ಅ. ಕಮೀಶನರರು ಸ್ಕೌಟರ್ಸರಿಗೆ ಬ್ಯಾಜ್ಜುಗಳನ್ನು ಕೊಟ್ಟರು.

ತರುವಾಯ ಮೆ॥ ಕಲೇಕ್ಟರ ಸಾ॥ ರವರು ಹೇಳಿದ್ದೇನಂದರೆ— “ಇಂದು ನೀವು ಸ್ಕೌಟ ಭ್ರಾತೃವರ್ಗಕ್ಕೆ ಸೇರಿದಿರಿ. ಇದೊಂದು ದೊಡ್ಡ ಹಕ್ಕು ನಿಮಗೆ ಉಂಟಾಗಿದೆ. ಅದರೊಡನೆ ಮಹತ್ವದ ಕರ್ತವ್ಯಗಳನ್ನು ಜರುಗಿಸುವ ಭಾರವು ನಿಮ್ಮ ಮೇಲೆ ಇದೆ, ಎಂಬದನ್ನು ಮರೆಯಬೇಡಿರಿ. ನವಂಬರದಲ್ಲಿ ಕೂಡತಕ್ಕ ಸ್ಕೌಟ ರ್‍ಯಾಲಿಗೆ ನಾಮದಾರ ಗವ್ಹರ್ನರಸಾಹೇಬರವರು ಬರುವವರಿದ್ದಾರೆ. ಆಗ ನೀವು ನಿಮ್ಮ ನಿಮ್ಮ ಟ್ರುಪ್ಪುಗಳನ್ನು ಇನ್ನೂ ಹೆಚ್ಚಿಗೆ ಸುಧಾರಿಸಿ ಧಾರವಾಡ ಜಿಲ್ಹೆಯು ಸ್ಕೌಟ ಚಳವಳಿಯ ಬಗ್ಗೆ ಮುಂಬಯಿ ಇಲಾಖೆಯ ಯಾವ ಜಿಲ್ಹೆಗಿಂತಲೂ ಹಿಂದಿಲ್ಲೆಂಬದನ್ನು ತೋರಿಸಿರಿ.”

ಬಳಿಕ ಅಧ್ಯಕ್ಷರನ್ನು ಹಾರ ತಾಂಬೂಲಾದಿಗಳಿಂದ ಸತ್ಕರಿಸಿದ್ದಾಯಿತು. ಮೆ॥ ವಕೀಲ ಸಾಹೇಬರು ಸ್ಕೌಟಿಂಗದ ಮಹತ್ವವನ್ನೂ ನಮ್ಮ ಜಿಲ್ಹೆಯ ಕಲೆಕ್ಟರ ಸಾ॥ ರು ಸ್ಕೌಟಿಂಗದಲ್ಲಿಯೂ ಶಿಕ್ಷಣದಲ್ಲಿಯೂ ತೋರಿಸುತ್ತಿರುವ ಉತ್ಸಾಹವನ್ನೂ ನಿರ್ದೇಶಿಸಿ ಅವರ ಆಭಾರಮನ್ನಿಸಿದರು.

ಈ ಸಮಾರಂಭವು ಈ ವರುಷ ಒಳ್ಳೇ ವಿಜೃಂಭಣೆಯಿಂದ ಪರಿಣಾಮಕರವಾಗಿ ಜರುಗಿತು.

—— ——

ಪ್ರ ಕ ಟ ನೆ

ಪುಣೆಯಲ್ಲಿ ೨೪-೬-೧೯೩೩ನೆಯ ದಿವಸ ನೆರೆದ ಉರ್ದು ಬುಕ್ ಕಮಿಟಿಯು ವರು ಮುಂಬಯಿ ಇಲಾಖೆಯೊಳಗಿನ ಉರ್ದು ಶಾಲೆಗಳಿಗಾಗಿ ಕೆಳಗೆ ವಿವರಿಸಿದಂತೆ ಉರ್ದು ಬುಕ್ಕುಗಳನ್ನು ಮಂಜೂರ ಮಾಡಿರುತ್ತಾರೆ.

T=ಟೆಕ್ಸ್ಟ L=ಲಾಯಬ್ರರಿ P=ಪ್ರಾಯಿಝು ಮಂ=ಮಂಜೂರ. ಪ್ರ॥ = ಪ್ರಕಾಶಕರು. ಗ್ರಂ. ಕ॥ = ಗ್ರಂಥಕರ್ತರು.

ಕೆಳಗೆ ಬರೆದ ಪುಸ್ತಕಗಳ ಗ್ರಂ. ಕ — ಮುನಸಿ ಮಿರ್ಝಾ ಅಹಮ್ಮದಶಾಹ ಜೌಹರ. ಪ್ರ॥ ಗ್ರಂ. ಕ.

(೧) ಜೌಹರುಲ್ಲಗಾತ. ೧ನೆ ಆ, ೧೯೩೧. ಬೆಲೆ ೦-೧೩-೦ P. L. ಉರ್ದು ಶಾಲೆಗಳಿಗಾಗಿ. (೨) ಜೌಹರುಲ ಅರುಜ. ೧ನೆ ಆ ೧೯೨೯. ಬೆಲೆ ೧ರು. P. L. ಉರ್ದು ಪ್ರಾ. ಮತ್ತು ಮಾ. ಶಾಲೆಗಳಿಗಾಗಿ ಟ್ರೇ. ಸಂ. ಗಳಿಗಾಗಿ

(೩) ಆಈನ-ಎ- ಆದಬ. ೧ನೆ ಆ. ೧೯೩೨. ಗ್ರಂ. ಕ=ಮುನಶಿ ಮಹಮ್ಮದ ಕಮರುದ್ದೀನ, ಪ್ರ॥-ಮೌಲ್ವಿ ಮಜಿದ ಹುಶೇನ, ಬಿಜ್ನೋರ. ಬೆಲೆ ೦-೮-೦ ಮಂ- ಸದರ (೪) ಮಶರಿಕಿ ಖಾನದೇಶಕಾ ಜುಗ್ರಾಫಿಯಾ. ಗ್ರಂ. ಕ=ಜೈನುದ್ದೀನ ಅಖೀ ಮುದ್ದೀನ. ಪ್ರ=ಗ್ರಂ. ಕ. ಬೆಲೆ ೦-೩-೬ ಉರ್ದು ೩ನೆ. ಇ. ಗಾಗಿ T.

ಕೆಳಗಿನ ಪು॥ ಗಳ ಗ್ರಂ. ಕ — ಮಹ್ಮದ ಅಕಬರ. ಪ್ರ॥ ಪಂಜಾಬ ಪ್ರಿಂಟಿಂಗ ವರ್ಕ್ಸ ಲಾಹೋರ ಮಂ=P. L. ಉರ್ದು ಪ್ರಾ. ಮಾ. ಟ್ರೇ. ಸಂ॥ ಗೆ

(೫) ಹಿಸಾಬಕಾ ದುಸರಾ ೨ನೆ ಆ. ೧೯೩೧. ಬೆಲೆ ೦-೭-೦ (೬) ತಿಸರಾ. ಬೆಲೆ ೦-೮-೦ (೭) ಚೌಥಾ. ಬೆಲೆ ೦-೮-೦ (೮) ಪಾಚವಾ. ೧ನೆ ಆ. ೧೯೩೩ ಬೆಲೆ ೦-೧೦-೬ (೯) ಹಿಸಾಬಕಾ ಛಟಾ ಜೀನಾ ೧ನೆ ಆ. ೧೯೩೨. ಬೆಲೆ ೦-೭-೦ (೧೦) ಸಾತವಾ ೧ನೆ ಆ. ೧೯೩೩. ಬೆಲೆ ೦-೧೧-೬ (೧೧) ಆಠವಾ ೧ನೆ ಆ. ೧೯೩೨. ಬೆಲೆ ೦-೧೧-೧—ಕೆಳಗಿನ ಪು. ಗಳ ಗ್ರಂ. ಕ— ಶೇಖಮಹ್ಮದ ಇಬ್ರಾಮ. ಪ್ರ. ರು. ಪಂಜಾಬ ಪ್ರಿ. ವ. ಲಾಹೋರ ಮಂ-T. ಪ್ರಾ. ಶಾ. ಗೆ (೧೨) ಉರ್ದೂಕಿ ಆಸಾನ ಗ್ರಾಮರ ಅವ್ವಲ. ೧೯೩೧. ೪ನೇ ಇ. ಗಾಗಿ. ಬೆಲೆ ೦-೨-೧೦ (೧೩) ಸದರ ಹಿಸ್ಸಾ ದುವುವ್ ೧೯೩೩ ಬೆಲೆ ೦-೩-೬ ೫ನೆ ಇ. ಗಾಗಿ. (೧೪) ಸದರ ಸಿವುಮ ೧೯೩೩ ಬೆಲೆ೦-೭-೩ ಪ್ರಾ. ೭ನೆ ೭ನೆ ಇ. ಗಾಗಿ, ಮಾಧ್ಯಮಿಕ ೧ರಿಂದಾ ೩ ಇ.ಗೆ, ಟ್ರೇ. ಸಂ॥ ಗಳ ೧ನೆ ೨ನೆ ವರ್ಷಗಳಿಗಾಗಿ. (೧೫) ರಹನುಮಾ ಏ ತಲಬಾ ೪ನೆ ಇ. ಗಾಗಿ ಬೆಲೆ ೦-೧೦-೦ಮಂ=P.L. ಉರ್ದು ಪ್ರಾ.ಮತ್ತು ಮಾ.ಶಾ. ಗಳಿಗೆ ಹಾಗು ಟ್ರೇ.ಸಂ॥ಗೆ

(೧೬) ಹೋನಹಾರ ೧ನೆ ಆ. ೧೯೨೭ ಗ್ರಂ. ಕ- ರಾಮಸಿಂಗ ಬಿ. ಎ. ಪ್ರ॥ ರು-ಪಂಜಾಬ ಪ್ರಿಂ॥ ವ. ಲಾಹೋರ ಬೆಲೆ ೦-೫-೦ P. L. ಪ್ರಾ. ಶಾ. ಗೆ ಕೆಳಗಿನ

ಪು|| ಗಳ ಗ್ರಂ. ಕ||-ಡಾ. ಎಸ್. ಎಲ್. ಶಾಟಿಯಾ ಮತ್ತು ಕಾರಿ ಶಬ್ಬೀರ ಅಹ್ಮದ ಪ್ರ|| ರು-ಪಂಜಾಬ ಪ್ರಿಂ. ವ. ಲಾಹೋರ ಮುಂ|| P. L. ಉರ್ದು ಪ್ರಾ. ಮತ್ತು ಮಾ. ಶಾ|| ಗೆ ಹಾಗು ಟ್ರೇ. ಸ. ಗೆ (೧೭) ಸಾಯನ್ಸ ರೀಡರ ಭಾ. ೧, ೨ನೆ ಆ. ೧೯೩೨ ಬೆಲೆ ೦-೮-೦ (೧೮) ಸದರ ಭಾಗ ೨. ೧೯೩೩. ಬೆಲೆ ೦-೮-೬ (೧೯) ಸದರ ಭಾಗ ೩. ೩ನೆ ಆ. ೧೯೩೩. ಬೆಲೆ ೦-೮-೨ -ಕೆಳಗಿನ ಪು|| ಗಳ ಗ್ರಂ. ಕ-ಮಹ್ಮದ ಅಕಬರ. ಪ್ರ-ಪಂಜಾಬ ಪ್ರಿಂ. ವ. ಲಾಹೋರ ಮುಂ-P. L. ಉರ್ದು ಪ್ರಾ. ಮತ್ತು ಮಾಧ್ಯಮಿಕ ಹಾಗು ಟ್ರೇ. ಸ. ಗೆ (೨೦) ಜದೀದ ಜಿಓಮೆಟ್ರೀ ಭಾಗ ೧ ೨ನೆ ಆ. ೧೯೩೨ ಬೆಲೆ ೦-೫-೩ (೨೧) ಸದರ ಭಾಗ ೨. ಸದರ ಬೆಲೆ ೦-೭ ೬ (೨೨) ಸದರ ಭಾಗ ೩ ಸದರ ಬೆಲೆ ೦-೧೪-೬ (೨೩) ಮಿರ ಅತುಲ ಅಖಲಾಕ ಬೆಲೆ ೦-೧೪-೦- (೨೪) ಉಸೂಲೆ ಹಿಸಾಬ. ಗ್ರಂ. ಕ|| ಲಾಲ ಮೋಹನಲಾಲ ಮತ್ತು ಮಹ್ಮದ ಅಝೀರುದ್ದೀನ ಪ್ರ|| ರು- ಪಂಜಾಬ ಪ್ರಿ. ವ. ಲಾಹೋರ ಬೆಲೆ ೦-೧೦-೬ T. ಟ್ರೇ. ಸಂ. ಗೆ ಹಾಗು ಟೀಚರ್ಸ ಲಾಯಬ್ರರಿಗೆ ಮತ್ತು ಬೇರೆ ಸಂಸ್ಥೆಗಳಿಗೆ (೨೫) ತದರೀಸೆ ಹಿಸಾಬ ಬೆಲೆ ೦-೮-೦ ಗ್ರಂ. ಕ. ಪ್ರ|| ಮಂಜೂರೀ ಸದರ-ಕೆಳಗಿನ ಪು|| ಗಳ ಗ್ರಂ. ಕ-ರಾ| ಸಾ| ರಘುನಾಥ ಬಿ. ಎ. ಹೆ. ಮಾ. ಪ್ಯಾಯಲ್‌ಸಿಂಗ ಹಾ. ಸ್ಕೂ. ಲಾಹೋರ ಪ್ರ||-ಪಂಜಾಬ ಪ್ರಿ. ವ. ಲಾಹೋರ ಮುಂ-P. L. ಉರ್ದು ಪ್ರಾ. ಶಾ. ಗೆ (೨೬) ಗುಲದಸ್ತ-ಎ-ಹಿಕಾಯತ ನಂ ೨. ೧ನೆ ಆ. ೧೯೨೬ ಬೆಲೆ ೦-೫-೦ (೨೭) ಸದರ ನಂ. ೩. ೨ನೆ ಆ. ೧೯೨೮ ಬೆಲೆ ೦-೪-೦ (೨೮) ಸದರ ನಂ. ೪. ೧ನೆ ಆ. ೧೯೨೬ ಬೆಲೆ ೦-೫-೦ (೨೯) ಸದರ ನಂ. ೫ ಬೆಲೆ ೦-೫-೦- ನಂ. ೩೦ರಿಂದ ೩೬ ಗುಲದಸ್ತ-ಎ-ಹಿಕಾಯತ ನಂ. ೬ ರಿಂದ ೧೨. ೧ನೆ ಆ. ೧೯೨೬ ಗ್ರಂ. ಕ- ರಾ. ಸಾ. ಲಾಲಾ ರಘುನಾಥ ಸಹಾಯಿ ಪ್ರ| ರು- ಪಂಜಾಬ ಪ್ರಿಂ. ವ. ಲಾಹೋರ ಪ್ರತಿ ಒಂದಕ್ಕೆ ೦-೫-೦ ಮುಂ P. L. ಪ್ರಾ. ಶಾ. ಗೆ

(೩೭) ಮುವಾಝುನ-ಎ-ಸಲೀಬೊಹಿಲಾಲ ೧ನೆ ಆ. ೧೯೩೩ ಗ್ರಂ. ಕ-ಮಹ್ಮದ ಅಬದುಸ್ಸಮಿಖಾ ನಕಹತ ಪ್ರ|| ಗ್ರಂ. ಕ. ಬೆಲೆ ೧-೨-೦ ಮುಂ-P. L. ಉರ್ದು ಪ್ರಾ. ಮತ್ತು ಮಾ. ಶಾ. ಗೆ ಹಾಗು ಟ್ರೇ. ಸಂ. ಗೆ (೩೮) ಬಾಬು ಹಿಸಾಬ. ಗ್ರಂ. ಕ-ಶೇಖಚಾಂದ ಪ್ರ| ರು- ಶೇಖಬ್ರದರ್ಸ ಬಾಬುಲ್ ಹಿಸಾಬ ಆಫೀಸ, ರಾಜಕೋಟ ಬೆಲೆ ೦-೨-೬ ಮುಂ-ಟೀಚರ್ಸ ಲಾಯಬ್ರರಿ ಮತ್ತು ಪ್ರಾ. ಶಾ. ಗೆ (೩೯-೪೨) ಉರ್ದು ಕಾಪಿಸ್ಲಿಪ್ ನಂ. ೧-೨-೩-೪ ಪ್ರ|| ರು-ದಿ ಪಂಜಾಬ ಪ್ರಿಂಟಿಂಗ ವರ್ಕ್ಸ ಲಾಹೋರ ಬೆಲೆ ಪ್ರತಿ ಯೊಂದಕ್ಕೆ ೦-೧-೦ ಮುಂ- ಪ್ರಾ. ಗಳ ಉಪಯೋಗಕ್ಕಾಗಿ

೩೦-೮-೧೯೩೩ **ಸೆಕ್ರೆಟರಿ ಉರ್ದು ಸ್ಕೂ. ಬುಕ್ ಕಮಿಟಿ ಪೂನಾ.**

...ರಾಟಕ್ಕೆ ಸಿದ್ಧವಾಗಿದೆ] [ಬೆಲೆ ೫ ಆಣೆ

ಕರ್ನಾಟಕದ ಕಥಾಮಯ ಇತಿಹಾಸ

(ಕನ್ನಡ ೪ನೆಯ ಇಯತ್ತೆಗಾಗಿ)

ಲೇಖಕ:-- ಗೋ. ಅ. ಜೋಗಳೇಕರ, ಸ್ಕೂಲ್‌ಮಾಸ್ತರ ಗದಗ

ನಮ್ಮಿಂದ ರಚಿಸಲ್ಪಟ್ಟ "ಕರ್ನಾಟಕಾಚಾ ಗೋಷ್ಟೀರೂಪ ಇತಿಹಾಸ" ಎಂಬ ...ರಾಠಿ ಪುಸ್ತಕವು ಮುಂಬಯಿ ಸರಕಾರದಿಂದ ಪಠ್ಯಪುಸ್ತಕವೆಂದು ಮಂಜೂರಾಗಿದೆ ...ದರ ಕನ್ನಡ ಭಾಷಾಂತರವು ಮಾರಾಟಕ್ಕೆ ಸಿದ್ಧವಾಗಿದೆ. ಇದರಲ್ಲಿ ಐತಿಹಾಸಿಕ ಕಾಲ ...ದ ಈಗಿನವರೆಗಿನ ಕರ್ನಾಟಕದ ಇತಿಹಾಸವು ಚಿಕ್ಕಮಕ್ಕಳಿಗೆ ತಿಳಿಯಬಹ ದಾದ ...ಲಭ ಭಾಷೆಯಲ್ಲಿ ೩೨ ಕಥೆಗಳ ರೂಪದಿಂದ ಬರೆಯಲ್ಪಟ್ಟಿದೆ. ಬಾಲಕರಲ್ಲಿ ...ಫೂರ್ತಿಯೂ, ಸ್ವಾಭಿಮಾನವೂ ಹುಟ್ಟುವಂತೆ ಇದರ ರಚನೆಯಿದೆ. ಎರಡು ನಕಾಶ ...ಳೂ, ಅಲ್ಲಲ್ಲಿ ಬೇಕಾಗುವ ಚಿತ್ರಗಳೂ ಸೇರಿಸಲ್ಪಟ್ಟಿವೆ. ಇಂಥ ಉಪಯುಕ್ತವಾದ ಪುಸ್ತಕಕ್ಕೆ ಸ್ಕೂಲ್‌ಬೋರ್ಡುಗಳೂ, ಶಿಕ್ಷಕರೂ ಉತ್ತೇಜನಕೊಟ್ಟು ಬಾಲಕರಿಗೆ ನಿಜ ...ವಾದ ಇತಿಹಾಸಜ್ಞಾನವನ್ನು ಮಾಡಿಕೊಡಬೇಕೆಂದು ಹಾರೈಸುವೆವು.

ಪುಸ್ತಕಗಳು ಎಲ್ಲ ಬುಕ್‌ಡಿಪೋಗಳಲ್ಲಿಯೂ ಗ್ರಂಥಕರ್ತರಲ್ಲಿಯೂ ದೊರೆಯುವವು. ಶಿಕ್ಷಕರಿಗೂ ಪುಸ್ತಕವ್ಯಾಪಾರಿಗಳೂ ಯೋಗ್ಯ ಕಮಿಶನು ಕೊಡಲಾಗುವದು.

ಗೋ. ಅ. ಜೋಗಳೇಕರ,
ಸ್ಕೂಲ್‌ಮಾಸ್ತರ, ಗದಗ ಮ್ಯುನಿಸಿಪಾಲಿಟಿ, ಗದಗ.

ಶ್ರೀ ಮೋಡಕಕೃತ

ಮಹಾರಾಷ್ಟ್ರ-ಇಂಗ್ಲಿಷರ ಆಳಿಕೆ

ಅಥವಾ

೬ನೆಯ ಇಯತ್ತೆಯ ಇತಿಹಾಸ

ಬೆಲೆ ೧೦ ಆಣೆ.

ಈ ಮೊದಲು ಶ್ರೀ. ಮೋಡಕ ಇವರು ೫ನೆ ಇಯತ್ತೆಯ ಇತಿಹಾಸವನ್ನು ಬರೆದಿದ್ದು ಅದು ಸರಕಾರದಿಂದ ಮಂಜೂರಾಗಿದೆ. ಆ ಪುಸ್ತಕದ ರೀತಿಯನ್ನು ಅನುಸರಿಸಿಯೇ ಇವರು ಈ ೬ನೆಯ ಇಯತ್ತೆಯ ಇತಿಹಾಸವನ್ನಾದರೂ ಬರೆದಿರುವರು. ಪ್ರತಿಗಳು ಎಲ್ಲ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯುವವು. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಯೋಗ್ಯ ಕಮಿಶನ್ನು ಕೊಡಲ್ಪಡುವದು.

ವಿಳಾಸ—
ವ್ಯವಸ್ಥಾಪಕ, ವಿದ್ಯಾವಿಲಾಸ ಬುಕ್‌ಡಿಪೋ, ಗದಗ.

Reg. No. B. 2567

ಜಾಹೀರಾತು

ಸರಕಾರದಿಂದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಟೆಕ್ಸ್ಟ ಬುಕ್ಕಾಗಿ ಮಂಜೂರಾದ

ಗಣಿತ ಶಿಕ್ಷಕ

ಲೇಖಕ:—ಹಿರೇಮಠ ಮ್ಯು. ಕನ್ನಡ ಶಾಲಾಸ್ತ್ರೀಮಾಸ್ತರ ವಿಜಾಪುರ.

ಈ ಪುಸ್ತಕದಲ್ಲಿ ಕನ್ನಡ ೫, ೬, ೭, ... ಜ್ಜಗು ವ್ಹ. ಫಾಯಿನಲ್ ಪರೀಕ್ಷೆ ವಿದ್ಯಾರ್ಥಿಗಳಿಗೆ ಉಪಯೋಗವಾಗುವಂತೆ ಪ್ರತಿಯೊಂದು ಪ್ರಕರಣದಲ್ಲಿ ವ್ಯವಹಾ ಲೆಕ್ಕಗಳನ್ನೂ, ವಾರಲೋನ, ಕ್ಯಾಶ ಸರ್ಟಿಫಿಕೇಟು ಮುಂತಾದ ಪ್ರಚಲಿತ ಶೇವ್ವ ಲೆಕ್ಕಗಳನ್ನೂ ಹಾಕಿದೆ. ಮೊದಲು ಮಾದರಿಗಾಗಿ ಒಂದು ಲೆಕ್ಕವನ್ನು ಬಿ ತೋರಿಸಿ, ತರುವಾಯ ಪ್ರತಿಯೊಂದು ಅದೇ ಮಾದರಿಯ ಹಲವು ಲೆಕ್ಕಗಳನ್ನು ರೂ ಗಾಗಿ ಸೇರಿಸಿದೆ. ಲೆಕ್ಕವು ಮನದಟ್ಟಾಗುವಂತೆ ಈ ಪುಸ್ತಕದಲ್ಲಿ ವಿದ್ಯಾರ್ಥಿಗ ಉಪಯೋಗವಾಗುವಷ್ಟೇ ವಿಷಯಗಳನ್ನು ಕೊಟ್ಟದ್ದರಿಂದ ಬೆಲೆಯೂದರೂ ಕಡಿ ಯಾಗಿ ಪ್ರತಿಯೊಬ್ಬರು ಸಂಗ್ರಹಿಸಲು ತಕ್ಕದ್ದಾಗಿದೆ. ಬೆಲೆ ೧೪ ಆಣೆ.

ಪುಸ್ತಕಗಳು ದೊರೆಯುವ ಸ್ಥಳ:—

ಬಸಪ್ರಭಯ್ಯ ದುಂಡಯ್ಯ ಹಿರೇಮಠ,

ಮ್ಯು. ಕನ್ನಡ ಶಾಲಾ ಮಾಸ್ತರ ವಿಜಾಪೂರ.

ಮತ್ತು ಎಲ್ಲ ಮುಖ್ಯ ಬುಕ್ಕಶೇಲರರಲ್ಲಿ ಸಿಗುವವು.

ಮಿ. ಸುರಜಭಾನ ಭವಾನಿಪ್ರಸಾದ ಆಲೂರ (ಪಾಂಡೆ) ಇವರು ಧಾರವಾಡ ಸರಕಾರಿ ಹಾಯಸ್ಕೂಲಿನಲ್ಲಿ ಶಿಕ್ಷಕರಾಗಿದ್ದರಷ್ಟೇ. ಇವರ ಚರಿತ್ರವನ್ನು ತಾ. ೧-೧೨-೧೯೩೩ರ ಒಳಗಾಗಿ ಕನ್ನಡದಲ್ಲಿ ಬರೆದು ಕಳಿಸಿದವರಲ್ಲಿ ಮೂವರಿಗೆ ರೂ. ೧೦; ರೂ. ೬; ರೂ. ೪ ಹೀಗೆ ಮೂರು ಇನಾಮುಗಳು, ೧-೧-೩೪ಕ್ಕೆ ಕೊಡಲ್ಪಡುವವು. ಇನಾಮುಗಳನ್ನು ನಿರ್ಣಯಿಸುವ ಪೂರ್ಣ ಅಧಿಕಾರವು ಕೆಳಗೆ ಸಹಿ ಮಾಡಿದವರಿಗೆ ಇರುವದು.

ಚಂ. ಸು. ಪಾಂಡೆ, ರಿಟಾಯರ್ಡ ಪೋಸ್ಟಮಾಸ್ತರ, ಶಿವಮೊಗ್ಗಾ.

ಸ್ಯಾಂಪಲ್] [ಫುಕ

ಉತ್ತಮ ಮಸೀ ಚೀಟುಗಳು

ನೀಲೀಕಪ್ಪು, ಕೆಂಪು, ಜಾಂಬಳಿ ಮಸಿಯ ಚೀ ಗಳು ಈ ಕಂಪನಿಯು ಬಹಳ ಜನರಿಂದ ಶಿಫಾರಸ ಪಡೆದು ಮೈಡಲ್ಲುಗಳನ್ನು ಸಂಪಾದಿಸಿರುತ್ತದೆ.

ದರಗಳು

೧೦೦	ಚೀಟುಗಳಿಗೆ	೦—೭—
೫೦೦	,,	೧—೧೪
೧೦೦೦	,,	೩—೦—
೧೦೦೦೦	,, ೨೭—೮—೦ (ರೇಲ್ವೆ ಫ್ರಿ	

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರಮಾಡಿ

ಕರ್ನಾಟಕ ಇಂಕ ಕಂಪನಿ,

ಬಾಗಲಕೋ

Reg. No. B. 2567

ಕನ್ನಡ
ಪ್ರಾಥಮಿಕ ಶಿಕ್ಷಣ

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

Kannada Prathamik Shikshana

— NOVEMBER & DECEMBER 1933 —

ಸಂಪಾದಕ—ವೆಂಕಟೇಶ ನರಸಿಂಗರಾವ ಮುಗದಾಳ ಬಿ. ಎ.,

ಸಂಪುಟ ೭೦] ನವಂಬರ, ದಿಶಂಬರ ೧೯೩೩ [ವ. ೫ ಸಂ. ೮-೯

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ			ಪುಟ
೧.	ಭೂಗೋಲ ಶಿಕ್ಷಣ	...	...	೧
೨.	ಬುದ್ಧನ ಸಮಯದಲ್ಲಿಯ ಭರತಖಂಡದ ಸ್ಥಿತಿಯು			೧೧
೩.	ಜೂಟ ನಾರು	...	...	೨೦
೪.	ಪೂರ್ಣಯ್ಯನವರು	...	...	೨೨
೫.	೨ನೆಯ ಸ್ಯಾಕಟರ‍್ಯಾಲಿ, ಧಾರವಾಡ		...	೨೭
೬.	ಸ್ತ್ರೀ ಧರ್ಮ	...	...	೩೭
೭.	ಪ್ರಾಥಮಿಕ ಶಿಕ್ಷಣದ ಉದ್ದೇಶಗಳು		...	೪೨
೮.	ಹಳೆಯ ಹೊಸ ಅಧಿಕಾರಿಗಳು	...	...	೪೫
೯.	ನಮ್ಮ ದೇಶದ ಆಮದು	...	...	೪೭
೧೦.	ಮಾನಸಶಾಸ್ತ್ರವು	...	...	೪೮
೧೧.	ಹೆಣ್ಣುಮಕ್ಕಳ ವ್ಹ. ಫಾ. ಪ. ಯ ವಿಷಯಗಳು (೧೯೩೫)			೫೬
೧೨.	೧೯೧ ವರ್ಷಗಳ ಕ್ಯಾಲೆಂಡರವು ...		...	೫೭
೧೩.	ಗಂಡುಮಕ್ಕಳ ವ್ಹ. ಫಾ. ಪ. ಯ ವಿಷಯಗಳು (೧೯೩೫)			೬೧
೧೪.	ಪ್ರಕಟನೆಗಳು	..	...	೬೪

Printed by K. R. Bhise at the Karnatak Printing Works, Dharwar
& Published by V. N. Magdal, B. A.,
Head Master, Training School, Dharwar, at his Office

೪೯ ಅಜಂ ಹೆಡ್ಡ ಮಾಸ್ತರ ಕನ್ನಡ ಶಾಲಾ ನಂ. ೧
ಹಳೇತಾಲೂಕ ಕಚೇರಿ
ಮುಕ್ಕಾಂ — ಧಾರವಾಡ

ಮುಗಿಲು

ಗ್ರಂಥಕರ್ತರು— ಶ್ರೀ ಸ. ಪ. ಗಾಂವಕಾರ ಬಿ. ಎ.,

ಶ್ರೀಯುತ ಗಾಂವಕರರು ಸ್ವಯಂಸ್ಫೂರ್ತಿಯಿಂದ ರಚಿಸಿದ ಚಿಕ್ಕ ಕವನಗ ಸಂಗ್ರಹವಿದು. ಪ್ರಾರ್ಥನೆ, ರೈತನ ಗೋಳು ಮುಂತಾದ ಹದಿನಾರು ವಿಷಯಗ ಮೇಲೆ ಕವಿತೆಗಳಿವೆ. ಕವಿತೆಗಳ ವಸ್ತು, ಭಾಷೆ, ಛಂದಸ್ಸು ಮುಂತಾದ ಎಲ್ಲ ವಿಷಯ ಗಳಲ್ಲಿ ಆಧುನಿಕ ಕವಿತೆಗಳ ಮಾದರಿಯನ್ನು ಇದರಲ್ಲಿ ಕಾಣಬಹುದು. ಭಾವವೆ ಬಲವು ಎಂಬುದು ಆಧುನಿಕ ಕವಿತೆಗಳ ಮುಖ್ಯ ಅವಲಂಬನವೆಂದು ಹೇಳುವದುಂಟು ಆದರೆ ನಿತ್ಯದ ಪ್ರಸಂಚದಲ್ಲಿ ಕಂಡು ಕೇಳಿ ಅನುಭವಿಸುವ ತೀರ ಸಾಮಾನ್ಯ ವಿಷಯ ಗಳನ್ನು ಬಲವಾದ ಭಾವಗ್ರಹಣ ಶಕ್ತಿಯುಳ್ಳವರು ಹೇಗೆ ಗ್ರಹಿಸಿ ಹೇಗೆ ಅನುಭವಿ ಹೇಗೆ ಜನತೆಯ ಮುಂದಿಡಬಲ್ಲರೆಂಬದು ಈ ಚಿಕ್ಕ ಪುಸ್ತಕದ ವಾಚನದಿಂದ ತಿಳಿದ ಬರುವಂತಿದೆ. ಮುದ್ರಣಾದಿಗಳು ಚನ್ನಾಗಿವೆ. ಶ್ರೀಯತ ಗಾಂವಕರರ ಸ್ತುತ್ಯವಾ ಈ ಪ್ರಯತ್ನವನ್ನು ಕನ್ನಡಿಗರು ಪ್ರೋತ್ಸಾಹಿಸಲಿ.

ನಾ. ವೆ. ಕು.

ಮಾರಾಟಕ್ಕೆ ಸಿದ್ಧವಾಗಿದೆ] [ಬೆಲೆ ೫ ಆ

ಕರ್ನಾಟಕದ ಕಥಾಮಯ ಇತಿಹಾಸ

(ಕನ್ನಡ ಆನೆಯ ಇಯತ್ತೆಗಾಗಿ)

ಲೇಖಕ:— ಗೋ. ಅ. ಜೋಗಳೇಕರ, ಸ್ಕೂಲ್ ಮಾಸ್ತರ ಗದಗ

ನಮ್ಮಿಂದ ರಚಿಸಲ್ಪಟ್ಟ "ಕರ್ನಾಟಕಾಚಾ ಗೋಷ್ಟೀರೂಪ ಇತಿಹಾಸ" ಎಂ ಮರಾಠಿ ಪುಸ್ತಕವು ಮುಂಬಯಿ ಸರಕಾರದಿಂದ ಪಠ್ಯಪುಸ್ತಕವೆಂದು ಮಂಜೂರಾಗಿ ಅದರ ಕನ್ನಡ ಭಾಷಾಂತರವು ಮಾರಾಟಕ್ಕೆ ಸಿದ್ಧವಾಗಿದೆ. ಇದರಲ್ಲಿ ಐತಿಹಾಸಿಕ ಕಾ ದಿಂದ ಈಗಿನವರೆಗಿನ ಕರ್ನಾಟಕದ ಇತಿಹಾಸವು ಚಿಕ್ಕಮಕ್ಕಳಿಗೆ ತಿಳಿಯಬಹುದಾ ಸುಲಭ ಭಾಷೆಯಲ್ಲಿ ೩೨ ಕಥೆಗಳ ರೂಪದಿಂದ ಬರೆಯಲ್ಪಟ್ಟಿದೆ. ಬಾಲಕರ ಸ್ಫೂರ್ತಿಯೂ, ಸ್ವಾಭಿಮಾನವೂ ಹುಟ್ಟುವಂತೆ ಇದರ ರಚನೆಯಿದೆ. ಎರಡು ನಕಾ ಗಳೂ, ಅಲ್ಲಲ್ಲಿ ಬೇಕಾಗುವ ಚಿತ್ರಗಳೂ ಸೇರಿಸಲ್ಪಟ್ಟಿವೆ. ಇಂಥ ಉಪಯುಕ್ತವಾ ಪುಸ್ತಕಕ್ಕೆ ಸ್ಕೂಲ್‌ಬೋರ್ಡುಗಳೂ, ಶಿಕ್ಷಕರೂ ಉತ್ತೇಜನಕೊಟ್ಟು ಬಾಲಕರಿಗೆ ನಿ ವಾದ ಇತಿಹಾಸಜ್ಞಾನವನ್ನು ಮಾಡಿಕೊಡಬೇಕೆಂದು ಹಾರೈಸುವೆವು.

ಪುಸ್ತಕಗಳು ಎಲ್ಲ ಬುಕ್‌ಡಿಪೋಗಳಲ್ಲಿಯೂ ಗ್ರಂಥಕರ್ತರಲ್ಲಿಯೂ ದೊರೆಯ ವವು. ಶಿಕ್ಷಕರಿಗೂ ಪುಸ್ತಕವ್ಯಾಪಾರಿಗಳೂ ಯೋಗ್ಯ ಕಮಿಶನು ಕೊಡಲಾಗುವದ

ಗೋ. ಅ. ಜೋಗಳೇಕರ,

ಸ್ಕೂಲ್ ಮಾಸ್ತರ, ಗದಗ ಮ್ಯುನಿಸಿಪಾಲಿಟಿ, ಗದಗ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:—ವೆಂಕಟೇಶ ನರಸಿಂಗರಾವ ಮುಗದಾಳ, ಬಿ. ಎ.,

ಸಂಪುಟ ೭೦ ||| ನವಂಬರ, ದಿಶಂಬರ ೧೯೩೩ ||| ವರ್ಷ ೬ ಸಂ. ೮-೯

ಭೂಗೋಲ ಶಿಕ್ಷಣ

ಲೇಖಕರು:—ಶ್ರೀ. ವ್ಹಿ. ಆರ್. ಪರ್ವತೀಕರ ಬಿ. ಎ., ಸೀ. ಅ. ಡೆ. ಎ. ಇನ್ಸಪೆಕ್ಟರ, ಕಾರವಾರ.

ನಮ್ಮ ಸಾಲೆಗಳಲ್ಲಿ ಕಲಿಸುವ ಹಲವು ವಿಷಯಗಳಲ್ಲಿ ಭೂಗೋಲವು ಕಲಿಸಲಿಕ್ಕೆ ಬಹಳ ಗಡಚಾದದ್ದು. ಈ ಕೆಲಸದಲ್ಲಿ ಶಿಕ್ಷಕರ ಆಸ್ಥೆಯೂ ಹಂಚಿಕೆಗಳನ್ನು ಉಪಯೋಗಿಸುವ ಸಾಮರ್ಥ್ಯವೂ ಒರೆಗೆ ಹತ್ತುತ್ತವೆ. ಪ್ರಾಥಮಿಕ ಶಾಲೆಗಳಲ್ಲಂತೂ ಶಿಕ್ಷಕರಿಗೆ ಇಲ್ಲದ ತೊಡಕುಗಳನ್ನುಂಟು ಮಾಡುವ ವಿಷಯವೆಂದರೆ ಭೂಗೋಲವೇ. ಈ ವಿಷಯವನ್ನು ಪರಿಣಾಮಕರವಾಗಿ ಕಲಿಸಲಿಚ್ಛಿಸುವ ಪ್ರಾಥಮಿಕ ಶಿಕ್ಷಕರಿಗೆ ತೊಂದರೆಗಳು ಹಲವಿರುತ್ತವೆ. ಭೂಗೋಲ ಶಿಕ್ಷಕನಿಗೆ ಅವಶ್ಯವಿರುವ ಜ್ಞಾನಸಂಚಯವು ಅವರಿಗಿರುವದಿಲ್ಲ. ಈ ಜ್ಞಾನವನ್ನು ಕಲೆಹಾಕಲಿಕ್ಕೆ ಅವಶ್ಯವಿರುವ ತಕ್ಕ ಪುಸ್ತಕಗಳು ಕನ್ನಡದಲ್ಲಿ ಸಿಗುವದಿಲ್ಲ. ತಮ್ಮ ದಿನದ ಕೆಲಸದಲ್ಲಿ ಈ ವಿಷಯದ ಶಿಕ್ಷಣವನ್ನು ಹ್ಯಾಗೆ ಸಾಗಿಸಬೇಕೆಂಬದನ್ನು ತೋರಿಸಿಕೊಡುವವರು ಅವರಿಗೆ ದೊರೆಯುವದಿಲ್ಲ. ತಮಗೆ ದೊರೆಯುವ ಪುಸ್ತಕಗಳ ನೆರವಿನಿಂದ ಆಗುವಷ್ಟು ಜ್ಞಾನವನ್ನು ಮಾಡಿಕೊಂಡು ಕೈಲಾದ ಮಟ್ಟಿಗೆ ಪರಿಣಾಮಕರವಾಗುವಂತೆ ಈ ವಿಷಯವನ್ನು ಸಾಗಿಸುವದು ಮಾತ್ರ ಅವರಿಗೆ ಸಾಧ್ಯವಿರುತ್ತದೆ.

ಟ್ರೇನಿಂಗ ಸಂಸ್ಥೆಗಳಲ್ಲಿ ಶಿಕ್ಷಣ ಪಡೆಯುತ್ತಿರುವಾಗ ಅವರಿಗೆ ಈ ವಿಷಯವನ್ನು ಕಲಿಸತಕ್ಕ ಪದ್ಧತಿಯ ದಿಗ್ದರ್ಶನವು ಆಗಿರುತ್ತದೆ. ಮುಂದೆ ಇದನ್ನು ಹ್ಯಾಗೆ ಕಲಿಸಬೇಕೆಂಬ ಬಗ್ಗೆಯೂ ಅವರಿಗೆ ಸಾಮಾನ್ಯವಾಗಿ ಅಲ್ಲಿ ಹೇಳಿರುವ

ದುಂಟು. ಟ್ರೇನಿಂಗ ಮುಗಿಸಿ ಸಾಲೆಗೆ ಬಂದು ಹಾಜರಾದ ಕೂಡಲೆ ಅವರ ವಿಲಕ್ಷಣ ಪರಿಸ್ಥಿತಿಯ ಮೂಲಕ ಪ್ರಾಥಮಿಕ ಶಾಲೆಗಳಲ್ಲಿ ಈ ಪರಿಸ್ಥಿತಿಯು ವಿಲಕ್ಷಣವಾದದ್ದೇ ಇರುವದು. ಟ್ರೇನಿಂಗ ಹೊಂದುತ್ತಿರುವಾಗ ತಾವು ಪಡೆದಿರುವ ಪದ್ಧತಿಯ ಜ್ಞಾನದ ಉಪಯೋಗವು ಅವರಿಗೆ ನಿಷ್ಫಲವೆನಿಸುತ್ತದೆ. ಆ ಪದ್ಧತಿಗನುಸರಿಸಿ ವಿಷಯುವನ್ನು ಸಾಗಿಸುವದು ಅವರಿಗೆ ಅರಿದೆನಿಸುವದು. ಆದ್ದರಿಂದ ಸುಲಭವಾಗಿ ಎಲ್ಲರ ಕೈಯಲ್ಲಿ ಕೊಡಬಹುದಾದ ಅಗ್ಗವಾದ ಪುಸ್ತಕಗಳ ಸಹಾಯದಿಂದ ಬಾಯಿಪಾಠ ಮಾಡಿಸಿ ಕಲಿಸಿ ಬಿಡುವದು ಅವರಿಗೆ ಬಹಳ ಸುಲಭವೂ ಸುಸಾಧ್ಯವೂ ಆದ ಮಾರ್ಗವೆಂದು ಮನವರಿಕೆಯಾಗುತ್ತದೆ. ಇದನ್ನೇ ಅವರು ಅನುಸರಿಸುವದರಲ್ಲಿ ಸೋಜಿಗವಾದದ್ದೇನೂ ಇರುವದಿಲ್ಲ. ಹುಡುಗರಿಗೆ ಮಾತ್ರ ಭೂಗೋಲ ಜ್ಞಾನಕ್ಕೆ ನಿಜವಾದ ಸಂಬಂಧವಿಲ್ಲದ ಹೆಸರುಗಳ ಪಟ್ಟಿಗಳನ್ನು ಪಾಠ ಮಾಡುವದು ಬಲು ಬೇಸರದ ವ್ಯವಸಾಯವೆನಿಸುವದು; ಭೂಗೋಲವೆಂದ ಕೂಡಲೆ ಅವರಿಗೆ ತಲೆ ಚಿಟ್ಟೆನಿಸುವದು. ಸಾಲೆಯಲ್ಲಿಯೂ ವಿದ್ಯಾರ್ಥಿಗಳಲ್ಲಿಯೂ ಈ ವಿಷಯದ ಬಗ್ಗೆ ಇಂಥ ಅಸಹ್ಯವಾದ ಕಲ್ಪನೆಗಳು ಉಂಟಾಗಿ ಜ್ಞಾನಾರ್ಜನೆಯು ಅವರಿಗೆ ವಿರಸವೂ ವೇದನೆಯುಳ್ಳದ್ದೂ ಆಗುವದು ಸರಿಯಲ್ಲ. ಇದನ್ನು ತಪ್ಪಿಸಿ, ಭೂಗೋಲವು ತಮಗೆ ಸಂಬಂಧಿಸಿದ ವಿಷಯವು, ಅದರಲ್ಲಿ ತಿಳಿದುಕೊಳ್ಳತಕ್ಕ ಮಾತುಗಳು ಇರುವವು ಎಂದು ಅವರಿಗೆ ಅನಿಸುವಂತೆ ಮಾಡುವದೇ ಶಿಕ್ಷಕರ ಕರ್ತವ್ಯವು. ಈ ಬಗ್ಗೆ ಶಿಕ್ಷಕರ ಮುಂದೆ ಕೆಲವು ಸೂಚನೆಗಳನ್ನು ಇಡುವದು ನಮ್ಮ ಉದ್ದೇಶವು. ನಮ್ಮ ಸಾಮಾನ್ಯ ಸೂಚನೆಗಳೆಂದರೆ.—

೧. ಪ್ರತಿಯೊಬ್ಬ ಹುಡುಗನ ಬಳಿಗೆ ಈ ವಿಷಯದಲ್ಲಿ ಮೇಲಿಂದ ಮೇಲೆ ಉಪಯೋಗಿಸಲಿಕ್ಕಾಗಿ ಒಂದು ನಕಾಶ ಪುಸ್ತಕವು (Atlas) ಇರತಕ್ಕದ್ದು. ಭೂಗೋಲ ವಿಷಯುವನ್ನು ಕಲಿಸುವ ಶಿಕ್ಷಕರೆಲ್ಲರು “ ನಕಾಶವಿಲ್ಲದೆ ಭೂಗೋಲವಿಲ್ಲ”ವೆಂಬ ನುಡಿಯನ್ನು ಯಾವಾಗಲೂ ಲಕ್ಷ್ಯದಲ್ಲಿಡತಕ್ಕದ್ದು.

೨. ಭೂಗೋಲದ ಪ್ರತಿಯೊಂದು ಬಗೆಯ ಸಂಗತಿಯನ್ನು ಉದಾಹರಿಸುವ ನಕಾಶಗಳು ಪ್ರತ್ಯೇಕವಾಗಿ ಇರಬೇಕು.

೩. ಹುಡುಗರು ತಮ್ಮ ದಿನದ ಜೀವನದಲ್ಲಿ ತಮ್ಮ ಸುತ್ತಲಿನ ಸಂಗತಿಗಳನ್ನು ಕುರಿತು ನೋಡಿ ಮಾಡಿಕೊಂಡ ಜ್ಞಾನವನ್ನು ಅವರಿಂದಲೇ ಹೊರಡಿಸಬೇಕು.

೪. ಈ ಜ್ಞಾನಕ್ಕೂ ಅವರು ಅಭ್ಯಾಸಿಸುತ್ತಿರುವ ಭೂಭಾಗಕ್ಕೆ ಸಂಬಂಧಿಸಿದ ಜ್ಞಾನಕ್ಕೂ ತಳಕು ಹಾಕಲಿಕ್ಕೆ ಪ್ರಯತ್ನಪಡಬೇಕು.

೫. ತಮ್ಮ ಸುತ್ತಲಿರುವ ಪರಿಸ್ಥಿತಿಯನ್ನು ಅಭ್ಯಾಸ ಮಾಡಿ ತಾವು ದೊರಕಿಸಿದ ಮಾಹಿತಿಯನ್ನು ಉಪಯೋಗಿಸಿ, ತಾವು ಹೊಸದಾಗಿ ಕಲಿಯುತ್ತಿರುವ ಭೂಭಾಗದ ಬಗ್ಗೆ ಅನುಮಾನಗಳನ್ನು ತೆಗೆಯಲಿಕ್ಕೆ ಅವರಿಗೆ ಹೇಳಬೇಕು. ಆ ಬಳಿಕ ಆ ಭೂಭಾಗಕ್ಕೆ ಸಂಬಂಧಿಸುವ ಚಿತ್ರಗಳು, ಭಾವಚಿತ್ರಗಳು, ಆಕೃತಿಗಳು, ನಕಾಶಗಳು ಮುಂತಾದವುಗಳ ಸಹಾಯದಿಂದ ಹುಡುಗರು ತೆಗೆದ ಅನುಮಾನಗಳು ಸರಿಯಿರುವವೋ ಹ್ಯಾಗೆ ಎಂಬದನ್ನು ಮನಗಾಣಲಿಕ್ಕೆ ಹಚ್ಚಬೇಕು.

೬. ಪ್ರತಿಯೊಂದು ಸಾಲೆಯಲ್ಲಿ ಪದಾರ್ಥಸಂಗ್ರಹಾಲಯವನ್ನು ಏರ್ಪಡಿಸಿ ಇದರಲ್ಲಿ ಭೂಗೋಲಾಭ್ಯಾಸಕ್ಕೆ ಸಹಕಾರಿಯಾಗುವಂಥ ಒಂದು ಭಾಗವನ್ನು ಸ್ಥಾಪಿಸಿರಬೇಕು.

೭. ಮೇಲಿನ ಇಯತ್ತೆಗಳಲ್ಲಿ ಪ್ರತಿಯೊಂದು ದೇಶವನ್ನು ಪ್ರತ್ಯೇಕವಾಗಿ ಅಭ್ಯಾಸ ಮಾಡುವ ಬದಲು ಖಂಡಗಳಿಂದ ಆರಂಭಿಸಿ ಇವುಗಳಲ್ಲಿ ಪ್ರದೇಶ ಪದ್ಧತಿಯನ್ನನುಸರಿಸಿ ವಿಸ್ತಾರವಾದ ಭಾಗಗಳನ್ನು ಅಭ್ಯಾಸಿಸುವದು ಮೇಲಾದದ್ದು.

ಇನ್ನು ಕೆಳಗಿನ ಇಯತ್ತೆಗಳಲ್ಲಿ ಭೂಗೋಲವನ್ನು ಅಭ್ಯಾಸಿಸುವ ಮಾರ್ಗವನ್ನು ಕುರಿತು ನಾಲ್ಕು ಮಾತುಗಳನ್ನು ಹೇಳಿ ಆ ಬಳಿಕ ಮೇಲ್ಕಾಣಿಸಿದ ಸೂಚನೆಗಳನ್ನು ಹ್ಯಾಗೆ ಅನುಸರಿಸಬಹುದೆಂಬದನ್ನು ಕುರಿತು ವಿಚಾರಿಸೋಣ.

ಭೂಗೋಲ ವಿಷಯದ ಆರಂಭದ ಅಭ್ಯಾಸವನ್ನು ಮಾಡುವ ಎಲ್ಲಕ್ಕೂ ಮೇಲಾದ ಮಾರ್ಗವೆಂದರೆ, ನಾವು ಅಭ್ಯಾಸಿಸಬೇಕಾಗಿರುವ ಪ್ರದೇಶವನ್ನು ಹುಡುಗರೊಡನೆ ಪ್ರತ್ಯಕ್ಷವಾಗಿ ನೋಡಿಕೊಂಡು ಬರುವದು. ಇದಕ್ಕೆ ಪರ್ಯಟನ (tour) ಪದ್ಧತಿಯೆಂದು ಹೆಸರಿಡಬಹುದು. ಈ ಪ್ರವಾಸಗಳಲ್ಲಿ ಹುಡುಗರ ಲಕ್ಷವನ್ನು ಮೊದಲು ಭೂಮಿಯ ಏರಿಳಿತಗಳ ಕಡೆಗೆ ಎಳೆಯತಕ್ಕದ್ದು. ಈ ಸಮಯದಲ್ಲಿ ಅವರಿಗೆ ಆಗುವ ಭೂಪೃಷ್ಠದ ತಗ್ಗುದಿನ್ನೆಗಳ ಬೈಲು ಭಾಗಗಳ ಜ್ಞಾನವು ಯಥಾರ್ಥವಾದದ್ದಾಗುವದು. ಈ ಪರ್ಯಟನವಿಲ್ಲದೆ ನಾವು ಎಷ್ಟು ವರ್ಣನೆ ಮಾಡಿದರೂ ಇದರ ನಿಜವಾದ ಕಲ್ಪನೆಯು ಅವರಿಗೆ ಸ್ವಲ್ಪವೂ ಆಗದೆಂಬದನ್ನು ಶಿಕ್ಷಕರು ಲಕ್ಷ್ಯದಲ್ಲಿಡತಕ್ಕದ್ದು. ಬೈಲು ನಾಡಿನಲ್ಲಿ ಎತ್ತರದ ಒಂದು ಮರಡಿಗೆ ಒಯ್ದು ಅತಿ ದೂರದ ವರೆಗೆ ಮಾಲಾಕಾರವಾಗಿ ಹಬ್ಬಿದ ಭೂಭಾಗವನ್ನು ತೋರಿಸುವದೂ ಮಲೆನಾಡಿನಲ್ಲಿ ಒಂದು ಗುಡ್ಡದ ಮೇಲೆ ನಿಂತು ಗುಡ್ಡ, ಕೊಳ್ಳಗಳು, ಭೂಮಿಯ ಇಳುಕಲು ಮೊದಲಾದ ಬಗ್ಗೆ ತೋರಿಸುವದೂ ಒಳ್ಳೇ ಮಹತ್ವದ ಸಂಗತಿಗಳು. ಪ್ರವಾಸದಲ್ಲಿ ಬಗೆಬಗೆಯ ಭೂಮಿಗಳನ್ನೂ ಅವುಗಳ ಲಕ್ಷಣಗಳನ್ನೂ ತೋರಿಸುವದರಿಂದ ಭೂರಚನೆಯ ನಿಜವಾದ ಜ್ಞಾನವು

ದುಂಟು. ಟ್ರೇನಿಂಗ ಮುಗಿಸಿ ಸಾಲೆಗೆ ಬಂದು ಹಾಜರಾದ ಕೂಡಲೆ ಅವರ ವಿಲಕ್ಷಣ ಪರಿಸ್ಥಿತಿಯ ಮೂಲಕ ಪ್ರಾಥಮಿಕ ಶಾಲೆಗಳಲ್ಲಿ ಈ ಪರಿಸ್ಥಿತಿಯು ವಿಲಕ್ಷಣವಾದದ್ದೇ ಇರುವದು. ಟ್ರೇನಿಂಗ ಹೊಂದುತ್ತಿರುವಾಗ ತಾವು ಪಡೆದಿರುವ ಪದ್ಧತಿಯು ಜ್ಞಾನದ ಉಪಯೋಗವು ಅವರಿಗೆ ನಿಷ್ಫಲವೆನಿಸುತ್ತದೆ. ಆ ಪದ್ಧತಿಗನುಸರಿಸಿ ವಿಷಯುವನ್ನು ಸಾಗಿಸುವದು ಅವರಿಗೆ ಅರಿದೆನಿಸುವದು. ಆದ್ದರಿಂದ ಸುಲಭವಾಗಿ ಎಲ್ಲರ ಕೈಯಲ್ಲಿ ಕೊಡಬಹುದಾದ ಅಗ್ಗವಾದ ಪುಸ್ತಕಗಳ ಸಹಾಯದಿಂದ ಬಾಯಿಪಾಠ ಮಾಡಿಸಿ ಕಲಿಸಿ ಬಿಡುವದು ಅವರಿಗೆ ಬಹಳ ಸುಲಭವೂ ಸುಸಾಧ್ಯವೂ ಆದ ಮಾರ್ಗವೆಂದು ಮನವರಿಕೆಯಾಗುತ್ತದೆ. ಇದನ್ನೇ ಅವರು ಅನುಸರಿಸುವದರಲ್ಲಿ ಸೋಜಿಗವಾದದ್ದೇನೂ ಇರುವದಿಲ್ಲ. ಹುಡುಗರಿಗೆ ಮಾತ್ರ ಭೂಗೋಲ ಜ್ಞಾನಕ್ಕೆ ನಿಜವಾದ ಸಂಬಂಧವಿಲ್ಲದ ಹೆಸರುಗಳ ಪಟ್ಟಿಗಳನ್ನು ಪಾಠ ಮಾಡುವದು ಬಲು ಬೇಸರದ ವ್ಯವಸಾಯವೆನಿಸುವದು; ಭೂಗೋಲವೆಂದ ಕೂಡಲೆ ಅವರಿಗೆ ತಲೆ ಚಿಟ್ಟೆನಿಸುವದು. ಸಾಲೆಯಲ್ಲಿಯೂ ವಿದ್ಯಾರ್ಥಿಗಳಲ್ಲಿಯೂ ಈ ವಿಷಯದ ಬಗ್ಗೆ ಇಂಥ ಅಸಹ್ಯವಾದ ಕಲ್ಪನೆಗಳು ಉಂಟಾಗಿ ಜ್ಞಾನಾರ್ಜನೆಯು ಅವರಿಗೆ ವಿರಸವೂ ವೇದನೆಯುಳ್ಳದ್ದೂ ಆಗುವದು ಸರಿಯಲ್ಲ. ಇದನ್ನು ತಪ್ಪಿಸಿ, ಭೂಗೋಲವು ತಮಗೆ ಸಂಬಂಧಿಸಿದ ವಿಷಯವು, ಅದರಲ್ಲಿ ತಿಳಿದುಕೊಳ್ಳತಕ್ಕ ಮಾತುಗಳು ಇರುವವು ಎಂದು ಅವರಿಗೆ ಅನಿಸುವಂತೆ ಮಾಡುವದೇ ಶಿಕ್ಷಕರ ಕರ್ತವ್ಯವು. ಈ ಬಗ್ಗೆ ಶಿಕ್ಷಕರ ಮುಂದೆ ಕೆಲವು ಸೂಚನೆಗಳನ್ನು ಇಡುವದು ನಮ್ಮ ಉದ್ದೇಶವು. ನಮ್ಮ ಸಾಮಾನ್ಯ ಸೂಚನೆಗಳೆಂದರೆ.—

೧. ಪ್ರತಿಯೊಬ್ಬ ಹುಡುಗನ ಬಳಿಗೆ ಈ ವಿಷಯದಲ್ಲಿ ಮೇಲಿಂದ ಮೇಲೆ ಉಪಯೋಗಿಸಲಿಕ್ಕಾಗಿ ಒಂದು ನಕಾಶ ಪುಸ್ತಕವು (Atlas) ಇರತಕ್ಕದ್ದು. ಭೂಗೋಲ ವಿಷಯುವನ್ನು ಕಲಿಸುವ ಶಿಕ್ಷಕರೆಲ್ಲರು “ ನಕಾಶವಿಲ್ಲದೆ ಭೂಗೋಲವಿಲ್ಲ ”ವೆಂಬ ನುಡಿಯನ್ನು ಯಾವಾಗಲೂ ಲಕ್ಷ್ಯದಲ್ಲಿಡತಕ್ಕದ್ದು.

೨. ಭೂಗೋಲದ ಪ್ರತಿಯೊಂದು ಬಗೆಯ ಸಂಗತಿಯನ್ನು ಉದಾಹರಿಸುವ ನಕಾಶಗಳು ಪ್ರತ್ಯೇಕವಾಗಿ ಇರಬೇಕು.

೩. ಹುಡುಗರು ತಮ್ಮ ದಿನದ ಜೀವನದಲ್ಲಿ ತಮ್ಮ ಸುತ್ತಲಿನ ಸಂಗತಿಗಳನ್ನು ಕುರಿತು ನೋಡಿ ಮಾಡಿಕೊಂಡ ಜ್ಞಾನವನ್ನು ಅವರಿಂದಲೇ ಹೊರಡಿಸಬೇಕು.

೪. ಈ ಜ್ಞಾನಕ್ಕೂ ಅವರು ಅಭ್ಯಾಸಿಸುತ್ತಿರುವ ಭೂಭಾಗಕ್ಕೆ ಸಂಬಂಧಿಸಿದ ಜ್ಞಾನಕ್ಕೂ ತಳಕು ಹಾಕಲಿಕ್ಕೆ ಪ್ರಯತ್ನಪಡಬೇಕು.

೫. ತಮ್ಮ ಸುತ್ತಲಿರುವ ಪರಿಸ್ಥಿತಿಯನ್ನು ಅಭ್ಯಾಸ ಮಾಡಿ ತಾವು ದೊರಕಿಸಿದ ಮಾಹಿತಿಯನ್ನು ಉಪಯೋಗಿಸಿ, ತಾವು ಹೊಸದಾಗಿ ಕಲಿಯುತ್ತಿರುವ ಭೂಭಾಗದ ಬಗ್ಗೆ ಅನುಮಾನಗಳನ್ನು ತೆಗೆಯಲಿಕ್ಕೆ ಅವರಿಗೆ ಹೇಳಬೇಕು. ಆ ಬಳಿಕ ಆ ಭೂಭಾಗಕ್ಕೆ ಸಂಬಂಧಿಸುವ ಚಿತ್ರಗಳು, ಭಾವಚಿತ್ರಗಳು, ಆಕೃತಿಗಳು, ನಕಾಶಗಳು ಮುಂತಾದವುಗಳ ಸಹಾಯದಿಂದ ಹುಡುಗರು ತೆಗೆದ ಅನುಮಾನಗಳು ಸರಿಯಿರುವವೋ ಹ್ಯಾಗೆ ಎಂಬದನ್ನು ಮನಗಾಣಲಿಕ್ಕೆ ಹಚ್ಚಬೇಕು.

೬. ಪ್ರತಿಯೊಂದು ಶಾಲೆಯಲ್ಲಿ ಪದಾರ್ಥಸಂಗ್ರಹಾಲಯವನ್ನು ಏರ್ಪಡಿಸಿ ಇದರಲ್ಲಿ ಭೂಗೋಲಾಭ್ಯಾಸಕ್ಕೆ ಸಹಕಾರಿಯಾಗುವಂಥ ಒಂದು ಭಾಗವನ್ನು ಸ್ಥಾಪಿಸಿರಬೇಕು.

೭. ಮೇಲಿನ ಇಯತ್ತೆಗಳಲ್ಲಿ ಪ್ರತಿಯೊಂದು ದೇಶವನ್ನು ಪ್ರತ್ಯೇಕವಾಗಿ ಅಭ್ಯಾಸ ಮಾಡುವ ಬದಲು ಖಂಡಗಳಿಂದ ಆರಂಭಿಸಿ ಇವುಗಳಲ್ಲಿ ಪ್ರದೇಶ ಪದ್ಧತಿಯನ್ನನುಸರಿಸಿ ವಿಸ್ತಾರವಾದ ಭಾಗಗಳನ್ನು ಅಭ್ಯಾಸಿಸುವದು ಮೇಲಾದದ್ದು.

ಇನ್ನು ಕೆಳಗಿನ ಇಯತ್ತೆಗಳಲ್ಲಿ ಭೂಗೋಲವನ್ನು ಅಭ್ಯಾಸಿಸುವ ಮಾರ್ಗವನ್ನು ಕುರಿತು ನಾಲ್ಕು ಮಾತುಗಳನ್ನು ಹೇಳಿ ಆ ಬಳಿಕ ಮೇಲ್ಕಾಣಿಸಿದ ಸೂಚನೆಗಳನ್ನು ಹ್ಯಾಗೆ ಅನುಸರಿಸಬಹುದೆಂಬದನ್ನು ಕುರಿತು ವಿಚಾರಿಸೋಣ.

ಭೂಗೋಲ ವಿಷಯದ ಆರಂಭದ ಅಭ್ಯಾಸವನ್ನು ಮಾಡುವ ಎಲ್ಲಕ್ಕೂ ಮೇಲಾದ ಮಾರ್ಗವೆಂದರೆ, ನಾವು ಅಭ್ಯಾಸಿಸಬೇಕಾಗಿರುವ ಪ್ರದೇಶವನ್ನು ಹುಡುಗರೊಡನೆ ಪ್ರತ್ಯಕ್ಷವಾಗಿ ನೋಡಿಕೊಂಡು ಬರುವದು. ಇದಕ್ಕೆ ಪರ್ಯಟನ (tour) ಪದ್ಧತಿಯೆಂದು ಹೆಸರಿಡಬಹುದು. ಈ ಪ್ರವಾಸಗಳಲ್ಲಿ ಹುಡುಗರ ಲಕ್ಷವನ್ನು ಮೊದಲು ಭೂಮಿಯ ಏರಿಳಿತಗಳ ಕಡೆಗೆ ಎಳೆಯತಕ್ಕದ್ದು. ಈ ಸಮಯದಲ್ಲಿ ಅವರಿಗೆ ಆಗುವ ಭೂಪೃಷ್ಠದ ತಗ್ಗುದಿನ್ನೆಗಳ ಬೈಲು ಭಾಗಗಳ ಜ್ಞಾನವು ಯಥಾರ್ಥವಾದದ್ದಾಗುವದು. ಈ ಪರ್ಯಟನವಿಲ್ಲದೆ ನಾವು ಎಷ್ಟು ವರ್ಣನೆ ಮಾಡಿದರೂ ಇದರ ನಿಜವಾದ ಕಲ್ಪನೆಯು ಅವರಿಗೆ ಸ್ವಲ್ಪವೂ ಆಗದೆಂಬದನ್ನು ಶಿಕ್ಷಕರು ಲಕ್ಷ್ಯದಲ್ಲಿಡತಕ್ಕದ್ದು. ಬೈಲು ನಾಡಿನಲ್ಲಿ ಎತ್ತರದ ಒಂದು ಮರದಿಗೆ ಒಯ್ದು ಅತಿ ದೂರದ ವರೆಗೆ ಮಾಲಾಕಾರವಾಗಿ ಹಬ್ಬಿದ ಭೂಭಾಗವನ್ನು ತೋರಿಸುವದೂ ಮಲೆನಾಡಿನಲ್ಲಿ ಒಂದು ಗುಡ್ಡದ ಮೇಲೆ ನಿಂತು ಗುಡ್ಡ, ಕೊಳ್ಳಗಳು, ಭೂಮಿಯ ಇಳುಕಲು ಮೊದಲಾದ ಬಗ್ಗೆ ತೋರಿಸುವದೂ ಒಳ್ಳೇ ಮಹತ್ವದ ಸಂಗತಿಗಳು. ಪ್ರವಾಸದಲ್ಲಿ ಬಗೆಬಗೆಯ ಭೂಮಿಗಳನ್ನೂ ಅವುಗಳ ಲಕ್ಷಣಗಳನ್ನೂ ತೋರಿಸುವದರಿಂದ ಭೂರಚನೆಯ ನಿಜವಾದ ಜ್ಞಾನವು

ಅವರಿಗಾಗುವದು. ಆಯಾ ಭೂಮಿಗಳಲ್ಲಿ ಎಂಥ ಬೆಳೆಗಳನ್ನು ಬೆಳೆಯುತ್ತಿರುವ ರೆಂಬದನ್ನು ಅವರು ಪ್ರತ್ಯಕ್ಷವಾಗಿ ನೋಡುವರು. ಅವರು ಪ್ರತ್ಯಕ್ಷವಾಗಿ ಆಯಾ ಬಗೆಯ ಭೂಮಿಗಳನ್ನು ನೋಡುತ್ತಿರುವಾಗ ಅವರೊಡನೆ ಸಂಭಾಷಣೆ ಮಾಡುವದರಿಂದ ಆಗುವ ಜ್ಞಾನವು ಯಥಾರ್ಥವಾದದ್ದಾಗುವದಲ್ಲದೆ, ಅವರಲ್ಲಿ ವಿಚಾರಗಳನ್ನು ಹುಟ್ಟಿಸಲಿಕ್ಕೆ ಒಳ್ಳೇ ಸಹಾಯಕವಾಗುವದು. ನಡುವೆ ಹತ್ತುವ ಹಳ್ಳಗಳು, ನದಿಗಳು, ಗುಡ್ಡಗಳು ಇವುಗಳನ್ನು ಅವರು ಲಕ್ಷ್ಯಪೂರ್ವಕವಾಗಿ ನೋಡಿ ಹಲವು ಪ್ರಶ್ನಗಳನ್ನು ಕೇಳುವರು. ಇವುಗಳಿಗೆ ಉತ್ತರಗಳನ್ನು ಹೇಳುವಾಗ ಆಗುವ ಜ್ಞಾನವು ಬಹಳ ಮಹತ್ವವುಳ್ಳದ್ದು. ಊರೊಳಗೆ ತಿರುಗಿ ಬರುವಾಗ ಜನರ ಉದ್ಯೋಗಗಳನ್ನು ಪ್ರತ್ಯಕ್ಷವಾಗಿ ನೋಡಿ, ಆಯಾ ಉದ್ಯೋಗಗಳಲ್ಲಿ ವಿಚಾರಿಸತಕ್ಕ ಸಂಗತಿಗಳು, ಆ ಸಂಗತಿಗಳ ಮೂಲಕ ಜನರ ಜೀವನದಲ್ಲಿ ಆಗಿರುವ ಹೆಚ್ಚುಕಡಿಮೆಗಳು ಇವುಗಳನ್ನು ಅಭ್ಯಾಸಿಸಬಹುದು. ಆಯಾ ಉದ್ಯೋಗಗಳ ಜನರ ಮನೆಗಳನ್ನು ನೋಡಿ, ಅವುಗಳಲ್ಲಿ ಅವರ ಬಾಳುವೆಗೆ ತಕ್ಕ ಅನುಕೂಲತೆಗಳು ಎಂಥವಿರುವವು, ಮೊದಲಾದವುಗಳನ್ನು ಹುಡುಗರ ಲಕ್ಷ್ಯಕ್ಕೆ ತಂದುಕೊಡಬಹುದು. ಇವುಗಳ ಮೂಲಕ ಆಯಾ ಉದ್ಯೋಗಗಳಲ್ಲಿ ತೊಡಗಿದ ಜನರ ವಿಶೇಷ ಆಚರಣೆಗಳನ್ನು ಕುರಿತು ತಿಳಿಸಿಕೊಡಲಿಕ್ಕೆ ತಕ್ಕ ಆಸ್ಪದವಾಗುವದು. ಊರೊಳಗೆ ಇಲ್ಲವೆ ಊರ ಹೊರಗೆ ಇರುವ ಹಳೆಯ ಕಟ್ಟಡಗಳಿಗೆ ಕರೆದೊಯ್ದು ಹುಡುಗರಿಗೆ ಅವುಗಳ ರಚನೆ, ಉಪಯೋಗ, ಕಾಲ, ಕಥೆ ಮೊದಲಾದವುಗಳನ್ನು ಹೇಳುವದರಿಂದ ಇತಿಹಾಸದ ಆರಂಭವನ್ನು ಚೆನ್ನಾಗಿ ಮಾಡಿದಂತಾಗುವದು. ಈ ಬಗೆಯಾಗಿ ಆಯಾ ಊರ ಜನರ ನಡೆನುಡಿ, ಉದ್ಯೋಗಗಳು, ಮನೆಗಳು, ಉಡಿಗೆತೊಡಿಗೆಗಳು, ಅವರ ಇತಿಹಾಸ ಮೊದಲಾದವುಗಳನ್ನು ಹುಡುಗರಲ್ಲಿ ನಾವು ನೆಲೆಗೊಳಿಸುವ ಆರಂಭದ ಕಲ್ಪನೆಗಳು ಅವರ ಮುಂದಿನ ಭೂಗೋಲದ ಅಭ್ಯಾಸದ ತಳಹದಿಯಂತಿರುವವು. ಇವುಗಳನ್ನು ಮನರಂಜನವಾಗುವಂತೆ ಹೇಳಲಿಕ್ಕೆ ಬೇಕಾದಷ್ಟು ಆಸ್ಪದವಿರುವದು. ತೀರ ಕೆಳಗಿನ ಇಯತ್ತೆಗಳ (೨, ೩ ಇ॥ ಗಳ) ಹುಡುಗರಿಗೆ ಇವುಗಳನ್ನು ಹೇಳಬಹುದು. ಪ್ರವಾಸಕ್ಕೆ ಕಾಲು ನಡಿಗೆಯಿಂದ ಹೋಗುವದು ಮೇಲಾದದ್ದು. ಆದರೆ ಸ್ವಲ್ಪ ದೂರ ಹೋಗುವದಿದ್ದರೆ ರೇಲ್ವೆಯ ಮೂಲಕ ಇಲ್ಲವೆ ಮೋಟಾರಗಾಡಿಯ ಮೂಲಕ ಹೋಗುವದಕ್ಕಿಂತ ಚಕ್ಕಡಿಗಳಲ್ಲಿ ಹೋಗುವದು ಮೇಲಾದದ್ದು. ಎಲ್ಲಕ್ಕೂ ಹೆಚ್ಚಿನ ಸಂಗತಿಯೆಂದರೆ, ಪ್ರವಾಸಗಳನ್ನು ಅವಸರದಿಂದ ಮಾಡಬಾರದು. ಪ್ರವಾಸದಲ್ಲಿ ಅಭ್ಯಾಸಿಸಬೇಕಾದ ಸಂಗತಿಗಳನ್ನು ಅವುಗಳಲ್ಲಿ ಮಹತ್ವವಾದವುಗಳನ್ನು ಶಿಕ್ಷಕರು ಮೊದಲಾಗಿ ಗೊತ್ತುಮಾಡಿಟ್ಟುಕೊಂಡು, ಅವುಗಳನ್ನು ನಾವ

ಕಾಶವಾಗಿಯೂ ಪೂರ್ಣವಾಗಿಯೂ ಅವಲೋಕನ ಮಾಡಲಿಕ್ಕೆ ಸಾಕಷ್ಟು ಹೊತ್ತು ಒದಗಿಸಿಕೊಡತಕ್ಕದ್ದು.

೨ನೆಯ ಹಾಗು ಮೂರನೆಯ ಇಯತ್ತೆಗಳ ಭೂಗೋಲವು ಮೇಲೆ ಹೇಳಿದ ಮಾದರಿಯಲ್ಲಿ ನಡೆಯುವದು ಮಹತ್ವವಾದದ್ದು. ಇದಕ್ಕೆ ಬಹಳ ದೂರ ಹೋಗ ಬೇಕಾಗುವದಿಲ್ಲ. ಮಾದರಿಯ ಕೆಲವು ಪ್ರದೇಶಗಳನ್ನೂ ಊರುಗಳನ್ನೂ ನೋಡಿ ಬಂದರೆ ಸಾಕಾಗುವದು. ಇದಕ್ಕಾಗಿ ಬಹಳ ವೆಚ್ಚವು ಆಗುವ ಕಾರಣವಿಲ್ಲ. ಪ್ರವಾಸವು ಮುಗಿದ ಬಳಿಕ ಸಾಲೆಯಲ್ಲಿ ಆಗಾಗ್ಗೆ ಬೇರೆ ಬೇರೆ ಸಂಗತಿಗಳನ್ನು ಹುಡುಗರ ನೆನಪಿಗೆ ತಂದುಕೊಟ್ಟು ಅವುಗಳ ಬಗ್ಗೆ ಸಂಭಾಷಣೆ ಮಾಡಿ ಮುಖ್ಯ ವಾಗಿ ಅಭ್ಯಾಸಿಸಿದ ಮಾತುಗಳನ್ನು ಅವರಿಂದ ಬರೆಯಿಸಬಹುದು. ಇದಲ್ಲದೆ, ಅವರು ನೋಡಿ ಬಂದ ಸ್ಥಳಗಳ ನಕಾಶವನ್ನು ಅವರಿಂದ ತೆಗೆಯಿಸಬಹುದು. ಈ ಕೆಲಸವು ಸುಲಭವಾಗಿ ಆಗಬೇಕಾದರೆ, ಸಾಲೆಯಲ್ಲಿ ಶಿಕ್ಷಕರು ತೆಗೆದ ಬೇರೆ ಬೇರೆ ಮಾತುಗಳಿಗೆ ಸಂಬಂಧಿಸಿದ ಸ್ಪಷ್ಟವಾದ ಹಲವು ನಕಾಶಗಳು ಇರುವದು ಮಹತ್ವವಾದದ್ದು. ನಾಲ್ಕನೆಯ ಇಯತ್ತೆಯಿಂದ ಭೂಗೋಲದ ಅಭ್ಯಾಸವನ್ನು ನಕಾಶ, ಚಿತ್ರಗಳ ಸಹಾಯದಿಂದಲೇ ವಿಶೇಷವಾಗಿ ಮಾಡಬೇಕಾಗುತ್ತದೆಂಬ ದನ್ನು ಲಕ್ಷದಲ್ಲಿಟ್ಟರೆ ಪ್ರವಾಸದಲ್ಲಿ ೨, ೩ ಇಯತ್ತೆಗಳ ಹುಡುಗರು ತಾವು ಪ್ರತ್ಯ ಕ್ಷವಾಗಿ ನೋಡಿ ಬಂದ ಸ್ಥಳಗಳ ಬಗ್ಗೆ ಸಿದ್ಧವಿರುವ ನಕಾಶಗಳಲ್ಲಿ ಮಾಹಿತಿ ಯನ್ನು ತೋರಿಸಲಿಕ್ಕೂ ತಾವು ಅಂಥ ನಕಾಶಗಳನ್ನು ತೆಗೆಯಲಿಕ್ಕೂ ರೂಢಿ ಮಾಡಿಕೊಳ್ಳುವದು ಎಷ್ಟು ಮಹತ್ವದ್ದಿರುವದೆಂಬದು ಗೊತ್ತಾಗುವದು.

ಮೇಲಿನ ಇಯತ್ತೆಗಳಿಗೆ ಹೋದಂತೆ ಪ್ರವಾಸ ಮಾಡಿ ಭೂಗೋಲದ ಸಂಗ ತಿಗಳನ್ನು ಅಭ್ಯಾಸಿಸುವದು ಅಸಾಧ್ಯವಾಗುವದು. ಆದ್ದರಿಂದ ನಕಾಶಗಳು, ಆಕೃತಿಗಳು, ಪಟಗಳು, ಚಿತ್ರಗಳು, ಪ್ರವಾಸಿಕರು ಬರೆದ ಪುಸ್ತಕಗಳು ಇವೇ ಮೊದಲಾದವುಗಳ ಸಹಾಯದಿಂದಲೇ ಈ ಅಭ್ಯಾಸವನ್ನು ಸಾಗಿಸಬೇಕಾಗುವದು.

ಯಾವದೊಂದು ಪ್ರದೇಶದ ಭೂಗೋಲದ ಅಭ್ಯಾಸದಲ್ಲಿ ಕೆಳಗೆ ಕಾಣಿಸಿದ ಸಂಗತಿಗಳು ಬರುವವು:—

(೧) ಆ ನಾಡಿನ ಪ್ರಾಕೃತಿಕಸ್ವರೂಪ—(ಮಾಡೆಲ್ ಹಾಗು ರಿಲೀಫ ನಕಾ ಶಗಳ ನೆರವಿನಿಂದ)

೨. ಆ ನಾಡಿನ ಹವೆ.
೩. ಮಳೆ
} ಮಳೆಯ ನಕಾಶ; ಬೇರೆ ಬೇರೆ ಊರುಗಳ ಬೇರೆ ಬೇರೆ ಕಾಲದ ಮಳೆಯ ಮಾನದ ಪಟಗಳು.

೪. ಹುಟ್ಟುವಳಿ, ಬೆಳೆಗಳು (ಬೆಳೆಗಳ ನಕಾಶ,), ಅಡವಿಗಳ ಹುಟ್ಟುವಳಿ.

೫. ಜನರು, ಜನಸಂಖ್ಯೆ (ಜನಸಂಖ್ಯೆಯ ನಕಾಶ)

೬. ಉದ್ಯೋಗಗಳು (ನಕಾಶ ಹಾಗು ಪಟಗಳು, ಉದ್ಯೋಗ ನಡೆಯುವ ಮುಖ್ಯ ಊರುಗಳು, ಉದ್ಯೋಗದ ಚಿತ್ರರೂಪವಾದ ನಕಾಶ)

೭. ಮಾರ್ಗಗಳು (ಮಾರ್ಗಗಳ ನಕಾಶ, ಮುಖ್ಯ ಊರುಗಳು ಸಹಿತ)

೮. ವ್ಯಾಪಾರ (ನಕಾಶ, ಮುಖ್ಯ ಊರುಗಳು ಸಹಿತ)

೯. ನಾಡಿನ ಕ್ಷೇತ್ರ, ಊರುಗಳಿರುವ ಸ್ಥಳಗಳು, ಊರುಗಳ ಬೆಳವಣಿಗೆ ಇಲ್ಲವೆ ಕುಗ್ಗುವಿಕೆ.

೧೦. ನಾಡಿನ ರಾಜ್ಯವ್ಯವಸ್ಥೆ (ಪಟಗಳು)

ಮೇಲೆ ಕಾಣಿಸಿದ ಪ್ರತಿಯೊಂದು ಸಂಗತಿಯನ್ನು ಸ್ಪಷ್ಟಗೊಳಿಸಲಿಕ್ಕೂ ಅಭ್ಯಾಸಿಸಲಿಕ್ಕೂ ಪ್ರತ್ಯೇಕವಾದ ನಕಾಶ, ಪಟ, ಚಿತ್ರ ಮೊದಲಾದವುಗಳು ಇರತಕ್ಕದ್ದು. ಸಾಲೆಯಲ್ಲಿ ಇರುವ ಅಚ್ಚು ಹಾಕಿದ ಒಂದೇ ನಕಾಶದಿಂದ ಇವೆಲ್ಲ ಸಂಗತಿಗಳನ್ನು ತಿಳಿಸಿಕೊಡುವೆವೆಂದು ಹೇಳುವದೆಂದರೆ ನಕಾಶದ ಉಪಯೋಗದ ಅವಹೇಲನ ಮಾಡಿದಂತಾಗುವದು. ಇನ್ನು ಇಂಥ ಹಲವು ಬಗೆಯ ನಕಾಶಗಳು ಕನ್ನಡದಲ್ಲಿ ಮಾರಾಟಕ್ಕೆ ಸಿದ್ಧವಾಗಿಲ್ಲವೆಂಬದು ನಿಜವು. ಅದ್ದರಿಂದಲೇ ಇವುಗಳನ್ನು ಶಿಕ್ಷಕರು ಸಿದ್ಧಮಾಡಿಟ್ಟುಕೊಳ್ಳುವದು ಅತ್ಯವಶ್ಯವು.

ಸದ್ಯಕ್ಕೆ ಪ್ರಾಥಮಿಕ ಶಾಲೆಗಳಲ್ಲಿ ಬಹುತರವಾಗಿ ಅಚ್ಚುಹಾಕಿದ ರಾಜಕೀಯ ನಕಾಶಗಳು ಮಾತ್ರ ಕಾಣುತ್ತವೆ. ಇವುಗಳಲ್ಲಿ ಸೇರಿಸಬಹುದಾದ ಮಾಹಿತಿಯನ್ನೆಲ್ಲ ತುಂಬಿರುವ ಮೂಲಕ ಇವು ಹುಡುಗರನ್ನು ಗೊಂದಲದಲ್ಲಿ ಕೆಡವುತ್ತವೆ. ಅದ್ದರಿಂದ ಭೂಗೋಲದ ಒಂದೆರಡು ಸಂಗತಿಗಳನ್ನು ಮಾತ್ರ ಸ್ಪಷ್ಟವಾಗಿ ತೋರಿಸಿ ತೆಗೆದಂಥ ನಕಾಶಗಳನ್ನು ಸಾಲೆಗಳಿಗೆ ಕೊಡುವದು ಮೇಲಾದದ್ದು. ಆದರೆ ಇಂಥ ನಕಾಶಗಳು ಪ್ರಸಿದ್ಧವಾಗಿಲ್ಲ. ಅದ್ದರಿಂದ ಇಂಥ ನಾಲ್ಕೆಂಟು ನಕಾಶಗಳನ್ನು (ಪ್ರತಿಯೊಂದು ಪ್ರದೇಶದ ಬಗ್ಗೆ) ತೆಗೆದಿಟ್ಟುಕೊಂಡು ಆದಷ್ಟು ಪರಿಣಾಮಕರವಾಗಿ ಈ ವಿಷಯುವನ್ನು ಸಾಗಿಸುವ ಭಾರವು ಪ್ರಾಥಮಿಕ ಶಿಕ್ಷಕರ ಮೇಲೆ ಇರುವದೆಂಬದು ಸ್ಪಷ್ಟವು.

ಮೇಲೆ ಕಾಣಿಸಿದ ಪ್ರತಿಯೊಂದು ಸಂಗತಿಯನ್ನು ಕಲಿಸುವಾಗ ಹ್ಯಾಗೆ ಆರಂಭಿಸಬೇಕು, ಹ್ಯಾಗೆ ಸಾಗಬೇಕು ಈ ಬಗ್ಗೆ ಸಂಕ್ಷೇಪದಲ್ಲಿ ಕೆಲವು ಸೂಚನೆಗಳನ್ನು ಕೊಡುವೆವು.

೧. ಯಾವ ವಿಷಯವನ್ನೇ ಕಲಿಸುವದಿರುವದಾಗಲಿ, ಹುಡುಗರಿಗೆ ಪರಿಚಿತವಿರುವ ಸಂಗತಿಗಳಿಂದ ಆರಂಭಿಸಿ ಹೊಸ ಸಂಗತಿಗಳ ಕಡೆಗೆ ಸಾಗತಕ್ಕದ್ದೇ

ಬದು ಶಿಕ್ಷಣ ಶಾಸ್ತ್ರದ ಅಬಾಧಿತವಾದ ನಿಯಮವು. ಆದ್ದರಿಂದ ತಾಲೂಕಿನ ಇಲ್ಲವೆ ಜಿಲ್ಹೆಯ ಪ್ರಾಕೃತಿಕ ಸ್ವರೂಪವನ್ನು ಕಲಿಸುವದಕ್ಕಿಂತ ಮೊದಲು ವಿದ್ಯಾರ್ಥಿಗಳನ್ನು ಊರ ಸುತ್ತಲಿನ ಒಂದೆರಡು ಮೈಲು ಪ್ರದೇಶಗಳನ್ನು ಅವಲೋಕಿಸಲಿಕ್ಕಾಗಿ ಪ್ರವಾಸಕ್ಕೆ ಕರೆದೊಯ್ಯಲೇಬೇಕು. ಈ ಪ್ರವಾಸದಲ್ಲಿ ಅವರು ಸುತ್ತಲಿನ ಪ್ರದೇಶದ ಮುಖ್ಯ ಪ್ರಾಕೃತಿಕ ಸಂಗತಿಗಳನ್ನು ಅವಲೋಕನ ಮಾಡಬೇಕು. ತಗ್ಗಾದ ಭೂಮಿಯು, ಬೈಲು, ಮರಡಿಗಳು, ಹೊಳೆಹಳ್ಳಗಳು, ಇವು ಹರಿಯುವ ದಿಕ್ಕುಗಳು, ಇವು ಯಾವ ಭಾಗದಲ್ಲಿ ಪೂರ ಬಂದಾಗ ಎಷ್ಟು ದೂರ ಪೊರಚಲ್ಲುವವು, ಈ ಭಾಗಗಳಲ್ಲಿರುವ ವನಸ್ಪತಿಗಳು. ಇವೇ ಮೊದಲಾದ ಸಂಗತಿಗಳನ್ನು ಹುಡುಗರಿಂದ ನೋಡಿಸಬೇಕು. ನೆರೆಯಲ್ಲಿ ಮರಡಿ ಇಲ್ಲವೆ ಗುಡ್ಡವು ಇದ್ದರೆ ಅಲ್ಲಿಗೆ ಅವರನ್ನು ಕರೆದೊಯ್ದು ಸುತ್ತಲಿನ ಪ್ರದೇಶವು ಹ್ಯಾಗೆ ಕಾಣಿಸುವದೆಂಬದನ್ನು ಅವರಿಗೆ ತೋರಿಸತಕ್ಕದ್ದು.

ಪ್ರವಾಸದಿಂದ ತಿರುಗಿ ಬಂದ ಕೂಡಲೆ ಅವರಿಗೆ ಕೆಲವು ಪ್ರಶ್ನಗಳನ್ನು ಕೊಟ್ಟು ಉತ್ತರಗಳನ್ನು ಬರೆಯಿಸಿಕೊಳ್ಳಬೇಕು. ಹಳ್ಳಗಳು ಯಾವ ದಿಕ್ಕಿಗೆ ಹರಿದಿರುವವು; ಎಲ್ಲಿ ಯಾವ ಕಡೆಗೆ ಒಲೆದಿರುವವು? ಯಾಕೆ! ಎಲ್ಲಿ ಅವು ಭೂಮಿಯನ್ನು ಕೊರೆದಿವೆ, ಎಷ್ಟು ದೂರ ಕೊರೆದಿವೆ! ಹೀಗೆಯೇ ನಾವು ದೂರ ಪ್ರವಾಸ ಮಾಡಲಿಕ್ಕೆ ಹೋದರೆ ಯಾವ ಯಾವ ಸಂಗತಿಗಳನ್ನು ನಾವು ನೋಡಬಹುದು? ಪ್ರತಿಯೊಬ್ಬ ಹುಡುಗನು ಕೆಲವು ಮಾತುಗಳನ್ನು ಹೇಳಬಹುದು. ಇವುಗಳನ್ನೆಲ್ಲ ಸಂಗ್ರಹಿಸಿ ಕೆಲವು ಮುಖ್ಯ ಮಾತುಗಳನ್ನು ಅವರ ಲಕ್ಷ್ಯಕ್ಕೆ ತಂದು ಕೊಡಬಹುದು.

ಆ ಬಳಿಕ ಒಂದು ಪ್ರಾಕೃತಿಕ ನಕಾಶವನ್ನು ಅವರ ಮುಂದಿಟ್ಟು (ಮಾಡೆಲವು ಇದ್ದರೆ ಅದನ್ನು ಉಪಯೋಗಿಸಬಹುದು) ಅದರಲ್ಲಿ ತಾವಿರುವ ಸ್ಥಳದಿಂದ ಹೊರಟು ಸುತ್ತಲಿನ ಪ್ರದೇಶದಲ್ಲಿ ಒಂದು ಕಾಲ್ಪನಿಕ ಪ್ರವಾಸವನ್ನು ಕೈಕೊಳ್ಳಬೇಕು. ಈ ಪ್ರವಾಸದಲ್ಲಿ ತಗ್ಗು ಭೂಮಿಗಳು, ಎತ್ತರವಾದ ನಾಡುಗಳು, ಇವುಗಳ ನಡುವಿನ ಕೊಳ್ಳಗಳು, ನದಿಯ ಕ್ಷೇತ್ರಗಳು, ಮರಡಿಗಳು, ಬೈಲುಗಳು, ಹೊಳೆಹಳ್ಳಗಳು ಇವೆಲ್ಲವನ್ನು ಅವಲೋಕನ ಮಾಡಿ ಅವುಗಳ ಬಗ್ಗೆ ತಮ್ಮ ನೋಟುಬುಕ್ಕುಗಳಲ್ಲಿ ಟಿಪ್ಪಣಿಮಾಡಿಕೊಳ್ಳತಕ್ಕದ್ದು. ಆ ಬಳಿಕ ಆ ಪ್ರದೇಶದ ನಕಾಶವನ್ನು ತೆಗೆದು ಅದರಲ್ಲಿ ಬೇರೆ ಬೇರೆ ಬಣ್ಣಗಳ ಸಹಾಯದಿಂದ ಬೇರೆ ಬೇರೆ ಪ್ರಾಕೃತಿಕ ಲಕ್ಷಣಗಳುಳ್ಳ ಭೂಮಿಗಳನ್ನು ತೋರಿಸಲಿಕ್ಕೆ ಹೇಳತಕ್ಕದ್ದು.

೨. ಪ್ರಾಕೃತಿಕ ಸ್ವರೂಪದಿಂದ ಆ ಪ್ರದೇಶದ ಹವೆಯನ್ನು ಸುಲಭವಾಗಿ ತಿಳಿದುಕೊಳ್ಳಬಹುದು. ಯಾಕೆಂದರೆ ಇವೆರಡರಲ್ಲಿ ನಿಕಟ ಸಂಬಂಧವು ಇರು

ವದು. ಹುಡುಗರ ಊರ ಹವೆಯ ಬಗ್ಗೆ ಅವರಿಗೆ ಜ್ಞಾನವಿರುವದು. ಇದನ್ನು ತಳಹದಿಯಾಗಿಟ್ಟುಕೊಂಡು, ಸುತ್ತಲಿನ ನಾಡಿನ ಹವೆಯ ಬಗ್ಗೆ ಅವರಿಗೆ ತಿಳಿಸುವದು ಕಠಿಣವಲ್ಲ. ತಮ್ಮ ಹಳ್ಳಿಯ ಹವೆಯಿಂದ ಭಿನ್ನವಾದ ಹವೆಯುಳ್ಳ ಹಳ್ಳಿಗಳನ್ನು ಅವರು ನೋಡಿರುವರೇನು? ಈ ಹೆಚ್ಚು ಕಡಿಮೆಗಳು ಉಂಟಾಗುವ ಕಾರಣವೇನು! ನಾವು ಬೆಂಕಿಯ ಬಳಿಗೆ ಹೋದರೆ ಸೆಕೆ ತಗಲುವದು; ಅದರಿಂದ ದೂರ ದೂರ ಹೋದಂತೆ ತಂಪೆನಿಸುವದು. ಸೂರ್ಯನು ಪ್ರಚಂಡವಾದ ಬೆಂಕಿಯ ರಾಶಿಯಂತಿರುವನು. ಬೇಸಿಗೆಯಲ್ಲಿ ನಮಗೆ ಸೆಕೆಯೆನಿಸುವದು; ಚಳಿಗಾಲದಲ್ಲಿ ಚಳಿಯೆನಿಸುವದು. ಯಾಕೆ? ಮಳೆಗಾಲದಲ್ಲಿ ಪಶ್ಚಿಮದ ನಿಟ್ಟಿನ ಗೋಡೆಗೆ ನಾವು ಏನಾದರು ಹೊಚ್ಚುವೆವು. ಯಾಕೆ? ಬೇಸಿಗೆಯು ಮುಗಿಯುತ್ತಲೆ ಮಳೆಗಾಲವು ಆರಂಭವಾಗುವದು. ಯಾಕೆ? ಮಳೆಗಾಲವಾದ ಕೂಡಲೆ ಚಳಿಗಾಲವು ಸುರುವಾಗುವದು. ಯಾಕೆ? ಹಳ್ಳಿಗೆ ಮಳೆಗಾಲದಲ್ಲಿ ಮಳೆಯು ಯಾವ ನಿಟ್ಟಿನಿಂದ ಬರುವದು! ಆಗ ಗಾಳಿಯು ಯಾವ ನಿಟ್ಟಿನಿಂದ ಬೀಸುತ್ತಿರುವದು! ಬೇಸಿಗೆಯಲ್ಲಿ ಜನರು ಎಂಥ ವಸ್ತ್ರಗಳನ್ನು ಧರಿಸುವರು? ಚಳಿಗಾಲದಲ್ಲಿ ಮಳೆಗಾಲದಲ್ಲಿ ಒಂದೇ ಜಿಲ್ಹೆಯಲ್ಲಿ ಒಂದೆಡೆಗೆ ಜನರು ಮೈಬಿಟ್ಟುಕೊಂಡು ಓಡಾಡುವದುಂಟು; ಮತ್ತೊಂದು ನಿಟ್ಟಿನಲ್ಲಿ ಒಂದೆರಡು ಕಂಬಳಿಗಳಿಲ್ಲದೆ ಇರುವದಾಗುವದಿಲ್ಲ. ಯಾಕೆ! ಬೇರೆ ಬೇರೆ ತಾಲೂಕುಗಳ ಹವೆಯ ಬಗ್ಗೆ ಈ ಸಂಗತಿಗಳ ಸಹಾಯದಿಂದ ಸಂಭಾಷಣ ಮಾಡಬಹುದು.

ಜಿಲ್ಹೆಯ ಬೇರೆ ಬೇರೆ ಭಾಗಗಳ ಹವೆಯ ಬಗ್ಗೆ ಸದ್ಯದ ಅಚ್ಚುಹಾಕಿದ ನಕಾಶಗಳಿಂದ ಏನೂ ಜ್ಞಾನವಾಗುವದಿಲ್ಲ. ಈ ಬಗ್ಗೆ ಶಿಕ್ಷಕರು ಪ್ರತ್ಯೇಕವಾದ ನಕಾಶಗಳನ್ನು ತೆಗೆದಿಡತಕ್ಕದ್ದು.

೩. ಮಳೆಯು ಪಶ್ಚಿಮದ ಕಡೆಯಿಂದಲೇ ಬಹುತರವಾಗಿ ಬರುವದೆಂಬದು ಹಳ್ಳಿಯ ಹುಡುಗರಿಗೆ ಗೊತ್ತಿರುವ ಮಾತು. ಪಶ್ಚಿಮದ ಕಡೆಗೆ ಸ್ವಲ್ಪ ದೂರದಲ್ಲಿ ಸಮುದ್ರವಿರುವದೆಂದು ನಕಾಶಗಳ ಸಹಾಯದಿಂದ ಅವರಿಗೆ ತಿಳಿಸಬೇಕು. ಹಾಗಾದರೆ, ನಮಗೆ ಮಳೆಗಳನ್ನು ಕೊಡುವ ಮೋಡಗಳು ಎಲ್ಲಿ ಉಂಟಾಗುತ್ತಿರಬಹುದು? ಇವು ಪಶ್ಚಿಮದ ಸಮುದ್ರದಲ್ಲಿ ಹುಟ್ಟುವವು. ಗಾಳಿಯಿಂದ ನಮ್ಮ ಕಡೆಗೆ ಉಗಿ ತುಂಬಿ ಬರುವವು. ನಮ್ಮಲ್ಲಿ ಗುಡ್ಡ ಮರಡಿಗಳಿದ್ದರೆ ಇಲ್ಲವೆ ಗಿಡಗಳ ಗುಂಪುಗಳು ಬಹಳವಾಗಿದ್ದರೆ ಅಲ್ಲಿ ಅವುಗಳಿಗೆ ತಂಪು ತಗಲುವದು. ಆಗ ಅವುಗಳೊಳಗಿನ ಉಗಿಯು ನೀರಾಗಿ ಬೀಳಹತ್ತುವದು. ನಾವು ಪಾಟಿಯ ಮೇಲೆ ಉಸಿರು ಬಿಟ್ಟರೆ ಏನಾಗುವದು? ಇದರಂತೆಯೇ ಮೋಡಗಳಲ್ಲಿರುವ ಉಗಿಗೆ

ತಂಪು ತಗಲಿದರೆ ಮಳೆ ಬೀಳುವದು. ನಮ್ಮ ಜಿಲ್ಹೆಯಲ್ಲಿ ಯಾವ ಭಾಗದಲ್ಲಿ ಮಳೆ ಹೆಚ್ಚು? ಇಲ್ಲಿ ಪ್ರಾಕೃತಿಕ ನಕಾಶ ಹಾಗು ಮೊಡೆಲುಗಳಿಂದ ಒಳ್ಳೇ ಸಹಾಯವಾಗುವದು.

ಗುಡ್ಡಗಳ ಬದಿಯ ಮೇಲೆ ಮಳೆ ಬೀಳಲು ಏನಾಗುತ್ತದೆ? ಅಲ್ಲಿರುವ ಮಣ್ಣು ಎತ್ತ ಹೋಗುವದು? ಎಲ್ಲಿ ತಡೆದು ನಿಲ್ಲುವದು?

ಈ ಪದ್ಧತಿಯಿಂದಲೇ ಇತರ ಸಂಗತಿಗಳನ್ನೂ ಕಲಿಸತಕ್ಕದ್ದು; ಅಂದರೆ ಹುಡುಗರು ಪ್ರತ್ಯಕ್ಷವಾಗಿ ತಮ್ಮ ಹಳ್ಳಿಯಲ್ಲಿ ನೋಡಬಹುದಾದ ಸಂಗತಿಗಳನ್ನು ಅವರ ನೆನಪಿಗೆ ತಂದುಕೊಟ್ಟು ಜಿಲ್ಹೆಯಲ್ಲಿ ಆ ಸಂಗತಿಗಳು ಹ್ಯಾಗೆ ಇರುವವು; ಹೆಚ್ಚು ಕಡಿಮೆಗಳು ಉಂಟಾಗಿದ್ದರೆ ಯಾಕೆ ಆಗಿರುವವು ಎಂಬದನ್ನು ಅಭ್ಯಾಸಿಸ ತಕ್ಕದ್ದು. ಮಿಕ್ಕ ಸಂಗತಿಗಳ ಬಗ್ಗೆಯೂ ಇದೇ ಪ್ರಕಾರ ಕಲಿಸತಕ್ಕದ್ದು. ಅವು ಗಳನ್ನು ಕುರಿತು ಕೆಲವು ಸೂಚನೆಗಳನ್ನು ಸಂಕ್ಷೇಪದಲ್ಲಿ ಕೊಡುವೆವು.

೪. ಕೆಳಗೆ ಕಾಣಿಸಿದ ಸಂಗತಿಗಳ ಬಗ್ಗೆ ಹುಡುಗರಿಗಿರುವ ಜ್ಞಾನವನ್ನು ಪ್ರಶ್ನಗಳ ಮುಖಾಂತರ ಕೇಳಿಕೊಳ್ಳಿರಿ. ೧. ಹಳ್ಳಿಯ ಸುತ್ತಲು ಇರುವ ಬೇರೆ ಬೇರೆ ಪ್ರಕಾರದ ಭೂಮಿಗಳು. ೨. ಆಯಾ ಭೂಮಿಗಳಲ್ಲಿ ಬೆಳೆಯುವ ಬೆಳೆಗಳು, ೩. ತೋಟಗಳಲ್ಲಿ ಬರುವ ಬೆಳೆಗಳು. ೪. ಸುಗ್ಗಿಯ ಕಾಲಗಳು. ೫. ಮೊದಲು ಯಾತರ ಸುಗ್ಗಿಯಾಗುವದು. ಬಳಿಕ? ೬. ಇದೇ ಬಗೆಯ ಹವೆ, ಮಳೆ, ಭೂಮಿಗಳು ಇರುವಲ್ಲಿ ಯಾವ ಬೆಳೆಗಳನ್ನು ತೆಗೆದುಕೊಳ್ಳುವರು? ಜಿಲ್ಹೆಯ ಯಾವ ಭಾಗಗಳಲ್ಲಿ ಈ ಸಂಗತಿಗಳು ನಿಮ್ಮ ಹಳ್ಳಿಯಲ್ಲಿರುವಂತೆಯೇ ಇರುವವು? ಯಾವ ಭಾಗಗಳಲ್ಲಿ ಬೇರೆಯಾಗಿರುವವು? ಅಲ್ಲಿ ಯಾವ ಬೆಳೆಗಳು ಬರಬಹುದು? ೮. ಹಳ್ಳಿಯ ನೆರೆಯಲ್ಲಿದ್ದ ಹೊಲಗಳನ್ನೂ, ತೋಟಗಳನ್ನೂ (ಅಡವಿಯಿದ್ದರೆ,) ಅಡವಿ ತೊಲೆಗಳ ಡಿಪೋ ಮೊದಲಾದವುಗಳನ್ನೂ, ಸಂತೆಯಾಗುವ ನೆರೆಯ ಹಳ್ಳಿ ಗಳನ್ನೂ ಹುಡುಗರಿಗೆ ತೋರಿಸಬೇಕು.

೫. ವಿದ್ಯಾರ್ಥಿಯ ಮನೆಯಲ್ಲಿ ಎಷ್ಟು ಜನರಿರುವರು? ನೆರೆಹೊರೆಯವರ ಮನೆಗಳಲ್ಲಿ ಎಷ್ಟು ಜನರಿರುವರು? ಸಾಮಾನ್ಯವಾಗಿ ಒಂದು ಮನೆಯಲ್ಲಿ ಎಷ್ಟು ಜನರಿರುವರು? ಊರಲ್ಲಿ ಮನೆಗಳೆಷ್ಟು? ಜನರು ಎಷ್ಟು? ನೆರೆಹೊರೆಯ ಹಳ್ಳಿ ಗಳ ಜನಸಂಖ್ಯೆಯೆಷ್ಟು? ಹಳ್ಳಿಯ ಸರಾಸರಿ ಜನಸಂಖ್ಯೆಯು ಎಷ್ಟಾಗುವದು? ಒಂದು ಜಿಲ್ಹೆಯಲ್ಲಿ ಎಷ್ಟು ಹಳ್ಳಿಗಳಿರುವವು? ಜಿಲ್ಹೆಯ ಜನಸಂಖ್ಯೆಯು ಸುಮಾರು ಎಷ್ಟಾಗಬಹುದು? ದೊಡ್ಡ ಊರುಗಳು ಎಷ್ಟು ಇವೆ? ಎಲ್ಲಿ ಇವೆ? ಅವುಗಳ ಜನಸಂಖ್ಯೆಯು ಎಷ್ಟಿರುವದು? ಅಲ್ಲಿ ಜನರು ಹೆಚ್ಚಾಗಿ ಯಾಕೆ ಇರು

ವರು? ನಿಮ್ಮ ಹಳ್ಳಿಯಲ್ಲಿರುವ ಜನರ ಮತಗಳೂ ಧರ್ಮಗಳೂ ಯಾವವು? ಇವುಗಳನ್ನು ಹ್ಯಾಗೆ ತಿಳಿದುಕೊಳ್ಳುವಿರಿ? ನಿಮ್ಮ ಹಳ್ಳಿಯಲ್ಲಿ ಯಾವ ಭಾಷೆಯನ್ನಾಡುವರು? ಮುಂತಾದವು.

೬. ವಿದ್ಯಾರ್ಥಿಗಳ ತಾಯ್ತಂದೆಗಳು ಯಾವ ಉದ್ಯೋಗಗಳನ್ನು ಮಾಡುವರು?

೭. ಹಳ್ಳಿಗೆ ನೆರೆಯಲ್ಲಿರುವ ಒಂದು ದಾರಿಗೆ ಹುಡುಗರನ್ನು ಒಯ್ದು ಇದು ಎಲ್ಲಿಂದ ಬಂದಿದೆ? ಎಲ್ಲಿಗೆ ಹೋಗುವದು? ಊರು ದೊಡ್ಡದಿದ್ದರೆ ಮೋಟಾರ ಸ್ಟಾಂಡಿಗೆ ಹುಡುಗರನ್ನು ಒಯ್ದು ಅವು ಎಲ್ಲೆಲ್ಲಿಗೆ ಹೋಗುವವು? ಎಲ್ಲೆಲ್ಲಿಂದ ಬರುವವು? ದಿನಾಲು ಎಷ್ಟು ಸಾರೆ ಬರುವವು? ಸರಕುಗಳನ್ನು ಒಯ್ಯುವ ಮೋಟಾರ ಗಾಡಿಗಳು ಬರಹೋಗುವವೇನು? ಊರ ನೆರೆಯಲ್ಲಿ ಸ್ಟೇಶನು ಇರುವ ಊರು ಇದ್ದರೆ, ಅಲ್ಲಿಗೆ ಹುಡುಗರನ್ನು ಒಯ್ದು ಇವೇ ಬಗೆಯ ಪ್ರಶ್ನಗಳಿಂದ ಭೂಗೋಲಕ್ಕೆ ಸಂಬಂಧಿಸುವ ಹಲವು ಬಗೆಯ ಜ್ಞಾನವನ್ನು ಮಾಡಿಕೊಡತಕ್ಕದ್ದು.

೮. ಆಹಾರದ ಸಾಮಾನು, ಅರಿವೆಅಂಚಡಿಗಳು, ಒಕ್ಕಲತನದಲ್ಲಿ ಉಪಯೋಗವಾಗುವ ಸಾಮಾನು, ಐಷಆರಾಮುಕ್ಕೆ ಅವಶ್ಯವಾದ ಸರಕುಗಳು. ಇವೆಲ್ಲ ನಮಗೆ ಯಾವ ಊರಿಂದ ಅಥವಾ ದೇಶಗಳಿಂದ ಬರುವವು? ನಮ್ಮಲ್ಲಿ ಹೆಚ್ಚಾಗಿ ಬೆಳೆದ ಇಲ್ಲವೆ ತಯಾರಾದ ಪದಾರ್ಥಗಳನ್ನು ನಾವು ಎಲ್ಲಿಗೆ ಕಳಿಸುವೆವು? ವ್ಯಾಪಾರಕ್ಕಾಗಿ ನಮ್ಮೂರಿಂದ ಇಲ್ಲವೆ ಪಟ್ಟಣಗಳಿಂದ ಜನರು ಯಾವ ಯಾವ ಊರುಗಳಿಗೆ ಹೋಗಿ ಬರುವರು?

೯. ಈ ಊರಿಂದ ಯಾವ ಊರಿಗೆ ದೊಡ್ಡ ಮಾರ್ಗಗಳು ಹೋಗಿವೆ? ಅಲ್ಲಿಂದ ತೀರ ಸಮೀಪದಲ್ಲಿ ಇಲ್ಲವೆ ಬಹಳ ದೂರದಲ್ಲಿ ಇರುವ ದೊಡ್ಡ ಊರುಗಳು ಯಾವವು? ಬೇರೆ ಬೇರೆ ದಿಕ್ಕುಗಳಲ್ಲಿ ಯಾವ ಯಾವ ಇಂಥ ಊರುಗಳಿವೆ? ನಮ್ಮ ಜಿಲ್ಹೆಯ ಕ್ಷೇತ್ರವೆಷ್ಟು? ಈ ಊರುಗಳು ಹ್ಯಾಗೆ ಮಹತ್ವವುಳ್ಳವಾಗ ಹತ್ತಿವೆ?

೧೦. ಹಳ್ಳಿಯ ವ್ಯವಸ್ಥೆ; ಹಳ್ಳಿಯ ನವಕರರು ಅಧಿಕಾರಸ್ಥರು, ಅವರ ಕೆಲಸಗಳು, ತಾಲೂಕ ಅಧಿಕಾರಸ್ಥರಿಗೂ ಇವರಿಗೂ ಇರುವ ಸಂಬಂಧ, ಜಿಲ್ಹೆಯ ಅಧಿಕಾರಿಗಳೊಡನೆ ಸಂಬಂಧ. ಇವರಿಂದ ಹಳ್ಳಿಯ ಹಿತವು ಯಾವ ಪ್ರಕಾರ ಆಗುವದು. ಪೋಲೀಸರು; ಮುಲ್ಕೀ ಹಾಗು ನ್ಯಾಯಖಾತೆಗಳು; ಜನರಿಗೆ ಇವುಗಳ ಸಂಬಂಧ, ಕರಗಳು, ಅವುಗಳನ್ನು ಎತ್ತುವವರು, ಅವುಗಳ ವಿನಿಯೋಗ.

ಸೂಚನೆ:—ನಾವು ಮೇಲೆ ೩ನೆಯ ಇ॥ ಯ ಬಗ್ಗೆ ಸೂಚನೆಗಳನ್ನು ಕೊಟ್ಟಿರುವೆವು, ಮೇಲಿನ ಇಯತ್ತೆಗಳ ಬಗ್ಗೆ ಇದೇ ಪ್ರಕಾರದ ಸೂಚನೆಗಳನ್ನು ಶಿಕ್ಷಕರು ತಯಾರಿಸಿಕೊಳ್ಳಬಹುದು.

---

*ಬುದ್ಧನ ಸಮಯದಲ್ಲಿಯ ಭರತಖಂಡದ ಸ್ಥಿತಿಯು

ಲೇಖಕ:—ಕಾಳೇಸಾ ಹು. ಇಲಕಲ್ಲ ಟ್ರೇನಿಂಗ ಸ್ಕೂಲ ವಿದ್ಯಾರ್ಥಿ, ಧಾರವಾಡ

ಭಾರತ ವರ್ಷದ ಇತಿಹಾಸದಲ್ಲಿ ಏಸುವಿನ ಪೂರ್ವದ ಆರನೆಯ ಶತಮಾನವು ಚಿರಸ್ಮರಣೀಯವಾಗಿರುವದು. ಇದೇ ಶತಮಾನದೊಳಗೆ ಶಾಕ್ಯವಂಶದಲ್ಲಿ ಭಗವಾನ್ ಬುದ್ಧನು ಅವತಾರ ಮಾಡಿದನು. ಈ ಸಮಯದಲ್ಲಿ ಎಲ್ಲ ಜನರ ಮನದಲ್ಲಿ ಹೊಸ ಹೊಸ ಸಂಶಯಗಳೂ, ಹೊಸ ಹೊಸ ವಿಚಾರಗಳೂ, ಉತ್ಪನ್ನವಾಗಿದ್ದವು. ಆ ಕಾಲದ ಪ್ರಚಲಿತ ಧರ್ಮದಲ್ಲಿ ಅಸಂತೋಷವೂ, ಅವಿಶ್ವಾಸವೂ ಹಬ್ಬಿಗೊಂಡಿತ್ತು. ಜನರು ಹೊಸ ಹೊಸ ಭಾವಗಳಿಂದಲೂ ವಿಚಾರಗಳಿಂದಲೂ ಪ್ರೇರಿತರಾಗಿ ಪರಿವರ್ತನೆಗೋಸುಗ ಇಚ್ಛೆಯುಳ್ಳವರಾಗಿದ್ದರು. ಯಾವನು ತನ್ನ ಗಂಭೀರ ವಿಚಾರಗಳಿಂದ ಅವರ ಶಂಕೆಗಳನ್ನು ಸಮಾಧಾನ ಮಾಡುವನೋ ಯಾವನು ತನ್ನ ಸದುಪದೇಶದಿಂದ ಅವರ ಆತ್ಮಿಕ ಪಿಪಾಸೆಗೆ ಶಾಂತಿಯನ್ನುಂಟು ಮಾಡುವನೋ, ಯಾವನು ಅವರೆದುರಿಗೆ ಒಂದು ಶ್ರೇಷ್ಠವಾದ ಆದರ್ಶವನ್ನಿಟ್ಟು ಅವರ ಜೀವನವನ್ನು ಉನ್ನತವಾಗಿ ಮಾಡುವನೋ ಅಂತಹ ಒಬ್ಬ ಪುರುಷನನ್ನು ಜನರು ಪ್ರತೀಕ್ಷೆ ಮಾಡುತ್ತಿದ್ದರು. ಸಮಾಜದ ಇಂತಹ ಸ್ಥಿತಿಯು ಉಂಟಾದಾಗ, ಯಾವನೊಬ್ಬ ಮಹಾಪುರುಷನ ಜನ್ಮ ಅಥವಾ ಅವತಾರವು ಅವಶ್ಯವಾಗಿ ಆಗುತ್ತದೆ. ಅವರು ಸಮಾಜದ ಎದುರಿಗೆ ತಮ್ಮ ಜೀವನದ ಆದರ್ಶವನ್ನಿಡುತ್ತಾರೆ. ಆ ಸಮಯದ ಜನರ ಆಶೆಗಳೂ ಅಭಿಲಾಷೆಗಳೂ ಅದರಲ್ಲಿ ಪ್ರತಿಬಿಂಬಿತವಾಗಿರುತ್ತವೆ. ಅವರು ತಮ್ಮ ಸಮಯದಲ್ಲಿಯ ಜನರ ಮೂರ್ತಿಮಾನ್ ಆದರ್ಶರಾಗುತ್ತಾರೆ. ಆದ್ದರಿಂದ ಯಾವನೊಬ್ಬ ಮಹಾಪುರುಷನ ಜೀವನವನ್ನೂ ಆತನ ಮಹತ್ವವನ್ನೂ ಚನ್ನಾಗಿ ತಿಳಿಯುವದಕ್ಕೋಸುಗ ಇದರ ಆವಶ್ಯಕತೆ ಇರುತ್ತದೆ. ಮೊದಲು ನಾವು ಆ ಕಾಲದ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಸ್ಥಿತಿಗಳ ಪರಿಚಯವನ್ನು

---

* ವೈಶಾಖ ಮಾಸದ ಮಾಧುರಿ (ತಾ. ೨೩—೪—೧೯೨೩) ಯಲ್ಲಿ (ಪಂಡಿತ ಜನಾರ್ದನ ಭಟ್ಟ ಎಮ್, ಏ. ಎಂಬವರ ಲೇಖವು ಭಾಷಾಂತರಿಸಲ್ಪಟ್ಟಿದೆ.)

ಮಾಡಿಕೊಳ್ಳಬೇಕಾಗುವದು. ಇದಕ್ಕೋಸುಗ ಒಂದು ವೇಳೆ ನಾವು ಭಗವಾನ್ ಬುದ್ಧನ ಜೀವನವನ್ನು ಚನ್ನಾಗಿ ತಿಳಿಯಬೇಕೆಂದು ಇಚ್ಛಿಸುತ್ತಿದ್ದರೆ, ಮೊದಲು ನಾವು ಅವನ ಕಾಲದ ಭಾರತದ ಸ್ಥಿತಿಯು ಯಾವರೀತಿಯಲ್ಲಿತ್ತೆಂಬದು ಚನ್ನಾಗಿ ತಿಳಿಯುವದು ಆವಶ್ಯಕವದೆ, ಈ ಉದ್ದೇಶದಿಂದಲೇ ಬುದ್ಧಕಾಲೀನ ಭಾರತದ ರಾಜಕೀಯ, ಸಾಮಾಜಿಕ, ಧಾರ್ಮಿಕ ಸ್ಥಿತಿಯ ದಿಗ್ದರ್ಶನವು ಕೆಲಮಟ್ಟಿಗೆ ಮಾಡಲ್ಪಡುವದು.

ರಾಜಕೀಯ ಸ್ಥಿತಿ

ಆ ಸಮಯದಲ್ಲಿ ಭಾರತ ವರ್ಷವು ಮೂರು ದೊಡ್ಡ ದೊಡ್ಡ ಭಾಗಗಳಲ್ಲಿ ಹಂಚಲ್ಪಟ್ಟಿತ್ತು. ಅವುಗಳಲ್ಲಿ ನಡುವಿನ ಭಾಗವು "ಮಜ್ಝಿಮ-ಮ ದೇಶ" (ಮಧ್ಯಮದೇಶ)ವೆಂದು ಹೇಳಲ್ಪಡುತ್ತಿತ್ತು. ಮನುಸ್ಮೃತಿ (ಅಧ್ಯಾಯ ೨ ಶ್ಲೋ. ೨೧)ಯ ಅನುಸಾರವಾಗಿ " ಹಿಮಾಲಯ ಮತ್ತು ವಿಂಧ್ಯಾಚಲದ ನಡುವೆ ಹಾಗೂ ಸರಸ್ವತಿ ನದಿಯು ಪೂರ್ವಕ್ಕೆ ಮತ್ತು ಪ್ರಯಾಗದ ಪಶ್ಚಿಮಕ್ಕೆ ಇರುವ ದೇಶವು ಮಧ್ಯದೇಶವೆಂದು ಹೇಳಲ್ಪಡುತ್ತಿತ್ತು. ಈ ಮಧ್ಯದೇಶದ ಉತ್ತರದಲ್ಲಿರುವ ಭಾಗವು ಉತ್ತರಾಪಥ, ದಕ್ಷಿಣದ ಭಾಗವು ದಕ್ಷಿಣಾಪಥವೆಂದು ಹೇಳಲ್ಪಡುತ್ತಿತ್ತು. ಈ ರೀತಿಯಾಗಿ ಇಡಿಯ ದೇಶವು ಮೂರು ದೊಡ್ಡ ದೊಡ್ಡ ಪ್ರದೇಶಗಳಲ್ಲಿ ಹಂಚಲ್ಪಟ್ಟಿತ್ತು. ಆಗ ರಾಜಕೀಯ ಸ್ಥಿತಿಯು ಹ್ಯಾಗೆ ಇತ್ತು ಎಂಬದನ್ನು ನೋಡೋಣ.

ಆ ಕಾಲದಲ್ಲಿ ದೇಶದಲ್ಲಿ ೧೬ ರಾಜ್ಯ (ಷೋಡಶ ಮಹಾಜನ ಪದ)ಗಳಿದ್ದವು. ಅವುಗಳ ಹೆಸರುಗಳು ಕೆಳಗೆ ಬರೆಯಲ್ಪಟ್ಟಿರುತ್ತವೆ.

೧ ಅಂಗ	೬ ಮಲ್ಲ	೧೨ ಶೂರಸೇನ
೨ ಮಗಧ	೭ ಚೇದಿ	೧೩ ಅಶ್ಮಕ
೩ ಕಾಶಿ	೮ ವತ್ಸ	೧೪ ಅವಂತಿ
೪ ಕೋಶಲ	೯ ಕುರು	೧೫ ಗಾಂಧಾರ
೫ ವಜ್ಜಿಯ	೧೦ ಪಾಂಚಾಲ	೧೬ ಕಾಂಬೋಜ
	೧೧ ಮತ್ಸ್ಯ	

ಮೇಲೆ ಬರೆದ ೧೬ ರಾಜ್ಯಗಳ ವಿಷಯವಾಗಿ ಲಕ್ಷ್ಯದಲ್ಲಿಡತಕ್ಕ ಮೊದಲನೇ ಮಾತು ಯಾವದೆಂಬರೆ—ಅವು ದೇಶಗಳ ನಾಮಗಳಲ್ಲ. ಆದರೆ ಜನಾಂಗಗಳ ನಾಮಗಳಿದ್ದವು. ಈ ಜನಾಂಗಗಳ ಹೆಸರಿನ ಮೇಲಿಂದಲೇ ದೇಶಗಳ ಹೆಸರುಗಳು ಬಿದ್ದಿದ್ದವು. ಲಕ್ಷ್ಯದಲ್ಲಿಡಲಿಕ್ಕೆ ಯೋಗ್ಯವಾದ ಮತ್ತೊಂದು ಮಾತು ಆವುದೆಂದರೆ ಇವುಗಳಲ್ಲಿ "ವಜ್ಜಿ" ಮತ್ತು "ಮಲ್ಲ" ಇವೆರಡು ಯಾವದೊಂದು ಜನಾಂಗದ ಹೆಸರುಗಳಲ್ಲ, ಕುಲ (ಮನೆತನ)ದ

ಹೆಸರುಗಳಿದ್ದವು. ಲಕ್ಷದಲ್ಲಿಡತಕ್ಕ ಮೂರನೆಯ ಮಾತು ಏನಂದರೆ ಇವುಗಳಲ್ಲಿ ಯಾವದೊಂದು ರಾಜ್ಯವು ಬಲಾಢ್ಯವಾಗಿ, ಉಳಿದವುಗಳನ್ನು ಅಂಕೆಯಲ್ಲಿಟ್ಟುಕೊಂಡು ಒಂದು ಸಾಮ್ರಾಜ್ಯವನ್ನು ಸ್ಥಾಪಿಸುವಷ್ಟು ಶಕ್ತಿಯುಳ್ಳದ್ದಾಗಿದ್ದಿಲ್ಲ.

ಇವುಗಳಲ್ಲಿ ಅಂಗರಾಜ್ಯದ ರಾಜಧಾನಿಯು ಈಗಿನ ಭಾಗಲಪುರದ ಸಮೀಪದ ಪ್ರಾಚೀನ ಚಂಪಾನಗರವು. ಮಗಧ ರಾಜ್ಯದ ರಾಜಧಾನಿಯು ರಾಜಗೃಹವು. (ಈಗ ರಾಜಗಿರ) ಕಾಶೀ ರಾಜ್ಯದ ರಾಜಧಾನಿಯು ವಾರಾಣಸಿ (ಬನಾರಸ) ಮತ್ತು ಕೋಶಲ ರಾಜ್ಯದ ರಾಜಧಾನಿಯು ಈಗಿನ ಗೊಂಡಾ. ಬಹರಾಇಚ ಜಿಲ್ಹೆಗಳ ಸೀಮೆಗಳ ಮೇಲೆ ಸಾಹೇಥ ಮಾಹೇಥವೆಂಬ ಗ್ರಾಮದ ಹತ್ತರ ಶ್ರಾವಸ್ತಿನಗರವಿತ್ತು. ವಜ್ಜೀ ರಾಜ್ಯದ ರಾಜಧಾನಿಯಾದ ವೈಶಾಲೀ ನಗರವು ಈಗಿನ ಮುಜಪ್ಫರಪುರ ಜಿಲ್ಹೆಯ ಬಸಾಡವೆಂಬ ಗ್ರಾಮದ ಹತ್ತರ ಇತ್ತು. ಚೇದಿ ರಾಜ್ಯವು ಸಾಧಾರಣವಾಗಿ ಈಗಿನ ಬುಂದೇಲಖಂಡದ ಮೇಲ್ಗಡೆ ಇತ್ತು. ವತ್ಸರಾಜ್ಯದ ರಾಜಧಾನಿಯಾದ ಕೌಶಾಂಬೀ ನಗರವು ಸದ್ಯದ ಪ್ರಯಾಗ (ಇಲಾಹಾಬಾದ) ದ ಸಮೀಪದಲ್ಲಿತ್ತು. ಕುರು ರಾಜ್ಯದ ರಾಜಧಾನಿಯು ದಿಲ್ಲಿಯ ಹತ್ತರ ಇಂದ್ರಪ್ರಸ್ಥನಗರವಾಗಿತ್ತು. ಪಾಂಚಾಲ ರಾಜ್ಯವು ಎರಡು ಭಾಗಗಳಲ್ಲಿ ವಿಭಕ್ತವಾಗಿತ್ತು. ಉತ್ತರ ಪಾಂಚಾಲದ ರಾಜಧಾನಿಯಾದ ಕಾಂಪಿಲ್ಯನಗರವು ಸದ್ಯದ ಬದಾಯು ಮತ್ತು ಫರ್ರುಖಾಬಾದದ ನಡುವೆ ಇತ್ತು. ಮತ್ತು ದಕ್ಷಿಣ ಪಾಂಚಾಲದ ರಾಜಧಾನಿಯಾದ "ಕನೌಜವು" ಮತ್ಸ್ಯ ರಾಜ್ಯದಲ್ಲಿತ್ತು. ಈಗಿನ ಅಲವರ, ಜಯಪುರ, ಮತ್ತು ಭರತಪುರದ ಕೆಲವು ಭಾಗವು ಇದಕ್ಕೆ ಕೂಡಿಕೊಂಡಿತ್ತು. ಶೂರಸೇನ ರಾಜ್ಯದ ರಾಜಧಾನಿಯು ಪ್ರಾಚೀನ ಮಥುರಾನಗರವಾಗಿತ್ತು. ಅಶ್ಮಕ ರಾಜ್ಯದ ರಾಜಧಾನಿಯು ಗೋದಾವರಿ ನದಿಯ ದಂಡೆಯಲ್ಲಿ ಪೋತನ ಅಥವಾ ಪೋತಲೀಯಾಗಿತ್ತು. ಅವಂತೀರಾಜ್ಯವು ಎರಡು ಭಾಗವಾಗಿತ್ತು. ಒಂದು ಉತ್ತರದ ಭಾಗ, ಮತ್ತೊಂದು ದಕ್ಷಿಣದ ಭಾಗ. ಉತ್ತರ ಭಾಗದ ರಾಜಧಾನಿಯು ಉಜ್ಜಯಿನಿ. ಮತ್ತು ದಕ್ಷಿಣ ಭಾಗದ ರಾಜಧಾನಿಯು ಮಾಹಿಷ್ಮತಿಯು. ಗಾಂಧಾರ ರಾಜಧಾನಿಯು ಸದ್ಯದ ರಾವಲಪಿಂಡಿ ಜಿಲ್ಹೆಯಲ್ಲಿ ಪ್ರಾಚೀನ ತಕ್ಷಶಿಲಾ ನಗರವಾಗಿತ್ತು. ಪ್ರಾಚೀನ ಕಾಂಬೋಜ ರಾಜ್ಯವು ಎಲ್ಲಿ ಇತ್ತೆಂಬ ಬಗ್ಗೆ ನಿಶ್ಚಯವು ಇನ್ನೂ ಆಗಿಲ್ಲ.

ಯಾವ ಸಮಯದ ಸಂಗತಿಯನ್ನು ನಾವು ಬರೆಯುತ್ತಿರುವೆವೋ ಆ ಸಮಯದಲ್ಲಿ ಎಂದರೆ ಏಸುವಿನ ಪೂರ್ವದ ಆರನೆಯ ಶತಮಾನದಲ್ಲಿ ಉತ್ತರ ಭಾರತವು ಈ ಚಿಕ್ಕ ಚಿಕ್ಕ ಸ್ವತಂತ್ರ ರಾಜ್ಯಗಳಲ್ಲಿ ಹಂಚಲ್ಪಟ್ಟಿತ್ತು. ಇವು ಪರಸ್ಪರ ತಮ್ಮಲ್ಲಿ ಯುದ್ಧ ಮಾಡುತ್ತಿದ್ದವು. ಆ ಸಮಯದಲ್ಲಿ ಈ ಎಲ್ಲವುಗಳನ್ನು ತನ್ನ ಆಧೀನದಲ್ಲಿ ಇಟ್ಟುಕೊಳ್ಳುವ ಒಂದಾದರೂ ಸಾಮ್ರಾಜ್ಯವಿದ್ದಿಲ್ಲ. ರಾಜಕೀಯ ಸ್ವತಂತ್ರತೆಯ ಭಾವವು ಜನ

ರಲ್ಲಿ ಪ್ರಬಲವಾಗಿ ಹಬ್ಬಿಗೊಂಡಿತ್ತು. ಯಾರೂ ಇವರ ಸ್ವತಂತ್ರತೆಗೆ ಬಾಧೆ ತರುವವರು ಇದ್ದಿಲ್ಲ. ಪ್ರತಿಯೊಂದು ಊರು ಮತ್ತು ಪ್ರತಿಯೊಂದು ನಗರವು ತನ್ನ ತನ್ನ ವ್ಯವಸ್ಥೆಯನ್ನು ತಾನೇ ಮಾಡುತ್ತಿತ್ತು. ಸಾರಾಂಶ: ಈ ಸಮಯದಲ್ಲಿ ಪ್ರತಿಯೊಂದು ನಗರವೂ ಗ್ರಾಮವೂ ಒಂದು ತರದ ಚಿಕ್ಕ ದೊಡ್ಡ ಪ್ರಜಾತಂತ್ರ ರಾಜ್ಯವಾಗಿತ್ತು.

ಆ ಸಮಯದಲ್ಲಿ ಉತ್ತರ ಭಾರತದಲ್ಲಿ ಕೆಲವು ಪ್ರಜಾತಂತ್ರ ರಾಜ್ಯಗಳಿದ್ದವು. ಅವುಗಳಲ್ಲಿ ಮುಖ್ಯವಾದವು ಯಾವವೆಂದರೆ—

೧ ಶಾಕ್ಯ	೪ ಕಾಲಾಮ	೭ ಮೌರ್ಯ
೨ ಭಗ್ಗ	೫ ಕೋಲಿಯ	೮ ವಿದೇಹ
೩ ಬುಲಿಯ	೬ ಮಲ್ಲ	೯ ಲಿಚ್ಛವಿ

ಈ ಪ್ರಜಾತಂತ್ರ ರಾಜ್ಯಗಳು ಬಹುಶಃ ಈಗಿನ ಗೋರಖಪುರ, ಬಸ್ತಿ ಮತ್ತು ಮುಝುಪ್ಫರಪುರ ಜಿಲ್ಲೆಗಳ ಉತ್ತರದಲ್ಲಿ ಸಾಧಾರಣತಃ ಬಿಹಾರ ಪ್ರಾಂತದಲ್ಲಿ ಹಬ್ಬಿಗೊಂಡಿದ್ದವು. ಇವುಗಳಲ್ಲಿ ಶಾಕ್ಯ, ವಿದೇಹ ಮತ್ತು ಲಿಚ್ಛವಿಗಳು ಎಲ್ಲಕ್ಕೂ ಮಹತ್ವವಾದವು. ವಿದೇಹ ಮತ್ತು ಲಿಚ್ಛವಿ ಇವು ಎರಡೂ ಕೂಡಿಕೊಂಡಿದ್ದವು;. ಮತ್ತು ಆ ಸಂಯುಕ್ತ ರಾಜ್ಯವು ವಜ್ಜೀ ಎಂದು ಕರೆಯಲ್ಪಡುತ್ತಿತ್ತು.

ಶಾಕ್ಯರ ಜನಸಂಖ್ಯೆಯು ೧೦ ಲಕ್ಷವಿತ್ತು. ಅವರ ದೇಶವು ನೇಪಾಳದ ತೆರಾಯಿಯಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಸರಾಸರಿ ೫೦ ಮೈಲು, ಉತ್ತರದಿಂದ ದಕ್ಷಿಣಕ್ಕೆ ೩೦, ಅಥವಾ ೪೦ ಮೈಲಿನವರೆಗೆ ಹಬ್ಬಿಗೊಂಡಿತ್ತು. ಅವರ ರಾಜಧಾನಿ ಕಪಿಲವಸ್ತು. ಅವರ ರಾಜ್ಯವಾಳುವ ಕಾರ್ಯವು ಒಂದು ಸಭೆಯ ಮುಖಾಂತರ ಆಗುತ್ತಿತ್ತು. ಈ ಸಭೆಯು ಒಂದು ಬಹು ದೊಡ್ಡ ಸಭಾಭವನದಲ್ಲಿ ಕೂಡುತ್ತಿತ್ತು. ಈ ಸಭಾಭವನಕ್ಕೆ ಸಂಥಾಗರ ಎಂದು ಅನ್ನುತ್ತಿದ್ದರು. ವೃದ್ಧರೂ ತರುಣರೂ ಎಲ್ಲರೂ ತಮ್ಮ ರಾಜ್ಯದ ಆಳಿಕೆಯ ಕಾರ್ಯದಲ್ಲಿ ಸರಿಯಾಗಿ ಭಾಗ ತೆಗೆದುಕೊಳ್ಳುತ್ತಿದ್ದರು. ಎಲ್ಲ ಜನರು ಕೂಡಿ ಸಭಾಪತಿಯನ್ನು ಆರಿಸುತ್ತಿದ್ದರು. ಸಭಾಪತಿಗೆ ರಾಜನ ಪದವಿಯು ಕೊಡಲ್ಪಡುತ್ತಿತ್ತು.

ವಜ್ಜಿಗಳ ಪ್ರಜಾತಂತ್ರ ರಾಜ್ಯವು ಪ್ರಾಚೀನ ಭಾರತ ವರ್ಷದ ಒಂದು ಸಂಯುಕ್ತ ರಾಜ್ಯವಾಗಿತ್ತು. ಈ ಪ್ರಜಾತಂತ್ರ ರಾಜ್ಯದಲ್ಲಿ ಎಂಟು ಬೇರೆ ಬೇರೆ ಜನಾಂಗಗಳು ಕೂಡಿಕೊಂಡಿದ್ದವು. ಈ ಸಂಯುಕ್ತ ಪ್ರಜಾತಂತ್ರ ರಾಜ್ಯದ ರಾಜಧಾನಿಯು ವೈಶಾಲಿಯಾಗಿತ್ತು. ಈ ಸಂಯುಕ್ತ ರಾಜ್ಯದ ಎರಡು ಪ್ರಧಾನ ಭಾಗಗಳು ವಿದೇಹ, ಲಿಚ್ಛವಿ ಎಂಬವು ಇದ್ದವು. ಮೊದಲು ಯಾವದೋ ಒಂದು ಕಾಲದಲ್ಲಿ ವಿದೇಹರ ರಾಜ್ಯವು ೨೩೦೦ ಮೈಲಿನವರೆಗೆ ಹಬ್ಬಿಗೊಂಡಿತ್ತೆಂದು ಹೇಳಲ್ಪಡುತ್ತದೆ. ಲಿಚ್ಛವಿ ಜನರು ಮೂವರನ್ನು ಆರಿಸಿ ಅವರ ಕೈಯಲ್ಲಿ ರಾಜ್ಯದ ಆಳಿಕೆಯ ಕಾರ್ಯವನ್ನು ಒಪ್ಪಿಸುತ್ತಿದ್ದರು. ಅವರು

ಮೂವರು ಅವರ ನಾಯಕರು ಅಥವಾ ಮುಖಂಡರು ಆಗುತ್ತಿದ್ದರು. ಲಿಚ್ಛವಿಗಳ ಒಂದು ಮಹಾಸಭೆ ಇತ್ತು. ಈ ಮಹಾಸಭೆಯಲ್ಲಿ ವೃದ್ಧರೂ ತರುಣರೂ ಎಲ್ಲರೂ ಸೇರುತ್ತಿದ್ದರು. ಮತ್ತು ಎಲ್ಲ ರಾಜ್ಯಕಾರ್ಯದಲ್ಲಿ ಭಾಗ ತೆಗೆದುಕೊಳ್ಳುತ್ತಿದ್ದರು. ಏಕಪಣ್ಣ ಜಾತಕ ಹಾಗೂ ಚುಲ್ಲಕಲಿಂಗ ಜಾತಕದಲ್ಲಿ ಈ ಮಹಾಸಭಾಸದರ ಸಂಖ್ಯೆಯು ೭೭೦೭ ಎಂದು ಕೊಡಲ್ಪಟ್ಟಿದೆ. ಒಂದು ಕಾಲದಲ್ಲಿ ಈ ಸಂಖ್ಯೆಯಲ್ಲಿ ಆ ಜಾತಿಯ ಎಲ್ಲ ಜನರು ಸೇರಿದ್ದರು. ಈ ಮಹಾಸಭೆಯು ಸಭಾಸದರರಿಗೆ 'ರಾಜ' ಎಂದು ಅನ್ನುತ್ತಿದ್ದರು. ಅವರು ಮಹಾಸಭೆಯಲ್ಲಿ ಕುಳಿತು ಕೇವಲ ಕಾನೂನು ಮಾಡುವದರಲ್ಲಿ ಸಮ್ಮತಿಯನ್ನು ಮಾತ್ರ ಕೊಡುತ್ತಿದ್ದಿಲ್ಲ; ಆದರೆ ಸೇನೆ ಮತ್ತು ಆಯವ್ಯಯ ಸಂಬಂಧದ ಎಲ್ಲ ಸಂಗತಿಗಳ ಮೇಲ್ವಿಚಾರಣೆಯನ್ನು ಮಾಡುತ್ತಿದ್ದರು. ಈ ಮಹಾ ಸಭೆಯಲ್ಲಿ ರಾಜ್ಯಕ್ಕೆ ಸಂಬಂಧಿಸಿದ ಎಲ್ಲ ಸಂಗತಿಗಳ ಮೇಲೆ ವಿಚಾರವೂ ವಾದವಿವಾದಗಳೂ ಆಗುತ್ತಿದ್ದವು. ರಾಜ್ಯಶಾಸನದ ಅನುಕೂಲತೆಗೋಸುಗ ಈ ಮಹಾಸಭೆಯು ತನ್ನ ಸಭಾಸದರೊಳಗಿಂದ ೯ ಸಭಾಸದರ ಒಂದು ಮಂಡಲವನ್ನು ಆರಿಸುತ್ತಿತ್ತು. ಈ ಒಂಬತ್ತು ಜನ ಸಭಾಸದರು, "ಗಣರಾಜಾನಃ" ಎಂದು ಕರೆಯಲ್ಪಡುತ್ತಿದ್ದರು. ಇವರೆಲ್ಲರು ಜನಸಮುದಾಯದ ಪ್ರತಿನಿಧಿಗಳು ಆಗುತ್ತಿದ್ದರು.

ಬುದ್ಧನ ಜೀವನದಮೇಲೆ ಈ ಪ್ರಜಾತಂತ್ರ ರಾಜ್ಯಗಳ ಪ್ರಭಾವವು ಬಹಳ ಚೆನ್ನಾಗಿ ಬಿದ್ದಿತ್ತು. ಗೌತಮ ಬುದ್ಧನು ಶಾಕ್ಯರ ಪ್ರಜಾತಂತ್ರ ರಾಜ್ಯದಲ್ಲಿ ಹುಟ್ಟಿದ್ದನು. ಅವರ ತಂದೆ ಶುದ್ಧೋದನನು ಈ ಪ್ರಜಾತಂತ್ರ ರಾಜ್ಯದ ಒಬ್ಬ ಸಭಾಪತಿ ಇದ್ದನು. ಗೌತಮ ಬುದ್ಧನಿಗೆ ಸ್ವತಂತ್ರ ವಿಚಾರ, ಸಂಘಟನ ಶಕ್ತಿ ಮತ್ತು ಐಕ್ಯದ ಶಿಕ್ಷಣ ಇವೆಲ್ಲ ಇಲ್ಲಿಯೇ ದೊರೆತಿದ್ದವು. ಬುದ್ಧಭಗವಂತನು ತನ್ನ ಭಿಕ್ಷು ಸಾಂಪ್ರದಾಯದ ಸಂಘಟನವನ್ನು ಇವೇ ಪ್ರಜಾತಂತ್ರ ರಾಜ್ಯಗಳ ಮಾದರಿಯಿಂದ ತಕ್ಕೊಂಡಿದ್ದನು.

ಸಾಮಾಜಿಕಸ್ಥಿತಿ

ಬುದ್ಧನಿಗಿಂತ ಮೊದಲೇ ಆರ್ಯರಲ್ಲಿ ಜಾತಿಭೇದವು ರೂಢಮೂಲವಾಗಿತ್ತು. ಈಗ ಹ್ಯಾಗೆ ಬ್ರಾಹ್ಮಣ, ಕ್ಷತ್ರಿಯ ವೈಶ್ಯ ಮತ್ತು ಶೂದ್ರರು ನಮ್ಮ ಸಮಾಜದಲ್ಲಿ ಇರುವರೋ ಹಾಗೆಯೇ ನಾಲ್ಕು ವರ್ಣಗಳು ಆ ಸಮಯದಲ್ಲಿಯೂ ಇದ್ದವು. ಈ ನಾಲ್ಕು ವರ್ಣಗಳಲ್ಲಿ "ರಾಇಜ ಡೇವಿಡ್‌ಸನ* ಮತಾನುಸಾರವಾಗಿ ಕ್ಷತ್ರಿಯರು ಎಲ್ಲಕ್ಕೂ ಶ್ರೇಷ್ಠರಿದ್ದರು. ಮತ್ತು ಇವರ ದರ್ಜೆಯೇ ಎಲ್ಲಕ್ಕೂ ಹೆಚ್ಚಿನದು ಇತ್ತು. ಅವರ ತರುವಾಯ ಬ್ರಾಹ್ಮಣರ ದರ್ಜೆಯು ಇತ್ತು. ಮತ್ತು ಬ್ರಾಹ್ಮಣರ ತರುವಾಯ ವೈಶ್ಯ ಹಾಗೂ ಶೂದ್ರರದು. ಕ್ಷತ್ರಿಯರ ಮರ್ಯಾದೆಯು ಸಮಾಜದಲ್ಲಿ ಎಲ್ಲಕ್ಕೂ ಹೆಚ್ಚಿನ

---

* ರಾಯಿಜ್ ಡೇವಿಡ್‌ಸ ಸಕೃತ "ಬುದ್ಧಿಸ್ಟ ಇಂಡಿಯಾ" ಪುಟ ೫೩,೬೦,೬೧

ದಾಗಿತ್ತು. ಈ ಮತವನ್ನು ಪುಷ್ಟೀಕರಿಸುವದಕ್ಕೆ ರಾಯಿಜ್ ಡೇವಿಡ್‌ಸ ಸಾಹೇಬರವರು ಬೌದ್ಧ ಹಾಗೂ ಜೈನ ಗ್ರಂಥಗಳ ಪ್ರಮಾಣವನ್ನು ಕೊಡುತ್ತಾರೆ. ಅವರು ಬ್ರಾಹ್ಮಣರು ಬರೆದ ಗ್ರಂಥಗಳ ಪ್ರಮಾಣವನ್ನು ಮನ್ನಿಸುವದಿಲ್ಲ. ಯಾಕಂದರೆ ಅವರ ಮತದಲ್ಲಿ ಬ್ರಾಹ್ಮಣರು ತಮ್ಮ ಸ್ವಾರ್ಥ ಮತ್ತು ಪ್ರಶಂಸೆ ಗೋಸುಗ ತಮ್ಮ ಗುಣಗಳನ್ನೇ ಹೊಗಳಿರುತ್ತಾರೆ. ಮತ್ತು ತಮ್ಮನ್ನೇ ನಾಲ್ಕು ವರ್ಣಗಳಲ್ಲಿ ಎಲ್ಲಕ್ಕೂ ಶ್ರೇಷ್ಠರೆಂದು ಹೇಳಿರುತ್ತಾರೆ. ಆದ್ದರಿಂದ ರಾಯಿಜ್ ಡೇವಿಡಸನಮತದಲ್ಲಿ ವರ್ಣ ವ್ಯವಸ್ಥೆಯ ಸಂಬಂಧವಾಗಿ ಬ್ರಾಹ್ಮಣರ ಗ್ರಂಥಗಳಲ್ಲಿ ಬರೆದ ವಚನಗಳು ಎಂದೂ ಮನ್ನಿಸಲ್ಪಡುವದಿಲ್ಲ. ಗೊತ್ತಾಗುವದೇನಂದರೆ– ಏಸುವಿನ ಪೂರ್ವದಲ್ಲಿ ೬ನೇ ಹಾಗೂ ೭ನೇ ಶತಮಾನದಲ್ಲಿ ಬ್ರಾಹ್ಮಣ ಹಾಗೂ ಕ್ಷತ್ರಿಯರಲ್ಲಿ ದೊಡ್ಡ ದ್ವೇಷವುಂಟಾಗಿತ್ತು. ಅವರು ಒಬ್ಬರು ಮತ್ತೊಬ್ಬರಿಂದ ಮುಂದರಿಯಲು ಇಚ್ಛಿಸುತ್ತಿದ್ದರು. ಈ ಕಾರಣದಿಂದ ಬೌದ್ಧ ಹಾಗು ಜೈನ ಗ್ರಂಥಗಳಲ್ಲಿ ಯಾವವು ಬ್ರಾಹ್ಮಣರ ವಿರುದ್ಧ ಮತ್ತು ಕ್ಷತ್ರಿಯರ ಪಕ್ಷದಲ್ಲಿ ಇದ್ದವೋ ಅವುಗಳಲ್ಲಿ ಬ್ರಾಹ್ಮಣರ ಸ್ಥಾನವು ಕ್ಷತ್ರಿಯರ ಕೆಳಗೆ ಇಡಲ್ಪಟ್ಟಿದೆ.

ಮತ್ತು ಅವರ ಉಲ್ಲೇಖವು ಅಪಮಾನಕರ ಹಾಗೂ ನೀಚತಾ ಸೂಚಕ ಶಬ್ದಗಳಲ್ಲಿ ಮಾಡಲ್ಪಟ್ಟಿದೆ. ಇದರಿಂದ ಗೊತ್ತಾಗುವದೇನಂದರೆ– ಕ್ಷತ್ರಿಯರು ಆ ಕಾಲದಲ್ಲಿ ವಿದ್ಯೆ, ಜ್ಞಾನ, ಮತ್ತು ತಪಗಳಲ್ಲಿ ಬ್ರಾಹ್ಮಣರ ಸಮಾನವಾಗಹತ್ತಿದ್ದರು. ಮತ್ತು ಬ್ರಾಹ್ಮಣರಿಗಿಂತಲೂ ಮುಂದೆ ಹೋಗಲು ಇಚ್ಛಿಸುತ್ತಿದ್ದರು. ಜೈನ ಕಲ್ಪ ಸೂತ್ರದಲ್ಲಿ ಬರೆಯಲ್ಪಟ್ಟಿರುವದೇನಂದರೆ ಅರ್ಹತ್ ಇತ್ಯಾದಿ ಮಹಾಪುರುಷರು ಅಥವಾ ಬುದ್ಧನ ಅವತಾರವು ಯಾವಾಗಲೂ ಕ್ಷತ್ರಿಯ ವಂಶದಲ್ಲಿ ಆಗಿರುತ್ತದೆ. ಮತ್ತು ಆಗುವದು.

ಜಾತಕ ಕಥೆಗಳಿಂದ ಈ ನಾಲ್ಕು ವರ್ಣಗಳನ್ನು ಬಿಟ್ಟು ಮತ್ತು ಇಂತಹ ಬಹಳ ಜಾತಿಗಳು ಇದ್ದವೆಂದು ತಿಳಿಯುವದು. ಶೂದ್ರರಿಗಿಂತ ಕಡಿಮೆ ಹೀನ ಜಾತಿಯವರೆಂದು ಎನಿಸುತ್ತಿದ್ದರು. ಈ ವರ್ಗದಲ್ಲಿ ಬಹೇಲಿಎ, ನಾಈ, ಕುಮ್ಹಾರ, ಜುಲಾಹೆ, ಚಮಾರ ಇತ್ಯಾದಿ ಜಾತಿಗಳು ಇದ್ದವೆಂದು ಜಾತಕ ಕಥೆಗಳಿಂದ ಕಂಡುಬರುವದು. ಈ ಸಮಯದಲ್ಲಿ ಅಸ್ಪೃಶ್ಯ ಜಾತಿಗಳು ಇದ್ದವು. ಮತ್ತು ಮೇಲಿನ ಜಾತಿಯವರು ಅವರೊಡನೆ ಅವರಿಗೆ ಅಪಮಾನವಾಗುವಂತೆ ನಡೆದುಕೊಳ್ಳುತ್ತಿದ್ದರು. ಚಿತ್ತ ಸಂಭೂತ ಜಾತಕದಲ್ಲಿ ಬರೆಯಲ್ಪಟ್ಟಿದ್ದೇನಂದರೆ– ಬ್ರಾಹ್ಮಣ ಮತ್ತು ವೈಶ್ಯ ವರ್ಣದ ಇಬ್ಬರು ಸ್ತ್ರೀಯರು ಒಂದು ನಗರದ ರಸ್ತೆಯಲ್ಲಿ ಹೊರಟಿದ್ದರು. ಆಗ ಅವರ ಇದಿರಿಗೆ ಇಬ್ಬರು ಚಾಂಡಾಲರು ಬಂದರು. ಚಾಂಡಾಲರ ದರ್ಶನವು ತಮಗೆ ದೊಡ್ಡ ಅಪಶಕುನವಾಯಿತೆಂದು ತಿಳಿದರು. ಮತ್ತು ಅವರು ಮನೆಗೆ ಬಂದು ಆ ದರ್ಶನದ ಪಾಪವನ್ನು ಕಳೆದುಕೊಳ್ಳುವದಕ್ಕೋಸುಗ ತಮ್ಮ ಎರಡು ಕಣ್ಣುಗಳನ್ನು ಕಿತ್ತಿ ಬಗೆದರು. ಇದರ ತರುವಾಯ

ಜನರು ಆ ಇಬ್ಬರು ಚಾಂಡಾಲರಿಗೆ ಬಹಳ ಹೊಡೆದರು. ಮತ್ತು ಅವರನ್ನು ಬಹಳ ದುರ್ದಶೆಗೀಡುಮಾಡಿದರು. ಮಾತಂಗ ಜಾತಕ ಹಾಗೂ ಸತ್‌ಧರ್ಮ ಜಾತಕದಿಂದ ಸಹ ಗೊತ್ತಾಗುವದೇನಂದರೆ– ಅಸ್ಪೃಶ್ಯ ಜಾತಿಗಳೊಡನೆ ಚನ್ನಾಗಿ ವ್ಯವಹಾರವು ಮಾಡಲ್ಪಡುತ್ತಿದ್ದಿಲ್ಲ. ಬುದ್ಧನ ದಯಾಪೂರ್ಣ ಹೃದಯದಲ್ಲಿ ಈ ಸಾಮಾಜಿಕ ದೋಷದ ವಿಷಯವಾಗಿ ಅವಶ್ಯವಾಗಿ ತಿರಸ್ಕಾರ ಭಾವವು ಉತ್ಪನ್ನವಾಗಿರಬಹುದು. ಈ ಅನ್ಯಾಯವನ್ನು ದೂರಮಾಡುವದಕ್ಕೋಸುಗ ಅವನು ಶ್ರೇಷ್ಠ ಕನಿಷ್ಠ ಭೇದಗಳನ್ನು ಸಂಪೂರ್ಣವಾಗಿ ತ್ಯಾಗ ಮಾಡಿದನು. ಮತ್ತು ತನ್ನ ಧರ್ಮವನ್ನೂ ಭಿಕ್ಷು ಸಂಪ್ರದಾಯವನ್ನೂ ಎಲ್ಲ ವರ್ಣಗಳಿಗಾಗಿಯೂ ಎಲ್ಲ ಜಾತಿಗಳಿಗಾಗಿಯೂ ಸಮಾನರೂಪದಿಂದ ತೆರೆದು ಬಿಟ್ಟನು.

ಜಾತಕ ಕಥೆಗಳಿಂದ ತಿಳಿದುಬರುವದೇನಂದರೆ– ಆ ಸಮಯದಲ್ಲಿ ಒಂದು ವರ್ಣದವರಿಗೂ ಎರಡನೇ ವರ್ಣದವರಿಗೂ ವಿವಾಹ ಮತ್ತು ಭೋಜನ ಇವುಗಳ ಬಳಿಕೆ ಇತ್ತು. ಇದರ ಅನೇಕ ಉದಾಹರಣೆಗಳು ಜಾತಕಗಳಲ್ಲಿ ದೊರೆಯುತ್ತವೆ. ಈ ರೀತಿಯ ವಿವಾಹದಿಂದ, ಉತ್ಪನ್ನವಾಗುವ ಸಂತಾನವು ತಂದೆಯ ವರ್ಣದವರೆಂದು ತಿಳಿಯಲ್ಪಡುತ್ತಿದ್ದರು. ಆದರೆ ಒಂದೇ ಗೋತ್ರದಲ್ಲಿ ವಿವಾಹಮಾಡುವದು ನಿಷಿದ್ಧವಾಗಿದ್ದಿಲ್ಲ.

ಜಾತಕಗಳಿಂದ ಪ್ರಕಟವಾಗುವದೇನಂದರೆ–ಆ ಸಮಯದಲ್ಲಿ ಎಲ್ಲ ವರ್ಣಗಳ ಮತ್ತು ಜಾತಿಗಳ ಮನುಷ್ಯರು ಇತರ ವರ್ಣಗಳ ಹಾಗೂ ಇತರ ಜಾತಿಗಳ ಕೆಲಸವನ್ನು ಕೈಕೊಳ್ಳುವದಕ್ಕೆ ಹತ್ತಿದ್ದರು. ಬ್ರಾಹ್ಮಣರು ವ್ಯಾಪಾರವನ್ನು ಮಾಡುತ್ತಿದ್ದರು. ಅವರು ಆನೆಗಳನ್ನು ನೋಡುತ್ತಿದ್ದರು. ಬಡಿಗರ ಕೆಲಸ ಮತ್ತು ಹೊಲದ ಕೆಲಸ ಮಾಡುತ್ತಿದ್ದರು. ಕ್ಷತ್ರಿಯರೂ ವ್ಯಾಪಾರ ಮಾಡುತ್ತಿದ್ದರು. ಒಬ್ಬ ಕ್ಷತ್ರಿಯನ ಸಂಬಂಧವಾಗಿ ಬರೆದಿರುವದೇನಂದರೆ– ಅವನು ಕುಂಬಾರನ, ಮಾಲಿ ಪಾಚಕರ ಕೆಲಸವನ್ನು ತಕ್ಕೊಂಡಿದ್ದನು. ಆಗಾದರೂ ಈ ಜನರ ಜಾತಿಗಳಲ್ಲಿ ಸ್ವಲ್ಪಾದರೂ **ಗಡಬಿಡಿಯು** ಆಗಿದ್ದಿಲ್ಲ. ಇದು ಆ ಕಾಲದ ಸಾಮಾಜಿಕ ಸ್ಥಿತಿಯು ಇತ್ತು. ಈಗ ಕೆಳಗೆ ತತ್ಕಾಲೀನ ಧಾರ್ಮಿಕ ಸ್ಥಿತಿಯ ವರ್ಣನೆಯು ಮಾಡಲ್ಪಡುತ್ತದೆ.

ಧಾರ್ಮಿಕ ಸ್ಥಿತಿ

ಯಜ್ಞ, ಮತ್ತು ಬಲಿದಾನ– ಬುದ್ಧನ ಸಮಯದಲ್ಲಿ ಧರ್ಮದ ಸ್ಥಿತಿಯು ಬಹಳ ಕೆಟ್ಟಿತ್ತು. ಆ ಸಮಯದಲ್ಲಿ ಪಶುಯಜ್ಞವು ಪರಾಕಾಷ್ಠೆಗೆ ಮುಟ್ಟಿತ್ತು. ನಿರಪರಾಧ, ದೀನ, ಅಸಹಾಯ ಪಶುಗಳ ರುಧಿರದಿಂದ, ಯಜ್ಞವೇದಿಯು ಕೆಂಪು ಮಾಡಲ್ಪಟ್ಟಿತ್ತು. ಯಜಮಾನನ ಕಾಮನೆಯ ಪೂರ್ತಿಗೋಸುಗ ಈ ಪಶುವಧೆಯು ಮಾಡಲ್ಪಡುತ್ತಿತ್ತು. ಪುರೋಹಿತರು ಯಜಮಾನರಿಂದ ಯಜ್ಞಮಾಡಿಸುವದರಲ್ಲಿ ತತ್ಪರರಾಗಿರುತ್ತಿದ್ದರು. ಇದೇ

ಅವರ ಜೀವಿಕೆಯ ಮುಖ್ಯ ಉಪಾಯವಾಗಿತ್ತು. ದಕ್ಷಿಣೆಯಿಲ್ಲದೆ ಯಜ್ಞವು ಅಪೂರ್ಣವೂ ನಿಷ್ಫಲವೂ ಎಂದು ತಿಳಿಯಲ್ಪಡುತ್ತಿತ್ತು. ಆದ್ದರಿಂದ ಬ್ರಾಹ್ಮಣರಿಗೆ ಈ ಯಜ್ಞ, ಮತ್ತು ಬಲಿದಾನಗಳಿಂದ, ಬಹು ದೊಡ್ಡ ಲಾಭವಾಗುತ್ತಿತ್ತು. ಜನ್ಮದಾರಭ್ಯ ಮರಣ ಪರ್ಯಂತ ಪ್ರತಿಯೊಂದು ಸಂಸ್ಕಾರದೊಡನೆ ಯಜ್ಞವಾಗುವದು ಅನಿವಾರ್ಯವಾಗಿತ್ತು. ಕರ್ಮ ಕಾಂಡವು ಪೂರ್ಣರೂಪದಿಂದ ಸಾರ್ವಭೌಮಪದವಿಯಲ್ಲಿತ್ತು. ಸಮಾಜವು ಬಾಹ್ಯಾಡಂಬ ರದಲ್ಲಿ ಬಂಧಿಸಲ್ಪಟ್ಟಿತ್ತು. ಸಮಾಜದ ಆತ್ಮವು ಘೋರ ಅಂಧಕಾರದಲ್ಲಿ ಬಿದ್ದು ಪ್ರಕಾ ಶಕ್ಕೋಸುಗ ಧ್ವನಿಗೆಯ್ಯುತ್ತಿತ್ತು. ಆದರೆ ಯಾರೂ ಈ ಧ್ವನಿಯನ್ನು ಕೇಳುವವರು ಇದ್ದಿಲ್ಲ. ಈ ಯಜ್ಞ ಪದ್ಧತಿಯು ಸಮಾಜದ ಮೇಲೆ ಬಹಳೇ ಕೆಟ್ಟ ಪರಿಣಾಮವನ್ನುಂಟು ಮಾಡಿತ್ತು. ೧ನೆಯದು ಯಜ್ಞದಲ್ಲಿ ಆಗುವ ಪಶುವಧೆಯಿಂದ ಮನುಷ್ಯನ ಹೃದಯವು ಕಠೋರವೂ ನಿರ್ದಯವೂ ಆಗುತ್ತ ನಡೆದಿತ್ತು. ಅದರಿಂದ ಜೀವನದ ಮಹತ್ವದ ಭಾವವು ಹೊರಟು ಹೋಗಿತ್ತು. ಜನರು ಆತ್ಮಿಕ ಜೀವನದ ಗೌರವವನ್ನು ಮರೆಯ ಹತ್ತಿದ್ದರು. ೨ನೆಯದು-ಮನುಷ್ಯರಲ್ಲಿ ಜಡಪದಾರ್ಥ ಮೀಮಾಂಸೆಯು ಬಹಳೇ ಬೆಳೆ ದಿತ್ತು. ಜನರು ಹೊರಗಿನ ಸಂಗತಿಗಳಿಗೇ ತಮ್ಮ ಜೀವನದಲ್ಲಿ ಎಲ್ಲಕ್ಕೂ ಶ್ರೇಷ್ಠ ಸ್ಥಾನ ವನ್ನು ಕೊಡುತ್ತಿದ್ದರು. ಯಜ್ಞಮಾಡುವದು ಮತ್ತು ಮಾಡಿಸುವದು ಎಲ್ಲಕ್ಕೂ ಉಚ್ಚ ಧರ್ಮವೆಂದೂ ಎಲ್ಲಕ್ಕೂ ದೊಡ್ಡ ಕಾರ್ಯವೆಂದೂ ಗಣಿಸಲ್ಪಡಹತ್ತಿತ್ತು. ಆತ್ಮನ ನಿಜವಾದ ಉನ್ನತಿಯ ವಿಷಯವಾಗಿ ಜನರು ಉಪೇಕ್ಷೆ ತೋರಿಸುತ್ತಿದ್ದರು. ಯಜ್ಞ ಮಾಡುವದರಿಂದ ತಾವು ಮಾಡಿದ ಕೆಟ್ಟ ಕೃತ್ಯಗಳ ಫಲವು ನಷ್ಟವಾಗಿ ಹೋಗುತ್ತದೆ ಯೆಂಬ ವಿಶ್ವಾಸವು ಜನರಲ್ಲಿ ನೆಲೆಗೊಂಡಿತ್ತು. ಇಂತಹ ಸ್ಥಿತಿಯಲ್ಲಿ ಪವಿತ್ರ ಆಚರಣ ಮತ್ತು ಆತ್ಮಿಕ ಉನ್ನತಿಯ ಗೌರವವು ಸಮಾಜದಲ್ಲಿ ಇರಲು ಶಕ್ಯವಾಗಬಲ್ಲದೇ?

ಇದರ ಹೊರತು ಯಜ್ಞಮಾಡುವದರಲ್ಲಿ ಬಹಳ ಧನ ವ್ಯಯವಾಗುತ್ತಿತ್ತು. ದೊಡ್ಡ ದೊಡ್ಡ ದಕ್ಷಿಣೆಗಳು ಬ್ರಾಹ್ಮಣರಿಗೆ ಕೊಡಲ್ಪಡುತ್ತಿದ್ದವು. ಬಹು ಮೂಲ್ಯ ವಸ್ತ್ರ, ಆಕಳು, ಕುದುರೆ, ಸುವರ್ಣ ಇತ್ಯಾದಿಗಳು ದಕ್ಷಿಣಾರೂಪದಲ್ಲಿ ಕೊಡಲ್ಪಡುತ್ತಿ ದ್ದವು. ಕೆಲವು ಯಜ್ಞಗಳು ವರ್ಷಾನುವರ್ಷ ನಡೆಯುವಂಥವಿದ್ದವು. ಅವಕ್ಕೆ ಸಾವಿರಾರು ಬ್ರಾಹ್ಮಣರ ಆವಶ್ಯಕತೆಯು ಬೀಳುತ್ತಿತ್ತು. ಆದ್ದರಿಂದ ಪ್ರತಿಯೊಬ್ಬನ ಭಾಗ್ಯದಲ್ಲಿ ಯಜ್ಞ ಮಾಡುವದೂ ಯಜ್ಞದಿಂದ ಕೀರ್ತಿ ಸಂಪಾದಿಸುವದೂ ಇದ್ದಿಲ್ಲ. ಧಾರ್ಮಿಕ ಪುರುಷನೇ ಯಜ್ಞಮಾಡುವ ಸಾಹಸವನ್ನು ಮಾಡುತ್ತಿದ್ದನು. ಇದಕ್ಕೋ ಸುಗ ವಿಚಾರ ಪ್ರವಾಹವು ಕರ್ಮಕಾಂಡದ ವಿರುದ್ಧವಾಗಿ ತೂಗಾಡಹತ್ತಿತು. ಮತ್ತು ಜನರು ಆತ್ಮಿಕ ಶಾಂತಿ ಪ್ರಾಪ್ತಮಾಡಿಕೊಳ್ಳುವದಕ್ಕೋಸುಗ ಹೊಸ ಉಪಾಯವನ್ನು ಹುಡುಕಹತ್ತಿದರು.

ಹಠಯೋಗ ಮತ್ತು ತಪಸ್ಸು— ಹಠಯೋಗವಾದರೂ ಧರ್ಮದ ಒಂದು ಉಪಾಯವಾಗಿತ್ತು. ಕಠಿಣ ತಪಸ್ಯ ಮಾಡುವದರಿಂದ ಅವರಿಗೆ ಋದ್ಧಿ ಸಿದ್ಧಿಗಳು ಪ್ರಾಪ್ತವಾಗುವವೆಂದು ಜನರ ವಿಶ್ವಾಸವಿತ್ತು. ಆತ್ಮಿಕ ಉನ್ನತಿಯನ್ನು ಪ್ರಾಪ್ತಮಾಡಿ ಕೊಳ್ಳುವದಕ್ಕಾಗಿ ಅಥವಾ ಪ್ರಕೃತಿಯ ಮೇಲೆ ವಿಜಯ ಸಂಪಾದಿಸುವದಕ್ಕಾಗಿ ಜನರು ಅನೇಕ ಪ್ರಕಾರದ ತಪಸ್ಸುಗಳಿಂದ ತಮ್ಮ ಶರೀರಕ್ಕೆ ಕಷ್ಟಕೊಡುತ್ತಿದ್ದರು. ಪಂಚಾಗ್ನಿ ತಪಸ್ಸು, ಒಂದು ಕಾಲ ಮೇಲೆ ನಿಂತು ಮತ್ತು ಒಂದು ಕೈ ಎತ್ತಿ ತಪಸ್ಸು ಮಾಡೋಣ, ತಿಂಗಳಗಳ ವರೆಗೆ ಕಠಿಣತರವಾದ ಉಪವಾಸ ಮಾಡುವದು, ಮತ್ತು ಇದೇ ರೀತಿಯ ಬೇರೆ ತಪಸ್ಸುಗಳು ಇಂದ್ರಿಯಗಳ ಮೇಲೆ ವಿಜಯಸಂಪಾದನೆಯಗೋಸುಗ ಆವಶ್ಯಕ ವೆಂದು ತಿಳಿಯಲ್ಪಡುತ್ತಿದ್ದವು. ಬಿಸಿಲು ಚಳಿ ಇವುಗಳ ಕಡೆಗೆ ಸ್ವಲ್ಪವೂ ಲಕ್ಷಕೊಡದೆ ಈ ಜನರು ತಮ್ಮ ಉದ್ದೇಶದ ಸಾಧನೆಯಲ್ಲಿ ಮನಸ್ಸುಗೊಡುತ್ತಿದ್ದರು- ಈ ಜನರು ಕಠಿಣತರ ಶಾರೀರಿಕ ದುಃಖದಿಂದಲೂ ಕ್ಲೇಶಪಟ್ಟುಕೊಳ್ಳುತ್ತಿದ್ದಿಲ್ಲ. ತಪಸ್ವಿಯು ತನ್ನ ತಲೆಯ ಕೂದಲುಗಳನ್ನೂ ಗಡ್ಡ ಮಿಸೆಗಳ ಕೂದಲುಗಳನ್ನೂ ಕೈಯಿಂದ ಕಿತ್ತಿ ಕಿತ್ತಿ ಒಗೆಯುವಷ್ಟು ಮಟ್ಟಿಗೆ ಅವರಲ್ಲಿ ಕ್ಲೇಶ ಸಹನೆ ಬೆಳೆದಿತ್ತು. ಒಂದು ವೇಳೆ ಈ ರೀತಿಯ ತಪಸ್ಸೂ ಪೂರ್ಣವಾಯಿತೆಂದರೆ ಮನುಷ್ಯನು ವಿಶ್ವಾಸದ ಸಾಮ್ರಾಜ್ಯವನ್ನಾದರೂ ಹೊಂದಬಲ್ಲನೆಂಬ ಕಲ್ಪನೆಯು ಬುದ್ಧ ಜನ್ಮಕಾಲದಲ್ಲಿ ಆಗ ಹಬ್ಬಿಗೊಂಡಿತ್ತು. ಮೇಲೆ ಹೇಳಿದ ತಾಮಸೀ ತಪಸ್ಸಿನ ಮಹಿಮೆಯು ಬಹಳ ಹಬ್ಬಿಗೊಂಡಿತ್ತು. ಭಗವಾನ ಬುದ್ಧದೇವನು ಕೂಡ ಸರಾಸರಿ ೬ ವರ್ಷಗಳ ವರೆಗೆ ಇದೇ ಕಠಿಣ ವ್ರತವನ್ನು ಧಾರಣ ಮಾಡಿದ್ದನು. ಅವನು ಇದರ ಅಸಾರತೆಯನ್ನು ಮನಗಂಡ ಬಳಿಕ ಇದನ್ನು ಬಿಟ್ಟು ಗೊಟ್ಟು ಸತ್ಯಜ್ಞಾನದ ಶೋಧಕ್ಕಾಗಿ ತೊಡಗಿದನು.

ಜ್ಞಾನಮಾರ್ಗ ಮತ್ತು ದಾರ್ಶನಿಕ ವಿಚಾರ— ಆತ್ಮಿಕ ಉನ್ನತಿಯನ್ನು ಇಚ್ಛಿಸುವ ಪುರುಷರ ಆತ್ಮಕ್ಕೆ ಕರ್ಮಕಾಂಡದಿಂದಲೇ ಶಾಂತಿ ದೊರೆಯಲಿಲ್ಲ. ಹಠ ಯೋಗವಾಗಲಿ ತಪಸ್ಯೆಯಾಗಲಿ ಪರಮಾನಂದದ ಪ್ರಾಪ್ತಿಗೆ ಸಾಧನವೆನಿಸಲಿಲ್ಲ. ಜನರಿಗೆ ಸಮಾಜದ ಮೋಸಗಾರಿಕೆ ಮತ್ತು ಸುಳ್ಳು ಜೀವನವು ಕಷ್ಟಕೊಡಹತ್ತಿದವು. ಸತ್ಯ ಶೋಧಕರು ತಮ್ಮ ಮನೆಮಾರು ಅಸತ್ಯ ಸಂಸಾರ ಇವಕ್ಕೆ ವಿಮುಖರಾಗಿ ವನಕ್ಕೆ ತೆರಳಿ ದರು. ಬುದ್ಧ ಭಗವಂತನು ಅವತಾರ ತೆಗೆದುಕೊಳ್ಳುವ ಮೊದಲು, ಮತ್ತು ಅವನ ಸಮಯದಲ್ಲಿ ಬಹಳ ಜನ ಭಿಕ್ಷುಗಳು ಸಾಧುಗಳು, ಸನ್ಯಾಸಿಗಳು, ಪರಿವ್ರಾಜಕರು ಮೊದ ಲಾದವರು ಅಲ್ಲಲ್ಲಿ ತಲೆದೋರಿದರು. ಇವರ ಮಾನವು ಜನರಲ್ಲಿ ಬಹು ಹೆಚ್ಚಾಗಿತ್ತು. ಈ ಪರಿವ್ರಾಜಕರಿಗೆ ಇರುವದಕ್ಕೋಸುಗ ರಾಜಮಹಾರಾಜರು ಊರುಗಳ ಹೊರಗೆ ಉತ್ತಮ ಸ್ಥಾನವನ್ನು ಮಾಡಿಕೊಡುತ್ತಿದ್ದರು. ಆ ಕಾಲದಲ್ಲಿ ಆ ಜನರ ಆತಿಥ್ಯ ಮತ್ತು ಸೇವೆ ಮಾಡುವದು ಒಳ್ಳೆಯದೆಂದು ತಿಳಿಯುತ್ತಿದ್ದರು. ಆದ್ದರಿಂದ ಧನಿಕರು ಈ ಪರಿ

ವ್ರಾಜಕರಿಗೆ ವಿಶ್ರಾಮಕ್ಕೋಸುಗ ಆಶ್ರಮಗಳನ್ನು ಮಾಡಿಕೊಡುತ್ತಿದ್ದರು. ಎಷ್ಟೋ ಕಡೆಗಳಲ್ಲಿ ಇವುಗಳ ವ್ಯವಸ್ಥೆಯು ಪಂಚಾಯತರ ಮುಖಾಂತರ ಆಗುತ್ತಿತ್ತು. ಪರಿವ್ರಾಜಕರು ಈ ಆಶ್ರಮಗಳಿಗೆ ಹೋಗಿ ಇಳಿಯುತ್ತಿದ್ದರು. ಜನರು ಅವರ ಭೋಜನ ಮೊದಲಾದವುಗಳ ವ್ಯವಸ್ಥೆಯನ್ನು ಚನ್ನಾಗಿ ಮಾಡಿಕೊಡುತ್ತಿದ್ದರು. ಜನರು ದಿನಾಲು ಈ ಪರಿವ್ರಾಜಕರ ದರ್ಶನ ಮಾಡುವದಕ್ಕೋಸುಗ ಅಲ್ಲಿ ಬರುತ್ತಿದ್ದರು. ಮತ್ತು ದಾರ್ಶನಿಕ ಹಾಗೂ ಧಾರ್ಮಿಕ ವಿಷಯಗಳ ಮೇಲೆ ಅವರ ವ್ಯಾಖ್ಯಾನವನ್ನು ಕೇಳುತ್ತಿದ್ದರು.

ಜೂಟ ನಾರು

(ಒಂದು ಇಂಗ್ಲಿಷ ಲೇಖದ ಆಧಾರದಿಂದ ಬರೆದದ್ದು)

ಇದು ಬಂಗಾಲ, ಬಿಹಾರ ಮದ್ರಾಸ ಪ್ರಾಂತಗಳಲ್ಲಿ ಬೆಳೆಯುವದು. ವಿಶೇಷವಾಗಿ ಬಂಗಾಲ ಪ್ರಾಂತವೇ ಜೂಟಿನ ತೌರುಮನೆಯೆಂದೆನ್ನಬಹುದು. ಎಲ್ಲಕ್ಕೂ ಮೊದಲು ರಾಕ್ಸಬರೋ ಎಂಬ ಯುರೋಪೀಯ ಗೃಹಸ್ಥನು ಕಲಕತ್ತಾದಿಂದ ಜೂಟನ್ನು ಸ್ಕಾಟಲಂಡದಲ್ಲಿಯ ದಂಡೀ ಪಟ್ಟಣಕ್ಕೆ ಕಳಿಸಲು ಯತ್ನಿಸಿದನು. (೧೭೯೧) ಯಾಕಂದರೆ ದಂಡೀ ಪಟ್ಟಣದಲ್ಲಿ ಆಗಿನಿಂದಲೂ ನಾರಿನ ವಸ್ತ್ರಗಳನ್ನು ನೆಯ್ಯುವ ಯಂತ್ರಗಳಿದ್ದವು. ಆದರೆ ಅವೆಲ್ಲ ಯಂತ್ರಗಳು ರಶಿಯದಿಂದ ಬರುವ ಫ್ಲ್ಯಾಕ್ಸ ಎಂಬ ನಾರಿನ ದೆಶೆಯಿಂದ ಸಿದ್ಧಪಡಿಸಿದಂಥವು ಇದ್ದವು. ಅಂಥ ಯಂತ್ರಗಳಿಂದ ಕಲಕತ್ತೆಯ ಜೂಟ ನಾರಿನ ಅರಿವೆಗಳನ್ನು ನೆಯ್ಯುವದಾಗಲಿಲ್ಲ. ಆದದರಿಂದ ಈ ಮೊದಲನೆಯ ಪ್ರಯತ್ನವು ಸಿದ್ಧಿಗೆ ಹೋಗದೆ ಅಷ್ಟಕ್ಕೇ ನಿಂತಿತ್ತು. ಮುಂದೆ ೧೮೩೨ರಲ್ಲಿ ಫ್ಲ್ಯಾಕ್ಸ ಮತ್ತು ಜೂಟ ಇವೆರಡನ್ನೂ ಬೆರಿಸಿ ಅದಕ್ಕೆ ತಿಮಿಂಗಿಲದ ಎಣ್ಣೆ ಸವರಿ ನೆಯ್ಯಲಾರಂಭಿಸಿದರು. ಮುಂದೆ ೧೮೩೫ ರಲ್ಲಿ ಪ್ರತ್ಯೇಕ ಜೂಟನಿಂದಲೇ ನೆಯ್ಯತೊಡಗಿದರು. ೧೮೩೭ರ ಸುಮಾರಿಗೆ ನಮ್ಮಲ್ಲಿಯ ಜೂಟಗೆ ಬೆಲೆ ಬರಲಾರಂಭಿಸಿತು.

೧೮೩೮ರಲ್ಲಿ ದಕ್ಷ ಜನರು ವೆಸ್ಟ ಇಂಡಿಯಾದಿಂದ ಹೊರದೇಶಕ್ಕೆ ಕಾಫೀ ಕಳಿಸುವದಕ್ಕಾಗಿ.ಜೂಟ ನಾರಿನ ಚೀಲಗಳನ್ನು ದಂಡೀ ಪಟ್ಟಣದ ನಾರಿನ ಕಾರಖಾನೆದಾರರನ್ನು ಕೇಳಿಕೊಂಡರು. ಈ ವರೆಗೂ ರಶಿಯದಿಂದ ಫ್ಲ್ಯಾಕ್ಸ, ಹೆಂಪ ಈ ನಾರನ್ನು ದಂಡಿಗೆ ಕಳಿಸುತ್ತಿದ್ದರು. ಮುಂದೆ ರಶಿಯದವರಿಗೂ ಇಂಗ್ಲಿಷರಿಗೂ ವೈಮನಸ್ಯವಾದುದರಿಂದ ಅವರು ದಂಡಿಗೆ ನಾರು ಕಳಿಸುವದನ್ನು ಬಿಟ್ಟುಬಿಟ್ಟರು. ಆ ಬಳಿಕಂತೂ ಹಿಂದುಸ್ಥಾನದಿಂದ ದಂಡೀ ಪಟ್ಟಣಕ್ಕೆ ಕಳಿಸುವ ಜೂಟ ವ್ಯಾಪಾರಕ್ಕೆ ಒಳ್ಳೆಯ ಕಳೆಯು

ಬಂದಿತು. ಅದೇ ಪ್ರಕಾರ ೧೮೬೧–೬೭ ಈ ಅವಧಿಯಲ್ಲಿ ಅಮೇರಿಕೆಯುವರೂ ಇಂಗ್ಲಂಡಕ್ಕೆ ಹತ್ತಿಯನ್ನು ಕಳಿಸಲಿಲ್ಲ. ಆದದರಿಂದ ಇಂಗ್ಲಂಡಿನವರು ಏನಾದರೊಂದು ಪದಾರ್ಥವನ್ನು ಹೊರದೇಶಕ್ಕೆ ಕಳಿಸಲಿಕ್ಕೆ ಜೂಟ ನಾರಿನ ಚೀಲಗಳನ್ನೇ ಉಪಯೋಗಿಸತೊಡಗಿದರು. ಈ ಎಲ್ಲ ಕಾರಣಗಳ ಮೂಲಕ ಜೂಟ ನಾರಿನ ಬೇಡಿಕೆಯು ಬಹಳವಾಯಿತು.

ಮೊದಲು ಹಿಂದುಸ್ಥಾನದಲ್ಲಿ ಜೂಟ ನಾರಿನಿಂದ ಹಾಗೂ ಹೀಗೂ ತಕ್ಕಮಟ್ಟಿಗೆ ನೆಯ್ಯುವ ಮಗ್ಗಗಳಿದ್ದವು. ಇತ್ತಿತ್ತಲಾಗಿ ಕಚ್ಚಾ ಮಾಲಿಗೇ ತಕ್ಕಷ್ಟು ಬೆಲೆ ಬರಲಾರಂಭಿಸಿದ್ದರಿಂದ ನೆಯ್ಯುವ ಗೋಜನ್ನು ಬಿಟ್ಟುಗೊಟ್ಟು ಜೂಟನ್ನೇ ಕಳಿಸುವದಕ್ಕಾಗಿಯೂ ಅದರ ಸಾಗುವಳಿಗಾಗಿಯೂ ಲಕ್ಷ್ಯಪೂರೈಸಲಾರಂಭಿಸಿದರು. ಈಗೀಗ ಅದರ ಹುಟ್ಟುವಳಿಯು ನಮ್ಮಲ್ಲಿ ಅತಿಶಯವಾಗಿ ಬೆಳೆದದೆ ೧೯೩೮–೧೯೩೯ರಲ್ಲಿ ೮ ಲಕ್ಷದಿಂದ ೯ ಲಕ್ಷ ಟನ್ನಿನ ವರೆಗೆ ನಮ್ಮ ದೇಶದಿಂದ ಜೂಟ ನಾರು ರಫ್ತಾವಾಯಿತು.

ಮುಂದೆ ೧೮೫೫ರಲ್ಲಿ ಜೂಟ ನಾರನ್ನು ನೆಯ್ಯುವ ಯಂತ್ರಗಳು ಬಂಗಾಲಕ್ಕೆ ಬರಲಾರಂಭಿಸಿದವು. ಈ ಯಂತ್ರಗಳನ್ನು ಮಿ. ಜಾರ್ಜ ಆಕ್ಲಂಡ ಎಂಬವರು ಸೆರಂಪೂರಕ್ಕೆ (ಬಂಗಾಲ ಪ್ರಾಂತ) ತಂದರು. ಈಗ ಆ ಗಿರಣಿಗೆ ವೆಲ್ಲಿಂಗಡನ್ ಜೂಟಮಿಲ್ಸ ಎಂಬ ಹೆಸರು ಬಂದಿದೆ. ಗಿರಣಿಗಳು ಇಲ್ಲೇ ಆದುದರಿಂದ ಇಲ್ಲಿ ಹುಟ್ಟುವ ಜೂಟ ನಾರಿನ ಬಹಳ ಭಾಗವು ಇಲ್ಲೇ ನುರಿತು ಜೂಟ ನಾರಿನ ಚೀಲಗಳು ಇಲ್ಲಿಂದ ರಫ್ತಾವಾಗತೊಡದವು. ಕಲಕತ್ತೆಯ ಹತ್ತರ ಜೂಟ ನಾರಿನ ಮಿಲ್ಲು (ಗಿರಣಿ) ಗಳು ೯೪ ಅವೆ. ಒಟ್ಟಿಗೆ ೬೦ ಸಾವಿರ ಮಗ್ಗಗಳಿದ್ದು ೩ ಲಕ್ಷ ಜನರು ಅದಕ್ಕಾಗಿ ದುಡಿಯುತ್ತಾರೆ. ಹಿಂದುಸ್ಥಾನದ ವ್ಯಾಪಾರವಲ್ಲಿ ಜೂಟ ನಾರಿನ ವ್ಯಾಪಾರಕ್ಕೇ ಮುಖ್ಯತ್ವವು ಬಂದಿದೆ. ೧೯೩೬ ರಲ್ಲಿ ೬೦ ಕೋಟಿ ರೂ॥ ಬೆಲೆ ಬಾಳುವ ಜೂಟು ಬೆಳೆಯಿತು. ೧೮೫೧ ರಿಂದ ಜೂಟದ ಉತ್ಪತ್ತಿಯು ೪೧ ಲಕ್ಷ ರೂ॥ ಗಳಿಂದ ಈ ವರೆಗೆ ೯೬ ಕೋಟಿ ರೂ॥ ಗಳವರೆಗೆ ಬೆಳೆದದೆ.

ಮಹಾಯುದ್ಧದ ಕಾಲವಲ್ಲಿ ಹಿಂದುಸ್ಥಾನದಿಂದ ೧೪೦ ಕೋಟಿ ಜೂಟ ಚೀಲಗಳನ್ನೂ ೬೩ ಕೋಟಿ ಯಾರ್ಡ ಅರಿವೆಯನ್ನೂ ಯುರೋಪದವರು ತರಿಸಿಕೊಂಡರು. ಮೊದಲಿಗೆ ಯುರೋಪೀಯರು ಜೂಟದ ಗಿರಣಿಗಳನ್ನು ತಮ್ಮ ಬಂಡವಲಿನಿಂದ ಹಾಕಿದರೂ ಈಗ ಆ ಗಿರಣಿಗಳ ಬಂಡವಲಿನಲ್ಲಿ ೧೦೦ಕ್ಕೆ ೬೦ ಭಾಗ ಬಂಡವಲವು ದೇಶೀಯರದೇ ಆಗಿದೆ. ಈ ಸಂಗತಿಯು ಅವರಿಗೆ ಭೂಷಣದಾಯಕವೇ ಸರಿ.

ಇಡಿಯ ಜಗತ್ತಿನಲ್ಲಿಯ ಜೂಟನ ೧೦೦ಕ್ಕೆ ೯೦ ಪಾಲು ಜೂಟ ನಾರು ಹಿಂದುಸ್ಥಾನದಲ್ಲಿಯೂ ಬೆಳೆಯುವದು. ಇನ್ನೂ ಹೆಚ್ಚಿಗೆ ಜೂಟು ನಮ್ಮ ದೇಶದಲ್ಲಿ ಬೆಳೆ

ಯುವ ಲಕ್ಷಣವು ತೋರುತ್ತದೆ. ತತ್ಸಂಬಂಧೀಯವಾದ ಗಿರಣಿಗಳೆಲ್ಲ ಹಿಂದುಸ್ತಾನದ ಜೂಟನ್ನೇ ಅವಲಂಬಿಸಿವೆ. ಜೂಟ ಉತ್ಪತ್ತಿಯು ಹಿಂದುಸ್ತಾನದಲ್ಲಿ ಆಸಾಮು, ಬಿಹಾರ, ಓರಿಸಾ, ಮದ್ರಾಸ ಪ್ರಾಂತಗಳಲ್ಲಿ ಆಗುವದೆಂದು ಮೊದಲೇ ಹೇಳಿದೆ.

ಜೂಟನಲ್ಲಿ ೨ ಪ್ರಕಾರಗಳುಂಟು. ಇವುಗಳಲ್ಲಿ ಮೊದಲನೆಯದು ಬಿಳಿಯ ಬಣ್ಣದ್ದು. ಅದಕ್ಕೆ ದೇಶೀಯ ಭಾಷೆಯಲ್ಲಿ ಪಾಟ, ಅಥವಾ ಕೋಷ್ಟಾ ಎಂಬ ಹೆಸರು. ಎರಡನೆಯದು ಮಸಕು ಬಣ್ಣದ್ದು. ಅದು ಬರದ್ವಾನ ಜಿಲ್ಹೆಯಲ್ಲಿಯೂ ಪೂರ್ವಬಂಗಾಲದಲ್ಲಿಯೂ ಬೆಳೆಯುತ್ತದೆ. ಇದಕ್ಕೆ ದೇಶೀಯರು 'ದೇಶೀ ಟೋಸಾ' ಎಂದೆನ್ನುತ್ತಾರೆ.

ಜೂಟ ನಾರನ್ನು ಫೇಬ್ರುವರಿಯಲ್ಲಿ ಬಿತ್ತುತ್ತಾರೆ. ಆಗ ತಪ್ಪಿದರೆ ಮೇ ತಿಂಗಳಿನಲ್ಲಿ ಬಿತ್ತುತ್ತಾರೆ. ಅವು ಕ್ರಮವಾಗಿ ಜುಲೈ, ಅಕ್ಟೋಬರ ತಿಂಗಳಲ್ಲಿ ಹಂಪಿಗೆ ಬರುತ್ತವೆ. ಆಗ ಅವನ್ನು ಕೊಯ್ಯುವರು. ೪ ತಿಂಗಳಿನಲ್ಲಿ ೧೦ ಫೂಟು ಎತ್ತರದ ವರೆಗೆ ಆ ಪೈರು ಬೆಳೆಯುವದು.

ಈಗೀಗ ಎಲ್ಲ ವ್ಯಾಪಾರದಂತೆ ಜೂಟನ ವ್ಯಾಪಾರವಾದರೂ ಮಂದವಾಗಿದೆ. ಆದುದರಿಂದ ಕಲಕತ್ತೆಯ ಜೂಟ ಅಸೋಸಿಯೇಶನ್ನದವರು ಕೆಲವು ಗಿರಣಿಗಳನ್ನು ನಿಲ್ಲಿಸಿದ್ದಾರೆ. ಮುಂದೆ ಮತ್ತೆ ಮೊದಲಿನಂತೆಯೇ ಆಗುವ ಲಕ್ಷಣಗಳು ಅವೆ. ಜಗತ್ತಿನಲ್ಲೆಲ್ಲ ನಮ್ಮ ದೇಶದ ಜೂಟನ ಬೇಡಿಕೆಯದೆ. ನಮ್ಮ ದೇಶದ ರಫ್ತ ಜೀನಸುಗಳಲ್ಲಿ ಜೂಟ ನಾರಿಗೆ ಹೆಚ್ಚು ಪ್ರಾಧಾನ್ಯವಿದೆಯೆಂದು ಪ್ರತ್ಯೇಕವಾಗಿ ಹೇಳುವ ಕಾರಣವಿಲ್ಲ.

ಪೂರ್ಣಯ್ಯನವರು

[ಒಂದು ಕನ್ನಡ ಲೇಖದ ಆಧಾರದಿಂದ ಬರೆದದ್ದು]

ಪ್ರಾಚೀನ ಹಾಗು ಅರ್ವಾಚೀನ ಕಾಲಗಳಲ್ಲಿ ಸುಪ್ರಸಿದ್ಧಿಗೆ ಬಂದ ರಾಜ್ಯಗಳಲ್ಲಿ ಆಗಿಹೋದ ಕರ್ತವ್ಯಶಾಲಿಗಳಾದ ಮುತ್ಸದ್ದಿಗಳ ಮಾಲಿಕೆಯನ್ನು ರಚಿಸಿದರೆ ಅದರಲ್ಲಿ ಪೂರ್ಣಯ್ಯನವರು ಉಜ್ವಲವಾದದ್ದೊಂದು ಮಣಿಯಂತೆ ಬೆಳಗುವರೆಂಬದರಲ್ಲಿ ಸಂದೇಹವಿಲ್ಲ. ಇಂಥ ಅಲೌಕಿಕ ಮತ್ತು ಅರ್ವಾಚೀನ ವ್ಯಕ್ತಿಗಳ ಪರಿಚಯವು ಶಿಕ್ಷಕವರ್ಗಕ್ಕೂ ತನ್ಮೂಲಕ ವಿದ್ಯಾರ್ಥಿಗಳಿಗೂ ಆಗುವದು ಅವಶ್ಯವಿದೆ. ಪೂರ್ಣಯ್ಯನವರೂ ಮಹಾರಾಷ್ಟ್ರ ರಾಜ್ಯದಲ್ಲಿ ಸುಪ್ರಸಿದ್ಧರೂ ಮುತ್ಸದ್ದಿಗಳೂ ಎಂದೆನಿಸಿಕೊಂಡ ನಾನಾಫಡಣವೀಸರೂ ಸಮಕಾಲೀನರು.

ಮನೆತನ— ಮದ್ರಾಸ ಇಲಾಖೆಗೆ ಸೇರಿದ ಕೊಯಿಮತ್ತೂರ ಜಿಲ್ಲೆಯಲ್ಲಿ ಕುಲೀನರೂ ಸಚ್ಛೀಲರೂ ಬಡವರೂ ಆದ ಇವರ ತಂದೆತಾಯಿಗಳು ೧೭೪೫ನೆಯ ಇಸವಿಯ ಸುಮಾರಕ್ಕೆ ವಾಸವಾಗಿದ್ದರು. ಅವರು ಮೂಲತಃ ಸ್ಮಾರ್ತರು. ಮುಂದೆ ಶ್ರೀ ಮಧ್ವಾಚಾರ್ಯರ ಮಧ್ವಮತದ ಪೀಠದಲ್ಲಿ ವಿರಾಜಮಾನರಾದ ಶ್ರೀ ಸತ್ಯಪೂರ್ಣ ಸ್ವಾಮಿಗಳ ಮೇಲೆ ಈ ದಂಪತಿಗಳ ವಿಶ್ವಾಸವು ಕೂತದ್ದರಿಂದ ಮುದ್ರಾಂಕಿತರಾಗಿ ವೈಷ್ಣವರಾದರು. ಸ್ವಲ್ಪಾವಧಿಯಲ್ಲಿಯೇ ಅವರಿಗೆ ಪುತ್ರೋತ್ಸವವಾಯಿತು (ಸುಮಾರು ಇ. ಸ. ೧೭೪೬) ಶ್ರೀ ಸ್ವಾಮಿಗಳವರ ಕೃಪೆಯಿಂದಲೇ ತಮಗೆ ಸಂತತಿಯಾಯಿತೆಂದು ಅವರಿಗೆ ಭಾವನೆಯಾದುದರಿಂದ ತಮ್ಮ ಕೂಸಿಗೆ ಪವಿತ್ರವಾದ ಅವರ ಹೆಸರಿನಿಂದಲೇ ನಾಮಕರಣೋತ್ಸವವನ್ನು ಮಾಡಿದರು.

ಪೂರ್ಣಯ್ಯನವರು ದೊಡ್ಡವರಾಗುತ್ತ ಆಗಿನ ಪದ್ಧತಿಯಂತೆ ಸಂಸ್ಕೃತ, ಕನ್ನಡ ಭಾಷಾಭ್ಯಾಸ ಮಾಡಿದರು. ಅವರು ಒಳ್ಳೇ ಚುರುಕುಬುದ್ಧಿಯವರಾದುದರಿಂದ ಪ್ರಸಂಗಗಳು ಬಂದಾಗಲೆಲ್ಲ ತಮಿಳು, ಮಹಾರಾಷ್ಟ್ರ ಹಿಂದೀ ಉರ್ದು ಭಾಷೆಗಳನ್ನು ಅರಿತುಕೊಳ್ಳುವದರಲ್ಲಿ ಒಳ್ಳೇ ಉತ್ಸುಕರಾಗಿರುತ್ತಿದ್ದರು. ಈ ಒಲವೇ ಮುಂದೆ ಅವರ ಊರ್ಜಿತಸ್ಥಿತಿಗೆ ಕಾರಣವಾಯಿತೆಂದು ಮುಂದಿನ ಅವರ ಚರಿತ್ರದಿಂದ ತಿಳಿಯುತ್ತದೆ.

ರಾಜಕಾರಣ ಪ್ರವೇಶ— ೧೮ ಶತಮಾನದ ಮಧ್ಯಕಾಲವು ರಾಜಕಾರಣ ಪುರುಷರ ಒಳ್ಳೆಯ ಏರಿಕೆಯ ಕಾಲವಾಗಿದ್ದಿತು. ಪುಣೆಯಲ್ಲಿ ಮಹಾರಾಷ್ಟ್ರ ರಾಜ್ಯದ ಭದ್ರವಾದ ತಳಹದಿಯಂತೆ ಇದ್ದ ಪೇಶವಾಯಿಗಳು ವಿರಾಜಮಾನರಾಗಿದ್ದರು. ಅರ್ಕಾಟ ಹೈದರಾಬಾದಗಳಲ್ಲಿ ನವಾಬರು ತಕ್ಕಮಟ್ಟಿಗೆ ವಿಸ್ತಾರವಾದ ಪ್ರಾಂತಗಳ ಅಧಿಪತಿಗಳಾಗಿ ಬಾಳುತ್ತಿದ್ದರು. ಮಲಿಯಾಳ, ಕೊಡಗು, ತಾವಣಕೋರಗಳು ದಕ್ಷಿಣದಲ್ಲಿ ಸಣ್ಣ ಸಣ್ಣ ಸಂಸ್ಥಾನಗಳಾಗಿದ್ದವು. ಇಂಗ್ಲಿಷರು ಫ್ರೆಂಚರನ್ನು ಜಯಿಸಿ ದಿವಸ ದಿವಸಕ್ಕೆ ಪ್ರಬಲರಾಗುತ್ತ ನಡೆದಿದ್ದರು. ಸಿಂದೆ ಹೋಳಕರರು ಉತ್ತರದಲ್ಲಿ ಬೆಳೆಯುತ್ತ ನಡೆದಿದ್ದರು. ಈ ಸಂಧಿಯಲ್ಲಿ ಹೈದರನು ಒಂದು ಹಿಂದೂ ರಾಜ್ಯಕ್ಕೆ ತಾನು ಅಧಿಪತಿಯಾಗಿ ಸುತ್ತಲು ಕಾಲುಚಾಚುತ್ತ ಸಾಗಿದ್ದನು. ಆದದರಿಂದ ಇಂಗ್ಲಿಷರೂ ಮಹಾರಾಷ್ಟ್ರರೂ ನಿಜಾಮನೂ ಹೈದರನನ್ನು ತೀಕ್ಷ್ಣದೃಷ್ಟಿಯಿಂದ ನೋಡುತ್ತಿದ್ದರು. ಇವರೆಲ್ಲರಿಗೂ ಪ್ರಸಂಗದಲ್ಲಿ ಕೈಗೊಡಲಿಕ್ಕೆ ಹೈದರನು ದಂಡಿನ ಸಿದ್ಧತೆಯನ್ನಿಟ್ಟಿದ್ದನು. ಒಂದುಲಕ್ಷ ಸೈನ್ಯದ ಆಹಾರ, ಯುದ್ಧಸಾಮಗ್ರಿ, ಉಡುತೊಡಿಗೆ ಇವೆಲ್ಲವುಗಳ ವ್ಯವಸ್ಥೆಯನ್ನು ಪ್ರತಿದಿನವೂ ಹೈದರನು ನೋಡಬೇಕಾಗಿದ್ದಿತು. ಇದಲ್ಲದೆ ಬೇರೆ ಬೇರೆ ರಾಜರ ಕೂಡ ಬೇರೆ ಬೇರೆ ಭಾಷೆಗಳಿಂದ ಪತ್ರವ್ಯವಹಾರ ಮಾಡಬೇಕಾಗಿದ್ದಿತು. ಎಲ್ಲರಿಗೂ ತಕ್ಕರೀತಿಯಿಂದ ಉತ್ತರ ಕೊಡಲಿಕ್ಕೆ ತಕ್ಕ ಮುತ್ಸದ್ದಿತನವುಳ್ಳ ವಿಶ್ವಾಸಾರ್ಹನಾದ ಒಬ್ಬ ಅಧಿಕಾರಿಯ ಸಾಹಾಯ್ಯವು ಅವನಿಗೆ ಬೇಕಾಗಿದ್ದಿತು.

ಈ ಸಂಧಿಯಲ್ಲಿ ಹೈದರನು ಬಿದನೂರ ಕೋಟೆಯನ್ನು ಕೈವಶಮಾಡಿಕೊಂಡಾಗ ೧೭೬೩ರಲ್ಲಿ ಪೂರ್ಣಯ್ಯನು ಅವನ ಸೇನೆಯಲ್ಲಿ ಸೇರಿದನು. ಅವನು ಜನ್ಮಸಿದ್ಧ ಬುದ್ಧಿವಂತನೂ ಉದ್ಯೋಗಶೀಲನೂ ಆಗಿದ್ದದರಿಂದ ಸ್ವಲ್ಪಾವಧಿಯಲ್ಲಿಯೇ ಸೇನೆಯಲ್ಲಿ ಪ್ರಮುಖಸ್ಥಾನವನ್ನು ಸಂಪಾದಿಸಿದನು. ಮೇಲೆ ವಿವರಿಸಿದಂತೆ ಎಲ್ಲ ಭಾಷೆಗಳನ್ನು ಬಲ್ಲ ಕುಶಾಗ್ರಬುದ್ಧಿಯವನಾದ ಪೂರ್ಣಯ್ಯನು ಹೈದರನ ಮುತ್ಸದ್ದಿ ಪರಿವಾರದಲ್ಲಿ ಗಣಿಸಲ್ಪಟ್ಟನು. ಹೈದರನು ತಾನು ಮುಸಲ್ಮಾನನಾಗಿದ್ದರೂ ಜಾತಿಮತ್ಸರದ ಬೀಜವು ಕೂಡ ಅವನ ಹೃದಯದಲ್ಲಿ ವಾಸಮಾಡಿಕೊಂಡಿದ್ದಿಲ್ಲ. ಪೂರ್ಣಯ್ಯ, ಕೃಷ್ಣಯ್ಯ, ಶಾಮಯ್ಯ ಮೊದಲಾದವರಿಗೆ ಮಹತ್ವದ ಕೆಲಸಗಳನ್ನು ಒಪ್ಪಿಸಿ ಅವರ ಯೋಗ್ಯತೆಯನ್ನು ಬೆಳಸಿದನು. ಯಾವನಾದರೊಬ್ಬ ಸೇವಕನು ತನ್ನ ಕೆಲಸದಲ್ಲಿ ಉಪೇಕ್ಷೆಯನ್ನು ಮಾಡಿದರೆ ಅವನಿಗೆ ದಂಡಪ್ರಹಾರದ ಪ್ರಾಯಶ್ಚಿತ್ತವು ತಪ್ಪಿದ್ದಿಲ್ಲ. ಇಂಥ ಉಗ್ರಸ್ವರೂಪಿಯಾದ ಯಜಮಾನನ ಕೈಕೆಳಗೆ ಕೆಲಸವನ್ನು ಮಾಡಿ ಅವನ ಪ್ರಶಂಸೆಗೆ ಪಾತ್ರವಾಗಿ ತಮ್ಮ ಊರ್ಜಿತಾವಸ್ಥೆಯನ್ನು ಮಾಡಿಕೊಳ್ಳುವ ಕೆಲಸವು ಎಂಥ ಕಷ್ಟಕರವೂ ಜಾಣತನದ್ದೂ ಆಗಿತ್ತೆಂಬದನ್ನು ವಿಚಾರಕ್ಕೆ ತಂದರೆ ಪೂರ್ಣಯ್ಯನ ಬುದ್ಧಿಶಕ್ತಿ—ಸ್ವಕರ್ತವ್ಯತತ್ಪರತೆಗಳ ಪರಿಚಯವು ವಾಚಕರಿಗೆ ಚೆನ್ನಾಗಿ ಉಂಟಾಗುವದು.

ಸತ್ಪಾತ್ರಿಗಳಲ್ಲಿ ವಿರಲವಾಗಿ ಕಂಡುಬರುವ ಪರಧರ್ಮಸಹಿಷ್ಣುತೆ, ಗುಣಗ್ರಾಹಕತೆ ಇವು ಹೈದರಲ್ಲಿ ವಾಸಮಾಡಿಕೊಂಡಿದ್ದವು. ಉಗ್ರಭಾವಿಯಾದ ಅವನಲ್ಲಿ ಸದ್ಗುಣಗಳು ನೆಲಸಿದ್ದರಿಂದ ಪೂರ್ಣಯ್ಯನಂಥ ಕರ್ತೃತ್ವಶಾಲಿಗೆ ಅವನ ಮನಸ್ಸನ್ನು ಸೆಳೆದುಕೊಳ್ಳುವದು ಸಾಧ್ಯವಾಯಿತು

ಪೂರ್ಣಯ್ಯನವರ ಏರಿಕೆ— ಪೂರ್ಣಯ್ಯನ ಜಾಣತನವೂ ಪ್ರಾಮಾಣಿಕತನವೂ ಹೈದರನ ಅನುಭವಕ್ಕೆ ಬಂದದರಿಂದ ಆತನು ಅವನಿಗೆ ತನ್ನ ಕೋಶಾಗಾರವನ್ನು ಒಪ್ಪಿಸಿದನು. ಆದದರಿಂದ ಅವನು ಸೈನ್ಯದ ಆಹಾರದ ವ್ಯವಸ್ಥೆಯ ಖಾತೆಯ ಸುಧಾರಣೆಯನ್ನು ಬಹುಶ್ರಮದಿಂದ ಮಾಡಿದನು. ಪೂರ್ಣಯ್ಯನ ಕೆಲಸದ ಪದ್ಧತಿಗೆ ಹೈದರನು ಪ್ರೀತಿಪಟ್ಟು 'ಮರುಹಳ್ಳಿ' ಎಂಬ ಗ್ರಾಮವನ್ನು ಇನಾಮಾಗಿ ಕೊಟ್ಟನು.

ಒಂದು ಸಮಯದಲ್ಲಿ ಹೈದರನು ಪೂರ್ಣಯ್ಯನವರ ಮುಂದೆ " ಇಂಗ್ಲಿಷರಕೂಡ ನಾನು ಯುದ್ಧಹೂಡಿದ ವಿಷಯವು ಒಳ್ಳೆಯದಾಗಲಿಲ್ಲ ; ಒಂದುಲಕ್ಷ ಹೊನ್ನುಗಳನು ವೆಚ್ಚಮಾಡಿ ಒಂದು ಈಚಲಹನಿ ಸಂಪಾದಿಸಿದಂತೆ ಈ ಯುದ್ಧಗಳ ಪರ್ಯವಸಾನವಾಯಿತು. ಜಲಮಾರ್ಗದಿಂದ ಅವರಿಗೆ ಒದಗುವ ಸಹಾಯ ಲಾಭಗಳನ್ನು ಪ್ರತಿಬಂಧಿಸುವದು ನನ್ನಿಂದಾಗುವಂತಿಲ್ಲ. ಇತ್ಯಾದಿ. ಇಂಗ್ಲಿಷರ ಸಾಹಿತ್ಯವೈಪುಲ್ಯದ ವಿಷಯವಾಗಿ ಪೂರ್ಣಯ್ಯನವರ ಕೂಡ ಹೈದರನು ಮಾತಾಡಿದನೆಂದು ಮಿ. ವಿಲ್ಕ್ಸಎಂಟರು ಹೇಳಿದ್ದಾರೆ.

ಹೈದರ ಅಲ್ಲಿಯ ಮರಣಕಾಲವು ದಕ್ಷಿಣ ಹಿಂದುಸ್ಥಾನದಲ್ಲಿ ಅತ್ಯಂತ ಮಹತ್ವದ ಸಂಗತಿಯಾಗಿತ್ತು. ಆಗ ಈ ಸಮಯವು ಹಿಂದುಸ್ಥಾನದ ರಾಜಕೀಯ ಘಟನಾಘಟನಗಳ ಸಂಧಿಕಾಲವು. ಪರರಾಷ್ಟ್ರಗಳು ಹಿಂದುಸ್ಥಾನದಲ್ಲಿ ಸ್ವಸತ್ತೆಯನ್ನು ನೆಲೆಗೊಳಿಸುವದಕ್ಕಾಗಿ ಭಗೀರಥ ಪ್ರಯತ್ನಗಳನ್ನು ನಡಿಸಿದ್ದವು. ಜಾಣನೂ ಬಲಾಢ್ಯನೂ ಆದ ಹೈದರಅಲ್ಲಿಯ ಮರಣದಿಂದ ಕರ್ನಾಟಕದೊಳಗಿನ ರಾಜಕಾರಣಕ್ಕೆ ಬಲವತ್ತರವಾದ ಆಘಾತವುಂಟಾಗುವ ಸಂಭವವಿತ್ತು. ಹೈದರನ ಮರಣಸಮಯದಲ್ಲಿ ಟೀಪುವು ಮಲಬಾರ ಪ್ರಾಂತದಲ್ಲಿ ನರಸಿಂಹರಾಯ ಪೇಟೆಯಲ್ಲಿ ಸೈನ್ಯದೊಂದಿಗೆ ಇದ್ದನು. ಆಗ ಹೈದರನ ಬೆನ್ನಿಗೆ ಅಗ್ನಿರೋಹಿಣೀ ಹುಣ್ಣು ಹುಟ್ಟಿತು. ಆದರಿಂದಲೇ ೧೭೮೨ ದಿಶಂಬರ ೭ನೆಯ ತಾರೀಖಿನ ದಿವಸ ತೀರಿದನು. ಈ ಮರಣವಾರ್ತೆಯು ಗೊತ್ತಾದರೆ ಗೊಂದಲವೆದ್ದೀತೆಂದು ಅವನ ಪ್ರೇತದ ಪೆಟ್ಟಿಗೆಗೆ ಬೊಕ್ಕಸದ ಪೆಟ್ಟಿಗೆಯೆಂದು ಹೇಳಿ ಅದನ್ನು ಗುಪ್ತವಾಗಿ ಕೋಲಾರಕ್ಕೆ ಅವನ ತಂದೆಯ ಕಬರಸ್ಥಾನದ ಬಳಿಗೆ ಕಳಿಸಿದನು. ತೀವ್ರವೇ ಟೀಪುವಿಗೆ ಈ ಸಂಗತಿ ತಿಳಿಸಲಿಕ್ಕೆ ಒಂಟೆಯ ಸವಾರನನ್ನು ಕಳಿಸಿದನು. ಪ್ರತಿನಿತ್ಯದ ಸಲಾಮಿ ತೆಗೆದುಕೊಳ್ಳುವದು, ವಾರವಾರಕ್ಕೆ ಮದ್ರಾಸದ ಕಡೆಗಿದ್ದ ಸೈನ್ಯಕ್ಕೆ ಸಾಮಗ್ರಿ ಕಳಿಸುವದು, ಪಗಾರ ಕೊಡುವದು, ಪರರಾಷ್ಟ್ರೀಯ ವಕೀಲರ ಕಾಗದ ಪತ್ರಗಳ ವಿಚಾರಣೆ ಮಾಡುವದು, ವಕೀಲರ ಭೆಟ್ಟಿ ತೆಗೆದುಕೊಳ್ಳುವದು ಇತ್ಯಾದಿ ಮಹತ್ವದ ಕೆಲಸಗಳನ್ನು ಹೈದರನು ಇರುವಂತೆಯೇ ನಟಿಸಿ ತಾನೇ ಜವಾಬುದಾರಿಯಿಂದ ಸಾಗಿಸುತ್ತಿದ್ದನು. ಇಷ್ಟಾದರೂ ಶಂಕೆಯಿಂದ ಮಹಮ್ಮದ ಅಮೀನನೆಂಬ ಸರದಾರನು ಹೈದರನ ೨ನೆಯ ಮಗನಾದ ಅಬದೂಲ ಕರೀಮನನ್ನು ಪಟ್ಟಗಟ್ಟುವ ವಿಚಾರ ನಡಿಸಿದ್ದನು. ಅವನನ್ನು ಕೂಡಲೆ ಹಿಡಿದು ಹೈದರನ ಆಜ್ಞೆಯೆಂದು ಹೇಳಿ ಸೆರೆಮನೆಗೆ ಕಳಿಸಿದನು. ಈ ಸಂಗತಿಯಿಂದ ಪೂರ್ಣಯ್ಯನವರ ಮುತ್ಸದ್ದಿತನವೂ ಕಾರ್ಯಕ್ಷಮತೆಯೂ ವ್ಯಕ್ತವಾಗುತ್ತವೆ.

ಟೀಪುವು ಬಂದಕೂಡಲೆ ಅವನಿಗೆ ೧ಲಕ್ಷ ೫೦ಸಾ. ಹೊನ್ನನ್ನೂ ೫ಕೋಟಿ ರೂ.ಗಳನ್ನೂ ಮಿಕ್ಕ ಅಗಣಿತ ಸಂಪತ್ತಿಯನ್ನೂ ಶ್ರೀರಂಗಪಟ್ಟಣದಲ್ಲಿ ಒಪ್ಪಿಸಿದನು.

ಮೈಸೂರ ಗ್ಯಾಝೇಟಿಯರದ ಕರ್ತೃಗಳಾದ ಮಿ. ಲುಯಿಸ್‌ರಾಯಿಸ್ ಎಂಬವರು ಕೆಳಗೆ ಬರೆದಂತೆ ಉದ್ಗಾರ ತೆಗೆದಿದ್ದಾರೆ.

It is a high tesitimony to the order and descipline of the army; and the influence and ability of Purnaiya that this was successfully carried out.

ಟೀಪುವು ಧರ್ಮಾಭಿಮಾನಿಯಾಗಿ ತನ್ನ ದರಬಾರದಲ್ಲೆಲ್ಲ ಮುಸಲ್ಮಾನರಿಗೇ ಪ್ರಾಮುಖ್ಯತೆಯನ್ನು ಕೊಟ್ಟಿದ್ದನು. ಪೂರ್ಣಯ್ಯನವರೊಬ್ಬರೇ ಹಿಂದುಗಳು. ಇವರ

ಮೇಲೆ ಅನೇಕ ಸಂಕಟಗಳು ಬರುತ್ತಿದ್ದವು. ಒಂದುಸಾರಿಯಂತೂ ಟೀಪುವು ನೀವು ಮುಸಲ್ಮಾನರಾಗಬೇಕೆಂದು ಸರಕಾರದ ಇಚ್ಛೆಯದೆ, ಎಂದು ಹೇಳಿದನಂತೆ ! ಆದರೆ ಟೀಪುವಿನ ತಾಯಿಯ ಒಲವಿನಿಂದ ಇವೆಲ್ಲ ಸಂಕಟಗಳು ಪೂರ್ಣಯ್ಯನವರಿಗೆ ದೂರ ವಾದವು. ೧೭೯೨ರಲ್ಲಿ ಆದ ಯುದ್ಧದಲ್ಲಿ ಶ್ರೀರಂಗಪಟ್ಟಣದ ಮೇಲೆ ಇಂಗ್ಲಿಷರ ಅಭಿಯೋಗವಾದಾಗ ಖಜೀನೆಯು ಇಂಗ್ಲಿಷರ ಹಸ್ತಗತವಾಗುವ ಸಂಭವವಿತ್ತು. ಆಗ ಪೂರ್ಣಯ್ಯನವರು ಮುಂಜಾಗ್ರತೆಪಟ್ಟು ಯುಕ್ತಿಯಿಂದ ಖಜಾನೆಯನ್ನೇ ಸ್ಥಾನಾಂತರ ಮಾಡಿ ಉಳಿಸಿಕೊಂಡರು. ಆ ವೇಳೆಯಲ್ಲಿ ಪೂರ್ಣಯ್ಯನವರಿಗೆ ಗುಂಡುತಗಲಿದರೂ ಕರ್ತವ್ಯವಿಮುಖರಾಗಲಿಲ್ಲ.

೧೭೯೯ರಲ್ಲಿ ಆದ ಕೊನೆಯ ಯುದ್ಧದಲ್ಲಿ ಪೂರ್ಣಯ್ಯನವರು ಟೀಪೂವಿನ ಮಗನ ಕೈಕೆಳಗೆ ಒಂದು ಬಾಗಿಲದ ರಕ್ಷಣಮಾಡುತ್ತಿದ್ದರು. ಮತ್ತೊಂದು ಬಾಗಿಲಿಗೆ ಟೀಪುವು ಸ್ವತಃ ನಿಂತಿದ್ದನು. ಪೂರ್ಣಯ್ಯನವರು ತಮ್ಮ ಕೆಲಸವನ್ನು ಒಳ್ಳೇ ದಕ್ಷತೆಯಿಂದ ನಡಿಸಿದರು, ಇಂಗ್ಲಿಷ ಸೈನ್ಯವು ಟೀಪುವಿದ್ದ ಕಡೆಗೇ ಹಲ್ಲೆಮಾಡಿ ಅಲ್ಲಿಂದಲೇ ಪ್ರವೇಶಿಸಿತು. ಬಳಿಕ ಚತುರೋಪಾಯಗಳಿಂದ ಎಲ್ಲ ಸರದಾರರನ್ನು ಸಂತೈಸುವಂತೆ ಗ। ಜ। ರ ಅಪ್ಪಣೆಯಾಗಿತ್ತು.

ಮಾಲಕಮ್ ಸಾಹೇಬರು ಗವ್ಹರ್ನರ ಜನರಲ್ಲರಿಗೆ ಬರೆದ ಪತ್ರದಲ್ಲಿ " ಪೂರ್ಣಯ್ಯನು ನಿಪುಣನಾದ ಕೋಶಾಧ್ಯಕ್ಷನು " ಎಂದು ಬರೆದಿರುವರು. ಈ ಮೊದಲು ಪೂರ್ಣಯ್ಯನವರ ಮನೆಯವರೆಲ್ಲ ಇಂಗ್ಲಿಷರ ಶರೆಯಲ್ಲಿದ್ದರು. ಆದುದರಿಂದ ಪೂರ್ಣಯ್ಯನವರಿಗೆ ಅನೇಕರೀತಿಯಿಂದ ಇಂಗ್ರಜರೊಡನೆ ಸಖ್ಯದಿಂದ ನಡೆಯುವದೇ ಇಷ್ಟವೆನಿಸಿ ೧೭೯೯ರ ಮೇ ತಿಂಗಳಿನ ೧೩ನೇ ತಾರೀಖಿನ ದಿವಸ ಕರ್ನಲ್ ಹಾರೀಸರ ಠಾಣ್ಯಕ್ಕೆ ಹೋದರು.

ಬಳಿಕ ಜನರಲ್ ಹ್ಯಾರಿಸ್, ಕರ್ನಲ್ ವೆಲ್ಲೆಸ್ಲಿ ಇವರೀರ್ವರು ಎಲ್ಲ ಸರದಾರರನ್ನೂ ಪೂರ್ಣಯ್ಯನನ್ನೂ ಮನ್ನಿಸಿ ಅವರ ಚಿತ್ತವನ್ನು ಆಕರ್ಷಿಸಿಕೊಂಡು ಶಾಂತರೀತಿಯಿಂದ ಮೈಸೂರರಾಜ್ಯದ ಎಲ್ಲ ವಿಭಾಗವನ್ನು ಯೋಗ್ಯರೀತಿಯಿಂದ ಜರುಗಿಸಿದರು. ಪೂರ್ಣಯ್ಯನವರು ಪುನಃ ಹೊಸ ಮೈಸೂರರಾಜ್ಯದ ಮಂತ್ರಿಗಳಾದರು.

೨ನೆಯ ಕರ್ನಾಟಕ ಸ್ಕೌಟರ್‍ಯಾಲಿ ಧಾರವಾಡ

ಲೇಖಕರು :—ಶಾ. ಹು. ಇಲಕಲ್ಲ, ಟ್ರೇ. ಸ್ಕೂ. ವಿ. ಧಾರವಾಡ.

ತಾ. ೨-೧೧-೩೩ರಿಂದ ತಾ. ೪-೧೧-೩೩ ವರೆಗೆ ಅಂದರೆ ಮೂರು ದಿವಸಗಳ ವರೆಗೆ ಗವ್ಹರ್ನಮೆಂಟ ಹಾಯಸ್ಕೂಲಿನ ಮೈದಾನದಲ್ಲಿ ಸ್ಕೌಟರ್‍ಯಾಲಿಯು ಜರುಗಿತು. ಸ್ಕೌಟಮಾಸ್ತರರೂ ಸ್ಕೌಟರೂ ಕೂಡಿ ಸುಮಾರು ೨೦೦೦ ಜನರಿದ್ದರು. ಊಟದ ಸಲುವಾಗಿ ಬ್ರಾಹ್ಮಣ ಲಿಂಗಾಯತ ಈ ಪ್ರಕಾರ ಎರಡು ಕಡೆಗೆ ವ್ಯವಸ್ಥೆಯು ಮಾಡಲ್ಪಟ್ಟಿತ್ತು. ಬೇಕಾದವರು ಬೇಕಾದಲ್ಲಿ ಅವರವರ ಇಚ್ಛೆಯ ಮೇರೆಗೆ ತಿಕೀಟು ತೆಗೆದುಕೊಂಡು ಊಟಮಾಡಬಹುದೆಂದು ನಿರ್ಣಯವಾಗಿತ್ತು. ಇದಲ್ಲದೆ ಮುಂಜಾನೆ, ಸಾಯಂಕಾಲ ಚಹಾಫರಾಳದ ವ್ಯವಸ್ಥೆಯು ಸಹ ಆಗಿತ್ತು. ಊಟ ಮತ್ತು ಚಹಾದ ವ್ಯವಸ್ಥೆಯು ಮೆ॥ ಟ್ರೇ. ಸ್ಕೂ. ಹೆಡ್‌ಮಾಸ್ತರರಾದ ಮುಗದಾಳರಾಯರು ಕೈಕೊಂಡಿದ್ದು ಮೂರು ದಿವಸಗಳ ವರೆಗೆ ಶ್ರಮವಹಿಸಿ ಸ್ವಲ್ಪಾದರೂ ಗೊಂದಲ ಏಳಗೊಡದೆ ಕಾರ್ಯಕ್ರಮಕ್ಕನುಸಾರವಾಗಿಯೇ ಸಾಗಿಸುತ್ತಿದ್ದರು.

ಸ್ಕೌಟರ್‍ಯಾಲಿಯಲ್ಲಿ ಡಿ. ಸ್ಕೌಟ ಕಮೀಶನರರಾದ ಮೆ। ಖಾನಸಾಹೇಬರೂ ಮೆ॥ ಚಾರಮಾಸ್ತರರೂ ಮೆ॥ ಎ. ಎನ್. ರಾಮಸ್ವಾಮೀಯವರೂ ಆರ್ಗನಾಯಝರರಾದ ನೀಲಗಾರರವರೂ ಸರಿಯಾಗಿ ಹಾಜರಾಗಿ ಕಾರ್ಯಕ್ರಮವನ್ನು ಸಾಗಿಸುತ್ತಿದ್ದರು.

ತಾ. ೩-೧೧-೩೩ನೆಯ ಮಧ್ಯಾಹ್ನದ ೩ ಗಂಟೆಗೆ ಸರಿಯಾಗಿ ನಾ॥ ಗವ್ಹರ್ನರ ಸಾಹೇಬರು ಆಗಮಿಸಿದರು. ಧ್ವಜಾರೋಹಣದ ಕಾರ್ಯಕ್ರಮವಾದ ಬಳಿಕ ಸ್ಕೌಟರು ಧಾರದ ಮೇಲೆ ನಡೆಯುವದು, ಮನೆಗೆ ಬೆಂಕಿ ಹತ್ತಿದ ಜನರನ್ನು ಉಳಿಸುವದು, ಬೆಂಕಿ ನೊಂದಿಸುವದು, ಘಾಯಹೊಂದಿದ ಜನರನ್ನು ಮೂರು ಸಾಯಕಲ್ಲಿನ ಮೇಲೆ ಒಯ್ಯುವದು ಇತ್ಯಾದಿ ಕೆಲಸಗಳನ್ನು ಮಾಡಿತೋರಿಸಿದರು.

೧ ರಾಣೆಬೆನ್ನೂರಿನ ಟ್ರೂಪಿನವರ ಲಂಬಾಣಿಗಳ ಕುಣಿತವು ಬಹು ಸೊಗಸಾಗಿತ್ತು. (೨) ಸವಪತ್ತಿಯ ಅಯ್ಯಪ್ಪನು ೧೭೦ ಪೌಂಡು ತೂಕದ ಕಬ್ಬಿಣದ ತುಂಡನ್ನು ಎತ್ತಿದನು. ೭ ತುಂಬಿದ ಕೊಡಗಳನ್ನು ಒಮ್ಮೆಲೇ ಎತ್ತಿದ್ದಲ್ಲದೆ ಒಂದು ಕೊಡವನ್ನು ಹಲ್ಲಿನಿಂದ ನೆಗಹಿದನು. (೩) ಕಲಘಟಗಿಯವರು ಯೋಗಾಸನವನ್ನು ಚೆನ್ನಾಗಿ ಹಾಕಿದರು. (೪) ಬೆಳಗಾಂವಿಯವರ ಪ್ರಥಮ ಚಿಕಿತ್ಸಾ ಕಾರ್ಯವು ಸೊಗಸಾಗಿತ್ತು. (೫) ಮೆ॥ ಚಾರ ಮಾಸ್ತರರ ಮಗನು ಕಣ್ಣುಗಳನ್ನು ಕಟ್ಟಿಕೊಂಡು ಸ್ಕೌಟನ ಬಗೆಬಗೆಯ ಗಂಟುಗಳನ್ನು ಹಾಕಿ ತೋರಿಸಿದನು. (೬) ಸಾಂಗಲಿಯ ಆರು

ವರುಷದ ಕುಮಾರನು ಶಿಕ್ಷಣವಿಷಯಕ್ಕೆ ವ್ಯಾಖ್ಯಾನ ಕೊಟ್ಟನು. ಈ ಕಾರ್ಯಕ್ರಮಕ್ಕೆ ಸುಮಾರು ೫೦೦೦ ಪ್ರೇಕ್ಷಕರು ಬಂದಿದ್ದರೂ ಧ್ವನಿಪ್ರಕಾಶಕ ಯಂತ್ರಗಳ ವ್ಯವಸ್ಥೆಯನ್ನು ಮಾಡಿದ್ದರಿಂದ ನಾ। ಗವ್ಹರ್ನರ ಸಾಹೇಬರ ಭಾಷಣವು ಎಲ್ಲರಿಗೂ ಕೇಳಿಸಿತು. ಅವರ ಭಾಷಣವು ಇಂತಿರುವದು:—

"ಸ್ಕೌಟ ಶಿಕ್ಷಣದ ಸಲುವಾಗಿ ೧೦ ದಿವಸಗಳ ವರೆಗೆ ಇಲ್ಲಿಯ ಸುಪ್ರತಿಷ್ಠಿತ ಜನರು ಕ್ಯಾಂಪ್ ಹೂಡಿದ್ದೂ, ಅದರಲ್ಲಿ ಎಲ್ಲ ವರ್ಗದ ಜನರು ಪರಸ್ಪರ ಪ್ರೇಮದಿಂದ ಭಾಗವಹಿಸಿದ್ದು ಆನಂದದ ವಿಷಯುಗಳಾಗಿವೆ, ನ್ಯಾಯಖಾತೆ, ಸಾರ್ವಜನಿಕ ಹಿತದ ಖಾತೆ, ಹಿಂದುಳಿದವರ್ಗ, ಪೋಲೀಸ, ಮ್ಯುನಸಿಪಾಲ್ಟಿ, ಲೋಕಲ್‌ಬೋರ್ಡ, ಇನಾಮದಾರರು, ಹಾಯಸ್ಕೂಲುಗಳ ಶಿಕ್ಷಕವರ್ಗ, ಪ್ರಾಥಮಿಕ ಶಾಲಾಶಿಕ್ಷಕರ ಸಮೂಹ ಈ ಮೇರಿಗೆ ಎಲ್ಲ ಖಾತೆಗಳ ಜನರು ಒತ್ತಟ್ಟಿಗೆ ಬಂದು ಪ್ರೇಮದಿಂದ ಕೂಡಿದ್ದು ನೋಡಿದರೆ ಸ್ಕೌಟ ಅಧಿಕಾರಿಗಳ ಪ್ರಯತ್ನವು ಶ್ಲಾಘನೀಯವಾಗಿರುತ್ತದೆ.

ಇಲ್ಲಿ ಸ್ಕಾವುಟ್ ಶಿಕ್ಷಣಹೊಂದಿದ ಪ್ರತಿಯೊಬ್ಬರು ಅದರ ಉಪಯೋಗವನ್ನು ತಮ್ಮ ತರುಣ ಬಂಧುಗಳಿಗೆ ಮಾಡಿಕೊಡುವದು ಅವಶ್ಯವಾಗಿದೆ. ಅವರಿಗೆ ನೀವು ಮುಂದಾಳುಗಳಾಗಿ ಯೋಗ್ಯ ಮಾರ್ಗ ತೋರಿಸಬೇಕಾಗಿದೆ. ಇಲ್ಲಿ ಶಿಕ್ಷಣಹೊಂದಿದ ಸ್ಕಾವುಟ್ ಮಾಸ್ತರರು ಚಿಕ್ಕಮಕ್ಕಳಿಗೆ ತಪ್ಪದೆ ಸ್ಕಾವುಟ್ ಶಿಕ್ಷಣಕೊಟ್ಟು ಅವರು ಒಳ್ಳೆ ನಾಗರಿಕರಾಗುವಂತೆ ಮಾಡಲಿಕ್ಕೆ ಪ್ರಯತ್ನಿಸಬೇಕಾಗಿದೆ.

ಗ್ರಾಮಹಾಂತರಗಳಲ್ಲಿ ಸ್ಕಾವುಟ್ ಶಿಕ್ಷಣವನ್ನು ಬೆಳೆಯಿಸಲಿಕ್ಕೆ ನೀವು ಹೆಚ್ಚು ಲಕ್ಷ ಹಾಕಬೇಕೆಂದು ನನ್ನ ಆಗ್ರಹದ ಸೂಚನೆಯಿದೆ. ಸ್ಕಾವುಟ್ ಜನರು ಗ್ರಾಮೋದ್ಧಾರದ ಕೆಲಸಗಳನ್ನು ಮಾಡಲಿಕ್ಕೆ ಟೊಂಕ ಕಟ್ಟಬೇಕು. ಹಳ್ಳಿಯ ಸುಧಾರಣೆಯೇ ರಾಷ್ಟ್ರಸುಧಾರಣೆಯು. ಸ್ಕಾವುಟ್ ಜನರು ಮೊದಲು ಹಳ್ಳಿಯಲ್ಲಿ ವಾಸಮಾಡಿ ತಮ್ಮ ಮನೆಯು ಹಾಗೂ ಸುತ್ತುಮುತ್ತಲಿನ ವಾತಾವರಣವನ್ನು ಸ್ವಚ್ಛದಿಂದಿಡಲು ಯತ್ನಿಸಬೇಕು. ಗುಡಿ, ಸಾಲೆ, ನೀರಿನ ಕೆರೆಭಾವಿಹೊಂಡಗಳು ನಿರ್ಮಲವಾಗಿಯೂ ಆರೋಗ್ಯವಾಗಿಯೂ ಇರುವಂತೆ ನೋಡಿಕೊಳ್ಳಬೇಕು. ಪ್ಲೇಗ, ಮಾರಿಕಾ, ಮಲೇರಿಯಾ ಮೊದಲಾದ ಬೇನೆಗಳ ನಿವಾರಣೆಗಾಗಿ ಮುಂಜಾಗ್ರತೆಯಿಂದ ಕೆಲಸಮಾಡಬೇಕು. ಮಧ್ಯಪ್ರಾಂತದಲ್ಲಿ ಸ್ಕಾವುಟ್ ಜನರು ಈ ತರಹದ ಗ್ರಾಮಸುಧಾರಣೆಯ ಕೆಲಸವನ್ನು ದಕ್ಷತೆಯಿಂದ ಮಾಡುತ್ತಿದ್ದಾರೆ. ಆಗಾಗ್ಗೆ ಸ್ಕಾವುಟ್ ಸಪ್ತಾಹವನ್ನು ಕೂಡಿಸಿ ತಮ್ಮ ಕಾರ್ಯಕಲಾಪಗಳನ್ನು ಜನರಲ್ಲಿ ಪ್ರಸಾರಗೊಳಿಸುತ್ತಿರುವರು. ಈ ಕಾರ್ಯಗಳಿಗೆ ಡಿಸ್ಟ್ರಿಕ್ಟ ಲೋಕಲ ಬೋರ್ಡ ಹಾಗೂ ಸ್ಕೂಲಬೋರ್ಡಗಳ ಸಹಾಯವು ದೊರಿತರೆ ಸ್ಕಾವುಟನ ಕೆಲಸಗಳು

ಯಶಸ್ವಿಯಾಗಿ ನಡೆಯುವವು. ಕರ್ನಾಟಕದ ಮುಂದಾಳುಗಳು ಹಳ್ಳಿಯ ಹುಡುಗರಲ್ಲಿ ಸ್ಕೌಟನ ಶಿಕ್ಷಣವನ್ನು ಪ್ರಸಾರಗೊಳಿಸಬೇಕು.

ಕೆಲವು ಅಧಿಕಾರಸ್ಥರು ಹರಿಣಶಿಕಾರಿ ಜನರಲ್ಲಿ ಸ್ಕೌವುಟ್ ಶಿಕ್ಷಣವನ್ನು ನೆಲೆಗೊಳಿಸಿ ಅವರ ದುಷ್ಟ ಚಟಚಾಳಿಗಳನ್ನು ಹೋಗಲಾಡಿಸಿ ಅವರನ್ನು ಒಳ್ಳೆಯ ನಾಗರಿಕರನ್ನಾಗಿ ಮಾಡುತ್ತಿರುವದು ಸ್ತುತ್ಯವು. ಅದೇ ಪ್ರಕಾರ ಅಸ್ಪೃಶ್ಯತಾನಿವಾರಣೆಯ ಕಾರ್ಯವನ್ನಾದರೂ ಸ್ಕೌವುಟ್ ಜನರು ಕೈಕೊಂಡು ಅವರ ಸ್ಥಿತಿಗತಿಗಳನ್ನು ಸುಧಾರಿಸಲಿಕ್ಕೆ ಪ್ರಯತ್ನ ಮಾಡಬೇಕು.

ಹಿಂದುಸ್ಥಾನಕ್ಕೆ ಹೊಸ ಸಂಘಟನೆಯು ಪ್ರಾಪ್ತವಾಗುವ ಕಾಲವು ಸಮೀಪಿಸಿದೆ. ಈಗ ದೇಶಹಿತಕ್ಕೆ ಸುಸ್ವಭಾವಿಗಳು, ಸ್ವಾವಲಂಬಿಗಳು, ಸದೃಢರು ಬೇಕಾಗಿದ್ದಾರೆ. ಸೇವಾಭಾವನೆಯಿಂದ ಕ್ರಮಬದ್ಧವಾದ ಕೆಲಸಗಳನ್ನು ಮಾಡುವ ಜನರ ಅವಶ್ಯಕತೆಯಿದೆ. ನೀವು ನಿಮ್ಮ ತಾಯಿತಂದೆಗಳಿಗೆ ಒಳ್ಳೇ ಮಕ್ಕಳಾಗಿಯೂ, ಆಟದ ಗೆಳೆಯರಿಗೆ ಬಂಧುಗಳಾಗಿಯೂ, ಶಿಕ್ಷಕರಿಗೆ ಒಳ್ಳೇ ವಿದ್ಯಾರ್ಥಿಗಳಾಗಿಯೂ, ಒಟ್ಟಿನಮೇಲೆ ಒಳ್ಳೇ ಸ್ಕಾವುಟ್ಸ್ ಆಗಬೇಕೆಂದು ಹಾರೈಸುತ್ತೇನೆ."

ಪ್ರಾಥಮಿಕ ಮಾಧ್ಯಮಿಕ ಶಾಲೆಗಳಲ್ಲಿಯೂ, ಹಳ್ಳಿಪಳ್ಳಿಗಳಲ್ಲಿಯೂ ಕ್ರಮಬದ್ಧವಾದ ಸ್ಕಾವುಟ್ ಶಿಕ್ಷಣವನ್ನು ಪ್ರಾರಂಭಿಸುವದು ಈಗಿನ ಕಾಲಕ್ಕೆ ಅತ್ಯಂತ ಮಹತ್ವದ ಪ್ರಶ್ನೆಯಾಗಿದೆ. ಸ್ಕೂಲಬೋರ್ಡಿನವರೂ ಶಾಲಾಸಂಸ್ಥೆಯವರೂ ಈ ಮಹತ್ವದ ಕಾರ್ಯವನ್ನು ಪ್ರೋತ್ಸಾಹಿಸಿ ಅದನ್ನು ಯಶಸ್ವಿಗೊಳಿಸುವದು ಅತ್ಯವಶ್ಯಕವಾಗಿದೆ.

ತಾ॥ ೪–೧೧–೩೩ನೆಯ ದಿವಸ ಮಧ್ಯಾಹ್ನದ ೪॥ ಗಂಟೆಗೆ ನಾಮದಾರ ದಿವಾನ ಬಹಾದ್ದೂರ ಕಂಬಳಿಯವರು ಆಗಮಿಸಿದ್ದು ಅವರೆದುರಿಗೆ ಗವ್ಹರ್ನರ ಸಾ॥ ರವರ ಎದುರಿಗೆ ಆಡಿತೋರಿಸಿದ ಕೆಲವು ಆಟಗಳನ್ನು ಆಡಿದರು. ಅವರವರ ಆಟಗಳನ್ನು ನೋಡಿ ಮಿನಿಸ್ಟರವರ ಹಸ್ತದಿಂದ ಇನಾಮುಗಳು ಹಂಚಲ್ಪಟ್ಟವು. ಆ ಮೇಲೆ ಮಿನಿಸ್ಟರವರ ಭಾಷಣವಾದನಂತರ ರಾತ್ರಿ ೨೦೦೦ ಸಾವಿರ ಜನರ ಒಂದೇ ಪಂಕ್ತಿಯೊಂದಿಗೆ ಸಹ ಫಲಾಹಾರವಾಗಿ ಸ್ಕೌಟರ್ಯಾಲಿಯು ಸಮಾಪ್ತಿಯಾಯಿತು.

ಅಖಿಲ ಕರ್ನಾಟಕ ಸ್ಕೌಟ ಪರಿಷತ್ತಿಗೆ ಬಂದು ಅದರಲ್ಲಿ ಕೌಶಲ್ಯವನ್ನು ತೋರಿಸಿದ ಸ್ಕೌಟರಿಗೆ ಕಾಣಿಕೆಗಳನ್ನು ಕೊಡಬೇಕೆಂದು ಕರ್ನಾಟಕದ ಸ್ಕೌಟರ ಲವಲವಿಕೆಯಿರುವದೆಂದು ಬಿನ್ನಯಿಸಿಕೊಂಡದ್ದರಿಂದ ನಮ್ಮ ನಾಡಿನವರಾದ ನಾಮದಾರ ದಿವಾನ ಬಹದ್ದೂರ ಕಂಬಳಿಯವರು ಇದಕ್ಕೆ ಒಪ್ಪಿಕೊಂಡು ಈ ಸಮಾರಂಭಕ್ಕೆ ದಯಮಾಡಿಸಿದರು. ತಾ॥ ೪–೧೧–೩೩ನೆಯ ದಿವಸ ಸಾಯಂಕಾಲ ಅವರು ಸ್ಕೌಟ ಮಂಟಪಕ್ಕೆ ಬಂದು ಸ್ಕೌಟರು ತೋರಿಸಿದ ಕೌಶಲ್ಯವನ್ನು ಕಂಡು ಸಂತೋಷಪಟ್ಟು ಸ್ವಹಸ್ತದಿಂದ

ಕೆಲವರಿಗೆ ಕಾಣಿಕೆಗಳನ್ನಿತ್ತರು. ಆ ಸಮಯದಲ್ಲಿ ಅವರು ಮಾಡಿದ ಭಾಷಣದ ಸಾರಾಂಶವು ಕೆಳಗಿನಂತೆ—

"ಈ ಅಖಿಲ ಕರ್ನಾಟಕ ಸ್ಕೌಟ ಪರಿಷತ್ತಿಗೆ ನನ್ನನ್ನು ಬರಮಾಡಿಕೊಂಡಿದ್ದಕ್ಕಾಗಿ ನಾನು ಪರಿಷತ್ತಿನ ಮುಖಂಡರಿಗೆ ಕೃತಜ್ಞನಾಗಿದ್ದೇನೆ. ಕಾಮದಾರರು, ಸಾವುಕಾರರು, ಇನಾಮದಾರರು ಮುಂತಾದವರು ಈ ಪರಿಷತ್ತಿಗೆ ಬಂದದ್ದು ಆನಂದ ಜನಕವಾದ ಸಂಗತಿಯಾಗಿದೆ. ಕರ್ನಾಟಕದ ತರುಣರು ಸ್ಕೌಟ ಸೇವೆಯಂಥ ಸೇವೆಯನ್ನು ಕೈಕೊಳ್ಳುವದು ಒಳ್ಳೇದು. ಸ್ಕೌಟ ಮಾಸ್ತರರು ಸ್ಕೌಟಪದ್ಧತಿಗಳನ್ನು ಹಳ್ಳಿಗಳಲ್ಲಿಯೂ ಕೂಡ ಪ್ರಚಾರಮಾಡಿ ಹಳ್ಳಿಗಳನ್ನು ಸುಧಾರಿಸಲೆಂದು ನಾನು ಹಾರೈಸುತ್ತೇನೆ. ಸ್ಕೌಟ ಹುಡುಗರಿಗೆ ಕಾಣಿಕೆಗಳನ್ನು ನಾನೇ ಸಲ್ಲಿಸಬೇಕೆಂಬ ನಿಮ್ಮ ಬಿನ್ನಹವನ್ನು ನಾನು ಸಂತೋಷದಿಂದ ಪೂರೈಸುತ್ತೇನೆ."

ಅಖಿಲ ಕರ್ನಾಟಕದ ಸ್ಕೌಟರ್‍ರ್ಯಾಲಿಯು ಹೀಗೆ ಸರ್ವತೋಪರಿಯಾಗಿ ಯಶಸ್ವಿಯಾದದ್ದು ಆ ಕಾರ್ಯವನ್ನು ಕೈಕೊಂಡು ಮುಗಿಸಿದವರಿಗೆಲ್ಲರಿಗೂ ಭೂಷಣವಾದದ್ದು. ಇಂಥದೊಂದು ಸ್ಕೌಟ ಪರಿಷತ್ತು ಉತ್ತರ ಕರ್ನಾಟಕದ ಕೇಂದ್ರವೆನಿಸಿದ ಧಾರವಾಡ ನಗರದಲ್ಲಿ ನೆರೆದ ಮೂಲಕ ನಮ್ಮ ನಾಡಿನ ಜನರಿಗೆ ಸ್ಕೌಟರಾದವರ ಕಾರ್ಯಗಳೂ ಸ್ಕೌಟಿಂಗದ ಮಹತ್ವವೂ ಮನವರಿಕೆಯಾಗಿರುವವೆಂಬದರಲ್ಲಿ ಸಂದೇಹವಿಲ್ಲ. ಈ ಸಮ್ಮೇಲನದಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ತಯಾರಾಗುತ್ತಿರುವ ಸ್ಕೌಟರ ಸಂಖ್ಯೆಯು ತಕ್ಕಮಟ್ಟಿಗೆ ಇತ್ತು. ಇದು ಹೆಚ್ಚಾಗುವದು ಅತ್ಯವಶ್ಯವೆಂದೂ ಸ್ಕೌಟಿಂಗವು ನಮ್ಮ ನಾಡಿನ ಪ್ರತಿಯೊಂದು ಹಳ್ಳಿಯಲ್ಲಿಯೂ ನೆಲೆಗೊಂಡು ಹುಡುಗರಿಗೂ ಜನರಿಗೂ ಹಿತಾವಹವಾಗಿ ಪರಿಣಮಿಸಬೇಕೆಂದೂ ನಮ್ಮ ಲೋಕಪ್ರಿಯರಾದ ಶಿಕ್ಷಣ ಮಂತ್ರಿಗಳು ತಮ್ಮ ಭಾಷಣದಲ್ಲಿ ನುಡಿದಿರುವದರಲ್ಲಿ ಒಳ್ಳೇ ಆಶಯವಿರುವದು. ಸ್ಕೌಟಿಂಗದ ಮುಖ್ಯ ಉದ್ದೇಶವು ಯೋಗ್ಯತೆಯುಳ್ಳ ಭಾವೀ ನಾಗರಿಕರನ್ನು ಸಿದ್ಧಮಾಡುವದಿರುತ್ತದೆ. ಈ ಕಾರ್ಯವು ನೆರವೇರಬೇಕಾದರೆ ಹಳ್ಳಿಯ ಶಾಲೆಗಳಲ್ಲಿ ಸಣ್ಣ ವಯಸ್ಸಿನಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಲ್ಲಿ ಇದರ ಆರಂಭವಾಗುವದು ಅತ್ಯವಶ್ಯಕವಾದದ್ದು. ಇರಲಿ, ಧಾರವಾಡದಲ್ಲಿ ಮೂರುದಿನಗಳವರೆಗೆ ನಡೆದ ಸಮ್ಮೇಲನದಿಂದ ಈ ಶಿಕ್ಷಣ ಪದ್ಧತಿಯ ಬಗ್ಗೆ ಹಳ್ಳಿಗರ ಮನದಲ್ಲಿಯೂ ಕೆಲವು ವಿಚಾರಗಳು ತಲೆದೋರಿರುವವೆಂದು ಧಾರಾಳವಾಗಿ ಹೇಳಬಹುದು. ಈ ಸಮಯವನ್ನು ಸಾಧಿಸಿ ಸ್ಕೌಟ ಮಾಸ್ತರರಾದ ಪ್ರಾಥಮಿಕ ಶಿಕ್ಷಕರು ಅದರ ಉದ್ದೇಶಗಳನ್ನೂ ಕಾರ್ಯಕ್ರಮವನ್ನೂ ನಮ್ಮ ಜನರ ಮುಂದಿಟ್ಟು ಸಧ್ಯಕ್ಕಿಂತ ಹೆಚ್ಚು ಕಸುವಿನಿಂದ ಈ ಶಿಕ್ಷಣ ಕ್ರಮವು ರೂಢವಾಗುವಂತೆ ಪ್ರಯತ್ನಪಡುವರೆಂದು ನಾವು ನಂಬಿದ್ದೇವೆ.

ಈ ಬಗ್ಗೆ ಬರೆಯುವಾಗ ನಾವು ಈ ಸಂಧಿಗೆ ಲಂಡನದಿಂದ ಮುಂಬಯಿಗೆ ಬಂದು ಹಿಂದುಸ್ತಾನದ ಸ್ಕೌಟ ಸಂಸ್ಥೆಗಳ ಚಾಲಕರಿಗೆ ಸೂಚನೆಗಳನ್ನು ಕೊಟ್ಟ ಮಿ॥ ಜೆ. ಎಸ್. ವಿಲ್‌ಸನ್ ಇವರ ಭಾಷಣದ ಸಾರಾಂಶವನ್ನು ನಮ್ಮ ನಾಡಿನ ಸ್ಕೌಟ ಮಾಸ್ತರರ ವಿಚಾರಣೆಗಾಗಿಯೂ ಇತರ ಸಾಮಾನ್ಯ ಪ್ರಾಥಮಿಕ ಶಿಕ್ಷಕರಿಗಾಗಿಯೂ ಇಲ್ಲಿ ಕೊಡು ತ್ತೇನೆ. ಮಿ॥ ವಿಲ್‌ಸನ್ ಇವರು ಹತ್ತುವರುಷಗಳ ಹಿಂದೆ ಬಂಗಾಲದಲ್ಲಿ ಪೋಲೀಸ ಖಾತೆಯಲ್ಲಿ ದೊಡ್ಡ ಕೆಲಸದಲ್ಲಿದ್ದರು. ಇವರು ಅಧಿಕಾರ ನಿವೃತ್ತರಾದ ಬಳಿಕ ಲಂಡ ನಕ್ಕೆ ಹೋಗಿ ಅಲ್ಲಿವಾಸವಾಗಿದ್ದಾರೆ. ಹಿಂದುಸ್ತಾನದಲ್ಲಿ ಎಷ್ಟೋ ವರ್ಷಗಳವರೆಗೆ ಇವರು ಇದ್ದ ಮೂಲಕ ನಮ್ಮ ವಿದ್ಯಾರ್ಥಿಗಳಬಗ್ಗೆ ಹಾಗು ಸಾಮಾನ್ಯ ಜನರ ಬಗ್ಗೆ ಇವರಿಗೆ ಒಳ್ಳೇ ಜ್ಞಾನವಿದೆ. ಸದ್ಯಕ್ಕೆ ಇವರು ಸ್ಕೌಟಿಂಗದ ಕೇಂದ್ರವೆನಿಸಿದ ಲಂಡನದಲ್ಲಿ ಗಿಲ್‌ವೆಲ್ ಪಾರ್ಕ ಎಂಬಲ್ಲಿರುವ ಮುಖ್ಯ ಸಂಸ್ಥೆಯ ಕ್ಯಾಂಪ ಚೀಫರೆಂಬ ಒಳ್ಳೇ ಬಹು ಮಾನದ ಪದವಿಯಲ್ಲಿರುವರು. ಇವರ ಅಭಿಪ್ರಾಯಗಳೂ ಸೂಚನೆಗಳೂ ನಮಗೆ ಮಹ ತ್ವವಾದವು. ಇವರು ಹೇಳಿದ್ದೇನಂದರೆ ನಮ್ಮ ಹಿಂದುಸ್ತಾನದಲ್ಲಿ ಸ್ಕೌಟ ಶಿಕ್ಷಣದ ಅಸ್ತಿ ವಾರವನ್ನು ಸ್ಥಿರವಾಗಿ ಹಾಕಿದವರಲ್ಲಿ ಕೆಲ ದಿವಸಗಳ ಹಿಂದೆ ಪರಲೋಕವಾಸಿಗಳಾದ ಮಿಸೆಸ್ ಆನಿ ಬಿಸಂಟ ಇವರು ಒಬ್ಬರು; ಈ ಕಾರ್ಯದಲ್ಲಿ ಈ ಇಂಗ್ಲಿಷ ಮಹಿಳೆಯು ಮಾಡಿದಷ್ಟು ಪ್ರಯತ್ನವನ್ನು ಬೇರೆ ಯಾರೂ ಮಾಡಿಲ್ಲವೆಂದು ಧಾರಾಳವಾಗಿ ಹೇಳ ಬಹುದು. ಸ್ಕೌಟಿಂಗದ ಬಗ್ಗೆ ಇವರ ಅಭಿಪ್ರಾಯಗಳು ಒಳ್ಳೇ ವಿಸ್ತೃತವಾದವು. ಇತ್ತಲಾಗಿ ಸಂಕುಚಿತ ದೃಷ್ಟಿಯಿಂದ ಇದನ್ನು ಕುರಿತು ವಿಚಾರಿಸುವ ಒಲವು ಈ ನಮ್ಮ ದೇಶದವರಲ್ಲಿ ತಲೆದೋರಹತ್ತಿವೆ. ಇದೊಂದು ಶಿಕ್ಷಣಕ್ರಮವು. ಇವಕ್ಕೆ ದೇಶಕಾಲಗಳ ಮರ್ಯಾದೆಯಿಲ್ಲ. ಸ್ಕೌಟಿಂಗದಿಂದ ಇಂಗ್ಲಂಡ ಮೊದಲಾದ ದೇಶಗಳಿಗೆ ಆದ ಹಿತವೇ, ಹಿಂದುಸ್ತಾನದ ಜನರಿಗೂ ಆಗುವದೆಂಬ ಬಗ್ಗೆ ಸಂದೇಹವಿಲ್ಲ. ಈ ಮಾತನ್ನು ಹಿಂದು ಸ್ತಾನದಲ್ಲಿ ಕೆಲಸಮಾಡುತ್ತಿರುವ ಪ್ರತಿಯೊಬ್ಬ ಸ್ಕೌಟ ಮಾಸ್ತರನೂ ಸ್ಕೌಟನೂ ಲಕ್ಷ ದಲ್ಲಿಡತಕ್ಕದ್ದು.

ಸ್ಕೌಟ ಶಿಕ್ಷಣದ ಉದ್ದೇಶವನ್ನು ಕುರಿತು ಮಿ॥ ವಿಲ್‌ಸನ್‌ರವರು ಹೇಳಿದ್ದು:— ಈ ಶಿಕ್ಷಣದ ಮೂಲಕ ಮುಂದೆ ದೊಡ್ಡವರಾದಬಳಿಕ ವಿದ್ಯಾರ್ಥಿಗಳು ಒಳ್ಳೇ ನಾಗರಿಕ ರಾಗಬೇಕು. ಪರಾವಲಂಬಿಗಳಾಗದೆ ಸ್ವತಂತ್ರರೂ ಆತ್ಮವಿಶ್ವಾಸವುಳ್ಳವರೂ ಆಗತ ಕ್ಕದ್ದು. ಸಮಾಜ ಸೇವೆಯನ್ನು ಇವರಲ್ಲಿ ಬೇಕಾದವರು ಕೈಕೊಳ್ಳಬಹುದು. ತಮ್ಮ ನಾಡಿನ ಬಗ್ಗೆ ಮುಂದೆ ತಾವು ದೊಡ್ಡವರಾದಬಳಿಕ ತಮ್ಮ ಕೈಲಾದಷ್ಟುಗೆ ಪರಿಶ್ರಮ ಪಡಲಿಕ್ಕೆ ಬೇಕಾದ ಶಕ್ತಿಯೂ ಹುರುಪೂ ಅವರಲ್ಲಿ ಸಣ್ಣವರಿರುವಾಗಲೇ ತುಂಬಬೇಕು. ಇದು ಸಾಧ್ಯವಾಗಬೇಕಾದರೆ ಸ್ಕೌಟ ಶಿಕ್ಷಣವನ್ನು ಆರಂಭಿಸಿದ ಚಿಕ್ಕಮಕ್ಕಳಿಗೆ ಹಿಂದು ಸ್ತಾನದ ಮಹಾಪುರುಷರ ಸಾಹಸದ ಕರ್ತವ್ಯಗಳನ್ನೂ ಹಿಂದಾದ ಅವರ ಆಶೆಗಳನ್ನೂ

ಒಳಕೊಂಡ ಕಥೆಗಳನ್ನು ಹೇಳತಕ್ಕದ್ದು. ಇಂಗ್ಲಂಡದ ಚಿಕ್ಕಮಕ್ಕಳಿಗೆ ಆ ದೇಶದ ಮಹಾಪುರುಷರ ಚರಿತ್ರಗಳನ್ನು ಹೇಳಿಯೇ ಹುರಿದುಂಬಿಸುವದುಂಟು। ಹಿಂದುಸ್ಥಾನದ ಮಹಾನುಭಾವರ ಚರಿತ್ರಗಳನ್ನು ಇದಕ್ಕಾಗಿ ಈ ದೇಶದ ಜನರೇ ಬರೆಯತಕ್ಕದ್ದು. ಇಂಥ ಚರಿತ್ರಗಳನ್ನೊಳಗೊಂಡ ಪುಸ್ತಕಗಳನ್ನು ಈ ದೇಶದ ಬಾಲಸ್ಕೌಟರ ಕೈಯಲ್ಲಿ ಕೊಡ ತಕ್ಕದ್ದು.

ಈ ಸ್ಕೌಟ ಶಿಕ್ಷಣವು ನಮ್ಮ ಭರತಖಂಡಕ್ಕೆ ಸಂಬಂಧಿಸಿದ್ದು; ನಮ್ಮ ರಾಷ್ಟ್ರೀಯ ಕಲ್ಪನೆ ವಿಚಾರಗಳಿಂದ ಪ್ರೇರಿತವಾದದ್ದು ಎಂಬ ಭಾವನೆಯು ಎಲ್ಲರಲ್ಲಿ ಉಂಟಾಗುವದು ಮಹತ್ವವಾದದ್ದು. ಇದು ಕೈಗೂಡಬೇಕಾದರೆ ದೇಶದ ಸ್ಕೌಟ ಹುಡುಗರು ಆಡುವ ಆಟ ಮೊದಲಾದವು ಆಯಾ ನಾಡಿನ ಹುಡುಗರು ಹಳ್ಳಿಪಳ್ಳಿಗಳಲ್ಲಿ ಆಡುವಂಥವೇ ಇರ ಬೇಕು. ಇಂಗ್ಲಂಡದ ಹುಡುಗರು ಆಡುವ ಆಟಗಳನ್ನು ಇಲ್ಲಿಯ ಹುಡುಗರಿಂದ ಆಡಿ ಸುವದು ಅಷ್ಟು ಸಮರ್ಪಕವಲ್ಲ.

ಹಿಂದುಸ್ಥಾನದಲ್ಲಿ ಈ ಶಿಕ್ಷಣದ ಎಲ್ಲ ಅಂಗಗಳನ್ನು ಇಂಗ್ಲಂಡದಲ್ಲಿ ಸಾಗಿಸಿ ದಂತೆಯೇ ಸಾಗಿಸುವದು ವಿಹಿತವಿಲ್ಲ. ಉದಾಹರಣಾರ್ಥವಾಗಿ ಇಂಗ್ಲಂಡದ ಸ್ಕೌಟರು ಕ್ಯಾಂಪಮಾಡುವದಾದರೆ ಡೇರೆಗಳನ್ನು ಹೊಡಿಸಿ ಅಲ್ಲಿ ಕೆಲವು ದಿವಸ ವಾಸಮಾಡುವರು ಹಿಂದುಸ್ಥಾನದಲ್ಲಿ ಈ ಬಗೆಯ ಕ್ಯಾಂಪಪದ್ಧತಿಯು ಬೇಕಾಗಿಲ್ಲ; ಇದು ಈ ದೇಶದ ಪರಿ ಸ್ಥಿತಿಗೆ ಅವಶ್ಯವಾದದ್ದಲ್ಲ. ಕ್ಯಾಂಪ ಮಾಡತಕ್ಕ ಸ್ಥಳದಲ್ಲಿ ಅವಶ್ಯವಾದಂಥ ಗುಡಿಸಲು ಮೊದಲಾದವುಗಳನ್ನು ಕಟ್ಟಿಕೊಳ್ಳುವದು ಈ ದೇಶಕ್ಕೆ ಹೆಚ್ಚು ಸ್ವಭಾವಿಕವೆನಿಸುವದು.

ಸೇವೆ, ಜನಸೇವೆಯು ಸ್ಕೌಟಂಗದ ಸಾರವು ಎಂಬ ಶಿರೋಲೇಖದಲ್ಲಿ ಬೆಳಗಾವದ ಹೈಸ್ಕೂಲ ಹೆಡ್‌ಮಾಸ್ತರರೂ ಬೆಳಗಾವ ಜಿಲ್ಹೆಯ ಅಸಿಸ್ಟಂಟ ಡಿಸ್ಟ್ರಿಕ್ಟ ಸ್ಕೌಟ ಕಮಿಶ್ನರರೂ ಆದ ಶ್ರೀ. ಎಮ್. ರಾಮಬ್ರಹ್ಮ ಇವರು ವಿಚಾರಪೂರ್ಣವೂ ವ್ಯವಹಾರೋಪ ಯುಕ್ತವೂ ಆದ ಕೆಲವು ಸೂಚನೆಗಳನ್ನು ಸ್ಕೌಟಮಾಸ್ತರರಿಗಾಗಿಯೂ ವಿಶೇಷವಾಗಿ ಸ್ಕೌಟಂಗದಲ್ಲಿ ಹೆಚ್ಚಾಗಿ ಭಾಗತೆಗೆದುಕೊಳ್ಳುತ್ತಿರುವ ಶಿಕ್ಷಕರಿಗಾಗಿಯೂ ಕೊಟ್ಟಿರು ವರು. ಇವುಗಳನ್ನು ಕುರಿತು ಪ್ರಾಥಮಿಕ ಶಿಕ್ಷಕರು ಪೂರ್ಣವಿಚಾರಮಾಡಿ ಇವನ್ನು ತಮ್ಮ ನಿತ್ಯದ ಸ್ಕೌಟ ಶಿಕ್ಷಣದಲ್ಲಿ ಉಪಯೋಗದಲ್ಲಿ ತರುವರೆಂದು ನಾವು ಅಪೇಕ್ಷಿಸು ತ್ತೇವೆ. ಅವರು ಹೇಳುವದೇನಂದರೆ, ಬಹು ಜನರಿಗೆ ಸ್ಕೌಟ ಶಿಕ್ಷಣದ ಎಲ್ಲ ಅಂಗಗ ಳನ್ನು ಪರ್ಯಾಲೋಚಿಸಿ ಅದರಿಂದ ತಮ್ಮ ಊರ ಜನರಿಗಾಗಲಿ ದೇಶದ ಬಹುಜನರಿ ಗಾಗಲಿ ಆಗಬಹುದಾದ ಹಾಗು ಆಗುತ್ತಿರುವ ಲಾಭಗಳನ್ನು ತಿಳಿದುಕೊಳ್ಳುವದು ಸುಲ ಭವಿಲ್ಲ. ಜನಸೇವೆಯು ಈ ಶಿಕ್ಷಣದ ಒಂದು ಮಹತ್ವದ ಉದ್ದೇಶವಿರುವದಷ್ಟೇ. ಈ ಸಂಸ್ಥೆಯ ಕೆಲಸವು ಪರಿಣಾಮಕರವಾಗಿ ನಡೆದಿರುವದೆಂಬವನ್ನು ಆಳತೆಗಟ್ಟುವಾಗ

ನಮ್ಮ ಶಾಲೆಗಳಲ್ಲಿ ಸಿದ್ಧರಾಗುತ್ತಿರುವ ಸ್ಕೌಟರು ಎಷ್ಟರಮಟ್ಟಿಗೆ ಜನಸೇವೆಯನ್ನು ಮಾಡುತ್ತಿರುವರೆಂಬದನ್ನು ಇವರು ನೋಡುವವರುಂಟು. ಇನ್ನು ನಮ್ಮ ದೇಶದಲ್ಲಿಯ ಸ್ಕೌಟ ಟ್ರೂಪುಗಳು ಈ ದಿಶೆಯಲ್ಲಿ ಮಾಡುತ್ತಿರುವ ಕೆಲಸವನ್ನೂ ಇತರ ದೇಶಗಳ ಸ್ಕೌಟ ಟ್ರೂಪುಗಳ ಸೇವಾವೃತ್ತಿಯನ್ನೂ ಕುರಿತು ವಿಚಾರಿಸಿದರೆ ನಮ್ಮ ದೇಶದಲ್ಲಿ ಸ್ಕೌಟಿಂಗದ ಈ ಉದ್ದೇಶವು ಇತರ ದೇಶಗಳಲ್ಲಿಯಂತೆ ಸಮಾಧಾನಕರವಾಗಿ ನೆರವೇರುತ್ತಿರುವದಿಲ್ಲೆಂಬದು ಸ್ಪಷ್ಟವಾಗುವದು. ನಮ್ಮಲ್ಲಿಯ ಸ್ಕೌಟ ಮಾಸ್ತರರು ಸ್ಕೌಟಿಂಗದ ಬಗ್ಗೆ ಮಾಡುತ್ತಿರುವದನ್ನು ನೋಡಿದರೆ, ಟ್ರೂಪುಗಳನ್ನು ಏರ್ಪಡಿಸಿ ಪ್ರತಿಯೊಂದು ಟ್ರೂಪಿನವರಿಗೆ ಸ್ಕೌಟಯುನಿಫಾರ್ಮ (ಅಂಗಿ ಚಣ್ಣಗಳನ್ನು) ವನ್ನು ಹಾಕಿಕೊಳ್ಳಲಿಕ್ಕೂ ಸ್ಕೌಟರು ಕಲಿತು ಕುಶಲತೆಯನ್ನು ತೋರಿಸಬೇಕಾಗುವ ಒಂದೆರಡು ಕೆಲಸಗಳನ್ನು ಕಲಿಯಲಿಕ್ಕೂ ಮಾತ್ರ ಶಿಕ್ಷಣ ಕೊಡುತ್ತಿರುವರೆಂದು ಗೊತ್ತಾಗುವದು. ಈ ಹುಡುಗರಲ್ಲಿ ಫಸ್ಟ ಕ್ಲಾಸ ಸ್ಕೌಟ ರಾಗುವವರ ಸಂಖ್ಯೆಯು ಬಹಳ ಕಡಿಮೆಯಿರುವದು. ಈ ದೇಶದಲ್ಲಿ ಬಹುತರ ಟ್ರೂಪುಗಳ ಸ್ಕೌಟಮಾಸ್ತರರು ಪ್ರಾಥಮಿಕ ಹಾಗು ಮಾಧ್ಯಮಿಕ ಶಾಲೆಗಳ ಶಿಕ್ಷಕರಿರುವರು. ಪ್ರತಿಯೊಂದು ಟ್ರೂಪಿನಲ್ಲಿ ಪೆಟ್ರೋಲುಗಳನ್ನು ಮಾಡಿ ಪ್ರತಿಯೊಂದು ಪೆಟ್ರೋಲನ್ನು ಒಬ್ಬ ಮುಖಂಡನ ವಶಕ್ಕೆ ಕೊಟ್ಟು ಸ್ಕೌಟಿಂಗದ ಅನೇಕ ಅಂಶಗಳನ್ನು ತಮ್ಮ ಪೆಟ್ರೋಲಿನ ಸ್ಕೌಟುಗಳಿಂದ ಆಚರಣೆಯಲ್ಲಿ ತರುವಂತೆ ಮಾಡುವದು ಸ್ಕೌಟಮಾಸ್ತರರ ಕೆಲಸವಿರುತ್ತದೆ. ಆದರೆ ಶಿಕ್ಷಕರೇ ಸ್ಕೌಟಮಾಸ್ತರರಿರುವಮೂಲಕ ಈ ಕೆಲಸವು ಸಾಲೆಯಲ್ಲಿ ನಡೆಯುವ ಒಂದು ವಿಷಯದ ಶಿಕ್ಷಣದಂತೆ ಸಾಗುವದುಂಟು. ಈ ಮೂಲಕ ಸ್ಕೌಟಿಂಗ ಶಿಕ್ಷಣಕ್ಕೂ ವರ್ಗದ ಅಭ್ಯಾಸಕ್ಕೂ ಏನೂ ಹೆಚ್ಚುಕಡಿಮೆಯಿಲ್ಲೆಂದು ಸ್ಕೌಟ ಶಿಕ್ಷಣವನ್ನು ಪಡೆಯುತ್ತಿರುವ ಹುಡುಗರ ಭಾವನೆಯಾಗುವದುಂಟು. ಇವರು ಸ್ಕೌಟ ಶಿಕ್ಷಣವನ್ನು ಹೊಂದುವಾಗ ಸ್ಕೌಟ ಟೆಸ್ಟುಗಳ ಅಭ್ಯಾಸದ ಬಗ್ಗೆ ಮಾತ್ರ ವೇಳೆಯು ಉಪಯೋಗಿಸಲ್ಪಡುತ್ತದೆ. ತಮ್ಮ ಟ್ರೂಪಿನ ಒಂದು ಮಹತ್ವದ ಕರ್ತವ್ಯವು ಸೇವೆಗೆ ಯಾವಾಗಲೂ ಸಿದ್ಧವಿರುವದು ಇರುವದೆಂದು ಬಾಲಕರ ಮನದಲ್ಲಿ ಬರಲಿಕ್ಕೆ ಅನುವು ದೊರೆಯುವದಿಲ್ಲ.

ಊರ ಬಾಳುವೆಗೆ ಇಲ್ಲವೆ ದೇಶದ ಅನೇಕ ಸಾರ್ವಜನಿಕ ವ್ಯವಹಾರಗಳಿಗೆ ಸ್ಕೌಟರಿಂದ ಪ್ರತ್ಯಕ್ಷ ಸಹಾಯವು ದೊರೆತು ಅವು ಸುಸೂತ್ರವಾಗಿ ಸಾಗಲು ಇದರಿಂದ ಒಳ್ಳೇ ಪ್ರಯೋಜನವಾಗುವದೆಂದು ನಾಗರಿಕರಿಗೂ ಪಟ್ಟಣಗಳ ಜನರಿಗೂ ಮನವರಿಕೆಯಾಗದಿದ್ದರೆ ಈ ಸಂಸ್ಥೆಯ ಬಗ್ಗೆ ಅವರಲ್ಲಿ ಸಹಾನುಭೂತಿಯು ಉಂಟಾಗುವದು ಸುಲಭವಲ್ಲ. ಹೀಗಿರಲು ಸ್ಥಾನಿಕ ಸ್ಕೌಟ ಸಂಘಕ್ಕೆ ಜನರಿಂದ ಯಾವ ಸಹಾಯವು ದೊರೆಯದಂತಾಗುವದು. ಸ್ಕೌಟಿನ ದೃಷ್ಟಿಯಿಂದಲೇ ನಾವು ಈ ಮಾತನ್ನು ಕುರಿತು ವಿಚಾರಮಾಡೋಣ

ಅವರು ಈ ಮಹತ್ವವುಳ್ಳ ಸಂಘಕ್ಕೆ ಸೇರಿ ಅದರ ಒಂದು ಉದ್ದೇಶವನ್ನು ಸಫಲಗೊಳಿಸುತ್ತಿರುವೆವೆಂದು ಅವರಿಗೆ ಅನಿಸಬೇಕಾದರೆ, ಸ್ಕೌಟಮಾಸ್ತರರು ಅವರ ಮನಸಿನಲ್ಲಿ ಸ್ಕೌಟಿಂಗದ ಈ ತತ್ವವನ್ನು ಬಿಂಬಿಸತಕ್ಕದ್ದು. ಅವರ ಸುತ್ತಲಿರುವ ಸಮಾಜಕ್ಕೆ ಅವರಿಂದ ಸಣ್ಣ ಹಾಗು ದೊಡ್ಡ ಸಹಾಯವು ಪ್ರಸಂಗಬಿದ್ದಾಗ ಆಗಬೇಕೆಂದು ಅವರಿಗೆ ತಿಳಿಸಿ ಈ ಪರೋಪಕಾರದ ಕಡೆಗೆ ಅವರ ಮನಸ್ಸು ಹರಿಯಹತ್ತಬೇಕು. ಸ್ಕೌಟ ಆಟಗಳಲ್ಲಿಯೂ ಸ್ಕೌಟನು ಕುಶಲತೆಯನ್ನು ತೋರಿಸಬೇಕಾದ ಹಲವು ವ್ಯವಸಾಯಗಳಲ್ಲಿಯೂ ಎಷ್ಟು ಜಾಣ್ಮೆಯನ್ನು ತೋರಿಸಿಕೊಂಡರೂ ಪ್ರೌಢರಾಗುತ್ತಿರುವ ಯುವಕರು ಸ್ಕೌಟ ಟ್ರೂಪಿನಲ್ಲಿ ಸೇರಿದ್ದರ ಸಾರ್ಥಕ್ಯವು ಆಯಿತೆಂದು ಅವರಿಗೆ ಅನಿಸಲಾರದು. ಸಾಲೆಬಿಟ್ಟು ಸ್ಕೌಟ ಟ್ರೂಪುಗಳಿಂದ ಹೊರಗೆ ಬಂದು ಸ್ವತಂತ್ರರಾಗಿ ರೋವರ್ ಟ್ರೂಪಿನಲ್ಲಿ ಸೇರಿದಾಗ ತಮ್ಮಿಂದ ಸಮಾಜದ ಸೇವೆಯು ಪ್ರಸಂಗಾನುಸಾರವಾಗಿ ಆಗುತ್ತಿರುವದೆಂದು ಮನವರಿಕೆಯಾಗದ ರೋವರ-ಸ್ಕೌಟನು ನಿಜವಾದ ಸ್ಕೌಟನ ಕರ್ತವ್ಯವನ್ನು ಮಾಡಿದಂತಾಗದು.

ಇನ್ನು ತಮ್ಮ ಹಳ್ಳಿಯ ಇಲ್ಲವೆ ಊರ ಜನರ ಬಾಳುವೆಗೆ ನಿಕಟಸಂಬಂಧವನ್ನಿಟ್ಟುಕೊಂಡು ಸ್ಕೌಟನಂತೆ ಆಚರಿಸುವದೆಂದರೆ ಯಾವ ಕಾರ್ಯಗಳಲ್ಲಿ ಪ್ರವೃತ್ತರಾಗಬೇಕೆಂಬ ಬಗ್ಗೆ ಸ್ಕೌಟ ಮಾಸ್ತರರ ಕಲ್ಪನೆಗಳು ನಿಶ್ಚಿತವಿರುವದಿಲ್ಲ. ಈ ಮೂಲಕ ಅವರು ಒಳ್ಳೇ ತೊಂದರೆಯಲ್ಲಿ ಬೀಳುವರು. ತಮ್ಮ ನೇತೃತ್ವದಲ್ಲಿ ಸಿದ್ಧರಾಗುತ್ತಿರುವ ಸ್ಕೌಟರು ಸಾಮಾಜಿಕ ಸೇವೆಯನ್ನು ಯಾವ ಬಗೆಯಿಂದ ಸಾಧಿಸಬಹುದೆಂಬ ಬಗ್ಗೆ ಸ್ಕೌಟಮಾಸ್ತರರು ಸಂಶಯವೃತ್ತಿಯುಳ್ಳವರಾಗುವದು ಸ್ವಾಭಾವಿಕವು. ಈ ಬಗ್ಗೆ ಒಂದೆರಡು ಸೂಚನೆಗಳನ್ನು ನಾವು ಕೊಡುವೆವು. ಪ್ರತಿಯೊಬ್ಬ ಸ್ಕೌಟ ಬಾಲಕನಿಗೆ ತನ್ನ ಸಾಲೆಯ ಬಗ್ಗೆ ಅಳಲಿಯಸೇವೆಯನ್ನು ಮಾಡಲಿಕ್ಕೆ ಸ್ಕೌಟಮಾಸ್ತರನು ಉತ್ತೇಜನ ಕೊಡತಕ್ಕದ್ದು. ಹಾಗೆಯೇ ತನ್ನ ಸ್ಕೌಟ ಸಂಘದ ಬಗ್ಗೆಯೂ ನಿಷ್ಕಾಮವಾದ ಇಂಥ ಸೇವೆಯನ್ನು ಮಾಡಲು ಆತನು ಸಿದ್ಧನಿರಬೇಕು. ಸಾಲೆಯ ನೆರೆಯಲ್ಲಿ ಹರಕು ಕಾಗದ ಚೂರುಗಳು ಕಸ ಮೊದಲಾದವು ಬಿದ್ದಿರುವದುಂಟಷ್ಟೇ. ಇವನ್ನು ಸ್ಕೌಟನು ತೆಗೆದು ಒತ್ತಟ್ಟಿಗೆ ಹಾಕಿ ಬೆಂಕಿಹಚ್ಚಿ ಸಾಲೆಯ ಆವಾರವನ್ನು ಸ್ವಚ್ಛವಿಡಲಿಕ್ಕೆ ನೆರವಾಗಬಹುದು. ದಾರಿಯ ಮೇಲೆ ಇಲ್ಲವೆ ಆಟದ ಬೈಲಿನಲ್ಲಿ ಅಥವಾ ಹುಡುಗರು ಓಡಾಡುವ ಸ್ಥಳದಲ್ಲಿ ಮೊಳೆ ಕಾಜು ಮೊದಲಾದ ಅಪಾಯಕಾರಕವಾದ ಸಾಮಾನುಗಳು ಬಿದ್ದಿರುವದುಂಟು. ಅವನ್ನು ತೆಗೆದು ದೂರ ಒಗೆಯಬಹುದು. ತಿಳಿಗೇಡಿ ಹುಡುಗರು ಹಣ್ಣುಹಂಪಲಗಳನ್ನು ತಿಂದು ಅವುಗಳ ಸಿಪ್ಪೆಯನ್ನು ಅತ್ತಿತ್ತ ಚಲ್ಲಿಬಿಡುವದುಂಟು. ಇವುಗಳನ್ನು ತೆಗೆದೊಗೆಯಬಹುದು. ವರ್ಗದ ಇಲ್ಲವೆ ಸಾಲೆಯ ಗೋಡೆಗಳ ಮೇಲೆ ಇದ್ದಲು, ಖಡು ಇವುಗಳಿಂದ ಏನಾದರೂ ಬರೆಯುವ ದುಷ್ಟ ಚಟವು ಕೆಲವು ಹುಂಟ

ಹುಡುಗರಿಗೆ ಇರುವದು. ಇವುಗಳನ್ನು ಒರಿಸಿಬಿಡಬಹುದು. ಒಟ್ಟಿನ ಮೇಲೆ ಸಾಲೆಯ ಸಾಮಾನುಗಳನ್ನು ಜತನದಿಂದ ಕಾಯ್ದಿಡಲಿಕ್ಕೂ ಸಾಲೆಯ ಆವಾರವನ್ನು ಸ್ವಚ್ಛವಾಗಿಯೂ ಅಂದವಾಗಿಯೂ ಇಡಲಿಕ್ಕೂ ಸ್ಕೌಟರು ನೆರವಾಗಬಹುದು. ಈ ಸಣ್ಣಪುಟ್ಟ ಕೆಲಸಗಳೆಂದರೆ ಸಮಾಜ ಇಲ್ಲವೆ ಸಾರ್ವಜನಿಕ ಸೇವೆಯ ಆರಂಭದ ಕಾರ್ಯಗಳು.

ಹಳ್ಳಿಗಳ ಬಗ್ಗೆಯಂತೂ ಸ್ಕೌಟರು ಇನ್ನೂ ಹಲವು ಸೇವೆಗಳನ್ನು ಮಾಡಬಹುದು. ಹಳ್ಳಿಯ ಸಾಲೆಗಳ ಸಾಮಾನುಗಳನ್ನು ಕಾಯಲಿಕ್ಕೂ ಸಾಲೆಯ ಸುತ್ತಲಿನ ಆವಾರವನ್ನು ಹಸನಾಗಿಡಲಿಕ್ಕೂ ಬೇಕಾಗುವ ಹಣವು ಈ ಸಾಲೆಗಳ ವ್ಯವಸ್ಥಾಪಕರಿಗೆ ದೊರೆಯುವಂತಿರುವದಿಲ್ಲ. ಆದ್ದರಿಂದ ಅವುಗಳ ಸ್ಥಿತಿಯು ನೆಟ್ಟಗಿರುವದಿಲ್ಲ. ಈ ಕೆಲಸದಲ್ಲಿ ಸ್ಕೌಟ ವಿದ್ಯಾರ್ಥಿಗಳು ತಾವಾಗಿ ನೆರವಾದರೆ ಸಾಲೆಯ ವ್ಯವಸ್ಥಾಪಕರೂ ಹಳ್ಳಿಯ ಜನರೂ ಅವರನ್ನು ಹೌದೆನ್ನಲಿಕ್ಕೆ ಹಿಂಜರಿಯರು. ಹಳ್ಳಿಯ ಸಾಲೆಗಳಿಗೆ ಹುಡುಗರು ನಿಯಮಿತವಾಗಿ ಬರುವದಿಲ್ಲ. ಜಡ್ಡು ಮೊದಲಾದ ತಾಪತ್ರಯಗಳು ಹಳ್ಳಿಗಳಲ್ಲಿ ಬಹಳ. ಇವುಗಳಿಂದ ಪೀಡಿತರಾದವರಿಗೆ ಸದ್ಯಃಸಹಾಯವು ಅಲ್ಲಿ ದೊರೆಯುತ್ತಿರುವದಿಲ್ಲ. ತಮ್ಮ ಕಷ್ಟನಷ್ಟಗಳನ್ನು ವಿಚಾರಿಸುವವರೂ ಆ ಪ್ರದೇಶದಲ್ಲಿ ಕಡಿಮೆ. ಇಂಥ ಪರಿಸ್ಥಿತಿಯಲ್ಲಿ ಸ್ಕೌಟ ಟ್ರೂಪಿನವರು ತಮ್ಮ ಗೆಳೆಯರ ಮನೆಗೆ ಹೋಗಿ ಅವರ ತೊಂದರೆಗಳ ಬಗ್ಗೆ ವಿಚಾರಿಸಿ ಅವರಿಗೆ ನೆರವಾಗಲಿಕ್ಕೆ ಸಿದ್ಧತೆಯನ್ನು ವ್ಯಕ್ತಪಡಿಸುವದರಿಂದಲೂ ಎಷ್ಟೋ ಹಿತವಾಗುವದು. ಹಳ್ಳಿಯ ಗುಡಿಗುಂಡಾರಗಳನ್ನು ಸ್ವಚ್ಛವಿಡುವ ಕೆಲಸದಲ್ಲಿ ಸಾಲೆಯ ಸ್ಕೌಟ ಟ್ರೂಪಗಳು ಮುಂದುವರಿಯತಕ್ಕದ್ದು. ನೆರಳಿಗಾಗಿ ತಮ್ಮ ಊರಲ್ಲಿ ಇಲ್ಲವೆ ಊರಹೊರಗೆ ಕ್ರಮವಾಗಿ ಗಿಡಗಳನ್ನು ಹಚ್ಚಿ ಅವುಗಳಿಗೆ ನೀರೆರೆದು ಬೆಳಿಸಿ ತಮ್ಮ ಊರ ಜನರ ಸೌಕರ್ಯಕ್ಕೆ ಅವರು ನೆರವಾಗಬಹುದು. ಇಂಥ ಕೆಲಸಗಳನ್ನು ಸ್ಕೌಟರೆಲ್ಲರು ಒಟ್ಟುಗೂಡಿ ವ್ಯವಸ್ಥಿತವಾಗಿ ಮಾಡುವದರಿಂದ ಅವರಲ್ಲಿ ಮೇಲಾದ ನಾಗರಿಕತೆಯ ಲಕ್ಷಣಗಳು ಮೂಡುವವು- ಇಂಥವರು ಬೆಳೆದು ದೊಡ್ಡವ ಬಳಿಕ ಒಳ್ಳೇ ನಾಗರಿಕರಾಗುವರೆನ್ನಲು ಸಂದೇಹವಿಲ್ಲ.

ಪ್ರೌಢರಾದ ರೋವರ ಸ್ಕೌಟರು ತಮ್ಮ ಜಿಲ್ಹೆಗಳಲ್ಲಿ ಪ್ಲೇಗ, ಮಾರಿಕಾದಿ ಬೇನೆಗಳು ಹರಡಿದಾಗ ಜನಸೇವೆಯನ್ನು ಮಾಡಲು ಬೇಕಾದಷ್ಟು ತೆರವಿರುವದು. ಇವರು ಹಳ್ಳಿಪಳ್ಳಿಗಳಿಗೆ ಹೋಗಿ ಈ ಬೇನೆಗಳ ಕಾರಣಗಳ ಬಗ್ಗೆ ಹಳ್ಳಿಯ ಜನರಿಗೆ ತಿಳಿಸಿಕೊಟ್ಟು ಅಜ್ಞಾನದ ಮೂಲಕ ಜೀವಕ್ಕೆ ಎರವಾಗುತ್ತಿರುವ ನಮ್ಮ ದೇಶದ ಹಳ್ಳಿಯವರ ಪ್ರಾಣವನ್ನು ಉಳಿಸಲಿಕ್ಕೆ ನೆರವಾಗಬಹುದು. ರೋವರ ಸ್ಕೌಟರು- ಇವರು ಕಾಲೇಜುಗಳಲ್ಲಿ ಅಭ್ಯಾಸಮಾಡುತ್ತಿರುವ ಪ್ರೌಢ ವಿದ್ಯಾರ್ಥಿಗಳೇ ಇರಲಿ-

ಊರಲ್ಲಿ ಉದ್ಯೋಗಗಳಲ್ಲಿ ತೊಡಗಿದ ದೊಡ್ಡ ಮನುಷ್ಯರೇ ಇರಲಿ- ಅಜ್ಞರಾದ ತಮ್ಮ ನೆರೆಹೊರೆಯ ಜನರಿಗೆ ಓದುಬರಹಗಳನ್ನು ಕಲಿಸಬಹುದು.

ಇಲ್ಲಿ ನಾವು ಕೆಲವು ಸೂಚನೆಗಳನ್ನು ಮಾತ್ರ ಮಾಡಿರುವೆವು. ಹುರುಪುಳ್ಳ ಸ್ಕೌಟರು ಇನ್ನೂ ಹಲವು ಬಗೆಯಿಂದ ಜನರಿಗೆ ಉಪಯೋಗಬೀಳಬಹುದು. ಹೀಗೆ ಜನರ ಕಷ್ಟಗಳನ್ನು ಅಡಗಿಸುವದು ಪುಣ್ಯಮಯವಾದ ಕೆಲಸವೆಂದು ಅವರಿಗೆ ಮನಃಪೂರ್ವಕವಾಗಿ ಅನಿಸುವದು ಮಹತ್ವವಾದದ್ದು.

ಸ್ಕೌಟ ಟ್ರೂಪುಗಳು ಒಟ್ಟಾಗಿ ಹಳ್ಳಿಯ ಇಲ್ಲವೆ ಊರ ಜನರಿಗೆ ನೆರವಾಗಬಹುದಾದ ಬಗೆಯನ್ನು ಕುರಿತು ನಾವು ಬರೆದಿರುವೆವು. ಇದಲ್ಲದೆ ಪ್ರತಿಯೊಬ್ಬ ಸ್ಕೌಟನು ಅವನು ಬೇಕಾದ ವಯಸ್ಸಿನವನಿರಲಿ ಪ್ರತ್ಯೇಕವಾಗಿ ಪ್ರತಿ ದಿವಸ ಇತರರಿಗೆ ಸಹಾಯಮಾಡಬಹುದು. ಈ ಸಹಾಯವನ್ನು ಸಾರ್ವಜನಿಕ ಸ್ಥಳಗಳಲ್ಲಿ ಮಾಡಲಿ, ಜನರ ಮನೆಗಳಲ್ಲಿ ಮಾಡಲಿ- ಪ್ರತಿ ದಿನವೂ ತನ್ನಿಂದ ಬೇರೆಯವರಿಗೆ ಏನಾದರೊಂದು ತೀರ ಸಣ್ಣದಾದರೂ ಸಹಾಯವು ಆಗಲೆಂದು ಆಶಿಸಿ ಅದನ್ನು ಮಾಡಲಿಕ್ಕೆ ತತ್ಪರನಾದ ಸ್ಕೌಟನು ನಿಜವಾದ ಸ್ಕೌಟನು. ಇಂಥ ಸ್ಕೌಟನನ್ನೂ ಸ್ಕೌಟ ಟ್ರೂಪುಗಳನ್ನೂ ಜನರು ಹರಸುವದಲ್ಲದೆ ಸ್ಕೌಟ ಶಿಕ್ಷಣ, ಸ್ಕೌಟ ಸಂಸ್ಥೆಯ ಬಗ್ಗೆ ಅಭಿಮಾನಪಡುವರು.

ಆದರೆ ಸ್ಕೌಟರಲ್ಲಿ ಈ ಪರೋಪಕಾರದ ಕಾರ್ಯವನ್ನು ಸಾಧಿಸುವ ಬಗ್ಗೆ ಮೇಲಾಟದ ಕಲ್ಪನೆಯು ಮಾತ್ರ ಮಾಡಬಾರದು. ಜನರ ಸ್ತುತಿಯನ್ನು ಅಪೇಕ್ಷಿಸಿ ಅವರಿಗೆ ನೆರವಾಗುವದಕ್ಕಿಂತ ಪರಸಹಾಯವನ್ನೇ ಗುರಿಯಾಗಿಟ್ಟುಕೊಂಡು ದೇವರನ್ನು ನೆನಿಸಿ ತನ್ನ ಕೆಲಸವನ್ನು ಮಾಡುತ್ತಿರುವದು ಸ್ಕೌಟನಿಗೆ ಭೂಷಣವಾದದ್ದು.

ಜನಸೇವೆಯೂ ಸಮಾಜಹಿತಸಾಧನೆಯೂ ಸ್ಕೌಟನ ಒಂದು ಮುಖ್ಯ ಲಕ್ಷಣವೆಂದೂ ಚಿಕ್ಕ ವಯಸ್ಸಿನಲ್ಲಿಯೇ ಇದರ ಆರಂಭವು ಆಗತಕ್ಕದ್ದೆಂದೂ ಮೇಲೆ ಹೇಳಿದೆ. ಸಾಲೆಗಳಲ್ಲಿ ಸದ್ಯಕ್ಕೆ ಇದಕ್ಕೆ ಸಾಕಷ್ಟು ತೆರವು ಸಿಕ್ಕಿರುವದಿಲ್ಲವೆಂದೂ ಮೇಲೆ ಧ್ವನಿತವಾಗಿದೆ. ಈ ವಿಷಯವನ್ನು ಕುರಿತು ಬರೆಯುವಾಗ ಸ್ಕೌಟ ಮಾಸ್ತರರಿಗೆ ಒಂದು ಸೂಚನೆಯನ್ನು ಕೊಡುವದು ನಮಗೆ ತಕ್ಕದ್ದೆನಿಸುವದು. ತನ್ನ ಹುಡುಗನು ಬಾಯ್ ಸ್ಕೌಟ ಸಂಸ್ಥೆಯನ್ನು ಸೇರಿದ್ದರಿಂದ ಸುಧಾರಿಸುತ್ತಿರುವದೆಂದು ಕಂಡರೆ ಯಾವ ಜನಕನಿಗೆ ಸಂತೋಷವೆನಿಸಲಿಕ್ಕಿಲ್ಲ! ಆದರೆ ಈ ಸುಧಾರಣೆಯು ಮೊದಲು ಮನೆಯವರೊಡನೆ ಆತನ ದಿನದ ಆಚರಣೆಯಲ್ಲಿ ತೋರತಕ್ಕದ್ದು. "ಪ್ರೀಣಾತಿ ಸುಚರಿತ್ರೈಃ ಪಿತರಂ ಸ ಪುತ್ರಃ" ಎಂಬ ಸಂಸ್ಕೃತ ಸುಭಾಷಿತವನ್ನು ಸ್ಕೌಟ ಶಿಕ್ಷಕರು ಮರೆಯಲಾಗದು. ತಂದೆಯನ್ನು ಸುಚರಿತಗಳಿಂದ ಸಂತೋಷಪಡಿಸುವವನೇ ಪುತ್ರನು.

೨ಂದರೆ ಪುತ್ರನ ಮೊದಲಿನ ಕರ್ತವ್ಯವು ತಂದೆಯನ್ನು ತನ್ನ ಆಚರಣೆಯಿಂದ ಆನಂದ ಗೊಳಿಸುವದಿರುತ್ತದೆ. ಸಾಲೆಯಲ್ಲಿ ಗುರುಗಳು ಕೊಟ್ಟ ಅಭ್ಯಾಸವನ್ನು ಸಮಾಧಾನ ಕರವಾಗಿ ಮಾಡಿ ಮುಗಿಸುವದು ಆತನ ಎರಡನೆಯ ಕರ್ತವ್ಯವಿರುತ್ತದೆ. ಸಮಾಜವು, ಅದರಲ್ಲಿಯೂ ಅಜ್ಞರಿಂದ ತುಂಬಿದ ಸಮಾಜವು ಸ್ಕೌಟನೆಂದಕೂಡಲೆ ತನ್ನ ಸೇವಕ ನೆಂಬ ಭಾವನೆಯಿಂದ ಹೊತ್ತುವೇಳೆಗಳನ್ನು ನೋಡದೆ ಆತನ ಸೇವೆಯನ್ನು ಅಪೇಕ್ಷಿಸ ಬಹುದು. ಹೀಗೆ ಸಾಲೆಯನ್ನು ದುರ್ಲಕ್ಷಿಸಿ ಸಮಾಜಸೇವೆಗೆ ನಿಲ್ಲುವದು ಸ್ಕೌಟನ ಕರ್ತವ್ಯ ವಲ್ಲ; ಇದಕ್ಕೆ ಉತ್ತೇಜನಕೊಡುವದೂ ಸ್ಕೌಟ ಮಾಸ್ತರನ ಕೆಲಸವಲ್ಲ. ತಾಯ್ತಂದೆ ಗಳ ಸಮ್ಮತಿಯಿಲ್ಲದೆ ಸ್ಕೌಟರನ್ನು ಬೇಕಾದಾಗ ಬೇಕಾದ ಕೆಲಸಕ್ಕೆ ಕರದೊಯ್ಯುವ ಸ್ಕೌಟಮಾಸ್ತರನು ಸ್ಕೌಟಸಂಸ್ಥೆಗೂ ಸ್ಕೌಟ ವಿದ್ಯಾರ್ಥಿಗೂ ನೆರವಾಗುತ್ತಿರುನೆಂದು ನಾವು ಎಣಿಸುವದಿಲ್ಲ.

ಸ್ತ್ರೀ ಧರ್ಮ

ಕವಿ:— ಎಸ್. ಬಿ. ಮುಸಳಿ ಮಾಸ್ತರ ಶಾಲಾ ಅಹೇರಿ ತಾ. ವಿಜಾಪೂರ.

ಕಮಲೆ:—ನಾರಿಮಣಿಯೆ ನೀ ! ಬಾರೆ ಸುಮತಿ ಬಾ ।
॥ ಶ. ಪ.॥ ದೂರದಿ ಬಂದಿಹೆ ಮಗಳೇ ಬಾ ॥
ದೇವರ ದಯದಿಂ ನೀವೆಲ್ಲರು ನಾಂ ।
ಕೋರಿದ ಕ್ಷೇಮದೊಳಿರಬಹುದಾ ॥ ೧ ॥

ಸುಮತಿ:—ಬಂದೆನು ತಾಯಿಯೆ ವಂದಿಸೆ ಕಮಲೇ ।
॥ಶ. ಪ.॥ ಬಂದೆನು ನಿನ್ನನು ಕಾಂಬುದಕೌ ॥
ಎಂದಿನ ತೆರ ನೀ ಸಂದೇಹ ಕ್ಷೇಮದ ।
ಲಿಂದು ಇರುವಿಯೋ ನಮ್ಮಾನೀ ॥ ೨ ॥

ಕಮಲೆ:—ಪಾದವ ತೊಳೆದೀ ಹಾದಿಯ ದಣಿವಿನ ।
॥ಶ. ಪ.॥ ಬಾಧೆಯ ನೀಗಿಸು ಮಗಳೇ ನೀ ॥
ಆದರದಿಂದಲಿ—ಮೋದವ ಬೀರುತ ।
ಹಾದಿಯ ನಡೆಯುತ ಬಂದ್ಯಾಕೌ ॥ ೩ ॥

ಸುಮತಿ:—ವಂದಿಸುವೆನು ನಾ— ಇಂದು ಮುಖಿಯ ಬಲು !
॥ಶ. ಪ.॥ ಚಂದದಿ ಪೇಳೌ ಕಮಲೇ ನೀ ॥

ಬಂದೆನು ತಿಳಿಯಲು । ಚಂದದಿ ನಿನಗೆ ।
ಬಂದದೊಡ್ಡತನದಂದವನು ॥ ೪ ॥

ಕಮಲೆ:—ಯಾವ ಸ್ಥಿತಿಯನು । ಯಾವ ಪದವಿಯನು ।
॥ಶ. ಷ.॥ ಯಾವ ತರದಿ ನಾ ಹೊಂದಿದೆನೌ ॥ ೫ ॥

ಸುಮತಿ:—ಶಾಂತಿಯಲಿ ನೀ ಚಂದ್ರನಂತೆಯೇ ।
॥ಭಾ. ಷ.॥ ಕಾಂತಿಯಲಿ ನೀ ಸೂರ್ಯನಂತೆಯೇ ।
ಭ್ರಾಂತಿಗೊಳ್ಳುವ ತೆರದಿ ನೀನತಿ ಮೋದ-ಗೊಳಿಸುವೆಯೇ ॥
ಕಾಂತೆ ಕೇಳೌ ಮತ್ತೆ ಹೇಳುವೆ ।
ನಾಂತು ಎಸೆಯುವಿ ದಿವ್ಯ ವಸ್ತ್ರವ ।
ಶಾಂತವಾತರು ಪೂಜೆಗೈವರು ನಿರುತ ನಿನ್ನನ್ನು ॥ ೬ ॥

ಕಮಲೆ:—ಮಗಳೆ ಇವನೀ ಕೇಳಿದುದರಿಂ ।
॥ಭಾ. ಷ.॥ ಜಗದಿ ನಾನತಿ ಧನ್ಯಳಾದೆನ್ ।
ಜಗದಿ ಪೆಣ್ಮಕ್ಕಳಿಗೆ ತಿಳುಹಲು ಮನದಿ ಆಶಿಸುವೇ ॥
ಮಗಳೆ ನೀನತಿ ಯೋಗ್ಯಳಾಗುವಿ ।
ಸುಗುಣೆ ನೀನೇ ಮಾನ್ಯಳಾಗುವಿ ।
ಮಗಳೆ ನಿನ್ನಯ ಹೆಸರು ನಿನಗತಿ ಒಪ್ಪುತಿಹದಮ್ಮಾ ॥ ೭ ॥

ಸುಮತಿ:—ಉನ್ನತದ ಪದವಿಯು । ನಿನ್ನು ಬಯಸಿದರೆ ।
॥ಶ. ಷ.॥ ನಿನ್ನೊಲು ನನಗೂ ದೊರೆಯುವದೇ ॥
ಚನ್ನೆಯು ನಿನ್ನಯು ಸನ್ನುತ ನಡೆಗಳ ।
ನಿನ್ನು ತಿಳುಹು ನೀನನ್ನಮ್ಮಾ ॥ ೭ ॥

ಕಮಲೆ:—ಮಗಳೆ ನಿಜವಿದು ಕೇಳು ಸುಮತಿಯೇ ।
॥ಭಾ. ಷ.॥ ಜಗದೊಳಗೆ ನಾ ನಿರುವ ಪರಿಯಂ ।
ಬಗೆದು ಹೇಳುವೆ ಮುದದಿ ಕೇಳೌ ಸ್ತ್ರೀಯ ಧರುಮಗಳ ॥ ೫ ॥
ಯಾವದೇವರ ಕಾಣಲಿಲ್ಲವು ।
ಯಾವ ತೀರ್ಥದಿ ಮಿಾಯಲಿಲ್ಲವು ।
ಯಾವ ವ್ರತ ಉಪವಾಸಗಳ ನಾನರಿಯೆ ತಿಳಿ ಮಗಳೇ ॥
ಆಯದೊಳು ನಾ ದಾನಧರ್ಮವ ।
ನೀಯಲಿಲ್ಲವು ನಿರುತ ಗಂಡನ ।
ಕಾಯಮನಗಳ ತೋಷಬಡಿಸುತಲಿರುವೆ ಮುದದಿಂದ ॥ ೮ ॥

ಸುಮತಿ:— ಏನ ಹೇಳುವೆ ನೀನು ಈ ಬಗೆ ।
॥ಭಾ. ಷ.॥ ತಾನೆ ಬಂದುದೆ ಇಂಥ ಪದವಿಯು ।
ಏನಿದಚ್ಚರಿ ಯೆನ್ನ ಹೇಳುವೆ ನಿಜವ ಪೇಳಮ್ಮ ॥

ಕಮಲೆ:— ನಾನು ಹೇಳುವದನ್ನು ಕೇಳೌ ।
॥ಭಾ. ಷ.॥ ಮಾನವತಿ ನೀ ನಡುವೆ ಬಾಯನು ।
ಏನು ಕಾರಣ ಹಾಕಿ ಕೆಡುಸುವಿ ನಡೆದ ವಿಷಯವನು ॥ ೯ ॥

ನನ್ನ ಗಂಡನಕೂಡ ನಾನತಿ ।
ಉನ್ನತದ ಭಕ್ತಿಯೊಳು ಸಂತತ ।
ಬನ್ನ ಬಡಿಸದೆ ವಾದಹಾಕದೆ ಸೌಮ್ಯಳಾಗಿರುವೇ ॥
ಇನ್ನು ಗಂಡನು ಮನೆಗೆ ಬಂದರೆ ।
ಸನ್ನುತದನಗೆ ಮೊಗದೊಳಾತಗೆ ।
ನನ್ನ ಶಕ್ತಿಗೆ ಮೀರಿಯಾದರಿಸುವೆನು ನಿಜದಿಂದ ॥ ೧೦ ॥

ಸಿಟ್ಟಿಗೆದ್ದಾ ಚಿಹ್ನಗಳು ತಾಂ ।
ಗುಟ್ಟುದೋರುತ ಕಣ್ಗೆ ಬಿದ್ದರೆ ।
ಗಟ್ಟಿಹೇಳುವೆ, ಮಗಳೆ-ಕೇಳೌ ಮೌನದಿಂದಿರುವೆ ॥
ಸಿಟ್ಟಿನೊಳುತಾಗಂಡನೊದೆದರೆ ।
ಗಟ್ಟಿಯಾಗಾ ಪಾದಕೆರಗುತ ।
ತಟ್ಟನಾತನ ಸಿಟ್ಟು ಇಳಿಯುವ ತೆರವ ಮಾಡುವೆನು ॥ ೧೧ ॥

ಗಂಡನುಣದೇ ಉಣ್ಣಲಾರೆನು ।
ಗಂಡ ಮುಟ್ಟದ ಒಡವೆ ಮುಟ್ಟೆನು ।
ಗಂಡಗರಿಪದೆ ನಾನು ಮಾಡೆನು ಯಾವ ಕಾರ್ಯಗಳ ॥
ಗಂಡನೂರಿಗೆ ಹೋದಕಾಲದಿ ।
ಕಂಡಕಂಡಾ ಸೊಗಸುಗಳನಾಂ ।
ತುಂಡ ಹೆಂಗುಸಿನಂತೆಯೆಂದೂ ಮಾಡಲಾಶಿಸೆನು ॥ ೧೨ ॥

ಸುಮತಿ:— ಸೊಗಸಿನರ್ಥವ ನಿಲ್ಲಿ ಕೇಳಲು ।
॥ಭಾ. ಷ.॥ ಬಗೆದು ಬಾಯನು ನಡುವೆ ಹಾಕುವೆ ।
ನಗೆಮೊಗದಿ ಹೇಳೆನಗೆ ತಾಯಿಯೆ ನೀನು ಮುದದಿಂದ ॥ ೩ ॥

ಕಮಲೆ:— ಅರಿಯಲಾರದ ವಿಷಯಗಳ ನೀಂ ।
॥ಭಾ. ಷ.॥ ತಿರುಗಿ ಕೇಳಲು ಅಂಜಬೇಡೌ ।
ಮರಳಿ ಹೇಳುವೆ ಸರ್ವ ವಿಷಯವ ನಿನಗೆ ತಿಳಿವಂತೆ ॥
ವರಪತಿಯು ಬೇರೂರ್ಗೆ ಪೋಗಲು ।
ಧರಿಸೆನರಿಷಿಣ ಕಾಡಿಗೆಯ ಕೇಳ್ ॥
ಇರಿಸೆನಾ ಸುಮತಿಲಕ ವಸನಾಭರಣ ವಸ್ತುಗಳ ॥

ಗಂಡನೂರಿಗೆ ಹೋದುದನು ನಾ ।
ಕಂಡು ತಲೆಯನು ಬಾಚಿಕೊಳ್ಳೆನು ।
ದಿಂಡೆ ಹೆಂಗುಸಿನಂತೆ ಎಂದೂ ಎರೆದುಕೊಳಲಾರೆ ॥
ಕಂಡ ಶೀರೆಯ ನುಟ್ಟು ಸವಿಸವಿ ।
ತಿಂಡಿಗಳ ಸವಿಸವಿದು ತೇಗುತ ।
ಕಂಡ ಮನೆಮನೆ ತಿರುಗಿ ಕಾಲವ ಕಳೆಯಲಾಶಿಸೆನು ॥ ೧೪ ॥

ಸುಮತಿ:— ಪತಿಯ ಸೇವೆಯ ಹೊರತು ಮಿಕ್ಕಾ ।
॥ ಭಾ. ಷ.॥ ಸತಿಯ ನಡತೆಗಳಾವವಿರುವವು ।
ಸತಿಕುಲಕೆ ಪಾವನೆಯು ಯೆನಿಸುವ ಧರ್ಮಹೇಳಮ್ಮ ॥
ಚತುರೆ ಕೇಳೌ; ಇನಿತರಿಂದಲಿ ।
ಸತಿಯ ಕಾರ್ಯವು ತೀರಲಿಲ್ಲವು ।
ಸತತನಾಂ ಮನೆಬಳಗದವರನು ತೋಷಬಡಿಸುವೆನು ॥ ೧೫ ॥

ಅತ್ತೆ ಮಾವರ ಮಾತು ಮೀರದೆ ।
ನಿತ್ಯ ಮೈದುನ-ಭಾವರೊಡನಾ ।
ನತ್ಯಧಿಕ ಮರಿಯಾದೆಯಿಂದಲಿ ಸತತವಿರುತಿಹೆನು ॥
ಮತ್ತೆ ಅತ್ತಿಗೆ ನಾದಿನಿಯರೊಳು ।
ಅತ್ಯಧಿಕ ಮಮತೆಯನು ತೋರುತ ।
ಸತ್ಯದಿಂದಲಿ ತಿಳಿದು ನಡೆಯುವೆ ನುಳಿದ ಜನರೊಡನೇ ॥ ೧೬ ॥

ಮನೆಗೆ ಬಂದಿಹ ಅತಿಥಿಗಳಿಗಾ ।
ಮನದಿ ಗಂಡನ ಆಜ್ಞೆಯನ್ನುತೆ ।
ನೆನೆದು ಮಾಡುವೆನುಚಿತ ಆಹಾರಾದಿ ಕಾರ್ಯಗಳ ॥ ೧೭ ॥

ಸುಮತಿ:— ಪರರೊಡನೆ ನಾ ನಡೆವ ನಡತೆಯು ।
॥ಭಾ॰ ಷ॥ ನಿರದೆ ಪೇಳಿದಿ ನನಗೆ ಮುದದಿಂ ।
ಭರದಿ ಹೇಳೌ ಆತ್ಮಶುದ್ಧಿಯ ನಡತೆಗಳನಿನ್ನು
ಕಮಲೆ:— ಪರರ ಸಂಗಡ ಹೆಚ್ಚು ಮಾತನು ।
॥ಭಾ. ಷ॥ ಬರಿದೆ ಆಡುತ ಹೊತ್ತುಗಳೆಯೆನು ।
ಅರಿಯೆಗಟ್ಟಿಸಿ ನಗುವ ನಗೆಯನು ನಾನು ಎಂದೆಂದೂ ॥ ೧೭ ॥
ಸಿಟ್ಟಿಸಿಡುಕುಗಳನ್ನು ಅರಿಯೆನು ।
ಕೆಟ್ಟ ಕೆಲಸಗಳನ್ನು ಮಾಡೆನು ।
ಬಿಟ್ಟು ಕಳೆದೆನು ಚಾಡಿ ಹೇಳುವದನ್ನು ತಿಳಿ ಮಗಳೇ ।
ಕಟ್ಟಿ ಒಗೆದೆನು ಸುಳ್ಳುಮಾತನು ।
ಗಟ್ಟಿಹೇಳುವೆ ಯಾರ ಮನಕೂ ।
ಪೆಟ್ಟುಹತ್ತುವ ಪರರು ನೋಯುವ ಕೆಲಸನಾನರಿಯೆ ॥ ೧೮ ॥
ನಿತ್ಯ ನಸುಕಿನಲೆದ್ದು ಗಂಡನಿ ।
ಗತ್ಯಧಿಕ ವಿನಯದಲಿ ವಂದಿಸಿ ।
ಮತ್ತೆ ಗುರುಹಿರಿಯರಿಗೆ ನಮಿಸುತ ದೇವಗೆರಗುವೆನು ।
ನಿತ್ಯಕಾರ್ಯಗಳೆಲ್ಲ ತೀರಲು ।
ಹೊತ್ತು ಕಳೆಯದೆ ಸತತ ನೂಲುವೆ ।
ಚಿತ್ತದಲಿ ನಾ ಪ್ರಾಣಕಾಂತನ ಮುದದಿ ನೆನೆಯುತಿಹೇ ॥ ೧೯ ॥
ಸುಮತಿ:— ಆತ್ಮಶುದ್ಧಿಯನರಿಯೆ ಆ ಪರ ।
॥ಭಾ. ಷ॥ ಮಾತ್ಮ ಸೇವೆಯ ಮಾಡಬಹುದೇ ಮ ।
ಹಾತ್ಮಳಾಗುವ ಪರಿಯೆ ತಿಳಿಸೌ ತಾಯೆ ದಯದಿಂದೆ ।

* * *
* * *
* * *

ಕಮಲೆ:— ಸುಮತಿ ನಿನ್ನಯ ಪ್ರಶ್ನೆಗುತ್ತರ ।
॥ಭಾ. ಷ॥ ರಮಿಸಿಹೇಳುವೆ ಕೇಳು ಮಗಳೇ ।
ವಿಮಳದೇಶದ ಸೇವೆಯೇ ಪರಮಾತ್ಮ ಸೇವೆಯದು ॥

* * *
* * *
* * *

ಕಮಲೆ:— ಅರಿಯಲಾರದ ವಿಷಯಗಳ ನೀಂ ।
॥**ಭಾ. ಷ.**॥ ತಿರುಗಿ ಕೇಳಲು ಅಂಜಬೇಡೌ ।
ಮರಳಿ ಹೇಳುವೆ ಸರ್ವ ವಿಷಯವ ನಿನಗೆ ತಿಳಿವಂತೆ ॥
ವರಪತಿಯು ಬೇರೂರ್ಗೆ ಪೋಗಲು ।
ಧರಿಸೆನರಿಷಿಣ ಕಾಡಿಗೆಯ ಕೇಳ್ ॥
ಇರಿಸೆನಾ ಸುಮತಿಲಕ ವಸನಾಭರಣ ವಸ್ತುಗಳ ॥

ಗಂಡನೂರಿಗೆ ಹೋದುದನು ನಾ ।
ಕಂಡು ತಲೆಯನು ಬಾಚಿಕೊಳ್ಳೆನು ।
ದಿಂಡೆ ಹೆಂಗುಸಿನಂತೆ ಎಂದೂ ಎರೆದುಕೊಳಲಾರೆ ॥
ಕಂಡ ಶೀರೆಯ ನುಟ್ಟು ಸವಿಸವಿ ।
ತಿಂಡಿಗಳ ಸವಿಸವಿದು ತೇಗುತ ।
ಕಂಡ ಮನೆಮನೆ ತಿರುಗಿ ಕಾಲವ ಕಳೆಯಲಾಶಿಸೆನು ॥ ೧೪ ॥

ಸುಮತಿ:— ಪತಿಯ ಸೇವೆಯ ಹೊರತು ಮಿಕ್ಕಾ ।
॥ **ಭಾ. ಷ.**॥ ಸತಿಯ ನಡತೆಗಳಾವವಿರುವವು ।
ಸತಿಕುಲಕೆ ಪಾವನೆಯು ಯೆನಿಸುವ ಧರ್ಮಹೇಳಮ್ಮ ॥
ಚತುರೆ ಕೇಳೌ; ಇನಿತರಿಂದಲಿ ।
ಸತಿಯ ಕಾರ್ಯವು ತೀರಲಿಲ್ಲವು ।
ಸತತನಾಂ ಮನೆಬಳಗದವರನು ತೋಷಬಡಿಸುವೆನು ॥ ೧೫ ॥

ಅತ್ತೆ ಮಾವರ ಮಾತು ಮೀರದೆ ।
ನಿತ್ಯ ವೈದುನ-ಭಾವರೊಡನಾ ।
ನತ್ಯಧಿಕ ಮರಿಯಾದೆಯಿಂದಲಿ ಸತತವಿರುತಿಹೆನು ॥
ಮತ್ತೆ ಅತ್ತಿಗೆ ನಾದಿನಿಯರೊಳು ।
ಅತ್ಯಧಿಕ ಮಮತೆಯನು ತೋರುತ ।
ಸತ್ಯದಿಂದಲಿ ತಿಳಿದು ನಡೆಯುವೆ ನುಳಿದ ಜನರೊಡನೇ ॥ ೧೬ ॥

ಮನೆಗೆ ಬಂದಿಹ ಅತಿಥಿಗಳಿಗಾ ।
ಮನದಿ ಗಂಡನ ಆಜ್ಞೆಯನ್ನಾತೆ ।
ನೆನೆದು ಮಾಡುವೆನುಚಿತ ಆಹಾರಾದಿ ಕಾರ್ಯಗಳ ॥ ೧೭ ॥

ಸುಮತಿ:— ಪರರೊಡನೆ ನಾ ನಡೆವ ನಡತೆಯು ।
॥ಭಾ. ಷ॥ ನಿರದೆ ಪೇಳಿದಿ ನನಗೆ ಮುದದಿಂ ।
ಭರದಿ ಹೇಳೌ ಆತ್ಮಶುದ್ಧಿಯ ನಡತೆಗಳನಿನ್ನು
ಕಮಲೆ:— ಪರರ ಸಂಗಡ ಹೆಚ್ಚು ಮಾತನು ।
॥ಭಾ. ಷ॥ ಬರಿದೆ ಆಡುತ ಹೊತ್ತುಗಳೆಯೆನು ।
ಅರಿಯೆಗಟ್ಟಿಸಿ ನಗುವ ನಗೆಯನು ನಾನು ಎಂದೆಂದೂ ॥ ೧೭ ॥
ಸಿಟ್ಟುಸಿಡುಕುಗಳನ್ನು ಅರಿಯೆನು ।
ಕೆಟ್ಟ ಕೆಲಸಗಳನ್ನು ಮಾಡೆನು ।
ಬಿಟ್ಟು ಕಳೆದೆನು ಚಾಡಿ ಹೇಳುವದನ್ನು ತಿಳಿ ಮಗಳೇ ।
ಕಟ್ಟಿ ಒಗೆದೆನು ಸುಳ್ಳುಮಾತನು ।
ಗಟ್ಟಿಹೇಳುವೆ ಯಾರ ಮನಕೂ ।
ಪೆಟ್ಟುಹತ್ತುವ ಪರರು ನೋಯುವ ಕೆಲಸನಾನರಿಯೇ ॥ ೧೮ ॥
ನಿತ್ಯ ನಸುಕಿನಲೆದ್ದು ಗಂಡನಿ ।
ಗತ್ಯಧಿಕ ವಿನಯದಲಿ ವಂದಿಸಿ ।
ಮತ್ತೆ ಗುರುಹಿರಿಯರಿಗೆ ನಮಿಸುತ ದೇವಗೆರಗುವೆನು ।
ನಿತ್ಯಕಾರ್ಯಗಳೆಲ್ಲ ತೀರಲು ।
ಹೊತ್ತು ಕಳೆಯದೆ ಸತತ ನೂಲುವೆ ।
ಚಿತ್ತದಲಿ ನಾ ಪ್ರಾಣಕಾಂತನ ಮುದದಿ ನೆನೆಯುತಿಹೇ ॥ ೧೯ ॥
ಸುಮತಿ:— ಆತ್ಮಶುದ್ಧಿಯನರಿಯೆ ಆ ಪರ ।
॥ಭಾ. ಷ॥ ಮಾತ್ಮ ಸೇವೆಯ ಮಾಡಬಹುದೇ ಮ ।
ಹಾತ್ಮಳಾಗುವ ಪರಿಯ ತಿಳಿಸೌ ತಾಯೆ ದಯದಿಂದೆ ।

* * *
* * *
* * *

ಕಮಲೆ:— ಸುಮತಿ ನಿನ್ನಯ ಪ್ರಶ್ನೆಗುತ್ತರ ।
॥ಭಾ. ಷ॥ ರಮಿಸಿಹೇಳುವೆ ಕೇಳು ಮಗಳೇ ।
ವಿಮಳದೇಶದ ಸೇವೆಯೇ ಪರಮಾತ್ಮ ಸೇವೆಯದು ॥

* * *
* * *
* * *

ಕಮಲೆ:— ಅರಿಯಲಾರದ ವಿಷಯಗಳ ನೀಂ ।
॥ಭಾ. ಷ.॥ ತಿರುಗಿ ಕೇಳಲು ಅಂಜಬೇಡೌ ।
ಮರಳಿ ಹೇಳುವೆ ಸರ್ವ ವಿಷಯವ ನಿನಗೆ ತಿಳಿವಂತೆ ॥
ವರಪತಿಯು ಬೇರೂರ್ಗೆ ಪೋಗಲು ।
ಧರಿಸೆನರಿಷಿಣ ಕಾಡಿಗೆಯ ಕೇಳ್ ॥
ಇರಿಸೆನಾ ಸುಮತಿಲಕ ವಸನಾಭರಣ ವಸ್ತುಗಳ ॥

ಗಂಡನೂರಿಗೆ ಹೋದುದನು ನಾ ।
ಕಂಡು ತಲೆಯನು ಬಾಚಿಕೊಳ್ಳೆನು ।
ದಿಂಡೆ ಹೆಂಗುಸಿನಂತೆ ಎಂದೂ ಎರೆದುಕೊಳಲಾರೆ ॥
ಕಂಡ ಶೀರೆಯ ನುಟ್ಟು ಸವಿಸವಿ ।
ತಿಂಡಿಗಳ ಸವಿಸವಿದು ತೇಗುತ ।
ಕಂಡ ಮನೆಮನೆ ತಿರುಗಿ ಕಾಲವ ಕಳೆಯಲಾಶಿಸೆನು ॥ ೧೪ ॥

ಸುಮತಿ:— ಪತಿಯ ಸೇವೆಯ ಹೊರತು ಮಿಕ್ಕಾ ।
॥ ಭಾ. ಷ.॥ ಸತಿಯ ನಡತೆಗಳಾವವಿರುವವು ।
ಸತಿಕುಲಕೆ ಪಾವನೆಯು ಯೆನಿಸುವ ಧರ್ಮಹೇಳಮ್ಮ ॥
ಚತುರೆ ಕೇಳೌ; ಇನಿತರಿಂದಲಿ ।
ಸತಿಯ ಕಾರ್ಯವು ತೀರಲಿಲ್ಲವು ।
ಸತತನಾಂ ಮನೆಬಳಗದವರನು ತೋಷಬಡಿಸುವೆನು ॥ ೧೫ ॥

ಅತ್ತೆ ಮಾವರ ಮಾತು ಮೀರದೆ ।
ನಿತ್ಯ ಮೈದುನ-ಭಾವರೊಡನಾ ।
ನತ್ಯಧಿಕ ಮರಿಯಾದೆಯಿಂದಲಿ ಸತತವಿರುತಿಹೆನು ॥
ಮತ್ತೆ ಅತ್ತಿಗೆ ನಾದಿನಿಯರೊಳು ।
ಅತ್ಯಧಿಕ ಮಮತೆಯನು ತೋರುತ ।
ಸತ್ಯದಿಂದಲಿ ತಿಳಿದು ನಡೆಯುವೆ ನುಳಿದ ಜನರೊಡನೇ ॥ ೧೬ ॥

ಮನೆಗೆ ಬಂದಿಹ ಅತಿಥಿಗಳಿಗಾ ।
ಮನದಿ ಗಂಡನ ಅಜ್ಞೆಯನ್ನಿತೆ ।
ನೆನೆದು ಮಾಡುವೆನುಚಿತ ಆಹಾರಾದಿ ಕಾರ್ಯಗಳ ॥ ೧೭ ॥

ಸುಮತಿ:— ಪರರೊಡನೆ ನಾ ನಡೆವ ನಡತೆಯು ।
॥ಭಾ. ಷ॥ ನಿರದೆ ಪೇಳಿದಿ ನನಗೆ ಮುದದಿಂ ।
ಭರದಿ ಹೇಳೌ ಆತ್ಮಶುದ್ಧಿಯ ನಡತೆಗಳನಿನ್ನು

ಕಮಲೆ:— ಪರರ ಸಂಗಡ ಹೆಚ್ಚು ಮಾತನು ।
॥ಭಾ. ಷ॥ ಬರಿದೆ ಆಡುತ ಹೊತ್ತುಗಳೆಯೆನು ।
ಅರಿಯೆಗಟ್ಟಿಸಿ ನಗುವ ನಗೆಯನು ನಾನು ಎಂದೆಂದೂ ॥ ೧೭ ॥
ಸಿಟ್ಟುಸಿಡುಕುಗಳನ್ನು ಅರಿಯೆನು ।
ಕೆಟ್ಟ ಕೆಲಸಗಳನ್ನು ಮಾಡೆನು ।
ಬಿಟ್ಟು ಕಳೆದೆನು ಚಾಡಿ ಹೇಳುವದನ್ನು ತಿಳಿ ಮಗಳೇ ।
ಕಟ್ಟಿ ಒಗೆದೆನು ಸುಳ್ಳುಮಾತನು ।
ಗಟ್ಟಿಹೇಳುವೆ ಯಾರ ಮನಕೂ ।
ಪೆಟ್ಟುಹತ್ತುವ ಪರರು ನೋಯುವ ಕೆಲಸನಾನರಿಯೇ ॥ ೧೮ ॥
ನಿತ್ಯ ನಸುಕಿನಲೆದ್ದು ಗಂಡನಿ ।
ಗತ್ಯಧಿಕ ವಿನಯದಲಿ ವಂದಿಸಿ ।
ಮತ್ತೆ ಗುರುಹಿರಿಯರಿಗೆ ನಮಿಸುತ ದೇವಗೆರಗುವೆನು ।
ನಿತ್ಯಕಾರ್ಯಗಳೆಲ್ಲ ತೀರಲು ।
ಹೊತ್ತು ಕಳೆಯದೆ ಸತತ ನೂಲುವೆ ।
ಚಿತ್ತದಲಿ ನಾ ಪ್ರಾಣಕಾಂತನ ಮುದದಿ ನೆನೆಯುತಿಹೇ ॥ ೧೯ ॥

ಸುಮತಿ:— ಆತ್ಮಶುದ್ಧಿಯನರಿಯೆ ಆ ಪರ ।
॥ಭಾ. ಷ॥ ಮಾತ್ಮಸೇವೆಯ ಮಾಡಬಹುದೇ ಮ ।
ಹಾತ್ಮಳಾಗುವ ಪರಿಯೆ ತಿಳಿಸೌ ತಾಯೆ ದಯದಿಂದೆ ।

* * *
* * *
* * *

ಕಮಲೆ:— ಸುಮತಿ ನಿನ್ನಯ ಪ್ರಶ್ನೆಗುತ್ತರ ।
॥ಭಾ. ಷ॥ ರಮಿಸಿಹೇಳುವೆ ಕೇಳು ಮಗಳೇ ।
ವಿಮಳದೇಶದ ಸೇವೆಯೇ ಪರಮಾತ್ಮಸೇವೆಯದು ॥

* * *
* * *
* * *

ಸುಮತಿ:—ಧನ್ಯಳಾದೆನು ತಾಯಿ ನಿನ್ನಯ ।
॥ಭಾ. ಷ॥ ರನ್ನದುಪದೇಶವನು ಕೇಳಲು ।
ಇನ್ನು ನಡೆಯುವೆ ಸತತ ನಿನ್ನಯ ಮಾತನನುಸರಿಸೀ ।
ಚಿನ್ನಿಗಳೆ ನಾ ವಂದಿಸುವೆನೌ ।
ಇನ್ನು ತೆರಳುವೆ ಮನೆಗೆ ತಾಯಿಯೆ ।
ಉನ್ನತಾಶೀರ್ವಾದ ಮಾಡೌ ನೀನು ಮುದದಿಂದ ॥೨೨॥

ಕಮಲೆ:— ನಿರುತಮನ ವಚಕಾಯಗಳಿನಾ ।
॥ಭಾ. ಷ॥ ಪರಮಸತ್ಯದ ಮಾರ್ಗವಿಡಿಯುತ ।
ಅರಿತುನೋಡೌ ಸತಿಗೆ ಪತಿಯೇ ದೇವನವನೆಂದೂ ।
ಮರೆಯಬೇಡೌ ಕಡೆಯ ಮಾತನು ।
ಬರಿದೆ ಹೊತ್ತನು ಕಳೆಯಲಾರದೆ ।
ನಿರುತವೋದೌ ಸತಿಯ ಧರ್ಮದ ಮಹಿಮೆಯನು ನೀನೂ ॥೨೩॥

ಪ್ರಾಥಮಿಕ ಶಿಕ್ಷಣದ ಉದ್ದೇಶಗಳು

ನಮ್ಮಲ್ಲಿರುವ ಬಹುತರ ಪ್ರಾಥಮಿಕ ಶಾಲೆಗಳನ್ನು ಸರಕಾರದವರ ಸಹಾಯದಿಂದ ಸ್ಥಾನಿಕ ಸಂಸ್ಥೆಗಳು ನಡಿಸುತ್ತಿರುತ್ತವೆ. ಈ ಶಾಲೆಗಳಲ್ಲಿ ಲಕ್ಷಾವಧಿ ವಿದ್ಯಾರ್ಥಿಗಳಿಗೆ ಸಾವಿರಾರು ಜನ ಶಿಕ್ಷಕರು ಶಿಕ್ಷಣವನ್ನು ಕೊಡುತ್ತಿರುವರಷ್ಟೇ. ಈ ಶಿಕ್ಷಕರಿಗೆ ತಾವು ಯಾವ ಉದ್ದೇಶಗಳನ್ನು-ನಿಶ್ಚಿತವಾದ ಉದ್ದೇಶಗಳನ್ನು—ಮನದಲ್ಲಿಟ್ಟುಕೊಂಡು ನಿಯಮಿತವಾದ ಗುರಿಯಿಂದ ತಮ್ಮ ದಿನದ ಕೆಲಸಗಳನ್ನು ಸಾಗಿಸಬೇಕೆಂಬ ಬಗ್ಗೆ ಸರಕಾರದವರು ಎಲ್ಲಿಯೂ ನಿರ್ದಿಷ್ಟ ಮಾಡಿದಂತೆ ತೋರುವದಿಲ್ಲ. ಆದರೆ ಇಂಥ ಸ್ಪಷ್ಟವಾದ ಉದ್ದೇಶಗಳೂ ನಿಯಮಿತ ಗುರಿಗಳೂ ಶಿಕ್ಷಕರ ಮನಸ್ಸಿನಲ್ಲಿರದಿದ್ದರೆ, ಶಾಲೆಯ ಕೆಲಸವು ಸಮರ್ಪಕವಾಗಿ ಸಾಗಲಾರದೆಂಬದು ಸ್ಪಷ್ಟವಾದದ್ದು.

ಇಂಗ್ಲಂಡದಲ್ಲಿ ಕೆಲಸ ಮಾಡುವ ಪ್ರಾಥಮಿಕ ಶಿಕ್ಷಕಶಿಕ್ಷಿಕೆಯರಿಗಾಗಿ ಅಲ್ಲಿಯ ಬೋರ್ಡ ಆಫ್ ಎಜ್ಯುಕೇಶನ್ ಎಂಬ ಸರಕಾರದ ವಿದ್ಯಾಖಾತೆಯವರು ಒಂದು ಕೋಡ ಅಂದರೆ ನಿಯಮಾದಿಗಳನ್ನೊಳಗೊಂಡ ಸೂಚನೆಯ ಗ್ರಂಥವನ್ನು ಪ್ರಕಟಿಸುವದುಂಟು.

ಈ ಗ್ರಂಥದಲ್ಲಿ ಪ್ರಾಥಮಿಕ ಶಿಕ್ಷಕರು ತಮ್ಮ ಶಾಲೆಯ ಕೆಲಸದಲ್ಲಿ ಯಾವ ಗುರಿಯಿಂದ ದುಡಿಯಬೇಕೆಂಬದನ್ನು ವಿವರವಾಗಿ ಅವರು ಕೊಟ್ಟಿರುತ್ತಾರೆ. ಇದನ್ನು ವಿಚಾರ ಪೂರ್ವಕವಾಗಿ ಅಭ್ಯಾಸಮಾಡುವದರಿಂದ ನಮ್ಮ ನಾಡಿನ ಶಿಕ್ಷಕರ ಕೆಲಸಕ್ಕೆ ನಿಶ್ಚಿತ ಸ್ವರೂಪವು ಬರಬಹುದೆಂದೂ ಸಾಲೆಯ ಕೆಲಸದ ಗುರಿಗಳು ಅವರಿಗೆ ಸ್ಪಷ್ಟವಾಗಿ ತಿಳಿದಂತಾಗಿ ಅವುಗಳನ್ನು ನೆರವೇರಿಸಲಿಕ್ಕೆ ಅವರು ಕೈಕೊಳ್ಳುವ ಉಪಾಯಗಳು ಫಲಕಾರಿಯಾಗಬಹುದೆಂದೂ ಬಗೆದು ಇಂಗ್ಲಂಡದ ಪ್ರಾಥಮಿಕ ಶಾಲೆಗಳ ಉದ್ದೇಶಗಳನ್ನು ಆ ದೇಶದ ಸರಕಾರದವರು ಪ್ರಕಟಿಸಿದ ಕೋಡಿನಲ್ಲಿ ಹೇಳಿದಂತೆ ಇಲ್ಲಿ ವಿವರಿಸಲು ಯತ್ನಿಸುವೆವು.

ಸಾರ್ವಜನಿಕ ಪ್ರಾಥಮಿಕ ಶಾಲೆಗಳಿಗೆ ಚಿಕ್ಕ ಮಕ್ಕಳು ಬರುವರು. ಇವರ ಸ್ವಭಾವದಲ್ಲಿಯ ಒಳ್ಳೆಯ ಗುಣಗಳನ್ನು ದೃಢಪಡಿಸುವದೂ ಬುದ್ಧಿಶಕ್ತಿಯನ್ನು ವೃದ್ಧಿಪಡಿಸುವದೂ ಈ ಶಾಲೆಗಳ ಉದ್ದೇಶವಾಗಿರಬೇಕು. ಚಿಕ್ಕ ಹುಡುಗರೂ ಹುಡಿಗೆಯರೂ ಶಾಲೆಗೆ ಬಂದು ತಮ್ಮ ಆಯುಷ್ಯದ ಮಹತ್ವದ ಕೆಲವು ವರುಷಗಳನ್ನು ಅಲ್ಲಿ ವೆಚ್ಚ ಮಾಡುವರು. ಅವರ ಈ ಆಯುರವಧಿಯನ್ನು ಎಲ್ಲಕ್ಕೂ ಹೆಚ್ಚು ಉಪಯೋಗವಾಗುವಂತೆ ನೋಡಿಕೊಳ್ಳುವದೇ ಈ ಶಾಲೆಗಳ ಕೆಲಸವು. ಈ ಎಲ್ಲ ಹುಡುಗ ಹುಡಿಗೆಯರ ಮುಂದಿನ ಅಗತ್ಯಗಳು ಒಂದೇ ತೆರನಾದವಿರುವದಿಲ್ಲ. ಬುದ್ಧಿಶಕ್ತಿಯಿಂದಲೂ ವ್ಯವಹಾರ ಜ್ಞಾನದ ಬಲದಿಂದಲೂ ಮುಂದೆ ಅವರು ಸುಖವಾಗಿ ಬಾಳುವೆಯನ್ನು ಸಾಗಿಸಲಿಕ್ಕೆ ಅವರವರನ್ನು ತಕ್ಕವರನ್ನಾಗಿ ಮಾಡಲಿಕ್ಕೆ ಶಾಲೆಗಳು ನೆರವಾಗತಕ್ಕದ್ದು.

ಈ ಉದ್ದೇಶವನ್ನು ಲಕ್ಷ್ಯದಲ್ಲಿಟ್ಟುಕೊಂಡು ಶಿಕ್ಷಕರು ವಿದ್ಯಾರ್ಥಿಗಳಲ್ಲಿ ನಿರೀಕ್ಷಣ ಸ್ಪಷ್ಟವಿಚಾರ-ಇವುಗಳನ್ನು ಅವರು ಮಾಡುವ ಚಟವನ್ನು ಅವರಲ್ಲಿ ನೆಲೆಗೊಳಿಸತಕ್ಕದ್ದು. ಈ ಮೂಲಕ ಸೃಷ್ಟಿಯ ಕೆಲವು ಸಂಗತಿಗಳೂ ನಿಯಮಗಳೂ ಅವರಿಗೆ ಗೊತ್ತಾಗತಕ್ಕದ್ದು. ಇವುಗಳನ್ನು ಅವರು ವಿಚಾರಪೂರ್ವಕವಾಗಿ ತಿಳಿದುಕೊಳ್ಳತಕ್ಕದ್ದು. ಮನುಷ್ಯನು ಇಟ್ಟುಕೊಂಡ ಹೆಗ್ಗುರಿಗಳೂ ಇವುಗಳನ್ನು ಅನುಸರಿಸಿ ಆತನು ಮಾಡಿದ ಕಾರ್ಯವಿಶೇಷಗಳನ್ನು ತಿಳಿದುಕೊಂಡು ಅವುಗಳಲ್ಲಿ ಆಸಕ್ತರಾಗಲಿಕ್ಕೆ ಅವರಿಗೆ ಶಿಕ್ಷಕನು ಉತ್ತೇಜನ ಕೊಡತಕ್ಕದ್ದು. ತಮ್ಮ ದೇಶದ ವಾಙ್ಮಯ, ತಮ್ಮ ನಾಡಿನ ಇತಿಹಾಸ ಇವುಗಳ ಪರಿಚಯವು ಅವರಿಗೆ ಆಗತಕ್ಕದ್ದು. ಭಾಷೆಯು ವಿಚಾರ ಮಾಡಲಿಕ್ಕೂ ಈ ವಿಚಾರಗಳನ್ನು ಇತರರಿಗೆ ತಿಳಿಸಲಿಕ್ಕೂ ಬಲವಾದ ಸಾಧನೆಯಾಗಿರುವದಷ್ಟೇ. ಈ ಸಾಧನವನ್ನು ಸರಿಯಾಗಿ ಉಪಯೋಗಿಸುವ ಶಕ್ತಿಯು ಅವರಲ್ಲಿ ಬರಬೇಕು. ಹೆಚ್ಚೆಚ್ಚು ಅಭ್ಯಾಸಮಾಡಿದಂತೆ ತಮಗಿರುವ ಜ್ಞಾನವು ಪೂರ್ಣವಾದದ್ದಲ್ಲೆಂದೂ ಜ್ಞಾನವು ಸಾಗರದಂತೆ ಅಪಾರವಾದದ್ದೆಂದೂ ಅವರಿಗೆ ಅನಿಸುವದು. ಆದರೂ ಈ ಪ್ರಾಥಮಿಕ ಶಿಕ್ಷಣದ ಅವಧಿಯಲ್ಲಿ ಒಳ್ಳೆಯ ವಾಙ್ಮಯವನ್ನು ಓದಬೇಕೆಂಬ ಲವಲವಿಕೆಯೂ ವಿಚಾರಪೂರ್ವಕ

ವಾಗಿ ವಿಷಯುಗಳನ್ನು ಅಭ್ಯಾಸಿಸುವ ಚಟವೂ ಅವರಲ್ಲಿ ತಲೆದೋರಬೇಕು. ಇವುಗಳ ಮೂಲಕ ದೊಡ್ಡವರಾದ ಬಳಿಕ ಹೊಸ ಜ್ಞಾನವನ್ನು ತಕ್ಕಮಾರ್ಗದಲ್ಲಿ ದೊರಕಿಸಲಿಕ್ಕೆ ಅವರು ತಕ್ಕವರಾಗಬೇಕು.

ಅವರ ವಯಸ್ಸಿಗೆ ಯೋಗ್ಯವಾದ ಬಗೆಬಗೆಯ ವ್ಯವಹಾರೋಪಯುಕ್ತವಾದ ಉದ್ಯೋಗಗಳಲ್ಲಿ ಅವರನ್ನು ತೊಡಗಿಸಬೇಕು; ಕೈಕೆಲಸ, ಮೈಮುರಿದು ದುಡಿಯ ಬೇಕಾದ ಕೆಲಸ-ಇವುಗಳನ್ನು ಮಾಡಲು ಅವರಿಗೆ ಅನುವು ಕೊಟ್ಟು ಅವರ ಕೈ ಹಾಗು ಕಣ್ಣು-ಇವುಗಳ ಸ್ವಭಾವಿಕವಾದ ಚಟುವಟಿಕೆಗಳನ್ನು ಆದಷ್ಟು ಬಲಪಡಿಸಬೇಕು. ಅವರ ಶರೀರವು ಯೋಗ್ಯವಾಗಿ ಬೆಳೆದು ಅವರ ಶಾರೀರಿಕ ಶಕ್ತಿಗಳು ತಕ್ಕಂತೆ ವೃದ್ಧಿ ಹೊಂದಲಿಕ್ಕೆ ಸಾಲೆಯು ಆದಷ್ಟು ಹೆಚ್ಚು ಪ್ರಸಂಗಗಳನ್ನು ಒದಗಿಸಿಕೊಡತಕ್ಕದ್ದು. ಇದಕ್ಕಾಗಿ ಅವರಿಂದ ಡ್ರಿಲ್ ಮೊದಲಾದ ಅಂಗಸಾಧಕವಾದ ವ್ಯಾಯಾಮವನ್ನು ಮಾಡಿಸಿದರಾಗಲಿ ಸ್ವಚ್ಛಂದವಾದ ಆಟಗಳನ್ನು ಅವರಿಂದ ಆಡಿಸಿದರಾಗಲಿ ಸಾಲದು; ಆರೋಗ್ಯದ ಸುಲಭವಾದ ಕೆಲವು ನಿಯಮಗಳನ್ನು ಅವರಿಗೆ ತಿಳಿಸಿಕೊಡಲಿಕ್ಕೇ ಬೇಕು.

ಕೆಲವು ಹುಡುಗರು ಇತರರಿಗಿಂತ ತೀಕ್ಷ್ಣ ಬುದ್ಧಿಯುಳ್ಳವರಿರುವದುಂಟು. ಇಂಥ ಹುಡುಗರನ್ನು ಕಂಡುಹಿಡಿಯುವದೂ ಪ್ರಾಥಮಿಕ ಶಾಲೆಗಳ ಮಹತ್ವದ ಒಂದು ಕೆಲಸವು. ಆದರೆ ಇದೇ ತಮ್ಮ ಪ್ರಮುಖವಾದ ಕೆಲಸವೆಂದು ಶಿಕ್ಷಕರು ಬಗೆಯ ಲಾಗದು. ಇವರ ತೀಕ್ಷ್ಣವಾದ ಶಕ್ತಿಗಳನ್ನು ವಿಕಾಸಗೊಳಿಸಲಿಕ್ಕೆ ಶಿಕ್ಷಕರು ಪ್ರಯತ್ನ ಪಡಬಹುದು. ಆದರೆ ಬಹು ಸಂಖ್ಯಾಕರಾದ ಹುಡುಗರ ಹಿತವನ್ನು ಬದಿಗಿಟ್ಟು ಈ ಕೆಲಸಕ್ಕೆ ಅವರು ಕೈಹಾಕತಕ್ಕದ್ದಲ್ಲ. ತೀಕ್ಷ್ಣ ಬುದ್ಧಿಯ ಹುಡುಗರಿಗೆ ತಕ್ಕ ವಯಸ್ಸಿನಲ್ಲಿ ಮಾಧ್ಯಮಿಕ ಶಾಲೆಗಳಿಗೆ ಹೋಗಲಿಕ್ಕೆ ಶಿಕ್ಷಕರು ಉತ್ತೇಜನ ಕೊಡತಕ್ಕದ್ದು. ಈ ಮೂಲಕ ಈ ಹುಡುಗರಿಗೆ ಮಾಧ್ಯಮಿಕ ಶಾಲೆಗಳಲ್ಲಿ ದೊರೆಯುವ ಶಿಕ್ಷಣದ ಎಲ್ಲಕ್ಕೂ ಹೆಚ್ಚು ಲಾಭವು ದೊರೆಯಲು ಅನುವು ಆಗುವದು.

ಚಿಕ್ಕಮಕ್ಕಳನ್ನು ಸದಾಚರಣೆಯುಳ್ಳವರನ್ನಾಗಿ ಮಾಡಲು ಸಾಲೆಗಳಲ್ಲಿ ಸಾಕಷ್ಟು ಪ್ರಸಂಗಗಳು ಉಂಟಾಗುವದಿಲ್ಲ. ಆದರೂ ಒಳ್ಳೇ ನಡತೆಯ ಬಲವಾದ ತಳಹದಿ ಯನ್ನು ಹಾಕಲು ಶಿಕ್ಷಕರಿಗೆ ಅನುವುದೊರೆಯುವದೆಂದು ಧಾರಾಳವಾಗಿ ಹೇಳಬಹುದು. ವಿದ್ಯಾರ್ಥಿಗಳಲ್ಲಿ ಉದ್ಯೋಗ ಪ್ರೀತಿ, ಆತ್ಮಸಂಯಮನ, ಕಷ್ಟಗಳಿಗೆ ಎದೆಗೊಟ್ಟು ಎದು ರಾಗುವ ಧೈರ್ಯ ಈ ಸದ್ಗುಣಗಳ ಬೀಜಗಳನ್ನು ಬಿತ್ತಬಹುದು. ಉದಾತ್ತವಾದದ್ದನ್ನು ಭಯಭಕ್ತಿಯಿಂದ ಕಾಣುವದು, ತನ್ನ ಹಿತವನ್ನು ಬದಿಗೊತ್ತಿ ತಮಗಿಂತ ದುರ್ಬಲರೂ ಬಡವರೂ ಆದವರ ಹಿತಕ್ಕಾಗಿ ಶ್ರಮಪಡುವದು, ಸತ್ಯವಾದದ್ದನ್ನೂ ಶುದ್ಧವಾದದ್ದನ್ನೂ ಸಾಧಿಸಲು ಹಾತೊರೆಯುವದು ಈ ಒಲವುಗಳು ಅವರಲ್ಲಿ ಉಂಟಾಗಲು ಶಿಕ್ಷಕರು ಪ್ರಯ

ತ್ನಪಡಬಹುದು. ಒಪ್ಪಿಕೊಂಡ ಇಲ್ಲವೆ ಕೈಕೊಂಡ ಕೆಲಸವನ್ನು ಮನಮುಟ್ಟಿ ಮಾಡ ಲಿಕ್ಕೂ ತನ್ನ ಕರ್ತವ್ಯಗಳ ಜವಾಬುದಾರಿಯನ್ನು ವಹಿಸಲಿಕ್ಕೂ ಶಿಕ್ಷಕನು ಹುಡುಗರಿಗೆ ಉತ್ತೇಜನ ಕೊಡತಕ್ಕದ್ದು. ತನ್ನಂತೆ ಪರರನ್ನು ಎಣಿಸುವದು, ಇಷ್ಟೇ ಅಲ್ಲ ಪರರ ಆಶೆ ಆಕಾಂಕ್ಷೆಗಳ ಮುಂದೆ ತನ್ನವನ್ನು ತಗ್ಗಿಸುವದು, ಪರರನ್ನು ಮನ್ನಣೆಯಿಂದ ನೋಡುವದು ಇವು ಸದಾಚರಣೆಯ ಮೂಲಗಳು. ಇವುಗಳನ್ನು ಹುಡುಗರಲ್ಲಿ ಶಿಕ್ಷ ಕನು ನೆಲೆಗೊಳಿಸತಕ್ಕದ್ದು. ಇಷ್ಟೆಲ್ಲವನ್ನು ಸಾಧಿಸುವದು ಸುಲಭವಲ್ಲ. ಆದರೆ ಶಿಕ್ಷ ಕನು ಸ್ವಂತ ಆಚರಣೆಯಿಂದಲೂ ತನ್ನ ವರ್ಚಸ್ವದಿಂದಲೂ ಇವುಗಳನ್ನು ಉಂಟು ಮಾಡಬಹುದು. ಸಾಲೆಯಲ್ಲಿ ಒಳ್ಳೇ ಶಿಸ್ತು ನೆಲೆಗೊಂಡಿದ್ದರೆ ಈ ಕೆಲಸಕ್ಕೆ ಅವನಿಗೆ ಬಹಳ ನೆರವಾಗುವದು. ಅನೇಕ ಹುಡುಗರು ಸಾಲೆಯಲ್ಲಿ ಒತ್ತಟ್ಟಿಗೆ ಇರುವರಷ್ಟೇ. ಆಟದ ಬೈಲಿನಲ್ಲಂತೂ ಇವರೆಲ್ಲರೂ ಒಟ್ಟಾಗಿ ಕೆಲಸಗಳಲ್ಲಿ ತೊಡಗಿರುವರು. ಒಡನಾಡಿ ಗರೊಡನೆಯೂ ಸಹ ವ್ಯವಸಾಯಿಗಳಕೂಡಲೂ ನ್ಯಾಯಬುದ್ಧಿಯಿಂದ ನಡೆದುಕೊಳ್ಳುವ ಚಟವು ಹುಡುಗರಲ್ಲಿ ಮೂಡತಕ್ಕದ್ದು. ಸಾಲೆಯ ಹುಡುಗರೆಲ್ಲ ತಮ್ಮೊಳಗೆ ನಿಷ್ಠೆಯಿಂದ ಇರತಕ್ಕದ್ದು.

ಸಾಲೆಗಳು ಇವೆಲ್ಲ ಮಹತ್ವದ ಕೆಲಸಗಳನ್ನು ಕೈಗೂಡಿಸಲಿಕ್ಕೆ ಹವಣಿಸುತ್ತಿರು ವಾಗ ತಾಯ್ತಂದೆಗಳ ಹಾಗು ಪಾಲಕರ ಸಹಕಾರವನ್ನು ಅಪೇಕ್ಷಿಸತಕ್ಕದ್ದು; ಇಷ್ಟೇ ಅಲ್ಲ ಈ ಸಹಕಾರವನ್ನು ಪಡೆಯತಕ್ಕದ್ದು. ಸಾಲೆಯ ಅಧಿಕಾರಿಗಳೂ ಮನೆಯ ಯಜ ಮಾನರೂ ಕೂಡಿಯೇ ಪ್ರಯತ್ನಪಡುವದರಿಂದ ಮಾತ್ರ ಚಿಕ್ಕಮಕ್ಕಳು ಪ್ರೌಢಾವಸ್ಥೆಗೆ ಯೋಗ್ಯದಿಶೆಯಲ್ಲಿ ಬೆಳೆಯುವರು. ಇಷ್ಟೇ ಅಲ್ಲ; ಅವರು ಸಮಾಜದಲ್ಲಿ ಪ್ರಾಮಾಣಿ ಕರೂ ಜನಹಿತೈಕಪರರೂ ಎಂದು ಹೆಸರಾಗಲಿಕ್ಕೆ ತಕ್ಕವರಾಗುವರು. ಹೀಗೆ ತಮ್ಮ ದೇಶದ ಯೋಗ್ಯರಾದ ಪುತ್ರಪುತ್ರಿಯರೆನಿಸಿಕೊಳ್ಳುವ ಶ್ರೇಯಸ್ಸು ಅವರ ಪಾಲಿಗೆ ಬರುವದು.

ಹಳೆಯ ಹೊಸ ಅಧಿಕಾರಿಗಳು

ಅಕ್ಟೋಬರ ಸಂಚಿಕೆಯಲ್ಲಿ ನಾವು ಎಜ್ಯುಕೇಶನಲ್ ಇನ್ಸಪೇಕ್ಟರರ ಕೆಲಸದಿಂದ ನಿವೃತ್ತರಾಗುತ್ತಿದ್ದ ಮ॥ ವಕೀಲ ಸಾಹೇಬರ ಚರಿತ್ರವನ್ನೂ ಅವರು ನಮ್ಮ ಭಾಗದ ಪ್ರಾಥಮಿಕ ಶಿಕ್ಷಣಕ್ಕಾಗಿ ಮಾಡಿದ ಕಾರ್ಯಗಳನ್ನೂ ಕುರಿತು ಬರೆದಿರುವೆವು. ಶ್ರೀ. ವಕೀಲ ಸಾಹೇಬರು ತಾ॥ ೧೨-೧೧-೩೩ಕ್ಕೆ ಸರಕಾರದ ನವಕರಿಯನ್ನು ಬಿಟ್ಟು ಕೊಟ್ಟರು. ಆ ಸಮಯದಲ್ಲಿ ನಮ್ಮ ಭಾಗದ ಬಹುತರ ಯಾವತ್ತು ಶಿಕ್ಷಣ ಸಂಸ್ಥೆಗಳು

ಪ್ರಾಥಮಿಕ ಮಾಧ್ಯಮಿಕ ಶಾಲೆಗಳು, ಬೇರೆ ಬೇರೆ ಲೋಕಲ್‌ಬೋರ್ಡ ಹಾಗು ಮುನಿಸಿಪಲ್ ಬೋರ್ಡುಗಳ ಸ್ಕೂಲ ಬೋರ್ಡುಗಳು, ಹಲವು ಸಮಾಜದವರು, ಒಟ್ಟಿನಮೇಲೆ ಶಿಕ್ಷಣಕ್ಕೆ ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ಸಂಬಂಧಪಟ್ಟಿರುವಂಥ ಕರ್ನಾಟಕದೊಳಗಿನ ಎಲ್ಲ ಸಂಸ್ಥೆಗಳ ಚಾಲಕರು ವಕೀಲ ಸಾಹೇಬರಿಂದ ತಮಗಾದ ಲಾಭಗಳನ್ನು ಕುರಿತು ಅವರ ಉಪಕಾರವನ್ನು ಸ್ಮರಿಸಿ ಅವರ ಮನ್ನಣೆಮಾಡಿದರು. ಇವರೆಲ್ಲರ ಮರ್ಯಾದೆಗಳನ್ನು ಸ್ವೀಕರಿಸುವಾಗ ಶ್ರೀ. ವಕೀಲ ಸಾಹೇಬರು ಹೇಳಿದ್ದೇನೆಂದರೆ, ಎಜ್ಯುಕೇಶನಲ್ ಇನ್ಸಪೆಕ್ಟರರ ಅಧಿಕಾರವನ್ನು ವಹಿಸಿದಾಗ ನಾನು ಮಾಡಿರುವ ಪ್ರತಿಯೊಂದು ಸಣ್ಣ ದೊಡ್ಡ ಕೆಲಸವನ್ನು ನಾನು ನನ್ನ ಕರ್ತವ್ಯವೆಂದು ಬಗೆದೇ ಮಾಡಿರುವೆನು. ಕೆಲಸದಿಂದ ನಿವೃತ್ತನಾದಬಳಿಕಲೂ ಶಿಕ್ಷಣಾಭಿವೃದ್ಧಿಯಬಗ್ಗೆ ದುಡಿಯುವದೇ ನನ್ನ ಸಂಕಲ್ಪವಿರುತ್ತದೆ. ಶಿಕ್ಷಕರು ಸಂಸ್ಥೆಗಳನ್ನು ಏರ್ಪಡಿಸಿಕೊಂಡು ಆತ್ಮೋನ್ನತಿ, ಆತ್ಮೋದ್ಧಾರ ದೇಶಹಿತೈಕದೃಷ್ಟಿಯುಳ್ಳವರಾಗಿ ಕರ್ತವ್ಯವನ್ನು ಮಾಡತಕ್ಕದ್ದು. ಇಂದಿನವರೆಗೆ ನಾನು ಸರಕಾರದ ಸೇವಕನಾಗಿ ಕೆಲಸ ಮಾಡಿರುವೆನು; ಇನ್ನು ಮುಂದೆ ಜನತೆಯ ಪ್ರತ್ಯಕ್ಷ ಸೇವಕನಾಗಿ ಕೆಲಸ ಮಾಡಲಿಚ್ಛಿಸುವೆನು. ಈ ವರೆಗೆ ನನಗೆ ನನ್ನ ಕೆಲಸದಲ್ಲಿ ನೀವೆಲ್ಲರು ನೆರವಾದಂತೆ ಇನ್ನುಮುಂದೆಯಾದರೂ ಸಹಾಯಮಾಡುವಿರೆಂದು ಪ್ರಾರ್ಥಿಸುವೆನು.

ಮ|| ವಕೀಲ ಸಾಹೇಬರ ಸ್ಥಳದಲ್ಲಿ ಮ|| ಸಯ್ಯದ ನೂರುಲ್ಲಾ ಎಂಬ ಗೃಹಸ್ಥರು ಬಂದಿರುವದು ಎಲ್ಲರಿಗೂ ಗೊತ್ತಿರಬಹುದು. ಇವರು ಶುದ್ಧಕನ್ನಡಿಗರೆಂಬದು ಮಾತ್ರ ಎಲ್ಲರಿಗೆ ಗೊತ್ತಾದಂತಿಲ್ಲ. ಇವರು ದಕ್ಷಿಣ ಕನ್ನಡ (ಸೌಥ ಕ್ಯಾನರಾ) ಜಿಲ್ಹೆಯವರು. ಕನ್ನಡ ನುಡಿಯನ್ನು ಚನ್ನಾಗಿ ಅರಿತವರು; ಆ ಭಾಗದಲ್ಲಿ ಪ್ರಚಲಿತವಿರುವ ಕೊಂಕಣಿ ಮಾತನ್ನಂತೂ ಅತ್ಯುತ್ತಮವಾಗಿ ಆಡುವರು. ಇವರು ಕನ್ನಡಿಗರಾದ ಮೂಲಕ ನಮ್ಮ ಕರ್ನಾಟಕದ ಅಭಿಮಾನವು ಇವರಿಗೆ ಇರುವದು ಸಹಜವಷ್ಟೇ. ನಮ್ಮ ದೇಶದಲ್ಲಿ ಉಚ್ಚ ಶಿಕ್ಷಣವನ್ನು ಪಡೆದು ಮುಗಿಸಿದ ಕೂಡಲೆ, ವಿಲಾಯತಿಗೆ ಹೋಗಿ ಶಿಕ್ಷಣಶಾಸ್ತ್ರ ಕಲೆಗಳಬಗ್ಗೆ ಹೆಸರಾಗಿರುವ ಲೀಡ್ಸ ವಿಶ್ವವಿದ್ಯಾಲಯದಲ್ಲಿ ಕೆಲಕಾಲವಿದ್ದು ಶಿಕ್ಷಣಶಾಸ್ತ್ರದ ವ್ಯಾಸಂಗಮಾಡಿ, ಎಮ್. ಈಡಿ ಎಂಬ ಹೆಚ್ಚಿನ ಪದವಿಯನ್ನು ಸಂಪಾದಿಸಿರುವರು. ಇದಲ್ಲದೆ ಅದೇ ದೇಶದಲ್ಲಿಯ ಬಾರ-ಎಟ್-ಲಾ ಅಂದರೆ ಕಾಯಿದೆಯ ಪಂಡಿತರೆಂಬ ಪದವಿಯನ್ನು ಹೊಂದಿರುವರು. ಇವರು ಕಾಯಿದೆಯಲ್ಲಿ ನಿಷ್ಣಾತರಿದ್ದರೂ ಶಿಕ್ಷಣ ಖಾತೆಗೆ ಸೇರಿದ್ದನ್ನು ನೋಡಿದರೆ, ಶಿಕ್ಷಣಾಭಿರುಚಿಯುಳ್ಳವರೆಂದು ಸ್ಪಷ್ಟವಾಗುವಂತಿದೆ. ವಯೋಮಾನದಿಂದ ಇವರು ಇನ್ನೂ ಯೌವನಾವಸ್ಥೆಯಲ್ಲಿರುವರು. ಕೆಲಸದ ಹುರುಪು ಇವರಲ್ಲಿ ತುಂಬಿರುವದು. ಶ್ರೀ. ವಕೀಲ ಸಾಹೇಬರ ಬಳಿಕ ಕನ್ನಡಿಗರೂ, ವಿದ್ಯಾಸಂಪನ್ನರೂ ಶಿಕ್ಷಣ ಶಿಕ್ಷಕಾಭಿಮಾನಿಗಳೂ ಯೌವನದ ಹುರುಪಿನಿಂದೊಡಗೂಡಿದವರೂ ಆದ ಶ್ರೀ. ಸಯ್ಯದ ನೂರುಲ್ಲಾ ಸಾಹೇಬರಂಥವರು ನಮ್ಮ ಭಾಗದ ಎಜ್ಯುಕೇಶನಲ್ ಇನ್ಸಪೆ

ಕ್ಕರರ ಅಧಿಕಾರದ ಸ್ಥಳದಲ್ಲಿ ಬಂದದ್ದು ಕನ್ನಡಿಗರ ಭಾಗ್ಯೋದಯವೆಂದು ನಾವು ಎಣಿಸ ಬಹುದು. ಇವರು ನಮ್ಮ ಭಾಗದ ಶಿಕ್ಷಣಾಭಿವೃದ್ಧಿಯನ್ನು ಪುರಸ್ಕರಿಸುವದರಲ್ಲಿ ಪೂರ್ಣ ಯಶಸ್ವಿಗಳಾಗಲೆಂದೂ ಚಿರಕಾಲದವರೆಗೆ ನಮ್ಮ ಭಾಗದಲ್ಲಿದ್ದ ಎಲ್ಲ ಶಿಕ್ಷಕರ, ಎಲ್ಲ ಸಂಸ್ಥೆ ಗಳ ಹಾಗು ಎಲ್ಲ ಜಾತಿವರ್ಗಗಳ ಮನ್ನಣೆಗೆ ಪಾತ್ರರಾಗಲೆಂದೂ ನಾವು ಹಾರೈಸುತ್ತೇವೆ

ನಮ್ಮ ದೇಶದ ಆಮದು

ಹಿಂದುಸ್ತಾನಕ್ಕೆ ಪರದೇಶಗಳಿಂದ ಬರುವ ಕೆಲವು ಸಾಮಾನುಗಳ ಬೆಲೆಯನ್ನು ಮುಂದೆ ಕೊಟ್ಟಿರುವೆವು. ನಮ್ಮದೇಶದಲ್ಲಿ ನವಕರಿಯು ಸಿಕ್ಕಲೊಲ್ಲದೆಂದು ಜನರು ಬಾಯಿ ಬಿಡುತ್ತ ಕುಳಿತಿರುವರಷ್ಟೇ. ಕೈಗಾರಿಕೆಗಳನ್ನು ಸದ್ಯಕ್ಕಿಂತ ಹೆಚ್ಚಾಗಿ ಕೈಕೊಂಡರೆ ಈ ಪ್ರಶ್ನವು ತಾನಾಗಿ ಬಿಡುವದೆಂಬದು ಈ ಅಂಕೆಗಳಿಂದ ಸ್ಪಷ್ಟವಾಗುವದು. ಕೆಳಗೆ ಕೊಟ್ಟ ಸಾಮಾನುಗಳಲ್ಲಿ ಬಹುತರ ಎಲ್ಲವೂ ನಮ್ಮದೇಶದಲ್ಲಿ ಸದ್ಯಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಹೊರಡಬಹುದೆಂದು ಧಾರಾಳವಾಗಿ ಹೇಳಬಹುದು.

ಆಮದಾಗಿಬರುವ ಸಾಮಾನುಗಳ ಬೆಲೆಯನ್ನು ಇಲ್ಲಿ ಲಕ್ಷರೂಪಾಯಿಗಳಲ್ಲಿ ಕೊಟ್ಟಿದೆ.

		೧೯೩೦–೩೧	೧೯೩೧–೩೨	೧೯೩೨–೩೩
೧	ಹತ್ತಿಯ ನೂಲಿನ ಬಟ್ಟೆಗಳು	೨೫೨೫	೧೯೧೫	೨೬೮೩
೨	ಸಕ್ಕರೆ	೧೦೯೬	೬೧೫	೨೪೩
೩	ಔಷಧಗಳೂ ರಸಾಯನ ದ್ರವ್ಯಗಳೂ	೪೮೯	೪೮೦	೪೯೦
೪	ಕಚ್ಚಾ ರೇಶಿಮೆ ರೇಶಿಮೆಯ ಸರಕು	೨೯೯	೨೬೪	೪೩೩
೫	ಆಹಾರದ ಸಾಮಾನು	೪೮೮	೩೪೧	೨೯೯
೬	ಕಾಗದ ಹಾಗು ಸ್ಟೇಶನರಿ	೩೬೮	೩೧೮	೩೫೯
೭	ಸರಾಯಿ ಮುಂತಾದವು	೩೩೨	೨೨೭	೨೨೦
೮	ಉಣ್ಣೆ ಹಾಗು ಉಣ್ಣೆಯ ಸರಕು	೨೩೧	೧೬೨	೨೯೬
೯	ಮೋಟಾರ ಗಾಡಿಗಳು	೩೯೯	೨೧೪	೧೭೦
೧೦	ಹೆಣಿಕೆಯ ವಸ್ತ್ರ ಮೊದಲಾದವು	೨೮೭	೧೯೫	೨೦೨
೧೧	ಮಸಾಲೆಯ ಸಾಮಾನು	೨೫೪	೨೦೮	೧೬೨
೧೨	ಕಾಜು ಹಾಗು ಕಾಜಿನ ಸಾಮಾನು	೧೬೩	೧೨೨	೧೦೨
೧೩	ತಂಬಾಕು ಹಾಗು ಸಿಗಾರೆಟ್ಟು	೧೫೧	೯೪	೯೭
೧೪	ಬಣ್ಣಗಳು	೧೧೨	೮೭	೯೨
೧೫	ಸಬಕಾರ	೧೧೨	೮೮	೮೩
೧೬	ಆಟಗಳು ಆಟದ ಸರಕುಗಳು	೪೮	೩೭	೪೭

ಮಾನಸಶಾಸ್ತ್ರವು

ಶ್ರೋತ್ರೇಂದ್ರಿಯ (ಮುಂದೆಸಾಗಿದ್ದು)

(೧) ನಾದ, (೨) ಸಪ್ಪಳ—

ನಾದವೆಂದರೆ ಸುನಾದವು. ಹವೆಯಲ್ಲಿ ಆಘಾತವು ಕ್ರಮದಿಂದ ಆಗಹತ್ತಲು ಆಗುವ ಶಬ್ದಜ್ಞಾನಕ್ಕೆ ನಾದವೆಂಬ ಹೆಸರು. ಗಾಯನಶಾಸ್ತ್ರವು ಒಂದೊಂದು ಸ್ವರಕ್ಕೆ ನಾದವನ್ನು ಉಂಟುಮಾಡುವ ಶಾಸ್ತ್ರವು. ಒಂದೊಂದು ಸ್ವರಕ್ಕೆ ಕೆಲವೊಂದು ವಿವಿಕ್ಷಿತವಾದ ಕಂಪನದ ಪದ್ಧತಿ ಇರುವದು. ಅವುಗಳಿಂದ ಸಪ್ತಸ್ವರಗಳನ್ನು ಕಲ್ಪಿಸಿ ಅವುಗಳ ವರ್ಜ್ಯಾವರ್ಜ್ಯ, ಆರೋಹಅವರೋಹಗಳಿಂದ ರಾಗ ರಾಗಿಣಿ ಮೊದಲಾದವುಗಳನ್ನು ಕಲ್ಪಿಸಿರುವರು. ಗಾಯನ ಶಾಸ್ತ್ರಜ್ಞರಿಗೆ ಯಾವನಾದರೊಬ್ಬನು ಹಾಡಿದಕೂಡಲೆ ಇಂಥ ರಾಗದಲ್ಲಿಯೇ ಹಾಡುತ್ತಾನೆಂದು ಕೂಡಲೆ ಗೊತ್ತಾಗುವದು. ಉಳಿದವರಿಗೆ ಗಾಯನದಿಂದ ಆನಂದವಾದರೂ ರಾಗಜ್ಞಾನವುಳ್ಳವರಿಗೆ ಆಗುವ ನಿಜವಾದ ಆನಂದವು ಎಂದೂ ಆಗಲಾರದು. ಅನಿಯಮಿತ ಆಘಾತಗಳಿಂದ ಉಂಟಾದ ಶಬ್ದವು ಸಪ್ಪಳವು. ಇದು, ಬಹುಶಃ ಕರ್ಣಕಠೋರವಿರುತ್ತದೆ.

ಶಿಕ್ಷಣ ಕ್ರಮದಲ್ಲಿ ಈ ಇಂದ್ರಿಯವಾದರೂ ಬಹು ಮಹತ್ವವುಳ್ಳದ್ದು. ಅನೇಕ ಪದಾರ್ಥಗಳ ಜ್ಞಾನವನ್ನು ನಾವು ಅವುಗಳಿಂದ ಹೊರಡುವ ಸಪ್ಪಳದಿಂದ ಮಾಡಿಕೊಳ್ಳುವೆವು. ಧ್ವನಿಯಿಂದಲೇ ಪಶುಪಕ್ಷಿಗಳ ಜಾತಿಯನ್ನು ಗೊತ್ತು ಹಚ್ಚುವೆವು. ಭಾಷೆ ಎಂಬದು ಶಬ್ದಸಮುದಾಯಗಳ ರಚನೆಯಾಗಿರುವದು. ಒಂದೊಂದು ವಸ್ತುವಿಗೆ ಪ್ರತಿ ಪ್ರತಿಯಾಗಿ ಒಂದೊಂದು ಶಬ್ದವಿರುವದು. ಭಾಷೆಯ ದ್ವಾರದಿಂದಾಗತಕ್ಕ ಶಿಕ್ಷಣವು ಕೇವಲ ಶ್ರೋತ್ರೇಂದ್ರಿಯದ ಶಿಕ್ಷಣವೇ. ಸ್ವರಗಳ ಭೇದಗಳಿಂದ ನಮಗೆ ಆ ಸ್ವರವನ್ನುಂಟುಮಾಡುವ ವಸ್ತುಗಳ ಅಂತರವು ಹಾಗು ದಿಕ್ಕುಗಳು ಗೊತ್ತಾಗುವವು.

ರಸನೇಂದ್ರಿಯ:— ರಸನೇಂದ್ರಿಯ ಜ್ಞಾನವನ್ನು ಅಂದರೆ ರುಚಿಯನ್ನು ಮಾಡಿಕೊಡುವ ಇಂದ್ರಿಯವೆಂದರೆ ನಾಲಿಗೆಯು. ಈ ಬಗೆಯ ಜ್ಞಾನಮಾಡಿಕೊಡುವದಕ್ಕೆ ನಾಲಿಗೆಯ ಹಿಂದುಗಡೆಗೆ ಕಿರಿನಾಲಿಗೆ ಹತ್ತರ ಇರುವ ವರ್ತುಲಾಕಾರವಾದ ಭಾಗವು ಸಹಾಯಮಾಡುವದು. ನಾಲಿಗೆಯಮೇಲೆ ತೆಳುವಾದ ಪರಿಯಂಥ ಆರ್ದ್ರ ತ್ವಚವಿರುವದು. ಇದರ ಮೇಲ್ಬದಿಗೆ, ಕೆಳಬದಿಗೆ, ಮಗ್ಗಲಿಗೆ ಸೂಕ್ಷ್ಮವಾದ ಪರಿಯಿಂದ ಆವರಿಸಲ್ಪಟ್ಟ ಉಬ್ಬುಗಳಿರುವವು. ಅವುಗಳಲ್ಲಿ ಜ್ಞಾನವಾಹಿ ನರಗಳು ಸೇರಿಕೊಂಡಿರುವವು.

ನಾಲಿಗೆಯ ಅಗ್ರಭಾಗದಲ್ಲಿರುವ ಉಬ್ಬುಗಳೊಳಗಿನ ನರಗಳಿಂದ ಸೀ, ಉಪ್ಪು, ರುಚಿಗಳ ಜ್ಞಾನವಾಗುವದು. ನಾಲಿಗೆಯ ಹಿಂದುಗಡೆ (ಗಂಟಲದ ಹತ್ತರ) ಇರುವ ಜ್ಞಾನವಾಹಿ ನರಗಳಿಂದ ಆಮ್ಲ ರುಚಿಯು ಜ್ಞಾನವಾಗುವದು. ನಾಲಿಗೆಯ ಮಧ್ಯದಲ್ಲಿ ಜ್ಞಾನವಾಹಿ ನರಗಳಿಲ್ಲದ್ದರಿಂದ ಅಲ್ಲಿ ಯಾವ ರುಚಿಯ ಜ್ಞಾನವೂ ಆಗುವದಿಲ್ಲ.

ನಮಗೆ ಯಾವದೊಂದು ಪದಾರ್ಥದ ರುಚಿಯು ತಿಳಿಯಬೇಕಾದರೆ ಆ ಪದಾರ್ಥದ ಸಂಬಂಧವು ಜ್ಞಾನವಾಹಿ ನರಗಳ ಅಗ್ರಭಾಗಕ್ಕೆ ಪ್ರತ್ಯಕ್ಷವಾಗಿ ತಗಲಬೇಕು. ಹೀಗಾಗಬೇಕಾದರೆ ಆ ಪದಾರ್ಥವು ಬಾಯಲ್ಲಿರುವ ಜೊಲ್ಲಿನಲ್ಲಿಯಾಗಲಿ ಅಥವಾ ಬೇರೊಂದು ದ್ರವದಲ್ಲಿಯಾಗಲಿ ಕರಗಿಕೊಂಡು ಆ ದ್ರವವು ಜ್ಞಾನವಾಹಿ ನರಗಳನ್ನು ಆವರಿಸಿಕೊಂಡಿರುವ ಪಂಯನ್ನು ಭೇದಿಸಿ ಆ ನರಗಳ ಅಗ್ರಭಾಗದೊಳಗೆ ಹೋಗಿ ಮುಟ್ಟಬೇಕು. ಆಗ ಆ ನರಗಳು ತನುಗುಣವಾದ ಪ್ರೇರಣೆಯನ್ನು ತರಂಗಗಳ ಮುಖಾಂತರ ಮಿದುಳಿನ ವಿವಕ್ಷಿತ ಕೋಶಗಳಿಗೆ ಕಳುಹಲು ಆ ಕೋಶಗಳ ಸ್ಥಿತ್ಯಂತರವಾಗಿ ಒಂದೊಂದು ಬಗೆಯ ರಸದ ಜ್ಞಾನವಾಗುವದು. ಬಾಯಲ್ಲಿ ಕರಗದಿದ್ದ ಬೆನಕದ ರುಚಿಯು ನಮಗೆ ಆಗಲಾರದು. ಇದರಂತೆ ಕೆಲವೊಂದು ತರದ ರುಚಿಯನ್ನು ಗ್ರಹಿಸುವ ಉಬ್ಬುಗಳು ಒಡೆದು ಹೋಗಿ ಅಲ್ಲಿರುವ ಜ್ಞಾನವಾಹಿ ನರಗಳು ದುಡಿದು ದುಡಿದು ಬೇಸತ್ತು ಬಲಹೀನವಾಗಲು ನಮಗೆ ಆ ತರದ ರುಚಿಯು ತಿಳಿಯದಂತಾಗುವದು. ಸೀ ಪದಾರ್ಥಗಳನ್ನು ಹೆಚ್ಚಾಗಿ ತಿಂದರೆ ಬಾಯಿಕಟ್ಟುತ್ತದೆಂದು ಹೇಳುವದರ ಅರ್ಥವು ಇದೇ.

ರಸನೇಂದ್ರಿಯಕ್ಕೂ ಘ್ರಾಣೇಂದ್ರಿಯಕ್ಕೂ ಪ್ರತ್ಯಕ್ಷ ಸಂಬಂಧವಿರುತ್ತದೆ. ಅದರಿಂದ ರುಚಿಯು ಬಹುಮಟ್ಟಿಗೆ ವಾಸನೆಯಿಂದ ಗೊತ್ತಾಗುತ್ತದೆಂದು ಹೇಳಬಹುದು. ನಾಸಿಕದ್ವಾರಗಳನ್ನು ಮುಚ್ಚಿಕೊಂಡು ವಾಸನೆಯುಳ್ಳ ಯಾವದೊಂದು ಪದಾರ್ಥವನ್ನು ಬಾಯಲ್ಲಿ ಹಾಕಿಕೊಂಡು ತಿನ್ನಹತ್ತಿದರೆ ಅದರ ರುಚಿಯು ಗೊತ್ತಾಗುವದಿಲ್ಲ. ಆದರೆ ಮೂಗಿನ ಹೊರಳಿಗಳನ್ನು ತೆಗೆದು ಆ ಪದಾರ್ಥದ ವಾಸನೆಯು ಬರುವಂತೆ ಮಾಡಿದರೆ ಆ ಪದಾರ್ಥದ ರುಚಿಯು ಗೊತ್ತಾಗುವದು.

ರಸನೇಂದ್ರಿಯಜನ್ಯಜ್ಞಾನದ ಪ್ರಕಾರಗಳು—

(೧) **ಕೇವಲ ರಸನೇಂದ್ರಿಯಜನ್ಯ ಜ್ಞಾನಗಳು—** ಸೀ, ಉಪ್ಪು, ಕಹಿ, ಹುಳಿ,

(೨) ಜಠರದ ಆರ್ದ್ರ ತ್ವಚೆಯ ಭಾಗವು ನಾಲಿಗೆಯ ಮೇಲ್ಭಾಗಕ್ಕೆ ಇರುವ ತ್ವಚೆಯಲ್ಲಿ ಬಂದು ಸೇರಿಕೊಂಡಿರುವದರಿಂದ ನಾಲಿಗೆಯು ಜಠರದ ಬಾಗಿಲವೆಂದು ಹೇಳಬಹುದು. ಅದರಿಂದ ನಾಲಿಗೆಯನ್ನು ನೋಡಿ ಜಠರದ ಸ್ಥಿತಿಯನ್ನು ತಿಳಿದುಕೊಳ್ಳ

ಲಿಕ್ಕಾಗುವದು. ಜೇನೆ ಬಂದಾಗ ಪಚನಕ್ರಿಯೆಯು ಅಬಾಧಿತವಾಗಿ ನಡಿಯದ್ದರಿಂದ ನಾಲಿಗೆಯಮೇಲೆ ಒಂದು ತರದ ಕಿಟ್ಟು ಕೂಡ್ರುವದು. ಆದ್ದರಿಂದ ನಾಲಿಗೆ ಹಾಗು ಜಠರಗಳಿಂದ ಆಗುವ ಸಂಕಲಿತ ಜ್ಞಾನಗಳು; ಆಹಾರಸಂಬಂಧವಾದ ಪದಾರ್ಥಗಳ ವಿಷಯಕ್ಕೆ ಪ್ರೀತಿ ಇಲ್ಲವೆ ಹೇಸಿಕೆ. ನಾಲಿಗೆ ಹಾಗು ಸ್ಪರ್ಶೇಂದ್ರಿಯಗಳಿಂದಾಗುವ ಸಂಕಲಿತ ಜ್ಞಾನಗಳು; ಖಾರ, ಸೌಳು, ಖಾಟ ಇತ್ಯಾದಿ.

ನಾಸಿಕಕ್ಕೆ ಸಂಬಂಧಿಸಿದ ಸಂಕಲಿತ ಜ್ಞಾನ — ಸ್ವಾದ (ಉಳ್ಳಾಗಡ್ಡಿ ಮುಂತಾದ ಸಂಕಲಿತ ಜ್ಞಾನ)

ಶಿಕ್ಷಣ ಕಾರ್ಯದಲ್ಲಿ ರಸನೇಂದ್ರಿಯದ ಉಪಯೋಗವು ಹೇಳಿಕೊಳ್ಳುವಷ್ಟು ಆಗುವದಿಲ್ಲ. ಎಷ್ಟೋ ಪದಾರ್ಥಗಳ ಹಾಗು ವನಸ್ಪತಿಗಳ ಗುಣಗಳನ್ನು ರುಚಿಯ ಮೇಲಿಂದ ತಿಳಿದುಕೊಳ್ಳಲಿಕ್ಕೆ ಆಗುವದು. ಆದರೆ ಅನೇಕ ವಸ್ತುಗಳು ಹಾಗು ವನಸ್ಪತಿಗಳು ವಿಷಕಾರಕವಿರುವದರಿಂದ ಅವುಗಳ ರುಚಿ ನೋಡಿ ಜ್ಞಾನಮಾಡಿಕೊಳ್ಳುವದು ಅಪಾಯಕಾರಕವಾಗಿರುವದು.

ಘ್ರಾಣೇಂದ್ರಿಯ—ನಾಸಿಕದ ಒಳಗಡೆಗೆ ತುಸು ಮೇಲ್ಭಾಗಕ್ಕೆ ಜರಡಿಯ ಹಾಗೆ ರಂಧ್ರಗಳುಳ್ಳ ಒಂದು ಎಲವು ನಾಸಿಕದ ಭಾಗವನ್ನು ಮಿದುಳಿನಿಂದ ಬೇರ್ಪಡಿಸಿರುವದು. ಆ ಎಲುವಿನ ಮೇಲೆ ಗಂಧವನ್ನು ಗ್ರಹಿಸುವ ಗಂಧಗ್ರಾಯಿ ಪಾಳಿ ಇದ್ದು ಅದರಲ್ಲಿ ಜ್ಞಾನವಾಹಿ ನರಗಳು ಹರಡಿಕೊಂಡಿರುವವು. ಮೂಗಿನ ಹೊರಳಿಗಳು ಆರ್ದ್ರವಾಗಿರುವಂತೆ ವ್ಯವಸ್ಥೆ ಇರುವದು. ಈ ಸ್ಥಿತಿಯು ವಾಸನೆಯ ಜ್ಞಾನವನ್ನುಂಟು ಮಾಡಲಿಕ್ಕೆ ಬಹು ಅನುಕೂಲವಾಗಿರುವದು. ನಾವು ಸ್ವಾಭಾವಿಕವಾಗಿ ಉಸುರಾಡಿಸುತ್ತಿರುವಾಗ ಹವೆಯು ಮುಂದಿನ ಮೇಲ್ಭಾಗಕ್ಕಿರುವ ಗಂಧದ ಕಣವನ್ನು ಪ್ರವೇಶಿಸದೆ ಕೆಳಗಿನಿಂದಲೇ ಪುಪ್ಪುಸಗಳಲ್ಲಿ ಸೇರುವದರಿಂದ ನಮಗೆ ಪದಾರ್ಥಗಳ ವಾಸನೆಯು ಗೊತ್ತಾಗುವದು. ವಾಸನೆಯುಳ್ಳ ಪದಾರ್ಥಗಳು ಅತಿ ಸೂಕ್ಷ್ಮಕಣಗಳನ್ನು ಹವೆಗೆ ಕಳಿಸುತ್ತಲೇ ಇರುವವು. ಈ ಕಣಗಳಿಂದೊಡಗೂಡಿದ ವಾಯುವು ನಾವು ಪ್ರಯತ್ನಪೂರ್ವಕವಾಗಿ ಶ್ವಾಸತೆಗೆದುಕೊಂಡಾಗ ಗಂಧದ ಕಣದಲ್ಲಿ ಸೇರಿ ಅಲ್ಲಿರುವ ಆರ್ದ್ರತ್ವಚೆಗೆ ಅಂಟಿಕೊಂಡು ಕೂಡ್ರುವವು. ಆ ದ್ರವದಲ್ಲಿ ಅವು ವಿದ್ರವಣಹೊಂದಿ ಒಳಭಾಗದಲ್ಲಿ ಹರಡಿಕೊಂಡಿರುವ ಜ್ಞಾನವಾಹಿನರಗಳಿಗೆ ಹೋಗಿ ಮುಟ್ಟಲು ಅಲ್ಲಿ ಕಂಪನಗಳುಂಟಾಗುವವು. ಆ ಕಂಪನಗಳು ಮಿದುಳಿನ ವಿವಕ್ಷಿತಕೋಶಗಳಿಗೆ ಹೋಗಿ ಮುಟ್ಟಲು ಒಂದೊಂದು ಬಗೆಯ ವಾಸನೆಯ ಜ್ಞಾನವಾಗುವದು. ಮೂಗು ಒಣಗಿದಾಗ ಇಲ್ಲವೆ ಹೆಚ್ಚು ಆರ್ದ್ರತೆಯುಳ್ಳದ್ದಾಗ ನಮಗೆ ವಾಸನೆಯು ಗೊತ್ತಾಗುವದಿಲ್ಲ. ನೆಗಡಿಯಾದಾಗ ವಾಸನೆಯು ತಿಳಿಯದಿದ್ದ ಕಾರಣವು ಇದೇ. ನಮಗೆ ವಾಸನೆಯು

ಬರಬೇಕಾದರೆ ಹೆಚ್ಚು ಕಣಗಳು ಗಂಧಃಕಣಗಳು ಸೇರಲಿಕ್ಕೆಬೇಕು. ಇದಕ್ಕಾಗಿ ನಾವು ಹವೆಯನ್ನು ಮೂಗಿನ ಹೊಳ್ಳೆಗಳಿಂದ ಶೇದಿಕೊಳ್ಳುತ್ತೇವೆ. ಕಣಗಳನ್ನು ಹೊರಗೆ ಬಿಡದಿದ್ದ ಪದಾರ್ಥಗಳ ವಾಸನೆಯು ನಮಗೆ ಉಂಟಾಗಲಾರದು. ವಾಸನೆಯನ್ನು ತಿಳಕೊಳ್ಳುವ ಶಕ್ತಿಯು ಬೇರೆ ಬೇರೆ ಜನರಲ್ಲಿ ಬೇರೆ ಬೇರೆ ವಿಧವಾಗಿರುವದು. ಇದು ಕಾಡು ಜನರಲ್ಲಿ ಅತಿ ಚುರುಕಾಗಿರುವದು. ಹಿಂಸ್ರ ಪ್ರಾಣಿಗಳು ವಾಸನೆಯಿಂದಲೆ ದೂರದಲ್ಲಿರುವ ಭಕ್ಷ್ಯಪ್ರಾಣಿಗಳನ್ನು ತಿಳಿದುಕೊಳ್ಳುವವು.

ಘ್ರಾಣೇಂದ್ರಿಯ ಜನ್ಯಜ್ಞಾನದ ಪ್ರಕಾರಗಳು

(೧) ನಿಜವಾದ ಘ್ರಾಣೇಂದ್ರಿಯ ಜನ್ಯಜ್ಞಾನ ೧ ಸುವಾಸನೆ ೨ ನಾತ.

೨ ನೇ ಪ್ರಕಾರ— ಫುಪ್ಫುಸಗಳಿಗೆ ಸಂಬಂಧಿಸಿದ ಸಂಕಲಿತಜ್ಞಾನ— ಬಾಗಿಲು ಕಿಡಿಕಿಗಳನ್ನು ಮುಚ್ಚಿಟ್ಟ ತಳದಲ್ಲಿ ಬರುವ ಉಸುರುಗಟ್ಟುವ ಹವೆಯ ನಾತ.

೩ ನೇ ಪ್ರಕಾರ— ತ್ವಕ್ಕಿಗೆ ಸಂಬಂಧಿಸಿದ ಸಂಕಲಿತಜ್ಞಾನ— ಅಮೋನಿಯಾ.

೪ ನೇ ಪ್ರಕಾರ— ನಾಲಿಗೆಗೆ ಸಂಬಂಧಿಸಿದ ಸಂಕಲಿತಜ್ಞಾನ— ಸ್ವಾದ (ಉಳ್ಳಾಗಡ್ಡಿ ರುಚಿ)

ರಸನೇಂದ್ರಿಯದ ವಿಷಯವಾಗಿ ಹೇಳಿದ ಕಾರಣಗಳು ಶಿಕ್ಷಣದ ಸಂಬಂಧದಿಂದ ಈ ಇಂದ್ರಿಯಕ್ಕೂ ಹತ್ತುವವು. ಎಷ್ಟೋ ಪದಾರ್ಥಗಳ ವಾಸನೆಯು ಅಪಾಯಕರ ವಾಗಿರುವದು.

ಮೇಲೆ ಹೇಳಿದ ವಿವೇಚನೆಯಿಂದ ಪಂಚೇಂದ್ರಿಯಗಳಿಂದ ಒಂದೊಂದು ಬಗೆಯ ಇಂದ್ರಿಯಜನ್ಯಜ್ಞಾನವಾಗಬೇಕಾದರೆ ಒಂದೊಂದು ಬಗೆಯ ಬಾಹ್ಯ ಉತ್ತೇಜಕದ ಪರಿಣಾಮವು ಆಯಾ ಇಂದ್ರಿಯಗಳಲ್ಲಿ ಹರಿಡಿಕೊಂಡಿರುವ ಜ್ಞಾನವಾಹಿನರಗಳ ಮೇಲೆ ಆಗಲಿಕ್ಕೆಬೇಕು. ನೇತ್ರೇಂದ್ರಿಯದಿಂದ ಆಗತಕ್ಕ ಜ್ಞಾನಕ್ಕೆ ಪ್ರಕಾಶವು, ಶ್ರವಣೇಂದ್ರಿಯದಿಂದ ಆಗತಕ್ಕ ಜ್ಞಾನಕ್ಕೆ ಹವೆಯೊಳಗಿನ ತರಂಗಗಳು, ತ್ವಗಿಂದ್ರಿಯದಿಂದ ಆಗತಕ್ಕ ಜ್ಞಾನಕ್ಕೆ ಚರ್ಮದ ಮೇಲೆ ಬೀಳತಕ್ಕ ಭಾರವು, ರಸನೇಂದ್ರಿಯದಿಂದಾಗತಕ್ಕ ಜ್ಞಾನಕ್ಕೆ ಯಾವದಾದರೊಂದು ದ್ರವದಿಂದ ಕರಗಿದ ಪದಾರ್ಥಗಳು, ಘ್ರಾಣೇಂದ್ರಿಯದಿಂದಾಗತಕ್ಕ ಜ್ಞಾನಕ್ಕೆ ವಾಸನೆಯನ್ನುಂಟುವ ಸೂಕ್ಷ್ಮವಾದ ಕಣಗಳು ಉತ್ತೇಜಕಗಳಾಗುವವು. ಈ ಉತ್ತೇಜಕಗಳ ಪರಿಣಾಮವು ಜ್ಞಾನವಾಹಿಗಳ ಮೇಲೆ ಆಗಲು ಅವುಗಳಲ್ಲಿ ಕಂಪನಗಳುಂಟಾಗಿ ಆ ಕಂಪನಗಳು ಮಿದುಳಿಗೆ ಹೋಗಿ ಮುಟ್ಟುವವು. ಇಲ್ಲಿಯ ವರೆಗೆ ನಡೆಯುವ ವ್ಯಾಪಾರಗಳೆಲ್ಲ ಯಾಂತ್ರಿಕ ವ್ಯಾಪಾರಗಳೇ. ಆದರೆ ಆ ತರಂಗಗಳಿಂದ ಮಿದುಳಿನ ಕೋಶಗಳಲ್ಲಿ ತುಂಬಿರುವ ಜೀವನರಸದಲ್ಲಿ ಹ್ಯಾಗೆ ಸ್ಥಿತ್ಯಂತರಗಳಾ

ಗುವವೋ ಆ ಸ್ಥಿತ್ಯಂತರಗಳಿಂದ ನಮಗೆ ಯಾವದೊಂದು ಬಗೆಯ ಇಂದ್ರಿಯ ಜನ್ಯ ಜ್ಞಾನವಾಗುವದೆಂಬ ಸಂಗತಿಯು ನಮಗೆ ಇನ್ನೂ ತಿಳಿಯದಷ್ಟು ಗೂಢವಾಗಿದೆ. ಇಂದ್ರಿಯಜನ್ಯಜ್ಞಾನದ ಮೇಲೆ ಮಿದುಳಿನ ಕೋಶಗಳು ವಿಚಾರಪೂರ್ವಕವಾಗಿ ಕೆಲವೊಂದು ಕಾರ್ಯವನ್ನು ನಡಿಸಲು ಆಗುವ ಜ್ಞಾನಕ್ಕೆ ಬೋಧೆ ಎಂಬ ಹೆಸರು. ಪ್ರಬುದ್ಧರಾದ ಮನುಷ್ಯರ ಇಂದ್ರಿಯಜನ್ಯಜ್ಞಾನಗಳೆಲ್ಲ ಆಯಾ ತರದ ಬೋಧೆಗಳಾಗಿರುವವು. ವಿವಕ್ಷಿತ ಇಂದ್ರಿಯಜನ್ಯಜ್ಞಾನವನ್ನುಂಟುಮಾಡುವ ಬಾಹ್ಯವಸ್ತುವಿಗೆ ಸಂಬಂಧಿಸುವ ವ್ಯಾಪಾರಕ್ಕೆ 'ಸಲ' ಎಂಬ ಮಾನಸಶಾಸ್ತ್ರಜ್ಞನು 'ಬೋಧೆ' ಎಂಬ ಹೆಸರನ್ನು ಕೊಟ್ಟಿರುವನು. ಬೋಧೆಯುಂಟಾಗುವ ಕ್ರಮವನ್ನು ಪರೀಕ್ಷಿಸುವಾ:—

"ನಾನು ಒಂದು ಕಿತ್ತಳೆಹಣ್ಣನ್ನು ನೋಡುತ್ತೇನೆ." ಈ ಬೋಧೆಯಲ್ಲಿ ಅವಶ್ಯವಾದ ವ್ಯಾಪಾರಗಳೆಂದರೆ 'ನಾನು ನೋಡುತ್ತೇನೆ' ಎಂಬದು, ಕಿತ್ತಳೆಹಣ್ಣಿನ ಮೇಲೆ ಬಿದ್ದು ಪರಾವರ್ತವಾದ ಕಿರಣಗಳು ಕಣ್ಣಿನೊಳಗಿನ ಜ್ಞಾನವಾಹಿ ನರಗಳಿಂದ ಮಿದುಳಿಗೆ ಹೋಗಿ ಮುಟ್ಟಲು, ಮಿದುಳು ಮೊಟ್ಟಮೊದಲು ಆ ಜ್ಞಾನವು ಕಣ್ಣಿಗೆ ಸಂಬಂಧಿಸಿದ್ದೆಂದು ಗೊತ್ತುಮಾಡಿಕೊಳ್ಳುವದು. ಆ ಮೇಲೆ, 'ನಾನು ಕೆಲವೊಂದು ವಸ್ತುವನ್ನು ನೋಡುತ್ತೇನೆ, ಎಂಬ ಅರಿವು ಮಿದುಳಿಗುಂಟಾಗುವದು. ಕೂಡಲೆ ಆ ವಸ್ತುವು ಯಾವದು ? ಎಂದು ಮಿದುಳು ವಿಚಾರಿಸಹತ್ತಲು ಅದಕ್ಕೆ ಆ ವಸ್ತುವಿನ ಬಣ್ಣ ಆಕಾರಗಳು ಗೋಚರವಾಗಹತ್ತುವವು. ಆ ಜ್ಞಾನವನ್ನು ಹೊರಡಿಸುವ ವಸ್ತುವನ್ನು ಸಂಬಂಧಿಸಿಕೊಂಡು 'ನಾನು ಒಂದು ಕಿತ್ತಳೆಹಣ್ಣನ್ನು ನೋಡುತ್ತೇನೆ' ಎಂದು ಬೋಧೆಯನ್ನು ಮಾಡಿಕೊಳ್ಳುವದು. ಇಷ್ಟೆಲ್ಲ ಕಾರ್ಯಗಳಾದ ಮೇಲೆ ಮಿದುಳಿಗೆ ಒಂದು ಬಗೆಯ ಸಂಸ್ಕಾರವಾಗಿ ಕಿತ್ತಳೆಹಣ್ಣಿನ ಬಿಂಬವು ಮಿದುಳಿನಲ್ಲಿ ಉಳಿಯುವದು. ಮುಂದೆ ಆ ವಸ್ತುವಿಲ್ಲದೆ ಅದರ ಕಲ್ಪನೆಯು ಮಿದುಳಿಗೆ ಬರಹತ್ತುವದು. ನಾವು ಚನ್ನಾಗಿ ಅವಲೋಕಿಸದಿದ್ದ ಪದಾರ್ಥಗಳ ಬಿಂಬವು ಮುಸಮುಸಕಾಗಿ ಆಗುವದರಿಂದ ಬೋಧೆಯಾದರೂ ಇತಿಮಿತಿಯಾಗುವದು. ಇದರಂತೆ ಉಳಿದ ಇಂದ್ರಿಯಗಳಿಂದಾಗುವ ಬೋಧೆಯಲ್ಲಿ ಇದೇ ಕ್ರಮವಿರುವದು. ಬೋಧೆಯನ್ನುಂಟುಮಾಡುವ ಪಂಚೇಂದ್ರಿಯಗಳ ಮಹತ್ವವು ಏಕಪ್ರಕಾರವಾಗಿರದೆ ಅದರಲ್ಲಿ ತಾರತಮ್ಯ ಇದ್ದದ್ದು ಕಂಡುಬರುವದು.

ತ್ವಗಿಂದ್ರಿಯ ನೇತ್ರೇಂದ್ರಿಯ ಹಾಗೂ ಶ್ರವಣೇಂದ್ರಿಯಗಳಿಂದ ಆಗುವ ಬೋಧೆಯು ಬಹುಮಟ್ಟಿಗೆ ಯಥಾರ್ಥವಾದದ್ದೂ ಬಹುಕಾಲದ ವರೆಗೆ ಮಿದುಳಿನಲ್ಲಿ ಉಳಿಯುವದೂ ಇರುವದು. ಬಾಲಕರಲ್ಲಿ ತ್ವಗಿಂದ್ರಿಯವು ಬಹು ಚುರುಕಾಗಿದ್ದು ಅವರು ಉಳಿದ ಇಂದ್ರಿಯದಿಂದ ಉಂಟಾದ ಜ್ಞಾನವನ್ನೂ ತ್ವಗಿಂದ್ರಿಯದ ಸಹಾಯದಿಂದ ಪರೀಕ್ಷಿಸಿ ಅದರ ನಿಜಸ್ವರೂಪವನ್ನು ತಿಳಿದುಕೊಳ್ಳುವರು. ಇದ

ರಿಂದ ಅವರು ಪ್ರತಿಯೊಂದು ಪದಾರ್ಥವನ್ನು ಮುಟ್ಟಿ ನೋಡಿ ಅದರ ನಿಜಸ್ವರೂಪ ವನ್ನು ತಿಳಿದುಕೊಳ್ಳುತ್ತಿರುವರು. ಅವರು ದೊಡ್ಡವರಾದ ಮೇಲೆ ಅನೇಕ ತರದ ಜ್ಞಾನವನ್ನು ಕಣ್ಣಿನ ಸಹಾಯದಿಂದಲೇ ಮಾಡಿಕೊಳ್ಳುವದರಿಂದ ಕಣ್ಣಿನ ಮಹ ತ್ವವು ಬೆಳೆದು ಉಳಿದ ಇಂದ್ರಿಯಗಳ ಉಪಯೋಗವನ್ನೂ ಪ್ರಸಂಗವಶಾತ್ ಮಾಡಿಕೊ ಳ್ಳಹತ್ತುವರು. ಆ ಕಾರಣ ಕಣ್ಣಿನಿಂದ ನೋಡಿದ ಪದಾರ್ಥಗಳ ಚಿತ್ರಗಳು ಮಿದುಳಿ ನಲ್ಲಿ ಬಿಂಬಿಸಹತ್ತುವವು. ಈ ಬಿಂಬಗಳು ಸ್ಮರಣದಲ್ಲಿ ಉಳಿದು ಬೇಕಾದಾಗ ನಮಗೆ ನೆನಪಾಗುವದು. ಶ್ರವಣೇಂದ್ರಿಯದ ಸಹಾಯದಿಂದ ಮಿದುಳಿನಲ್ಲಿ ಒಂದು ಪ್ರಕಾರದ ಶಾಬ್ದಿಕ ಚಿತ್ರಗಳು ಉಂಟಾಗುವವು. ಇವು ಪ್ರತ್ಯಕ್ಷ ವಸ್ತುಗಳಿಗೆ, ಇಲ್ಲವೆ ಕಾಲ್ಪನಿಕ ವಸ್ತುಗಳಿಗೆ, ಸಂಬಂಧಿಸಿದವುಗಳು ಇರಬಹುದು. ರಸನೇಂದ್ರಿಯ ಘ್ರಾಣೇಂದ್ರಿಯ ಗಳು ಬೋಧೆಯನ್ನುಂಟು ಮಾಡುವ ಕಾರ್ಯದಲ್ಲಿ ಅಮುಖ್ಯವಾಗಿರುವವು. ಯಾಕಂದರೆ,

(೧) ಇವುಗಳಿಂದಾದ ಜ್ಞಾನವು ಇಂಥ ಇಂದ್ರಿಯದಿಂದಲೇ ಆಯಿತೆಂದು ಹೇಳಲಿಕ್ಕೆ ಬರುವದಿಲ್ಲ. ಸ್ವಾದವು ರಸನೇಂದ್ರಿಯಕ್ಕೆ ಸಂಬಂಧಿಸಿದ್ದೊ ಅಥವಾ ಘ್ರಾಣೇಂದ್ರಿಯಕ್ಕೆ ಸಂಬಂಧಿಸಿದ್ದೊ ತಿಳಿಯುವದಿಲ್ಲ.

(೨) ಇವುಗಳಿಂದಾಗುವ ಜ್ಞಾನಗಳ ಪ್ರಕಾರಗಳನ್ನೂ ಬೇರ್ಪಡಿಸಿ ಗೊತ್ತು ಹಚ್ಚಿಕೊಳ್ಳುವದು ಸುಲಭಸಾಧ್ಯವಲ್ಲ. ಗುಲಾಬಿ ಅತ್ತರವನ್ನು ಮೂಸಿ ನೋಡಿದ ಮೇಲೆ ಮತ್ತೊಂದು ಅತ್ತರವನ್ನು ಮೂಸಿ ನೋಡಿದರೆ ಎರಡೂ ಅತ್ತರಗಳ ವಾಸನೆಯು ತಿಳಿಯದಂತಾಗುವದು. ಬೇರೆ ಬೇರೆ ಕಾಲದಲ್ಲಿ ಇವುಗಳಿಂದ ಒಂದೇ ವಸ್ತುವಿನಿಂದಾ ಗುವ ಜ್ಞಾನವು ಒಂದೇ ತರದ್ದಿರುವದಿಲ್ಲ.

(೩) ಇವುಗಳಿಂದ ಬಾಹ್ಯಸೃಷ್ಟಿಯಲ್ಲಿರತಕ್ಕ ಎಲ್ಲಾ ವಸ್ತುಗಳ ಜ್ಞಾನವಾಗ ಲಾರದು. ಅನೇಕ ವಸ್ತುಗಳಿಗೆ ವಾಸನೆಯು ಇರುವದಿಲ್ಲ. ರುಚಿಯೂ ಇರುವದಿಲ್ಲ.

(೪) ಇವುಗಳಿಂದಾದ ಜ್ಞಾನವು ಬಹುಬೇಗ ಇಲ್ಲದಂತಾಗುವದು. ಅದರ ಸ್ಮರಣವು ಪುನಃ ಆಗಲಾರದು.

ಮನಸ್ಸಿಗೂ ಶರೀರಕ್ಕೂ ಇರುವ ಪ್ರತ್ಯಕ್ಷ ಸಂಬಂಧ:— ಇದು ವರೆಗೆ ಮಾಡಿದ ವಿವೇಚನದಿಂದ ಶರೀರವು ಬಾಹ್ಯವಸ್ತುಗಳ ಸಂಬಂಧವನ್ನು ಮಿದುಳಿಗೆ ಮಾಡಿ ಕೊಡುವ ಒಂದು ಸಾಧನವೆಂದೂ ಶರೀರದಲ್ಲಿರುವ ಪಂಚೇಂದ್ರಿಯಗಳು ಮಿದುಳಿನ ಸೇವಕರೆಂದೂ ಗೊತ್ತಾಗುವದು. ಆದರೆ, ಮನಸಿಗೂ ಶರೀರಕ್ಕೂ ಸೇವ್ಯ ಸೇವಕ ಸಂಬಂಧವಿರದೆ ಅದಕ್ಕೂ ಹೆಚ್ಚಿನದಾದ ಪ್ರತ್ಯಕ್ಷ ಸಂಬಂಧವಿದ್ದದ್ದು ಕಂಡುಬರುವದು.

ಆ ಸಂಬಂಧದ ಇಂಗಿತವು, ಮಾತ್ರ ಇನ್ನೂ ನಮಗೆ ಗೊತ್ತಾಗಿಲ್ಲ. ಸುಖದುಃಖ, ಆಶೆ, ನಿರಾಶೆ ಮೊದಲಾದ ಮನೋವ್ಯಾಪಾರದಿಂದ ಶರೀರದ ಮೇಲೆ ಒಂದೊಂದು ತರದ

ವಿಕಾರಗಳುಂಟಾಗಿರುವವು. ಇದರಂತೆ ಶರೀರವು ನಿರೋಗಿಯಾಗಿದ್ದಾಗ ಮನೋವ್ಯಾಪಾರಗಳು ಚುರುಕಾಗಿರುವವು.

ಮನೋವ್ಯಾಪಾರಗಳ ಪರಿಣಾಮವು ಶರೀರದ ಮೇಲೆ ಯಾವ ಬಗೆಯಿಂದ ಆಗುವದೆಂಬದು ಮುಂದಿನ ಪ್ರಯೋಗಗಳಿಂದ ತಿಳಿದುಬರುವಂತಿದೆ.

ಟೆಲಿಫೋನ ಎಂಬ ಯಂತ್ರ ಶೋಧಕರಾದ ಪ್ರೊ. ಬೇಲ ಇವರು ಒಮ್ಮೆ ಅತಿಶಯ ಶೀತ ಪ್ರದೇಶದಲ್ಲಿ ಗಾಡಿಯಿಂದ ಸಂಚಾರ ಮಾಡುತ್ತಿದ್ದರು. ಆ ಥಂಡಿಯು ಅಸಹ್ಯವಾದುದಿದ್ದದರಿಂದ ಕೈಕಾಲೊಳಗಿನ ರಕ್ತವು ಗಡ್ಡೆಗಟ್ಟಬಹುದೆಂದು ಸಾಹೇಬರು ಭಯಪಡಹತ್ತಿದರು. ಅವರಿಗೆ ಮನಸಿನ ಅದ್ಭುತ ಕ್ರಿಯಾಶಕ್ತಿಯ ಮಾಹಿತಿಯು ಚೆನ್ನಾಗಿದ್ದಿತು. ಕೂಡಲೇ ಕೈಕಾಲುಗಳಿಗೆ ಮಾನಸಿಕ ವಿಚಾರಗಳ ಸಂಯೋಗವನ್ನುಂಟುಮಾಡಿ ಅವಯವಗಳಿಗೆ ಹೊಸ ರಕ್ತವನ್ನು ಪುರೈಸಿಕೊಂಡು ಥಂಡಿಯಿಂದಾಗತಕ್ಕ ದುಷ್ಪರಿಣಾಮದಿಂದ ದೂರಾದರು. ಒಂದು ಸಾರೆ ಪ್ರೊ। ಎಲ್ಮರ ಇವರು ಒಂದೇ ಆಕಾರದ ಎರಡು ಪಾತ್ರೆಗಳಲ್ಲಿ ಪೂರ್ಣವಾಗಿ ನೀರು ತುಂಬಿ ಅವುಗಳಲ್ಲಿ ತಮ್ಮ ಒಂದೊಂದು ಕೈಯನ್ನು ಭುಜದ ವರೆಗೆ ಮುಳುಗಿಸಿದರು. ಬಳಿಕ ಅವುಗಳಲ್ಲೊಂದು ಕೈಮೇಲೆ ಮನಸ್ಸನ್ನು ಏಕೀಕರಿಸಿ ತಮ್ಮ ಇಚ್ಛಿತ ಹಸ್ತಕ್ಕೆ ಹೊಸ ರಕ್ತದ ಪೂರೈಕೆಯಾಗಬೇಕೆಂಬ ವಿಚಾರವನ್ನು ನಡಿಸಿದರು. ಹೀಗೆ ಕೆಲವು ವೇಳೆಯು ಸಂದಿದ ಮೇಲೆ ಕೈಯೊಳಗೆ ಹೊಸ ರಕ್ತವು ಪ್ರವಹಿಸಹತ್ತಿ ಆ ರಕ್ತದ ಯೋಗದಿಂದ ಕೈಯು ಉಬ್ಬಹತ್ತಿತು. ಮೆಲ್ಲ ಮೆಲ್ಲನೆ ನೀರು ಬೀಳಲಾರಂಭಿಸಿತು. ಇದರಂತೆಯೇ ಮತ್ತೊಂದು ಕೈ ಮೇಲೆ, ಮನಸ್ಸನ್ನು ಹಚ್ಚಲು ಅದಕ್ಕೂ ಹೊಸ ರಕ್ತವು ಸಿಕ್ಕು ಕೈಯು ಉಬ್ಬಿದಂತಾಗಿ ಪಾತ್ರೆಯೊಳಗಿನ ನೀರು ಹೊರಚಲ್ಲಿತು. ಇವು ಪ್ರಯೋಗಸಿದ್ಧವಾದ ಮಾತುಗಳಾಗಿರುವವು. ಶರೀರದ ಪ್ರತಿಯೊಂದು ಭಾಗದ ಮೇಲೆ ಮಾನಸಿಕ ವಿಚಾರಗಳನ್ನು ಹಚ್ಚಿ ಆ ಭಾಗಕ್ಕೆ ಹೊಸ ರಕ್ತವನ್ನು ಪೂರೈಸಿಕೊಡಲಿಕ್ಕೆ ಬರುತ್ತದೆಂದು ಅವರಿಗೆ ಪೂರ್ಣ ಅನುಭವವಿದೆ. ಇದರಂತೆ ಪ್ರತಿಯೊಬ್ಬನಿಗಾದರೂ ಮಾಡಲಿಕ್ಕೆ ಬರುತ್ತದೆ. ಮಾತ್ರ ಆ ಭಾಗದ ಮೇಲೆ ಮನಸ್ಸಿನ ಪೂರ್ಣ ಏಕಾಗ್ರತೆ ಇರಲಿಕ್ಕೆಬೇಕು. ಮೂರ್ಛಾಪ್ರಯೋಗ (ಮೆಸ್ಮೆರಿಝುಮ್ ಹಿಪ್ನಾಟಿಝುಮ್) ವಾದರೂ ಮೇಲೆ ಹೇಳಿದ ತತ್ತ್ವವನ್ನು ಅವಲಂಬಿಸಿದೆ.

ಹಲಕೆಲವರು ಆಡ್ಡಾಡುವದರಿಂದ ವ್ಯಾಯಾಮವಾಗುತ್ತದೆ; ಆಟಗಳನ್ನಾಡುವದರಿಂದ ಶರೀರವು ಬಲವುಳ್ಳದ್ದಾಗುತ್ತದೆ; ನಮ್ಮ ಕೈಕಾಲುಗಳು ಸದೃಢವಾಗುತ್ತವೆ. ಎಂದು ಹೇಳುತ್ತಾರೆ. ಊರಿಂದೂರಿಗೆ ಪತ್ರಗಳನ್ನು ಒಯ್ಯುವ ಮನುಷ್ಯನು ಪ್ರತಿದಿವಸ ಏನಿಲ್ಲೆಂದರೂ ಐದಾರು ಹರದಾರಿ ನಡೆಯುತ್ತಾನೆ. ಮೇಲೆ ಹೇಳಿದ ಜನರ ತಿಳುವಳಿಕೆಯಂತೆ ಆ ಮನುಷ್ಯನು ಶಾರೀರಿಕ ಬಲವುಳ್ಳವನೂ ಗಟ್ಟಿಮುಟ್ಟಾದ ಅವಯವಗಳುಳ್ಳವನೂ ಆಗಬೇಕು. ಆದರೆ ಆ ತೆರನಾದ ಪರಿಣಾಮವಾವದು ಕಂಡುಬರುವ

ದಿಲ್ಲ. ಯಾಕಂದರೆ ಆ ಮನುಷ್ಯನಲ್ಲಿ ತನ್ನ ಆರೋಗ್ಯತೆಯ ಬಗ್ಗೆ ಲೇಶವಾದರೂ ಕಲ್ಪನೆಯಿರುವದಿಲ್ಲ. ತನ್ನ ಕೆಲಸದ ಹೊರತು ಎರಡನೆಯದರ ಕಲ್ಪನೆಯು ಇರುವದಿಲ್ಲ. ಅಂದ ಬಳಿಕ ಶರೀದ ಮೇಲೆ ಆರೋಗ್ಯದ ಪರಿಣಾಮ ಹೇಗೆ ತಾನೇ ಘಟಿಸಬೇಕು ? ಇನ್ನು ಸುಖಮಯ ಕಲ್ಪನೆಯಿಲ್ಲದ ಆಟ ವ್ಯಾಯಾಮಗಳಲ್ಲಿ ಅನೈಚ್ಛಿಕವಾಗಿ ಕೆಲಮಟ್ಟಿಗೆ ಆರೋಗ್ಯವು ಬೆಳೆದರೂ ಆ ಆರೋಗ್ಯವು ನಮಗೆ ತಿಳಿಯದೆ ಆಗುವದರಿಂದ ಮನಸಿಗೆ ಏನೂ ಆನಂದವಾಗಲಾರದು. ಅದರಿಂದ ಆ ಆರೋಗ್ಯದ ಪರಿಣಾಮವು ಶರೀರದ ಮೇಲೆ ಆಗತಕ್ಕಷ್ಟು ಆಗುವದಿಲ್ಲ. ವ್ಯಾಯಾಮವನ್ನು ಸ್ವಲ್ಪವೇ ಮಾಡಿದರೂ ಸುಖಮಯ ಕಲ್ಪನೆಗಳನ್ನು ಮನಸ್ಸಿನಲ್ಲಿ ತರುತ್ತಿರಲಿಕ್ಕೆ ಬೇಕು. ಅಂದರೇನೇ ಆರೋಗ್ಯವು ಬೆಳೆಯುವದು.

ಮೇಲಿನ ಪ್ರಯೋಗಗಳಿಂದ ಮನೋನಿಶ್ಚಯವು ಶರೀರದ ಮೇಲೆ ಎಂತಹ ಪರಿಣಾಮವನ್ನುಂಟು ಮಾಡುತ್ತಿದೆ, ಎಂಬದು ಚನ್ನಾಗಿ ತಿಳಿಯುವಂತಿದೆ. ಪೂರ್ವದಲ್ಲಿ ಅನೇಕ ಋಷಿವರ್ಯರು ತಮ್ಮ ಇಚ್ಛಿತ ಫಲಗಳನ್ನು ಹೊಂದಿದ್ದು ಮನಸ್ಸಿನ ಏಕಾಗ್ರತೆಯಿಂದಲೇ. ಆ ಚಿತ್ತೈಕಾಗ್ರತೆಗೆ ಯೋಗಾಭ್ಯಾಸವೆಂದು ಹೆಸರು ಕೊಟ್ಟಿದ್ದರು. "ಇಚ್ಛೆಯಂತೆ ಫಲವು" ಎಂಬ ನುಡಿಯಾದರೂ ಇದರ ಸತ್ಯತೆಯನ್ನು ಪ್ರದರ್ಶಿಸುತ್ತದೆ.

ರೋಗಗ್ರಸ್ತನಾದ ಮನುಷ್ಯನಿಗೆ ರೋಗದ ವರ್ಣನೆಯನ್ನೂ ಅದರ ಭಯಾನಕ ಸ್ವರೂಪವನ್ನೂ ಭಾವೀ ದುಷ್ಪರಿಣಾಮಗಳನ್ನೂ ಹೇಳುವದರಿಂದ ಮನಸ್ಸು ಅದರಲ್ಲಿ ಐಕ್ಯವಾಗಿ ದಿವಸ ದಿವಸಕ್ಕೆ ರೋಗವು ಬಲವತ್ತರವಾಗುತ್ತದೆ. ಅಶಕ್ತತೆಯು ಮತ್ತಿಷ್ಟು ಬೆಳೆಯುತ್ತದೆ. ಆದರೆ ಅದೇ ರೋಗಿಯೊಡನೆ ಪ್ರತಿ ದಿವಸ ಕೆಲವು ಸಮಾಧಾನಕಾರಕ ಸಂಗತಿಗಳನ್ನು ಕುರಿತು ಮಾತಾಡುತ್ತಿದ್ದರೆ, ಬೇನೆಯು ತೀವ್ರವಾಗಿ, ನಾಶಹೊಂದುವದರಲ್ಲಿ ಸಂದೇಹವಿಲ್ಲ. ರೋಗಿಗೆ ಇತರ ಔಷಧಿಗಳಿಗಿಂತ ಮಹತ್ವವಾದ ಗುಣದಾಯಕ ಔಷಧವೆಂದರೆ, ಶಾರೀರಕ ಹಾಗೂ ಮಾನಸಿಕ ಶಾಂತದಾಯಕ ವಿಚಾರಗಳೇ. ರೋಗಪೀಡಿತನಾದವನಿಗೆ ರೋಗ, ಅಶಕ್ತತೆ, ತೊಂದರೆ ಇವುಗಳನ್ನು ಹೇಳುವದರ ಬದಲು ಆರೋಗ್ಯ, ಸಶಕ್ತತೆ, ಶಾಂತತೆ ಇವುಗಳಲ್ಲಿ ಮನಸ್ಸು ತಲ್ಲೀನವಾಗುವಂತೆ ಮಾಡಿದರೆ ತೀವ್ರ ಗುಣವಾಗುವದರಲ್ಲಿ ಸಂದೇಹವಿಲ್ಲ. ಈ ಸಂಗತಿಯು ಬಹಳ ಸ್ವಲ್ಪ ಜನರಿಗೆ ತಿಳಿದಿರುತ್ತದೆ. ಶಕ್ತಿದಾಯಕವಿಚಾರವೇ ಶಾರೀರಕ ಶಕ್ತಿಯ ಉಗಮಸ್ಥಾನವು. ಬೇನೆ ಅಶಕ್ತತೆಗಳು ಶಾರೀರಕ ಶಕ್ತಿಯ ವೈರಿಗಳೆಂದೇ ಹೇಳಬೇಕು. ಶರೀರದ ಯಾವದೊಂದು ಭಾಗಕ್ಕೆ ಧಕ್ಕೆ ಹತ್ತಿದಾಗ ಅದರ ಕಡೆಗೇ ಲಕ್ಷಗೊಟ್ಟು ಕುಳಿತರೆ, ಆ ನೋವು ಹೆಚ್ಚಾಗುವದೆಂಬದು ಪ್ರತಿಯೊಬ್ಬರ ಅನುಭವದ ಸಂಗತಿಯು. ಕೆಮ್ಮು ಹೆಚ್ಚಾಗಿದ್ದ ಮನುಷ್ಯನಿಗೆ ಕೆಮ್ಮು ನೆನಪಾದ ಕೂಡಲೆ ಗುಸುಗುಟ್ಟಹತ್ತುತ್ತಾನೆ. ವೈದ್ಯರು ರೋಗಿಗಳನ್ನು ಕುರಿತು, ನಿಮ್ಮ ರೋಗವು ನೆಟ್ಟಗಾಗಿದೆ, ಕಾಳಜಿಮಾಡಬೇಡಿರಿ, ಇನ್ನು ದಿನವೆರಡು ದಿನಗಳಲ್ಲಿ ಪೂರ್ಣವಾಸಿಯಾಗುವದು. ಎಂದು ಹೇಳುವ ಅಮೃತತುಲ್ಯ ವಾಕ್ಯಗಳ ಮರ್ಮವಾದರೂ ಇದೇ.

ವಿಕಾರಗಳುಂಟಾಗಿರುವವು. ಇದರಂತೆ ಶರೀರವು ನಿರೋಗಿಯಾಗಿದ್ದಾಗ ಮನೋವ್ಯಾಪಾರಗಳು ಚುರುಕಾಗಿರುವವು.

ಮನೋವ್ಯಾಪಾರಗಳ ಪರಿಣಾಮವು ಶರೀರದ ಮೇಲೆ ಯಾವ ಬಗೆಯಿಂದ ಆಗುವದೆಂಬದು ಮುಂದಿನ ಪ್ರಯೋಗಗಳಿಂದ ತಿಳಿದುಬರುವಂತಿದೆ.

ಟೆಲಿಫೋನ ಎಂಬ ಯಂತ್ರ ಶೋಧಕರಾದ ಪ್ರೊ. ಬೇಲ ಇವರು ಒಮ್ಮೆ ಅತಿಶಯ ಶೀತ ಪ್ರದೇಶದಲ್ಲಿ ಗಾಡಿಯಿಂದ ಸಂಚಾರ ಮಾಡುತ್ತಿದ್ದರು. ಆ ಥಂಡಿಯು ಅಸಹ್ಯವಾದುದಿದ್ದದರಿಂದ ಕೈಕಾಲೊಳಗಿನ ರಕ್ತವು ಗಡ್ಡೆಗಟ್ಟಬಹುದೆಂದು ಸಾಹೇಬರು ಭಯಪಡಹತ್ತಿದರು. ಅವರಿಗೆ ಮನಸಿನ ಅದ್ಭುತ ಕ್ರಿಯಾಶಕ್ತಿಯು ಮಾಹಿತಿಯು ಚೆನ್ನಾಗಿದ್ದಿತು. ಕೂಡಲೇ ಕೈಕಾಲುಗಳಿಗೆ ಮಾನಸಿಕ ವಿಚಾರಗಳ ಸಂಯೋಗವನ್ನುಂಟುಮಾಡಿ ಅವಯವಗಳಿಗೆ ಹೊಸ ರಕ್ತವನ್ನು ಪುರೈಸಿಕೊಂಡು ಥಂಡಿಯಿಂದಾಗತಕ್ಕ ದುಷ್ಪರಿಣಾಮದಿಂದ ದೂರಾದರು. ಒಂದು ಸಾರೆ ಪ್ರೊ। ಎಲ್ಮರ ಇವರು ಒಂದೇ ಆಕಾರದ ಎರಡು ಪಾತ್ರೆಗಳಲ್ಲಿ ಪೂರ್ಣವಾಗಿ ನೀರು ತುಂಬಿ ಅವುಗಳಲ್ಲಿ ತಮ್ಮ ಒಂದೊಂದು ಕೈಯನ್ನು ಭುಜದ ವರೆಗೆ ಮುಳುಗಿಸಿದರು. ಬಳಿಕ ಅವುಗಳಲ್ಲೊಂದು ಕೈಮೇಲೆ ಮನಸ್ಸನ್ನು ಏಕೀಕರಿಸಿ ತಮ್ಮ ಇಚ್ಛಿತ ಹಸ್ತಕ್ಕೆ ಹೊಸ ರಕ್ತದ ಪೂರೈಕೆಯಾಗಬೇಕೆಂಬ ವಿಚಾರವನ್ನು ನಡಿಸಿದರು. ಹೀಗೆ ಕೆಲವು ವೇಳೆಯು ಸಂದಿದ ಮೇಲೆ ಕೈಯೊಳಗೆ ಹೊಸ ರಕ್ತವು ಪ್ರವಹಿಸಹತ್ತಿ ಆ ರಕ್ತದ ಯೋಗದಿಂದ ಕೈಯು ಉಬ್ಬಹತ್ತಿತು. ಮೆಲ್ಲ ಮೆಲ್ಲನೆ ನೀರು ಬೀಳಲಾರಂಭಿಸಿತು. ಇದರಂತೆಯೇ ಮತ್ತೊಂದು ಕೈ ಮೇಲೆ, ಮನಸ್ಸನ್ನು ಹಚ್ಚಲು ಅದಕ್ಕೂ ಹೊಸ ರಕ್ತವು ಸಿಕ್ಕು ಕೈಯು ಉಬ್ಬಿದಂತಾಗಿ ಪಾತ್ರೆಯೊಳಗಿನ ನೀರು ಹೊರಚೆಲ್ಲಿತು. ಇವು ಪ್ರಯೋಗಸಿದ್ಧವಾದ ಮಾತುಗಳಾಗಿರುವವು. ಶರೀರದ ಪ್ರತಿಯೊಂದು ಭಾಗದ ಮೇಲೆ ಮಾನಸಿಕ ವಿಚಾರಗಳನ್ನು ಹಚ್ಚಿ ಆ ಭಾಗಕ್ಕೆ ಹೊಸ ರಕ್ತವನ್ನು ಪೂರೈಸಿಕೊಡಲಿಕ್ಕೆ ಬರುತ್ತದೆಂದು ಅವರಿಗೆ ಪೂರ್ಣ ಅನುಭವವಿದೆ. ಇದರಂತೆ ಪ್ರತಿಯೊಬ್ಬನಿಗಾದರೂ ಮಾಡಲಿಕ್ಕೆ ಬರುತ್ತದೆ. ಮಾತ್ರ ಆ ಭಾಗದ ಮೇಲೆ ಮನಸ್ಸಿನ ಪೂರ್ಣ ಏಕಾಗ್ರತೆ ಇರಲಿಕ್ಕೆಬೇಕು. ಮೂರ್ಛಾಪ್ರಯೋಗ (ಮೆಸ್ಮೆರಿಝಮ್ ಹಿಪ್ನಾಟಿಝಮ್) ವುದರೂ ಮೇಲೆ ಹೇಳಿದ ತತ್ವವನ್ನು ಅವಲಂಬಿಸಿದೆ.

ಹಲಕೆಲವರು ಅಡ್ಡಾಡುವದರಿಂದ ವ್ಯಾಯಾಮವಾಗುತ್ತದೆ; ಆಟಗಳನ್ನಾಡುವದರಿಂದ ಶರೀರವು ಬಲವುಳ್ಳದ್ದಾಗುತ್ತದೆ; ನಮ್ಮ ಕೈಕಾಲುಗಳು ಸದೃಢವಾಗುತ್ತವೆ. ಎಂದು ಹೇಳುತ್ತಾರೆ. ಊರಿಂದಊರಿಗೆ ಪತ್ರಗಳನ್ನು ಒಯ್ಯುವ ಮನುಷ್ಯನು ಪ್ರತಿದಿವಸ ಏನಿಲ್ಲೆಂದರೂ ಐದಾರು ಹರದಾರಿ ನಡೆಯುತ್ತಾನೆ. ಮೇಲೆ ಹೇಳಿದ ಜನರ ತಿಳುವಳಿಕೆಯಂತೆ ಆ ಮನುಷ್ಯನು ಶಾರೀರಕ ಬಲವುಳ್ಳವನೂ ಗಟ್ಟಿಮುಟ್ಟಾದ ಅವಯವಗಳುಳ್ಳವನೂ ಆಗಬೇಕು. ಆದರೆ ಆ ತೆರನಾದ ಪರಿಣಾಮವಾವದ್ದು ಕಂಡುಬರುವ

ದಿಲ್ಲ. ಯಾಕಂದರೆ ಆ ಮನುಷ್ಯನಲ್ಲಿ ತನ್ನ ಆರೋಗ್ಯತೆಯ ಬಗ್ಗೆ ಲೇಶವಾದರೂ ಕಲ್ಪನೆಯಿರುವದಿಲ್ಲ. ತನ್ನ ಕೆಲಸದ ಹೊರತು ಎರಡನೆಯದರ ಕಲ್ಪನೆಯು ಇರುವದಿಲ್ಲ. ಅಂದ ಬಳಿಕ ಶರೀದ ಮೇಲೆ ಆರೋಗ್ಯದ ಪರಿಣಾಮ ಹೇಗೆ ತಾನೇ ಘಟಿಸಬೇಕು! ಇನ್ನು ಸುಖಮಯ ಕಲ್ಪನೆಯಿಲ್ಲದ ಆಟ ವ್ಯಾಯಾಮಗಳಲ್ಲಿ ಅನೈಚ್ಛಿಕವಾಗಿ ಕೆಲಮಟ್ಟಿಗೆ ಆರೋಗ್ಯವು ಬೆಳೆದರೂ ಆ ಆರೋಗ್ಯವು ನಮಗೆ ತಿಳಿಯದೆ ಆಗುವದರಿಂದ ಮನಸಿಗೆ ಏನೂ ಆನಂದವಾಗಲಾರದು. ಅದರಿಂದ ಆ ಆರೋಗ್ಯದ ಪರಿಣಾಮವು ಶರೀರದ ಮೇಲೆ ಆಗತಕ್ಕಷ್ಟು ಆಗುವದಿಲ್ಲ. ವ್ಯಾಯಾಮವನ್ನು ಸ್ವಲ್ಪವೇ ಮಾಡಿದರೂ ಸುಖಮಯ ಕಲ್ಪನೆಗಳನ್ನು ಮನಸ್ಸಿನಲ್ಲಿ ತರುತ್ತಿರಲಿಕ್ಕೆ ಬೇಕು. ಅಂದರೇನೇ ಆರೋಗ್ಯವು ಬೆಳೆಯುವದು.

ಮೇಲಿನ ಪ್ರಯೋಗಗಳಿಂದ ಮನೋನಿಶ್ಚಯವು ಶರೀರದ ಮೇಲೆ ಎಂತಹ ಪರಿಣಾಮವನ್ನುಂಟು ಮಾಡುತ್ತದೆ, ಎಂಬದು ಚನ್ನಾಗಿ ತಿಳಿಯುವಂತಿದೆ. ಪೂರ್ವದಲ್ಲಿ ಅನೇಕ ಋಷಿವರ್ಯರು ತಮ್ಮ ಇಚ್ಛಿತ ಫಲಗಳನ್ನು ಹೊಂದಿದ್ದು ಮನಸ್ಸಿನ ಏಕಾಗ್ರತೆಯಿಂದಲೇ. ಆ ಚಿತ್ತೈಕಾಗ್ರತೆಗೆ ಯೋಗಾಭ್ಯಾಸವೆಂದು ಹೆಸರು ಕೊಟ್ಟಿದ್ದರು. "ಇಚ್ಛೆಯಂತೆ ಫಲವು" ಎಂಬ ನುಡಿಯಾದರೂ ಇದರ ಸತ್ಯತೆಯನ್ನು ಪ್ರದರ್ಶಿಸುತ್ತದೆ.

ರೋಗಗ್ರಸ್ತನಾದ ಮನುಷ್ಯನಿಗೆ ರೋಗದ ವರ್ಣನೆಯನ್ನೂ ಅದರ ಭಯಾನಕ ಸ್ವರೂಪವನ್ನೂ ಭಾವೀ ದುಷ್ಪರಿಣಾಮಗಳನ್ನೂ ಹೇಳುವದರಿಂದ ಮನಸ್ಸು ಅದರಲ್ಲಿ ಐಕ್ಯವಾಗಿ ದಿವಸ ದಿವಸಕ್ಕೆ ರೋಗವು ಬಲವತ್ತರವಾಗುತ್ತದೆ. ಅಶಕ್ತತೆಯು ಮತ್ತಷ್ಟು ಬೆಳೆಯುತ್ತದೆ. ಆದರೆ ಅದೇ ರೋಗಿಯೊಡನೆ ಪ್ರತಿ ದಿವಸ ಕೆಲವು ಸಮಾಧಾನಕಾರಕ ಸಂಗತಿಗಳನ್ನು ಕುರಿತು ಮಾತಾಡುತ್ತಿದ್ದರೆ, ಬೇನೆಯು ತೀವ್ರವಾಗಿ, ನಾಶಹೊಂದುವದರಲ್ಲಿ ಸಂದೇಹವಿಲ್ಲ. ರೋಗಿಗೆ ಇತರ ಔಷಧಿಗಳಿಗಿಂತ ಮಹತ್ವವಾದ ಗುಣದಾಯಕ ಔಷಧವೆಂದರೆ, ಶಾರೀರಕ ಹಾಗೂ ಮಾನಸಿಕ ಶಾಂತದಾಯಕ ವಿಚಾರಗಳೇ. ರೋಗಪೀಡಿತನಾದವನಿಗೆ ರೋಗ, ಅಶಕ್ತತೆ, ತೊಂದರೆ ಇವುಗಳನ್ನು ಹೇಳುವದರ ಬದಲು ಆರೋಗ್ಯ, ಸಶಕ್ತತೆ, ಶಾಂತತೆ ಇವುಗಳಲ್ಲಿ ಮನಸ್ಸು ತಲ್ಲೀನವಾಗುವಂತೆ ಮಾಡಿದರೆ ತೀವ್ರ ಗುಣವಾಗುವದರಲ್ಲಿ ಸಂದೇಹವಿಲ್ಲ. ಈ ಸಂಗತಿಯು ಬಹಳ ಸ್ವಲ್ಪ ಜನರಿಗೆ ತಿಳಿದಿರುತ್ತದೆ. ಶಕ್ತಿದಾಯಕವಿಚಾರವೇ ಶಾರೀರಕ ಶಕ್ತಿಯ ಉಗಮಸ್ಥಾನವು. ಬೇನೆ ಅಶಕ್ತತೆಗಳು ಶಾರೀರಕ ಶಕ್ತಿಯ ವೈರಿಗಳೆಂದೇ ಹೇಳಬೇಕು. ಶರೀರದ ಯಾವದೊಂದು ಭಾಗಕ್ಕೆ ಧಕ್ಕೆ ಹತ್ತಿದಾಗ ಅದರ ಕಡೆಗೇ ಲಕ್ಷಗೊಟ್ಟು ಕುಳಿತರೆ, ಆ ನೋವು ಹೆಚ್ಚಾಗುವದೆಂಬದು ಪ್ರತಿಯೊಬ್ಬರ ಅನುಭವದ ಸಂಗತಿಯು. ಕೆಮ್ಮು ಹೆಚ್ಚಾಗಿದ್ದ ಮನುಷ್ಯನಿಗೆ ಕೆಮ್ಮು ನೆನಪಾದ ಕೂಡಲೆ ಗುಸುಗುಟ್ಟಹತ್ತುತ್ತಾನೆ. ವೈದ್ಯರು ರೋಗಿಗಳನ್ನು ಕುರಿತು, ನಿಮ್ಮ ರೋಗವು ನೆಟ್ಟಗಾಗಿದೆ, ಕಾಳಜಿಮಾಡಬೇಡಿರಿ, ಇನ್ನು ದಿನವೆರಡು ದಿನಗಳಲ್ಲಿ ಪೂರ್ಣವಾಸಿಯಾಗುವದು. ಎಂದು ಹೇಳುವ ಅಮೃತತುಲ್ಯ ವಾಕ್ಯಗಳ ಮರ್ಮವಾದರೂ ಇದೇ.

ಪ್ರಕಟನೆ

ಡಾ. ಆತಾಹೂಸೇನ ಇವರು ಬರೆದ ಉರ್ದು ಮುರ್ಝುಮೂನ ನವಾಸೀ ಎಂಬ ಪುಸ್ತಕವನ್ನು ಮಂಜೂರುಮಾಡಿದ ಪುಸ್ತಕಗಳ ಯಾದಿಯಿಂದ ಕಡಿಮೆಮಾಡಿದೆ.

ಪುಣೆ, ತಾ|| ೨೭-೧೦-೩೩ } ಸೆಕ್ರೆಟರಿ ಉರ್ದು ಸ್ಕೂಲ ಬುಕ್ ಕಮಿಟಿ.

೧೯೩೫ನೆ ಇಸ್ವಿಯಲ್ಲಾಗುವ ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆಗೆ ಕೆಳಗೆ ಕಾಣಿಸಿದ ಪಾಠಗಳು ಗೊತ್ತು ಮಾಡಲ್ಪಟ್ಟಿವೆ.

ದಕ್ಷಿಣಭಾಗ

(ಕನ್ನಡ)

ಗದ್ಯಪಾಠಗಳು: - ಕ್ರಮಿಕ ೬ನೆಯ ಬುಕ್ಕು (೬ನೆಯ ಆವೃತ್ತಿ, ೧೯೩೦ ಇ.)

ಪಾಠಗಳು:— ೧-೨-೭-೮-೧೧-೧೨-೧೩-೧೪-೧೫-೧೭-೧೯-೨೦-೨೨-೨೪-೨೫-೨೯-೩೦-೩೧-೩೨-೩೩-೩೯-೪೨-೪೪- (೨೩ ಪಾಠಗಳು)

ಪದ್ಯಪಾಠಗಳು:— ೪-೯-೧೬-೨೧-೩೪-೪೩ (೬ ಪಾಠಗಳು)

ಇತಿಹಾಸ ಪಾಠಗಳು:— ೫೬-೫೭-೫೮-೫೯-೬೦ (ಮೊದಲಿನ ಐದು ಪಾಠಗಳು)

ಭೂಗೋಲ ಪಾಠಗಳು:— ೬೬-೬೭-೬೮-೬೯-೭೦ (ಮೊದಲಿನ ಐದು ಪಾಠಗಳು)

ಮರಾಠಿ

ಮೊದಲನೆ ಸದರ: — ದೇಶಭಾಷೆ (ಮರಾಠಿ)

ಗದ್ಯ:— ಕ್ರಮಿಕ ೬ನೆಯ ಬುಕ್ಕು (೧೩ನೆಯ ಆವೃತ್ತಿ, ೧೯೩೩ನೆ ಇಸ್ವಿ.)

ಪಾಠಗಳು:— ೧-೨-೫-೬-೧೧-೧೨-೧೩-೧೪-೧೭-೧೯-೨೩-೨೪-೨೫-೨೭-೨೮-೨೯-೩೦-೩೧-೩೩-೩೪-೩೬- ೩೮- ೩೯- ೪೧-೪೨-೪೫-೪೬-೪೮-೫೦-೫೨-೫೪-೫೫-೫೬-೫೭-೫೮-೫೯-೬೫-೬೬-೬೭ ಮತ್ತು ೬೮ (ಒಟ್ಟಿಗೆ ೪೦ ಪಾಠಗಳು)

ಲೇಖಕ:— ಮಹಾದೇವಪ್ಪ ಯಲ್ಲಪ್ಪ ಕುಸೂಗಲ್ಲ ಅಸಿ. ಮಾಸ್ತರ ಕನ್ನಡಶಾಲಾ. ಇಂಗಳಹಳ್ಳಿ.

ಇಸವಿಗಳ ಕೋಷ್ಟಕವು.

ಪ್ರಾ	ಥ	ಮಿ	ಕ	ಶಿ	ಕ್ಷ	ಣ	ಪ್ರಾ	ಥ	ಮಿ	ಕ
೧೯೩೪	೧೯೩೫	✿	೧೯೩೬	೧೯೩೭	೧೯೩೮	೧೯೩೯	ಪ್ರಾ	೧೯೪೦	೧೯೪೧	೧೯೪೨
೧೯೪೫	೧೯೪೬	೧೯೪೭	✿	೧೯೪೮	೧೯೪೯	೧೯೫೦	೧೯೫೧	ಥ	೧೯೫೨	೧೯೫೩
೧೯೫೬	೧೯೫೭	೧೯೫೮	೧೯೫೯	ಶಿ	೧೯೬೦	೧೯೬೧	೧೯೬೨	೧೯೬೩	ಮಿ	೧೯೬೪
ಪ್ರಾ	೧೯೬೮	೧೯೬೯	೧೯೭೦	೧೯೭೧	ಕ್ಷ	೧೯೭೨	೧೯೭೩	೧೯೭೪	೧೯೭೫	ಕ
೧೯೭೯	ಥ	೧೯೮೦	೧೯೮೧	೧೯೮೨	೧೯೮೩	ಣ	೧೯೮೪	೧೯೮೫	೧೯೮೬	೧೯೮೭
೧೯೯೦	೧೯೯೧	ಮಿ	೧೯೯೨	೧೯೯೩	೧೯೯೪	೧೯೯೫	ಪ್ರಾ	೧೯೯೬	೧೯೯೭	೧೯೯೮
೨೦೦೧	೨೦೦೨	೨೦೦೩	ಕ	೨೦೦೪	೨೦೦೫	೨೦೦೬	೨೦೦೭	ಥ	೨೦೦೮	೨೦೦೯
೨೦೧೨	೨೦೧೩	೨೦೧೪	೨೦೧೫	✿	೨೦೧೬	೨೦೧೭	೨೦೧೮	೨೦೧೯	ಮಿ	೨೦೨೦
✿	೨೦೨೪	೨೦೨೫	೨೦೨೬	೨೦೨೭	✿	೨೦೨೮	೨೦೨೯	೨೦೩೦	೨೦೩೧	ಕ

ಇಸವಿಯ ಅಕ್ಷರಗಳ ಕೋಷ್ಟಕವು. / ತಿಂಗಳುಗಳ ಕೋಷ್ಟ

ಪ್ರಾ	ಥ	ಮಿ	ಕ	ಶಿ	ಕ್ಷ	ಣ	ಜನೇವರಿ * ಎಪ್ರೀಲ ಜು
ಥ	ಮಿ	ಕ	ಶಿ	ಕ್ಷ	ಣ	ಪ್ರಾ	ಸಪ್ಟಂಬರ ಡಿಸೆಂಬರ
ಮಿ	ಕ	ಶಿ	ಕ್ಷ	ಣ	ಪ್ರಾ	ಥ	ಜೂನ
ಕ	ಶಿ	ಕ್ಷ	ಣ	ಪ್ರಾ	ಥ	ಮಿ	ಫೇಬ್ರುವರಿ ಮಾರ್ಚ
ಶಿ	ಕ್ಷ	ಣ	ಪ್ರಾ	ಥ	ಮಿ	ಕ	ಫೇಬ್ರುವರಿ ಆಗಸ್ಟ
ಕ್ಷ	ಣ	ಪ್ರಾ	ಥ	ಮಿ	ಕ	ಶಿ	ಮೇ
ಣ	ಪ್ರಾ	ಥ	ಮಿ	ಕ	ಶಿ	ಕ್ಷ	ಜನೇವರಿ ಅಕ್ಟೋಬರ

ವಾರಗಳು

ರವಿ	ಚಂದ್ರ	ಮಂಗಳ	ಬುಧ	ಗುರು	ಶುಕ್ರ	ಶನಿ	೧	೮	೧೫
ಚಂದ್ರ	ಮಂಗಳ	ಬುಧ	ಗುರು	ಶುಕ್ರ	ಶನಿ	ರವಿ	೨	೯	೧೬
ಮಂಗಳ	ಬುಧ	ಗುರು	ಶುಕ್ರ	ಶನಿ	ರವಿ	ಚಂದ್ರ	೩	೧೦	೧೭
ಬುಧ	ಗುರು	ಶುಕ್ರ	ಶನಿ	ರವಿ	ಚಂದ್ರ	ಮಂಗಳ	೪	೧೧	೧೮
ಗುರು	ಶುಕ್ರ	ಶನಿ	ರವಿ	ಚಂದ್ರ	ಮಂಗಳ	ಬುಧ	೫	೧೨	೧೯
ಶುಕ್ರ	ಶನಿ	ರವಿ	ಚಂದ್ರ	ಮಂಗಳ	ಬುಧ	ಗುರು	೬	೧೩	೨೦
ಶನಿ	ರವಿ	ಚಂದ್ರ	ಮಂಗಳ	ಬುಧ	ಗುರು	ಶುಕ್ರ	೭	೧೪	೨೧

ತಿಳಿದುಕೊಳ್ಳುವ ಕ್ರಮು:— ಇಚ್ಛಿತ ಇಸವಿಯು ಇಸವಿಗಳ ಕೊಷ್ಟಕಿನಲ್ಲಿ ಯಾವ ಮನೆಯಲ್ಲಿರುತ್ತದೆನ್ನು ನೊ ಮನೆಯ ಅಕ್ಷರವನ್ನು ಗೊತ್ತುಮಾಡಿಕೊಳ್ಳಬೇಕು. ತಿಂಗಳುಗಳ ಕೋಷ್ಟಕಿನಲ್ಲಿ ಇಚ್ಛಿತ ತಿಂಗಳನ್ನು ಹುಡುಕಿಲೆ ಎ ಅಕ್ಷರಗಳ ಕೋಷ್ಟಕಿನಲ್ಲಿ ಮೊದಲು ಗೊತ್ತುಮಾಡಿಕೊಂಡ ಅಕ್ಷರದವರಿಗೆ ಸಾಗಬೇಕು. ಆ ಅಕ್ಷರದಿಂದ ಕೆಳಗೆ ಳ ಕೊ ವಾರದವರೆಗೆ ಹೋಗಿ ಬಳಿಕ ಬಲಕೆ, ತಾರೀಖುಗಳ ಕೋಷ್ಟಕಿನಲ್ಲಿ ನೋಡಿದರೆ ತಾರೀಖು ತಿಳಿಯುವದು.

ಒಂದು ನೂರ ಒಂದು ವರುಷಗಳ ಕ್ಯಾಲೆಂಡರವು

೧೯೩೪ನೆಯ ಇಸವಿಯಿಂದ ೨೦೩೪ನೆಯ ಇಸವಿಯು ಪೂರ್ಣ

ಲೇಖಕ:— ಮಹಾದೇವಪ್ಪ ಯಲ್ಲಪ್ಪ ಕುಸೂಗಲ್ಲ ಅಸಿ. ಮಾಸ್ತರ ಕನ್ನಡಶಾಲಾ. ಇಂಗಳಹಳ್ಳಿ. ತಾಲೂಕ ಹುಬ್ಬಳ್ಳಿ.

ಇಸವಿಗಳ ಕೋಷ್ಟಕವು.

ಪ್ರಾ	ಥ	ಮಿ	ಕ	ಶಿ	ಕ್ಷ	ಣ	ಪ್ರಾ	ಥ	ಮಿ	ಕ	ಶಿ	ಕ್ಷ	ಣ
೧೯೩೪	೧೯೩೫	✿	೧೯೩೬	೧೯೩೭	೧೯೩೮	೧೯೩೯	ಪ್ರಾ	೧೯೪೦	೧೯೪೧	೧೯೪೨	೧೯೪೩	✿	೧೯೪೪
೧೯೪೫	೧೯೪೬	೧೯೪೭	✿	೧೯೪೮	೧೯೪೯	೧೯೫೦	೧೯೫೧	ಥ	೧೯೫೨	೧೯೫೩	೧೯೫೪	೧೯೫೫	✿
೧೯೫೬	೧೯೫೭	೧೯೫೮	೧೯೫೯	ಶಿ	೧೯೬೦	೧೯೬೧	೧೯೬೨	೧೯೬೩	ಮಿ	೧೯೬೪	೧೯೬೫	೧೯೬೬	೧೯೬೭
ಪ್ರಾ	೧೯೬೮	೧೯೬೯	೧೯೭೦	೧೯೭೧	ಕ್ಷ	೧೯೭೨	೧೯೭೩	೧೯೭೪	೧೯೭೫	ಕ	೧೯೭೬	೧೯೭೭	೧೯೭೮
೧೯೭೯	ಥ	೧೯೮೦	೧೯೮೧	೧೯೮೨	೧೯೮೩	ಣ	೧೯೮೪	೧೯೮೫	೧೯೮೬	೧೯೮೭	ಶಿ	೧೯೮೮	೧೯೮೯
೧೯೯೦	೧೯೯೧	ಮಿ	೧೯೯೨	೧೯೯೩	೧೯೯೪	೧೯೯೫	ಪ್ರಾ	೧೯೯೬	೧೯೯೭	೧೯೯೮	೧೯೯೯	ಕ್ಷ	೨೦೦೦
೨೦೦೧	೨೦೦೨	೨೦೦೩	ಕ	೨೦೦೪	೨೦೦೫	೨೦೦೬	೨೦೦೭	ಥ	೨೦೦೮	೨೦೦೯	೨೦೧೦	೨೦೧೧	ಣ
೨೦೧೨	೨೦೧೩	೨೦೧೪	೨೦೧೫	✿	೨೦೧೬	೨೦೧೭	೨೦೧೮	೨೦೧೯	ಮಿ	೨೦೨೦	೨೦೨೧	೨೦೨೨	೨೦೨೩
✿	೨೦೨೪	೨೦೨೫	೨೦೨೬	೨೦೨೭	✿	೨೦೨೮	೨೦೨೯	೨೦೩೦	೨೦೩೧	ಕ	೨೦೩೨	೨೦೩೩	೨೦೩೪

ಇಸವಿಯ ಅಕ್ಷರಗಳ ಕೋಷ್ಟಕವು.							ತಿಂಗಳುಗಳ ಕೋಷ್ಟಕವು.
ಪ್ರಾ	ಥ	ಮಿ	ಕ	ಶಿ	ಕ್ಷ	ಣ	ಜನೇವರಿ * ಎಪ್ರೀಲ ಜುಲೈ
ಥ	ಮಿ	ಕ	ಶಿ	ಕ್ಷ	ಣ	ಪ್ರಾ	ಸಪ್ಟಂಬರ ಡಿಸೆಂಬರ
ಮಿ	ಕ	ಶಿ	ಕ್ಷ	ಣ	ಪ್ರಾ	ಥ	ಜೂನ
ಕ	ಶಿ	ಕ್ಷ	ಣ	ಪ್ರಾ	ಥ	ಮಿ	ಫೇಬ್ರುವರಿ ಮಾರ್ಚ ನವಂಬರ
ಶಿ	ಕ್ಷ	ಣ	ಪ್ರಾ	ಥ	ಮಿ	ಕ	ಫೇಬ್ರುವರಿ ಆಗಸ್ಟ
ಕ್ಷ	ಣ	ಪ್ರಾ	ಥ	ಮಿ	ಕ	ಶಿ	ಮೇ
ಣ	ಪ್ರಾ	ಥ	ಮಿ	ಕ	ಶಿ	ಕ್ಷ	ಜನೇವರಿ ಅಕ್ಟೋಬರ

ವಾರಗಳು							ತಾರೀಖುಗಳು				
ರವಿ	ಚಂದ್ರ	ಮಂಗಳ	ಬುಧ	ಗುರು	ಶುಕ್ರ	ಶನಿ	೧	೮	೧೫	೨೨	೨೯
ಚಂದ್ರ	ಮಂಗಳ	ಬುಧ	ಗುರು	ಶುಕ್ರ	ಶನಿ	ರವಿ	೨	೯	೧೬	೨೩	೩೦
ಮಂಗಳ	ಬುಧ	ಗುರು	ಶುಕ್ರ	ಶನಿ	ರವಿ	ಚಂದ್ರ	೩	೧೦	೧೭	೨೪	೩೧
ಬುಧ	ಗುರು	ಶುಕ್ರ	ಶನಿ	ರವಿ	ಚಂದ್ರ	ಮಂಗಳ	೪	೧೧	೧೮	[illegible]	✿
ಗುರು	ಶುಕ್ರ	ಶನಿ	ರವಿ	ಚಂದ್ರ	ಮಂಗಳ	ಬುಧ	೫	೧೨	೧೯	೨೬	✿
ಶುಕ್ರ	ಶನಿ	ರವಿ	ಚಂದ್ರ	ಮಂಗಳ	ಬುಧ	ಗುರು	೬	೧೩	೨೦	೨೭	✿
ಶನಿ	ರವಿ	ಚಂದ್ರ	ಮಂಗಳ	ಬುಧ	ಗುರು	ಶುಕ್ರ	೭	೧೪	೨೧	೨೮	✿

ತಿಳಿದುಕೊಳ್ಳುವ ಕ್ರಮ :— ಇಚ್ಛಿತ ಇಸವಿಯು ಇಸವಿಗಳ ಕೋಷ್ಟಕಿನಲ್ಲಿ ಯಾವ ಮನೆಯಲ್ಲಿರುತ್ತದೆಂಬದನ್ನು ನೋಡಿ ಮೇಲಿರುವ ಆ ಮನೆಯ ಅಕ್ಷರವನ್ನು ಗೊತ್ತುಮಾಡಿಕೊಳ್ಳಬೇಕು. ತಿಂಗಳುಗಳ ಕೋಷ್ಟಕಿನಲ್ಲಿ ಇಚ್ಛಿತ ತಿಂಗಳನ್ನು ಹುಡುಕಿ ಆಮೇಲೆ ಎಡಗಡೆಗೆ ಇಸವಿಯ ಅಕ್ಷರಗಳ ಕೋಷ್ಟಕಿನಲ್ಲಿ ಮೊದಲು ಗೊತ್ತುಮಾಡಿಕೊಂಡ ಅಕ್ಷರದವರೆಗೆ ಸಾಗಬೇಕು. ಆ ಅಕ್ಷರದಿಂದ ಕೆಳಗೆ ವಾರಗಳ ಕೋಷ್ಟಕಿನಲ್ಲಿ ಇಚ್ಛಿತ ವಾರದವರೆಗೆ ಹೋಗಿ ಬಳಿಕ ಬಲಕ್ಕೆ ತಾರೀಖುಗಳ ಕೋಷ್ಟಕಿನಲ್ಲಿ ನೋಡಿದರೆ ತಾರೀಖು ತಿಳಿಯುವದು.

ಉದಾ :— ೧೯೩೬ನೆಯ ಇಸವಿಯ ಜೂನ ತಿಂಗಳ ಮೊದಲನೆಯ ಗುರುವಾರ ಯಾವ ತಾರೀಖು ಆಗುವದೆಂಬದನ್ನು ನೋಡುವಾ.

೧೯೩೬ನೆಯ ಇಸವಿಯನ್ನು ಇಸವಿಗಳ ಕೋಷ್ಟಕಿನಲ್ಲಿ ಹುಡುಕಿ ಆ ಮನಯ ಅಕ್ಷರವನ್ನು ನೋಡಲು 'ಕ' ಎಂಬದು ಗೋತ್ತಾಗುವದು. ಮುಂದೆ ತಿಂಗಳುಗಳ ಕೋಷ್ಟಕಿನಲ್ಲಿ ಜೂನ ತಿಂಗಳನ್ನು ಹುಡುಕಿ ಅದರ ಎಡಗಡಿಗೆ ಇಸವಿಯ ಅಕ್ಷರಗಳ ಕೋಷ್ಟಕಿನಲ್ಲಿ ಮೊದಲು ಗೊತ್ತುಮಾಡಿಕೊಂಡ 'ಕ' ಎಂಬ ಅಕ್ಷರದವರೆಗೆ ಸಾಗಬೇಕು. ತರುವಾಯ ವಾರಗಳ ಕೋಷ್ಟಕಿನಲ್ಲಿ ಗುರುವಾರದವರೆಗೆ ಹೋಗಿ ಅಲ್ಲಿಂದ ಬಲಕ್ಕೆ ತಾರೀಖುಗಳ ಕೋಷ್ಟಕಿನಲ್ಲಿ ನೋಡಿದರೆ ಮೊದಲನೆಯ ಗುರುವಾರ ೪ನೆಯ ತಾರೀಖು ಆಗುವದೆಂದು ತಿಳಿಯುವದು.

* ಈ ಚಿನ್ಹವಿದ್ದ ಜನೇವರಿ ಫೇಬ್ರುವರಿ ತಿಂಗಳುಗಳು ಮಾತ್ರ 'ಲೀಪ' ವರುಷದ ತಿಂಗಳುಗಳು. ಮೇಲೆ ಹೇಳಿದ ಚಿಹ್ನವು ಇರದ ಜನೇವರಿ ಮತ್ತು ಫೇಬ್ರುವರಿ ತಿಂಗಳುಗಳು ಸಾದಾ ವರುಷದವೆಂದು ತಿಳಿಯಬೇಕು.

ಇದನ್ನು ಖಂಡೋ ರಾಮಚಂದ್ರ ಭಿಸೆ ಇವರು ಕರ್ನಾಟಕ ಪ್ರಿಂಟಿಂಗ ವರ್ಕ್ಸ (ಧಾರವಾಡ)ದಲ್ಲಿ ಮುದ್ರಿಸಿದರು.

ಒಂದು ನೂರ ಒಂದು ವರುಷಗಳ ಕ್ಯಾಲೆಂಡರವು

೧೯೩೪ನೆಯ ಇಸವಿಯಿಂದ ೨೦೩೪ನೆಯ ಇಸವಿಯು ಪೂರ್ಣ

ಲೇಖಕ:— ಮಹಾದೇವಪ್ಪ ಯಲ್ಲಪ್ಪ ಕುಸೂಗಲ್ಲ ಅಸಿ. ಮಾಸ್ತರ ಕನ್ನಡಶಾಲಾ. ಇಂಗಳಹಳ್ಳಿ. ತಾಲೂಕ ಹುಬ್ಬಳ್ಳಿ

ಇಸವಿಗಳ ಕೋಷ್ಟಕವು.

ಪ್ರಾ	ಥ	ಮಿ	ಕ	ಶಿ	ಕ್ಷ	ಣ	ಪ್ರಾ	ಥ	ಮಿ	ಕ	ಶಿ	ಕ್ಷ	ಣ
೧೯೩೪	೧೯೩೫	✿	೧೯೩೬	೧೯೩೭	೧೯೩೮	೧೯೩೯	ಪ್ರಾ	೧೯೪೦	೧೯೪೧	೧೯೪೨	೧೯೪೩	✿	೧೯೪೪
೧೯೪೫	೧೯೪೬	೧೯೪೭	✿	೧೯೪೮	೧೯೪೯	೧೯೫೦	೧೯೫೧	ಥ	೧೯೫೨	೧೯೫೩	೧೯೫೪	೧೯೫೫	✿
೧೯೫೬	೧೯೫೭	೧೯೫೮	೧೯೫೯	ಶಿ	೧೯೬೦	೧೯೬೧	೧೯೬೨	೧೯೬೩	ಮಿ	೧೯೬೪	೧೯೬೫	೧೯೬೬	೧೯೬೭
ಪ್ರಾ	೧೯೬೮	೧೯೬೯	೧೯೭೦	೧೯೭೧	ಕ್ಷ	೧೯೭೨	೧೯೭೩	೧೯೭೪	೧೯೭೫	ಕ	೧೯೭೬	೧೯೭೭	೧೯೭೮
೧೯೭೯	ಥ	೧೯೮೦	೧೯೮೧	೧೯೮೨	೧೯೮೩	ಣ	೧೯೮೪	೧೯೮೫	೧೯೮೬	೧೯೮೭	ಶಿ	೧೯೮೮	೧೯೮೯
೧೯೯೦	೧೯೯೧	ಮಿ	೧೯೯೨	೧೯೯೩	೧೯೯೪	೧೯೯೫	ಪ್ರಾ	೧೯೯೬	೧೯೯೭	೧೯೯೮	೧೯೯೯	ಕ್ಷ	೨೦೦೦
೨೦೦೧	೨೦೦೨	೨೦೦೩	ಕ	೨೦೦೪	೨೦೦೫	೨೦೦೬	೨೦೦೭	ಥ	೨೦೦೮	೨೦೦೯	೨೦೧೦	೨೦೧೧	ಣ
೨೦೧೨	೨೦೧೩	೨೦೧೪	೨೦೧೫	✿	೨೦೧೬	೨೦೧೭	೨೦೧೮	೨೦೧೯	ಮಿ	೨೦೨೦	೨೦೨೧	೨೦೨೨	೨೦೨೩
✿	೨೦೨೪	೨೦೨೫	೨೦೨೬	೨೦೨೭	✿	೨೦೨೮	೨೦೨೯	೨೦೩೦	೨೦೩೧	ಕ	೨೦೩೨	೨೦೩೩	೨೦೩೪

ಇಸವಿಯ ಅಕ್ಷರಗಳ ಕೋಷ್ಟಕವು.							ತಿಂಗಳುಗಳ ಕೋಷ್ಟಕವು.
ಪ್ರಾ	ಥ	ಮಿ	ಕ	ಶಿ	ಕ್ಷ	ಣ	ಜನೇವರಿ * ಎಪ್ರೀಲ ಜುಲೈ
ಥ	ಮಿ	ಕ	ಶಿ	ಕ್ಷ	ಣ	ಪ್ರಾ	ಸೆಪ್ಟಂಬರ ಡಿಸೆಂಬರ
ಮಿ	ಕ	ಶಿ	ಕ್ಷ	ಣ	ಪ್ರಾ	ಥ	ಜೂನ
ಕ	ಶಿ	ಕ್ಷ	ಣ	ಪ್ರಾ	ಥ	ಮಿ	ಫೇಬ್ರುವರಿ ಮಾರ್ಚ ನವಂಬರ
ಶಿ	ಕ್ಷ	ಣ	ಪ್ರಾ	ಥ	ಮಿ	ಕ	ಫೇಬ್ರುವರಿ ಅಗಷ್ಟ
ಕ್ಷ	ಣ	ಪ್ರಾ	ಥ	ಮಿ	ಕ	ಶಿ	ಮೇ
ಣ	ಪ್ರಾ	ಥ	ಮಿ	ಕ	ಶಿ	ಕ್ಷ	ಜನೇವರಿ ಅಕ್ಟೋಬರ

ವಾರಗಳು							ತಾರೀಖುಗಳು				
ರವಿ	ಚಂದ್ರ	ಮಂಗಳ	ಬುಧ	ಗುರು	ಶುಕ್ರ	ಶನಿ	೧	೮	೧೫	೨೨	೨೯
ಚಂದ್ರ	ಮಂಗಳ	ಬುಧ	ಗುರು	ಶುಕ್ರ	ಶನಿ	ರವಿ	೨	೯	೧೬	೨೩	೩೦
ಮಂಗಳ	ಬುಧ	ಗುರು	ಶುಕ್ರ	ಶನಿ	ರವಿ	ಚಂದ್ರ	೩	೧೦	೧೭	೨೪	೩೧
ಬುಧ	ಗುರು	ಶುಕ್ರ	ಶನಿ	ರವಿ	ಚಂದ್ರ	ಮಂಗಳ	೪	೧೧	೧೮	[illegible]	✿
ಗುರು	ಶುಕ್ರ	ಶನಿ	ರವಿ	ಚಂದ್ರ	ಮಂಗಳ	ಬುಧ	೫	೧೨	೧೯	೨೬	✿
ಶುಕ್ರ	ಶನಿ	ರವಿ	ಚಂದ್ರ	ಮಂಗಳ	ಬುಧ	ಗುರು	೬	೧೩	೨೦	೨೭	✿
ಶನಿ	ರವಿ	ಚಂದ್ರ	ಮಂಗಳ	ಬುಧ	ಗುರು	ಶುಕ್ರ	೭	೧೪	೨೧	೨೮	✿

ತಿಳಿದುಕೊಳ್ಳುವ ಕ್ರಮ :— ಇಚ್ಛಿತ ಇಸವಿಯು ಇಸವಿಗಳ ಕೋಷ್ಟಕಿನಲ್ಲಿ ಯಾವ ಮನೆಯಲ್ಲಿರುತ್ತದೆಂಬದನ್ನು ನೋಡಿ ಮೇಲಿರುವ ಆ ಮನೆಯ ಅಕ್ಷರವನ್ನು ಗೊತ್ತುಮಾಡಿಕೊಳ್ಳಬೇಕು ತಿಂಗಳುಗಳ ಕೋಷ್ಟಕಿನಲ್ಲಿ ಇಚ್ಛಿತ ತಿಂಗಳನ್ನು ಹುಡುಕಿ ಆಮೇಲೆ ಎಡಗಡೆಗೆ ಇಸವಿಯ ಅಕ್ಷರಗಳ ಕೋಷ್ಟಕಿನಲ್ಲಿ ಮೊದಲು ಗೊತ್ತುಮಾಡಿಕೊಂಡ ಅಕ್ಷರದವರೆಗೆ ಸಾಗಬೇಕು. ಆ ಅಕ್ಷರದಿಂದ ಕೆಳಗೆ ವಾರಗಳ ಕೋಷ್ಟಕಿನಲ್ಲಿ ಇಚ್ಛಿತ ವಾರದವರೆಗೆ ಹೋಗಿ ಬಳಿಕ ಬಲಕ್ಕೆ ತಾರೀಖುಗಳ ಕೋಷ್ಟಕಿನಲ್ಲಿ ನೋಡಿದರೆ ತಾರೀಖು ತಿಳಿಯುವದು.

ಉದಾ — ೧೯೩೬ನೆಯ ಇಸವಿಯ ಜೂನ ತಿಂಗಳ ಮೊದಲನಯ ಗುರುವಾರ ಯಾವ ತಾರೀಖು ಆಗುವದೆಂಬದನ್ನು ನೋಡುವಾ.

೧೯೩೬ನೆಯ ಇಸವಿಯನ್ನು ಇಸವಿಗಳ ಕೋಷ್ಟಕಿನಲ್ಲಿ ಹುಡುಕಿ ಆ ಮನಯ ಅಕ್ಷರವನ್ನು ನೋಡಲು 'ಕ' ಎಂಬದು ಗೋತ್ತಾಗುವದು. ಮುಂದೆ ತಿಂಗಳುಗಳ ಕೋಷ್ಟಕಿನಲ್ಲಿ ಜೂನ ತಿಂಗಳನ್ನು ಹುಡುಕಿ ಅದರ ಎಡಗಡಿಗೆ ಇಸವಿಯ ಅಕ್ಷರಗಳ ಕೋಷ್ಟಕಿನಲ್ಲಿ ಮೊದಲು ಗೊತ್ತುಮಾಡಿಕೊಂಡ 'ಕ' ಎಂಬ ಅಕ್ಷರದವರೆಗೆ ಸಾಗಬೇಕು. ತರುವಾಯ ವಾರಗಳ ಕೋಷ್ಟಕಿನಲ್ಲಿ ಗುರುವಾರದವರೆಗೆ ಜೋಗಿ ಅಲ್ಲಿಂದ ಬಲಕ್ಕೆ ತಾರೀಖುಗಳ ಕೋಷ್ಟಕಿನಲ್ಲಿ ನೋಡಿದರೆ ಮೊದಲನೆಯ ಗುರುವಾರ ೪ನೆಯ ತಾರೀಖು ಆಗುವದೆಂದು ತಿಳಿಯುವದು.

* ಈ ಚಿನ್ಹವಿದ್ದ ಜನೇವರಿ ಫೇಬ್ರುವರಿ ತಿಂಗಳುಗಳು ಮಾತ್ರ 'ಲೀಪ' ವರುಷದ ತಿಂಗಳುಗಳು. ಮೇಲೆ ಹೇಳಿದ ಚಿಹ್ನವು ಇರದ ಜನೇವರಿ ಮತ್ತು ಫೇಬ್ರುವರಿ ತಿಂಗಳುಗಳು ಸಾದಾ ವರುಷದವೆಂದು ತಿಳಿಯಬೇಕು.

ಇದನ್ನು ಖಂಡೋ ರಾಮಚಂದ್ರ ಭಿಡೆ ಇವರು ಕರ್ನಾಟಕ ಪ್ರಿಂಟಿಂಗ ವರ್ಕ್ಸ (ಧಾರವಾಡ)ದಲ್ಲಿ ಮುದ್ರಿಸಿದರು.

ಪದ್ಯ:—ಕ್ರಮಿಕ ೬ನೆಯ ಪುಸ್ತಕ (೧೩ನೆ ಆ. ೧೯೩೩ನೆ ಇಸ್ವಿ)—

ಪಾಠಗಳು:–೯–೧೫–೩೨–೩೫–೪೦ ಮತ್ತು ೪೪(ಒಟ್ಟಿಗೆ ೬ಪಾಠಗಳು)

ಮೊದಲನೆಯು ಸದರು ದೇಶಭಾಷೆ (ಉರ್ದು)

ಗದ್ಯ:— ಕ್ರಮಿಕ ಉರ್ದು ೬ನೆಯ ಪುಸ್ತಕ(೫ನೆ ಆವೃತ್ತಿ ೧೯೩೨ನೆ ಇ.)

ಪಾಠಗಳು:— ೧–೩–೪–೬–೭–೮–೯–೧೨–೧೬–೧೭–೧೯–೨೩–೨೪ ೨೮–೨೯·೩೧·೩:–೩೪–೩೬–೩೭–೩೮–೩೯–೪೨–೪೩–೪೪–೪೫–೪೬–೪೭, ಮತ್ತು ೪೮ (ಒಟ್ಟಿಗೆ ೨೯ ಪಾಠಗಳು)

ಪದ್ಯ:— ಕ್ರಮಿಕ ಉರ್ದು ೬ನೆಯ ಪುಸ್ತಕ (೫ನೆ ಆವೃತ್ತಿ ೧೯೩೨ನೆ ಇ.)

ಪಾಠಗಳು:— ೫–೧೦–೧೫–೨೦–೨೫ ಮತ್ತು ೩೦ (ಒಟ್ಟಿಗೆ ೬ ಪಾಠಗಳು)

ಇನಸ್ಪೇಕ್ಟರವರ ಕಚೇರಿ, ತಾ॥ ೧೨–೧೦–೧೯೩೩ } **ಕೆ. ಎಸ್. ವಕೀಲ** ಎಜ್ಯುಕೇಶನಲ್ ಇನಸ್ಪೇಕ್ಟರ ದಕ್ಷಿಣಭಾಗ.

ಗಂಡುಮಕ್ಕಳ ವ್ಹ. ಫಾ. ಪರೀಕ್ಷೆಯು

ದಕ್ಷಿಣಭಾಗ

೧೯೩೫ನೆಯ ಇಸವಿಯಲ್ಲಿ ಆಗುವ ವ್ಹ. ಫಾ. ಪರೀಕ್ಷೆಯ ಬಗ್ಗೆ ಕೆಳಗೆ ಬರೆದಂತೆ ಪುಸ್ತಕಗಳು ಗೊತ್ತುಮಾಡಲ್ಪಟ್ಟಿವೆ.

ಕನ್ನಡ

ಮೊದಲನೆಯಸದರು:—

ಗದ್ಯ:— ಕ್ರಮಿಕ ಏಳನೆಯ ಪುಸ್ತಕ (೧೯೩೨ರಲ್ಲಿ ಅಚ್ಚಾದದ್ದು.)

ಪಾಠಗಳು:— ಎಲ್ಲ ಗದ್ಯ ಪಾಠಗಳು.

ಪದ್ಯ:— ಕ್ರಮಿಕ ಏಳನೆಯ ಪುಸ್ತಕ (೧೯೩೨ ರಲ್ಲಿ ಅಚ್ಚಾದದ್ದು)

ಪಾಠಗಳು:—೨೮, ೩೨, ೩೬, ೪೦, ೪೪, ೪೮, ೫೧ ಹಾಗು ೫೫ ಒಟ್ಟು ಎಂಟು ಪಾಠಗಳು.

ಮರಾಠಿ

ಮೊದಲನೆಯ ಸದರು—

ಗದ್ಯ:— ಕ್ರಮಿಕ ಏಳನೆಯ ಪುಸ್ತಕ (೧೯೩೨ರಲ್ಲಿ ಅಚ್ಚಾದ ೯ನೆಯ ಆ.)

ಪಾಠಗಳು:— ಮೊದಲನೆಯ ಭಾಗದಲ್ಲಿಯ ಎಲ್ಲ ಪಾಠಗಳು

ಪದ್ಯ:— ಕ್ರಮಿಕ ಏಳನೆಯ ಪುಸ್ತಕ (೧೯೩೨ರಲ್ಲಿ ಅಚ್ಚಾದ ೯ನೆಯ ಆವೃತ್ತಿ)

ಪಾಠಗಳು:— ೩, ೧೫, ೨೮, ೩೬, ೪೭, ೫೧, ಮತ್ತು ೫೩.

ಉರ್ದು ವ್ಹರ್ನಾಕ್ಯೂಲರ

ಮೊದಲನೆಯ ಸದರು—

ಗದ್ಯ:— ಕ್ರಮಿಕ ಉರ್ದು ಏಳನೆಯ ಬುಕ್ಕು (೧೯೩೨ರಲ್ಲಿ ಅಚ್ಚಾದ ೪ನೆಯ ಆವೃತ್ತಿ)

ಪಾಠಗಳು — ಮೊದಲನೆಯ ಭಾಗದಲ್ಲಿಯ ಎಲ್ಲ ಪಾಠಗಳು.

ಪದ್ಯ — ಕ್ರಮಿಕ ಉರ್ದು ಏಳನೆಯ ಬುಕ್ಕು (೧೯೩೨ ರಲ್ಲಿ ಅಚ್ಚಾದ ೪ನಯ ಆವೃತ್ತಿ)

ಪಾಠಗಳು— ೯, ೧೦, ೧೬, ೨೩, ೨೬, ೨೯, ಮತ್ತು ೩೫, ಈ ಪ್ರಕಾರ ಏಳು ಪಾಠಗಳು.

ಕನ್ನಡ (ಐಚ್ಛಿಕ)

ಆರನೆಯ ಸದರು—

ಗದ್ಯ— ಕ್ರಮಿಕ ಕನ್ನಡ ೫ನೆಯ ಪುಸ್ತಕ (೧೯೩೨ರಲ್ಲಿ ಅಚ್ಚಾದದ್ದು)

ಪಾಠಗಳು— ೧, ೪, ೬, ೯, ೧೦, ೧೩, ೧೪, ೧೫, ೧೬, ೨೧, ೨೮, ೨೯ ೩೬, ೪೦, ೫೬, ೫೭, ೫೯, ೬೯, ೭೨, ಮತ್ತು ೮೦ (ಒಟ್ಟು ೨೦ ಪಾಠಗಳು)

ಮರಾಠಿ (ಐಚ್ಛಿಕ)

ಆರನೆಯ ಸದರ—

ಗದ್ಯ— ಕ್ರಮಿಕ ೫ನೆಯ ಪುಸ್ತಕ (೧೯೩೩ ರಲ್ಲಿ ಅಚ್ಚಾದ ೧೪ನೆ ಆವೃತ್ತಿ)

ಪಾಠಗಳು— ೧, ೨, ೩, ೪, ೯, ೧೩, ೧೪, ೧೫. ೧೭, ೨೦, ೨೨, ೨೫, ೨೬, ೨೭, ೩೨, ೩೭, ೪೦, ೪೪, ೪೬ ಮತ್ತು ೪೮ (ಈ ಪ್ರಕಾರ ೨೦ ಪಾಠಗಳು.)

ವ್ಹರ್ನಾಕ್ಯೂಲರ ಉರ್ದು
ಕನ್ನಡ

ಮೊದಲನೆಯ ಸದರು—

ಗದ್ಯ— ಕ್ರಮಿಕ ೭ನೆಯ ಬುಕ್ಕು (೧೯೩೨ ರಲ್ಲಿ ಅಚ್ಚಾದದ್ದು)—

ಪಾಠಗಳು— ೧, ೨, ೫, ೮, ೧೦, ೧೮, ೨೦, ೨೧, ೨೩, ೨೫, ೩೦, ೩೧
೩೮, ೩೯, ೪೨, ೪೬, ೪೭, ೫೬, ೫೮, ೫೯, ೬೧, ೬೩, ೬೬
೬೯, ೭೦, ೭೨, ೭೩, ೭೬, ೭೮, ೮೦, ೮೩, ೮೫, ೯೨, ೯೫
೯೬, (ಒಟ್ಟು ೩೫ ಪಾಠಗಳು)

ಪದ್ಯ— ಕ್ರಮಿಕ ೭ನೆಯ ಬುಕ್ಕು (೧೯೩೨ರಲ್ಲಿ ಅಚ್ಚಾದದ್ದು)—
ಪಾಠಗಳು:— ೧೫, ೨೮, ೩೬, ೪೦, ೪೪ (ಒಟ್ಟು ೫ ಪಾಠಗಳು)

ಮರಾಠಿ

ಮೊದಲನೆಯಸದರು—

ಗದ್ಯ— ಕ್ರಮಿಕ ೭ನೆಯ ಬುಕ್ಕು (೧೯೩೨ರಲ್ಲಿ ಅಚ್ಚಾದ ೯ನೆಯ ಆವೃತ್ತಿ)
ಪಾಠಗಳು— ೧, ೪, ೫, ೮, ೯, ೧೦, ೧೨, ೧೬, ೧೭, ೧೮, ೨೦, ೨೧,
೨೨, ೨೩, ೨೫, ೩೦, ೩೧, ೩೪, ೩೫, ೩೭, ೩೮, ೩೯, ೪೧
೪೨, ೪೫, ೪೬, ೪೮, ೫೦, ೫೨, ೫೪, ೫೬, ೫೭, ೬೧, ೬೨
ಮತ್ತು ೬೩, (ಒಟ್ಟು ೩೫ ಪಾಠಗಳು)

ಪದ್ಯ— ಕ್ರಮಿಕ ೭ನೆಯ ಬುಕ್ಕು (೧೯೩೨ರಲ್ಲಿ ಅಚ್ಚಾದದ್ದು ೯ನೆಯ ಆ.)
ಪಾಠಗಳು – ೭, ೧೫, ೧೯, ಮತ್ತು ೫೩ (ಒಟ್ಟು ೪ ಪಾಠಗಳು)

ಉರ್ದು

ಆರನೆಯಸದರ—

ಗದ್ಯ—ಕ್ರಮಿಕ ೭ನೆಯ ಬುಕ್ಕು (೧೯೩೨ರಲ್ಲಿ ಅಚ್ಚಾದದ್ದು)
ಪಾಠಗಳು— ೨, ೭, ೮, ೧೨, ೧೯, ೨೧, ೨೨, ೨೪, ೨೫, ೩೩, ೩೪,
೩೬, ೩೭, ೪೦, ೪೧, ಮತ್ತು ೪೨, (ಒಟ್ಟು ೧೬ ಪಾಠಗಳು)
ಪದ್ಯ—ಕ್ರಮಿಕ ೭ನೇಯ ಬುಕ್ಕು (೧೯೩೨ರಲ್ಲಿ ಅಚ್ಚಾದದ್ದು)
ಪಾಠಗಳು—೩, ೬, ೧೩, ೧೬, ೧೭, ೨೩, ಮತ್ತು ೩೨,(ಒಟ್ಟು ೭ ಪಾಠಗಳು)

ಧಾರವಾಡ, ತಾ॥ ೧–೧೧–೧೯೩೩ | ಎಮ್. ಎಸ್. ಮುಝುಮದಾರ, ಇ. ಚಾ. ಎಜ್ಯುಕೇಶನಲ್ ಇನಸ್ಪೇಕ್ಟರ ದ. ಭಾ.

ಪ್ರಕಟನೆ

ನಂ. ೬೭೭P. ೩೯೧೭ / ೨೫-೯-೩೩

ಕನ್ನಡ ಬುಕ್ ಕಮಿಟಿಯವರಿಂದ ಕೆಳಗೆ ಬರೆದ ಪುಸ್ತಕಗಳು ಕೆಳಗೆ ಬರೆದಂತೆ ಮಂಜೂರ ಮಾಡಲ್ಪಟ್ಟಿವೆ.

ನಂ.	ಪುಸ್ತಕಗಳ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು ಪತ್ತೆ ಸ್ಥಳ	ಬೆಲೆ	ಡಾ. ಇನ್ಸ್‌ಪೆಕ್ಟರರ ಮಂಜೂರಿ.
೧	ಸಚಿತ್ರ ಅಭಿನಯ ಗೀತಾವಳಿ (೧ನೆ ಆ)	ಮಿ. ಜಿ. ಎನ್. ಲಕ್ಷ್ಮಣ ಪೈ	ಹರಿಹರ ಪ್ರೆಸ್, ಬುಕ್‌ಡಿಪೋ ಪುತ್ತೂರ.	೦-೩-೦	ಪ್ರಾ. ಶಾಲೆಗಳಲ್ಲಿ ಸಪ್ಲಿಮೆಂಟರಿ ರೀಡರ.
೨	ಸೋರಬ್ ಮತ್ತು ರುಸ್ತುಮ್ (೧ನೆ ಆ)	ಪಂಡಿತ ನರಸಿಂಹ ಶಾಸ್ತ್ರಿ	ಎನ್. ವೆಂಕಟಗಿರಿರಾವ ಬ್ರದರ್ಸ ತೀರ್ಥಹಳ್ಳಿ	೦-೪-೦	ಮಾ. ,, ಟೆಕ್ಸ್ಟ ಬುಕ್ಕಾಗಾಗಿ
೩	ಗೀತಾರ್ಥ ಬೋಧಿನಿ (೧ನೆ ಆ)	ಮಿ. ಬಿ. ಎಮ್. ಬೆಟಗೇರಿ	ಆರ್. ಎಮ್. ಪದಕಿ ಅಮ್ಮಿನಭಾವಿ	೦-೧೨-೦	,, ,, ಹುಡುಗರ ಲಾಯಬ್ರರಿಗಾಗಿ
೪	ನಮ್ಮ ನಾಡಿನ ಚರಿತ್ರ (೧ನೆ ಆ)	ಎಸ್. ಮುಕುಂದರಾವ, ಜಿ. ರಾಘವೇಂದ್ರರಾವ ಶೆಣೈ	ಶೆಣೈ ಬ್ರದರ್ಸ ಮಂಗಳೂರ	೦-೧೦-೦	ಪ್ರಾ. ,, ಶಾಲೆಗಳಲ್ಲಿ ಪಠ್ಯಪುಸ್ತಕ, ಮಾ ಶಾಲೆಗಳಲ್ಲಿ ಸಪ್ಲಿಮೆಂಟರಿ ರೀಡರ
೫	ಸುಶೀಲೆ (೧೯೨೯)	ಶ್ರೀಮತಿ ತಿರುಮಲಾಂಬಾ	ಶ್ರೀಮತಿ ತಿರುಮಲಾಂಬಾ ಸತಿಹಿತೈಷಿಣಿ ಮಾತೃಮಂದಿರ ನಂಜನಗೂಡ	೦-೮-೦	ಮಾ. ,, ಪ್ರಾಯಿಯ್ದು ಮತ್ತು ಹುಡುಗರ ಲಾಯಬ್ರರಿ
೬	ಪ್ರಬುದ್ಧ ಒಕ್ಕಲಿಗ ಭಾಗ ೧ (೧ನೆ ಆ)	ಮಿ. ವ್ಹಿ. ಸಿ. ಪಾವಟೆ	ಎಚ್. ಎಸ್ ಶಿವಲಿಂಗಶಾಸ್ತ್ರಿ ಧರ್ಮತರಂಗಿಣಿ ಆಫೀಸ ಧಾರವಾಡ	೧-೦-೦	ಎ. ಬಿ. ಸ್ಕೂಲುಗಳಲ್ಲಿ ಟೆಕ್ಸ್ಟ ಮತ್ತು ಇನಾಮು ಮತ್ತು ಮಾ. ಶಾ.ಗಳಲ್ಲಿ ಹುಡುಗರ ಲಾಯಬ್ರರಿ
೭	,, ,,ಭಾಗ ೨ (೧ನೆ ಆ)	,,	,,	,,	೧-೦-೦	ಎ. ಬಿ. ಸ್ಕೂಲುಗಳಲ್ಲಿ ಪಠ್ಯ ಪು.

ನಂ.	ಪುಸ್ತಕಗಳ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು ಪತ್ತೆ ಪೂರಾ	ಬೆಲೆ	ಯಾತಕ್ಕೋಸ್ಕರ ಮಂಜೂರಿ.
೮	ಹಣ್ಣಿನ ತೋಟಗಳು	ಮಿ. ಎಸ್. ಎಸ್. ಭಟ್ಟ	ಎಸ್. ಎಸ್. ಭಟ್ಟ ಗಣೇಶಖಿಂಡ ಕರ್ಕಿ ಪುಣಾ ೩	೧-೦-೦	ಮಾ. ಶಾ. ಲ್ಲಿ ಹುಡುಗರ ಪ್ರಾ. ಹಾಗು ಲಾಯಬ್ರರಿ ಬುಕ್ಕಾಗಿ.
೯	ಹಿಂದುಸ್ಥಾನದ ಇತಿಹಾಸವೂ ರಾಜಕಾರಣವೂ (೧ನೆ ಆ)	ಮೆ॥ ಜಿ. ಎನ್. ಜೋಶಿ ಮತ್ತು ಸಾಲಿ ರಾಮಚಂದ್ರರಾವ್	ಮ್ಯಾಕಮಿಲನ್ ಮತ್ತು ಕಂ. ಹಾರ್ನ್ಬಿರೋಡ ಬಾಂಬೆ	೧-೮-೦	ಪ್ರಾ. ಹಾಗೂ ಮಾ.ಶಾಲೆ ಮತ್ತು ಟ್ರೇ. ಸಂಸ್ಥೆಗಳಲ್ಲಿ ಟೆಕ್ಸ್ಟ.
೧೦	ಅಂಕಗಣಿತ (ಜ್ಯೂನಿಯರ ಅರ್ಥಮೆಟಿಕ್ ಫಾರ ಸೆಕೆಂಡರಿ ಸ್ಕೂಲ್ಸ ಆ	ಮಿ. ವ್ಹಿ. ಪಿ. ಪಡಿಯಾರ	ವ್ಹಿ. ಪಿ ಪಡಿಯಾರ ವಿನೋದ ಗ್ರಂಥಮಾಲಾ ಆಫೀಸ ಶಿರಸಿ	೧-೪-೦	ಮಾ. ಶಾಲೆಗಳಲ್ಲಿ ಟೆಕ್ಸ್ಟ ಪು.
೧೧	ಹಿಂದುಸ್ಥಾನದ ಭೂಗೋಲ (೫ನೆ ಆ)	ಮಿ. ವ್ಹಿ. ಎನ್. ಮಗದಾಲ	ವ್ಹಿ. ಎನ್. ಮಗದಾಲ ಧಾರವಾಡ.	೦-೮-೦	ಪ್ರಾ. ಮತ್ತು ಮಾ. ಶಾಲೆ ಹಾಗು ಟ್ರೇ. ಸಂಸ್ಥೆಯಲ್ಲಿ ಟೆಕ್ಸ್ಟ.
೧೨	ಕನ್ನಡ ನುಡಿಗನ್ನಡಿ ಭಾಗ ೨. (೧೯೩೩)	ಮಿ. ಎಮ್. ಪಿ. ಪೂಜಾರ	ಜಿ. ಬಿ. ಜೋಸಿ ಲಾಯಿನ್ ಬಜಾರ ಧಾರವಾಡ.	೦-೪-೦	ಪ್ರಾ. ಹಾಗೂ ಮಾ. ಶಾಲೆಗಳಲ್ಲಿ ಪಠ್ಯಪುಸ್ತಕ
೧೩	ರಮಾನಂದ	ಶ್ರೀಮತಿ ತಿರುಮಲಂಬಾ	ಶ್ರೀಮತಿ ತಿರುಮಲಾಂಬಾ ಸತಿಹಿತೈಷಿಣಿ ಮಾತೃಮಂದಿರ ನಂಜನಗೂಡ	೦-೧೨-೦	ಮಾ. ಶಾಲೆಗಳಲ್ಲಿ ಪ್ರಾ. ಬುಕ್ಕಾಗಿ
೧೪	ಸಚಿತ್ರ ಸಿಂಧಪ್ರಾಂತ ವರ್ಣನೆ (೧ನೆ ಆ)	ಮಿ. ಬಿ. ಎನ್. ಅಷ್ಟಪುತ್ರೆ	ಆರ್. ಬಿ ಹುಕ್ಕೇರಿ ಸ್ಟುಡಂಟ್ಸ ಓನ ಬುಕ್‌ಡಿಪೋ ಧಾರವಾಡ	೦-೪-೦	ಪ್ರಾ. ,, ಲಾಯಬ್ರರಿ ,,

ಎ. ಇ. ದ. ಭಾಗ

Reg. No. B. 2567

ಜಾಹೀರಾತು

ಸರಕಾರದಿಂದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಟೆಕ್ಸ್ಟ ಬುಕ್ಕಾಗಿ ಮಂಜೂರಾದ

ಗಣಿತ ಶಿಕ್ಷಕ

ಲೇಖಕ:—ಹಿರೇಮಠ ಮ್ಯು. ಕನ್ನಡ ಶಾಲಾ ಮಾಸ್ತರ ವಿಜಾಪುರ.

ಈ ಪುಸ್ತಕದಲ್ಲಿ ಕನ್ನಡ ೫, ೬,.೭, ಹಾಗು ವ್ಹ. ಫಾಯಿನಲ್ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಉಪಯೋಗವಾಗುವಂತೆ ಪ್ರತಿಯೊಂದು ಪ್ರಕರಣದಲ್ಲಿ ವ್ಯವಹಾರಿಕ ಲೆಖ್ಖಗಳನ್ನೂ, ವಾರಲೋನ, ಕ್ಯಾಶ ಸರ್ಟಿಫಿಕೇಟು ಮುಂತಾದ ಪ್ರಚಲಿತ ಠೇವುಗಳ ಲೆಖ್ಖಗಳನ್ನೂ ಹಾಕಿದೆ. ಮೊದಲು ಮಾದರಿಗಾಗಿ ಒಂದು ಲೆಖ್ಖವನ್ನು ಬಿಡಿಸಿ ತೋರಿಸಿ, ತರುವಾಯ ಪ್ರತಿಯೊಂದು ಅದೇ ಮಾದರಿಯ ಹಲವು ಲೆಖ್ಖಗಳನ್ನು ರೂಢಿಗಾಗಿ ಸೇರಿಸಿದೆ. ಲೆಖ್ಖವು ಮನದಟ್ಟಾಗುವಂತೆ ಈ ಪುಸ್ತಕದಲ್ಲಿ ವಿದ್ಯಾರ್ಥಿಗಳಿಗೆ ಉಪಯೋಗವಾಗುವಷ್ಟೇ ವಿಷಯಗಳನ್ನು ಕೊಟ್ಟಿದ್ದರಿಂದ ಬೆಲೆಯಾದರೂ ಕಡಿಮೆಯಾಗಿ ಪ್ರತಿಯೊಬ್ಬರು ಸಂಗ್ರಹಿಸಲು ತಕ್ಕದ್ದಾಗಿದೆ. **ಬೆಲೆ ೧೪ ಆಣೆ.**

ಪುಸ್ತಕಗಳು ದೊರೆಯುವ ಸ್ಥಳ:—

ಬಸಪ್ರಭಯ್ಯಾ ದುಂಡಯ್ಯಾ ಹಿರೇಮಠ,

ಮ್ಯು. ಕನ್ನಡ. ಶಾಲಾ ಮಾಸ್ತರ ವಿಜಾಪೂರ.

ಮತ್ತು ಎಲ್ಲ ಮುಖ್ಯ ಬುಕ್ಕಶೇಲರರಲ್ಲಿ ಶಿಗುವವು.

ಮಿ. ಸುರಜಭಾನ ಭವಾನಿಪ್ರಸಾದ ಆಲೂರ (ಪಾಂಡೆ) ಇವರು ಧಾರವಾಡ ಸರಕಾರಿ ಹಾಯಸ್ಕೂಲಿನಲ್ಲಿ ಶಿಕ್ಷಕರಾಗಿದ್ದರಷ್ಟೇ. ಇವರ ಚರಿತ್ರವನ್ನು ತಾ. ೧–೧೨–೧೯೩೩ರ ಒಳಗಾಗಿ ಕನ್ನಡದಲ್ಲಿ ಬರೆದು ಕಳಿಸಿದವರಲ್ಲಿ ಮೂವರಿಗೆ ರೂ. ೧೦; ರೂ. ೬; ರೂ. ೪ ಹೀಗೆ ಮೂರು ಇನಾಮುಗಳು, ೧-೧-೩೪ಕ್ಕೆ ಕೊಡಲ್ಪಡುವವು. ಇನಾಮುಗಳನ್ನು ನಿರ್ಣಯಿಸುವ ಪೂರ್ಣ ಅಧಿಕಾರವು ಕೆಳಗೆ ಸಹಿ ಮಾಡಿದವರಿಗೆ ಇರುವದು.

ಚಂ. ಸು. ಪಾಂಡೆ, ರಿಟಾಯರ್ಡ ಪೋಷ್ಟಮಾಸ್ತರ, ಶಿವಮೊಗ್ಗಾ.

ಸ್ಯಾಂಪಲ್] [ಫುಕ್ಕಟೆ

ಉತ್ತಮ ಮಸೀ ಚೀಟುಗಳು

ನೀಲೀಕಪ್ಪು, ಕೆಂಪು, ಜಾಂಬಳಿ ಮಸಿಯ ಚೀಟುಗಳು ಈ ಕಂಪನಿಯು ಬಹಳ ಜನರಿಂದ ಶಿಫಾರಸ ಪಡೆದು ಮೆಡಲ್ಲುಗಳನ್ನು ಸಂಪಾದಿಸಿರುತ್ತದೆ.

ದರಗಳು

೧೦೦	ಚೀಟುಗಳಿಗೆ	೦—೭—೦
೫೦೦	,,	೧—೧೪—೦
೧೦೦೦	,,	೩—೦—೦
೧೦೦೦೦	,,	೨೭—೮—೦ (ರೇಲ್ವೆ ಫ್ರೀ)

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರಮಾಡಿರಿ.

ಕರ್ನಾಟಕ ಇಂಕ ಕಂಪನಿ,
ಬಾಗಲಕೋಟೆ